ಸಿಳ್ಳಿಗರು ಒಂದು ಸಾಮಾಜಿಕ ಅಧ್ಯಯನ

(ಪಿಎಚ್. ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು

ಚಲವಾದಿ ಬಸವರಾಜ

ಉಪನ್ಯಾಸಕರು

ಮಾರ್ಗದರ್ಶಕರು

ಡಾ. ಹರಿಶ್ಚಂದ್ರ ದಿಗ್ಸಂಗಿಕರ್

ಹಿರಿಯ ಶ್ರೇಣಿ ಅಧ್ಯಾಪಕರು

ಜಾನಪದ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೦೭

205

[illegible] ಒಂದು ಸಾಮಾಜಿಕ ಅಧ್ಯಯನ

[illegible]

ಸಿಕ್ಲಿಗರು ಒಂದು ಸಾಮಾಜಿಕ ಅಧ್ಯಯನ

(ಪಿಎಚ್. ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು

ಚಲವಾದಿ ಬಸವರಾಜ

ಉಪನ್ಯಾಸಕರು
ಸಮಾಜಶಾಸ್ತ್ರ ವಿಭಾಗ
ಸರಕಾರಿ ಪ್ರಥಮ ದರ್ಜೆ ಕಾಲೇಜ,
ಕಮಲಾಪುರ, ಗುಲ್ಬರ್ಗಾ ಜಿಲ್ಲೆ

ಮಾರ್ಗದರ್ಶಕರು

ಡಾ. ಹರಿಶ್ಚಂದ್ರ ದಿಗ್ಸಂಗಿಕರ್

ಹಿರಿಯ ಶ್ರೇಣಿ ಅಧ್ಯಾಪಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

೨೦೦೭

ದೃಢೀಕರಣ ಪತ್ರ

ಚಲವಾದಿ ಬಸವರಾಜ ಅವರು ಸಿಕ್ಲಿಗರು ಒಂದು ಸಾಮಾಜಿಕ ಅಧ್ಯಯನ ಎಂಬ ಶಿರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಅರ್ಪಿಸಲೆಂದು ನನ್ನ ಮಾರ್ಗದರ್ಶನದಲ್ಲಿ ಸಿದ್ದಪಡಿಸಿದ್ದಾರೆ. ಈ ಮಹಾ ಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೆ ಭಾಗವನ್ನು ಈ ಮೊದಲು ಬೇರೆ ಯಾವುದೇ ಪದವಿಗಾಗಲಿ ಅಥವಾ ಉದ್ದೇಶಗಳಿಗಾಗಲಿ ಇವರು ಒಪ್ಪಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ :ವಿದ್ಯಾರಣ್ಯ

ದಿನಾಂಕ : ೧೦.೮.೦೨

೧೦/೮/೦೨

(ಡಾ. ಹರಿಶ್ಚಂದ್ರ ದಿಗ್ಸಂಗಿಕರ್)

ಮಾರ್ಗದರ್ಶಕರು

ಜಾನಪದ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

ಪ್ರಮಾಣ ಪತ್ರ

ಸಿಕ್ಲಿಗರು ಒಂದು ಸಾಮಾಜಿಕ ಅಧ್ಯಯನ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲಿಸಲು ಡಾ. ಹರಿಶ್ಚಂದ್ರ ದಿಗ್ಗಂಗಿಕರ್ ಹಿರಿಯ ಶ್ರೇಣಿ ಅಧ್ಯಾಪಕರು ಜಾನಪದ ಅಧ್ಯಯನ ವಿಭಾಗ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ಮಹಾಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಬೇರಾವುದೇ ಪದವಿಗಾಗಲಿ, ಉದ್ದೇಶಗಳಿಗಾಗಲಿ ಬಳಸಿಕೊಂಡಿಲ್ಲವೆಂದು ಪ್ರಮಾಣಿಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : ೧೦.೯.೦೭

(ಚಲವಾದಿ ಬಸವರಾಜ)

ಸಂಶೋಧನಾ ವಿದ್ಯಾರ್ಥಿ

ಬುಡಕಟ್ಟು ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ –೫೮೩ ೨೭೬

ಅರಿಕೆ

ಕರ್ನಾಟಕದಾದ್ಯಂತ ಹಲವಾರು ಅಲೆಮಾರಿ ಬುಡಕಟ್ಟು ಸಮುದಾಯಗಳಿವೆ. ಅವುಗಳ ಕುರಿತು ಅಧ್ಯಯನಗಳು ನಡೆಯುತ್ತವೆ. ಕೆಳವರ್ಗ ಮತ್ತು ಕೆಳಸಮುದಾಯಗಳ ಕುರಿತಾದ ಕಾಳಜಿ ಹೊಂದಿದ ನನಗೆ ಕನ್ನಡ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ. ಅಧ್ಯಯನಕ್ಕಾಗಿ ಅರ್ಜಿ ಹಾಕಿದೆ. ಬುಡಕಟ್ಟು ಅಧ್ಯಯನ ವಿಭಾಗದಲ್ಲಿ ನನಗೆ ಪ್ರವೇಶ ದೊರಕಿತು. ಆ ಹಿನ್ನೆಲೆಯಲ್ಲಿ ಬುಡಕಟ್ಟು ವಿಭಾಗದ ವಿದ್ವಾಂಸರು ಹಾಗೂ ನನ್ನ ಮಾರ್ಗದರ್ಶಕರ ಜೊತೆ ಚರ್ಚೆ ಮಾಡಿ ಗುಲ್ಬರ್ಗಾದಲ್ಲಿ ನಾನು ಕಂಡಿರುವ ಸಿಕ್ಲಿಗರರನ್ನು ಕುರಿತಾದ ಅಧ್ಯಯನ ಏಕೆ ಮಾಡಬಾರದೆಂದು ಅನಿಸಿತು. ಆ ಹಿನ್ನೆಲೆಯಲ್ಲಿ ಸಿಕ್ಲಿಗರು ಒಂದು ಸಾಮಾಜಿಕ ಅಧ್ಯಯನ ಸಂಶೋಧನಾ ಪ್ರಬಂಧ ಹೊರಬರುತ್ತಿದೆ.

ನನ್ನ ಉದ್ಯೋಗ ಹಾಗೂ ಇತರ ಕೆಲಸ ಕಾರ್ಯಗಳ ನಡುವೆ ಪಿಎಚ್.ಡಿ. ಮಾಡಲು ಸಾಧ್ಯವಾಗಲಿಲ್ಲ. ಬಹಳ ದಿನಗಳ ಆಶೆಯನ್ನು ಅನಿವಾರ್ಯವಾದ ಸಂದರ್ಭದಲ್ಲಿ ಮಾಡಬೇಕೆಂದು ಬಯಸಿದಾಗ ಅವಕಾಶ ನೀಡಿದ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕೃತಜ್ಞತೆಗಳು. ಈ ವಿಷಯ ಕುರಿತು ಅಧ್ಯಯನ ಮಾಡುತ್ತೇನೆಂದು ಹೇಳಿದಾಗ ಸಂತೋಷ ವ್ಯಕ್ತಪಡಿಸಿದ ಅಂದಿನ ಕುಲಪತಿಗಳಾದ ಡಾ. ಬಿ.ಎ. ವಿವೇಕ ರೈ ಅವರಿಗೂ ಹಾಗೂ ಇಂದಿನ ಕುಲಪತಿಗಳಾದ ಡಾ. ಕೆ.ವಿ.ನಾರಾಯಣ ಅವರಿಗೆ ಕೃತಜ್ಞತೆಗಳು. ಅಧ್ಯಯನಾಂಗದ ನಿರ್ದೇಶಕರಾದ ಡಾ. ಪಾಂಡುರಂಗಬಾಬು, ಬುಡಕಟ್ಟು ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ. ಹಿ.ಚಿ.ಬೋರಲಿಂಗಯ್ಯ, ಡಾ. ಕೆ.ಎಂ.ಮೈತ್ರಿ, ಡಾ. ಕೇಶವನ್ ಪ್ರಸಾದ್, ಮುಖ್ಯಸ್ಥರಾದ ಡಾ. ಚಲುವರಾಜ, ಪ್ರವಾಚಕರಾದ ಡಾ. ಗಂಗಾಧರ ದೈವಜ್ಞ , ಡಾ. ಎ.ಎಸ್. ಪ್ರಭಾಕರ ಅವರುಗಳಿಗೆ ಕೃತಜ್ಞತೆಗಳು.

ನನ್ನ ಈ ಮಹಾಪ್ರಬಂಧ ಪೂರ್ಣಗೊಳ್ಳಲು ಪ್ರತಿ ಬಾರಿ ನನ್ನೊಂದಿಗೆ ಚರ್ಚಿಸಿದ್ದಲ್ಲದೇ ಪ್ರಬಂಧದ ಅರೆಕೊರೆಗಳನ್ನು ತಿದ್ದಿ ತೀಡಿದ ಮಾರ್ಗದರ್ಶಕ ಗುರುಗಳಾದ ಡಾ. ಹರಿಶ್ಚಂದ್ರ ದಿಗ್ಸಂಗಿಕರ್ ಹಿರಿಯಶ್ರೇಣಿ ಅಧ್ಯಾಪಕರು ಜಾನಪದ ಅಧ್ಯಯನ ವಿಭಾಗ ಅವರಿಗೂ ಹಾಗೂ ಸಹೋದರಿ ಶ್ರೀಮತಿ ಚಿತ್ರಕಲಾ ಹರಿಶ್ಚಂದ್ರ ದಿಗ್ಸಂಗಿಕರ್ ಅವರಿಗೆ ಕೃತಜ್ಞತೆಗಳು.

ನನ್ನಲ್ಲಿ ಬೌದ್ಧಿಕ ವಿಚಾರ ಹೆಚ್ಚಿಸಲು ಕಾರಣರಾದ ಬೌದ್ದ ಧರ್ಮದ ಗುರುಗಳಾದ **ಪೂಜ್ಯ ಬಿಕ್ಕು ಮಹಾಕಶ್ಯಪ್ಪ ತೀರೋ** ಧಮ್ಮಾಂಕುರ ಮೌಂಟ್ ಬೌದ್ದವಿಹಾರ ರೇಕುಳಗಿ ಅವರಿಗೆ ಕೃತಜ್ಞಾಪೂರ್ವಕ ಪ್ರಣಾಮಗಳನ್ನು ಸಲ್ಲಿಸುತ್ತೇನೆ. ಹಾಗೂ ನನ್ನ ಬೆಳವಣಿಗೆಗೆ ಹಾಗೂ ನನ್ನ ಏಳಿಗೆಗೆ ಸದಾ ಹಾರೈಸುತ್ತಿರುವ ಹಿರಿಯ ಪ್ರಬುದ್ಧ ರಾಜಕಾರಣಿ ಹಾಗೂ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಆಯುಷ್ಮಾನ್ **ಮಲ್ಲಿಕಾರ್ಜುನ ಎಂ. ಖರ್ಗೆಜೀ** ಅವರಿಗೆ ಕೃತಜ್ಞತೆಗಳು. ಹಾಗೂ ಕರ್ನಾಟಕ ಪೀಪಲ್ಸ್ ಶಿಕ್ಷಣ ಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿಗಳು ಮತ್ತು ಬಿ. ಶ್ಯಾಮಸುಂದರವರ ಅನುಯಾಯಿಗಳಾದ ಆಯುಷ್ಮಾನ್ ಮಾರುತಿರಾವ್ ಡಿ. ಮಾಲೆಜೀ ಅವರಿಗೆ ಕೃತಜ್ಞತೆಗಳು.

ನನ್ನನ್ನು ಈ ಹಂತಕ್ಕೆ ತರಲು ಶ್ರಮಿಸಿದ ನನ್ನ ತಂದೆಯವರಾದ ಆಯಷ್ಮಾನ್ ರಾಣಪ್ಪ ವೀರಪ್ಪ ಚಲವಾದಿ ಹಾಗೂ ನನ್ನ ತಾಯಿಯವರಾದ ಆಯುಷ್ಮತಿ ಮಾಪಮ್ಮ ಚಲವಾದಿ ಅವರಿಗೆ ಕೃತಜ್ಞತಾ ನಮನಗಳು. ಪ್ರತಿಯೊಂದು ಕೆಲಸ ಕಾರ್ಯದ ಹಿಂದೆ ಇದ್ದು ಪ್ರೋತ್ಸಾಹಿಸುವ ಡಾ ಎಸ್.ಎಚ್. ಕಟ್ಟಿ ಜನಪರ ವೈದ್ಯಾಧಿಕಾರಿಗಳು, ಶಿವರಾಯ ದೊಡ್ಮನಿ ಸಂಪಾದಕರು ನೃಪತುಂಗ ಕನ್ನಡ ದಿನಪತ್ರಿಕೆ ಗುಲ್ಬರ್ಗಾ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕರಾದ ಆಯುಷ್ಮಾನ್ ಡಿ.ಜಿ.ಸಾಗರ, ಮಹಾದೇವ ಧನ್ನಿ ಅಧ್ಯಕ್ಷರು ಜಿ.ಪಿ.ಎಸ್. ಹಾಗೂ ಆಯುಷ್ಮತಿ ಭಾರತಿ ಧನ್ನಿ ಹೀರಾಪುರ ಪಂಚಾಯಿತಿಯ ಮಾಜಿ ಚೇರ್ಮನ್ನರಾದ ಆಯುಷ್ಮಾನ್ ಸಾಯಬಣ್ಣ ಶಾಂತಪ್ಪ ದಿಗ್ಸಂಗಿಕರ್, ವಿಶ್ವನಾಥ ಮಂಟಗಿ, ಮ್ಯಾನೇಜರ್ ಕೆ.ಪಿ.ಇ.ಸೊಸೈಟಿ. ಗುಲ್ಬರ್ಗಾ, ಪ್ರೊ, ಎಚ್.ಟಿ. ಅಪ್ಪಾರಾವ್ ಸಹಾಯಕ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ ಗುಲ್ಬರ್ಗಾ, ಆಯುಷ್ಮಾನ್‌ರಾದ ಬಸವರಾಜ ಚಿಂಚೋಳ್ಳಿ ಅಧ್ಯಕ್ಷರು ಬಾರ್ ಅಸೋಷಿಯೇಷನ್

ಗುಲ್ಬರ್ಗಾ, ಇತಿಹಾಸ ವಿಭಾಗದ ಪ್ರವಾಚಕರಾದ ಡಾ. ಮಂಜುಳಾ ಚಿಂಚೋಳ್ಳಿ, ಭೀಮಾಶಂಕರ ವತನ್‌ದಾರ್ ಜಿಲ್ಲಾ ಸಲಹಾ ಸಮಿತಿ ಸದಸ್ಯರು ಇಂಧನ ಮತ್ತು ಸೌರಶಕ್ತಿ ಭಾರತ ಸರ್ಕಾರ, ಎಸ್.ಪಿ. ಸುಳ್ಳದ, ಎಂ.ಡಿ. ಬೋರೆ ಹಾಗೂ ಮಹಾದೇವ ಕೊರಳ್ಳಿ, ಬ್ಯಾಂಕ್ ಆಫ್ ಬರೋಡಾ, ಚಿದಾನಂದ ಕಡಗಂಚಿ, ಮ್ಯಾನೇಜರ್ ಎಸ್.ಬಿ.ಎಚ್. ಖಾಜಾ ಬಂದೇ ನವಾಜ್ ಶಾಖೆ ಗುಲ್ಬರ್ಗಾ, ಪಿ.ಸಿ.ಜೇವರ್ಗೀಕರ್, ಎಸ್.ಬಿ.ಎಚ್. ಹನುಮಂತರಾವ್. ಬಿ. ದೊಡ್ಮನಿ, ಕನ್ನಡ ಉಪನ್ಯಾಸಕರು ಜೂನಿಯರ್ ಕಾಲೇಜು ಆಳಂದ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮಹಾಗಾಂವ್ ಕ್ರಾಸ್ ಪ್ರಾಂಶುಪಾಲರಾದ ಸುರೇಶ ಡೊಂಗ್ರೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಫರಹತಾಬಾದ್ ಪ್ರಾಂಶುಪಾಲರಾದ ಶಿವಪುತ್ರ ಪೋತಾಲಕರ್, ಜಗನ್ನಾಥ ದಿಗ್ಸಂಗಿಕರ್ ನ್ಯಾಯವಾದಿಗಳು, ಡಾ. ಎ.ಜಿ. ಖಾನ್, ಈಶ್ವರಪ್ಪ ಫರಹತಾಬಾದ್ ರಾಜ್ಯನಾಟಕ ಅಕಾಡೆಮಿ ಸುವರ್ಣ ಕರ್ನಾಟಕ ಪ್ರಶಸ್ತಿ ವಿಜೇತರು, ಸಂಗಪ್ಪ ವೀರಪ್ಪ ಫರಹತಾಬಾದ್, ಶರಣಪ್ಪ ವೀರಪ್ಪ ಫರಹತಾಬಾದ್, ಡಾ. ವಿ.ಟಿ. ಕಾಂಬಳೆ ಡಾ. ಎಸ್. ಪಿ. ಮೇಲಕೇರಿ, ಡಾ. ಎಚ್.ಟಿ. ಪೋತೆ ಡಾ. ಎಸ್. ಎಲ್. ಹಿರೇಮಠ, ಡಾ. ಜಗನ್ನಾಥ್ ಸಿಂದೆ, ಡಾ.ಟಿ.ಎಂ. ಭಾಸ್ಕರ್, ಗಣಪತಿ ಸಿಂಧೆ, ಉಪಗ್ರಂಥಪಾಲಕರು ಗು.ವಿ. ವಿ. ಪ್ರೊ. ಈಶ್ವರ್ ಇಂಗನ್, ಡಾ. ಸಿ.ನಾಗಪ್ಪ ಪ್ರಾಂಶುಪಾಲರು ಮಿಲಿಂದ ಕಾಲೇಜು ಗುಲ್ಬರ್ಗಾ, ಕಾಂಬಳೆ ಗುರೂಜಿ ಹಿಂದಿ ಪ್ರಾಧ್ಯಾಪಕರು ಎನ್.ವಿ. ಕಾಲೇಜು ಗುಲ್ಬರ್ಗಾ, ಪ್ರೊ. ಎಂ.ಎಸ್. ಖರ್ಗೆ, ಪ್ರೊ.ಗಣೇಶ್‌ಲಿಂಬಾರೆ, ಕಲ್ಯಾಣಪ್ಪ ಎಸ್. ಹಂಗರಗಿ, ಚಿತ್ರಕಲಾ ಶಿಕ್ಷಕರು, ಡಾ. ಐ.ಎಸ್. ವಿದ್ಯಾಸಾಗರ್, ಡಾ. ಅರುಣ್‌ಕುಮಾರ್ ನರೋಣ್‌ಕರ್, ಡಾ. ಸೂರ್ಯಕಾಂತ ಸುಜ್ಯಾತ, ಕೆ. ಎಸ್. ಬಂಧು, ಡಾ. ಗವಿಸಿದ್ದಪ್ಪ ಪಾಟೀಲ ಹಾಗೂ ಗುರುರಾಜ ಮುಗಳಿ ಇವರೆಲ್ಲರಿಗೂ ಕೃತಜ್ಞತೆಗಳು.

ನನ್ನ ಅಧ್ಯಯನಕ್ಕೆ ಸಮಯಾವಕಾಶ ಕೊಟ್ಟು ಪ್ರಬಂಧ ಪೂರ್ಣಗೊಳಿಸಲು ಸಹಕರಿಸಿದ ನನ್ನ ನೆಚ್ಚಿನ ಕಮಲಾಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರೂ ಹಾಗೂ ಬೋಧಕ ಬೋಧಕೇತರ ಸಹದ್ಯೋಗಿ ಮಿತ್ರರಿಗೆಲ್ಲರಿಗೂ ಕೃತಜ್ಞತೆಗಳು. ಶಿವರಾಜ ಮಾಲಿಪಾಟೀಲ ಪ್ರಾಣಿಶಾಸ್ತ್ರ ಉಪನ್ಯಾಸಕರು ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜು ಗುಲ್ಬರ್ಗಾ ಹಾಗೂ ಕರ್ನಾಟಕ ಪೀಪಲ್ಸ್ ಶಿಕ್ಷಣ ಸಂಸ್ಥೆಯ ಎಲ್ಲಾ ನೌಕರ ಸಿಬ್ಬಂದಿ ವರ್ಗದವರಿಗೆ ಕೃತಜ್ಞತೆಗಳು.

ಸಿಕ್ಲಿಗರ ಸಾಮಾಜಿಕ ಅಧ್ಯಯನದ ಕ್ಷೇತ್ರಕಾರ್ಯಕ್ಕೆ ಹೋದಾಗ ತಮ್ಮ ಸಮುದಾಯದ ಬಗ್ಗೆ ಸಂಪೂರ್ಣ ಮಾಹಿತಿ ನೀಡಿ ಸಹಕರಿಸಿದ ಸಿಕ್ಲಿಗರ ಸಮುದಾಯದ ಹಿರಿಯರಾದ ಬಲಬೀರಸಿಂಗ್ ಪಾವಾ ಕಾರ್ಯದರ್ಶಿಗಳು ಸಿಖ್ಖ್ ಕಲ್ಯಾಣ ಸಂಸ್ಥೆ ಬೆಂಗಳೂರು, ಬೀರೂ ಸಿಂಗ ಬೀದರ್, ಅಧ್ಯಕ್ಷರು, ರಾಜ್ಯ ಡಿ. ದರ್ಜೆ ನೌಕರರ ಸಂಘ, ಜಗತ್‌ಸಿಂಗ ಗುಲ್ಬರ್ಗಾ, ವೀರೇಂದ್ರಸಿಂಗ ಧಾರವಾಡ, ಸುರೇಂದ್ರಸಿಂಗ ಗುಲ್ಬರ್ಗಾ, ಈ ಎಲ್ಲಾ ವಕ್ತೃಗಳಿಗೂ ಕೃತಜ್ಞತೆಗಳು.

ನನ್ನ ಅಧ್ಯಯನಕ್ಕೆ ತುಂಬು ಹೃದಯದಿಂದ ಸಹಕರಿಸಿದ ಧರ್ಮಪತ್ನಿ ಆಯುಷ್ಮತಿ ಅನ್ನಪೂರ್ಣ ಚಲವಾದಿ ಹಾಗೂ ಮಕ್ಕಳಾದ ಜೈಭೀಮ (ಭೀಮರಾವ್), ಆನಂದರಾವ್, ಸವಿತಾ, ಸಹೋದರಿ ಅನಿತಾ, ಸಹೋದರರಾದ ವಸಂತಕುಮಾರ, ರಾಜಕುಮಾರ ಇವರೆಲ್ಲರಿಗೂ ನನ್ನ ಪ್ರೀತಿಯ ನೆನೆಕೆಗಳು.

ಸುಂದರವಾಗಿ ಡಿ.ಟಿ.ಪಿ. ಮಾಡಿದ ನಂದಿನಿ ಗ್ರಾಫಿಕ್ಸ್ ಕಮಲಾಪುರದ ಶ್ರೀ ವಿರೂಪಾಕ್ಷಯ್ಯ ಹಿರೇಮಠ ಅವರಿಗೆ ಹಾಗೂ ನನ್ನ ಮಹಾಪ್ರಬಂಧಕ್ಕೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಆತ್ಮೀಯರೆಲ್ಲರಿಗೂ ಕೃತಜ್ಞತೆಗಳು.

ಚಲವಾದಿ ಬಸವರಾಜ

ಪರಿವಿಡಿ

ಅಧ್ಯಾಯ: ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ: ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಜಗತ್ತಿನಲ್ಲಿಯ ಮಾನವನ ವಿಕಾಸಕ್ಕೆ ಪರಿಸರ ಅವಶ್ಯಕ. ಆ ಪರಿಸರವು ಕೂಡಾ ಪ್ರಶಸ್ತವಾಗಿರಬೇಕು. ಪರಿಸರವಿಲ್ಲದ ಜೀವಿಯ ವಿಕಸನ ಕಷ್ಟವಾಗುತ್ತದೆ. ಈ ಭೂಮಿಯ ಮೇಲೆ ಕೋಟಿಗಟ್ಟಲೇ ವರ್ಷಗಳ ಹಿಂದೆಯೇ ಜೀವಿಗಳು ಉದಯಿಸಿದವು. ತಮ್ಮದೇ ಆದ ಚಿಂತನೆ ಕೈಗೊಂಡವು. ಹೀಗಾಗಿ ಮೊದಲು ಅಕಸೇರುಕ ಮತ್ತು ಕಶೇರುಕ ಎಂಬ ಜೀವಿಗಳು ಭೂಮಿಯ ಮೇಲೆ ಜನ್ಮ ಹೊಂದಿ ತದನಂತರ ವಿಕಸನ ಹೊಂದುತ್ತಾ ಹೋದವು. ಆ ಹೊತ್ತಿಗೆ ಬಿಸಿಲು, ಗಾಳಿ, ಮಳೆ, ಚಳಿ ಅವಲಬಿಸಿಕೊಂಡ ಸಸ್ಯಗಳು ಜನ್ಮ ತಾಳಿದವು. ಸಸ್ಯಗಳಿಗಾಗಿ ಜೀವ ಜಂತುಗಳು, ಕ್ರಿಮಿಕೀಟಗಳು, ಪ್ರಾಣಿ–ಪಕ್ಷಿಗಳು, ಹೀಗೆ ಒಂದರ ಹಿಂದೆ ಒಂದು ಬಂದೊದಗಿದ ನಂತರ ಭೂಮಿಯ ಮೇಲೆ ಆಹಾರದ ಜೊತೆಗೆ ಉತ್ತಮ ಪರಿಸರವು ನಿರ್ಮಾಣಗೊಂಡಾಗಲೇ ಮಾನವನು ಜನ್ಮ ತಾಳಿ ವಿಕಸನವಾಗುತ್ತಾ ಹೋಗಿರಬೇಕೆಂದು ವಿಜ್ಞಾನಿಗಳು ಅಭಿಪ್ರಾಯ ಪಡುತ್ತಾರೆ.

ಇವುಗಳಿದ್ದಾಗಲೂ ಅಕಶೇರುಕದಂತಹ ಅಮೀಬಾಗಳು ಕಶೇರುಕ ಜೀವಿಗಳಿಂದ ಮಾನವನು ಹೊರಬಂದು ಮನುಷ್ಯನಾಗಲು ಬಹುವರ್ಷಗಳೇ ಕಳೆದಿವೆ. ಜೀವಿಯು ಮನುಷ್ಯನಲ್ಲಿ

ಕೌಟುಂಬಿಕ ವಾತಾವರಣ ಅಭಿವೃದ್ಧಿಗೆ ಇವೆಲ್ಲವೂ ಸಹಕಾರಿಯಾದವು. ಹೀಗಾಗಿ ಕುಟುಂಬ ಏಕೈಕ ಪ್ರಾಚೀನವಾದ ಸಂಸ್ಥೆಯಾಗಿ ಕಳ್ಳುಬಳ್ಳಿಯಾಗಿ ನಾಂದಿ ಹಾಡಿದೆ. ಪ್ರಾಚೀನ ಕಾಲದಲ್ಲಿ ಒಂದು ಜೀವಿಯನ್ನು ತಿಂದು ಇನ್ನೊಂದು ಜೀವಿ ಬದುಕುವುದು ಸಹಜವಾಗಿತ್ತು. ಯಾವ ಕಾರಣಕ್ಕೂ ಬಲಿಷ್ಟವಾದ ಸಂತತಿಯು ಕನಿಷ್ಟವಾದ ಸಂತತಿಗೆ ತಿಂದು ಹಾಕುತಿತ್ತು. ನ್ಯಾಯ-ಅನ್ಯಾಯಗಳು ಅವುಗಳಿಗೆ ಗೊತ್ತೆ ಇರಲಿಲ್ಲ. ಇಂತಹ ಭಯಾನಕ ವಾತಾವರಣದಲ್ಲಿ ಹಲವು ವರ್ಷಗಳು ಮಾನವ ತನ್ನ ಬುದ್ಧಿ ಆಲೋಚನೆ ನಿರಂತರವಾಗಿ ಬೆಳೆಯಬೇಕೆಂಬ ಆಲೋಚನೆಗೆ ತೊಡಗಿದ್ದು ಮಾನವನೇ ಮೊಟ್ಟ ಮೊದಲಿಗನಾಗಿದ್ದಾನೆ. ಹೀಗಾದ್ದರಿಂದಲೇ ಮಾನವನೇ ಸಾಮಾಜಿಕ ಪ್ರಾಣಿಯಾಗಿ (Man is a social Animal)ಕಂಡು ಬಂದಿದ್ದಾನೆ. ಪ್ರಾಣಿ ಪ್ರಾಣಿಯಾದವು. ಜೀವಿ ಜೀವಿಗಳಾಗಿಯೇ ತಮ್ಮ ಅಭಿವೃದ್ಧಿ ಪಥದಲ್ಲಿ ಸಾಗಿಕೊಂಡು ಬಂದಿವೆ.

ಡಾರ್ವಿನ್ ಎಂಬ ವಿಜ್ಞಾನಿ ಮಂಗನಿಂದ ಮಾನವ ಹುಟ್ಟಿದ ಎಂಬ ಅಂಶವನ್ನು ಹೇಳಿಲ್ಲ. ಈತನ ಪ್ರಭಾವದಿಂದಾಗಿ ಥಾಮಸ್ ಹೆನ್ರಿ ಹಕ್ಸಲೀ ಎಂಬ ವಿಜ್ಞಾನಿಯು ಹಲವು ಆಧಾರಗಳನ್ನು ಹೇಳುತ್ತಾ ಗೋರಿಲ್ಲಾ ಚಿಂಪಾಂಜಿ ಗಿಬನ್ ಬರಾಂಗೋಟಾಂಗ್ ಹಲವಾರು ಮಾನವರೊಂದಿಗೆ ಸೇರಿಕೊಂಡಿದ್ದರಿಂದ ಮನುಷ್ಯ ವಿಕಸನ ಹೊಂದಿರಬೇಕು ಎಂಬ ಅಭಿಪ್ರಾಯವನ್ನು ಮುಂದಿಡುತ್ತಾರೆ. ಡಾ.ಜಾನ್ಸನ್ ಮತ್ತು ಡಾ.ಟೀಮ್ವೈಟ್ ಅಫಾರನ್ನೀಸ್ ಎಂಬ ವಿಜ್ಞಾನಿ ಸಂಶೋಧನೆಯನ್ನು ಕೈಗೊಂಡು ಮನುಷ್ಯನು ಒಂದು ಲಕ್ಷ ವಾಸವಾದ ಹಿಂದಿನ ನಿಯಾಂಡರ್ಥಾಲ್ ಮಾನವನ ಕಾಲಕ್ಕೆ ಉಳಿಯದೆ ಹೋದರೆ ಎರೆಕ್ಟಸ್ ಮಾನವನೇ ಕೊನೆಯ ಆವೃತ್ತಿಯಾಗಿದ್ದಾನೆ. ಹೀಗೆ ಮಾನವನು ಮೊದಲು ಅದಿಮ ಜನರಾಗಿ ಗೋರಿಲ್ಲಾ, ಚಿಂಪಾಂಜಿಗಳನ್ನು ಹೋಲುತಿದ್ದು ತದನಂತರ ಮೆದುಳು ಚಿಕ್ಕದಾಗಿ ತಲೆ ದೊಡ್ಡದಾಗಿದ್ದವು. ಬೆರಳುಗಳು ಒರಟಾಗಿದ್ದವು. ಗಡ್ಡೆ ಗೆಣಸು ತಿಂದು ಕೆಲವೇ ಶಬ್ದಗಳು ಮಾತ್ರ ಹೊರಹಾಕುತ್ತಿದ್ದವು. ಸಿಟ್ಟು ಅಂಜಿಕೆಗಳಿಂದ ಚೀರಾಡುವ ಶಿಲ್ಪಗಳು ಅಭಿವ್ಯಕ್ತಿಯಾಗುತ್ತಿದ್ದವು. ಮಾನವನು ತನ್ನ ಅಂಗೈಕಾಲುಗಳನ್ನು ತನಗೆ ಬೇಕಾದ ಆಹಾರವಾದ ಗಡ್ಡೆ ಗೆಣಸುಗಳನ್ನು ಅಗೆಯಲು ಉಪಯೋಗಿಸಿದ. ಆದಿಮಾನವರು ಚೂಪಾದ ಕಲ್ಲುಗಳಿಂದ ತನ್ನ ಆಹಾರವನ್ನು ಪಡೆದುಕೊಳ್ಳುತ್ತಿದ್ದನು. ಹೀಗೆ ಆದಿ ಮಾನವ ಹಣ್ಣು ಹಂಪಲ ಗಡ್ಡೆಗೆಣಸುಗಳನ್ನು ತಿನ್ನಲು ಪ್ರಾರಂಭಿಸಿದರು. ಜ್ವಾಲಾಮುಖಿ ಜೊತೆಗೆ ಕಾಡಿನಲ್ಲಿ ಬೆಂಕಿಹೊತ್ತಿಕೊಂಡು ಉರಿಯುವುದನ್ನು ನೋಡಿ ಆದಿಮಾನವರು ಭಯಭೀತರಾದರು. ಸಿಡಿಲು ಮಿಂಚುಗಳಿಗೂ ಹೆದರುತ್ತಿದ್ದರು. ಇದರಿಂದ ಸಂಪೂರ್ಣ ಮುಕ್ತಿ ಹೊಂದಿ ಚಳಿಯನ್ನು ಕಾಯಿಸಲು ಬೆಂಕಿಯನ್ನು, ಮಾಂಸಾಹಾರವನ್ನು ಬೇಯಿಸಿ ತಿನ್ನಲು ಪ್ರಾರಂಭಿಸಿದರು. ಇದು ಬದುಕಿಗೆ ಉಪಯುಕ್ತವೆಂದು

ಬಾವಿಸಿದರು. ಬೆಂಕಿಯ ಮೂಲಕ ಕ್ರೂರ ಪ್ರಾಣಿಗಳಿಂದ ದೂರವುಳಿದರು. ಆದಿಮಾನವರ ಜೀವನ ತುಂಬ ಕಷ್ಟವಾಗಿತ್ತು. ಗುಂಪು ಜೀವನವನ್ನೇ ಕೈಗೊಂಡಿದ್ದರು. ಮುಂದೆ ಬೇಟೆಗಳನ್ನು ಆಡಿದರು. ತನ್ನ ರಕ್ಷಣೆಗಾಗಿ ಸದಾ ಮುಂದೆ ನಿಂತರು. ಸರಿಸುಮಾರು ಮಾನವನು ಬುಡಕಟ್ಟು ಸಮುದಾಯ ಗಳ ರಚನೆಗೆ ತೊಡಗಿಕೊಂಡರು.

ಹೀಗಾಗಿ ಹಲವಾರು ಬುಡಕಟ್ಟು ಸಮುದಾಯಗಳು ಉದಯವಾದವು. ಇಲ್ಲಿಯೇ ನೂರಾರು ಬುಡಕಟ್ಟುಗಳು ಬೆಟ್ಟ-ಗುಡ್ಡ-ಕಾಡುಗಳಲ್ಲಿ ವಾಸವಾದ ಜನಸಮುದಾಯವು ಹಲವು ವೃತ್ತಿ ಕುಲಕಸಬುಗಳನ್ನು ಕೈಗೊಂಡವು. ಮಾನವಶಾಸ್ತ್ರ ಹಾಗೂ ಸಮಾಜಶಾಸ್ತ್ರದ ಅಧ್ಯಯನವು ಇಂದು ತೀವ್ರವಾಗಬೇಕೆಂಬ ಹಿನ್ನೆಲೆ ಹೊಂದಲಾಗಿದೆ. ಆ ನಿಟ್ಟಿನಲ್ಲಿ ಈಗಾಗಲೇ ಅಡಿಯಲ್ ಬಾಕ್ಡಾ, ಬಾವಚ ಬಾಮ್ಚ, ಭಿಲ್, ಚೆಚು, ಚೆಂಬವಾರ್, ಚೋಧರಾ, ಡುಬ್ಲ, ತಲವಿಯಾ, ಹಲ್ಪಲಿ ಗಮಿಟ್,ಮಾವ್ಚಿ, ವಾಳ್ವ, ಗೊಂಡ್, ರಾಜ್ಗೊಂಡ್, ಗೌಡಲು, ಹಕ್ಕಿಪಿಕ್ಕಿ, ಹಸಲರು, ಇರುಳರ್, ಇರುಳಿಗ, ಜೇನುಕುರುಬ, ಕಾಡುಕುರುಬ, ಕಮ್ಮಾರ, ಕಣಿಯಾನ್ ಕಥೋಡಿ ಕಟ್ಕೌರೆ, ಕಾಟ್ಟಾನಯಕನ್, ಕೊಕ್ನ, ಕೊಕ್ಕಿ ಕುಕ್ಕಾ, ಕೋಳಿ, ಢೋರ್, ಟೋಕರೆ ಕೋಳಿ, ಕೊಂಡಕಾಪುಸ್, ಕೊರಗ, ಕೋಟ, ಕೋಯ, ಭೀನೆಕೋಯ, ಕುಡಿಯ, ಮೆಲಕುಡಿ, ಕುರುವನ್, ಮಹಾಮಲಸರ್, ಮಲ್ವೆಕುಡಿ, ಮಲಸರ್, ಮಲೆಯೆಕಂಡಿ, ಮಲಸರ್, ಮಲೇರು, ಮರಾಠ, ಮರಾಟಿ, ಖಾಟಕ್, ಮೇದ, ನಾಯಕ, ಬೇಡ, ವಾಲ್ಮೀಕಿ, ಪಳ್ಳಿಯಾನ್, ಪಣಿಯಾನ್, ಪಾರ್ಧಿ, ತಟೇಲಿಯಾ, ರಾಠವಾ, ಶೋಲಗ, ಸೋಲಿಗರು, ವರ್ಲಿ, ವಿಟೋಲಿಯಾ, ಯೆರವ, ಕಾಡುಗೊಲ್ಲ, ಮ್ಯಾಸನಾಯಕರು, ಗೊಂಡ ಆದಿವಾಸಿ ಸಮುದಾಯ, ಬುಡಬುಡುಕಿಯರು, ಸುಡುಗಾಡಸಿದ್ದರು, ಹೆಳವರು, ಗೊಂದಲಿಗರು, ಹಾಲಕ್ಕಿ ಬೂತೇರು, ಎತ್ತಪ್ಪ-ಜುಂಜಪ್ಪ, ಲಂಬಾಣಿಗರು, ಅಡವಿಚೆಂಚರು, ದುರಮುರಗಿಯರು, ವೇಷಗಾರರು, ಪಿಂಜಾರರು, ಮುಂತಾದ ಬುಡಕಟ್ಟು ಜನಾಂಗಗಳ ಕುರಿತಾದ ಬಹುಸಂಸ್ಕೃತಿಯ ನೆಲೆಯಲ್ಲಿ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಇವುಗಳಂತೆ ಸಿಕ್ಲಿಗರ ಜನಾಂಗವು ಒಂದಾಗಿದೆ. ಕರ್ನಾಟಕದ ಅನೇಕ ಪ್ರದೇಶಗಳಲ್ಲಿ ವ್ಯಾಪಿಸಿಕೊಂಡ ಸಿಕ್ಲಿಗರು ಸಂಪೂರ್ಣವಾಗಿ ಕರ್ನಾಟಕದಲ್ಲಿ ೧,೮೭೩ ಜನಸಂಖ್ಯೆ ಹೊಂದಿದ್ದಾರೆ. ಪಂಜಾಬದಿಂದ ಹೈದ್ರಾಬಾದಕ್ಕೆ ಬಂದು ಅಲ್ಲಿಂದ ಬೆಂಗಳೂರು, ಮೈಸೂರು, ಬೀದರ್, ಔರಾದ್, ಭಾಲ್ಕಿ, ಹುಮನಾಬಾದ್, ಗುಲ್ಬರ್ಗಾ, ಯಾದಗಿರಿ, ಸಿಂಧನೂರು, ರಾಯಚೂರು, ಕೊಪ್ಪಳ ಗದಗ,

ಶಿಗ್ಗಾಂವ, ಹುಬ್ಬಳ್ಳಿ, ಧಾರವಾಡ, ಬೈಲಹೊಂಗಲ, ಗೋಕಾಕ್, ನಿಪ್ಪಾಣಿ, ಬೆಳಗಾಂ, ಮುಧೋಳ, ರಾಮದುರ್ಗ, ಬಿಜಾಪುರ ಮುಂತಾದ ಸೀಮಿತ ಪ್ರದೇಶಗಳಲ್ಲಿ ವಾಸವಾಗಿದ್ದಾರೆ.

ಈ ಸಿಕ್ಲಿಗರರು ಕರ್ನಾಟಕದ ಹಲವು ಕಡೆಗಳಲ್ಲಿ ವಾಸವಾಗಿದ್ದರೂ ಸಿಖ್ಖರ ಸಂಪ್ರದಾಯ ಆಚರಣೆ ಮುಂದುವರೆಸಿಕೊಂಡು ಬಂದಿದ್ದಾರೆ. ಹಿಂದೂ ದೇವರುಗಳ ಆಚರಣೆ ಹಾಗೂ ಹಲವು ಹಬ್ಬಗಳ ಆಚರಣೆ ಮಾಡುತ್ತಾರೆ. ಆದರೆ ಗುರುನಾನಕ್ ಅವರ ಕುರಿತಾದ ಆಚರಣೆಗೆ ಮೊದಲ ಆದ್ಯತೆ ನೀಡುತ್ತಾರೆ. ಇಂತಹ ಕರ್ನಾಟಕದಲ್ಲಿ ನೂರಾರು ಬುಡಕಟ್ಟುಗಳ ಕುರಿತು ಅಧ್ಯಯನಗಳನ್ನು ಸಂಶೋಧನೆ ಮಾಡಿ ಪೂರ್ಣಗೊಳಿಸಿದ್ದಾರೆ. ಆದರೆ ಕನಾಟಕದಲ್ಲಿ ಬುಡಕಟ್ಟು ಜನಾಂಗವಾದ ಸಿಕ್ಲಿಗರನ್ನು ಕುರಿತು ಸರ್ವೆಯಾಗಲಿ, ಅವರ ಜನಸಂಖ್ಯೆ, ಅವರ ಸ್ಥಿತಿಗತಿ ಅವರು ಎದುರಿಸುವ ಸಮಸ್ಯೆ, ಸವಾಲುಗಳು, ಧಾರ್ಮಿಕ, ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಹಾಗೂ ಜಾನಪದೀಯವಾಗಿ ಒಂದು ಅಧ್ಯಯನವೂ ನಡೆದಿಲ್ಲ. ಇದು ಮೊಟ್ಟ ಮೊದಲು ಸಿಕ್ಲಿಗರ ಕುರಿತು ಅಧ್ಯಯನ ಕೈಗೊಳ್ಳಲಾಗುತ್ತಿದೆ.

ಭಾರತದ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡಗಳಿಗಿಂತಲೂ ಇವರೇನೂ ಹೆಚ್ಚಿನ ಶ್ರೀಮಂತರಲ್ಲ ಎನ್ನುವದು ಅಧ್ಯಯನದಲ್ಲಿ ನನ್ನ ಗಮನಕ್ಕೆ ಬಂದ ವಿಷಯವಾಗಿದೆ. ಹಲವಾರು ಬಾರಿ ಕ್ಷೇತ್ರಕಾರ್ಯ ಕೈಗೊಂಡಾಗ ಅವರ ಸ್ಥಿತಿ ನೋಡಿದರೆ ಸಂಕಕರಗುತ್ತದೆ. ಅದನ್ನು ಸಹಿಸಲು ಸಾಧ್ಯವಿಲ್ಲ. ಅಷ್ಟೊಂದು ಚಿಂತಾಜನಕ ಸ್ಥಿತಿಯಲ್ಲಿದ್ದಾರೆ. ಮನುಷ್ಯನಿಗೆ ಬದುಕಲು ಬೇಕಾದ ಕನಿಷ್ಟ ಸೌಲಭ್ಯಗಳು ಈ ಜನಾಂಗಕ್ಕೆ ದೊರೆತಿಲ್ಲ. ಪಡಿತರ ಚೀಟಿ, ಮತದಾನ ಮಾಡುವ ಹಕ್ಕು, ಇರಲು ಜಾಗ, ಮನೆಗಳು ಸಹಿತ ದೊರೆತಿಲ್ಲ. ಇಂತಹ ಸಂಕಷ್ಟ ಜೀವನದಲ್ಲಿ ಬದುಕನ್ನು ಸಾಗಿಸಬೇಕಾದ ಅನಿವಾರ್ಯತೆಯಿದೆ. ಈ ಕಾರಣದಿಂದ **ಸಿಕ್ಲಿಗರ ಬುಡಕಟ್ಟು ಸಾಮಾಜಿಕ ಅಧ್ಯಯನ** ಎಂಬ ವಿಷಯವನ್ನು ಕೈಗೊಂಡು ಅಲೆಮಾರಿ ಬುಡಕಟ್ಟು ಸಮುದಾಯಗಳ ಮೇಲೆ ಬೆಳಕು ಚೆಲ್ಲುವ ಮೊಟ್ಟಮೊದಲ ಪ್ರಯತ್ನ ಇದಾಗಿದೆ.

ಕರ್ನಾಟಕದಲ್ಲಿ ಹಲವಾರು ಬುಡಕಟ್ಟು ಪಂಗಡ, ಜನಾಂಗಗಳು ಇಲ್ಲಿ ನೆಲೆಗೊಂಡಿರುವುದರಿಂದ ಸಿಕ್ಲಿಗರ ಜನಾಂಗವು ಆ ಎಲ್ಲಾ ಬುಡಕಟ್ಟು ಜನಾಂಗಗಳಲ್ಲಿ ಅತ್ಯಂತ ಹಿಂದೆ ಉಳಿದಿದ್ದಾರೆ. ಅಲ್ಪ ಸಂಖ್ಯಾತರಾಗಿದ್ದಾರೆ. ಸರ್ದಾರ್‌ಜಿ ಹಾಗೇ ಕಾಣಿಸಿಕೊಳ್ಳುತ್ತಿ ರುವುದರಿಂದ ಸಿಖ್ಖರೆಂದು ಜನರು ಭಾವಿಸಿದ್ದಾರೆ. ಇವರಿಗೆ ಸಿಕ್ಲಿಗರೆಂದು ಜಾತಿ ಪ್ರಮಾಣ

ಪತ್ರವನ್ನು ನೀಡುತ್ತಿಲ್ಲ. ಮೊದಲಿಗೆ ಇವರನ್ನು ಅಪರಾಧಿ ವರ್ಗಕ್ಕೆ (The Criminal Tribe) ಕ್ಕೆ ಸೇರಿಸಲಾಗಿತ್ತು. ಏಕೆಂದರೆ ಇವರು ತಲವಾರ, ಖಡ್ಗ, ಚಾಕು, ಚೂರಿಗಳನ್ನು ತಯಾರಿಸುವುದರಿಂದ ಹೆಚ್ಚು ಜನರು ಇವರನ್ನು ಅನುಮಾನದಿಂದಲೆ ನೋಡಲಾಗುತ್ತಿತ್ತು. ಆದರೂ ಇವರು ಸಂಶಯಾಸ್ಪದ ವ್ಯಕ್ತಿಗಳಲ್ಲ. ಪ್ರಮಾಣಿಕವಾದ ಸತ್ಯದ ಮೇಲೆ ಬದುಕುವ ವ್ಯಕ್ತಿಗಳಾಗಿದ್ದಾರೆ. ಕಠಿಣ ಪರಿಶ್ರಮದ ಕೆಲಸಗಳನ್ನು ಕೈಗೊಂಡಿದ್ದಾರೆ. ಕಬ್ಬಿಣದಂತಹ ಕಠಿಣ ಕೆಲಸವನ್ನು ತುಂಬ ಗಟ್ಟಿಯಾಗಿ ನಿರ್ವಹಿಸಿಕೊಂಡು ಬಂದಿದ್ದಾರೆ. ಮತ್ತು ಆ ಕೆಲಸದ ಮೇಲೆಯೇ ಇಂದಿಗೂ ಅವಲಂಬನೆಯಾಗಿದ್ದಾರೆ. ತಳವರ್ಗ ಮತ್ತು ಬುಡಕಟ್ಟು ಅಧ್ಯಯನದ ಬಗ್ಗೆ ಹಂಪಿ ಕನ್ನಡ ವಿಶ್ವವಿದ್ಯಾಲಯವು ವಿಶೇಷವಾದ ಮಹತ್ವವನ್ನು ಕೊಟ್ಟಿದೆ. ಅದರ ಮೂಲಕ ಅನೇಕ ಬುಡಕಟ್ಟುಗಳ ಕುರಿತು ಜನಾಂಗಗಳ ಅಧ್ಯಯನವಾಗಿವೆ. ಕುಲಕಸಬುಗಳು ಗ್ರಾಮೀಣ ವೃತ್ತಿಗಳ ಕುರಿತು ಪುಸ್ತಕವು ಹೊರಬಂದಿವೆ. ಹಾಗೂ ಸಂಶೋಧನೆಯೂ ನಡೆದಿವೆ. ಇಂದಿಗೂ ಕೂಡ ಸಿಕ್ಲಿಗರರನ್ನು ಕುರಿತು ಯಾವ ಬಿಡಿ ಲೇಖನವೂ ಬಂದಿಲ್ಲ.

ಆದರೆ ಸಿಕ್ಕಲಗಾರರ ಕುರಿತು ಸಿಕ್ಕಲಗಾರರು ಎಂದರೆ ಎಮ್ಮೆ ಬೋಳಿಸುವ, ಶೌಚಾಲಯ ಸ್ವಚ್ಚಗೊಳಿಸುವ ಕೆಲಸ ಕೈಗೊಂಡಿದ್ದಾರೆ. ಮದ್ಯ, ದನದ ಮಾಂಸವನ್ನು ತಿನ್ನುತ್ತಾರೆ. ಇವರು ಕೂಡಾ ಸಿಕ್ಕಲಗಾರರು ಹೌದು. ಈ ಸಿಕ್ಕಲಗಾರರಿಗೂ ಹಾಗೂ ಸಿಖ್ಬ್ ಸಿಕ್ಲಿಗರರಿಗೂ ವ್ಯತ್ಯಾಸವಿದೆ. ವೆಬುದು ಅಧ್ಯಯನದ ಮೂಲಕ ಸ್ಪಷ್ಟಪಡಿಸಲಾಗಿದೆ. ನನ್ನ ಅಧ್ಯಯನದ ಸಿಕ್ಲಿಗರು ಸಿಖ್ಬ್ ಧರ್ಮದ ಅನುಯಾಯಿಗಳಾಗಿ ಗುರುನಾನಕ್ ಅವರನ್ನು ದೇವರೆಂದು ಬಗೆದಿದ್ದಾರೆ. ಗುರುದ್ವಾರಕ್ಕೆ ಹೋಗಿ ತಮ್ಮದೇಯಾದ · ಕೆಲಸ ಕಾರ್ಯಗಳನ್ನು ಕೈಗೊಂಡು ಪರಿಪೂರ್ಣಗೊಳಿಸಿದ್ದಾರೆ. ಅಂತಹ ಭಕ್ತಿ ಗುರುನಾನಕ್ ಅವರ ಮೇಲೆ ಹೊಂದಿದ್ದಾರೆ. ಸಿಕ್ಕಲಿಗ, ಸಿಕ್ಕಲಗಾರ, ಶಿಕ್ಕಲಿಗರು, ಸಿಕ್ಕಲಗಾರರು, ಶಿಕ್‌ಲಿಗಾರ್, ಶಿಕ್-ಶಿಕ್ಲಿಗಾರ್, ಸಿಕ್ಲಿಗರ ಎಂದು ಬಹು ಬಗೆಯ ಹೆಸರುಗಳಿಂದ ಕರೆಯುತ್ತಾರೆ.

ಇವರಲ್ಲಿ ನಿಜವಾಗಿ ಸಿಕ್ಲಿಗರ (Sikaligar) ಎಂಬ ಹೆಸರುಗಳಿಂದ ಕರೆಯುವುದು ಸೂಕ್ತ ಎಂದು ಅಧ್ಯಯನದಿಂದ ತಿಳಿದುಕೊಳ್ಳಲಾಗಿದೆ. ಇದರ ವಿವರ ಮುಂದೆ ಕೊಡಲಾಗಿದೆ. ಹೀಗೆಯೇ ಸಿಕ್ಲಿಗರ ಒಂದು ಸಾಮಾಜಿಕ ಅಧ್ಯಯನ ಎಂಬ ಅಧ್ಯಯನವು ಪದವಿಗಾಗಿ ಸಲ್ಲಿಸುತ್ತಿರುವ ಕರ್ನಾಟಕದಲ್ಲಿಯೇ ಇದು ಮೊದಲನೆಯದಾಗಿದೆ. ಕರ್ನಾಟಕ ಸರ್ಕಾರವಾಗಲಿ, ಬುಡಕಟ್ಟು ಅಧ್ಯಯನವಾಗಲಿ ಅಥವಾ ಬೇರೆ ಯಾರು ಕೂಡಾ ಅಧ್ಯಯನವನ್ನು ಕೈಗೊಂಡಿಲ್ಲ. ಒಂದು

ಲೇಖನವೂ ಕೂಡಾ ಸಿಕ್ಲಿಗರ ಕುರಿತು ಬಂದಿಲ್ಲ. ಇದೇ ಮೊದಲನೆಯ ಅಧ್ಯಯನವಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ.

ಭಾರತದ ಅನೇಕ ಬುಡಕಟ್ಟುಗಳಲ್ಲೊಂದಾಗಿ ಕಾಣುವುದು ಸಿಕ್ಲಿಗರ ಜನಾಂಗವಾಗಿದೆ. ಸಿಕ್ಲಿಗರು ಭಾರತ ದೇಶದಲ್ಲಿ ಐದು ಕಡೆ ಮಾತ್ರ ನೆಲೆಸಿದ ಉಲ್ಲೇಖವಿದೆ. ಕರ್ನಾಟಕದಲ್ಲಿ ಅಲ್ಪಸಂಖ್ಯಾತರಾಗಿದ್ದಾರೆ. ಸಿಕ್ಲಿಗರ ಬುಡಕಟ್ಟು ಜನಾಂಗದ ಬದುಕು ಹಾಗೂ ಜೀವನ ಆಚರಣೆಗಳ ಮೂಲಕ ವೈವಿಧ್ಯಮಯ ಬದುಕನ್ನು ಹೊಂದಿದ್ದಾರೆ. ಪ್ರಾಚೀನ ಕಾಲದಿಂದಲೂ ಇವರು ಶ್ರಮಜೀವಿಗಳಾಗಿ ಕಬ್ಬಿಣದಂತಹ ಕೆಲಸಗಳನ್ನು ನಿರ್ವಹಿಸಿಕೊಂಡು ಜೀವನ ಸಾಗಿಸುತ್ತಾ ಹೊರಟಿದ್ದಾರೆ. ಬುಡಕಟ್ಟುಗಳ ಮೂಲಸ್ವರೂಪಗಳು ಇಂದು ಬದಲಾವಣೆಗೊಳ್ಳುತ್ತಾ ಹೊರಟಿವೆ. ಇಲ್ಲಿಯ ಕಾಲ ಬದುಕು ಸ್ವರೂಪಗಳು ಸಹಿತ ಸಾಮಾಜಿಕ ಸ್ಥಿತ್ಯಂತರದ ಮೂಲಕ ಬದಲಾವಣೆಗೊಂಡಿವೆ. ಬದಲಾವಣೆಗೊಳ್ಳುತ್ತಿವೆ. ಇಂದಿನ ಖಾಸಗೀಕರಣ, ಉದಾರೀಕರಣ, ಹಾಗೂ ಜಾಗತೀಕರಣದ ಸಂದರ್ಭದಲ್ಲಿ ಜನಪದ ಬುಡಕಟ್ಟು ಜನಾಂಗಗಳು ಹಾಗೂ ಅವರ ವೃತ್ತಿಗಳು ಮಾಯಾವಾಗುತ್ತಿವೆ. ಪ್ರತಿಯೊಂದು ಬುಡಕಟ್ಟುಗಳು ಸಹಿತ ಇಂದಿನ ವಿಭಿನ್ನ ತಂತ್ರಜ್ಞಾನ ಯುಗದಲ್ಲಿ ಸಿಲುಕಿ ಮಾಯವಾಗುವ ಎಲ್ಲಾ ಸೂಚನೆಗಳು ಕಂಡು ಬರುತ್ತವೆ. ಆದರೆ ಅವುಗಳ ಸಂಪೂರ್ಣವಾದ ಅಧ್ಯಯನಗಳು ನಡೆಯುತ್ತಿಲ್ಲ. ಮೊದಲಿಗಿಂತಲೂ ಈಗ ಹೆಚ್ಚು ಅಧ್ಯಯನವಾಗಬೇಕಾದ ಜರೂರ ಕೆಲಸವಾಗಬೇಕಿದೆ. ಬುಡಕಟ್ಟನ್ನು ಕೇವಲ ಜನಾಂಗಗಳ ವಿವರಗಳ ಕಣ್ಣಿನಿಂದ ನೋಡುವುದು ಅಷ್ಟೇ ಅಲ್ಲ. ಮಾನವಶಾಸ್ತ್ರ ಹಾಗೂ ಸಮಾಜಶಾಶ್ತ್ರದ ಮೂಲಕ ಮುಖಾಮುಖಿಯಾಗಿಸಿಕೊಂಡು ಅಧ್ಯಯನ ಕೈಗೊಳ್ಳುವುದು ಮುಖ್ಯವಾದ ಉದ್ದೇಶ ವಾಗಿದೆ.

ಇಂದಿನ ಎಲ್ಲಾ ಬುಡಕಟ್ಟುಗಳನ್ನು ಸೇರಿಸಿದರೆ ಒಂದೇ-ವಿಧಾನ, ರೀತಿ-ನೀತಿ ರಿವಾಜು ಗಳನ್ನು ಹೊಂದಿಲ್ಲ. ಬುಡಕಟ್ಟು ಜನಾಂಗಗಳಲ್ಲಿ ಹಲವಾರು ವ್ಯತ್ಯಾಸಗಳು ಸಾಮ್ಯತೆಗಳು ಕಾಣಸಿಗುತ್ತವೆ. ಇವನ್ನು ಎಲ್ಲರೂ ಒಪ್ಪಿಕೊಂಡು ಬಂದಿದ್ದಾರೆ. ಜಗತ್ತಿನ ಅನೇಕ ಕಡೆಗೂ ಹಳ್ಳಿಗಳಿಗಿಂತ ಹೆಚ್ಚಾಗಿ ಪಟ್ಟಣಗಳಲ್ಲಿ ಈ ಸಿಕ್ಲಿಗರ ಜನಾಂಗ ವಾಸಿಸುತ್ತದೆ. ನಗರ-ಪಟ್ಟಣ ಸಂಸ್ಕೃತಿಯನ್ನು ಸಿಕ್ಲಿಗರರು ಹೊಂದಿದ್ದರೂ ಮೂಲವಾದ ಉದ್ದೇಶ ಸಂಸ್ಕೃತಿಯನ್ನು ಎಂದೂ ಬಿಟ್ಟುಕೊಟ್ಟಿಲ್ಲ. ತಾವೇ ಅವುಗಳನ್ನು ನೇರವಾಗಿ ಸ್ಪಂದಿಸುವ ಕೆಲಸಕ್ಕೆ ಕೈಹಾಕಿದ್ದಾರೆ. ಇಂತಹ ಸಂಸ್ಕೃತಿಯೇ ಬುಡಕಟ್ಟು ಸಂಸ್ಕೃತಿಗಳು ಹೊಂದಿದೆ. ಸಿಕ್ಲಿಗರ ಬುಡಕಟ್ಟು ಜನಾಂಗ ಭಿಕ್ಷೆ ಬೇಡದೇ ತಾವೇ ಸ್ವತಃ ದುಡಿದು ಶ್ರಮ ಜೀವನವನ್ನು ಸಾಗಿಸುತ್ತಾರೆ. ಎಲ್ಲರೊಂದಿಗೆ ಪ್ರೀತಿ ಸೌಜನ್ಯತೆಯನ್ನು

ಹೊಂದಿದ್ದಾರೆ. ಮಾನವೀಯ ಮೌಲ್ಯದ ಜೊತೆಗೆ ತಮ್ಮ ಸಮಾಜದ ಜೀವನ ಹಾಗೂ ಆಚರಣೆಗಳನ್ನು ಎತ್ತಿ ಹಿಡಿಯುವ ಕೆಲಸ ಕೈಗೊಂಡಿದ್ದಾರೆ. ಸಿಕ್ಲಿಗರ ಸಮುದಾಯದಲ್ಲಿ ಕಾಣುವ ವಿಶಿಷ್ಟ ಅಂಶಗಳಾಗಿವೆ.

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಒಂದು ಬುಡಕಟ್ಟು ಸಮುದಾಯವನ್ನು ಕುರಿತು ಅಧ್ಯಯನ ಮಾಡುವಾಗ ಅವರದೇಯಾದ ಸ್ವತಂತ್ರ ಮನೋಧರ್ಮ ಸಂಸ್ಕೃತಿ ಹೊಂದಿರುವುದನ್ನು ಕಾಣುತ್ತೇವೆ. ಬುಡಕಟ್ಟು ಸಂಸ್ಕೃತಿ ತನ್ನ ಸರ್ವತೋಮುಖವಾಗಿ ಅಭಿವೃದ್ಧಿಗೊಳ್ಳಲು ಅನೇಕ ಅಂಶಗಳು ಕಾರಣವಾಗಿ ನಮಗೆ ದೊರಕುತ್ತವೆ. ಜಗತ್ತಿನಾದ್ಯಾಂತ ನೂರಾರು ಸಮುದಾಯಗಳು ದೇಶದಲ್ಲಿ ಕಾಲದಿಂದ ಕಾಲಕ್ಕೆ, ದೇಶದಿಂದ ದೇಶಕ್ಕೆ, ರಾಜ್ಯದಿಂದ ರಾಜ್ಯಕ್ಕೆ, ವಿಭಾಗದಿಂದ ವಿಭಾಗಕ್ಕೆ, ಪ್ರಾದೇಶಿಕವಾದ ವ್ಯತ್ಯಾಸಗಳು ಹಾಗೂ ಪ್ರಾದೇಶಿಕ ಸಾಮ್ಯತೆಗಳು ಸಹ ಕಂಡು ಬರುತ್ತವೆ. ಹೀಗಾದಾಗಲೇ ಸಿಕ್ಲಿಗರ ಸಮುದಾಯವು ಕೂಡಾ ಹಾಗೇ ಬೆಳೆದುಕೊಂಡು ಪರಿವರ್ತನೆಗಳಾಗಿವೆ. ಹೊಸ ಹೊಸ ರೀತಿ ನೀತಿಗಳನ್ನು ಅನುಸರಿಸಿಕೊಂಡು ಅದಕ್ಕೆ ತಕ್ಕಂತೆ ಹಲವು ದಿಕ್ಕು ದೆಸೆಗಳನ್ನು ಪಡೆದುಕೊಂಡು ಮನ್ವಂತರದ ಹಾಡನ್ನು ಹಾಡುತ್ತಲಿವೆ. ಇಂದಿನ ಹಲವು ಜನಸಮುದಾಯಗಳು ಬೆಳೆದು ಬಂದು ಜಗತ್ತಿನ ಬೇರೆ ಕಡೆಗೆ ವಲಸೆ ಹೋದರೂ ಮೂಲಸಂಸ್ಕೃತಿ ಒಂದೆಯಾಗಿದೆ. ಸಿಕ್ಲಿಗರ ಜನಾಂಗ ಪಂಜಾಬದ ಸಿಖ್ ಸಮುದಾಯದ ಮೂಲಕ ಹೊರ ಬಂದು ಹೈದ್ರಾಬಾದನಲ್ಲಿ ಕಬ್ಬಿಣದ ಕಠಿಣ ಕೆಲಸಗಳನ್ನು ಪೂರ್ಣಗೊಳಿಸಿ ಆ ವೃತ್ತಿಯನ್ನೇ ಮೂಲವಾಗಿಸಿಕೊಂಡು ಬಂದಿದ್ದಾರೆ. ತನ್ನ ದಿಕ್ಕು ದೆಸೆಗಳನ್ನು ಕಂಡುಕೊಂಡು ಮಾನವೀಯ ಮೌಲ್ಯಗಳ ಚಿಂತನೆಗೆ ನಾಂದಿ ಹಾಡಿದ್ದಾರೆ. ಅವರ ಆಹಾರ-ವಿಹಾರ, ಉಡುಗೆ-ತೊಡಿಗೆ, ಆಚರಣೆ-ವಿಚಾರಣೆಗಳಲ್ಲಿ ವ್ಯತ್ಯಾಸಗಳು ಕಾಣಸಿಗುತ್ತವೆ. ಮಾನವನ ಧ್ಯೇಯೊದ್ದೇಶಗಳನ್ನು ಮಾತ್ರ ಅವರ ವೃತ್ತಿ ಕಸಬು, ಒಲವು-ನಿಲುವುಗಳನ್ನು ಸಮಾನ ಅವಕಾಶಗಳಿರುವುದನ್ನು ಗಂಭೀರವಾಗಿ ಆಲೋಚಿಸಬೇಕಾಗಿದೆ. ಮನುಷ್ಯನಲ್ಲಿಯೇ ಕಟ್ಟಕಡೆಯ ವ್ಯಕ್ತಿಯನ್ನು ಕುರಿತಾದ ಅಧ್ಯಯನ ಮಾನವಶಾಸ್ತ್ರದೊಂದಿಗೆ ಸಮಾಜಶಾಸ್ತ್ರವೂ ಮಾಡುತ್ತದೆ.

ಸಮುದಾಯಗಳು ಅಲೆಮಾರಿಗಳಾಗಿದ್ದರೂ ಅವರ ಸಮಸ್ತ ಜೀವನಕ್ರಮವನ್ನು ವೈಜ್ಞಾನಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಜನಪದಕ್ಕೂ-ಸಮಾಜಶಾಸ್ತ್ರಕ್ಕೂ ನಿಕಟವಾದ ಸಂಬಂಧವನ್ನು ಹೊಂದಿರುವುದರಿಂದ ಇವೆರಡು ಕೂಡಾ ಒಂದೆ ನಾಣ್ಯದ ಎರಡು ಮುಖಗಳಾಗಿ ನಮಗೆ ಕಂಡು ಬ಼ರುತ್ತವೆ. ಬುಡಕಟ್ಟು ಸಮುದಾಯಗಳನ್ನು ಸಂಪೂರ್ಣ ಅರಿತುಕೊಳ್ಳಬೇಕಾದರೆ

ನಮಗೆ ಹಲವಾರು ಚಿಂತನೆ ಧೋರಣೆಗಳನ್ನು ಹೊಂದಬೇಕಾದದ್ದು ಅವಶ್ಯವಾಗಿದೆ. ಹೀಗಾಗಿಯೇ ಬುಡಕಟ್ಟುಗಳನ್ನು ತಿಳಿದುಕೊಳ್ಳಬೇಕಾದ ಅಗತ್ಯತೆಗೆ ಪೂರಕವಾಗಿ ನಾವು ಮಾನವಶಾಸ್ತ್ರ ಸಮಾಜಶಾಸ್ತ್ರದ ಜೊತೆಗೆ ಜನರ ಗಾದೆ, ಒಗಟು, ನುಡಿಗಟ್ಟುಗಳು, ನಂಬಿಕೆ, ಸಂಪ್ರದಾಯ, ಆಚಾರ–ವಿಚಾರಗಳು, ಹಬ್ಬ–ಹರಿದಿನ, ಸಂಪ್ರದಾಯ, ಸಂಸ್ಕೃತಿ, ಕಲೆಗಳು, ಹಾಗೂ ಜನಪದ ಸಾಹಿತ್ಯ ಇವೆಲ್ಲವನ್ನು ಸೇರಿಸಿಕೊಂಡು ಬದುಕಿನ ಪ್ರಕ್ರಿಯೆಗಳನ್ನು ವೈಜ್ಞಾನಿಕವಾದ ಹಿನ್ನೆಲೆಯಲ್ಲಿ ಸಮಗ್ರವಾಗಿ ಅಧ್ಯಯನ ಕೈಗೊಳ್ಳುವುದು ಅತ್ಯಂತ ಅವಶ್ಯವಾಗಿದೆ.

ಇಂತಹ ಬುಡಕಟ್ಟುಗಳ ಅಧ್ಯಯನದ ಮೂಲಕ ಜನವಾಸವಾಗುವ ಪ್ರದೇಶ ಅವರ ಕುರಿತು ಯಾವುದೇ ದಾಖಲೆಗಳಿಲ್ಲದೇ ಮೌಖಿಕ ಪರಂಪರೆ ಹೊಂದಿದ್ದಾಗಿದೆ. ಅದರಲ್ಲಿಯ ಭಾಷೆಯು ಕೂಡಾ ಹೊಸತನದಿಂದ ಕೂಡಿದೆ. ಸಿಕ್ಲಿಗರರು ಸಿಕ್ಲಿಗ ಭಾಷೆ ಆಡುತ್ತಾರೆ. ಆದರೆ ಲಿಪಿ ಎಂಬುದೇ ಇಲ್ಲ. ಹಿಂದಿ ಭಾಷೆಯನ್ನಾಡುವ ಮೂಲಕ ಅಥವಾ ಬೇರೆ ಬೇರೆ ಭಾಷೆಗಳ ಮೂಲಕ ಆಚಾರ–ವಿಚಾರ, ರೀತಿ–ನೀತಿ, ನಂಬಿಕೆ, ಧರ್ಮ, ಕಲೆ, ಸಂಪ್ರದಾಯ, ಪರಂಪರೆ, ಮರಣ, ಮದುವೆ, ಜೀವನ ಆಚರಣೆಗಳು ಸಹಿತ ಕೌಟುಂಬಿಕ ನೆಲೆಗಳಿಂದ ಸಾಂಸ್ಕೃತಿಕ ಸಂಘರ್ಷಗಳನ್ನು ಪಡೆಯಲಾಗಿದೆ. ಸಾಮಾಜಿಕ ಜೀವನ, ವೇಷ ಭೂಷಣ, ಅವರು ಆಚರಿಸುವ ವೃತ್ತಿ–ವಿಧಾನಗಳು ಅನುಸರಿಸುತ್ತಾ ಬಂದಿದ್ದಾರೆ. ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ, ಧಾರ್ಮಿಕ, ಆರ್ಥಿಕ ಹಿನ್ನೆಲೆಯಲ್ಲಿ ವೈವಿಧ್ಯತೆಗಳನ್ನು ಪಡೆದುಕೊಂಡಿದೆ. ಆಹಾರಗಳಲ್ಲಿಯೂ ಕೂಡಾ ವ್ಯತ್ಯಾಸ, ಸೇವಿಸುವ ಪಾನೀಯಗಳಲ್ಲಿ, ಹಬ್ಬ, ಆಚರಣೆ, ಸಂಸ್ಕೃತಿಯ ನೆಲೆಯ ಮೇಲೆ ಬದುಕಬೇಕಾದ ಅನಿವಾರ್ಯತೆ ಕುರಿತು ಅಧ್ಯಯನ ಮಾಡಬೇಕಾದ ಸಾಂಸ್ಕೃತಿಕ ಚಿಂತನೆ ಅತ್ಯಗತ್ಯವಾಗಿದೆ. ಇಂತಹ ಬುಡಕಟ್ಟುಗಳ ಅಧ್ಯಯನವು ಒಂದೇ ಕಾಲಕ್ಕೆ ಒಂದೇ ಸಂದರ್ಭಕ್ಕೆ ಅಧ್ಯಯನ ಪೂರ್ಣ ಗೊಳ್ಳುವುದಿಲ್ಲ. ಬುಡಕಟ್ಟು ಜನಾಂಗವು ನಿರಂತರ ಜಂಗಮತ್ವದ ಗುಣಶೀಲತ್ವ ಹೊಂದಿದೆ. ವಿನಾಃ ಸ್ಥಾವರವನ್ನು ಹೊಂದಿಲ್ಲ. ಮಾನವಶಾಸ್ತ್ರೀಯ ಸಂದರ್ಭಗಳು ಹೊಂದಿದ ಕಾರಣ ಸಾಮಾಜಿಕ ಚಿಂತನಾಧಾರೆಗಳು ಇಲ್ಲಿ ಅನುಸರಿಸಿಕೊಂಡು ಬರುತ್ತಿವೆ. ಉಪಯುಕ್ತವಾದ ಮಾಹಿತಿ ಆಧಾರ ಹಾಗೂ ತನ್ನದೇಯಾದ ವಿಶಿಷ್ಟ ನೆಲೆಗಳಲ್ಲಿ ಬುಡಕಟ್ಟು ಅಧ್ಯಯನವಾಗಬೇಕಾಗಿದೆ.

ಭಾರತದಲ್ಲಿ ಹಲವಾರು ಬುಡಕಟ್ಟು ಸಮುದಾಯಗಳ ಸ್ಥಿತಿಗಳೂ ಗಂಭೀರವಾಗಿವೆ. ಕಾಲದಿಂದ ಕಾಲಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸ ಹೊಂದುತ್ತವೆ. ಅವು ನಿತ್ಯ ನದಿಯಂತೆ ಹರಿಯುವ ಪ್ರವಾಹವಾಗಿವೆ. ಹೊಸ ಬೆಳಕನ್ನು ಹೊಸ ನೀರನ್ನು ಕಂಡುಕೊಳ್ಳುವ

ಸಾಂಸ್ಕೃತಿಕಶೀಲವಾದ ಗುಣವನ್ನು ಹೊಂದಿವೆ. ಬುಡಕಟ್ಟು ಬೆಳವಣಿಗೆ ಇಂದೂ ಅನಿವಾರ್ಯತೆಯಿಂದ ಕೂಡಿದೆ. ಮಾನವ ಹಾಗೂ ಸಮಾಜಶಾಸ್ತ್ರೀಯ ದೃಷ್ಟಿಯಿಂದ ಅತ್ಯಂತ ಯೋಗ್ಯವಾದುದ್ದಾಗಿದೆ.

ಭಾರತ ದೇಶದಲ್ಲಿ ವೇದಕಾಲದಿಂದಲೂ ಜಾತೀಯತೆ, ವರ್ಣಾಶ್ರಮ ಪದ್ಧತಿಗಳು ದಟ್ಟವಾಗಿ ಮೂಡಿ ಬಂದಿವೆ. ಜಾತಿಗಳು ಒಂದರೊಳಗೊಂದು ಸೇರಿಕೊಳ್ಳಲು ಆಗುವುದೇ ಇಲ್ಲ. ಅವು ಪ್ರತ್ಯೇಕವಾದ ಚಿಂತನೆಯ ಮೇಲೆ ಆಧಾರಿತಗೊಂಡು ಬೆಳಕನ್ನು ಹೊಂದಿವೆ. ಪ್ರತ್ಯೇಕವಾಗಿಯೇ ಜೀವಿಸುವ, ವಾಸಿಸುವ, ಅಂಶವನ್ನು ಕಾಣುತ್ತೇವೆ. ಅಲ್ಲಲ್ಲಿ ತೆರೆಮರೆಯಲ್ಲಿ ಕಾಣುವಂತೆ ಕಾಣಸಿಗುವ ಬುಡಕಟ್ಟು ಜನಾಂಗಗಳು ನಮ್ಮಲ್ಲಿವೆ. ಬುಡಕಟ್ಟುಗಳು ತಮ್ಮದೇಯಾದ ಜೀವನ ಆಚರಣೆಗಳ ಮೂಲಕ ಭಾರತದ ಸಂಸ್ಕೃತಿಯಲ್ಲಿ ವಿಶಿಷ್ಟ ಸ್ಥಾನ ಹೊಂದಿವೆ. ಇಂದಿನ ಜನ ಭಾರತೀಯ ಸಂಸ್ಕೃತಿಯನ್ನು ಅಳೆಯುವಾಗ ಕೇವಲ ಜಾತಿಯೇ ಇವರಿಗೆ ಮಾನದಂಡವಾಗಿ ಕಾಣುತ್ತದೆ. ವಿನಃ ಯಾವುದೇ ಬುಡಕಟ್ಟುಗಳ ಸಂಸ್ಕೃತಿಗಳ ಬಗ್ಗೆ ಚಕಾರವನ್ನು ಎತ್ತುವುದಿಲ್ಲವೆಂದರೆ ಸಂಸ್ಕೃತಿ ಎಂದರೆ ಏನೆಂಬುದೇ ಗೊತ್ತಿಲ್ಲ. ಆದಿಕಾಲದಿಂದ ಹಿಡಿದು ಇಂದಿನತನಕ ವೃತ್ತಿ ಕುಲಕಸಬುಗಳನ್ನು ಹೊಂದಿಕೊಂಡಿದ್ದಾರೆ. ಆದಿಕಾಲದ ಸಂಸ್ಕೃತಿ ಇಂದಿನ ಸಂಸ್ಕೃತಿಗೂ ಬದಲಾವಣೆ ಸ್ಥಳಾಂತರಗೊಂಡಿವೆ.

ಜಾತಿವ್ಯವಸ್ಥೆ ಕಾಲಾಂತರಗಳಿಂದ ಅನೇಕ ರೂಪಗಳನ್ನು ಹೊಂದಿ ಸಾಮಾಜಿಕ ಚಿಂತನೆಯ ಅಂಶಗಳನ್ನು ಬೆಳಕಿಗೆ ತರುವ ಪ್ರಯತ್ನ ಮಾಡಲಾಗಿದೆ. ತಮ್ಮ ಶ್ರಮ ವಿಭಜನೆಯ ಮೂಲಕ ಸಮಾಜ ವಿಭಜನೆಯಾಗಿ ಬೆಳೆದು ಬಂದು ಒಂದು ಪರಂಪರೆ ಹೊಂದಿದೆ. ಸಮಾಜಶಾಸ್ತ್ರವೂ ಕೂಡಾ ಮೊದಲು ಬುಡಕಟ್ಟುಗಳ ಬಗ್ಗೆ ನಿಖರವಾದ ಸ್ಪಷ್ಟವಾದ, ನಿಶ್ಚಿತವಾದ ಗುರಿ-ಧೋರಣೆಗಳನ್ನು ಹೊಂದಬೇಕಾಗಿದೆ. ಇವುಗಳನ್ನು ಇಟ್ಟುಕೊಳ್ಳಲಾರದೇ ಯಾವ ಅಧ್ಯಯನವೂ ಕೂಡಾ ಮಾಡಲಾಗದು. ಆಗ ಅವು ಹಲವು ಆಧಾರ-ಚಿಂತನೆಗಳ ಮೇಲೆ ಫಲಪ್ರದವಾಗಲು ಶಕ್ಯವಾಗುತ್ತದೆ. ಕರ್ನಾಟಕದ ಬಹುತೇಕ ಬುಡಕಟ್ಟುಗಳ ಅಧ್ಯಯನ ನಡೆದಿವೆ. ಅನೇಕ ಬುಡಕಟ್ಟುಗಳ ಚಿಂತನೆಗಳನ್ನು ಮಾಡಬೇಕಾಗಿತ್ತು. ಮಾಡಿಯೇ ಇಲ್ಲ. ಇವತ್ತಿನ ವೈಜ್ಞಾನಿಕ ಯುಗದಲ್ಲಿ ಸಹಿತ ಯಾವುದೇ ಭಿನ್ನಾಭಿಪ್ರಾಯ ಹೊಂದದೇ ಇಂತಹ ಬುಡಕಟ್ಟುಗಳ ಸಂತತಿ ನಿಂತು ಹೋಗುವ ಅಪಾಯ ಕಂಡು ಬರುತ್ತಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಕಂಡು ಬರುವ

ಸಿಕ್ಲಿಗರ ಬುಡಕಟ್ಟು ಸಮುದಾಯದ ಕುರಿತಾಗಿ ಅಧ್ಯಯನದಲ್ಲಿ ನಡೆದೇ ಇಲ್ಲವೆಂಬುದಕ್ಕಾಗಿಯೇ ಈ ಜನಾಂಗದ ಸಾಮಾಜಿಕ ಅಧ್ಯಯನ ಕೈಗೊಳ್ಳಲು ಸಾಧ್ಯವಾಗಿದೆ.

ಕರ್ನಾಟಕದಲ್ಲಿ ಸಿಕ್ಲಿಗರ ಜನಾಂಗವು ಬಹುಮುಖ ನೆಲೆಯಲ್ಲಿ ಅಧ್ಯಯನವಾಗಬೇಕಾದ ಅನಿವಾರ್ಯತೆಯಿತ್ತು. ಆದರೆ ಆ ಅಧ್ಯಯನವು ಸಂಪೂರ್ಣವಾಗಿ ನಡೆದೇ ಇಲ್ಲ. ಕರ್ನಾಟಕದಲ್ಲಿ ಕಾಣಸಿಗುವ ಸಿಕ್ಲಿಗರ ಯಾರು, ಅವರು ವಾಸಿಸುವ ಪ್ರದೇಶ ಹಾಗೂ ವೃತ್ತಿ ಕುಲಕಸಬು, ಜೀವನ ವಿಚಾರಗಳ ಚಿಂತನೆಯನ್ನು ಕಾಣಬೇಕಾಗಿತ್ತೆಂದರೆ ನಾವು ಮೊದಲು ಸಿಕ್ಲಿಗರರ ಮೂಲ ಸಂಸ್ಕೃತಿಯನ್ನು ಒಪ್ಪಿಕೊಳ್ಳಬೇಕಾಗಿದೆ. ಹೀಗಾಗಿ ಕ್ಷೇತ್ರಕಾರ್ಯ ಸಂದರ್ಶನ ಹಾಗೂ ಅಪಾರವಾದ ವಕ್ತೃಗಳ ಮೂಲಕ ಮಾಹಿತಿ ಸಂಗ್ರಹಣೆ ಮಾಡಲಾಗಿದೆ. ಕರ್ನಾಟಕದ ಎಲ್ಲಾ ಭಾಗಗಳಲ್ಲಿ ಸುತ್ತಾಡಿಕೊಂಡು ಬರಲಾಯಿತು.

ಸಿಕ್ಲಿಗರ ಸಮುದಾಯ ಬುಡಕಟ್ಟುಗಳ ಕುರಿತು ಸಮಗ್ರ ವಿವೇಚನೆ ಎಂಬುದೇ ಇಲ್ಲ. ಸಿಕ್ಕಲಗಾರ, ಸಿಕ್ಕಲಗಾರ್, ಶಿಕ್ಕಲಗರ್, ಸಿಕ್ಕಲಿಗಾರು, ಸಿಕ್ಲಿಗಾರ್, ಸಿಕ್ಲಿಗರ ಎಂಬ ಪದಗಳು ಮಾತ್ರ ದೊರೆಯುತ್ತವೆ. ಯಾವ ಗ್ರಂಥಗಳಲ್ಲಿ ಇವರ ಹೆಸರು ಉಲ್ಲೇಖಗಳು ಇಲ್ಲ. ಭಾರತದ ಜನಗಣತಿ ಆಧಾರದ ಮೇಲೆ ಇವರ ಹೆಸರು ಪ್ರಸ್ತಾಪಿಸಲಾಗಿದೆ. ಸರ್ಕಾರಿ ಜಾತಿ ಅನುಸೂಚಿತ ಪಟ್ಟಿಯಲ್ಲಿ ಉಲ್ಲೇಖಗೊಂಡಿವೆ. ಭಾರತ ದೇಶದಲ್ಲಿ ಪಂಜಾಬ, ಹರಿಯಾಣ, ಚಂಡಿಗಡ, ಉತ್ತರ ಭಾರತ (ದೆಹಲಿ), ಚತ್ತೀಸಗಡಗಳಲ್ಲಿ ಐದು ಕಡೆ ಮಾತ್ರ ಸಿಕ್ಲಿಗರ ಉಲ್ಲೇಖ ಹೊಂದಿದೆ. ಅವುಗಳ ಜನಸಂಖ್ಯೆಯನ್ನು ಕೊಡಲಾಗಿದೆ. ಆದರೆ ಕರ್ನಾಟಕದಲ್ಲಿ ಸ್ವಾತಂತ್ರ್ಯ ಪೂರ್ವದಿಂದಲೂ ಈ ಪ್ರದೇಶದಲ್ಲಿ ವಾಸವಾಗಿದ್ದರು. ಸಹಿತ ಎಲ್ಲೂ ದಾಖಲೆಗಳು, ಅಂಕಿಅಂಶಗಳು ದೊರೆತಿಲ್ಲ. ಕೆಲವೇ ಕೆಲವು ಆಧಾರಗಳನ್ನು ಮಾತ್ರ ಅಲ್ಪ ಸ್ವಲ್ಪ ದಾಖಲೆಗಳು ನಮಗೆ ದೊರಕಿವೆ.

ಪ್ರಸ್ತುತ ಸಿಕ್ಲಿಗರು ಒಂದು ಸಾಮಾಜಿಕ ಅಧ್ಯಯನ ಎಂಬ ಮಹಾಪ್ರಬಂಧದಲ್ಲಿ ಬುಡಕಟ್ಟು ಸಾಂಸ್ಕೃತಿಕ ವಸ್ತು ವಿಷಯಗಳ ಕುರಿತಾದ ಅನೇಕ ಅಂಶಗಳನ್ನು ಪ್ರಸ್ತಾಪಿಸಲಾಗಿದೆ. ಅವುಗಳ ಮಹತ್ವ ಸಾಂಸ್ಕೃತಿಕ ಅಂಶಗಳನ್ನು ಮೂಲ ಸ್ವರೂಪಗಳ ಬಗ್ಗೆ ಖಚಿತವಾಗಿ ದಾಖಲಿಸಿಕೊಂಡು ವಿಶ್ಲೇಷಿಸಲಾಗಿದೆ. ಈ ಮಹಾ ಪ್ರಬಂಧದಲ್ಲಿ ಹೆಚ್ಚಾಗಿ ಬಳಸಿಕೊಂಡ ಆಧಾರಗಳು ಕ್ಷೇತ್ರಕಾರ್ಯದ ಮೂಲಕ ಬಂದವುಗಳು ಹಲವಾರು ಸಲಹಾತ್ಮಕ ಜನಾಂಗಗಳ ಅಧ್ಯಯನಗಳುಳ್ಳ ಪುಸ್ತಕಗಳ ಸಹಾಯವನ್ನು ಕೈಗೊಳ್ಳಲಾಗಿದೆ. ಪೂರಕವಾದ ಭಾವಚಿತ್ರ, ದಾಖಲಾತಿಗಳನ್ನು ಅಲ್ಲಲ್ಲಿ

ಸೇರಿಸಿಕೊಂಡು ಈ ಅಧ್ಯಯನದಲ್ಲಿ ಬಳಸಿಕೊಂಡು ಸಿಕ್ಲಿಗರ ಜನಾಂಗದ ಅಧ್ಯಯನವು ಹೆಚ್ಚಿನ ಮಹತ್ವ ಕೊಡುವ ಸಲುವಾಗಿ ಪ್ರಯತ್ನಿಸಲಾಗಿದೆ. ಮೂಲ ದಾಖಲಾತಿಗಳನ್ನು ಸಹ ಅಧ್ಯಯನದಲ್ಲಿ ಕೊಡಲಾಗಿದೆ. ಅಧ್ಯಯನವನ್ನು ಹೆಚ್ಚಿನ ಖಚಿತ ನಿಲುವು ಸ್ಪಷ್ಟವಾದ ಮಾರ್ಗಸೂಚಿಯನ್ನು ಈ ಮಹಾಪ್ರಬಂಧ ನೀಡುವಂತೆ ಮಾಡಲಾಗಿದೆ. ಸಿಕ್ಲಿಗರ ಬುಡಕಟ್ಟು ಜನಾಂಗದ ಸಾಮಾಜಿಕ ಅಧ್ಯಯನವನ್ನು ಕೈಗೊಳ್ಳಲು ಕರ್ನಾಟಕವನ್ನು ಆಯ್ದುಕೊಳ್ಳಲಾಗಿದೆ. ಈ ಜನಾಂಗಿಕ ಮೂಲ ಸಂಸ್ಕೃತಿಗಳನ್ನು ಅಧ್ಯಯನ ಮಾಡಿಕೊಳ್ಳಲು ವಿವರಿಸಿದ ಹಾಗೇ ವರ್ಗೀಕರಣಗೊಳಿಸುವುದು ಸೂಕ್ತವಾಗಿದೆ.

ಕರ್ನಾಟಕ

ಮುಂಬೈ ಕರ್ನಾಟಕ

- ನಿಪ್ಪಾಣಿ
- ಬೈಲಹೊಂಗಲ
- ಬೆಳಗಾಂವ
- ಮುಧೋಳ
- ರಾಮದುರ್ಗ
- ಧಾರವಾಡ
- ಹುಬ್ಬಳ್ಳಿ
- ಶಿಗ್ಗಾಂವ
- ಗದಗ
- ಗೋಕಾಕ್
- ಬಿಜಾಪುರ

ಹೈದ್ರಾಬಾದ್ ಕರ್ನಾಟಕ

- ಔರಾದ್
- ಬೀದರ್
- ಹುಮನಾಬಾದ
- ಗುಲ್ಬರ್ಗಾ
- ಭಾಲ್ಕಿ
- ಯಾದಗಿರಿ
- ರಾಯಚೂರು
- ಸಿಂಧನೂರು
- ಕೊಪ್ಪಳ

ಮೈಸೂರು ಪ್ರಾಂತ

- ಮೈಸೂರು
- ಬೆಂಗಳೂರು

ಈ ಮೇಲ್ಕಂಡ ಪಟ್ಟಿಯ ಪ್ರಕಾರ ಸಿಕ್ಲಿಗರ ಜನಾಂಗವು ಹಲವಾರು ಮಹತ್ತರ ವಿಚಾರಗಳನ್ನು ಹೊಂದಿಕೊಂಡು ಹೋಗುತ್ತವೆ. ಪ್ರಾದೇಶಿಕವಾಗಿ ನಾವು ಉತ್ತರ ಮತ್ತು ದಕ್ಷಿಣ ಕರ್ನಾಟಕದ ವರ್ಗೀಕರಣ ಮಾಡಬೇಕಿತ್ತು. ಉತ್ತರ ಕರ್ನಾಟಕ ಮತ್ತು ಮೈಸೂರು ಪ್ರಾಂತ ಜಿಲ್ಲೆಗಳಿಗಿಂತ ಹೈದ್ರಾಬಾದ್ ಕರ್ನಾಟಕದ ವೈಶಿಷ್ಟ್ಯತೆಗಳನ್ನು ಗುರುತಿಸಲು ಇವು ಸಹಕಾರಿಯಾಗಿವೆ.

ಉತ್ತರಕರ್ನಾಟಕ ಜಿಲ್ಲೆಗಳಾದ ಬೆಳಗಾಂ, ಬಿಜಾಪೂರ, ಬಾಗಲಕೋಟೆ, ಧಾರವಾಡ-ಹುಬ್ಬಳ್ಳಿ, ಹಾವೇರಿ ಜಿಲ್ಲೆಗಳಲ್ಲಿ ಮಾತ್ರ ಸುಶಿಕ್ಷಿತ ಸಮುದಾಯದ ಚಿಂತನೆಗಳ ಬೆಳವಣಿಗೆಗೆ ಪೂರಕವಾಗಬಲ್ಲ ಅಂಶಗಳನ್ನು ಹೊಂದಿದ ಜಿಲ್ಲೆ ಸಿಕ್ಲಿಗರ ಮೂಲನೆಲೆಗಳನ್ನು ಹೇಳುತ್ತೇವೆ.ಈ ಜಿಲ್ಲೆಗೆ ಬರುವಾಗಲೂ ಸಹಿತ ಹೈದ್ರಾಬಾದ್, ಸೊಲ್ಲಾಪೂರ, ಸಿಕಂದರಾಬಾದ, ಕೊಲ್ಲಾಪೂರ, ಮೂಲಕ ಹೊರ ಬಂದಿರುವುದು ಕಾಣುತ್ತೇವೆ. ಇಲ್ಲಿಯೇ ಜನವಸತಿ ಮನೆಗಳ ಗುಂಪುಗಳು ಹೆಚ್ಚಾಗಿ ಕಂಡು ಬರುತ್ತಾರೆ. ಇಲ್ಲಿ ಸಿಕ್ಲಿಗರ ಕುಟುಂಬಗಳು ೩೮೫ ಇದ್ದಾರೆ. ಒಟ್ಟು ಜನಸಂಖ್ಯೆ ೧,೮೭೩ ಇವೆ. ಎಂದು ಕ್ಷೇತ್ರಕಾರ್ಯ ಮೂಲಕ ಸಂದರ್ಶಿಸಿ ಜನಗಣತಿಯನ್ನು ಕೈಗೊಂಡು ಈ ನಿರ್ಧಾರಕ್ಕೆ ಬರಲಾಗಿದೆ. ಈ ಎಲ್ಲಾ ನೆಲೆಗಳನ್ನು ಅವರ ಮುಖ್ಯ ತಾಣಗಳಾಗಿ ನಮಗೆ ಕಂಡು ಬರುತ್ತವೆ.

ಹಾಗೇ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಬೀದರ್ ಜಿಲ್ಲೆಯ ಔರಾದ್, ಬೀದರ್, ಹುಮನಾಬಾದ್, ಭಾಲ್ಕಿ, ಗುಲ್ಬರ್ಗಾ ಜಿಲ್ಲೆಯ ಗುಲ್ಬರ್ಗಾ, ಯಾದಗಿರಿ, ರಾಯಚೂರು ಜಿಲ್ಲೆಯ ರಾಯಚೂರು, ಸಿಂಧನೂರು, ಕೊಪ್ಪಳ ಜಿಲ್ಲೆಯ ಕೊಪ್ಪಳ ಈ ಐದು ಜಿಲ್ಲೆಗಳಲ್ಲಿ ಸಹಿತ ಬುಡಕಟ್ಟು ಜನಾಂಗ ವಾಸವನ್ನು ಮಾಡುತ್ತಾ ಬಂದಿವೆ. ಹಲವಾರು ಸಂಗತಿಗಳು ಇವರಲ್ಲಿ ಸೇರಿಕೊಂಡಿವೆ. ಸಿಕ್ಲಿಗರ ಬುಡಕಟ್ಟು ಸಮುದಾಯವು ಒಂದಿಲ್ಲೊಂದು ಕಾರಣಕ್ಕೆ ತನ್ನ ಮೂಲಾಂಶಗಳನ್ನು ಒಳಗೊಂಡಿವೆ.

ಹಾಗೇ ಮೈಸೂರು, ಬೆಂಗಳೂರುಗಳಲ್ಲಿ ಸಹಿತ ಈ ಸಿಕ್ಲಿಗರ ಎಂಬ ಬುಡಕಟ್ಟು ಸಮುದಾಯ ಕುರಿತು ಯಾರು ಕೂಡಾ ಕೈಹಾಕಿ ಅಧ್ಯಯನಕ್ಕೆ ಒಳಪಡಿಸಿಯೇ ಇಲ್ಲ. ನಾನು ಸಮಾಜಶಾಸ್ತ್ರದ ಒಂದು ಹಿನ್ನೆಲೆಯಲ್ಲಿ ಈ ಮಹಾಪ್ರಬಂಧದ ರಚನೆಗೆ ತೊಡಗಿಕೊಂಡೆ ಈ ವಿಷಯವನ್ನು ಆಯ್ಕೆ ಮಾಡಿಕೊಂಡು ಕುಳಿತಾಗ ಮಿಂಚು ಉಂಟಾಯಿತು. ಈ ಸಿಕ್ಲಿಗರ ಕುಟುಂಬ ಯಾವುದೇ ಮಾಹಿತಿಗಳು ನಮಗೆ ದೊರೆಯಲಿಲ್ಲ. ಅದು ಸಹಿತ ದೊರೆಯದೇ ತಮ್ಮಷ್ಟಕ್ಕೆ ತಾವೇ ಉಳಿದುಕೊಂಡ ಬುಡಕಟ್ಟು ಜನಾಂಗವಾಗಿದೆ. ಇವನ್ನು ಸಂಪೂರ್ಣವಾಗಿ ಮನಗಂಡು ಹೊಸ ಜನಾಂಗದ ಕುರಿತಾದ ಅಧ್ಯಯನ ದಾಖಲಾಗಬೇಕೆಂಬ ನಿಟ್ಟಿನಲ್ಲಿ ಕಾರ್ಯಪ್ರವೃತ್ತನಾಗಲು ಪ್ರಾರಂಭಿಸಿದೆ. ಸಿಕ್ಲಿಗರ ಕುಟುಂಬ ಜೀವನ ಆಚಾರ-ವಿಚಾರ ಪ್ರಶ್ನಾವಳಿ ಹಾಗೂ ಅವರ ಜೀವನದ ಮಾಹಿತಿಗಳನ್ನು ತೆಗೆದುಕೊಂಡು ಸಿಕ್ಕಲಗಾರ ಬುಡಕಟ್ಟು ಜನಾಂಗಗಳ ಕಡೆಗೆ ಮುಖ ಮಾಡಬೇಕಾದ ಅನಿವಾರ್ಯತೆಯೂ ಇದೆ. ಹೀಗೆ ನಾನು ಅಲ್ಲಿ ಹೋಗಿ ನೋಡಲಾಗಿ ಸ್ಪಷ್ಟ ದಾಖಲೆಗಳು ದೊರಕಿದವು. ಪ್ರಶ್ನಾವಳಿ ಕಟ್ಟನ್ನು ತಯಾರಿಸಿಕೊಂಡು ಹಿರಿಯರ, ವಕ್ತೃಗಳನ್ನು

ಸಂದರ್ಶಿಸಿ, ಮೌಖಿಕವಾಗಿ ದಾಖಲಿಸಿಕೊಂಡು ಆಡಿಯೋ, ವಿಡಿಯೋದ ಮೂಲಕ ಚಿತ್ರಿಕರಣಗೊಳಿಸಿಕೊಂಡು ನಂತರ ಸಂವಾದ ಚರ್ಚೆಯ ಮೂಲಕ ಅವರ ವಿಶಿಷ್ಟವಾದ ಸಂಸ್ಕೃತಿಯನ್ನು ಹೊರಹಾಕಲು ಸಾಧ್ಯವಾಯಿತು. ಇದಕ್ಕೆ ಬೇಕಾಗುವ ಎಲ್ಲಾ ಪೂರಕ ಆಕರಗಳನ್ನು ಬಳಸಿಕೊಂಡು ಈ ಮಹಾ ಪ್ರಬಂಧಕ್ಕೆ ಹೊಂದಿಸಲಾಗಿದೆ.

ಕರ್ನಾಟಕ ರಾಜ್ಯದ ತುಂಬೆಲ್ಲಾ ಸಿಕ್ಲಿಗರ ಪದದ ಹಾಗೂ ಸಿಕ್ಲಿಗರ ಜನಾಂಗದ ಸಮುದಾಯದ ರೀತಿ-ನೀತಿಗಳನ್ನು ಅರಿತುಕೊಂಡು ಸಮಾಜ ಹಾಗೂ ಮಾನವಶಾಸ್ತ್ರದ ಅಡಿಯಲ್ಲಿ ಈ ಮಹಾಪ್ರಬಂಧ ರಚನೆಗೆ ತೊಡಗಿಕೊಳ್ಳಲಾಗಿದೆ. ಅಧ್ಯಯನದ ಮೂಲ ಉದ್ದೇಶ ಹಾಗೂ ಫಲಶೃತಿ ಹೊರಗೆಡಹಲು ಬೇಕಾಗುವ ಮಾಹಿತಿಯನ್ನು ಹಲವು ನೆಲೆಯಲ್ಲಿ ಯೋಚಿಸಿ ಈ ಮಹಾಪ್ರಬಂಧವನ್ನು ಎಂಟು ಅಧ್ಯಾಯಗಳನ್ನು ಅಧ್ಯಯನದ ಮೂಲಕ ಕೈಗೊಳ್ಳಲು ಪ್ರಯತ್ನಿಸಲಾಗಿದೆ.

ಅಧ್ಯಾಯ: ಎರಡು. ಬುಡಕಟ್ಟುಗಳ ಅಧ್ಯಯನದ ನೆಲೆಗಳು ಎಂಬ ಎರಡನೆಯ ಅಧ್ಯಾಯದಲ್ಲಿ ಭಾರತದ ಬುಡಕಟ್ಟುಗಳ ಅಧ್ಯಯನ ಪರಂಪರೆಯು ಹೇಗೆ ಹುಟ್ಟಿಕೊಂಡು ಬಂದಿತು ಅದು ಯಾವ ಯಾವ ನೆಲೆಗಳನ್ನು ಪಡೆದುಕೊಂಡು ಮೂಲ ಸಂಸ್ಕೃತಿಯನ್ನು ಪಡೆದಿದೆ ಎನ್ನುವುದನ್ನು ಬಹು ವಿಸ್ತಾರವಾಗಿ ವಿವರಿಸಲಾಗಿದೆ. ಇದರಲ್ಲಿಯೇ ಭಾರತದ ಮೂಲಕ ಬುಡಕಟ್ಟು ಅಧ್ಯಯನವು ಹೇಗೆ ತನ್ನಕಾರ್ಯ ವ್ಯಾಪ್ತಿಯನ್ನು ವಿಸ್ತರಿಸಿಕೊಂಡು ಬಂದಿದೆ ಎಂಬುದರ ವಿವರಗಳನ್ನು ಕೊಡಲಾಗಿದೆ. ಹಾಗೇ ಕರ್ನಾಟಕದಲ್ಲಿ ಸಹಿತ ಬುಡಕಟ್ಟುಗಳ ನಾಂದಿ ಹಾಡಿದ ಅನೇಕ ವಿಷಯಗಳನ್ನು ವಿವರಿಸಲಾಗಿದೆ. ಕನ್ನಡ ನಾಡಿನಲ್ಲಿ ನಡೆದ ಬಹು ಮುಖ್ಯವಾದ ಬುಡಕಟ್ಟುಗಳು ಹೇಗೆ ನೆಲೆಸಿವೆ ಎನ್ನುವುದರ ಕುರಿತು ಕೂಲಂಕುಷವಾಗಿ ಸಮೀಕ್ಷಿಸಲಾಗಿದೆ. ಬುಡಕಟ್ಟು ಅಧ್ಯಯನವನ್ನು ವರ್ಗೀಕರಿಸಿಕೊಂಡು ಅವುಗಳ ಬಗ್ಗೆ ಈಗಾಗಲೇ ಜಾನಪದ ವಿದ್ವಾಂಸರು ತೋರಿದ ಮಾರ್ಗದಲ್ಲಿ ವರ್ಗೀಕರಿಸಿ ಹೇಳಲಾಗಿದೆ. ದ್ರಾವಿಡ ಮೂಲದಿಂದ ಬುಡಕಟ್ಟುಗಳು ಹೊರ ಬಂದ ಬಗೆಯನ್ನು ಸಮೀಕ್ಷೆ ಮಾಡಲಾಗಿದೆ. ಬುಡಕಟ್ಟು ಪದದ ಅರ್ಥವಿವರಣೆಗಳು ಇದರಲ್ಲಿ ಸೇರಿಸಿಕೊಂಡಿವೆ. ಮೂಲ ಪದದ ವಿಶೇಷಾರ್ಥಗಳ ಬೆಳವಣಿಗೆ ಯನ್ನು ಕುರಿತು ಸಮೀಕ್ಷಿಸಲಾಗಿದೆ. ಟ್ರೈಬ್ಸ್ ಪದದ ವಿವರಣೆಯನ್ನೆಲ್ಲಾ ಕೊಡಲಾಗಿದೆ.

ಭಾರತದಲ್ಲಿನ ಬುಡಕಟ್ಟುಗಳನ್ನು ಉತ್ತರ ಪೂರ್ವವಲಯ, ಮಧ್ಯವಲಯ ಹಾಗೂ ದಕ್ಷಿಣವಲಯ ಎಂಬ ಮೂರು ವಿಭಾಗದಲ್ಲಿ ವಿಂಗಡಿಸಲಾಗಿದೆ. ಈ ಮೂರು ಬಗೆಯಲ್ಲಿ ಸಹಿತ ಬುಡಕಟ್ಟುಗಳ ಅಧ್ಯಯನವು ನಡೆದಿರುವ ಬುಡಕಟ್ಟುಗಳ ವಿಶೇಷತೆಗೆ ಹೆಚ್ಚಿನ ಗಮನ ಕೊಡಲಾಗಿದೆ. ಬುಡಕಟ್ಟು ಜನಾಂಗಗಳ ಮೂರು ವಲಯಗಳಲ್ಲಿ ಕಂಡು ಬರುವ ಸಮಸ್ಯೆ ಹಾಗೂ ಸಾಮ್ಯತೆಯ ಅಂಶಗಳನ್ನು ಪ್ರತಿಪಾದಿಸುವ ವಿಚಾರಗಳು ವ್ಯಕ್ತವಾಗಿವೆ. ಬುಡಕಟ್ಟು ಜನಾಂಗದ ಗುಣಲಕ್ಷಣಗಳಾದ ಭೂ–ಪ್ರದೇಶ, ನಿರ್ದಿಷ್ಟ ಹೆಸರು, ಸಾಮಾನ್ಯ ಭಾಷೆ, ರಾಜಕೀಯ ವ್ಯವಸ್ಥೆ, ಸರಳ ಮತ್ತು ಸ್ವತಂತ್ರ ಜೀವನ, ರಕ್ತಸಂಬಂಧದ ಬಾಂಧವ್ಯ, ಧರ್ಮ ಮತ್ತು ಸಂಸ್ಕೃತಿ, ಒಳಪಂಗಡ ವಿವಾಹ ಪದ್ಧತಿ, ಸೌಂದರ್ಯಪ್ರಜ್ಞೆಯುಳ್ಳವರು, ರಕ್ಷಣೆ, ಐಕ್ಯತೆ, ಭಾವನೆಗಳನ್ನು ಒಳಗೊಂಡ ಎಲ್ಲಾ ಲಕ್ಷಣಗಳು ಈ ಅಧ್ಯಯನದಲ್ಲಿ ವಿವರಿಸಲಾಗಿದೆ. ಭಾರತದ ಬುಡಕಟ್ಟುಗಳ ಲಕ್ಷಣ ವಿಂಗಡನೆಯ ಮೂಲಕ ಕರ್ನಾಟಕದಲ್ಲಿ ಕಂಡು ಬರುವ ಹಲವು ಭಾಷೆಗಳ ಆರ್ಥಿಕ, ರಾಜಕೀಯ, ಸಾಹಿತ್ಯಿಕ, ಸಾಂಸ್ಕೃತಿಕ, ಸಾಮಾಜಿಕ ಹಿನ್ನೆಲೆಯಲ್ಲಿ ಹೇಗೆ ಹೊರ ಬಂದಿವೆ ಎನ್ನುವ ಕುತೂಹಲವಾದ ಅಂಶಗಳನ್ನು ಪ್ರತಿಪಾದಿಸಲಾಗಿದೆ. ಆದಿವಾಸಿಗಳು ಭಾರತದ ಮೂಲಕ ಕರ್ನಾಟಕದ ಮೂಲಕ ಅನೇಕ ಪ್ರದೇಶಗಳಲ್ಲಿ ಚದುರಿ ಅಲೆಮಾರಿ ಆದಿವಾಸಿಗಳಾಗಿಕೊಂಡು ಬಂದಿದ್ದಾರೆ. ಅಲೆಮಾರಿ ಸಮುದಾಯಕ್ಕೆ ಸೇರಿದ ಸಿಕ್ಲಿಗರ ಸಮುದಾಯವು ಸಹಿತ ಪಂಜಾಬದ ಮೂಲಕ ಕರ್ನಾಟಕದಲ್ಲಿ ಪಸರಿಸಿಕೊಂಡು ಬಂದು ಅವರ ರೀತಿ ರಿವಾಜುಗಳು ಅವರ ದೃಷ್ಟಿಕೋನಗಳನ್ನು ಸಿದ್ಧಾಂತಗಳನ್ನು ಅತ್ಯಂತ ಮಾರ್ಮಿಕವಾಗಿ ಅಷ್ಟೇ ಸವಿವರವಾಗಿ ವಿವರಿಸುವುದರ ಮೂಲಕ ಸಾಂಸ್ಕೃತಿಕ ಬುಡಕಟ್ಟುಗಳ ಅಧ್ಯಯಗಳ ಸಮೀಕ್ಷೆಯನ್ನು ಕಟ್ಟಿಕೊಡಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಕರ್ನಾಟಕದ ಸಿಕ್ಲಿಗರ ಚಾರಿತ್ರಿಕ ವಿವೇಚನೆ ಒಳಗೊಂಡಿದೆ. ಸಿಕ್ಕಲಗಾರರು ಎಂಬ ಪದವೂ ಬೇರೆ ಬುಡಕಟ್ಟು ಜನಾಂಗಕ್ಕೆ ಸೇರುವುದರಿಂದ ಸಿಕ್ಲಿಗರ ಎಂಬ ಪದವನ್ನು ಬಳಸಿಕೊಳ್ಳಲಾಗಿದೆ. ಇದೇ ಪದವು ಸಿಖ್ಖ್ ಸಿಕ್ಲಿಗರ ಎಂಬ ಸಮುದಾಯವಾಗಿದೆ. ಇದರಲ್ಲಿ ಹೆಚ್ಚಾಗಿ ಸಿಕ್ಕಲಗಾರರೆಂದೇ ಸಂಭೋದಿಸುತ್ತಾರೆ. ಸಿಕ್ಲಿಗಾರ ಎಂಬ ಪದವನ್ನು ಯಾವ ರೀತಿ ಬಂತು ಎನ್ನುವ ವಿವೇಚನೆ ಇಲ್ಲಿ ಮಾಡಲಾಗಿದೆ. ಸಿಕ್ಲಿಗರ ಎಂಬ ಸಮುದಾಯವು ಬುಡಕಟ್ಟು ಜನಾಂಗಕ್ಕೆ ಸೇರಿರುವ ಮಹತ್ವ ಜನಾಂಗವಾಗಿದೆ. ಸಿಕ್ಲಿಗರ ಈ ಬುಡಕಟ್ಟು ಜನಾಂಗ ಇಂದು ಹೇಗೆ ಬೆಳೆದು ಬಂದಿತು. ಈ ಪದದ ಪ್ರಯೋಗದ ಬಗ್ಗೆ ಚರ್ಚಿಸಲಾಗಿದೆ. ಚಾರಿತ್ರಿಕವಾದ ಸಾಮಾಜಿಕವಾದ ಅಧ್ಯಯನದ ಮೂಲಕ ಸಾಂಸ್ಕೃತಿಕ ಮಹತ್ವವನ್ನು ಕೊಡಲಾಗಿದೆ. ಸಿಕ್ಲಿಗರ ಸಮುದಾಯವು ಬಹಳಷ್ಟು ಪ್ರಾಚೀನವಾದದ್ದು. ಕಬ್ಬಿಣದ ಕೆಲಸ ಕೈಗೊಂಡ ಅಲೆಮಾರಿ ಬುಡಕಟ್ಟು

ಸಮುದಾಯವಾಗಿದೆ. ಹೇಗೆ ಚಾರಿತ್ರಿಕ ಮಹತ್ವ ಪಡೆದುಕೊಂಡಿದೆ ಎಂಬುದನ್ನು ಅರಿಯಬೇಕಾಗಿದೆ. ಬುಡಕಟ್ಟು ಜನಾಂಗ ಹತ್ತು ಹಲವು ಅಂಶಗಳ ಮೂಲಕ ಪಂಜಾಬದ ಮೂಲಕ ಕರ್ನಾಟಕವನ್ನು ಪ್ರವೇಶಿಸಿವೆ. ಇಂದು ಈ ಜನಸಂಖ್ಯೆ ೧,೮೭೩ ಹೊಂದಿದೆ. ಇಂತಹ ಸಮುದಾಯಗಳ ಚಾರಿತ್ರಿಕ ಅಂಶಗಳ ಬಗೆಗೆ ಹೇಳುವ ನೀತಿ ಸಿಕ್ಲಿಗರ ಜನಾಂಗವನ್ನು ಅತ್ಯಂತ ಸಮಯೋಚಿತವಾಗಿ ವಿವರಿಸಿ ದಾಖಲಿಸುವ ಪ್ರಯತ್ನ ಈ ಅಧ್ಯಯನದಲ್ಲಿ ಮಾಡಲಾಗಿದೆ. ಈ ಮಹಾಪ್ರಬಂಧದ ಮೂಲೋದ್ದೇಶವಾದದ್ದು ಸಿಕ್ಲಿಗರ ಎಂಬ ಪದ ಚಾರಿತ್ರಿಕವಾದ ಐತಿಹಾಸಿಕ ಹಿನ್ನೆಲೆ ಹೊಂದಿದ ಅಂಶಗಳನ್ನು ಕೂಡಾ ಇಲ್ಲಿ ಪ್ರತಿಬಿಂಬಿಸಲಾಗಿದೆ.

ಸಿಕ್ಲಿಗರ ಜನಾಂಗದ ಬೆಡಗು, ಕುಲ, ಗೋತ್ರ, ಬಣಗಳು ಸಹಿತ ಒಂದೇಯಾಗಿ ಕಂಡು ಬರುತ್ತವೆ. ೧೮ ಬಗೆಯ ಕುಲಗೋತ್ರ ಹೆಚ್ಚಿನ ಮಹತ್ವವನ್ನು ಹೊಂದಿವೆ. ಇವುಗಳಲ್ಲಿ ಕೆಲವು ಮಾತ್ರ ಸಕಾಲದಲ್ಲಿವೆ. ಸಿಖ್ಖ್ ಧರ್ಮದ ಆಧಾರದ ಮೇಲೆ ಧಾರ್ಮಿಕತೆ ನೆಲೆ ನಿಂತಿದೆ. ಸಿಕ್ಲಿಗರ ಬಹು ಬಗೆಯ ಸಾಂಸ್ಕೃತಿಕ ಅನಾವರಣಗೊಳಿಸುವ ಜನಾಂಗವಾಗಿದೆ. ಸಿಖ್ಖ್-ಸಿಕ್ಲಿಗರ-ಸಿಕ್ಕಲಗಾರರು ಈ ಮೂರು ಜನಾಂಗಗಳ ಸಾಮ್ಯತೆ-ವೈಷಮ್ಯತೆಗಳನ್ನು ಚರ್ಚಿಸಲಾಗಿದೆ. ಹೀಗಾಗಿ ಸಿಕ್ಲಿಗರ ಸಾಮಾಜಿಕ ಅಧ್ಯಯನಕ್ಕೆ ಮೂಲ ಕಾರಣ ಅವರ ಚಾರಿತ್ರಿಕ ಮಹತ್ವದಿಂದಾಗಿ ಇಂತಹ ಚಾರಿತ್ರಿಕ ಅಂಶಗಳು ಸಿಕ್ಲಿಗರ ಜನಾಂಗದಲ್ಲಿ ಸೇರಿಕೊಂಡು ಹತ್ತು ಹಲವು ವೈವಿಧ್ಯಮಯವಾದ ಅಂಶಗಳನ್ನು ಬೆಳಕಿಗೆ ತರಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಜೀವನ ಮತ್ತು ಕುಲಕಸಬುಗಳ ಕುರಿತಾಗಿ ರಚನೆಗೊಂಡಿದೆ. ಈ ಮಹಾಪ್ರಬಂಧದ ಮೂಲ ಹೃದಯ ಭಾಗವಾಗಿ ಈ ಅಧ್ಯಾಯ ನೆಲೆನಿಂತಿದೆ. ಬುಡಕಟ್ಟುಗಳ ಜೀವನ ವಿಧಾನಗಳು ಇಂದು ಕ್ಷಿಣಿಸುತ್ತಿವೆ. ಅಪಾಯದ ಅಂಚಿನಲ್ಲಿ ಕಾಣಸಿಗುತ್ತವೆ. ಈ ಕಾರಣಕ್ಕಾಗಿಯೇ ಈ ಅಧ್ಯಯನವು ಬುಡಕಟ್ಟು ಸಮುದಾಯದ ಸಿಕ್ಲಿಗರ ಕುರಿತಾದ ಹತ್ತು ಹಲವುಚಿಂತನೆಗಳು ಒಳಗೊಂಡಿವೆ. ಸಿಕ್ಲಿಗರ ಸಮುದಾಯವು ಅವರ ಜೀವನ ಅಲೆಮಾರಿ ಜೀವನವಾಗಿದೆ. ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾದ ಚಾರಿತ್ರಿಕವಾದ ದಾಖಲೆಗಳನ್ನು ಹೊಂದಿದ್ದಾರೆ. ಅವರ ಊಟ, ಆಹಾರ ಪದ್ಧತಿಗಳೆಲ್ಲವೂ ಸಿಖ್ಖರ ಸಂಪ್ರದಾಯಗಳನ್ನು ಒಳಗೊಂಡಿದೆ. ವಸತಿ ರೀತಿಗಳು ನಿರ್ಗತಿಕ ಹಾಗೂ ದುಸ್ಥಿತಿಯಲ್ಲಿರುವ ಸಂಗತಿಗಳು ಊರ ಹೊರಗೆ ರೈತಭವನ ಮುಂತಾದ ಸರ್ಕಾರಿ ಜಾಗದ ಆಶ್ರಯವನ್ನು ಬಯಸುತ್ತಾರೆ. ಅಲ್ಲಿಯೇ ಟಿಣ್ ಮನೆಗಳನ್ನು ಇಲ್ಲವೇ ಗುಡಾರಗಳನ್ನು ಗುಡಿಸಲು ಹಾಕಿಕೊಂಡು ಜೀವಿಸುತ್ತಾರೆ. ಮಳೆ, ಚಳಿ, ಗಾಳಿ ಮೂರು

ಋತುಮಾನಗಳಲ್ಲಿಯೂ ಅವರು ಪ್ರಕೃತಿಗೆ ಮೈಯೊಡ್ಡಿಯೇ ಬದುಕಬೇಕಾಗಿದೆ. ಬೇಸಿಗೆಯಲ್ಲಿ ಯಥಾವತ್ತಾದ ಸ್ಥಿತಿ ಅವರಿಗುಂಟಾಗಿದೆ. ಈ ಕಾರಣದಿಂದ ಸಿಕ್ಲಿಗರ ಸಮುದಾಯವು ಹಲವು ಜೀವನ ವಿಧಾನಗಳನ್ನು ಅಳವಡಿಸಿಕೊಂಡಿದ್ದಾರೆ.

ಸಿಕ್ಲಿಗರ ಅವರ ವೇಷ-ಭೂಷಣಗಳನ್ನು ನೋಡಿದರೆ ಸಿಖ್ಖ್‌ರಂತೆ ಕಾಣುತ್ತಾರೆ. ಇವರು ಮೂಲತಃ ಸಿಖ್‌ರೇ. ಆದರೆ ಸಿಖ್‌ರಿಂದ ಕವಲೊಡೆದು ಅಲ್ಪಸಂಖ್ಯಾತರಾಗಿದ್ದಾರೆ. ಗಡ್ಡಧಾರಿಗಳು, ತಲೆಗೆ ಬಟ್ಟೆ ಸುತ್ತಿಕೊಂಡು ಕೂದಲನ್ನು ತಲೆಮೇಲೆ ಕಟ್ಟಿಕೊಂಡಿರುತ್ತಾರೆ. ಅವರು ಹುಟ್ಟಿನಿಂದ ಹಿಡಿದು ಸಾಯುವತನಕ ಅವರ ಮೈಮೇಲೆ ಬೆಳೆದ ಕೂದಲನ್ನು ಅವರು ತೆಗೆಯುವಂತಿಲ್ಲ. ಕೈಗೆ ಬಳೆ ಕಡಗಗಳನ್ನು ಹಾಕಿಕೊಂಡಿರುತ್ತಾರೆ. ಜೀವನ ವಿಧಾನದಲ್ಲಿ ಒಳಾಡಳಿತ ಹಾಗೂ ನಿರ್ಬಂಧನೆಗಳನ್ನು ಹಾಕಿಕೊಂಡಿದ್ದಾರೆ. ಆ ಎಲ್ಲಾ ವಿಧಾನಗಳು ಈ ಮಹಾಪ್ರಬಂಧದಲ್ಲಿ ಬಂದಿವೆ. ಹೆಸರುಗಳಲ್ಲಿ ವಿಶೇಷತೆ ಕಂಡು ಬರುತ್ತದೆ. ಏಕೆಂದರೆ ಗಂಡು ಮಗುವಿಗೆ 'ಸಿಂಗ್' ಎಂಬ ಪದ ಬರುತ್ತದೆ. ಉದಾಃ ಅಮರನಾಥ ಸಿಂಗ್, ಭಗತ್‌ಸಿಂಗ್, ಹೆಣ್ಣಾದ ಮಗುವಿಗೆ 'ಕೌರ್' ಎಂಬ ಪದವಿರುತ್ತದೆ. ಉದಾಃ ಸಹನಾಕೌರ್, ಪ್ರೇಮಾಕೌರ್, ಎಂಬ ಹೆಸರುಗಳು ಸಹಿತ ವೈವಿಧ್ಯತೆಯಿದೆ. ಈ ಹೆಸರುಗಳಲ್ಲಿ ಗ್ರಂಥ ಸಾಹೇಬದ ಪಠಣದ ಮೂಲಕ ಹೊರ ಬಂದಿರುವ ಹೆಸರನ್ನು ಮಾತ್ರ ಇಡಲಾಗುತ್ತದೆ. ಇಂತಹ ಹೆಸರಿನಲ್ಲಿ ಹೊಸತನ ಕಂಡು ಬರುತ್ತದೆ.

ಈ ಜೀವನ ವಿವರಣೆಗಳಲ್ಲಿಯೇ ಕುಲಕಸಬುಗಳು ಕೂಡಾ ಮುಖ್ಯವಾಗಿವೆ. ಕುಲಕಸಬುಗಳಲ್ಲಿ ಬೇಕಾಗಿರುವ ಹಲವಾರು ಅಂಶಗಳನ್ನು ಇಲ್ಲಿ ಕಾಣಸಿಗುತ್ತವೆ. ವೃತ್ತಿಯಿಂದ ಇವರು ಮೊದಲು ಯುದ್ಧದಲ್ಲಿ ಸಹಾಯಕರಾದರು. ಯುದ್ಧಕ್ಕೆ ಬೇಕಾದ ಸಶಸ್ತ್ರಗಳನ್ನು ತಯಾರಿಸಿ ಕೊಡುವ ಹಾಗೂ ಸಾಣೆ ಹಿಡಿಯುವ ಮೂಲಗುಣ ಹೊಂದಿದ್ದರು. ತರುವಾಯ ಕಬ್ಬಿಣದ ಕೆಲಸಕಾರ್ಯಗಳನ್ನು ಮಾಡುತ್ತಾ ತಲವಾರ, ಭರ್ಚಿ, ಖಡ್ಗ, ಕುಡಗೋಲು, ಚಾಕು, ಚೂರಿ, ಬುಟ್ಟಿ, ಕಡಾಯಿ, ಈಳಿಗೆ, ಮುಂತಾದ ವಸ್ತ್ರಗಳನ್ನು ಕಬ್ಬಿಣದ ಮೂಲಕ ಮಾಡುತ್ತಾ ಬಂದಿದ್ದಾರೆ. ಇವರ ಕುಲಕಸಬುಗಳು ಸಹಿತ ಹಲವಾರು ಧೋರಣೆಗಳೊಂದಿಗೆ ಮಹತ್ವದ ಹೆಜ್ಜೆಯನ್ನು ದಾಖಲಿಸುತ್ತವೆ. ಇಂದಿನ ತಂತ್ರಜ್ಞಾನ ಹಾಗೂ ವೈಜ್ಞಾನಿಕ ಹಿನ್ನೆಲೆ ಹಾಗೂ ಜಾಗತೀಕರಣದ ಇಂತಹ ಹೊತ್ತಿನಲ್ಲಿ ಹೆಚ್ಚಾಗಿ ಬೇಕಾಗಿಯೂ ಇಲ್ಲವಾದರೂ ಅವು ತಮ್ಮ ಮೂಲ ಸ್ವರೂಪದ ಗುಣವನ್ನು ಪಡೆದುಕೊಳ್ಳುತ್ತವೆ. ವೃತ್ತಿ-ಕುಲಕಸಬುಗಳು ಇಂದು ಸ್ಥಿತಿಗತಿಗಳ ಬಗ್ಗೆ ಚಿಂತನೆ ಮಾಡಲಾಗಿದೆ. ಅಧ್ಯಾಯ ಐದರಲ್ಲಿ ಸಿಕ್ಲಿಗರ ಸಾಮಾಜಿಕ ಮತ್ತು ಸಾಂಸ್ಕೃತಿಕ ಮಹತ್ವ ಕುರಿತು ಅಧ್ಯಯನವನ್ನು

ಕೈಗೊಳ್ಳಲಾಗಿದೆ. ಸಿಕ್ಲಿಗರ ಸಂಸ್ಕೃತಿಯು ಪ್ರಾಚೀನವಾದ ಸಂಸ್ಕೃತಿಯನ್ನು ಹೊಂದಿದೆ. ಇಲ್ಲಿ ಜೀವನ ವಿಚಾರಗಳಿಗಿಂತ ಭಿನ್ನವಾಗಿ ಬುಡಕಟ್ಟು ಜನಾಂಗವು ಹೇಗೆ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬೆಳೆಸಿಕೊಂಡು ಬಂದಿದೆ ಎಂಬುದನ್ನು ಕುರಿತು ಸಮಗ್ರವಾಗಿ ಸಂಸ್ಕೃತಿ ಆಚರಣೆಯಲ್ಲಿ ವಿವರಿಸಲಾಗಿದೆ.

ಜನನ, ಗರ್ಭವತಿ, ನಾಮಕರಣ, ಋತುಮತಿ, ಮದುವೆಕಾರ್ಯ, ವಿವಾಹದ ಬಗೆಗಳು, ವಿಧವಾ ವಿವಾಹ, ವಿವಾಹ ವಿಚ್ಚೇದನ, ವಿವಾಹ ಪೂರ್ವ ಒಳ ಹೊರಗಣ ರೀತಿ, ಮರಣ, ಶವಸಂಸ್ಕಾರಗಳು, ಹಬ್ಬ-ಹರಿದಿನಗಳ ಆಚರಣೆಗಳನ್ನು ಬುಡಕಟ್ಟು ಸಂಸ್ಕೃತಿಗಳ ಹಿನ್ನೆಲೆಯಲ್ಲಿ ಆಧಾರ ಸಹಿತವಾಗಿ ಸಿಕ್ಲಿಗರ ಸಮುದಾಯ ಬುಡಕಟ್ಟು ಜನಾಂಗ ಹೇಗೆ ಸಂಸ್ಕೃತಿ ಮತ್ತು ಆಚರಣೆಗಳನ್ನು ಬಳಸಿಕೊಳ್ಳಲಾಗಿದೆಯೆಂಬುದನ್ನು ಕೂಡಾ ವಿವರಿಸಲಾಗಿದೆ. ಸಿಕ್ಲಿಗರ ಬುಡಕಟ್ಟು ಸಮುದಾಯಗಳ ಸಂಸ್ಕೃತಿ ಮತ್ತು ಆಚರಣೆಗಳು ಹೇಗೆ ನೆಲೆಗೊಂಡು ತನ್ನ ಮೂಲ ಸಂಸ್ಕೃತಿ ಪ್ರಸಾರ ಪ್ರಚಾರಗಳನ್ನು ಮಾಡಿವೆ ಎನ್ನುವುದರ ಕುರಿತು ಸಮಗ್ರವಾಗಿ ವಿವೇಚನೆ ಕೈಗೊಳ್ಳಲಾಗಿದೆ. ಈ ಅಧ್ಯಯನವು ಕೂಡಾ ಮಹತ್ವದೆನಿಸುತ್ತದೆ. ಇಲ್ಲಿ ಅವರ ಆಚರಣೆ-ಸಂಸ್ಕೃತಿಗಳು ಸಂಪೂರ್ಣ ವಾಗಿ ವಿವರಿಸಲಾಗಿದೆ.

ಅಧ್ಯಾಯ ಆರರಲ್ಲಿ ಸಿಕ್ಲಿಗರ ಅವರ ಜೀವನ ವಿಧಾನಗಳನ್ನು ಅರಿಯಲು ಮುಖ್ಯವಾಗಿ ಆರ್ಥಿಕ ಸ್ಥಿತಿಗತಿಗಳು ಬೇಕು. ಅವುಗಳನ್ನೆಲ್ಲಾ ಯಾವ ನೆಲೆಗಳಲ್ಲಿ ಕಾಣಬೇಕು ಎನ್ನುವ ಅಂಶಗಳು ಬಳಕೆಗೆ ಬರಬೇಕಾದರೆ ಅತ್ಯಗತ್ಯ ಸಾಧನೆಯನ್ನು ಹೊರಹಾಕಬೇಕಾಗಿದೆ. ಸಿಕ್ಲಿಗರ ಬುಡಕಟ್ಟು ಜನಾಂಗದ ಆರ್ಥಿಕ ದೃಷ್ಟಿಯಿಂದ ಅತ್ಯಂತ ದುರ್ಬಲರಾಗಿ ನಮಗೆ ಕಂಡು ಬರುತ್ತಾರೆ. ಕಬ್ಬಿಣದ ಕೆಲಸಕಾರ್ಯಗಳನ್ನು ಕೈಗೊಂಡು ಕಬ್ಬಿಣದಂತಹ ಶ್ರಮದ ಜೀವನವನ್ನು ಕೈಗೊಂಡು ಆ ಮೂಲಕ ಸಿಕ್ಲಿಗರ ಜನಾಂಗ ತನ್ನ ಅಸ್ತಿತ್ವ ಪಡೆದುಕೊಂಡು ಆರ್ಥಿಕ ಸ್ಥಿತಿ-ಗತಿ ಇಲ್ಲಿ ಗಟ್ಟಿಯಾದ ನೆಲೆಯನ್ನು ಪಡೆದುಕೊಂಡಿಲ್ಲ.

ಅಧ್ಯಾಯ ಏಳರಲ್ಲಿ ಆಧುನಿಕ ಸಂದರ್ಭದಲ್ಲಿ ಸಿಕ್ಲಿಗರರು ಎಂಬ ಅಧ್ಯಯನವು ಕುತೂಹಲದಿಂದ ಕೂಡಿದೆ. ಭಾರತದ ಬುಡಕಟ್ಟು ಜನಾಂಗಗಳು ಹತ್ತು ಹಲವು. ಅವುಗಳ ಸಮಗ್ರ ವಿವೇಚನೆ ಚಿಂತನೆಗೆ ಬೆಳಕು ಮೂಡುವುದು ಅಸಾಧ್ಯದ ಮಾತಾಗಿದೆ. ಆಧುನಿಕ ಸಂದರ್ಭದಲ್ಲಿ ಇವರು ಅತಿ ಮುಂಜಾಗ್ರತೆಯನ್ನು ಜನಸಮುದಾಯ ಹೊಂದಬೇಕಾಗಿದೆ. ಇಂದಿನ ಯಂತ್ರೋಪ -

ಕರಣದ ಜೀವನದಲ್ಲಿ ಹಲವು ವಿಚಾರಧಾರೆಗಳು ನೆಲೆನಿಂತಿವೆ. ಇಂದು ಜಾಗತೀಕರಣ ಬಲವಾಗಿ ನೆಲೆನಿಲ್ಲುವ ಹೊತ್ತಿನಲ್ಲಿ ಜಗಜಗಿಸುವ ವಸ್ತ್ರಗಳು ಹೊರ ಬಂದು ಶ್ರಮದ ಮೂಲಕ ಮಾಡುವ ಕೆಲಸ ಕಾರ್ಯಗಳನ್ನು ಯಾರು ಕಣ್ಣಿಗೆ ಕಾಣುತ್ತಿಲ್ಲ.

ಸಿಕ್ಲಿಗರ ಕುಲಕಸಬುಗಳು ನೆಲಕಚ್ಚಿವೆ. ಆದರೂ ಅವುಗಳಲ್ಲಿಯೇ ಮುಂದೆ ನಿಂತುಕೊಂಡು ಇವರು ಸಿಕ್ಲಿಗರ ಜನಾಂಗ ಕಾರ್ಯ ನಿರ್ವಹಿಸುತ್ತಿರುವುದು ಸೋಜಿಗ. ಅವರಿಗೆ ಬೇಕಾಗಿರುವ ನೆಲ–ನೀರು–ಗಾಳಿ–ಮನೆ ಇಲ್ಲದೇ ಅಲೆಮಾರಿಗಳಾಗಿ ಸುತ್ತುತ್ತಾರೆ. ಸಾಲಸೌಲಭ್ಯಗಳಿಲ್ಲ. ಅವರಿಗೆ ಬೇಕಾದ ಯಾವುದೇ ಸರ್ಕಾರಿ ಸಾಲಸೌಲಭ್ಯಗಳು ದೊರೆಯುತ್ತಿಲ್ಲ. ಸರ್ಕಾರ ಹಾಗೂ ಬುಡಕಟ್ಟುಗಳ ಅಧ್ಯಯನ ವಿಭಾಗಗಳು ಆಯಾ ಭಾಗದ ಅಧಿಕಾರಿ ವರ್ಗಗಳು ಇವರಿಗೆ ಉತ್ತಮವಾದ ಸೌಲಭ್ಯ ಒದಗಿಸಿದರೆ ಅವರ ಸ್ಥಿತಿ–ಗತಿಗೆ ಬಲ ಕೊಟ್ಟಂತಾಗುತ್ತದೆ. ಈಗಾಗಲೇ ಬೆಂಗಳೂರಿನಲ್ಲಿ ವಾಸವಾದ ಬಲಬೀರಸಿಂಗ್ ಪಾವಾ ಅವರು ಸಿಕ್ಲಿಗರ ಅಸೋಸಿಯೇಷನ್ ಸ್ಥಾಪಿಸಿದ್ದಾರೆ. ಆ ಮೂಲಕ ರಾಜ್ಯದಲ್ಲಿನ ಸಿಕ್ಲಿಗರ ಮಕ್ಕಳಿಗೆ ಊಟ–ಬಟ್ಟೆ ಪುಸ್ತಕ–ಶುಲ್ಕವನ್ನು ನೀಡಿ ಶಿಕ್ಷಣಕ್ಕೆ ಆಧಾರ ಸ್ಥಂಭವಾಗಿದ್ದಾರೆ. ಹಾಗೇ ಪಾವಾರವರು ಮಾಡಿದ ಹಾಗೇ ಸರ್ಕಾರ ಗಂಭೀರವಾದ ಚಿಂತನೆ ಮಾಡಿದರೆ ಅವರ ಸ್ಥಿತಿಗತಿ ಸುಧಾರಿಸುತ್ತವೆ.

ಅಧ್ಯಾಯ ಎಂಟರಲ್ಲಿ ಸಮಾರೋಪ ಗ್ರಾಮ ಸಂಸ್ಕೃತಿಯ ನೆಲೆಗಳಿಂದ ಪ್ರಾರಂಭವಾದ ಅಧ್ಯಯನಗಳು ಅವುಗಳ ಜೊತೆಗೆ ಬುಡಕಟ್ಟು ಜನಾಂಗಗಳು ಸಹಿತ ಇಂದು ವ್ಯಾಪಕತೆ ಹೊಂದಿದೆ. ಭಾರತ ಅದರಲ್ಲೂ ಕರ್ನಾಟಕದ ಈ ಬುಡಕಟ್ಟು ಜನಾಂಗಗಳು ಹಲವಾರು ಚಿಂತನೆ ವಿಚಾರಧಾರೆಗಳನ್ನು ಒಳಗೊಂಡು ನೋಡಿದಾಗ ಇಲ್ಲಿಯ ಅಲೆಮಾರಿ ಜನಾಂಗಗಳು ಪ್ರಾದೇಶಿಕವಾಗಿ ಶ್ರೀಮಂತರಾದ ಸಾಂಸ್ಕೃತಿಕ ಮಹತ್ವ ಹೊಂದಿದೆ. ಸಿಕ್ಲಿಗರ ಎನ್ನುವ ಮೂಲ ಸಿಖ್ ಧರ್ಮದ ಮೂಲಕ ಹೊರ ಬಂದ ಪಂಗಡ. ಇವರು ಸಹ ಬುಡಕಟ್ಟು ಜನಾಂಗದಲ್ಲಿಯೇ ಅತೀ ಹಿಂದುಳಿದ ಜನಾಂಗವಾಗಿದೆ.

ಈ ಮಹಾಪ್ರಬಂಧದಲ್ಲಿ ಸಿಕ್ಲಿಗರ ಒಂದು ಸಾಮಾಜಿಕ ಅಧ್ಯಯನದ ಮೂಲಕ ಅವರ ಸುಮಾರು ಎಲ್ಲಾ ವಿವರಗಳು ದಾಖಲೆಗಳು ಇದರಲ್ಲಿ ಸೇರಿ ಅಧ್ಯಯನ ಕೈಗೊಳ್ಳಲಾಗಿದೆ. ಒಟ್ಟಾರೆಯಾಗಿ ಸಿಕ್ಲಿಗರ ಸಾಮಾಜಿಕ ಅಧ್ಯಯನದ ಮೂಲಕ ಜನಾಂಗಗಳ ಅಧ್ಯಯನವು

ಇದೂವರೆಗೂ ಬಳಕೆಗೆ ಬಾರದೇ ಇರುವ ಜನಾಂಗವು ಮೊಟ್ಟ ಮೊದಲ ಬಾರಿಗೆ ಹೊರ ಹಾಕಲಾಗಿದೆ. ಇದೊಂದು ಪ್ರಥಮ ಹೆಜ್ಜೆಯಾಗಿ ಕಂಡು ಬರುತ್ತದೆ.

ಬುಡಕಟ್ಟು ಸಮುದಾಯಗಳು ಇಂದು ಅವಸಾನದ ಹೊತ್ತಿನಲ್ಲಿವೆ. ಅಂತಹ ಬುಡಕಟ್ಟುಗಳಲ್ಲಿ ಸಿಕ್ಲಿಗರ ಸಮುದಾಯ ಒಂದು. ಕಬ್ಬಿಣದ ಕೆಲಸ ಕೈಗೊಂಡು ಯಾವ ಮುಲಾಜಿಗೆ ಒಳಗಾಗದೆ ನೇರ ಸ್ಪಷ್ಟ ಹಾಗೂ ಗಟ್ಟಿ ದುಡಿಮೆಯ ಮೂಲಕ ಸಿಕ್ಲಿಗರು ಗಟ್ಟಿಯಾದ ಶ್ರಮ ಜೀವಿಗಳಾಗಿ ಹೊರ ಬಂದಿದ್ದಾರೆ. ಅವರ ಶ್ರಮ ಫಲಕ್ಕೆ ತಕ್ಕಂತೆ ಪ್ರತಿಫಲ ದೊರೆಯಬೇಕಾಗಿದೆ. ಬುಡಕಟ್ಟು ಸಂಸ್ಕೃತಿಗೆ ಈ ಸಿಕ್ಲಿಗರ ಸಮುದಾಯವು ಹೊಸ ಸೇರ್ಪಡೆಯಾಗಿದೆ. ಈ ಎಲ್ಲಾ ಸಂಶೋಧನೆಯ ಅಧ್ಯಯನದ ಕ್ರಮವನ್ನು ಬಳಸಿಕೊಂಡು ಅಧ್ಯಯನವನ್ನು ಕೈಗೊಳ್ಳಲಾಗಿದೆ. ಹೀಗಾಗಿ ಕರ್ನಾಟಕದಲ್ಲಿನ ಸಿಕ್ಲಿಗರ ಸಮುದಾಯ ಬುಡಕಟ್ಟು ಇಂದು ಕೇವಲ ಕರ್ನಾಟಕದಲ್ಲಿ ಮಾತ್ರವಲ್ಲ ಭಾರತದೇಶದ ಬುಡಕಟ್ಟುಗಳಲ್ಲಿ ಒಂದಾಗಿದೆ. ಭಾರತ ದೇಶದ ಐದು ರಾಜ್ಯಗಳಲ್ಲಿ ಸಿಕ್ಲಿಗರ ಬುಡಕಟ್ಟು ಜನಾಂಗ ತನ್ನ ಕಾರ್ಯವನ್ನು ವಹಿಸಿಕೊಂಡಿದೆ. ಅದೇನೇ ಇದ್ದರೂ ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ಕ್ಷೇತ್ರಕಾರ್ಯ ಆಧರಿಸಿಕೊಂಡು ಸಾಮಾಜಿಕ ಅಧ್ಯಯನ ವನ್ನು ಸಿಕ್ಲಿಗರ ಸಮುದಾಯದ ಮೂಲಕ ಅಭಿವ್ಯಕ್ತಿಸಲಾಗಿದೆ.

ಸಿಕ್ಲಿಗರ ಸಮುದಾಯ ಕರ್ನಾಟಕದಲ್ಲಿ ಹಲವು ಚಿಂತಾಜನಕ ಸಂಕಷ್ಟವಾದ ದಿನಗಳಲ್ಲಿ ಕಾಲವನ್ನು ನೂಕುತ್ತಿದ್ದಾರೆ. ಅನೇಕ ಸಮಸ್ಯೆಗಳು ಸವಾಲುಗಳು ಅವರ ಮಧ್ಯದಲ್ಲಿದೆ. ಕಠಿಣವಾದ ಕಬ್ಬಿಣದಂತಹ ಕೆಲಸಗಳನ್ನು ಕೈಗೊಂಡು ದಿನನಿತ್ಯ ಗೃಹ-ಕೃಷಿ ಹಾಗೂ ಇತರೆ ವಸ್ತುಗಳಿಗೆ ಸಂಬಂಧಿಸಿದ ಅವರ ತಯಾರಿಕಾ ವಿಧಾನ ಅತ್ಯಂತ ಕುತೂಹಲಉಂಟು ಮಾಡುತ್ತದೆ. ಅವರ ಆಚಾರ-ವಿಚಾರ ಸಂಪ್ರದಾಯ, ಆಚರಣೆಗಳು, ಜೀವನ ಕುಲಕಸಬುಗಳು ಸಹಿತ ವೈವಿಧ್ಯಮಯವಾದ ಅಂಶಗಳನ್ನು ಒಳಗೊಂಡಿದೆ. ಕ್ಷೇತ್ರಕಾರ್ಯದ ಮೂಲಕ ಕರ್ನಾಟಕ ರಾಜ್ಯವನ್ನು ಸುತ್ತಾಡಿ ಇವರು ವಾಸಿಸುವ ಜಿಲ್ಲೆ ಅವರ ಸ್ಥಳಗಳ ಪರಿಚಯ ಮಾಡಿಕೊಂಡು ಅವರ ಸಮಗ್ರ ಬುಡಕಟ್ಟು ಸಮುದಾಯವನ್ನು ದಾಖಲಿಸಲಾಗಿದೆ.

ಈ ಪ್ರಬಂಧವು ಸ್ವತಂತ್ರವಾದ ಕ್ಷೇತ್ರಕಾರ್ಯ ಆಧಾರಿತ ಮಹಾಪ್ರಬಂಧವಾಗಿದೆ. ಕರ್ನಾಟಕದ ವಿಸ್ತಾರವಾದ ವ್ಯಾಪ್ತಿ ಹೊಂದಿದೆ. ಅವರ ಆಚರಣೆ-ಸಂಪ್ರದಾಯ, ಜೀವನ ಕುಲಕಸಬುಗಳ ಕಡೆಗೆ ಹೆಚ್ಚಿನ ಒತ್ತು ನೀಡಲಾಗಿದೆ. ಸಿಕ್ಕಲಗಾರ ಎಂಬುದು ಬಳಕೆ ಈ ಜನಾಂಗಕ್ಕೆ

ಸೂಕ್ತವಾದುದ್ದಲ್ಲ. ಸಿಕ್ಲಿಗರ ಎಂಬ ಪದವೆ ಈ ಸಮುದಾಯಕ್ಕೆ ಯಾಕಿರಬೇಕೆ ಎಂಬುದನ್ನು ಸ್ಪಷ್ಟಪಡಿಸಲಾಗಿದೆ.

ಅಧ್ಯಯನದ ಪರಿಕಲ್ಪನೆ

೧. ಬಡತನದಿಂದ ತಮ್ಮ ಹೊಟ್ಟೆ ಪಾಡಿಗಾಗಿ ಸಿಕ್ಲಿಗರು ವಲಸೆ ಹೋಗುತ್ತಾರೆ

೨. ಸಿಕ್ಲಿಗರು ಅಲೆಮಾರಿ ಸಂಸ್ಕೃತಿ ಅಳವಡಿಸಿಕೊಂಡಿದ್ದರಿಂದ ಅವರ ಜೀವನದ ಅನೇಕ ಬಗೆಯಲ್ಲಿ ಪರಿಣಾಮ ಬೀರುವ ಸಾಧ್ಯತೆಗಳಿವೆ.

೩. ಶ್ರಮಪಟ್ಟು ಕಬ್ಬಿಣದಂತಹ ಕೆಲಸ ಕಾರ್ಯಗಳನ್ನು ಕೈಗೊಂಡರು. ಇವರಿಗೆ ದೊರೆಯುವ ಹಣ ಗಂಜಿಗೂ ಗತಿಯಿಲ್ಲದ ಸ್ಥಿತಿ ಉಂಟಾಗುವಂತೆ ಮಾಡಿದೆ.

೪. ಆರ್ಥಿಕ ಪರಿಸ್ಥಿತಿ ಇತರ ಬುಡಕಟ್ಟು ಜನಾಂಗಕ್ಕಿಂತ ಹೇಗೆ ಭಿನ್ನವಾಗಿ ಅಧೋಗತಿಯಲ್ಲಿದೆ. ಎಲ್ಲಾ ಬುಡಕಟ್ಟುಗಳಿಗಿಂತ ಕೆಳಗಿನ ಪದರಲ್ಲಿ ಸಿಕ್ಲಿಗರ ಬುಡಕಟ್ಟು ಜನಾಂಗ ಕಂಡು ಬರುತ್ತದೆ.

೫. ಕರ್ನಾಟಕದಲ್ಲಿ ಹಲವು ಬುಡಕಟ್ಟು ಜನಾಂಗಗಳು ಇದ್ದರೂ ಅವುಗಳಲ್ಲಿಯೇ ಪೂರ್ಣ ಅಲಕ್ಷ್ಯಕ್ಕೆ ಒಳಗಾದ ಸಮುದಾಯದ ಬಗ್ಗೆ ದಾಖಲಿಸುವ ಪ್ರಯತ್ನ ಮಾಡಲಾಗಿದೆ.

೬. ಕುಟುಂಬಗಳು ಅತಿ ಕಡಿಮೆ ಹಾಗೂ ಜನಸಂಖ್ಯೆ ಕಡಿಮೆ ಹೊಂದಿದ್ದರಿಂದ ಪ್ರಬಲವಾದ ಸಂಘಟನೆ–ಬಲ ಇಲ್ಲದ ಕಾರಣ ಹಿಂದುಳಿಯಲು ಕಾರಣವಾಗಿದೆ.

೭. ಆಧುನಿಕ ಮನೋರಂಜನೆಗಿಂತ ಅವರ ಜೀವನ ವಿಧಾನ ಪದ್ಧತಿಪರಂಪರೆಗಳನ್ನು ಅನುಸರಿಸಿಕೊಂಡು ಹೋಗಲು ಹೆಣಗಾಡುತ್ತಿವೆ.

೮. ಸಿಕ್ಲಿಗರ ಸಮುದಾಯ ಬೇರೆ ಬೇರೆ ಸ್ಥಳಗಳಿಗೆ ಅಲೆಮಾರಿತನ ಜೀವನ ನಡೆಸುವಾಗ ಆಯಾ ಪ್ರಾದೇಶಿಕತೆಯ ಪ್ರಭಾವ ಹೆಚ್ಚಾಗಿ ಕಂಡು ಬರುತ್ತದೆ.

೯. ಸಿಕ್ಲಿಗರು ಬುಡಕಟ್ಟು ಶೈಕ್ಷಣಿಕ ಸ್ಥಿತಿ–ಗತಿಯಲ್ಲಿ ಏನನ್ನು ಸಾಧಿಸಿಲ್ಲ. ಸಿಕ್ಲಿಗರು ಅಸೋಷಿಯೇನ್ಸ್ ಬೆಂಗಳೂರು ಇತ್ತ ದಾಪುಗಾಲು ಹಾಕಿದೆ. ಸರ್ಕಾರದ ಯೋಜನೆಗಳಿಂದ ದೂರವುಳಿಯಲಾಗಿದೆ.

೧೦.ಸಿಕ್ಲಿಗರು ಬುಡಕಟ್ಟು ಜನಾಂಗದ ಮುಖ್ಯವಾಹಿನಿಯಲ್ಲಿ ಸೇರಿಸಿಕೊಳ್ಳಲು ಅನುಕೂಲವಾಗುತ್ತದೆ.

ಸಮಾಜಶಾಸ್ತ್ರದ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವಾಗ ಈ ಮಹಾ ಪ್ರಬಂಧಕ್ಕೆ ಹಲವು ಚಿಂತನೆಗಳು ಎದುರಾಗುತ್ತವೆ. ಸಾಮಾಜಿಕ ಆಧಾರದ ಮೇಲೆ ಬೆಳಕನ್ನು ಚೆಲ್ಲುವ ಕೆಲಸ ಮಾಡಲಾಗಿದೆ. ಈ ಒಂದು ಸಿಕ್ಲಿಗರ ಬುಡಕಟ್ಟು ಜನಾಂಗ ಸಮಾಜಶಾಸ್ತ್ರ ಅಧ್ಯಯನವು ವ್ಯಾಪಕ

ಆಳ ವಿಸ್ತಾರತೆ ಹೊಂದಿದೆ. ಹೀಗೆ ಕರ್ನಾಟಕ ಕ್ಷೇತ್ರಕಾರ್ಯ ಆಧರಿಸಿಕೊಂಡು ಈ ಮಹಾ ಪ್ರಬಂಧ ರಚನೆಗೊಂಡ ಬಹು ಮುಖ್ಯ ಉದ್ದೇಶವಾಗಿದೆ.

೧. ಸಿಕ್ಲಿಗರ ಸಮುದಾಯ ಚಾರಿತ್ರಿಕ ಮಹತ್ವ ಹೊಂದಿದ್ದು, ಅದನ್ನು ತಿಳಿದುಕೊಳ್ಳಬಹುದು.
೨. ಕರ್ನಾಟಕ ರಾಜ್ಯದ ಸಮಗ್ರ ಸಿಕ್ಲಿಗರ ಅಧ್ಯಯನದ ಸಮೀಕ್ಷೆ ಕೈಗೊಳ್ಳಲಾಗಿದೆ.
೩. ಸಿಕ್ಲಿಗರ ಬುಡಕಟ್ಟು ಸಮುದಾಯವು ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮಹತ್ವ ಅಳೆಯಬಹುದಾಗಿದೆ.
೪. ಬುಡಕಟ್ಟು ಜನಾಂಗದಲ್ಲಿ ಸಿಕ್ಲಿಗರ ಶಿಕ್ಷಣ, ರಾಜಕೀಯದಿಂದ ವಂಚಿತರಾಗಿದ್ದು ಮುಕ್ತಗೊಳಿಸಬೇಕಾಗಿದೆ.
೫. ಆರ್ಥಿಕ ಸಂವರ್ಧನೆಗೆ ಸರ್ಕಾರ, ಆಡಳಿತಗಳು ಮುಂದೆ ಬರಬೇಕು.
೬. ಸಿಕ್ಲಿಗರ ಸಮುದಾಯ ಹಾಗೂ ಸಿಖ್ಖ್ ಸಮುದಾಯಗಳ ರಕ್ತ ಸಂಬಂಧದ ಕುರಿತಾದ ಮಾನವ ಸಾಮಾಜಿಕ ಅಧ್ಯಯನ ಕೈಗೊಳ್ಳಬೇಕಾಗಿದೆ.
೭. ಸಿಕ್ಲಿಗರ ಬುಡಕಟ್ಟುಗಳ ಮೇಲೆ ಇಂದು ಜಾಗತೀಕರಣ ಹೇಗೆ ತನ್ನ ಸವಾರಿ ಮಾಡಿದೆ. ಅದನ್ನು ಹೇಗೆ ನಿವಾರಿಸಿಕೊಂಡು ಆಧುನಿಕತೆಗೆ ಒಳಪಡಿಸಬೇಕೆಂಬ ಚಿಂತನೆ ಆಗಬೇಕಾಗಿದೆ.

ಬುಡಕಟ್ಟುಗಳ ಅಧ್ಯಯನ ಕ್ರಮ

ಭಾರತದಂತಹ ದೇಶದಲ್ಲಿ ಬುಡಕಟ್ಟುಗಳ ಅಧ್ಯಯನ ಇಂದು ತುಂಬಾ ವೇಗವಾಗಿ ನಡೆಯಬೇಕಾಗಿದೆ. ಈಗಾಗಲೇ ನೂರಾರು ಬುಡಕಟ್ಟುಗಳ ಸಮೀಕ್ಷೆಯಾಗಿದ್ದರೂ ಅವುಗಳ ಕುರಿತಾದ ಮಾಹಿತಿಗಳು ಹೊರ ಬಂದಿಲ್ಲ. ಹೀಗಾಗಿ ಇಲ್ಲಿನ ಎಲ್ಲಾ ಬುಡಕಟ್ಟು ಸಮುದಾಯಗಳ ಚಿಂತನೆ ಹೊರಬರಬೇಕಾಗಿದೆ. ಜಗತ್ತಿನಾದ್ಯಾಂತ ಬುಡಕಟ್ಟುಗಳು ಪಸರಿಸಿಕೊಂಡಿವೆ. ಆಯಾ ಭಾಗ ಹಾಗೂ ಪ್ರಾದೇಶಿಕವಾದ ಹಿನ್ನೆಲೆಯಿಂದ ಅಧ್ಯಯನ ಕೈಗೊಂಡು ಹೊರಹಾಕಬೇಕು. ಅವುಗಳ ವಸತಿ, ಸಂಸ್ಕೃತಿ, ಆಚರಣೆ ಹಾಗೂ ಕುಲಕಸಬುಗಳ ಅಂಶಗಳು ಬೆಳಕಿಗೆ ತರಬೇಕಾಗಿದೆ. ಗುಡ್ಡಗಾಡು, ಕಾಡುಮೇಡು, ಗಡಿ ಶಿಖರ ಮುಂತಾದ ಭಾಗಗಳನ್ನು ಸಮಗ್ರವಾಗಿ ವಿಕ್ಷಿಸಬೇಕು. ಹೀಗಾಗಿ ಕರ್ನಾಟಕದ ಪ್ರತಿಯೊಂದು ಜಿಲ್ಲೆಗಳನ್ನು ಸಮೀಕ್ಷೆ ಮಾಡಿ ಸಿಕ್ಲಿಗರ ಬುಡಕಟ್ಟು ಸಮುದಾಯವನ್ನು ಕ್ಷೇತ್ರಕಾರ್ಯ ಅಧ್ಯಯನದ ಮೂಲಕ ಕಟ್ಟಿಕೊಡಲಾಗಿದೆ. ಸಂಶೋಧನೆಯ

ವಿಧಿ–ವಿಧಾನಗಳನ್ನು ಅನುಸರಿಸಿಕೊಂಡು ಹೋಗಿ ಬುಡಕಟ್ಟುಗಳ ಸಮಗ್ರ ವಿವೇಚನೆ ಮಾಡಬೇಕಾದ ತುರ್ತು ಕೆಲಸ ಇಲ್ಲಾಗಿದೆ. ಇದೆ ಸಂಶೋಧನಾ ಅಧ್ಯಯನ ಕ್ರಮವಾಗಿದೆ.

ಈ ಅಧ್ಯಯನ ಕೈಗೊಂಡ ಸಂಶೋಧನಾ ವಿಧಾನ

ಕರ್ನಾಟಕದ ಬುಡಕಟ್ಟು ಜನಾಂಗಗಳಲ್ಲಿ ಸಿಕ್ಲಿಗರೊಬ್ಬರು. ಇವರ ಕುರಿತು ಸಮಗ್ರವಾದ ಅಧ್ಯಯನ ಯಾರೂ ಕೈಗೊಂಡಿರಲಿಲ್ಲ. ಆ ಕಾರಣಕ್ಕಾಗಿ ಸಾಮಾಜಿಕ ಅಧ್ಯಯನದ ಮೂಲಕ ಕಾಣಲು ಪ್ರಯತ್ನಿಸಲಾಗಿದೆ. ಸಿಕ್ಲಿಗರ ಎಂಬ ಸಮುದಾಯವನ್ನು ಸಂಶೋಧನೆ ಮಾಡುವ ಮೂಲಕ ಹೊಸ ಬುಡಕಟ್ಟು ಸಮುದಾಯ ಕುರಿತು ಪರಿಚಯಿಸಲಾಗಿದೆ.

೧. ಕ್ಷೇತ್ರಕಾರ್ಯದ ಮೂಲಕ ಸಮಗ್ರ ಜನಸಂಖ್ಯೆ ಸಮೀಕ್ಷೆ (Door to Door Survey)

೨. ಕ್ಷೇತ್ರಕಾರ್ಯದ ಮೂಲಕ ಸಮಗ್ರ ಕುಟುಂಬಗಳ ಸಮೀಕ್ಷೆ

೩. ಕ್ಷೇತ್ರಕಾರ್ಯದ ಮೂಲಕ ಸಮಗ್ರ ಸ್ಥಿತಿ–ಗತಿ ಪಟ್ಟಿ ಕೊಡುವುದು

೪. ಪ್ರಾಯೋಗಿಕವಾಗಿಯೇ ಸಿಕ್ಲಿಗರ ಜನಾಂಗ ಅಭ್ಯಾಸಕ್ಕೆ ಕೈಗೊಳ್ಳಲಾಗಿದೆ.

೫. ಮೌಖಿಕ ನೇರ ಸಂದರ್ಶನದ ಮೂಲಕ ಸಂಪರ್ಕ ಹೊಂದಲಾಗಿದೆ.

೬. ಸಮುದಾಯಗಳ ಮನೆ– ಮನೆ ಬಾಗಿಲುಗಳಿಗೆ ಹೋಗಿ ಅವರ ಸ್ಥಿತಿಗತಿ ಸಮೀಕ್ಷೆ

೭. ಸಿಕ್ಲಿಗರ ಸಮುದಾಯದೊಂದಿಗೆ ಪಾಲ್ಗೊಂಡು ಸಮೀಕ್ಷೆ ಮಾಡಲಾಗಿದೆ.(participate Method)

೮. ಸರಕಾರದ ಅಧಿನಿಯಮಗಳನ್ನು ತಿಳಿಸುವ ಮೂಲಕ ಅವರವರ ಪ್ರಶ್ನೆಗಳಿಗೆ ಉತ್ತರ ಕಂಡು ಕೊಳ್ಳಲಾಗಿದೆ.

೯. ಸಿಕ್ಲಿಗರ ಸಮುದಾಯವು ಸಿಕ್ಕಲಗಾರರು ಸಮುದಾಯದ ವ್ಯತ್ಯಾಸಗಳನ್ನು ಕಂಡು ಹಿಡಿದಿದ್ದು.

೧೦.ಸಿಖ್–ಸಿಕ್ಲಿಗರ ನಡುವಿನ ವ್ಯತ್ಯಾಸ, ಸಾಮಿಪ್ಯ ಹಾಗೂ ಸಿಖ್ ಸಿಕ್ಲಿಗರ್ ಹೆಸರು ಕರೆಯುವ ವಾಡಿಕೆ ರೂಢಿಯಲ್ಲಿ ಬರಲು ಪ್ರತಿಪಾದನೆ.

ಹೀಗಾಗಿ ಸಿಕ್ಲಿಗರ ಬುಡಕಟ್ಟನ್ನು ಕುರಿತು ಅಧ್ಯಯನಗಳು ಯಾವವೂ ನಡೆದಿಲ್ಲ. ಇದೇ ಪ್ರಥಮ ಹೆಜ್ಜೆಯಾಗಿದೆ. ಕರ್ನಾಟಕ ರಾಜ್ಯದ ಸಮಗ್ರ ಕ್ಷೇತ್ರಕಾರ್ಯ ಕೈಗೊಂಡು ಸಿಕ್ಲಿಗರ ಬುಡಕಟ್ಟು ಸಮುದಾಯಗಳ ವಿವರಗಳನ್ನು ಕೊಡಲಾಗಿದೆ. ಸಿಕ್ಲಿಗರ ಕುರಿತು ಕ್ಷೇತ್ರಕಾರ್ಯ ಸಂದರ್ಶನದ ಮೂಲಕ ಈ ಮಹಾ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ. 'ಸಿಕ್ಲಿಗರು ಒಂದು ಸಾಮಾಜಿಕ

ಅಧ್ಯಯನ' ಎಂಬ ವಿಷಯವು ಕೂಡಾ ಅತಿ ಮಹತ್ವದ ಶೀರ್ಷಿಕೆಯಾಗಿದೆ. ಅದಕ್ಕೆ ತಕ್ಕಂತೆ ಈ ಮಹಾಪ್ರಬಂಧ ರಚನೆಗೊಂಡಿದೆ. ಸರ್ಕಾರದ ಯೋಜನೆಗಳು ಮೂಲಭೂತ ಸೌಕ -ರ್ಯಗಳು ಸಿಕ್ಲಿಗರ ಬುಡಕಟ್ಟು ಜನಾಂಗಕ್ಕೆ ದೊರಕಿಲ್ಲ. ಬೇರೆ ಬೇರೆ ಹೆಸರುಗಳಿಂದ ಇವರನ್ನು ಕರೆಯುವುದು ಬೇರೆ ಬೇರೆ ಸಮುದಾಯದೊಂದಿಗೆ ಇವರನ್ನು ಗುರುತಿಸುವುದಾಗಿದೆ. ಸಿಕ್ಲಿಗರ ಎಂದು ಕರೆಯುವುದು ಸರ್ಕಾರದ ಯೋಜನೆಗಳಡಿಯಲ್ಲಿ ಮೂಲಭೂತವಾಗಿ ವಂಚಿತರಾದ ಸಿಕ್ಲಿಗರ ಜನಾಂಗಕ್ಕೆ ಆ ಎಲ್ಲಾ ಸೌಲಭ್ಯಗಳು ಕೂಡಲೇ ಇವರಿಗೆ ದೊರೆಯಬೇಕಾಗಿದೆ.

ಅಧ್ಯಾಯ : ಎರಡು

ಬುಡಕಟ್ಟುಗಳ ಅಧ್ಯಯನ

ಅಧ್ಯಾಯ : ಎರಡು

ಬುಡಕಟ್ಟುಗಳ ಅಧ್ಯಯನ

ಸಂಪ್ರದಾಯ ಮತ್ತು ನಂಬಿಕೆಗಳು ಇಂದು ಜಾನಪದ ಸಂಸ್ಕೃತಿಯ ಒಂದು ಮಹತ್ತರ ಭಾಗವಾಗಿ ಹೊರಬಂದಿದೆ. ಬುಡಕಟ್ಟುಗಳ ಅಧ್ಯಯನಕ್ಕೆ ಇದೇ ಬಹುಮುಖ್ಯವಾದ ಪಾತ್ರವನ್ನು ವಹಿಸಿವೆ. ಸಂಸ್ಕೃತಿ ಮಾನವನ ಬಹು ಮುಖ್ಯವಾದ ಅಂಗವಾಗಿದೆ. ಪ್ರಾಣಿಗಳಿಗಿಂತ ಭಿನ್ನವಾದ ಅಂಶ ಮಾನವನಿಗೆ ದೈವದತ್ತವಾಗಿ ಒದಗಿ ಬಂದಿದೆ. ಸ್ವಾರ್ಥ ಮತ್ತು ಸಮಾಜದ ಹಿತರಕ್ಷಣೆಗಳ ನಡುವೆ ಸಂಘರ್ಷಗಳನ್ನುಂಟು ಮಾಡುತ್ತಲೇ ಮಾನವ ನೆಲೆ ನಿಂತಿದ್ದಾನೆ. ಇಂದು ಬುಡಕಟ್ಟು ಸಂಸ್ಕೃತಿಯ ಅಧ್ಯಯನಗಳು ವ್ಯಾಪಕವಾಗಿ ನಡೆಯುತ್ತಿವೆ. ಪ್ರಾರಂಭದಲ್ಲಿ ಎಡ್ಗರ್ ಥರ್ಸಟನ್ ಹಾಗೂ ಕೆ. ರಂಗಾಚಾರ‍್ಯರು ಬುಡಕಟ್ಟುಗಳ ಅಧ್ಯಯನಕ್ಕೆ ನಾಂದಿ ಹಾಡಿದರು. ೧೯೩೫ ರಲ್ಲಿ ಕರ್ನಾಟಕದಲ್ಲಿ ಎಲ್.ಕೆ. ಅನಂತಕೃಷ್ಣ ಅಯ್ಯರ್ ಅವರು ಬುಡಕಟ್ಟುಗಳ ಕುರಿತು ಅಧ್ಯಯನ ಕೈಗೊಂಡರು ಈ ಅಧ್ಯಯನ ಕುರಿತು ಹಿಂದೆಯೇ ಪ್ರಾರಂಭವಾಗಿದ್ದರೂ ಅದು ತನ್ನ ತನವನ್ನು ಮರೆಯಲು ಕಾರಣವಾಯಿತು. ನಂತರದಲ್ಲಿ ಇತ್ತೀಚಿನ ವರ್ಷಗಳಲ್ಲಿ ವ್ಯಾಪಕ ಅಧ್ಯಯನ ಕೈಗೊಳ್ಳಲು ಸಾಧ್ಯವಾಗಿದೆ. ಸಂಸ್ಕೃತಿಯನ್ನು ಕುರಿತು ಅಧ್ಯಯನ ಮಾಡುವ ವಿಜ್ಞಾನ ಸಾಂಸ್ಕೃತಿಕ ವಿಜ್ಞಾನವಾಗಿದೆ. ಇದಕ್ಕೊಳಗಾಗದೆಯೇ ನಾವು ಮಾನವ ಕುಲ ವಿಜ್ಞಾನ ಹಾಗೂ ಮಾನವ ಕುಲ

ವಿವರಣ ವಿಜ್ಞಾನವೆಂಬ ಎರಡು ಅಧ್ಯಯನಗಳು ಬುಡಕಟ್ಟು ಸಂಸ್ಕೃತಿಯ ಕುರಿತು ಮಾಡುವ ಅಂಶಗಳೇ ಆಗಿವೆ. ಈ ಅಂಶಗಳ ಮೂಲಕ ಬುಡಕಟ್ಟು ಸಂಸ್ಕೃತಿ ಅಧ್ಯಯನಕ್ಕೆ ದಾರಿ ಮಾಡಿ ಕೊಡುತ್ತವೆ. ಬುಡಕಟ್ಟು (Tribe) ಎಂದರೇನು? ಈ ಕುರಿತು ಅನೇಕರು ಚಿಂತನ ಮಂಥನ ಮಾಡಿದ್ದಾರೆ. ನಗರ, ಪಟ್ಟಣ ಮತ್ತು ಗ್ರಾಮೀಣ ಈ ಮೂರು ಹಂತಗಳಲ್ಲಿ ಜೀವಿಸುವ ಸಮುದಾಯದ ಜನರ ಸಂಸ್ಕೃತಿಯನ್ನು ನಗರ ಸಂಸ್ಕೃತಿ, ಪಟ್ಟಣ ಸಂಸ್ಕೃತಿ, ಗ್ರಾಮೀಣ ಸಂಸ್ಕೃತಿ ಎಂದು ಕರೆಯಲಾಗುತ್ತದೆ. ಗ್ರಾಮೀಣ ಹಾಗೂ ನಗರ ಸಂಸ್ಕೃತಿಯಿಂದ ದೂರ ಉಳಿದು ಬೆಟ್ಟ, ಗುಡ್ಡ, ಕಾಡು, ಮರಳುಗಾಡು, ದ್ವೀಪ, ಹಿಮಪ್ರದೇಶಗಳಲ್ಲಿ ತನ್ನ ಸಮುದಾಯ ಅಲೆಮಾರಿ ಕುಟುಂಬ ಸಮುದಾಯಗಳಾಗಿ ವಾಸಿಸುವ ಜನರೇ ಬುಡಕಟ್ಟುಗಳ ಸಂಸ್ಕೃತಿಯಾಗಿ ಹೊರ ಬಂದಿವೆ. ಬುಡಕಟ್ಟು ಸಂಸ್ಕೃತಿ ನಗರ ಹಾಗೂ ಪಟ್ಟಣ ಸಂಸ್ಕೃತಿಗಳ ಸೋಂಕನ್ನು ತಗಲಿಸಿಕೊಳ್ಳದೇ ನಿರಂತರವಾಗಿ ತನ್ನ ತನವನ್ನು ಮೆರೆದುಕೊಂಡು ಬಂದ ವಿಶಿಷ್ಟ ಸಮುದಾಯವಾಗಿದೆ.

ಬುಡಕಟ್ಟು ಸಂಸ್ಕೃತಿ ಇತರರನ್ನು ಅನುಮಾನದಿಂದಲೇ ನೋಡುತ್ತಾರೆ. ಸಮಾಜದ ಮುಖ್ಯ ಪ್ರವಾಹಿನಿಯಲ್ಲಿ ಇರುವ ಜನರು ಕೂಡ ಅವರನ್ನು ಅದೇ ರೀತಿಯಾಗಿ ನೋಡುತ್ತಾರೆ. ರಕ್ತಸಂಬಂಧ ಕೂಡ ಬಹು ಕಟ್ಟುನಿಟ್ಟಿನ ವಿಧಿ ವಿಧಾನಗಳನ್ನು ಆಚರಣೆಗಳನ್ನು ಪಾಲಿಸಿಕೊಂಡು ಬರುತ್ತಾರೆ. ನಮ್ಮ ಗ್ರಾಮೀಣ-ನಗರ ಸಂಸ್ಕೃತಿಗಿಂತ ತೀರಾ ಭಿನ್ನವಾಗಿದ್ದುಕೊಂಡು ಬರುತ್ತವೆ. ನೋಡಲು ಅನಾಗರೀಕತೆ ಅಸಭ್ಯತೆಗಳು ಕಂಡು ಬರುತ್ತವೆ. ಅವರಿಗೆ ಅವರದೇ ಆದ ಭಾಷೆ, ಕಲೆ, ಸಾಹಿತ್ಯ, ಆಚಾರ, ವಿಚಾರ, ನಂಬಿಕೆ, ಧರ್ಮ, ಸಂಪ್ರದಾಯ, ವ್ಯವಹಾರಿಕತೆ ಮುಂತಾದವುಗಳು ಸೇರಿಕೊಂಡು ತನ್ನ ಅನನ್ಯತೆಯನ್ನು ಪ್ರತಿಬಿಂಬಿಸುವ ಕಾರ್ಯ ಕೈಗೊಂಡಿದೆ. ಹೀಗಾಗಿ ಸಹಸ್ರಾರು ಬುಡಕಟ್ಟುಗಳು ಜಗತ್ತಿನಾದ್ಯಂತ ಹರಡಿಕೊಂಡಿವೆ. ಅವುಗಳಲ್ಲಿ ಫೆಸಿಫಿಕ್ ಸಾಗರದ ಮೇಲನೇ ಪಿಯಾ, ಪಾಲಿನೇಪಿಯಾ, ಮೈಕ್ರೋನೇತಿಯಾ ಹಾಗೂ ಹಲವಾರು ದ್ವೀಪಗಳ ಸಮೂಹಗಳ ಬುಡಕಟ್ಟುಗಳು ಆಫ್ರಿಕಾದ ಕಾಡುಗಳಲ್ಲಿ ಮತ್ತು ಮರಳುಗಾಡುಗಳಲ್ಲಿ ಕಂಡು ಬರುವ ಕೆಲವು ಪ್ರಮುಖ ಬುಡಕಟ್ಟುಗಳನ್ನು ಹೆಸರಿಸಬಹುದಾಗಿದೆ.

ಭಾರತ ಹಲವು ಧರ್ಮ, ಜಾತಿಗಳಿಂದ ಕೂಡಿದ ವಿಶಿಷ್ಟ ಸಂಸ್ಕೃತಿಯನ್ನು ಹೊಂದಿದೆ. ಹಾಗೇ ಭಾರತ ದೇಶಜಾತಿಗಳು ಹಲವು ಬುಡಕಟ್ಟುಗಳ ನಡುವೆ ಇರುವ ಅನೇಕ ವ್ಯತ್ಯಾಸ ಸಾಮ್ಯತೆಗಳನ್ನು ಗುರುತಿಸಬೇಕಾಗಿದೆ. ಪ್ರಪಂಚದ ಯಾವುದೇ ದೇಶ-ಭಾಷೆಗಳಲ್ಲಿ ಕಾಣಸಿಗದ ಸಮಸ್ಯೆಗಳು ಇಲ್ಲಿವೆ. ವರ್ಣಾಶ್ರಮಗಳು ನೆಲೆನಿಂತಿವೆ. ಭಾರತದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ,

ಎಂಬ ನಾಲ್ಕು ಜಾತಿಗಳು ಶ್ರೇಣೀಕೃತ ವ್ಯವಸ್ಥೆಯನ್ನು ಪ್ರತಿಬಿಂಬಿಸುತ್ತದೆ. ಪಂಚಮರೆಂದು ಕರೆಯುವ ಈ ದಲಿತ ಸಮೂಹವನ್ನು ಐದನೆಯ ಜಾತಿಯೆಂದು ಶೂದ್ರಾತಿಶೂದ್ರರೆಂದು ಕರೆಯುತ್ತಾರೆ. ಈ ವ್ಯವಸ್ಥೆ ಪ್ರಾರಂಭದಲ್ಲಿ ವೃತ್ತಿಯಾಗಿ ಬಂದವು ತದನಂತರ ವೃತ್ತಿಗಳೇ ಜಾತಿಗಳಾಗಿ ನಂತರದಲ್ಲಿ ಸಾಮಾಜಿಕ ಶೋಷಣೆಯ ಸಾಧನವಾಗಿ ಹೊರ ಬಂದಿರುವುದು ಇತಿಹಾಸದ ಪುಟ ಪುಟಗಳಲ್ಲಿ ಕಾಣಸಿಗುತ್ತವೆ. ಈ ಜಾತಿ ವ್ಯವಸ್ಥೆಗಳನ್ನು ಕುರಿತು ಡಾ. ತಿ.ನಂ. ಶಂಕರನಾರಾಯಣ ಅವರು [3] 'ಈ ಜಾತಿಗಳನ್ನು ಬಿಟ್ಟು ಉಳಿದ ಹಿಂದೂ ಸಮಾಜಿಕ ವರ್ಗಗಳನ್ನೆಲ್ಲಾ ಭಾರತದಲ್ಲಿ ಬುಡಕಟ್ಟುಗಳೆಂದು ಕರೆಯಬಹುದು' ಎಂದಿದ್ದಾರೆ. ಈ ಎಲ್ಲಾ ಬುಡಕಟ್ಟುಗಳು ಧರ್ಮ ಜಾತಿಗಳ ಮೇಲೆ ಪ್ರಭಾವ ಬೀರಿತು. ಜಾತಿಯಿಂದ ಬೆಳೆಯದೇ ಸ್ವತಂತ್ರವಾಗಿ ಬುಡಕಟ್ಟು ಸಂಸ್ಕೃತಿಯನ್ನು ಉಳಿಸಿಕೊಂಡು ಹೋಗಲು ಹೆಣಗಾಡಿದವು. ಈ ಕಾರಣದಿಂದಾಗಿ ತಮ್ಮ ತಮ್ಮ ಜಾತಿ ವ್ಯವಸ್ಥೆಯನ್ನು ಮೀರಿ ಹೊಸತನ ಭಿನ್ನತೆ ತೋರಲು ಅಷ್ಟೊಂದು ಪ್ರಮಾಣದ ಅವರು ಬೆಟ್ಟ-ಗುಡ್ಡ -ಕಾಡುಗಳಲ್ಲಿ ವಾಸಿಸುವುದರಿಂದ ಜಾತಿಗಳಿಂದ ದೂರವಿರಲು ಸಾದ್ಯವಾಯಿತು. ಈ ಬುಡಕಟ್ಟುಗಳಲ್ಲಿ ಹಿಂದೂ ಸಂಸ್ಕೃತಿಯ ಎಳೆಗಳು ಮಾತ್ರ ಸಿಗುತ್ತವೆ. ಏಕೆಂದರೆ ಹಿಂದೂ ಧರ್ಮದಿಂದ ದೂರವುಳಿದಿದ್ದರಿಂದ ಹಾಗೂ ಬಹು ಕಾಲದವರೆಗೂ ದೂರ ಉಳಿದು ಸ್ವತಂತ್ರವಾದವು. ಈ ಸ್ವತಂತ್ರ ಜೀವನದಿಂದಲೇ ತಮ್ಮದೇ ಆದ ವಿಶಿಷ್ಟವಾದ ಬುಡಕಟ್ಟು ಸಂಸ್ಕೃತಿ ಉಳಿಸಿ ಬೆಳೆಸಿ ಕೊಂಡು ಬರಲು ಸಾಧ್ಯವಾಯಿತು. ಇಲ್ಲಿನ ಎಲ್ಲಾ ಜಾತಿಗಳು ಹಿಂದೂ ಧರ್ಮದ ಅದರಲ್ಲೂ ವೈದಿಕ ಸಂಪ್ರದಾಯಗಳ ಹಿಡಿತದಲ್ಲಿ ಸಿಕ್ಕಿದ್ದರಿಂದ ಅವುಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಈ ಹಿಂದೂ ಧರ್ಮದಿಂದ ಮುಕ್ತಿ ಹೊಂದಿ ಬದುಕಲು ಕೂಡ ಅಸಾಧ್ಯವಾಯಿತು.

ಬುಡಕಟ್ಟು ಜನಾಂಗಗಳು ಜಾತಿಗಳಾಗಿ ತನ್ನ ಪರಿವರ್ತನೆಯನ್ನು ಹೊಂದಲು ಪ್ರಯತ್ನಿಸಿತು. ಬುಡಕಟ್ಟುಗಳು ಜಾತಿಗಳಾಗಿ ಹೊರ ಬಂದವು. ಎಂಬುದಕ್ಕೆ ಹಲವಾರು ವಿದ್ವಾಂಸರ ಹೇಳಿಕೆಗಳೇ ನಮಗೆ ಕಾರಣವಾಗಿವೆ. ಬುಡಕಟ್ಟಿನ ಸಮುದಾಯಗಳು ಜನರ ಹುಟ್ಟು, ಮದುವೆ, ಹಾಗೂ ಸಾವು ಈ ಮೂರು ಹಂತಗಳಲ್ಲಿ ಬ್ರಾಹ್ಮಣರ ಪುರೋಹಿತಶಾಹಿಗಳಿಗೆ ಅವಕಾಶವನ್ನು ನೀಡದೇ ಎಲ್ಲಿಯವರೆಗೆ ತಾವು ನಡೆಸಿಕೊಂಡು ಹೋಗಲು ಪ್ರಾರಂಭಿಸುತ್ತಾರೋ ಅಲ್ಲಿಯವರೆಗೆ ಬುಡಕಟ್ಟು ತನ್ನ ಮೂಲರೂಪವನ್ನು ಕಳೆದುಕೊಳ್ಳದೆ ಹಾಗೇ ಕಾಪಾಡಿಕೊಂಡು ಬರುತ್ತಾರೆ. ಇಂದಿಗೂ ಹಿಂದೂಗಳೊಂದಿಗೆ ಬುಡಕಟ್ಟು ಜನಾಂಗ ಸೇರಿಕೊಂಡು ಜಾತ್ರೆಗಳಲ್ಲಿ ಸಂಪ್ರದಾ - ಯಗಳಲ್ಲಿ ಭಾಗವಹಿಸುತ್ತಾರೆ. ಅದರಲ್ಲೂ ಅವರೊಂದಿಗೆ ಸೇರಿದರು. ಆ ಹಿಂದೂ ಪರಂಪರೆಯಲ್ಲಿ ಒಂದಾಗಿ ಹೋರಾಡದೇ ತಮ್ಮದೇ ಆದ ಸಂಪ್ರದಾಯ, ಸಂಸ್ಕೃತಿಗಳನ್ನು ಉಳಿಸಿಕೊಂಡು

ಬಂದಿದ್ದಾರೆ. ಒಂದು ವೇಳೆ ಆ ಸಂಸ್ಕೃತಿ ಉಳಿಸಿಕೊಳ್ಳದೇ ಹುಟ್ಟು-ಮದುವೆ-ಸಾವುಗಳ ಹಂತದಲ್ಲಿ ಪೌರೋಹಿತ್ಯವನ್ನು ವಹಿಸಿಕೊಡುವರೋ ಆವಾಗಲೇ ಜಾತಿಗಳಾಗಿ ಈ ಬುಡಕಟ್ಟುಗಳು ಹೊಂದುವವು ಎಂಬುದಕ್ಕೆ ಯಾವುದೇ ಮುಲಾಜಿಲ್ಲದೇ ಹೇಳಬೇಕಾಗುವ ಅನಿವಾರ್ಯತೆಯಿದೆ.

ಭಾರತ ದೇಶದಲ್ಲಿ ಪರಿವರ್ತನೆಗೆ ಒಳಗಾದ ಬುಡಕಟ್ಟುಗಳ ಕುರಿತು ಧೀರೇಂದ್ರನಾಥ ಮುಜುಂದಾರ್ ಅವರು ತಮ್ಮದೇ ಆದ ನಿಲುವುಗಳಲ್ಲಿ ಮೂರು ಹಂತಗಳಲ್ಲಿ ಬುಡಕಟ್ಟು ಜನಾಂಗ ಹೇಗೆ ತನ್ನ ಅಸ್ತಿತ್ವ ಉಳಿಸಿಕೊಂಡು ಬಂದಿವೆಂಬುದನ್ನು ತಿಳಿಸುತ್ತಾರೆ.

೧ ಜಾತಿಗಳಾಗಿ ಸಂಪೂರ್ಣ ಪರಿವರ್ತಿತವಾಗಿರುವ ಬುಡಕಟ್ಟುಗಳು
೨. ಹಿಂದೂಗಳೊಡನೆಯೂ ಭಾಗವಹಿಸಿಯೂ ತಮ್ಮಸಂಪ್ರದಾಯಗಳನ್ನು, ನಂಬಿಕೆಗಳನ್ನು ಉಳಿಸಿಕೊಂಡಿರುವ ಬುಡಕಟ್ಟುಗಳು
೩. ಹಿಂದೂ ಧರ್ಮದ ಪ್ರಭಾವಕ್ಕೆ ಒಳಗಾಗದೆ ಆ ಧರ್ಮದ ದಬ್ಬಾಳಿಕೆಯನ್ನು ಸಹಿಸದೇ ತಮ್ಮ ಸ್ವಾತಂತ್ರ್ಯಕ್ಕಾಗಿ ಪ್ರತ್ಯೇಕವಾಗಿ ಹೋರಾಡುತ್ತಿರುವ ಬುಡಕಟ್ಟುಗಳು

ಇವೆಲ್ಲವುಗಳನ್ನು ಆಧಾರಿಸಿಕೊಂಡು ಹೇಳುವುದಾದರೆ ಭಾರತದಲ್ಲಿರುವ ಬಿಲ್ ಬುಡಕಟ್ಟು ಸಹಿತ ಹಿಂದೂ ಧರ್ಮದ ಪ್ರಭಾವದೊಂದಿಗೆ ಸೇರಿಕೊಂಡು ಜಾತಿಯಾಗಿ ಹೊರಬಂದಿವೆ. ಮಧ್ಯ ಪ್ರದೇಶದ ಕೋಲ್ ಬುಡಕಟ್ಟು ಜನಾಂಗಗಳು ಮಾತ್ರ ಹಾಗೇ ತಮ್ಮ ಮೂಲ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿರುವುದು ಸ್ಪಷ್ಟವಾಗಿ ನಮಗೆ ಗೋಚರಿಸುತ್ತದೆ.

ನಾವು ಬುಡಕಟ್ಟುಗಳ ಕುರಿತಾದ ಸಂಶೋಧನೆಗೆ ತೊಡಗಿಕೊಂಡಂತೆ ಅವುಗಳೆಲ್ಲವೂ ಮೊದಲು ಭಾಷೆಯನ್ನು ಹೊಂದಿರಬೇಕು. ಆದರೆ ಭಾರತದ ಹುಟ್ಟು ಬುಡಕಟ್ಟುಗಳು ಈ ನಿಯಮಗಳನ್ನು ಪಾಲಿಸಲೇ ಇಲ್ಲ. ಇಲ್ಲಿ ಅನೇಕ ಭಾಷೆಗಳನ್ನು ಹೊಂದಿದ ಬುಡಕಟ್ಟುಗಳಿವೆ. ಕೆಲವು ಭಾಷೆಗಳಿಗೆ ಲಿಪಿ ಇದ್ದು ಕೆಲವು ಭಾಷೆಗಳಿಗೆ ಲಿಪಿಯಿಲ್ಲ. ಹಲವು ಭಾಷೆಗಳಿಲ್ಲದ ಬುಡಕಟ್ಟುಗಳು ನಮ್ಮಲ್ಲಿರುವ ಆಸ್ಸಾಮಿನ ನಾಗಾ ಬುಡಕಟ್ಟುಗಳಿಗೆ ಸ್ವತಂತ್ರವಾದ ಭಾಷೆಯಿದೆ. ಆದರೆ ಕೆಲವು ಬುಡಕಟ್ಟುಗಳು ಮಾತ್ರ ಭಾಷೆಯಿಂದ ಬೈಗಾ ಹಾಗೂ ಕೋಕ್ ಬುಡಕಟ್ಟು ಜನಾಂಗ ಹಿಂದಿಯ ಭಾಷೆಯನ್ನು ಉಪ ಭಾಷೆಯನ್ನಾಗಿಸಿಕೊಂಡು ಆಡುತ್ತ ಬಂದಿದ್ದಾರೆ. ಬುಡಕಟ್ಟುಗಳ ಕುರಿತು ವ್ಯಾಪಕವೆಂದು ಅಧ್ಯಯನ ಮಾಡಲು ಮುಖ್ಯವಾದ ಉದ್ದೇಶಗಳಿವೆ. ಪ್ರತಿಯೊಂದು ಬುಡಕಟ್ಟಿನ

ಸಂಸ್ಕೃತಿಯನ್ನು ತಿಳಿದುಕೊಳ್ಳುವುದರ ಸಲುವಾಗಿ ಅಧ್ಯಯನ ಕೈಗೊಳ್ಳುವುದು ಹಾಗೂ ಮಾನವ ಸಂಸ್ಕೃತಿಯ ಸ್ವರೂಪವನ್ನು ತಿಳಿದುಕೊಳ್ಳುವ ಉದ್ದೇಶದಿಂದ ಈ ಅಧ್ಯಯನ ಪ್ರಾರಂಭವಾಗಿದೆ. ಪ್ರಪಂಚದ ಅನೇಕ ಬುಡಕಟ್ಟುಗಳ ಅಧ್ಯಯನಗಳು ನಡೆದುಕೊಂಡು ಬಂದಿವೆ. ಅವುಗಳ ಮೂಲಕವೇ ಸಾಮಾಜಿಕ ಮಾನವ ವಿಜ್ಞಾನದಲ್ಲಿ ಮೂರು ಭಾಗಗಳನ್ನು ಮಾಡಿಕೊಂಡು ಅಧ್ಯಯನ ಕೈಗೊಳ್ಳಲಾಗಿದೆ.

೧. ಆದಿವಾಸಿ ಸಂಸ್ಕೃತಿ

೨. ಗ್ರಾಮೀಣ ಸಂಸ್ಕೃತಿ

೩. ನಗರ ಸಂಸ್ಕೃತಿ

ಆದಿವಾಸಿ ಸಂಸ್ಕೃತಿ

ಒಂದು ದೇಶದ ಮೂಲನಿವಾಸಿಗಳನ್ನು ಆದಿವಾಸಿಗಳೆಂದು ಕರೆಯುತ್ತಾರೆ.ಇಪ್ಪತ್ತನೆಯ ಶತಮಾನದಲ್ಲಿ ವಿಕಾಸವಾದದ ಕಾವು ಇಳಿಯುವುದು ಕೆಲವು ಸಿದ್ಧಾಂತಗಳ ನಿರೂಪಣೆ ಆದದ್ದು ಆಗಲೂ ಆದಿವಾಸಿ ಸಂಸ್ಕೃತಿಯ ಕುರಿತು ಅಧ್ಯಯನ ಕಾರ್ಯವಿಲ್ಲದೆ ಮುಂದುವರೆಯಿತು. ಮಾನವನ ಸಂಸ್ಕೃತಿಯ ಸ್ವರೂಪದಲ್ಲಿ ಕಾಣುವ ಅಂಶ ಆದಿವಾಸಿ ಸಂಸ್ಕೃತಿಯ ಹಂತ ಮೊದಲನೆಯದೆಂದು ಹೇಳಬಹುದಾಗಿದೆ. ಆದಿವಾಸಿಗಳ ಸಂಸ್ಕೃತಿ ಸರಳವಾದದ್ದು ಮೊದಲು ಅಧ್ಯಯನಕ್ಕೆ ಒಳಪಡಿಸಿದಾಗ ಅನೇಕ ವಿಧಿ - ವಿಧಾನಗಳನ್ನು ಅನುಸರಿಸಿಕೊಂಡು ಬರಲಾಯಿತು. ಆದಿವಾಸಿಗಳನ್ನು ಸಂಚಾರಿ ಜನಾಂಗ, ಬುಡಕಟ್ಟು ಜನಾಂಗ, ಜನಜಾತಿ ಪಂಗಡ, ಹಿಂದುಳಿದ ಹಿಂದುಗಳು ಗಿರಿಜನರು ಆದಿ ಪ್ರಜಾ ಚೇತನವಾದಿಗಳು ಅನಾಗರಿಕ ಕಲೆ ಸಂಪ್ರದಾಯ ಪ್ರಿಯರು. ಅರಣ್ಯವಾಸಿಗಳು, ಇಂತಹ ಹೆಸರುಗಳು ಆಧಾರವಾಗಿರುವ ಆದಿವಾಸಿಗಳಾಗಿರುವ ಹೆಸರುಗಳನ್ನು ಕರೆಯುವುದುಂಟು. ಭಾರತದ ಸಂವಿಧಾನದ ೩೪೨ನೇ ಕಲಂನಲ್ಲಿ ಪರಿಶಿಷ್ಟ ಬುಡಕಟ್ಟು ಎಂದು ಹೇಳಲಾಗಿದೆ. ಭಾರತ ಸಂವಿಧಾನ ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ೪೭೨ನೇ ಕಲಂ ಪರಿಶಿಷ್ಟ ಬುಡಕಟ್ಟುಗಳ ಬಗ್ಗೆ ಮೀಸಲಾತಿ ನೀಡಲಾಗಿದೆ. ಈ ದೇಶದಲ್ಲಿ ನಾಗಲ್ಯಾಂಡ ಉತ್ತರ ಪ್ರದೇಶ, ಮೇಘಾಲಯ, ಬಿಹಾರ್, ಆಸ್ಸಾಮ್, ಅರುಣಾಚಲ ಪ್ರದೇಶ, ಒರಿಸ್ಸಾ, ಮಧ್ಯಪ್ರದೇಶ, ಮಿಜೋರಾಂ ಅನೇಕ ರಾಜ್ಯಗಳಲ್ಲಿ ದೇಶದ ಮೂನ್ನೂರ ಇಪ್ಪತ್ತೇಳು ತಾಲೂಕುಗಳಲ್ಲಿ ಆದಿವಾಸಿ ಬುಡಕಟ್ಟುಗಳ ಸಂಖ್ಯೆ ಹೆಚ್ಚಾಗಿ ಕಂಡು ಬಂದಿದೆ. ಪರಿಶಿಷ್ಟ ಪಂಗಡವೆಂದು ಕರೆಸಿಕೊಳ್ಳುವ ಬುಡಕಟ್ಟುಗಳು ಭಾರತ ತುಂಬೆಲ್ಲಾ ಪಸರಿಸಿಕೊಂಡಿದೆ. ಅನಕ್ಷರಸ್ಥರಾಗಿದ್ದುಕೊಂಡು ಬೆಟ್ಟ ಗುಡ್ಡಗಳಲ್ಲಿ

ವಾಸಿಸಿದ್ದರು. ಆರ್ಯರೊಡನೆ ಯುದ್ಧವನ್ನು ಮಾಡಿದವರಾಗಿದ್ದಾರೆ. ೧೯೯೧ರ ಪ್ರಕಾರ ಜನವರಿಯಲ್ಲಿ ನಡೆದ ಜನಗಣತಿಯ ಪ್ರಕಾರ ಬುಡಕಟ್ಟಿನವರು ದೇಶದಲ್ಲಿ ೮.೦೮/– ರಾಷ್ಟ್ರದಲ್ಲಿದ್ದರೆ ಕರ್ನಾಟಕರಾಜ್ಯ ಒಂದರಲ್ಲಿಯೇ ೪.೨೬/– ಇರುವುದು ಕಂಡು ಬಂದಿದೆ. ಬುಡಕಟ್ಟು ಜನಾಂಗವನ್ನು ಹೆಚ್ಚಾಗಿ ಆದಿವಾಸಿಗಳೆಂದು ಕರೆಯುತ್ತಾರೆ. ಹೀಗಾಗಿ ಭಾರತದಲ್ಲಿ ಕನಿಷ್ಟ ೬೩೦ ಅಂಗೀಕೃತವಾದ ಆದಿವಾಸಿಗಳಾದ ಬುಡಕಟ್ಟುಗಳ ದೇಶವೆಂದು ಸ್ಪಷ್ಟವಾಗಿದೆ.

ಬುಡಕಟ್ಟು ಜನಾಂಗದ ಗುಣಲಕ್ಷಣಗಳು

ಬುಡಕಟ್ಟುಗಳ ಸಂಸ್ಕೃತಿ ವೈಶಿಷ್ಟ್ಯತೆಯಿಂದ ಕೂಡಿದೆ. ಭಾರತ ದೇಶದ ಪ್ರತಿಯೊಂದು ನಗರ ಗ್ರಾಮಗಳನ್ನು ಬಿಟ್ಟು ಅವುಗಳ ಸೋಂಕಿಲ್ಲದೇ ಹೊರಗಿದ್ದು ನೆಲೆಸಿಕೊಂಡು ಬಂದಿದೆ. ವರ್ಣ ಜಾತಿಗಳ ಮೂಲಕವಾಗಿ ಅದು ತನ್ನ ಅಸ್ಥಿತ್ವ ಹೊಂದಿಲ್ಲ. ಆ ಜಾತಿ ವರ್ಣಗಳಿಂದಲೂ ದೂರವಾಗಿದೆ. ಹೀಗಾಗಿ ಬೆಟ್ಟ ಗುಡ್ಡ ನಾಡುಗಳಲ್ಲಿ ವಾಸಿಸುವುದರಿಂದ ಪ್ರದೇಶದಿಂದ ಪ್ರದೇಶ ಭಿನ್ನವಾಗಿರುವುದುರಿಂದ ಸಹಜವಾಗಿ ತನ್ನತನವನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಹೋಲಿಕೆ ಏಕತೆಗಳೂ ಸಹಿತ ಒಂದಾಗಿವೆ, ಕೆಲವು ಭಿನ್ನವಾಗಿವೆ. ಮತ್ತೆ ಕೆಲವು ಅನಿರ್ದಿಷ್ಟತೆಗೆ ಹೊಂದಿಕೊಂಡು ಬಂದಿವೆ. ಇವುಗಳನ್ನು ಅಧ್ಯಯನದ ದೃಷ್ಟಿಗೆ ಒಳಪಡಿಸಿದಾಗ ಬುಡಕಟ್ಟು ಜನಾಂಗದ ಲಕ್ಷಣಗಳು ನಮ್ಮಕಣ್ಣಿಗೆ ಗೋಚರಿಸಿದವು. ಅವುಗಳೆಂದರೆ ೧. ನಿರ್ದಿಷ್ಟ ಭೂ ಪ್ರದೇಶ ೨. ನಿರ್ದಿಷ್ಟ ಹೆಸರು ೩. ಸಾಮಾನ್ಯ ಭಾಷೆ ೪. ಒಂದೇ ರೀತಿಯ ರಾಜಕೀಯ ವ್ಯವಸ್ಥೆ, ೫.ಸರಳ ಸ್ವತಂತ್ರ ಜೀವನ, ೬.ರಕ್ತ ಸಂಬಂಧ, ೭.ಬಾಂಧವ್ಯ ಒಂದೇ ಧರ್ಮ ಮತ್ತು ಸಂಸ್ಕೃತಿ, ೮ ಒಳಪಂಗಡ, ವಿವಾಹ ಪದ್ಧತಿ, ೯. ಸೌಂದರ್ಯ ಪ್ರಜ್ಞೆ ಉಳ್ಳವರು, ೧೦. ರಕ್ಷಣೆ ಮತ್ತು ಐಕ್ಯತೆಯ ಭಾವನೆ ಹೀಗೆ ಹತ್ತು ಗುಣಲಕ್ಷಣಗಳನ್ನು ಬುಡಕಟ್ಟು ಜನಾಂಗಗಳು ಹೊಂದಿಕೊಂಡಿವೆ.

೧. ನಿರ್ದಿಷ್ಟ ಭೂಪ್ರದೇಶ

ಪ್ರತಿಯೊಂದು ಬುಡಕಟ್ಟುಗಳಿಗೆ ತಮ್ಮದೆಯಾದ ನಿಶ್ಚಿತ ನೆಲೆ ಇದ್ದೇ ಇರುತ್ತದೆ. ತಮ್ಮ ಉಪಜೀವನಕ್ಕಾಗಿಯೇ ಅನೇಕ ಕಡೆ ಸಂಚರಿಸುವ ಮೂಲಕ ಬೇಟೆಯಾಡುವುದು, ಪಶುಪಾಲನೆ ಕೈಗೊಳ್ಳುವುದು, ಕೃಷಿ ಹಾಗೂ ವ್ಯವಸಾಯವನ್ನು ಸಹಜವಾಗಿ ಮಾಡುವುದು ಅವಶ್ಯವಾಗಿತ್ತು. ಅವರು ಸಂಚರಿಸುತ್ತಾ ಹೋದರೂ ಬುಡಕಟ್ಟು ಜನಾಂಗ ತಾವು ಹುಟ್ಟಿದ ಸ್ಥಳ ಪ್ರದೇಶಗಳ ಬಗೆಗೆ ಸದಾ ಜಾಗೃತವಾಗಿಯೇ ನಡೆದುಕೊಳ್ಳುತ್ತಾರೆ. ಬುಡಕಟ್ಟು ಜನಾಂಗಗಳು ವಾಸಿಸುವ ಪ್ರದೇಶಗಳಿಗೆ ಹಟ್ಟಿ, ದೊಡ್ಡಿ, ಪಾಳ್ಯ, ಕೊಪ್ಪ, ಹಾತಿ, ಹೀಗೆ ಹತ್ತು ಹಲವು ಹೆಸರುಗಳಿಂದ ಕರೆಯಲಾಗುತ್ತದೆ.

ಅಸ್ಸಾಂ ಭಾಗದಲ್ಲಿ ನಾಗಾ, ಖಾಸಿ, ಗಾರೋ ಜನರು ಬುಡಕಟ್ಟು ವಾಸಿಸಿಕೊಂಡು ಬಂದಿವೆ. ಪಾರ್ಧಿ, ಕಾಡುಗೊಲ್ಲ, ಕಾಡು ಕುರುಬರು, ಸಿಕ್ಲಿಗರು, ಕರ್ನಾಟಕದಲ್ಲಿದ್ದಾರೆ. ಸಿಲೋನಿನಲ್ಲಿ ಗೊಂಡರು ಕೊಂಡಾರಣ್ಯದಲ್ಲಿದ್ದುಕೊಂಡು ಇದ್ದ ಜನರು ಸಿಲೋನಿನಲ್ಲಿ ತೋಡರು, ಬಚಗರು ನೀಲಗಿರಿ ಬೆಟ್ಟಗಳಲ್ಲಿ ವಾಸಿಸುವುದು ಆಂಧ್ರಪ್ರದೇಶ ನಿಕೋಬಾರ್ ದ್ವೀಪಗಳಲ್ಲಿ ಇವರೆಲ್ಲರೂ ವಾಸವಾಗಿದ್ದರು. ಹೀಗಾಗಿ ಒಂದು ನಿರ್ದಿಷ್ಟ ಭೂಪ್ರದೇಶದಲ್ಲಿ ಸ್ವತಂತ್ರವಾಗಿ ವಾಸಮಾಡುವುದರಿಂದ ಅವರಲ್ಲಿ ಒಗ್ಗಟ್ಟು ಏಕತೆ, ಸಹಕಾರ ಮನೋಭಾವನೆ ಗಟ್ಟಿಕೊಂಡಿರುತ್ತವೆ.

೨. ನಿರ್ದಿಷ್ಟ ಹೆಸರು

ಭಾರತದೇಶದಲ್ಲಿ ಹಲವಾರು ಬುಡಕಟ್ಟುಗಳ ಜನಾಂಗಗಳು ವಾಸಿಸುತ್ತವೆ. ಅವುಗಳು ಯಾವ ಪ್ರದೇಶ ಭಿನ್ನವಾದ ನೆಲೆಗಳ ಜೀವನ ಸಾಗಿಸುತ್ತಿದ್ದಾರೆ. ತಮ್ಮ ನೆಲೆಗಟ್ಟಿನಲ್ಲಿ ನಿರ್ದಿಷ್ಟವಾದ ಸ್ವತಂತ್ರವಾದ ಹೆಸರನ್ನು ಹೊಂದಿಕೊಂಡಿರುವುದು ಕಂಡು ಬರುತ್ತದೆ. ಬೆಟ್ಟ– ಕಾಡುಗಳಲ್ಲಿ ಬೇಡ ಕಾಡುಕುರುಬ ಗೊಂಡ ರಾಜಗೊಂಡ ನಾಗ ತೋಟ, ಲಿಂಬು, ಬೆಂಡು, ಬೇಡ, ಮುಂಡ ಬಡಗ ಸಂತಾಲ, ಪಾರ್ಧಿ, ಮಸಬರ, ಗಾರೋ, ಸಿಕ್ಲಿಗರು ಮುಂತಾದ ಆದಿವಾಸಿಗಳ ಹೆಸರುಗಳು ನಮಗೆ ಸ್ಪಷ್ಟವಾಗಿ ದೊರಕುತ್ತವೆ. ಈ ಎಲ್ಲಾ ಹೆಸರುಗಳ ಮೂಲಕ ಬೇರೆ ಬೇರೆ ಹೆಸರುಗಳು ಸರ್ಕಾರ ಹೊಂದಿ ಆದಿವಾಸಿಗಳ ಬುಡಕಟ್ಟುಗಳ ನಡುವೆ ಇರುವ ಹಲವಾರು ಬುಡಕಟ್ಟುಗಳ ವ್ಯತ್ಯಾಸವನ್ನು ಗುರುತಿಸಲು ಸಾಧ್ಯವಾಗುತ್ತದೆ. ಆಮೂಲಕ ನಿರ್ಧಿಷ್ಟ ಹೆಸರು ಸ್ಪಷ್ಟವಾಗಿ ತಿಳಿದು ಬರುತ್ತದೆ.

೩. ಸಾಮಾನ್ಯ ಭಾಷೆ

ಬುಡಕಟ್ಟು ಸಮುದಾಯಗಳು ತಮ್ಮದೇಯಾದ ಸಂಸ್ಕೃತಿ ಕಲೆಗಳನ್ನು ಹೊಂದಿದೆ. ಭಾಷೆಯನ್ನು ಹೊಂದಿರುತ್ತದೆ. ಅವರದೇಯಾದ ಭಾಷೆ ಇರುವುದರಿಂದ ಸಹಜವಾಗಿ ಅದು ಯಾರಿಗೂ ಅರ್ಥವಾಗುವುದೇ ಇಲ್ಲ. ಎಲ್ಲಾ ಭಾಷೆಗಳು ಸ್ವತಂತ್ರವಾಗಿ ಅವರು ಮಾತನಾಡುವುದನ್ನು ಕಾಣುತ್ತೇವೆ. ಆದರೆ ಆ ಭಾಷೆಗೆ ಲಿಪಿಯೊಂದಿಲ್ಲ. ಭಾಷೆಯ ಮೂಲಕ ತಮ್ಮ ವ್ಯವಹಾರಗಳನ್ನು ದಿನನಿತ್ಯದ ಕೆಲಸಕಾರ್ಯಗಳನ್ನು ಪೂರೈಸುತ್ತಾರೆ. ಈ ಭಾಷೆಯನ್ನು ತಾವು ಆಡುವುದರ ಜೊತೆಗೆ ತನ್ನ ಸುತ್ತಮುತ್ತಲಿನ ಪ್ರದೇಶದ ಭಾಷೆಗಳನ್ನು ಅವರು ಅಲ್ಪ ವ್ಯವಹಾರಕ್ಕಾದರೂ ಕಲಿಯಬೇಕಾಗುತ್ತದೆ. ಕಲಿತಿರುತ್ತಾರೆ. ಬುಡಕಟ್ಟಿನ ಭಾಷೆಗೆ ಲಿಪಿ ಇಲ್ಲದ್ದರಿಂದ ಅವರು ಶೈಕ್ಷಣಿಕವಾಗಿ ಹಿಂದುಳಿಯಲು ಕಾರಣವಾಗಿದೆ. ಬೇರೆ ಬೇರೆ ಪ್ರದೇಶ ನೆರೆಹೊರೆಯ ಪ್ರದೇಶಗಳ ಪ್ರಭಾವವನ್ನು ಸಾಕಷ್ಟು ಇವರ ಮೇಲೆ ಆಗಿರುವುದು ಕಂಡು ಬರುತ್ತದೆ. ಕರ್ನಾಟಕದಲ್ಲಿರುವ ಅನೇಕ ಬುಡಕಟ್ಟುಗಳಾದ ಸುಡುಗಾಡಸಿದ್ದರು, ಲಂಬಾಣಿಗಳು, ಸಿಕ್ಲಿಗರು, ಹಿಂದಿ, ಮರಾಠಿ, ತೆಲಗುವನ್ನು ಮಿಶ್ರಣ ಮಾಡಿಕೊಂಡು ಕನ್ನಡ ಮಾತನಾಡುವುದು ನಮಗೆ ಕಂಡು ಬರುತ್ತದೆ.

ನೀಲಗಿರಿಯ ಬೆಟ್ಟಗಳಲ್ಲಿರುವ ತೋಡರು, ಬೇಡರು ಹಾಗೂ ಬಡಿಗರು ಬುಡಕಟ್ಟುಗಳು ಒಂದೇ ಎರಡೇ ಭಾಷೆಗಳನ್ನು ಮಿಶ್ರಣ ಮಾಡಿದೆ ಹಲವು ಭಾಷೆಗಳ ಶಬ್ಧಗಳಲ್ಲಿ ಸೇರಿಸಿಕೊಂಡು ಮಾತನಾಡುವುದುಂಟು. ಭಾಷಾ ಅಧ್ಯಯನದ ನೆಲೆಗಳ ಮೂಲಕ ಬುಡಕಟ್ಟುಗಳ ಅಧ್ಯಯನದ ಸಮೀಕ್ಷೆ ನಡೆಸಲಾಗಿದೆ. ಅವರಲ್ಲಿ ಕಾಣಬಹುದಾದದ್ದು ಕನ್ನಡ ತೆಲುಗು, ತಮಿಳು, ಮಲೆಯಾಳಂ. ಹಿಂದಿ ಐದು ಭಾಷೆಗಳ ಶಬ್ಧಗಳನ್ನು ತೆಗೆದುಕೊಂಡು ಮಾತನಾಡುವುದರ ಮೂಲಕ ಸಾಮಾನ್ಯ ಭಾಷೆಯನ್ನಾಗಿ ಬುಡಕಟ್ಟುಗಳು ಹೊಂದಿದೆ. ಇತರ ಭಾಷೆ ನಾಡ ಭಾಷೆಯನ್ನಾಗಿ ಸರಳ ಭಾಷೆ, ಸಾಮಾನ್ಯ ಭಾಷೆಗಳೆಂದು ಕರೆಯುವುದುಂಟು. ಇವರು ಯಾವುದೇ ಸ್ವತಂತ್ರ ಭಾಷೆಯನ್ನು ಹೊಂದಿದ್ದರೂ ಕೂಡ ಭಾರತ ದೇಶದ ಭಾಷೆಯಾದ ಹಿಂದಿಯಲ್ಲಿ ಮಾತನಾಡುತ್ತಾರೆ, ಸಂವಹನಗೊಳಿಸುತ್ತಾರೆ. ಸುದೀರ್ಘವಾಗಿ ನೆಲೆ ನಿಂತ ಸ್ಥಳದಲ್ಲಿಯ ಪ್ರಾದೇಶಿಕ ಭಾಷೆಯನ್ನು ಮಾತನಾಡುತ್ತಾರೆ. ಸಿಕ್ಲಿಗರು ತಮ್ಮ ಮೂಲ ಕಸುಬಿನ ವ್ಯಾಪಾರಿಗಳಾಗಿದ್ದರಿಂದ ಸ್ಥಳೀಯ ಭಾಷೆ ಕಲಿಯುವದು ಅವಶ್ಯ. ಇಲ್ಲದಿದ್ದರೆ ಉಪಜೀವನಕ್ಕೆ ಕಷ್ಟವಾಗುತ್ತದೆ. ಅನಿವಾರ್ಯವಾಗಿ ಭಾಷೆ ಕಲಿಯಲೇಬೇಕಾಗುತ್ತದೆ.

೪. ರಾಜಕೀಯ ವ್ಯವಸ್ಥೆಯಲ್ಲಿ ಏಕತೆ

ನಮ್ಮಲ್ಲಿ ಕಾಣಸಿಗುವ ಪ್ರತಿಯೊಂದು ಬುಡಕಟ್ಟುಗಳಲ್ಲಿ ಆಡಳಿತ ನ್ಯಾಯ ಪದ್ಧತಿಗಳು ಗಟ್ಟಿಯಾಗಿ ನೆಲೆಯಾಗಿದ್ದು, ಸ್ಪಷ್ಟವಾಗಿ ಗಮನಿಸುತ್ತಾರೆ. ಹೀಗಾಗಿ ಆಡಳಿತ ನಿವಾರಣೆಗೆ ಬುಡಕಟ್ಟು ಜನಾಂಗದಲ್ಲಿ ಆಯಾ ಸಮುದಾಯದಲ್ಲಿ ಮುಖ್ಯಸ್ಥನಿರುತ್ತಾನೆ. ಅವನ ನಿರ್ಣಯ ಅಂತಿಮ. ನಿರ್ಣಯ ಸದಸ್ಯರನ್ನು ಹೊಂದಿ ನ್ಯಾಯ ಪಂಚಾಯ್ತಿ ನ್ಯಾಯ ಕಟ್ಟೆಗಳನ್ನು ನಿರ್ಮಿಸಿಕೊಂಡಿರುತ್ತಾರೆ. ಮುಖ್ಯಸ್ಥನೇ ನೇರವಾಗಿ ತನ್ನ ಸಮುದಾಯಗಳ ಮೇಲೆ ಸಂಪೂರ್ಣ ನಿಯಂತ್ರಣ ಹೊಂದಿರುತ್ತಾನೆ. ಆ ನಿಯಂತ್ರಣದ ಮೂಲಕ ತನ್ನ ಸಮುದಾಯಗಳ ಅನನ್ಯತೆಯನ್ನು ಎತ್ತಿ ತೋರಿಸಲು ಸಾಧ್ಯವಾಗುತ್ತದೆ. ತಪ್ಪು ಮಾಡಿದವರನ್ನು ಕುರಿತು ಅನೇಕ ಕಠಿಣ ಶಿಕ್ಷೆ, ದಂಡ, ಬಹಿಷ್ಕಾರಗಳಂತಹ ಶಿಕ್ಷೆ ವಿಧಿಸುವ ವಾಡಿಕೆಯುಂಟು. ಅದಕ್ಕೆ ಮುಖ್ಯಸ್ಥ ಅಥವಾ ಆ ಸಮುದಾಯದ ನಾಯಕನ ತೀರ್ಮಾನ ಆತನ ವಿಚಾರಗಳೇ ಪ್ರಮುಖವಾಗಿ ಕೇಳಿಬರುತ್ತವೆ. ಕೆಲವೊಂದು ಬುಡಕಟ್ಟುಗಳಲ್ಲಿ ನಾಯಕನ ಆಯ್ಕೆ ಅನುವಂಶಿಕವಾಗಿ ಅದೇ ಕುಟುಂಬ ಮುಂದುವರೆಸಿಕೊಂಡು ಬರುತ್ತದೆ. ಕೆಲವೊಂದು ಸಾರಿ ಬಲಿಷ್ಟನಾದ ವ್ಯಕ್ತಿಯನ್ನು ತಮ್ಮ ಸಮುದಾ – ಯದವರು ಸೇರಿಕೊಂಡು ಮಾಡುವ ಪದ್ಧತಿಗಳು ಸಹಿತ ಇಲ್ಲಿವೆ. ಬುಡಕಟ್ಟು ಮತ್ತು ಅಲೆಮಾರಿ ಸಮುದಾಯಗಳು ತುಂಬಾ ಮಿತವಾಗಿರುತ್ತವೆ. ೧. ಸಮುದಾಯ ೨. ಕುಟುಂಬ ಹೀಗೆ ಕುಟುಂಬದಿಂದ ಹೆಚ್ಚಾಗಿ ೪೦–೫೦ ಜನರಿಂದ ಒಂದು ಗುಂಪು, ಅವರವರೇ ತಮ್ಮ ನ್ಯಾಯ ತೀರ್ಮಾನವನ್ನು ಮಾಡಿಕೊಳ್ಳಬೇಕು. ಯಾವುದೇ ಕಾರಣಕ್ಕೂ ಅವರು ಕೋರ್ಟು, ಪೋಲಿಸ್ ಸ್ಟೇಷನ್‌ಗಳ ಮೊರೆ ಹೋಗುವುದಿಲ್ಲ.

ವಿಶಿಷ್ಟವಾದ ಸಂಪ್ರದಾಯ ಈ ಬುಡಕಟ್ಟುಗಳಲ್ಲಿ ಕಾಣಸಿಗುತ್ತವೆ. ತಲೆಬುರುಡೆಗಳನ್ನು ಹೆಚ್ಚು ಸಂಗ್ರಹಿಸುವುದು ಮಾತ್ರ ನಾಯಕನೆಂದು ಗುರುತಿಸಿ ಆಯ್ಕೆ ಮಾಡುತ್ತಾರೆ. ಇದು ಆಸ್ಸಾಂನ ನಾಗಾ ಬುಡಕಟ್ಟುವಿನಲ್ಲಿ ಕಂಡು ಬರುವ ಮುಖ್ಯ ಅಂಶಗಳಾಗಿವೆ. ಕೆಲವೊಂದು ಬುಡಕಟ್ಟುಗಳಲ್ಲಿ ಅನುವಂಶಿಯವಾಗಿಯೇ ಕಟ್ಟುಪಾಡಿನಿಂದ ನೆನೆಸಿಕೊಂಡು ಬರುತ್ತವೆ. ನಾಯಕನು, ಮುಖ್ಯಸ್ಥನು ಪಂಚಾಯ್ತಿ ವ್ಯವಸ್ಥೆ ಮಾಡಿಕೊಂಡಿರುತ್ತಾರೆ. ಯಾರಿಗೆ ಯಾವ ಶಿಕ್ಷೆ ಯಾವ ಅಪರಾಧ ಎಲ್ಲಾ ಸಮಸ್ಯೆಗಳು ಅಲ್ಲಿಯೇ ಬಗೆಹರಿಯಬೇಕಾದ ಅನಿವಾರ್ಯತೆಯಿದೆ. ರಾಜಕೀಯ ಸಂಘಟನೆ ಇಲ್ಲಿ ಹೆಚ್ಚು ಇರುವುದಿಲ್ಲ. ಕ್ರೀಯಾಶೀಲರಾಗಿದ್ದುಕೊಂಡು ಕಾರ್ಯ ನಿರ್ವಹಿಸುತ್ತಾರೆ. ಬಹು ಮುಖ್ಯವಾದ ನೆಲೆಗಳಲ್ಲಿ ಸದಾ ಕ್ರಾಂತಿಯನ್ನೇ ಮಾಡುವ ಅಂಶಗಳು ಇಲ್ಲಿ ಕಂಡು ಬರುತ್ತವೆ.

೫. ಜೀವನ ಸ್ವತಂತ್ರವಾಗಿ ನಿರ್ವಹಿಸಿಕೊಂಡು ಹೋಗುವುದು

ಬುಡಕಟ್ಟು ಜನಾಂಗಗಳು ತಮ್ಮ ಸಮುದಾಯದ ಹಲವು ಸಂಗತಿಗಳನ್ನು ಸರಿಯಾಗಿ ಅರ್ಥೈಯಿಸಿಕೊಂಡು ಹೋದದ್ದರಿಂದ ಜೀವನ ವಿಧಿ-ವಿಧಾನಗಳನ್ನು ಸರಳವಾಗಿಯೇ ನಡೆಸಿ - ಕೊಂಡು ಬರುತ್ತಾರೆ. ಹಾಗೇ ಸ್ವತಂತ್ರವಾದ ಜೀವನ ನಿರ್ವಹಣೆ ಕೈಗೊಳ್ಳುವರು ನಗರ-ಗ್ರಾಮೀಣ ಸಂಸ್ಕೃತಿಯ ಕೃತಕ ಹಾಗೂ ಯಾಂತ್ರಿಕ ಜೀವನದಿಂದ ದೂರ ಉಳಿದಿದ್ದಾರೆ. ಬುಡಕಟ್ಟು ಸಮುದಾಯಗಳೆಂದು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ರಾಜಕೀಯ ಕ್ಷೇತ್ರಗಳಲ್ಲಿ ಮುಂದೆ ಬರಬೇಕೆಂಬ ಪ್ರಶ್ನೆ ಅವರಿಗೆ ಉದ್ಬವಿಸುವುದಿಲ್ಲ. ಅವರು ತಮ್ಮ ಉಡುಗೆ ತೊಡುಗೆಗಳಿಗೆ ಬೇಕಾದ ಹಲವಾರು ಶೃಂಗರಿಸಲ್ಪಟ್ಟ ಗೊಂಬೆಗಳಂತೆ ಜೀವನ ನಿರ್ವಹಿಸದೇ ತಮಗೆ ತೋಚಿದ ಹಲವು ಬೇಟೆಗಳಿಂದ ಕೂಡಿಕೊಂಡು ಟೊಂಗೆಗಳ ತೊಗಟೆ ಹುಲ್ಲು ತಪ್ಪಲುಗಳನ್ನು ತಂದು ಅವನ್ನು ಉಡುಪುಗಳನ್ನಾಗಿಸಿಕೊಂಡು ಬಿಡುತ್ತಿದ್ದರು. ಅವೇ ಅವರ ಹೊಸ ಹೊಸ ಉಡುಪುಗಳಾಗಿ ತಮ್ಮ ಮೈಯನ್ನು ರಕ್ಷಿಸಿಕೊಳ್ಳುತ್ತಿದ್ದರು.

ಇಲ್ಲಿನ ಬುಡಕಟ್ಟುಗಳ ಜನಾಂಗದವರು ತಮ್ಮ ಆಹಾರಕ್ಕಾಗಿ ಅವರು ಅಲೆಯುತ್ತಿರಲಿಲ್ಲ. ಗಡ್ಡೆ ಗೆಣಸು ಹಸಿರು ತೊಪ್ಪಲು ಹಣ್ಣುಗಳು ಬೇಟೆಯಾಡಿದ ಮಾಂಸ ಮೀನುಗಳನ್ನು ಹಿಡಿದು ತಿಂದು ಬದುಕುವ ಪ್ರವೃತ್ತಿಯನ್ನಾಗಿಸಿಕೊಂಡರು. ಮೊದಲು ಹಸಿ ಮಾಂಸವನ್ನು ತಿನ್ನುತ್ತಿದ್ದರು. ನಂತರ ಅದನ್ನು ಬೇಯಿಸಿಕೊಂಡು ತಿನ್ನಲು ಪ್ರಾರಂಭಿಸಿದರು. ತಮ್ಮ ನಿದ್ರೆಯನ್ನು ಗಿಡ ಗಂಟೆಗಳ ಪೊಟರೆಗಳಲ್ಲಿ ಮರದ ಟೊಂಗೆಗಳಲ್ಲಿ ಮರದ ಟೊಂಗೆಗಳಿಗೆ ಜೋಕಾಲಿಕಟ್ಟಿ ಕಳುವುದು ಕಲ್ಲುಗಳ ಪೊಟರೆಗಳಲ್ಲಿ ಬಿಗಿ ಭದ್ರತೆಯನ್ನು ಮಾಡಿಕೊಂಡು ಮಲಗುತ್ತಿದ್ದರು. ತಮ್ಮ ಮನೋರಂಜನೆ ಗಾಗಿಯೇ ತಮ್ಮಲ್ಲಿಯೇ ದೇವತೆಗಳನ್ನು ನಿರ್ಮಿಸಿಕೊಂಡು ಒಟ್ಟೊಟ್ಟಿಗೆ ಎಲ್ಲರೂ ಸಾಮೂಹಿಕವಾಗಿ

ಸೇರಿಕೊಂಡು ಹಾಡು; ನೃತ್ಯ, ಸಂಗೀತ, ಕುಣಿತ, ಕಲೆಪ್ರದರ್ಶನಗಳನ್ನು ಮಾಡುತ್ತಾ ಬಂದಿದ್ದಾರೆ. ಸಮುದಾಯಗಳು ಜಾತ್ರೆಗಳಲ್ಲಿ ತಮ್ಮ ನೃತ್ಯ ಕೈಗೊಂಡಿವೆ. ಕೆಲವೊಂದು ಉತ್ಸವ ಹಬ್ಬ-ಆಚರಣೆಗಳನ್ನು ಸಹಿತ ಕೈಗೊಂಡು ಮುಂದೆ ಸಾಗುತ್ತಾ ನಡೆದಿದ್ದಾರೆ. ಆ ಕಾರಣಕ್ಕಾಗಿಯೇ ಅವರ ಮನೋರಂಜನೆ ವಿಶಿಷ್ಟ ಬಗೆಯಾಗಿ ಕಂಡು ಬರುತ್ತವೆ.

ಈ ಸಮುದಾಯದ ಬುಡಕಟ್ಟುಗಳು ನೋಡಲು ಅಸಹ್ಯ ಹಾಗೂ ಭಯಂಕರವಾಗಿ ವರಟಾಗಿ ಕಂಡರೂ ಅವರಲ್ಲಿ ಮುಗ್ಧವಾದ ಭಾವನೆ ಉಳಿದುಕೊಂಡು ಬಂದಿರುವುದನ್ನು ಕಾಣಬಹುದು. ಹೀಗಾಗಿ ಬುಡಕಟ್ಟುಗಳು ಅತ್ಯಂತ ಶ್ರಮಸಂಸ್ಕೃತಿಯಿಂದ ಬದುಕುತ್ತಾರೆ. ಹಾಗೇ ಅವರು ಯಾವುದೇ ಮೋಸ, ಕಪಟತನ, ಕಳ್ಳತನ, ದಗಲಬಾಜಿಗಳನ್ನು ಹೊಂದದೇ ಎಲ್ಲರೂ ಒಂದೇ ಎಂಬ ಭಾವನೆ ಹೊಂದಿಕೊಂಡು ಹೋಗುತ್ತಿದ್ದಾರೆ. ಆ ಕಾರಣಕ್ಕಾಗಿ ಅವರಲ್ಲಿ ವಿನೂತನವಾದ ಸಂಸ್ಕೃತಿಯನ್ನು ಗುರುತಿಸಲು ಇಲ್ಲಿ ಸಾಧ್ಯವಾಗುತ್ತದೆ.

ಈ ಸಮುದಾಯಗಳು ಮುಖ್ಯವಾಹಿನಿಯಲ್ಲಿ ಬಂದಿರುವುದನ್ನು ನೋಡಿದರೆ ಅದಲು-ಬದಲು ಪದ್ಧತಿಗಳು ಬುಡಕಟ್ಟುಗಳಲ್ಲಿ ಕಾಣುತ್ತೇವೆ. ಇವರ ಮುಖ್ಯವಾದ ಪ್ರವೃತ್ತಿ ಬೇಟೆಯಾಡುವುದು, ಮೀನುಗಳನ್ನು ಹಿಡಿಯುವುದು, ಕಾಡಿನ ಗುಡ್ಡ ಬೆಟ್ಟಗಳಲ್ಲಿ ಗಡ್ಡೆ ಗೆಣಸುಗಳನ್ನು ಹಣ್ಣು ಹಂಪಲಗಳನ್ನು ತರುವುದು ಜೇನುಗಳನ್ನು ಬಿಡಿಸಿಕೊಳ್ಳುವುದು, ಕಾಡಿನಲ್ಲಿರುವ ಮೆಣಸು ಗಿಡಮೂಲಿಕೆಗಳ ಮೂಲಕ ಅಂಶಗಳನ್ನು ತೆಗೆದುಕೊಂಡು ಹೊರ ಬರುವುದು. ಇವುಗಳ ಮೂಲಕ ಅವರು ವೃತ್ತಿ ಕೈಗೊಂಡು ಮಾರಾಟ ಮಾಡಲು ಪ್ರಾರಂಭಿಸುತ್ತಾರೆ. ತದನಂತರ ಇವರಲ್ಲಿ ಅನ್ಯೋನ್ಯತೆ ಕಂಡಾಗ ಮತ್ತೆ ಪಶುಪಾಲನೆಗಳನ್ನು ವೃತ್ತಿಯಾಗಿರಿಸಿಕೊಂಡು ಕೃಷಿ ಪದ್ಧತಿಗಳನ್ನು ತಮ್ಮ ಕುಟುಂಬದಲ್ಲಿ ಅಳವಡಿಸಿಕೊಂಡರು.

ಕಾಲ ಬರು ಬರುತ್ತಾ ಬುಡಕಟ್ಟುಗಳ ಸಂಸ್ಕೃತಿಗಳು ಬದಲಾದವು. ಮೂಲ ಸಂಸ್ಕೃತಿಯನ್ನು ಹೊರ ಹಾಕದೇ ಸ್ವತಂತ್ರವಾಗಿ ಉಳಿಸಿಕೊಂಡು ಹೋದವು. ಜೀವನ ನಿರ್ವಹಣೆ ಹಾಗೂ ಆಹಾರಪದ್ಧತಿಗಳು ಹಲವಾರು ಹಂತಗಳಲ್ಲಿ ಬುಡಕಟ್ಟುಗಳ ಸರಳ ಏಕತೆಯ ಸ್ವತಂತ್ರ ಜೀವನವನ್ನು ಸಾಗಿಸಿಕೊಂಡು ಬಂದಿದ್ದಾರೆಂಬುದು ಅವರ ಅಧ್ಯಯನದ ಮೂಲಕ ನಮಗೆ ಗೋಚರಿಸುತ್ತದೆ.

೬. ರಕ್ತ ಸಂಬಂಧದ ಬಾಂಧವ್ಯ

ರಕ್ತ ಸಂಬಂಧ ಬುಡಕಟ್ಟುಗಳಲ್ಲಿ ಮುಖ್ಯವಾಗಿ ಕಂಡು ಬರುತ್ತವೆ. ತಾಯಿಯ ಅಂತಃಕರುಣ ಅಕ್ಕತಂಗಿ ಹಾಗೂ ಮಾತೃಪ್ರಧಾನ ಸಂಸ್ಕೃತಿಯು ಕಳ್ಳು-ಬಳ್ಳಿಗಳ ಸಂಸ್ಕೃತಿಯನ್ನು ಅಳವಡಿಸಿಕೊಂಡು ಹೋಗುವುದುಂಟು. ರಕ್ತ ಸಂಬಂಧಕ್ಕೆ ಹೆಚ್ಚಿನ ಪ್ರಾಮುಖ್ಯತೆ ಈ ಕುಟುಂಬಗಳು ಪಡೆದುಕೊಂಡಿವೆ. ಬುಡಕಟ್ಟು ಸಮುದಾಯಗಳೆಲ್ಲವೂ ನೆಲೆನಿಂತಿರುವುದು ಅವರ ವಂಶ, ಕುಟುಂಬ, ಕುಲ, ಗೋತ್ರ ಬಳಿ, ಬೆಡಗುಗಳಂತಹ ಅನೇಕ ಚಿಕ್ಕ ಸಮೂಹಗಳು ಒಂದೊಂದು ಕೂಡ ಒಂದೊಂದು ನೆಲೆಯಲ್ಲಿ ತನ್ನತನವನ್ನು ಮೆರೆದಿದೆ.

ಸ್ವಮತ, ಸ್ವತಂತ್ರ ಸಂಬಂಧವನ್ನು ಹೊಂದಿದೆ. ಹೀಗಾಗಿ ರಕ್ತ ಸಂಬಂಧ ಹೊಂದಲು ಅತಿ ಸಮೀಪವಾಗಿ ಅವು ನಿಂತುಕೊಳ್ಳುತ್ತವೆ. ಬುಡಕಟ್ಟಗಳ ಸಮೂಹವು ರಕ್ತಸಂಬಂಧದ ಮೂಲಕವೇ ಗಟ್ಟಿ ನೆಲೆಹೊಂದುತ್ತವೆ. ಪ್ರೀತಿ-ಪ್ರೇಮ, ಭದ್ರವಾದ ತಳಹದಿ ನಾಗರಿಕ ಸಂಬಂಧಗಳು ಕ್ರಿಯಾಶೀಲವಾಗಿ ಬೆಳೆದುಕೊಂಡು ಬರಲು ಸಾಧ್ಯವಾಗುತ್ತವೆ. ಯಾವುದೇ ಕುಟುಂಬಗಳನ್ನು ತೆಗೆದುಕೊಂಡರೂ ಆ ಬುಡಕಟ್ಟು ಜನಾಂಗ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತವೆ. ಸೋದರತ್ತೆ, ಹಾಗೂ ಸೋದರಮಾವನಿಗೆ ಮದುವೆಯ ಸಂದರ್ಭದಲ್ಲಿ ವಿಶೇಷ ಮಹತ್ವ ನೀಡುತ್ತಾರೆ. ಅವರಿಗೆ ಎಲ್ಲರನ್ನು ಸೇರಿಸಿಕೊಂಡು ಹೋಗುವ ಮುಖ್ಯವಾದ ಉದ್ದೇಶವೆಂದರೆ ತಮ್ಮವರನ್ನು ಒಗ್ಗಟ್ಟು ಐಕ್ಯತೆಯಿಂದ ಬುಡಕಟ್ಟುಗಳು ನಡೆದುಕೊಂಡು ಹೋಗಬೇಕೆಂಬ ಆಶಯ ಹೊಂದಿದ್ದಾರೆ.

ಬುಡಕಟ್ಟುಗಳು ಬೇರೆ ಬೇರೆ ಆದರೂ ಅವರಲ್ಲಿ ಕೂಡಾ ಕುಲ ಬೆಡಗುಗಳನ್ನು ನೋಡುತ್ತಾರೆ. ಅವುಗಳಲ್ಲಿ ಭಿನ್ನತೆ ಕಂಡಾಗ ಹೆಣ್ಣು ತೆಗೆದುಕೊಳ್ಳುವ ಗಂಡು ಕೊಡುವ ಯಾವುದೇ ಕಾರ್ಯ ನಡೆಯದೇ ಒಂದೇಬಾರಿಗೆ ಅವರು ಸ್ವತಂತ್ರವಾಗಿ ಸಹೋದರ ಸಂಬಂಧಿ ಭಾವನೆ ಹೊಂದಿಕೊಂಡು ಹೋಗುತ್ತಾರೆ. ಅಂದರೆ ಸೋದರ ಸಂಬಂಧಿ ಹಾಗೂ ಬೀಗರು ಸಂಬಂಧಗಳ ಮೂಲಕ ತಾವು ಐಕ್ಯತೆಯ ಗುಟ್ಟನ್ನು ಹೊರ ಹಾಕದೇ ಕಾಪಾಡಿಕೊಂಡು ಬರುತ್ತಾರೆ. ತಾವು ಬುಡಕಟ್ಟುಗಳು ಬೇರೆ ಬೇರೆ ಅನಿಸಿಕೊಂಡರು ತಮ್ಮ ಹುಟ್ಟಿನ ಮೂಲ ಅವತಾರ ಪುರುಷ ವೀರನಾಯಕ ಒಬ್ಬನೇ ಎಂದು ಭಾವಿಸಿಕೊಂಡು ಬರುತ್ತಾರೆ. ಇವುಗಳನ್ನು ನಾವು ಗಮನಿಸಿ ಕೊಂಡು ಬಂದದ್ದೇಯಾದರೆ ಗೊಲ್ಲರು, ಕುರುಬರು, ಕಾಡುಗೊಲ್ಲರು, ಕಾಡುಕುರುಬರು ಒಂದೇ. ಹಾಗೇ ಮೈಲಾರಲಿಂಗನೂ ಕೂಡಾ ಒಂದೆ ಎಂದು ಹೇಳುತ್ತಾರೆ. ಮೈಲಾರಲಿಂಗ, ಹಾಲುಮತ ಬೀರಪ್ಪ, ಮಂಟೆಸ್ವಾಮಿ, ಮಲೆ ಮಹಾದೇಶ್ವರ ಈ ಎಲ್ಲಾ ವೀರನಾಯಕರು ಹೇಳಿಕೊಳ್ಳುವ

ಸಾರ್ಥಕಗಳು ಕುರುಬ ಮೂಲದವನೆಂಬ ವಾದಿಸುತ್ತಾರೆ. ಹಾಗೇ ಹಕ್ಕಿಪಿಕ್ಕಿಯರು, ಅಡವಿ ಚೆಂಚರು ಹಾಗೂ ಪಾರ್ಧಿಗಳು ಸಹೋದರರೆಂದು ಭಾವಿಸಿಕೊಂಡಿದ್ದಾರೆ.

ಇದಲ್ಲದೇ ಸುಡುಗಾಡುಸಿದ್ದರು ಬುಡಕಟ್ಟಿನ ಜನಾಂಗವನ್ನು ಕುರಿತು ನಾವು ಅವಲೋಕಿಸುವ ಸಂದರ್ಭಗಳಲ್ಲಿ ಇಂತಹ ಹಲವಾರು ಸಂಗತಿಗಳು ನಮಗೆ ಕಂಡು ಬರುತ್ತವೆ. ಸುಡುಗಾಡುಸಿದ್ದರು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಭಿಕ್ಷಾಟಣೆಗೆಂದು ಹೋದಾಗ ಅವರನ್ನು ವಿಭಿನ್ನ ಹೆಸರುಗಳಿಂದ ಕರೆದಿರುವುದು ನಮ್ಮ ಗಮನಕ್ಕೆ ಬರುತ್ತದೆ. ಸುಡುಗಾಡುಸಿದ್ದರು, ಕಾಡುಸಿದ್ದರು, ಮಸಣದ ಒಡೆಯರು, ಬುಡಬುಡುಕಿಯರು ಕಾಟಪಾಪುಲಿ ಸ್ಮಶಾನ ಜೋಗಿಗಳು, ಕಾಡುಪಾಪರು, ತೆಲುಗು ಜನಾಂಗದವರು ಎಂದು ಕರೆಯುತ್ತಾರೆ. ಇವರಲ್ಲಿ ಕೂಡಾ ಭಿನ್ನತೆಗಳು ಸಹ ಕಂಡು ಇವರಲ್ಲಿ ಕೆಲವರು ಕೂಡುಕೊಳ್ಳುವಿಕೆ, ಹೊಂದದೇ ಇದ್ದಲ್ಲಿ ಸಹೋದರ ಸಂಬಂಧಿಗಳಾಗಿ ನೆಲೆಸಿಕೊಂಡು ಬಂದಿದ್ದಾರೆ. ಬುಡಕಟ್ಟುಗಳಲ್ಲಿ ಸಹೋದರ ಸಂಬಂಧದ ಭಾವನೆಗಳು ತುಂಬಾ ಗಟ್ಟಿಯಾಗಿ ಉಳಿದುಕೊಂಡಿವೆ.

೭. ಸಂಸ್ಕೃತಿ ಧರ್ಮಗಳಲ್ಲಿ ಏಕತಾಭಾವನೆ

ಬುಡಕಟ್ಟುಗಳ ಎಲ್ಲಾ ವಿಧಾನಗಳನ್ನು ಅರಿಯಬೇಕಾದರೆ ನಾವು ಕಂಡುಕೊಳ್ಳಬೇಕಾದ ಸಂಗತಿಯೆಂದರೆ ಧಾರ್ಮಿಕವಾದ ಆಚರಣೆ ವಿಧಿವಿಧಾನಗಳೇ ಆಗಿವೆ. ಬುಡಕಟ್ಟು ಜನಾಂಗಗಳು ತಮ್ಮ ತಮ್ಮ ಆರಾಧನೆ ನೆಲೆಗಳಲ್ಲಿ ಸೇರಿಕೊಂಡು ಬಂದಿವೆ. ಸಂಪ್ರದಾಯದ ನಿಲುವುಗಳು, ಭಾವನೆಗಳು, ಪ್ರಕೃತಿ, ಕಲ್ಲು, ಮಣ್ಣು, ಕಲ್ಲು, ಮಳೆ, ಗಾಳಿ, ಬೆಂಕಿ, ಸೂರ್ಯ, ಚಂದ್ರರನ್ನು ಕುರಿತು ಪೂಜೆ ಮೂರ್ತಿಗಳನ್ನು ಕೆತ್ತನೆಯ ಮೂಲಕ ಪೂಜಾ ಭಾವನೆಗಳನ್ನು ಕೈಗೊಂಡಿದ್ದಾರೆ. ತಮ್ಮದೇಯಾದ ಮೂಲ ದೇವತೆಗಳ ಕರೆಯನ್ನು ಕೂಡಾ ಚಾಚೂ ತಪ್ಪದೇ ಆಚರಿಸಿಕೊಂಡು ಬರುತ್ತಾರೆ. ಭೂತ-ಪ್ರೇತ, ಊಟ ಮಾಟ-ಮಂಂತ್ರ ಶುಭನುಡಿ, ಶಕುನ ಪಕ್ಷಿ, ಪ್ರಾಣಿಗಿಂತ ಮರಳಿ ಬಳ್ಳಿ ನೀರು ಎಲ್ಲವು ಆದರೆ ನಂಬಿಕೊಂಡು ಬಂದಿದ್ದಾರೆ. ಜೀವನದ ಅನೇಕ ಸಂಗತಿಗಳನ್ನು ಕುರಿತು ಅತಿ ವಿನಯ ಹಾಗೂ ಆರೋಗ್ಯ ಪೂರ್ಣದಿಂದ ಭಯ ಹಾಗೂ ಭಕ್ತಿಗಳ ಮೂಲಕ ಧಾರ್ಮಿಕ ವಿಧಿ-ವಿಧಾನಗಳ ಕರ್ಮಾಚರಣೆಗಳನ್ನು ಕೈಗೊಂಡು ಬಂದಿದ್ದಾರೆ. ಜೀವನ ಬಹು ಕಷ್ಟದಾಯಕವಾದುದು. ಅದನ್ನು ತಡೆಗಟ್ಟಲು ಸಮಸ್ಯೆಗಳನ್ನು ಎದುರಿಸಲು ತಮ್ಮ ಸಮುದಾಯ ಕುಟುಂಬಗಳಲ್ಲಿ ರೋಗ ರುಜಿನಿಗಳು ಹಬ್ಬಿಕೊಂಡಾಗ, ಬರಬಿದ್ದಾಗ ಅವರು ದೇವತಾರಾಧನೆಯ ಕಡೆ ಮುಖ ಮಾಡುತ್ತಾರೆ. ಅಲ್ಲದೇ ಮಾಟ ಮಂತ್ರಗಳ ಕಡೆಗೂ ಮುಖಮಾಡಿಕೊಂಡು

ಕೂಡುತ್ತಾರೆ. ಅವುಗಳಿಂದಲೇ ಪರಿಹಾರ ಕಂಡುಕೊಳ್ಳುತ್ತಾರೆ. ಈ ವೈದ್ಯಪದ್ಧತಿ ಜನಾಂಗ ಹಾಗೂ ಬುಡಕಟ್ಟುಗಳಲ್ಲಿ ಕೂಡಾ ನೆಲೆಸಿಕೊಂಡು ಬಂದಿರುವುದನ್ನು ಕಾಣುತ್ತೇವೆ. ಬುಡಕಟ್ಟುಗಳ ಧಾರ್ಮಿಕ ಚಿಂತನೆ ಸಂಸ್ಕೃತಿಗಳನ್ನು ನಾವು ಅರಿತುಕೊಂಡು ಬಂದಾಗ ನಮಗೆಲ್ಲ ಕಾಣಸಿಗುವುದು ಸರ್ವಚೇತನವಾದ ಸ್ವರೂಪ. ಬುಡಕಟ್ಟುಗಳ ಜೀವನ ವಿಧಾನವೂ ಕೂಡಾ ಧರ್ಮಗಳಲ್ಲಿ ಸೇರಿಕೊಂಡು ಬಂದಿರುವುದನ್ನು ಕಾಣುತ್ತೇವೆ.

ಇಂದಿನ ದಿನಗಳಲ್ಲಿ ಬುಡಕಟ್ಟುಗಳು ಕಾಡು ನಾಡಾಗಬೇಕು ಎಂಬ ವ್ಯಾಖ್ಯಾನವನ್ನು ನೀಡಿದ್ದಾರೆ. ಪ್ರೊ. ಬರಗೂರು ರಾಮಚಂದ್ರಪ್ಪನವರು ಪ್ರತಿ ಸಂಸ್ಕೃತಿಯಲ್ಲಿ ಬರೆದಿದ್ದಾರೆ. ಆದರೆ ಇಲ್ಲಿ ಕಾಡು ನಾಡಾಗಬೇಕು ಎಂಬಲ್ಲಿ ಅರಿವಿದೆ. ಹೀಗಾಗಿ ಬುಡಕಟ್ಟು ಜನಾಂಗವೂ ಸಹಿತ ಅನೇಕ ಬದಲಾವಣೆಗಳನ್ನು ಹೊಂದಿಕೊಂಡಿದ್ದರಿಂದ ಜಾಗತೀಕರಣಕ್ಕೆ ಒಳಗಾಗಬೇಕಾದ ತುರ್ತಾದ ಅವಶ್ಯಕತೆಯಿದೆ. ಈ ಹಿನ್ನೆಲೆ ಕಂಡಾಗ ಬುಡಕಟ್ಟುಗಳು ಸಹಿತ ತಮ್ಮ ಆಚರಣೆ, ನಂಬಿಕೆ, ಧಾರ್ಮಿಕ ಅಂಶಗಳನ್ನು ಕಂಡುಕೊಂಡಂತೆ ಆಚರಣೆಗಳು ಕಡಿಮೆಯಾಗುತ್ತಾ ನಡೆದಿವೆ.

೮. ವಿವಾಹ ಪದ್ಧತಿ

ಬುಡಕಟ್ಟುಗಳು ಸಹ ಎಲ್ಲಾ ಸಮುದಾಯಗಳಂತೆ ವಿವಾಹ ಪದ್ಧತಿಯನ್ನು ಅನುಸರಿಸಿಕೊಂಡು ಬಂದಿವೆ. ಆದರೆ ಬುಡಕಟ್ಟುಗಳಲ್ಲಿ ಕಾಣುವ ಮುಖ್ಯ ಲಕ್ಷಣಗಳೆಂದರೆ ಒಳಪಂಗಡ ವಿವಾಹ ಪದ್ಧತಿ ಅನುಸರಿಸಿಕೊಂಡು ಬಂದಿರುವುದು ಕಾಣುತ್ತೇವೆ. ಒಳಪಂಗಡಗಳ ಮದುವೆಯ ಸಮಯದಲ್ಲಿ ಐಕ್ಯತೆ ಹಾಗೂ ಪವಿತ್ರ ಭಾವನೆ ಕಾಣಿಸಿಕೊಳ್ಳಲು ಸಾಧ್ಯವಾಗುತ್ತದೆ. ಹೀಗಾಗಿ ಈ ಸಂಗತಿಗಳು ಬುಡಕಟ್ಟುಗಳಲ್ಲಿ ಹೆಚ್ಚು ಪ್ರಾಮುಖ್ಯತೆ ಹೊಂದಿವೆ. ಮದುವೆಯಾಗುವ ಗಂಡು ತಾನು ಮಾಡಿಕೊಳ್ಳುವ ಹುಡುಗಿಯನ್ನು ಆಯಾ ಪಂಗಡಗಳಲ್ಲಿ ಅಂದರೆ ತಾನು ಹುಟ್ಟನ್ನು ಪಡೆದುಕೊಂಡ ಪಂಗಡಗಳಲ್ಲಿ ಹೊಂದಬೇಕಾದದ್ದು ಅತ್ಯವಶ್ಯವಾಗಿದೆ. ಇಲ್ಲಿ ಗಂಡು-ಹೆಣ್ಣುಗಳ ಆಯ್ಕೆಯ ಸಂದರ್ಭದಲ್ಲಿ ಹಲವಾರು ನಿಯಮಗಳು, ಕಾನೂನುಗಳು, ಕುಲಪದ್ಧತಿಗೆ ತಕ್ಕಂತೆ ಹೊಂದಿಕೊಂಡು ನಡೆಯಬೇಕಾದ ಗುಣ ಅತಿಅವಶ್ಯವಾಗಿ ನಡೆದಿದೆ. ಮದುವೆಯ ಹತ್ತು ಹಲವು ನಿಯಮಗಳನ್ನು ಪಾಲಿಸಬೇಕಾದ ಕರ್ತವ್ಯಗಳು ಇವೆ. ವಿವಾಹದ ಸಂದರ್ಭದಲ್ಲಿ ವೈದಿಕ ನೆಲೆಯಲ್ಲಿ ಬ್ರಾಹ್ಮಣ ಪೌರೋಹಿತ್ಯಕ್ಕೆ ಎಲ್ಲೂ ಅವಕಾಶಗಳೇ ಇಲ್ಲ. ರಕ್ತಸಂಬಂಧವನ್ನು ನೋಡಿಯೇ ಆಯ್ಕೆ ಮಾಡಿಕೊಳ್ಳುವ ರೂಢಿಯಿದೆ.

ಸುಡುಗಾಡಸಿದ್ಧರಲ್ಲಿ ಎರಡು ಅಲೆಮಾರಿಗಳು ಒಂದೇ ಬೆಡಗಿನಲ್ಲಿ ಮದುವೆ ನಿಷೇಧ - ವಿರುತ್ತದೆ. ಆದರೆ ಪಾರ್ಧಿಯರು ಬುಡಕಟ್ಟುಗಳಲ್ಲಿ ಪಾರ್ಧಿಯರ ಗಂಡು ಪಾರ್ಧಿಯರ ಹೆಣ್ಣನ್ನು ಆರಿಸಿಕೊಳ್ಳಬೇಕು, ಎಂಬ ನಿಯಮಗಳು ಇವೆ. ಸಿಕ್ಲಿಗರು ಸಹಿತ ಸಿಕ್ಕಲಗಾರರೊಂದಿಗೆ ಮದುವೆ ಹೋಲದು. ಸಿಕ್ಲಿಗರು ಅದೇ ಬುಡಕಟ್ಟುಗಳಲ್ಲಿ ತಾವು ಮದುವೆ ಮಾಡಿಕೊಳ್ಳಬೇಕಾಗಿದೆ. ಕುಲ-ಬೆಡಗುಗಳು ಒಂದೆಡೆ ಬೇರೆಯಿರಬೇಕೆಂಬ ನಿಯಮವಿದೆ. ಮತ್ತೊಂದು ಅದೇ ಕುಲ-ಬೆಡಗುಗಳು ಒಂದೇಯಾಗಿರಬೇಕೆಂಬ ನಿಯಮವು ಇದೆ. ಆದರೆ ಹೆಚ್ಚು ಬುಡಕಟ್ಟುಗಳಲ್ಲಿ ಒಂದೇ ಬೆಡಗು ಕುಲದಲ್ಲಿ ಮದುವೆಯಾದರೆ ವಂಶಾಭಿವೃದ್ಧಿಗೆ ಹಾನಿಯಾಗುವುದೆಂಬ ಅಂಶ ನಮ್ಮೆದುರಿಗೆ ಸ್ಪಷ್ಟವಾಗಿ ದೊರೆಯುತ್ತದೆ. ಬುಡಕಟ್ಟು ಜನಾಂಗವು ಹೆಚ್ಚಾನೆಚ್ಚು ಒಳಪಂಗಡಗಳ ನೆಲೆಗಳಲ್ಲಿ ಮದುವೆ ನಡೆಸಿಕೊಂಡು ಹೋಗುತ್ತಾರೆ.

ಮದುವೆಯ ಸಂದರ್ಭ ಬಂದಾಗ ಅವರ ವಿವಾಹ ಸಮಯ, ವಯಸ್ಸು, ಗಂಡು-ಹೆಣ್ಣು ನಡುವಿನ ಸಂಗತಿಗಳ ಆಯ್ಕೆ ಕ್ರಮ, ವಿವಾಹ ವಿಚ್ಛೇದನ, ಬಹುಪತ್ನಿತ್ವ, ವಿಧವಾವಿವಾಹ, ಲೈಂಗಿಕ ಕ್ರಮಗಳಲ್ಲಿ ಕಟ್ಟುಪಾಡುಗಳನ್ನು ಹೊಂದಿಕೊಂಡು ಬಂದಿವೆ. ಬುಡಕಟ್ಟುಗಳು ತಮ್ಮದೇಯಾದ ನಿಯಮ ಕಟ್ಟುಪಾಡುಗಳನ್ನು ಹೊಂದಿಕೊಂಡು ನಿಯಮವನ್ನು ಹೆಚ್ಚಾನೆಚ್ಚು ಬುಡಕಟ್ಟುಗಳು ಪಾಲಿಸಿಕೊಂಡು ಬರುತ್ತಾರೆ. ಹೀಗಾಗಿ ಒಳಪಂಗಡಗಳ ವಿವಾಹ ಪದ್ಧತಿಗಳ ಮೂಲಕ ಬುಡಕಟ್ಟುಗಳು ತಮ್ಮತನದ ಸ್ವಂತಿಕೆಯನ್ನು ಮೆರೆದಿವೆ.

೯. ಸೌಂದರ್ಯದಲ್ಲಿ ಹೆಚ್ಚು ನಂಬಿಕೆ ಹೊಂದಿರುವುದು

ಬುಡಕಟ್ಟುಗಳ ಜನಾಂಗದ ಆಹಾರ-ಉಡುಗೆ-ತೊಡುಗೆ ಎಲ್ಲಾ ವಿಧದಲ್ಲೂ ಕೂಡಾ ಅವರು ಸರಳತೆ ಹಾಗೂ ಸ್ವತಂತ್ರ ಜೀವನವನ್ನು ಅನುಸರಿಸಿಕೊಂಡು ಬಂದಿದ್ದಾರೆ. ಆದರೆ ಬುಡಕಟ್ಟು ಜನಾಂಗಗಳ ಕಲೆಗಳನ್ನು ಆರಾಧನೆಯಲ್ಲಿ ತೊಡಗಿಸಿಕೊಂಡಿದ್ದನ್ನು ಹಾಗೂ ಸೌಂದರ್ಯಕ್ಕೆ ಹೆಚ್ಚಿನ ಮಹತ್ವ ನೀಡಿದ್ದಾರೆ. ಬುಡಕಟ್ಟುಗಳ ಜನಾಂಗವು ತಮ್ಮ ಜೀವನದಲ್ಲಿ ಗಾಯನದಲ್ಲಿ ಹಲವಾರು ರೀತಿಯ ರಾಗಗಳನ್ನು ಹೊಂದಿದ್ದರೆ. ನೃತ್ಯವನ್ನು ಹೇಳಹೆಸರಿಲ್ಲದಂತೆ ಮಾಡುವುದನ್ನು ಮತ್ತೇ ನಟರಾಜನನ್ನು ನೆನಪಿಸುವ ನೃತ್ಯಗಳು ಅವರಲ್ಲಿವೆ. ಆ ನೃತ್ಯಗಳ ಭಂಗಿಗಳು ಅಸಾಧಾರಾಣ ಪ್ರತಿಭೆ ಮೆರೆದಿದ್ದಾರೆ. ಕೆತ್ತನೆಯ ಕಲೆ ಕುಸರಿಗಳು, ಕಲ್ಲು ಕಟ್ಟಿಗೆ ಹಾಗೂ ಲೋಹಗಳಲ್ಲಿ ಅವರು ಕಟೆಯಲ್ಪಟ್ಟ ಶಿಲ್ಪಗಳ ಮನ ಮೋಹಕವನ್ನುಂಟು ಮಾಡುತ್ತವೆ. ಅಲಂಕಾರಗಳನ್ನು ಕೊಡುವುದಾಗಲಿ ಒಡವೆ ವಸ್ತುಗಳನ್ನು ಅವರು ಬಳಸುವ ರೀತಿಗಳು

ವಿಶಿಷ್ಟವಾಗಿವೆ. ಹತ್ತು ಹಲವು ರೀತಿಯ ವಿಧದ ಬಳಕೆಗಳನ್ನು ಮಾಡಿಕೊಂಡಿದ್ದಾರೆ. ಈ ಕಲೆಗಳನ್ನು ನಾವು ನೋಡಿದಾಗ ಕಲೆ ಹಾಗೂ ಸೌಂದರ್ಯ ಬುಡಕಟ್ಟು ಜನಾಂಗದಲ್ಲಿ ಅರಳಿ ನಿಂತಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

ಗುಹೆಗಳಲ್ಲಿ ಗುಡ್ಡ-ಬೆಟ್ಟಗಳ ಬಂಡೆಗಳ ಮೇಲೆ ಮಾನವನ ತಲೆಬುರುಡೆಗಳ ಮೇಲೆ ಚಿತ್ರಗಳನ್ನು ತೆಗೆಯುವ ಮೂಲಕ ಅಚ್ಚರಿ ಹುಟ್ಟಿಸಿದ್ದಾರೆ. ಆಟದ ಸಾಮಗ್ರಿಗಳನ್ನು ತಯಾರಿಸಿರುವುದು ಬುಟ್ಟಿಹೆಣೆಯುವುದು ಬಿಲ್ಲುಬಾಣಗಳ ತಯಾರಿಸಿ ದೇವಾಲಯಗಳ ಅಲಂಕಾರಕ್ಕೆ ಬೇಕಾದ ಹತ್ತು ಹಲವು ಸಂಗತಿಗಳನ್ನು ಪ್ರಸ್ತುತಪಡಿಸುವುದಾಗಿದೆ. ಬುಡಕಟ್ಟು ಜನಾಂಗದ ಕೇಶಾಲಂಕಾರದ ಹೂವು ಮುಡಿಯುವುದು ಆಭರಣಗಳನ್ನು ಕೈಬಳೆಗಳು ಗೊಲ್ಲಕಡಗ, ಕಂಠಾಭರಣ, ಬಾಚಣಿಕೆ ಹೀಗೆ ಹೆಣ್ಣುಮಕ್ಕಳ ವಿವಿಧ ವಸ್ತ್ರಾಲಂಕಾರಗಳ ಕಿವಿಯೋಲೆಗಳು ಮಣಿಸರಗಳು ಅಲಂಕಾರಕ್ಕಾಗಿ ತಮ್ಮದೇ ಮುಖತೋಳುಗಳಲ್ಲಿ ಹಾಕಿಕೊಂಡು ಬಂದಿರುವುದನ್ನು ಕಾಣುತ್ತೇವೆ. ತಮ್ಮ ದೇಹದ ತುಂಬೆಲ್ಲಾ ಬುಡಕಟ್ಟು ಜನಾಂಗ ಹಣೆ, ಮುಖ, ಕೈಕಾಲುಗಳ ಮೇಲೂ ಸಹಜವಾಗಿ ಹಚ್ಚೆಗಳನ್ನು ವಿವಿಧ ಆಕೃತಿಗಳನ್ನು ಬಿಡಿಸಿಕೊಳ್ಳುವುದಾಗಿದೆ. ಹಚ್ಚೆ ಕಲೆಗಳು ವೈವಿಧ್ಯಮಯವಾದ ಕುಸುರಿಕೆಲಸದಂತೆ ಆ ಕಾರ್ಯ ನಡೆಸುವುದು ನಮಗೆ ಕಂಡು ಬರುತ್ತದೆ. ಪ್ರತಿ ಹಂತದಲ್ಲೂ ಬುಡಕಟ್ಟು ಜನಾಂಗದ ಸ್ತ್ರೀಯರ ಕುರಿತಾದ ಸೌಂದರ್ಯ ಹೆಚ್ಚಿಸುವ ಸಾಧನಗಳನ್ನು ಒಳಪಡಿಸಿಕೊಂಡಿರುತ್ತಾರೆ.

೧೦. ರಕ್ಷಣೆ ಮತ್ತು ಐಕ್ಯತೆಯ ಸಾಧನೆ

ಬುಡಕಟ್ಟು ಜನಾಂಗ ಹಗಲು-ರಾತ್ರಿ, ಮಳೆ ಗಾಳಿ ಚಳಿ ಬಿಸಿಲುಗಳನ್ನು ಪ್ರಕೃತಿದತ್ತವಾದ ನಿಸರ್ಗವನ್ನುಂಡು ಬದುಕಬೇಕು. ಗುಡ್ಡಗಾಡು, ದಟ್ಟಾರಣ್ಯದಲ್ಲಿ ವಾಸವಾಗಬೇಕಾಗುವುದು ಅನಿವಾರ್ಯವಾಗಿತ್ತು. ಬುಡಕಟ್ಟಿನ ಜನಾಂಗ ತನ್ನ ಅನೇಕ ಸಂಗತಿಗಳನ್ನು ಹೊರಹೊತ್ತುಕೊಂಡು ಹೋಗಲು ತನ್ನ ರಕ್ಷಣೆ ಅವಶ್ಯ. ಬಲಿಷ್ಟವಾದ ಪ್ರಾಣಿಗಳು, ಕ್ರೂರ ಮೃಗಗಳು, ಕ್ರಿಮಿಕೀಟನಾಶಕಗಳು, ವಿಷಜಂತುಗಳು, ಹೀಗೆ ಒಂದೇ ಎರಡೇ ಎಲ್ಲಾ ಪ್ರಾಣಿಗಳಿಂದ ತಪ್ಪಿಸಿಕೊಂಡು ಬರಬೇಕಾಗುತ್ತದೆ. ಹೀಗಾಗಿ ಬುಡಕಟ್ಟು ಜನಾಂಗವು ತನ್ನ ರಕ್ಷಣೆಗಾಗಿ ತನ್ನ ಗುಟ್ಟನ್ನು ಕಾಪಾಡಿಕೊಂಡು ಬರಬೇಕಾಗುತ್ತದೆ.ಯಾರೇ ಬಂದರೂ ಕೂಡಾ ಬಂದವರು ಅತ್ಯಂತ ಸಂಶಯದಿಂದಲೇ ನೋಡಬೇಕಾಗುವ ಪ್ರಸಂಗ ಬುಡಕಟ್ಟುಗಳಿಗೆ ಬಂದು ಒದಗಿದೆ. ಹೀಗಾಗಿ ತಮ್ಮ ರಕ್ಷಣೆ ಹಾಗೂ ಸಮುದಾಯದ ಐಕ್ಯತೆ ಸಾಧಿಸಲು ಬಹು ಶ್ರಮವಾಗಿ ಅವರು ಕಾರ್ಯಕೈಗೊಂಡಿದ್ದಾರೆ.

ಬುಡಕಟ್ಟು ಜನಾಂಗಗಳು ತನ್ನದೆ ಆದ ಶಿಲೆಗಳಲ್ಲಿ ವಾಸವನ್ನು ಮಾಡಿಕೊಂಡು ಹಗಲಿರುಳು ಜೀವನದ ಅನೇಕ ಮುಖಗಳ ಕಡೆ ಮುಖ ಮಾಡಿರುವುದು ಸಂತಸದಾಯಕ. ಬುಡಕಟ್ಟು ಪ್ರಾಚೀನ ಹಾಗೂ ಅರ್ವಾಚೀನ ಸಂದರ್ಭದಲ್ಲೂ ಅನೇಕ ನಗರೀಕೃತ ಸಂಸ್ಕೃತಿ ಹೊಂದಿದ್ದವು. ತನ್ನ ಮೂಲಗಳ ಸತ್ವವನ್ನು ಹೊಂದಿಕೊಂಡು ಬಂದಿವೆ. ಅವುಗಳ ಹಿತದೃಷ್ಟಿಯಿಂದ ಸಮಾನತೆ, ಸ್ವಾತಂತ್ರ್ಯ, ಹಾಗೂ ಏಕತೆ ಜೊತೆಗೆ ಸ್ವತಂತ್ರವಾಗಿ ಬುಡಕಟ್ಟುಗಳು ತಮ್ಮ ನೆಲೆಗಳಲ್ಲಿ ನೆಲೆಸಿಕೊಂಡು ಬಂದಿವೆ. ಆ ಕಾರಣಕ್ಕಾಗಿಯೇ ಬುಡಕಟ್ಟುಗಳು ತನ್ನ ಸಾಂಸ್ಕೃತಿಕ ಆಯಾಮ ಸಂಸ್ಕೃತಿಯನ್ನು ಹೊಂದಿಕೊಂಡು ಬಂದಿರುವುದಕ್ಕೂ ಅವುಗಳು ತಮ್ಮದೇ ಆದ ಮೇಲಿನ ಗುಣಲಕ್ಷಣಗಳಿಗೆ ಸಾಕ್ಷಿಯಾಗಿವೆ.

ಬುಡಕಟ್ಟುಗಳ ಅಧ್ಯಯನ ಭಾರತದಲ್ಲಿ ವೇದಗಳ ಕಾಲದಿಂದಲೂ ಬುಡಕಟ್ಟು ಜನಾಂಗ ಅಸ್ತಿತ್ವದಲ್ಲಿದೆ. ವೇದಗಳ ಕಾಲದಲ್ಲಿ ಜಾತಿವ್ಯವಸ್ಥೆ ಶ್ರೇಣಿಕೃತವಾದ ವ್ಯವಸ್ಥೆಯಿಂದಾಗಿ ತನ್ನತನವನ್ನು ಕಳೆದುಕೊಳ್ಳಲು ಪ್ರಯತ್ನಿಸಿತು. ಆ ಕಾರಣಕ್ಕಾಗಿಯೇ ಬುಡಕಟ್ಟುಗಳು ಸಾಕಷ್ಟು ಪ್ರಮಾಣದಲ್ಲಿ ಬರವಣಿಗೆಯೂ ಆಯಿತು. ಆದರೆ ಜಾತಿ ವ್ಯವಸ್ಥೆಯಿಂದ ದೂರ ನಿಂತು ತನ್ನ ಸಮುದಾಯವನ್ನು ನೋಡಿಕೊಳ್ಳಲು ಪ್ರಯತ್ನಿಸಿತು. ಹೀಗಾಗಿ ನಂಬಿಕೆ, ಆಚರಣೆ, ಸಂಪ್ರದಾಯ, ಸಾಹಿತ್ಯ, ಸಂಗೀತ, ಕಲೆ, ನೃತ್ಯ, ಕುಶಲಕಲೆ, ಸಂಸ್ಕೃತಿಗಳು ನಾನಾ ಬಗೆಯಲ್ಲಿ ಸಾಮೂಹಿಕವಾದ ಶ್ರೀಮಂತವಾದ ಕಲೆಗಳನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಭಾರತ ಸಂಸ್ಕೃತಿ ಸಂಕೀರ್ಣವಾದ ವ್ಯವಸ್ಥೆ ಹೊಂದಿದೆ.

ಭಾರತದ ಸಂಸ್ಕೃತಿಯಲ್ಲೂ ವೇದಗಳ ಕಾಲದಲ್ಲಿ ವಂತರು ಮನುವಿನ ಜಾತಿ ವರ್ಗೀಕರಣದ ವ್ಯವಸ್ಥೆಯಿಂದ ಬುಡಕಟ್ಟುಗಳು ದೂರವುಳಿದವು. ಹಾಗೇ ಇಂದಿನ ದಿನಗಳಲ್ಲಿ ಶಿಷ್ಟ ಜನಸಮುದಾಯವು ಕೂಡಾ ಜಾತಿಗಳನ್ನು ಅರಿತುಕೊಂಡು ಮೇಲು-ಕೀಳೆಂಬ. ಕಾರಣದಿಂದ ಬುಡಕಟ್ಟುಗಳು ತಮಗಿಂತ, ನಾಡಿನವರಿಗಿಂತ ಕಾಡಿನವರೆ ಶ್ರೇಷ್ಠವಲ್ಲವೆಂಬ ಭಾವನೆಯಿಂದ ದೂರ ಇಟ್ಟುಕೊಂಡು ಆ ಗ್ಯಾಪನ್ನು ಹಾಗೇ ಕಾಪಾಡಿಕೊಂಡು ಬರುತ್ತಿರುವುದು ನಾವಿಂದು ನೋಡ - ಬೇಕಾಗಿದೆ. ಭಾರತ ಸ್ವಾತಂತ್ರ್ಯ ಪೂರ್ವದಲ್ಲಿ ಬುಡಕಟ್ಟು ಜನಾಂಗಗಳ ಕುರಿತು ಅಧ್ಯಯನಕ್ಕೆ ಬ್ರಿಟಿಷರು ಪ್ರೋತ್ಸಾಹ ನೀಡಿ ಅಧ್ಯಯನ ಪ್ರಾರಂಭಿಸಿದರು.ಹಾಗೆ ಬುಡಕಟ್ಟು ಜನಾಂಗದವರನ್ನು ಕುರಿತು ಭಾರತ ಸ್ವಾತಂತ್ರ್ಯಗೊಂಡ ನಂತರ ಅಧ್ಯಯನ ಕೈಗೊಳ್ಳಲಾಗದೇ ಮಧ್ಯಪ್ರದೇಶ, ಒರಿಸ್ಸಾ,

ಆಸ್ಸಾಂದಂತಹ ಅನೇಕ ಪ್ರದೇಶದ ರಾಜ್ಯಗಳಲ್ಲಿ ಅತಿ ಹೆಚ್ಚು ಬುಡಕಟ್ಟು ಜನ ವಾಸವಾಗಿದೆ. ಪ್ರತಿಯೊಂದು ರಾಜ್ಯದಲ್ಲಿ ಬೇರೆ ಬೇರೆ ಬುಡಕಟ್ಟುಗಳು ನಮಗಿಂದು ದೊರೆಯುತ್ತವೆ. ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ಸಾಹಿತ್ಯ ಆಕಾಡೆಮಿ ಅಧ್ಯಕ್ಷರಾಗಿದ್ದಾಗ ಪ್ರೊ. ಬರಗೂರು ರಾಮಚಂದ್ರಪ್ಪನ ವರು ತಮ್ಮ ನೇತೃತ್ವದಲ್ಲಿ ಹೊರತಂದ ಉಪಸಂಸ್ಕೃತಿ ಮಾಲೆಗಳಲ್ಲಿ ೩೬ ಉಪಸಂಸ್ಕೃತಿ ಬುಡಕಟ್ಟು ಜನಾಂಗಗಳ ಪರಿಚಯ ಕರ್ನಾಟಕದಲ್ಲಿಯೇ ಆಗಿದೆಯೆಂದರೆ ಇನ್ನೂ ನೂರಾರು ಬುಡಕಟ್ಟುಗಳು ಈ ನೆಲದಲ್ಲಿವೆ ಎಂಬುದು ಸ್ಪಷ್ಟವಾಗುತ್ತದೆ. ಕನ್ನಡ ಪ್ರಸ್ತುತ ಪ್ರಾಧಿಕಾರ –ದವರು ಕೂಡ ಆ ನಿಟ್ಟಿನಲ್ಲಿ ಇನ್ನುಳಿದ ಬುಡಕಟ್ಟುಗಳನ್ನು ಗುರುತಿಸುತ್ತಿದ್ದಾರೆ ಅವುಗಳಲ್ಲಿ ಸಿಕ್ಲಿಗಾರರಲ್ಲಿ ಒಂದು ಸಮುದಾಯವಾಗಿದೆ. ಬುಡಕಟ್ಟು ಜನಾಂಗಗಳು ದೇಶದಾದ್ಯಂತ ಚದುರಿಹೋಗಿವೆ. ಆ ಚದುರಿದ ಜನಾಂಗಗಳು ಹಲವು ಭಾಷೆ, ಸಂಸ್ಕೃತಿ, ಕಲೆಗಳ ಅನೇಕ ಲಕ್ಷಣಗಳನ್ನು ಹೊಂದಿಕೊಂಡಿವೆ. ಹೀಗಾಗಿ ಇಲ್ಲಿರುವ ಬುಡಕಟ್ಟುಗಳು ಆಯಾ ಪ್ರದೇಶ ಅಧ್ಯಯನದ ಹಿನ್ನೆಲೆಯಲ್ಲಿ ಭೂ–ಪ್ರದೇಶದ ಹಿನ್ನೆಲೆಯಲ್ಲಿ ಮೂರು ಹಂತಗಳಲ್ಲಿ ವಿಂಗಡಿಸಬಹುದು.

೧. ದಕ್ಷಿಣವಲಯ

೨. ಮಧ್ಯವಲಯ

೩. ಈಶಾನ್ಯವಲಯ

ಈ ಮೂರು ನೆಲೆಗಳಲ್ಲಿ ಬುಡಕಟ್ಟು ಜನಾಂಗ ತನ್ನ ಹಂತವನ್ನು ಮೀರಿಕೊಂಡು ಬಂದಿದೆ. ಆ ಮೂಲಕ ಬುಡಕಟ್ಟುಗಳ ಅಧ್ಯಯನಕ್ಕೆ ತೊಡಗಿದೆಯಾದರೂ ಸಾಂದರ್ಭಿಕವಾಗಿ ನೋಡುವುದು ಈ ವಿಭಾಗ ಕ್ರಮಗಳಲ್ಲಿ ಎಲ್ಲೋ ಒಂದಿಷ್ಟು ಸೇರಿಕೊಂಡು ಹೋಗುವ ಅಪಾಯವೂ ವೂ ಇದೆ. ಒಂದರೊಳಗೊಂದು ಸೇರಿಕೊಂಡು ಹೋಗುತ್ತವೆ.

೧. ದಕ್ಷಿಣ ವಲಯ

ದಕ್ಷಿಣ ಪ್ರಸ್ಥಭೂಮಿಯೆಂದು ಕರೆಯಿಸಿಕೊಂಡ ಮಧ್ಯವಲಯದಿಂದ ಹಿಡಿದುಕೊಂಡು ಕೈತಾಣ, ಅಂಡಾಮಾನ್ ನಿಕೋಬಾರದ್ವೀಪಗಳ ನದಿಯ ದಂಡೆಯಲ್ಲಿ ವಾಸಿಸುವ ಜನಾಂಗ ಬುಡಕಟ್ಟು ಜನಾಂಗವಾಗಿದೆ. ಈ ವಲಯವು ಈ ಕೆಳಗಿನ ಎರಡು ವಲಯಕ್ಕಿಂತ ಅತ್ಯಂತ ಹಿಂದುಳಿದ ಜನಾಂಗವಾಗಿ ಬುಡಕಟ್ಟಾಗಿ ನಮಗೆ ದೊರಕುತ್ತದೆ. ಕಲ್ಲನ್ನು ತಿಕ್ಕಿ ಬೆಂಕಿ ಹಚ್ಚುತ್ತಾರೆ.

ಭಾರತದ ಮೂಲನಿವಾಸಿಗಳೆಂದು ಈ ಬುಡಕಟ್ಟನ್ನು ಕರೆಯುತ್ತಾರೆ. ಕರ್ನಾಟಕ, ತಮಿಳುನಾಡು, ನೀಲಗಿರಿ ಬೆಟ್ಟ, ಪಶ್ಚಿಮಘಟ್ಟಪ್ರದೇಶ, ಹಾಗೂ ಆಂಧ್ರಪ್ರದೇಶವನ್ನು ಸಹ ಒಳಗೊಂಡಿದೆ. ಇಷ್ಟೆಲ್ಲಾ ಪ್ರದೇಶ ಹೊಂದಿದ ಈ ವಲಯದ ಬುಡಕಟ್ಟುಗಳು ಹಲವು ಇವೆ. ಅವುಗಳಲ್ಲಿ ಪ್ರಮುಖವಾಗಿ ಗುರುತಿಸಬೇಕಾದವುಗಳೆಂದರೆ ತೋಡಾ ಜಿಪ್ಸಿ, ಸೋಲಿಗ, ವ್ಯಾಸಬೇಡ, ಇರುಳ, ಚುಂಚು, ಕಾಡುಗೊಲ್ಲ, ಕೋಟಾ, ಬಡಗಾ, ಕಾಡುಕುರುಬ, ಉರುಳಿ, ಅಡಿಯಾನ್, ಜೇನುಕುರುಬ, ಇರುಳಿಗ, ಮೊದಲಾದ ದಕ್ಷಿಣ ಭಾರತದ ಬುಡಕಟ್ಟುಗಳು ಈ ವಲಯವನ್ನು ಸೇರಿಕೊಂಡಿವೆ.

೨. ಮಧ್ಯ ವಲಯ

ಬುಡಕಟ್ಟು ಜನಾಂಗಗಳು ಕೃಷ್ಣ ನದಿ ಹಾಗೂ ಗೋದಾವರಿ ನದಿಗಳ ಎಡ ಹಾಗೂ ಬಲದಂಡೆಗಳಲ್ಲಿ ವಾಸ ಮಾಡುವುದರಿಂದ ಮಧ್ಯವಲಯದ ಬುಡಕಟ್ಟುಗಳೆಂದು ಗುರುತಿಸಿದ್ದಾರೆ. ಪ್ರತಿಯೊಂದು ಜಿಲ್ಲೆಗಳಲ್ಲಿ ಕಂಡುಬರುವ ಬುಡಕಟ್ಟುಗಳು ಆಗಿದ್ದರೂ ತಮ್ಮದೇಯಾದ ನೆಲೆಯಲ್ಲಿ ಹೊಸತನವನ್ನು ಪಡೆದುಕೊಂಡಿದ್ದಾರೆ. ಬಿಹಾರ, ಮಹಾರಾಷ್ಟ್ರ, ರಾಜಸ್ಥಾನ, ಮಧ್ಯಪ್ರದೇಶ, ರಾಜ್ಯಗಳೆಲ್ಲವು ಸೇರಿಕೊಂಡು ಬಂದ ಬುಡಕಟ್ಟು ಜನಾಂಗಗಳಾಗಿವೆ. ಇದನ್ನು ದಕ್ಷಿಣ ಪ್ರಸ್ಥಭೂಮಿ ಎಂದು ಕರೆಯುತ್ತಾರೆ. ಕಂಧ, ಕೋಲ್, ಸಂತಾಲ್ ಸವಾದ, ಭಿಲ್, ಕೋಳಿ, ಭೂಮಿಯೆ, ಮುಂಚಾ, ಗೊಂಡಾ,ಒರೆಯಾನ್, ಗಡಬ, ಬೈಗಾ, ಸವರಾ, ಬಿರ್ಹಾರ್, ಜುನಾಂಗ, ಕೋಲ್, ಖರಿಯಾ, ಮುಂತಾದ ಬುಡಕಟ್ಟುಗಳು ಸೇರಿಕೊಂಡಿವೆ. ಅವುಗಳಲ್ಲಿ ಮಧ್ಯವಲಯದ ಬುಡಕಟ್ಟುಗಳಾಗಿ ಈ ವಲಯದಲ್ಲಿ ವಾಸಿಸುತ್ತಾರೆ.

ಈ ಮಧ್ಯವಲಯದ ಬುಡಕಟ್ಟುಗಳು ಆಸ್ಟ್ರಿಕ್ ಹಾಗೂ ಆರ್ಯ ಭಾಷೆಗಳನ್ನು ಹೆಚ್ಚಾಗಿ ಬಳಸುವ ರೂಢಿಯೂ ಇದೆ. ಗೊಂಡಾ ಜಲಾನಯನ ಇಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸಿಕ್ಕಲಗಾರ ಗೊಂಡರ ನಂತರ ಬುಡಕಟ್ಟು ಸ್ಥಾನ ಹೊಂದಿದೆಂದರೆ ಸಂತಾಲರು ಈ ಎರಡು ಬುಡಕಟ್ಟುಗಳನ್ನು ಈ ಮಧ್ಯದ ಪ್ರಮುಖ ಧಾರೆಗಳಾಗಿವೆ. ಕಪ್ಪು ಬಣ್ಣ ಹೊಂದಿದ ಎತ್ತರದ ನಿಲುವು ಉದ್ದ ತಲೆ ಗುಂಗುರು ಕೂದಲು, ಚಿಕ್ಕದಾದ ಚಪ್ಪಟೆಯಾದ ಮೂಗು, ದೃಢವಾದ ಶರೀರ ಹೊಂದಿದ್ದಾರೆ. ಬೇಟೆ ಸಂಗ್ರಹಣೆ ಮುಖ್ಯ ಹೋರಾಟವಾಗಿದೆ. ಸಂಚಾರಿ ಬುಡಕಟ್ಟುಗಳಾಗಿವೆ. ಆಹಾರ ಸಂಗ್ರಹಣೆ ಮುಖ್ಯ ಹೋರಾಟವಾಗಿದೆ. ಸಂಚಾರಿ ಬುಡಕಟ್ಟುಗಳಾಗಿವೆ. ಆಹಾರ ಸಂಗ್ರಹಣೆ, ಕೈಗೊಳ್ಳುತ್ತಾರೆ. ಹಿಂದುಳಿದ ಹಾಗೂ ಅನಾಗರಿಕ ಜೀವನ ಸಾಗಿಸುತ್ತಾರೆ. ಬತ್ತಲೆಯಾಗಿ ತಿರುಗುವರು. ತೊಗಟೆ, ಹುಲ್ಲನ್ನು ಉಡುಪುಗಳಾಗಿ ತಯಾರಿಸುತ್ತಾರೆ. ಅವರ ಕಾರ್ಯಕ್ರಮಗಳು ಸಮೂಹ ನೃತ್ಯ,

ಗಾಯನಗಳನ್ನು ಹೊಂದಿದ್ದು, ಆದರೆ ಈ ಬುಡಕಟ್ಟು ಜನಾಂಗಗಳು ಪಿತೃಪ್ರಧಾನವಾದ ಕುಟುಂಬವನ್ನು ಹೊಂದಿದ ಮಾತೃಸ್ಥಾನಕ್ಕೆ ಹೆಚ್ಚಿನ ಪ್ರಧಾನ್ಯತೆಯಿಲ್ಲ. ಕುಲಪದ್ಧತಿಗಳು ಬೆಡಗುಗಳು, ಸಂಪ್ರದಾಯಗಳು, ಪಂಚಾಯ್ತಿ ವ್ಯವಸ್ತೆ, ಬಹುಪತ್ನಿತ್ವ, ವಿವಾಹಗಳು, ಆರ್ಥಿಕ ಸುಧಾರಣೆ, ಜೀವನದ ಸ್ವಾವಲಂಬನೆ, ಉದ್ಯೋಗ ಕೈಗೊಳ್ಳುತ್ತಾರೆ. ಪ್ರಧಾನವಾಗಿ ವ್ಯವಸಾಯವೇ ಇವರ ವೃತ್ತಿ ಜೀವನವಾಗಿದೆ. ಶಾಂತ, ಸರಳ, ಸಮಾಧಾನಚಿತ್ತದಿಂದ ತಮ್ಮ ಬದುಕನ್ನು ರೂಪಿಸಿಕೊಂಡು ಬಂದ ಬುಡಕಟ್ಟುಗಳಾಗಿವೆ.

೩. ಈಶಾನ್ಯ ವಲಯ

ಭಾರತದ ನದಿ ದಂಡೆಗಳಲ್ಲಿ ವಾಸಿಸುವ ಜನಾಂಗವನ್ನು ಬುಡಕಟ್ಟು ಜನಾಂಗವೆಂದು ಕರೆದಿದ್ದಾರೆ. ಅವರಿಗೆ ಈಶಾನ್ಯ ವಲಯದ ಬುಡಕಟ್ಟು ಜನಾಂಗವೆಂದು ಹೆಸರು. ಗಿರಿಕಣಿವೆ, ಜರ್ಮನಾ, ಪದ್ಮ, ಬ್ರಹ್ಮಪುತ್ರಾ ನದಿ ದಂಡೆಗಳಲ್ಲಿ ವಾಸಿಸುವ ಬುಡಕಟ್ಟುಗಳು ಈಶಾನ್ಯ ವಲಯಕ್ಕೆ ಸೇರ್ಪಡೆಯಾಗುತ್ತವೆ. ನಮ್ಮ ದೇಶದ ಜನಸಂಖ್ಯೆಗೆ ಅನುಗುಣವಾಗಿ ತೆಗೆದರೆ ದೇಶದಲ್ಲಿ ಬುಡಕಟ್ಟುಗಳು ೧,೨೩೩/–ರಷ್ಟು ಪ್ರತಿಶತ ಜನಾಂಗ ಇಲ್ಲಿ ವಾಸಿಸುತ್ತಾರೆ. ಇಲ್ಲಿನ ಬಹುಪಾಲು ಬುಡಕಟ್ಟುಗಳು ಮಂಗೋಲಿಯಾ ಬುಡಕಟ್ಟಿಗೆ ಸೇರಿದವರೇ ಅನೇಕರಿದ್ದಾರೆ. ಇವರದೇ ಆದ ಟಿಬೇಟ, ಚೀನಾ ಭಾಷೆಯನ್ನಾಡುತ್ತಾರೆ. ಗೃಹ ಕೈಗಾರಿಕೆಗಳಲ್ಲಿ ಹೆಚ್ಚಿನ ಆಸಕ್ತಿ. ನೂಲು ತೆಗೆಯುವುದು, ನೇಕಾರಿಕೆಯ ವೃತ್ತಿಗಳನ್ನು ಕೈಗೊಂಡಿದ್ದಾರೆ. ಸಮೂಹ ನೃತ್ಯ, ಗಾಯನ ಅವರ ವಿಶೇಷ ಕಲೆ ಸಾಹಿತ್ಯ ಹಾಗೂ ಕಲೆ ಆರಾಧಕರು.

ಈ ದೇಶದ ಜನಸಮುದಾಯಗಳು ಪಂಜಾಬ್, ಹಿಮಾಚಲ ಪ್ರದೇಶ, ನೇಪಾಳ್, ಭೂತಾನ್, ಸಿಕ್ಕಿಂ, ಮೇಘಾಲಯ, ನಾಗಾಲ್ಯಾಂಡ್, ಆಸ್ಸಾಂ, ಉತ್ತರ ಪ್ರದೇಶ, ಅರುಣಾಚಲ ಪ್ರದೇಶ, ಬಂಗಾಳ, ಬಿಹಾರ, ರಾಜ್ಯಗಳಲ್ಲಿ ಈ ಬುಡಕಟ್ಟುಗಳು ಹೆಚ್ಚಾಗಿ ಕಾಣಸಿಗದಿದ್ದರೆ ಇಲ್ಲಿಯ ಬುಡಕಟ್ಟುಗಳು ಕೂಡಾ ತಮ್ಮದೆಯಾದ ನೆಲೆಯಲ್ಲಿ ವಿವಿಧ ಕಾರ್ಯಯೋಜನೆ ಕೈಗೊಂಡಿದ್ದಾರೆ. ನಾಗಾ, ಛಾಂಗೆ, ಅಂಗಾಮಿ, ಯಾಚುಮಿ, ಗರುಡ, ತುಕೋಮಿ,ಗಾರೊಅಖಾಸ ಕಚಾಲಿ ಲೆಪ್ಸಾ, ಡಫ್ಲಾಸ್, ರಾಭಾ, ಮಿಕರ್, ದಾಪ್ಲಾ, ಮಿರಿಸ್, ಚಕ್ಮಿ, ಕುರೆಸ್, ಆಬೊರ್, ಮಿಸ್ಮಿಸ್, ಲಂಬೂ. ಆಶಾ, ಮುಂತಾದ ಬುಡಕಟ್ಟುಗಳು ಹೆಚ್ಚಿನ ಪ್ರಮಾಣದಲ್ಲಿ ಕಾರ್ಯವನ್ನು ಕೈಗೊಂಡಿವೆ. ಈ ಮೂರು ಹಂತಗಳ ವಲಯಗಳು ಬುಡಕಟ್ಟುಗಳ ಕುರಿತಾದ ಹೆಚ್ಚಿನ ಅಧ್ಯಯನಕ್ಕೆ ಸೂಕ್ತವಾದ ವಾತಾವರಣವನ್ನು ನಿರ್ಮಿಸಿರುತ್ತಾರೆ. ದಕ್ಷಿಣ ಹಾಗೂ ಮಧ್ಯ ವಲಯಗಳನ್ನು

ಹೊರತುಪಡಿಸಿಕೊಂಡ ಬುಡಕಟ್ಟುಗಳನ್ನು ಈಶಾನ್ಯ ವಲಯದ ಹೆಚ್ಚು ಬೇರ್ಪಡಿಸಿಕೊಂಡು ಪ್ರತ್ಯೇಕ ಅಧ್ಯಯನಕ್ಕೆ ತೊಡಗುತ್ತಾರೆ. ಈಶಾನ್ಯದಲ್ಲಿ ಉತ್ತರವೂ ಕೂಡಾ ಬರುತ್ತದೆ. ಗುಡ್ಡಗಾಡುಗಳಲ್ಲಿ ವಾಸಿಸುವ ಈ ಬುಡಕಟ್ಟುಗಳು ತನ್ನತನವನ್ನು ಮೀರಿ ಬೆಳವಣಿಗೆಯಾಗಿರುವುದು ಕಾಣುತ್ತೇವೆ. ಹಿಂದೂಗಳಿಗಿಂತ ಭಿನ್ನವಾದ ಆಚಾರ ವಿಚಾರಗಳನ್ನು ಹೊಂದಿವೆ. ಹಿಂದೂಗಳಿಗಿಂತ ಕಡಿಮೆ ಜನಸಂಖ್ಯೆ ಹೊಂದಿದ್ದಾರೆಯಾದರೂ ಇವರಲ್ಲಿ ತಾವು ಕನಿಷ್ಟವೆಂದು ಭಾವಿಸುವುದೇ ಹಿಂದೂಗಳೇ ಪರಕೀಯರು ಎಂಬ ವಾದ ಮಂಡಿಸುತ್ತಾರೆ. ತಾವೇ ಈ ದೇಶದ ಮೂಲ ನಿವಾಸಿಗಳು ಎಂದು ವಾದಿಸುವುದುಂಟು. ಈ ಬುಡಕಟ್ಟು ಜನಾಂಗಗಳು ಪ್ರತ್ಯೇಕವಾದ ರಾಜ್ಯ ಬೇಕೆಂದು ಹೋರಾಡಿ ನಾಗಾಲ್ಯಾಂಡ್ ರಾಜ್ಯವನ್ನು ಈಗಾಗಲೇ ಪಡೆದುಕೊಂಡ ಉದಾಹರಣೆ ನಮ್ಮಲ್ಲಿದೆ. ಕೆಲವು ಸರ್ಕಾರ ಇಂತಹ ಬುಡಕಟ್ಟುಗಳಿಗೆ ಪರಿಶಿಷ್ಟ ಪ್ರದೇಶಗಳನ್ನು ಹೊಂದಿಸಿಕೊಂಡು ಹೋಗಿದ್ದಾರೆ. ದಕ್ಷಿಣ ಹಾಗೂ ಮಧ್ಯವಲಯವು ಅನೇಕ ಧಾರ್ಮಿಕ ಪ್ರಕ್ರಿಯೆಯನ್ನು ಅನುಸರಿಸಿಕೊಂಡು ಬಂದಿರುವುದರಿಂದ ಮೂಲ ಸಂಸ್ಕೃತಿ ಹಾಳಾಗಿಕೊಂಡು ಹೋಗದೆ ಅದನ್ನು ಹಾಗೇ ಉಳಿಸಿಕೊಂಡು ಬಂದ ಮೂಲಸಂಸ್ಕೃತಿ ಈಶಾನ್ಯ ವಲಯದ ಸಂಸ್ಕೃತಿಯಾಗಿದೆ. ಈ ಬುಡಕಟ್ಟುಗಳ ಕಾಲಗಳು ಬದಲಾದಂತೆ ಅವರ ಸಂಸ್ಕೃತಿ ಬದಲಾವಣೆಯಾಗುತ್ತಾ ಹೊರಡುತ್ತದೆ. ಮುಸ್ಲಿಂರ ಆಡಳಿತದ ಹೊತ್ತಿಗೆ ಹಲವಾರು ಕುಟುಂಬಗಳನ್ನು ಸಹಿತ ಸ್ವತಂತ್ರವಾಗಿ ತಮ್ಮ ಕರ್ತವ್ಯಗಳು ತಮ್ಮ ಕಾರ್ಯಯೋಜನೆ ನಡೆಸಿಕೊಂಡು ಬಂದಿವೆ.

ಬ್ರೀಟಿಷರು ಭಾರತಕ್ಕೆ ಬಂದ ಮೇಲೆ ಈ ಎಲ್ಲಾ ಬುಡಕಟ್ಟುಗಳು ಸ್ವತಂತ್ರವಾಗಲು ಕಾರಣವಾಯಿತು. ಈ ಬುಡಕಟ್ಟುಗಳಿಗೆ ಸಾರಿಗೆ ಸಂಪರ್ಕ ಉಂಟಾಗಲು ಸಾಕಷ್ಟು ಪ್ರಮಾಣದಲ್ಲಿ ಹೋರಾಡಿದವು ಹೀಗಾಗಿ ರೇಲ್ವೆ ಸಂಪರ್ಕದಿಂದಾಗಿ ಬುಡಕಟ್ಟುಗಳು ನಿರಂತರವಾಗಿ ತನ್ನ ಕೇಂದ್ರ ಸ್ಥಾನವನ್ನು ಬೇರೆಯದನ್ನಾಗಿ ಮಾಡಲಿಲ್ಲ. ಕೈಗಾರಿಕಾ ಕ್ರಾಂತಿ ರೇಲ್ವೆಗಳ ಹಳಿಗಳ ಮೂಲಕವಾಗಿಯೇ ಈ ಬುಡಕಟ್ಟು ಬಂದು ನೆಲೆಸಿದ್ದನ್ನು ಸ್ಪಷ್ಟವಾಗಿ ಕಾಣಿಸುತ್ತದೆ.

ಕ್ರೈಸ್ತರು ಬುಡಕಟ್ಟು ಜನಾಂಗಗಳನ್ನು ಮತ್ತು ತನ್ನ ಕಡೆ ಆಕರ್ಷಣೆಗೊಳಪಡಿಸಿದ್ದಾರೆ. ಆ ಮೂಲಕ ಸ್ವತಂತ್ರವಾದ ಧರ್ಮಬೇರೆ ಕ್ರೈಸ್ತ ಧರ್ಮ ಹೊಂದುವ ಹಾಗೇ ಮಾಡಿದ್ದಾರೆ. ಹೀಗೆ ಅನೇಕ ಬುಡಕಟ್ಟು ಧರ್ಮದ ನೆಲೆಗಟ್ಟಿನ ಮೇಲೆ ಕುಳಿತುಕೊಳ್ಳಲು ಬಿಟ್ಟಿರುವುದು ನಮಗೆ ತಿಳಿದು ಬರುತ್ತದೆ. ಬುಡಕಟ್ಟುಗಳ ಅಧ್ಯಯನವು ಬಹಳ ತಡವಾಗಿ ಅಧ್ಯಯನ ಪ್ರಾರಂಭವಾಗಿದೆ. ಆ ಮೂಲಕ ತನ್ನ ಸರ್ವ ಸ್ವತಂತ್ರ ಕಾಣಸಿಗಲು ಸಾಧ್ಯವಾಗಿದೆ. ಭಾರತ ಸರ್ಕಾರದ ಬುಡಕಟ್ಟುಗಳ

ಕುರಿತು ಹಲವು ರೀತಿಯ ಯೋಜನೆಗಳನ್ನು ಹಾಕಿಕೊಂಡು ಹೊಸದಾಗಿ ೧೯೫೦ ರಲ್ಲಿ ನಿಯಮದ ಪ್ರಕಾರ ೫೭೧ ಬುಡಕಟ್ಟುಗಳು ಪರಿಶಿಷ್ಟ ಬುಡಕಟ್ಟುಗಳೆಂದು ಪ್ರಕಟಪಡಿಸಿದವು. ಈ ಮೂಲಕ ಬುಡಕಟ್ಟುಗಳು ಸ್ವತಂತ್ರ ರಾಜಕೀಯ ಚುನಾವಣೆ ಮತದಾನದ ಹಕ್ಕು, ವಿದ್ಯಾಭ್ಯಾಸ, ಉದ್ಯೋಗ ಅನೇಕ ಕ್ಷೇತ್ರಗಳಲ್ಲಿ ತಮ್ಮ ವಿಶೇಷವಾದ ಸೌಲಭ್ಯಗಳನ್ನು ಪಡೆದುಕೊಳ್ಳಲು ಸಾಧ್ಯವಾಯಿತು. ಕರ್ನಾಟಕದಲ್ಲಿ ಇದೇ ಮಾದರಿಯನ್ನು ಅನುಸರಿಸಿಕೊಳ್ಳಲು ೬೩ ಪರಿಶಿಷ್ಟ ಬುಡಕಟ್ಟುಗಳು ಇರುವುದು ಮಾತಾಗಿದೆ. ಈ ಪರಿಶಿಷ್ಟ ಬುಡಕಟ್ಟುಗಳಲ್ಲಿ ಅಲೆಮಾರಿ ಬುಡಕಟ್ಟು ಗಳು ಹಿಂದೂಳಿದ ವರ್ಗಗಳನ್ನು ಈ ಮೂರು ಪಟ್ಟಿಗೆ ಸೇರಿಸಲಾಗಿದೆ.

ಭಾರತದ ಬುಡಕಟ್ಟು ಅಧ್ಯಯನದ ಸಂಸ್ಕೃತಿಯು ಮೊದಲೊಂದು ದೇಶೀಯ ವಿದ್ವಾಂಸರು ಮಂಡಿಸಿದ ವಿಜ್ಞಾನ ನೆಲೆಯಲ್ಲಿ ಅಧ್ಯಯನ ಮಾಲೆಯ ನಡುವೆ ಕಂಡು ಬರುತ್ತವೆ.

ಕರ್ನಾಟಕದಲ್ಲಿ ಬುಡಕಟ್ಟುಗಳ ಅಧ್ಯಯನ

ಬುಡಕಟ್ಟು ಅಧ್ಯಯನವನ್ನು ಕರ್ನಾಟಕದಲ್ಲಿ ಏನಾದರೂ ಕಂಡುಕೊಳ್ಳಬೇಕಾದರೆ ಅದು ಅಸಾಧ್ಯವಾದ ಮಾತಾಗಿದೆ. ಕೆಲವು ಇಂಗ್ಲೀಷ್ ಕೃತಿಗಳು ಮಾತ್ರ ಹೊರ ಬಂದದ್ದನ್ನು ಬಿಟ್ಟರೆ ಉಳಿದ ಯಾವುದೇ ಕನ್ನಡದ ಕೃತಿಗಳು ಪ್ರಕಟಗೊಂಡಿಲ್ಲ. ಎಚ್.ವಿ ನಂಜುಂಡಯ್ಯ ಮತ್ತು ಎಲ್.ಕೆ.ಅನಂತಕೃಷ್ಣಯ್ಯಾರ್ ಅವರು ನಾಲ್ಕು ಸಂಪುಟಗಳನ್ನು ಹೊರತಂದಿದ್ದಾರೆ. ಅವುಗಳೆಂದರೆ The Mysore Tribes and castes ಈ ಕೃತಿ ಕನ್ನಡದ ಬುಡಕಟ್ಟು ಅಧ್ಯಯನಕ್ಕೆ ಅರುಣೋದಯದ ಕೃತಿಯಾಗಿದೆ. ಮಾನವ ವಿಜ್ಞಾನದ ನೆಲೆಯಲ್ಲಿ ಗಮನಿಸಬಹುದಾಗಿದೆ. ದಿವಂಗತ ಎ.ಎ.ಡಿ. ಲೂಯಿಜ್ ಅವರು The Tribe of Mysore ಎಂಬ ಕೃತಿಯಲ್ಲಿ ಮೈಸೂರು ಪ್ರದೇಶದಲ್ಲಿ ಕಂಡು ಬರುವ ೨೭ ಬುಡಕಟ್ಟುಗಳ ಬಗ್ಗೆ ವಿಶೇಷವಾದ ಆಕರಗಳನ್ನು ಕೊಟ್ಟು ವಿವರಣೆ ನೀಡಿದ್ದಾರೆ. ಭಾರತ ಸರ್ಕಾರವನ್ನು ಪರಿಶಿಷ್ಟ ವರ್ಗಗಳಲ್ಲಿ ಕಂಡು ಬರುವ ಮಾಹಿತಿಗಳನ್ನು ಸಂಗ್ರಹಿಸಿ ಮೈಸೂರು ರಾಜ್ಯದಲ್ಲಿ ಸುಮಾರು ೬೩ ಪರಿಶಿಷ್ಟ ಬುಡಕಟ್ಟುಗಳ ಅಧ್ಯಯನ ಕರ್ನಾಟಕದಲ್ಲಿ ನೂರು ವರ್ಷಗಳ ಪರಂಪರೆ ಹೊಂದಿದೆ. ಎಚ್.ವಿ. ನಂಜುಂಡಯ್ಯನವರು ೧೯೦೩ ರಲ್ಲಿ ನಡೆಸಿದ ಅಧ್ಯಯನವು ತದನಂತರ ಅನಂತಕೃಷ್ಣ ಅವರು ಸಪ ಸಮುದಾಯಗಳ ಕುರಿತು ವಿವರವಾದ ಅಧ್ಯಯನಕ್ಕೆ ಕೈಗೊಂಡಿದ್ದಾರೆ. ಎಥರ್ಸ್ಟನ್ ಕಾಲದಿಂದ ಹಿಡಿದು ಇಂದಿನವರೆಗೂ ಬುಡಕಟ್ಟುಗಳ ಅಧ್ಯಯನ ನಡೆಯುತ್ತಾ ಬಂದಿದೆ. ಥರ್ಸ್ಟನ್

ಪ್ರಾರಂಭಿಸಿದ ಮೂಲಕ 'The Caste and Tribes of southern india' ಎಂಬ ಅಧ್ಯಯನಗಳು ಬಹು ವಿಶಾಲವಾದ ವ್ಯಾಪ್ತಿಯನ್ನು ಹೊಂದಿವೆ.

ಕನ್ನಡದಲ್ಲಿ ಬುಡಕಟ್ಟುಗಳ ಕುರಿತಾದ ಅಧ್ಯಯನಗಳನ್ನು ಗಮನಿಸುತ್ತಾ ಹೊರಟರೆ ಭಾರತ ಸರ್ಕಾರ ಗುರುತಿಸಿದ ೬೩ ಬುಡಕಟ್ಟುಗಳಲ್ಲಿ ಕೆಲವು ಪರಿಶಿಷ್ಟ ಜಾತಿ, ಕೆಲವು ಪರಿಶಿಷ್ಟ ಪಂಗಡ ವರ್ಗಕ್ಕೆ ಸೇರಿಸಿ ಉಳಿದವುಗಳನ್ನು ಅಲೆಮಾರಿಗಳೆಂದು ಕರೆಯಲಾಗಿದೆ. ಉಳಿದವುಗಳನ್ನು ಹಿಂದುಳಿದ ವರ್ಗಗಳೆಂದು ಸಹಜವಾಗಿ ಅಂದಿನಿಂದ ಹಿಡಿದು ಇಂದಿನವರೆಗೂ ಇದೇ ಕಾಲದಲ್ಲಿ ಮುಂದುವರೆಸಿಕೊಂಡು ಬರಲಾಗಿದೆ. ಹೀಗಾಗಿ ಬುಡಕಟ್ಟುಗಳ ಅಧ್ಯಯನವನ್ನು ನಾವು ನೋಡಿದರೆ ಸುಲಭವಾಗಿ ದೊರಕುವುದಿಲ್ಲ.

ಕರ್ನಾಟಕದಲ್ಲಿ ಬುಡಕಟ್ಟುಗಳ ಅಧ್ಯಯನ ಅತ್ಯಂತ ತೀವ್ರವಾಗಿ ನಡೆದಿಲ್ಲ. ಸರಳವಾಗಿ ಅಷ್ಟೇ ನಿಧಾನವಾಗಿ ನಡೆದುಕೊಂಡು ಬಂದಿವೆ. ಪ್ರಾರಂಭದ ದಶಕಗಳಲ್ಲಿ ಬುಡಕಟ್ಟುಗಳ ಅಧ್ಯಯನವನ್ನು ನಾವು ಪರಿಶೀಲಿಸಿದರೆ ನಮಗೆ ಕಂಡು ಬರುವ ಮುಖ್ಯ ಸಂಗತಿಗಳೆಂದರೆ ದೇಶ-ವಿದೇಶಗಳು ವಿಶ್ರಾಂತಗಳು ಕನ್ನಡದಲ್ಲಿ ಸಂಶೋಧನೆಗೆ ತೊಡಗಿಕೊಂಡಿದ್ದಾರೆ. ೧೯೦೪ ರಲ್ಲಿ ಎಡ್ಗರ್ ಆಂಡ್ ಥರಸ್ಟನ್ ಮತ್ತು ಕೆ. ರಂಗಾಚಾರ್ಯ ಅವರು The caste and tribes or southern india ಎನ್ನುವ ಕೃತಿಯಲ್ಲಿ ಅನೇಕ ಜಾತಿ ಹಾಗೂ ಬುಡಕಟ್ಟುಗಳ ಸಂಕ್ಷಿಪ್ತವಾದ ನೋಟವನ್ನು ಕೊಟ್ಟಿದ್ದಾರೆ. ಇದು ಸಮಗ್ರ ಕರ್ನಾಟಕದ ಚಿತ್ರಣವು ಇದರಿಂದ ದಕ್ಷಿಣ ಭಾರತ ಪ್ರದೇಶದಲ್ಲಿ ಮಾತ್ರ ಅವಲಂಬಿಸಿಕೊಂಡು ಬಂದಿದೆ. ಎಚ್.ವಿ.ನಂಜುಂಡಯ್ಯ ಹಾಗೂ ಎಲ್.ಕೆ. ಅಯ್ಯರ್ ಅವರು ಮೊದಲನೇ ನಾಲ್ಕು ಸಂಪುಟಗಳನ್ನು ಸೇರಿಸಿಕೊಂಡು The Mysore tribes and castes ಎನ್ನುವ ಕೃತಿ ಹೊರ ಬಂದಿದೆ. ಇದು ೧೯೨೬ ರಿಂದ ೧೯೩೫ ರ ಅವಧಿಯಲ್ಲಿ ಪೂರ್ಣಗೊಂಡಿದೆ. ಈ ಎಲ್ಲಾ ಕೃತಿಗಳು ಕರ್ನಾಟಕದ ಬುಡಕಟ್ಟು ಅಧ್ಯಯನಗಳಿಗೆ ತೋರುಬೆರಳಾಗಿ ದಿಕ್ಸೂಚಿಯನ್ನುಂಟು ಮಾಡುವ ಕೃತಿಗಳಾಗಿವೆ. ಹೈದ್ರಾಬಾದ್ ಕರ್ನಾಟಕದಲ್ಲಿ ಕಂಡು ಬರುವ ಬುಡಕಟ್ಟುಗಳ ಅಧ್ಯಯನ ಕೈಗೊಂಡು ಅವುಗಳ ಮಾಹಿತಿಗಳೆಲ್ಲವನ್ನು ಸೇರಿಸಿ ಪ್ರಕಟಿಸುವ ಕೆಲಸವನ್ನು ಸೈಯದ್ ಸಿರಾಜ್ -ಉಲ್-ಹುಸೇನ್ ಅವರು ೧೯೨೬ ರಲ್ಲಿ ರಚಿಸಿದ The caste and tribes or Nizams paminion ಎಂಬ ಉತ್ಕೃಷ್ಟ ಗ್ರಂಥವನ್ನು ಹೊರ ತಂದಿದ್ದಾರೆ. ೦.೦ ಆ ಲೂಯಿಸ್ ಅವರು ಮೈಸೂರು ರಾಜ್ಯದ ೨೭ ಬುಡಕಟ್ಟುಗಳ ಸಮಗ್ರ

ಚಿತ್ರಣವನ್ನು ನೀಡಿದ್ದಾರೆ. ಅದೇ ಕೃತಿ The Tribes of Mysore ಕೃತಿಯಾಗಿ (೧೯೬೩) ಎಲ್.ಜಿ.ಹಾವನೂರ ಅವರು Karnataka Backward class commission report ಎಂಬ ೧೯೭೫ ರಲ್ಲಿ ರಚಿಸಿದ ಈ ವರದಿ ಬಹು ಮುಖ್ಯವಾಗಿ ಕರ್ನಾಟಕದಲ್ಲಿ ಹೆಸರನ್ನು ಪಡೆದಿದೆ. ಈ ವರದಿಗಳಲ್ಲಿ ಕೆಲವು ಜಾತಿ-ಸಮುದಾಯಗಳಿಗೆ ಸೂಕ್ತವೆನಿಸಿಕೊಂಡಿದೆ. ಕೆಲವು ಜಾತಿ ಸಮುದಾಯಗಳ ಸೂಕ್ತವಲ್ಲದ ವರದಿಯಾಗಿ ಕಂಡು ಬಂದಿದೆ.

ಈ ಎಲ್ಲಾ ಅಧ್ಯಯನಗಳು ಜರುಗಿದ ಮೇಲೆ ಕರ್ನಾಟಕದ ಬುಡಕಟ್ಟು ಅಧ್ಯಯನವನ್ನು ಎರಡು ಹಂತಗಳಲ್ಲಿ ವಿಂಗಡಿಸಬಹುದು.

೧. ವಸಾಹತುಶಾಹಿ ಕಾಲಘಟ್ಟ

೨. ವಸಾಹತೇತ್ತರ ಕಾಲಘಟ್ಟ

ಇತ್ತೀಚಿನ ಅಧ್ಯಯನಗಳು ಎಂಬ ಈ ಮೂರು ವರ್ಗಗಳನ್ನಾಗಿ ವರ್ಗೀಕರಿಸಬಹುದು. ಈ ಎಲ್ಲಾ ಅಂಶಗಳನ್ನು ಮೇಲೆ ಹೇಳುವ ಎಲ್ಲಾ ಬುಡಕಟ್ಟುಗಳು ಅಧ್ಯಯನಗಳಲ್ಲಿ ಇಂದು ಸೇರಿಕೊಂಡಿವೆ. ವಸಾಹತುಶಾಹಿ ಕಾಲಘಟ್ಟದಲ್ಲಿ ಆಡಳಿತ ಒಂದು ಭಾಗವಾಗಿ ಹೊರತಂದಿದೆ. ಈ ದೇಶದ ಸ್ಥಿತಿ-ಗತಿಗಳ ಚಿಂತನೆ ಹೊರ ಬಂದಿವೆ. ಭಾಷೆ, ವ್ಯಾಕರಣ, ಸಾಹಿತ್ಯ, ಸಂಸ್ಕೃತಿ ಎಲ್ಲಾ ಅಧ್ಯಯಗಳನ್ನು ಮಾಡುತ್ತ ಶಾಸನ, ಕಾವ್ಯ, ವ್ಯಾಕರಣ ಕುರಿತು ಅಧ್ಯಯನಗಳು ನಡೆದವು. ಈ ಕಾಲಘಟ್ಟ ಅವುಗಳ ಅಧ್ಯಯನದ ವಸ್ತು ಕ್ಷೇತ್ರವನ್ನಾಗಿಸಿಕೊಂಡರು.

ವಸಾಹತೋತ್ತರ ಕಾಲಘಟ್ಟದಲ್ಲಿ ಮೇಲೆ ಹೇಳುವ ಎಲ್ಲಾ ವಿಚಾರಧಾರೆಗಳು ಹಾಗೇ ಹೊಂದಿಕೊಂಡು ಬಂದಿವೆ. ಪಶ್ಚಿಮದ ರೊಮ್ಯಾಂಟಿಕ್ ಹಾಗೂ ರಾಷ್ಟ್ರೀಯತೆ ಹೊರಬಂದಿವೆ. ರಾಷ್ಟ್ರೀಯ ಹೋರಾಟದಲ್ಲಿ ಬ್ರಿಟಿಷ್‌ರ ವಿರುದ್ಧ ಹೋರಾಟ ಚಳುವಳಿಯಲ್ಲಿ ಭಾಗವಹಿಸಿ, ಕಳೆದುಕೊಂಡಿವೆ. ಬುಡಕಟ್ಟುಗಳು ನಿರ್ಗತಿಕರಾದಲ್ಲಿ ಸ್ವಾತಂತ್ರ್ಯ ಹೊಂದಿದ ಮೇಲೆ ತಮ್ಮ ಹೊಲ ಮನೆ, ಮಾತ್ರ ಪುನಃ ಪಡೆದುಕೊಳ್ಳಲು ಚಳುವಳಿ ನಡೆಸಿದರು ಆದರೆ ಸಫಲತೆಯ ಫಲ ಇನ್ನೂ ಕನಸಾಗಿಯೇ ಉಳಿದಿದೆ. ಇತ್ತೀಚಿನ ಅಧ್ಯಯನಗಳು ನವ ಸಂಪ್ರದಾಯ ಧೋರಣೆಗಳನ್ನು ಅಧ್ಯಯನಗಳ ನಡುವೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಉಪಸಂಸ್ಕೃತಿ ಮಾಲೆಯ ಅಧ್ಯಯನಗಳು ಮೂಲ ಸಂಸ್ಕೃತಿ ರಕ್ಷಿಸಿ ಉಳಿಸಿಕೊಳ್ಳಬೇಕೆಂಬ ವಿಚಾರಸರಣಿ ಈ ಭಾಗದಲ್ಲಿ ನಡೆದಿವೆ. ಬುಡಕಟ್ಟು ಸಂಸ್ಕೃತಿಗಳು ಕುರಿತಾದ ಅಧ್ಯಯನ ತುರ್ತಾಗಬೇಕಾಗಿದೆ. ಇಂದಿನ ಅಧ್ಯಯನಗಳು ಎಲ್ಲಾ

ಗೌಣವಾಗಿವೆ. ಯೂರೋಪಿನ ಸಾಂಸ್ಕೃತಿಕ ನಿಷ್ಠ ಹಾಗೂ ಮಾನವಶಾಸ್ತ್ರದ ಅನುಕರಣೆಗಳು ಕೂಡ ಇಲ್ಲಿ ನಡೆದಿವೆ. ಸಬಾಲ್ಟರ್ನ್ ಅಧ್ಯಯನಗಳ ನಡುವೆ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಬುಡಕಟ್ಟುಗಳ ಕುರಿತು ಅಲ್ಲಲ್ಲಿ ಪುಸ್ತಕ ಹೊರಡಿಸಿವೆ. ಜನಪದ ಕಲೆಗಳ ಕುರಿತು ಗ್ರಂಥಗಳನ್ನು ಸೇರಿಸಲಾಗಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ೩೬ ಉಪಸಂಸ್ಕೃತಿಯ ಸಂಪುಟಗಳನ್ನು ಹೊರತಂದಿರುವುದು ಐ.ಬಿ.ಎಚ್. ಪ್ರಕಾಶನ ಹಾಗೂ ಮೈಸೂರು ಭಾರತೀಯ ಸರ್ವೇಕ್ಷಣಾ ಸಂಸ್ಥೆಯ ಮೂಲಕ ಕರ್ನಾಟಕ ಸರ್ವೇಕ್ಷಣದ ಅನೇಕ ಬುಡಕಟ್ಟುಗಳ ಅಧ್ಯಯನ ವಿಧಾನವನ್ನು ಮಾಡಿವೆ. ಸಂಸ್ಕೃತಿಗಳ ಕುರಿತು ಅಧ್ಯಯನ ಮಾಡುವಲ್ಲಿ ಕೇವಲ ಬುಡಕಟ್ಟಿಗೆ ಮಾತ್ರ ಹೊಂದಿದ್ದಲ್ಲ.

೧೯೯೪ ರಲ್ಲಿ ಕನ್ನಡ ವಿಶ್ವವಿದ್ಯಾಲಯವು ಪ್ರಾರಂಭವಾದಾಗಿನಿಂದ ಹಿಡಿದು ಹಂಪಿಯಲ್ಲಿ ಬುಡಕಟ್ಟು ಅಧ್ಯಯನದ ವಿಭಾಗವೇ ಪ್ರಾರಂಭವಾಗಿದೆ. ಅಲ್ಲಿ ವಿಶೇಷವಾಗಿ ಇಂತಹ ಬುಡಕಟ್ಟುಗಳ ಕುರಿತಾದ ಅಧ್ಯಯನಗಳು ನಡೆಯುತ್ತವೆ. ಮೂವತ್ತೈದಕ್ಕೂ ಹೆಚ್ಚು ಜನ ಸಂಶೋಧನಾ ಅಧ್ಯಯನ ಕೈಗೊಂಡಿದ್ದಾರೆ. ಬುಡಕಟ್ಟುಗಳು ಇಂದಿನ ಅಧ್ಯಯನ ಸಂದರ್ಭದಲ್ಲಿ ಸಾಕಷ್ಟು ಮುಖಾಮುಖಿಯಾಗುತ್ತಲಿದೆ. ಈ ಕಾರಣಕ್ಕಾಗಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಕನ್ನಡದಲ್ಲಿ ಹಾಗೂ ಕರ್ನಾಟಕದ ಜನರನ್ನು ಕುರಿತು ಅಧ್ಯಯನಗಳು ನಡೆದಿವೆ. ಇದು ಸಮಾಧಾನದ ಸಂಗತಿಯಾಗಿದೆ. ಬುಡಕಟ್ಟುಗಳು ಕೆಲವೇ ಕೆಲವು ಮಾತ್ರ ಬುಡಕಟ್ಟುಗಳನ್ನು ಇಲ್ಲಿ ಸಂಶೋಧನೆಗೆ ತೊಡಗಿಸಿಕೊಳ್ಳಲಾಗಿದೆ. ಇಂತಹ ಅನೇಕ ಬುಡಕಟ್ಟುಗಳು ಕಣ್ಮರೆಯಾಗಿಯೇ ಉಳಿದಿವೆ.

೧. ಕಾಡುಗೊಲ್ಲರ ಜಾನಪದ ಒಂದು ಅಧ್ಯಯನ –ಡಾ. ಕಾಳೇಗೌಡ ನಾಗವಾರ

೨. ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು– ಡಾ. ತಿ.ನಂ. ಶಂಕರನಾರಾಯಣ

೩. ಬೇಡನಾಯಕರು –ಡಾ. ಕೃಷ್ಣಶರ್ಮ ಹನೂರು

೪. ಕಚ್ಚೆ ಸಾಳಿಗರ ಸಂಸ್ಕೃತಿ – ಡಾ. ಅಂಬಳಿಕೆ ಹಿರಿಯಣ್ಣ

೫. ಗೌಳಿಗರು – ಎಚ್.ಎಂ. ಮಹಾದೇವಯ್ಯ

೬. ಬೀದರ್ ಜಿಲ್ಲೆಯ ಗೊಂಡ ಆದಿವಾಸಿ ಒಂದು ಸಮಾಜ ಶಾಸ್ತ್ರೀಯ ಅಧ್ಯಯನ – ಡಾ. ಕೆ.ಎಂ.ಮೈತ್ರಿ

೭. ಸುಡುಗಾಡುಸಿದ್ಧರು ಒಂದು ಸಾಂಸ್ಕೃತಿಕ ಅಧ್ಯಯನ –ಡಾ. ಟಿ.ಎಂ.ಭಾಸ್ಕರ್

೮. ವ್ಯಾಸನಾಯಕರು ಒಂದು ಜನಾಂಗಿಕ ಅಧ್ಯಯನ – ಡಾ. ಕರಿಶೆಟ್ಟಿ ರುದ್ರಪ್ಪ

೯. ಕರ್ನಾಟಕದ ಹೆಳವರು ಒಂದು ಅಧ್ಯಯನ	– ಡಾ. ಹರಿಲಾಲ್ ಪವಾರ್
೧೦ ಕರ್ನಾಟಕದ ಗೊಂದಲಿಗರು ಹಾಗೂ ಅವರ ಸಾಹಿತ್ಯ	–ಡಾ. ನಿಂಗಣ್ಣ ಸಣ್ಣಕ್ಕಿ
೧೧. ಎತ್ತಪ್ಪ– ಜುಂಜಪ್ಪ ಒಂದು ಅಧ್ಯಯನ	– ಡಾ. ಪಿ.ಬಿ. ಶಿವಣ್ಣ
೧೨. ಕರ್ನಾಟಕದ ಲಂಬಾಣಿಗಳು ಸಾಂಸ್ಕೃತಿಕ ಅಧ್ಯಯನ	– ಡಾ. ಪಿ.ಕೆ. ಖಂಡೋಬ
೧೩. ಹಾಲಕ್ಕಿ ಸಮಾಜ ಒಂದು ಅಧ್ಯಯನ	–ಡಾ. ಗೋಪಾಲ ಕೃಷ್ಣ ಹೆಗಡೆ
೧೪. ಗೋಸಂಗಿ ಸಮುದಾಯ ಒಂದು ಅಧ್ಯಯನ	– ಡಾ.ಎಂ.ಸಿ. ಮಾರುತಿ
೧೫. ಪಾರ್ದಿ ಬುಡಕಟ್ಟು ಒಂದು ಮಾನವಶಾಸ್ತ್ರೀಯ ಅಧ್ಯಯನ	–ಲಕ್ಕಿಪೃಥ್ವಿರಾಜ್ ಸುದರ್ಶನ
೧೬. ಬುಡಬುಡಕಿಯರು ಒಂದು ಅಧ್ಯಯನ	– ಡಾ. ಬಿ.ಎನ್. ಪಮ್ಮಾರ
೧೭. ಪಿಂಜಾರ ಸಂಸ್ಕೃತಿ	– ದಸ್ತಗಿರಿ ಅಲ್ಲಿಬಾಯಿ
೧೮. ಪಿಂಜಾರರು ಒಂದು ಜನಾಂಗಿಕ ಅಧ್ಯಯನ	–ಡಾ. ಮುಮ್ತಾಜ್ ಬೇಗಂ
೧೯. ಗೊಂದಲಿಗರು ಒಂದು ಅಧ್ಯಯನ	– ಡಾ. ಕ್ಯಾತನಹಳ್ಳಿ ರಾಮಣ್ಣ
೨೦ ಟೋಕ್ರೆ ಕೋಳಿ ಒಂದು ಜನಾಂಗಿಕ ಅಧ್ಯಯನ	– ಡಾ. ಹೇಮಲತಾ ವಡ್ಡೆ
೨೧. ಬುಡಕಟ್ಟು ನ್ಯಾಯ	– ಅಕ್ಕಮಹಾದೇವಿ
೨೨. ಮೊಗೇರರು ಜನಾಂಗ ಜನಪದ ಅಧ್ಯಯನ	– ಡಾ. ಅಭಯ ಕೌಕ್ರಾಡಿ
೨೩. ಲಂಬಾಣಿ ಜನಪದ ಸಾಹಿತ್ಯ	– ಡಾ. ಡಿ.ಬಿ. ನಾಯಕ
೨೪. ಮ್ಯಾಸಬೇಡರು	– ಡಾ. ಕೃಷ್ಣ ಶರ್ಮ ಹನೂರ
೨೫. ಕಪ್ಪೆ ಹೊಲೆಯರ ಸಂಸ್ಕೃತಿ	– ಡಾ. ಕೇಶವನ್ ಪ್ರಸಾದ್
೨೬. ಸಿಂಧ್ ಮಾದಿಗರ ಸಂಸ್ಕೃತಿ	– ಕೋಟಗನಹಳ್ಳಿ ರಾಮಣ್ಣ
೨೭. ಸುಡುಗಾಡಸಿದ್ಧರ ಸಂಸ್ಕೃತಿ	– ಡಾ.ಪಿ.ಕೆ.ಖಂಡೋಬ
೨೮. ಗೊಂಬೆಯಾಟ	– ಡಾ. ಟಿ. ಗೋವಿಂದ
೨೯. ದುರುಗಮುರುಗಿಯರ ಸಂಸ್ಕೃತಿ	– ಗೀತಾ ನಾಗಭೂಷಣ
೩೦ ಲಂಬಾಣಿ ಸಂಸ್ಕೃತಿ	– ಡಾ. ಡಿ.ಬಿ.ನಾಯಕ್
೩೧. ಗೊರವರ ಸಂಸ್ಕೃತಿ	– ಡಾ. ಚಿಕ್ಕೇರಿ ಶಿವಶಂಕರ್
೩೨. ಪಕ್ಕಾಲರ ಸಂಸ್ಕೃತಿ	– ಡಾ. ಚಲುವರಾಜು
೩೩. ಮೊಂಡರ ಸಂಸ್ಕೃತಿ	– ಎನ್. ಚಂದ್ರಪ್ಪ
೩೪. ಸೋಲಿಗರ ಸಂಸ್ಕೃತಿ	– ಡಾ. ಡಾ. ಚಂದ್ರು ಕಾಳೇನಹಳ್ಳಿ
೩೫. ಪಿಂಜಾರ ಸಂಸ್ಕೃತಿ	– ಡಾ. ಬಿ.ಸಿ.ದಾದಾಪೀರ

೩೬. ಭೈದರ ಸಂಸ್ಕೃತಿ – ದೇವನೂರ ಪಾಂಡುರಾವ್
೩೭. ಡೊಂಬರ ಸಂಸ್ಕೃತಿ – ಡಾ. ಡಾ. ದೇವೇಂದ್ರಪ್ಪ
೩೮. ಹೊಲೆಯರ ಸಂಸ್ಕೃತಿ – ಡಾ.ಎಂ.ಜಿ.ನಾಗರಾಜ ಕೆಂಬಾವಿ
೩೯. ಹರಿಕಾಂತರ ಸಂಸ್ಕೃತಿ – ಬಿ.ಗ. ನಾಯರ್
೪೦. ಹಾಲಕ್ಕಿ ಒಕ್ಕಲಿಗರ ಸಂಸ್ಕೃತಿ – ಡಾ. ಎನ್.ಆರ್. ನಾಯಕ್
೪೧. ಯಾನಾದಿಗರ ಸ್ವಂಸ್ಕೃತಿ – ಡಾ. ಟಿ. ನಾರಾಯಣ
೪೨. ಗೊಂದಲಿಗರ ಸಂಸ್ಕೃತಿ – ಡಾ. ನಿಂಗಣ್ಣ ಸಣ್ಣಕ್ಕಿ
೪೩. ಕೊರವರ ಸಂಸ್ಕೃತಿ – ಡಾ.ಪುರುಷೋತ್ತಮ ಬಿಳಿಮಲೆ
೪೪. ಅಡವಿಚೆಂಚರು ಸಂಸ್ಕೃತಿ – ಪ್ರಹ್ಲಾದ್ ಬೆಟಗೇರಿ
೪೫. ಸಿದ್ದಿಯರ ಸಂಸ್ಕೃತಿ – ಡಾ. ಹಿ.ಚಿ.ಬೋರಲಿಂಗಯ್ಯ
೪೬. ಹಸಲರ ಸಂಸ್ಕೃತಿ – ಡಾ. ಜಿ.ಎಸ್.ಭಟ್

೪೭. ಕೊರವರ ಸಂಸ್ಕೃತಿ – ಡಾ. ಮಾನಸ
೪೮. ಹಕ್ಕಿಪಿಕ್ಕಿಯರ ಸಂಸ್ಕೃತಿ – ರಾಜಪ್ಪ ದಳವಾಯಿ
೪೯. ಅಗೇಕರ ಸಂಸ್ಕೃತಿ – ರಾಮಕೃಷ್ಣ ಗೋರಿ
೫೦. ಕುಡಿಯಾರ್ ಸಂಸ್ಕೃತಿ –ಡಾ.ಡಿ.ಬಿ.ರಾಮಚಂದ್ರ ಕಲಾಲ್
೫೧. ಜೇನುಕುರುಬರ ಸಂಸ್ಕೃತಿ – ಎ.ಸಿ.ಲರಿಮ
೫೨. ಮಾಸ್ತಿಕರ ಸಂಸ್ಕೃತಿ – ಲಕ್ಷ್ಮೀಪತಿ ಕೋಲಾರ್
೫೩. ಮೊಗವೀರ ಸಂಸ್ಕೃತಿ – ವೆಂಕಟರಾಜ ಪೂಣಿಂಚಿತ್ತಾಯ
೫೪. ಇಲ್ಲಿಗರ ಸಂಸ್ಕೃತಿ – ಸಿದ್ದಗಂಗಯ್ಯ ಕಾಂಬಲಿ
೫೫. ಗೊಂಡರ ಸಂಸ್ಕೃತಿ – ಸೈಯದ್ ಜಮೀರುಲ್ಲಾ ಷರಿಫ್
೫೬. ಹೆಳವರ ಸಂಸ್ಕೃತಿ – ಹರಿಲಾಲ್ ಪವಾರ್
೫೭. ಎರವರ ಸಂಸ್ಕೃತಿ – ಡಾ. ಪಿ.ಎನ್. ಹರೀಶ್
೫೮. ನಟುವರ ಸಂಸ್ಕೃತಿ – ಹೊಸೂರು ಮುನಿರಾಜು
೫೯. ದಕ್ಷಿಣ ಕನ್ನಡ ಜಿಲ್ಲೆ ಹರಿಜನರು ಮತ್ತು ಗಿರಿಜನರು ಸಾಮಾಜಿಕ ಇತಿಹಾಸ – ಪಿ. ಕಮಲಾಕ್ಷಿ
೬೦. ಛಲವಾದಿ ಜನಾಂಗ – ಎ.ಪಿ. ಕೃಷ್ಣಯ್ಯ
೬೧. ಮಲೆಮಾದೇಶ್ವರ – ಡಾ. ಕೇಶವನ್ ಪ್ರಸಾದ್

೬೨. ಜಾತಿಗರರ ಜಾತಕ – ಹೋಸೂರು ಜ್ಯೋತಿ
೬೩. ಗೊಲ್ಲರಹಟ್ಟಿ ಒಂದು ಸಾಮಾಜಿಕ ಅಧ್ಯಯನ – ಡಾ. ಬಿ.ವಿ. ನಾಗರಾಜ
೬೪. ಶಿಕಾಲಿಯಗೊಂಡರು – ಡಾ. ನಾರಾಯಣ ಯಾಜಿ
೬೫. ಸಿರಿಪಾಡ್ದನ – ಡಾ. ಎ. ವಿ. ನಾವಡ
೬೬. ಗಿರಿಜನ ನಾಡಿಗೆ ಪಯಣ – ಡಾ. ಹಿ.ಚಿ. ಬೋರಲಿಂಗಯ್ಯ
೬೭. ಗೊಂಡರ ರಾಮಾಯಣ – ಡಾ. ಹಿ.ಚಿ.ಬೋರಲಿಂಗಯ್ಯ
೬೮. ಬುಡಕಟ್ಟು ದೈವಾರಾಧನೆ. – ಡಾ. ಹಿ.ಚಿ.ಬೋರಲಿಂಗಯ್ಯ
೬೯. ಕುಮಾರರಾಮ ಮತ್ತು ಕೃಷ್ಣಗೊಲ್ಲರ ಕಾವ್ಯ – ಡಾ. ಕೆ.ಎಂ. ಮೈತ್ರಿ
೭೦, ಗೆಜ್ಜೆ ಮಾತಾಡುತಾವೆ. – ಡಾ. ಜಿ.ಎನ್. ಮೋಹನ್.
೭೧. ಕರ್ನಾಟಕ ಬುಡಕಟ್ಟುಗಳು – ಡಾ. ಎಚ್. ಜೆ. ಲಕ್ಕಪ್ಪಗೌಡ
೭೨. ಮಲೆಕುಡಿಯರು – ಡಾ. ಬಿ.ಎ. ವಿವೇಕ ರೈ
೭೩. ಹದ್ದುಪಾಡಿನ ಹಿಂದೆಮುಂದೆ – ವಿಷ್ಣುನಾಯಕ್
೭೪. ಕರ್ನಾಟಕದ ಕುರುಬರು – ಡಾ. ಶಿವರಾಮ
೭೫. ಕರ್ನಾಟಕ ಸಿಂಧೋಳ್ಳ ಸಮುದಾಯದ ಸಮಾಜಶಾಸ್ತ್ರೀಯ ಅಧ್ಯಯನ– – ಡಾ.ಲೋಕರಾಜ ದೊಡ್ಡಮನಿ

ಈ . ರೀತಿಯಾಗಿ ಕರ್ನಾಟಕದಲ್ಲಿ ಬುಡಕಟ್ಟುಗಳ ಅಧ್ಯಯನವು ಏಕವ್ಯಕ್ತಿಯಿಂದ ನಡೆದುಕೊಂಡು ಬರುತ್ತಿವೆ. ಅವು ಸಾಮೂಹಿಕ ನೆಲೆಯಲ್ಲಿ ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗ ಅಧ್ಯಯನ ಮಾಡುತ್ತಿದೆ. ಇದು ಕರ್ನಾಟಕದಲ್ಲಿರುವ ಏಕೈಕ ಬುಡಕಟ್ಟು ಅಧ್ಯಯನದ ವಿಭಾಗವಾಗಿದೆ. ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಕರ್ನಾಟಕ ಸಾಹಿತ್ಯ ಅಕಾಡೆಮಿ ಸಣ್ಣ ಪುಟ್ಟ ಪ್ರಮಾಣದಲ್ಲಿ ಸಮಗ್ರ ನೆಲೆಗಳು ಬಂದಿವೆ. ಕನ್ನಡ ವಿಶ್ವವಿದ್ಯಾಲಯ ಬುಡಕಟ್ಟುಗಳ ಕುರಿತಾದ ಸಂಚಿಕೆ ಹೊರತಂದಿದೆ. ಹಾಗೇ ಅನೇಕ ಸಂಪುಟಗಳು ಇಲ್ಲಿ ಹೊರ ಬಂದಿವೆ.ಇತ್ತೀಚೆಗೆ ಕರ್ನಾಟಕದ ಅಲೆಮಾರಿ ಬುಡಕಟ್ಟುಗಳ ಕುರಿತಾಗಿ ಪ್ರಕಟಣೆಗೆ ಕನ್ನಡ ಪುಸ್ತಕ ಪ್ರಾಧಿಕಾರ ಕೆಲಸ ಕೈಗೆತ್ತಿಕೊಂಡಿರುವುದು ಸ್ವಾಗತಾರ್ಹ ನಿಲುವಾಗಿದೆ. ಆ ಹಿನ್ನೆಲೆಯಲ್ಲಿ ಕರ್ನಾಟಕದ ಸಿಕ್ಲಿಗರ ಜನಾಂಗ ಹೊಸ ನೆಲೆಯ ಅಧ್ಯಯನದ ಕ್ರಮವು ಇಂದು ಜರೂರಾಗಬೇಕಾಗಿದೆ. ಆ ಹಿನ್ನೆಲೆಯಲ್ಲಿ ಸಿಕ್ಲಿಗರು ಕೂಡ ಬುಡಕಟ್ಟು ಜನಾಂಗದಲ್ಲಿಯ ಅಧ್ಯಯನ ಹಿಂದುಳಿದ ಹಾಗೂ ಅನಾಗರಿಕ ಜೀವನ ಹೊಂದಿದ ಬುಡಕಟ್ಟು ಜನಸಮುದಾಯವಾಗಿ ಹೊರ ಬಂದಿದೆ.

ಆಧಾರಗಳು

೧. ಚ.ನ. ಶಂಕರರಾವ್, ಭಾರತೀಯ ಸಮಾಜ, ೧೯೯೧
೨. ಡಾ. ಕಾಳೇಗೌಡ ನಾಗವಾರ ಮತ್ತು ಎನ್ ಹುಚ್ಚಪ್ಪ ಮಾಸ್ತರ್, ಗಿರಿಜನ ಸಂಸ್ಕೃತಿ, ೨೦೦೦
೩. ಡಾ. ಟಿ.ಎಂ.ಭಾಸ್ಕರ್, ಸುಡುಗಾಡು ಸಿದ್ಧರು ಒಂದು ಸಾಂಸ್ಕೃತಿಕ ಅಧ್ಯಯನ, ೨೦೦೦
೪. ಲಕ್ಕಿ ಪೃಥ್ವಿರಾಜ್ ಸುದರ್ಶನ, ಪಾರ್ಧಿ ಬುಡಕಟ್ಟು : ಒಂದು ಅಧ್ಯಯನ, ೨೦೦೦
೫. ಹಿ.ಚಿ. ಬೋರಲಿಂಗಯ್ಯ – ಬುಡಕಟ್ಟು ದೈವಾರಾಧನೆ, ೨೦೦೦
೬. ಕರ್ನಾಟಕ ಬುಡಕಟ್ಟುಗಳು – ಡಾ. ಎಚ್. ಜೆ . ಲಕ್ಕಪ್ಪಗೌಡ

ಅಧ್ಯಾಯ : ಮೂರು

ಕರ್ನಾಟಕದ ಸಿಕ್ಲಿಗರು: ಚಾರಿತ್ರಿಕ ಹಿನ್ನೆಲೆ

ಅಧ್ಯಾಯ : ಮೂರು

ಕರ್ನಾಟಕದ ಸಿಕ್ಲಿಗರು: ಚಾರಿತ್ರಿಕ ಹಿನ್ನೆಲೆ

ಒಂದು ಜನಾಂಗವನ್ನು ಕುರಿತು ನೋಡುವಾಗ ಆ ಜನಾಂಗದ ಆಚರಣೆ- ಸಂಪ್ರದಾಯಗಳನ್ನು ನೋಡಬೇಕಾಗುತ್ತದೆ. ಸಂಸ್ಕೃತಿಯನ್ನು ಅರಿಯಬೇಕಾಗುತ್ತದೆ. ಯಾವ ಬುಡಕಟ್ಟುಗಳು ಆಗಲಿ, ಜನಾಂಗವೇ ಆಗಲಿ ಅವುಗಳಿಗೆ ತನ್ನದೇ ಆದ ಚಾರಿತ್ರಿಕ ಸಂಗತಿ ಇರಲೇಬೇಕು. ಮಾನವನು ಹುಟ್ಟಿನಿಂದ ಸಾಯುವವರೆಗೂ ತನ್ನ ಜೀವಿತದ ಹಲವು ಘಟ್ಟಗಳನ್ನು ತಲುಪುತ್ತಾನೆ. ಅವನ್ನೆಲ್ಲಾ ಸಂಪೂರ್ಣವಾಗಿ ಬಳಸಿಕೊಂಡಾಗ ಸಮಾಜ ಪರಿಚಯವಾಗುತ್ತದೆ. ಮಾನವ ಕುಟುಂಬ, ಸಮುದಾಯಗಳು ಹೇಗೆ ಬೆಳವಣಿಗೆಯಾಗುತ್ತವೆ. ಅವುಗಳಲ್ಲಿ ಸಮಾಜವು ಅತ್ಯಂತ ಪ್ರಮುಖ ಪಾತ್ರವಹಿಸುತ್ತವೆ. ಹೀಗಾಗಿ ಸಮುದಾಯಗಳ ಚಿಂತನೆಯ ಧಾರೆಗಳನ್ನು ಅನುಸರಿಸಿಕೊಂಡು ಬಂದ ಘಟ್ಟಗಳನ್ನು ಪಾಲಿಸಬೇಕಾಗುತ್ತದೆ.

ಮಾನವಶಾಸ್ತ್ರ ಮತ್ತು ಸಮಾಜಶಾಸ್ತ್ರ ಮನುಷ್ಯನ ಎರಡು ಕಣ್ಣುಗಳಿದ್ದಂತೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ, ಅವಳಿ-ಜವಳಿ ಮಕ್ಕಳಿದ್ದಂತೆ ಈ ಎರಡು ಶಾಸ್ತ್ರಗಳ ಗುರಿ ಸಾರ, ಸತ್ಯ ಆಶಯಗಳೆಲ್ಲವು ಒಂದೇಯಾಗಿ ನಮಗೆ ಕಂಡು ಬರುತ್ತವೆ. ಕೆಲವೊಂದು ಬಾರಿ ಅತಿ ಅನ್ಯೋನ್ಯತೆಗಳ ಸಾಮ್ಯತೆ ಗುಣಗಳನ್ನು ಹೊಂದಿವೆ. ಇನ್ನೂ ಕೆಲವೊಮ್ಮೆ ಸೂಕ್ಷ್ಮವಾದ ವ್ಯತ್ಯಾಸಗಳನ್ನು ಕಾಣುತ್ತೇವೆ. ಮಾನವ ಮತ್ತು ಸಮಾಜ ಎರಡು ಬೇರ್ಪಡಿಸಲಾಗದ ಶಬ್ದಗಳಾಗಿವೆ. ಇವೆರಡಕ್ಕೆ ನಿಕಟ ಸಂಪರ್ಕ ಹೊಂದಿದ್ದರಿಂದ ತನ್ನ

ವಿಶೇಷತೆಯನ್ನು ಪಡೆದುಕೊಂಡಿವೆ. ಮಾನವನನ್ನು ಕುರಿತು ಅಧ್ಯಯನ ಮಾಡುವುದಾದರೆ ಅದು ಮಾನವಶಾಸ್ತ್ರ ಸಂಸ್ಕೃತಿ ಮತ್ತು ಸಮಾಜವನ್ನು ಕುರಿತು ಮಾಡುವ ಅಧ್ಯಯನ ಸಮಾಜಶಾಸ್ತ್ರವಾಗಿ ಕಂಡು ಬರುತ್ತದೆ.

ಒಂದು ಬುಡಕಟ್ಟು ಮತ್ತೊಂದು ಬುಡಕಟ್ಟುಗಳಲ್ಲಿ ವ್ಯತ್ಯಾಸವು ಇದೆ. ಸಾಮ್ಯತೆಯೂ ಇದೆ. ಬುಡಕಟ್ಟುಗಳು ಪ್ರದೇಶದಿಂದ ಕಾಲಗಳ ಘಟ್ಟದಿಂದ ತನ್ನ ಬದಲಾವಣೆ ಹೊಂದಿ ಭಿನ್ನತೆಯನ್ನು ಪಡೆಯುತ್ತಾರೆ. ಪ್ರತಿ ಹಂತದಲ್ಲಿ ತನ್ನ ತನವನ್ನು ಮೀರಿ ಸಾಮೂಹಿಕ ಸಾಂಸ್ಕೃತಿಕ ಆಚಾರ ವಿಚಾರಗಳನ್ನು ಪಡೆದುಕೊಂಡಿದೆ. ತನ್ನ ಸಮುದಾಯಗಳ ಬುಡಕಟ್ಟುಗಳ ಕುರಿತು ಚಿಂತನೆಗೆ ತೊಡಗಬೇಕಾಗಿದ್ದು, ಅತ್ಯಂತ ಅವಶ್ಯ. ಅವುಗಳ ಮೂಲ ಸ್ವರೂಪಗಳನ್ನು ಅರಿಯಲು ನಾವು ಚಾರಿತ್ರಿಕವಾದ ಹಿನ್ನೆಲೆ ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ನೋಡುವುದಾದರೆ ಕಾಡು ಕುರುಬರು, ಕಾಡುಗೊಲ್ಲರು, ಹಕ್ಕಿಪಿಕ್ಕಿಯರು, ಲಂಬಾಣಿಗರು, ಸುಡುಗಾಡ ಸಿದ್ಧರು, ಇಂತಹ ಅನೇಕ ಅಸಂಖ್ಯಾತ ಬುಡಕಟ್ಟುಗಳು ಎಲ್ಲೋ ಹುಟ್ಟಿ ಎಲ್ಲೋ ಮಾಯವಾಗುವುದಿಲ್ಲ. ಅವುಗಳಿಗೆ ಅವರದೇ ಆದ ಚಾರಿತ್ರಿಕ ಸಂಗತಿ ಇದ್ದೇ ಇರುತ್ತದೆ. ಈ ಸಾಂಸ್ಕೃತಿಕವಾಗಿ ಇತರ ಸಮುದಾಯಗಳೊಂದಿಗೆ ಭಾವನಾತ್ಮಕ ಒಡನಾಟ ಇದ್ದೆ ಇರುತ್ತದೆ. ಇವುಗಳಿಂದ ಕರ್ನಾಟಕದಲ್ಲಿ ಕಾಣ ಸಿಗುವ ಮತ್ತೊಂದು ಬುಡಕಟ್ಟು ಸಮುದಾಯವೆಂದರೆ ಸಿಕ್ಲಿಗರು.

ಸಿಕ್ಲಿಗರು ಈ ಜನಾಂಗ ಕರ್ನಾಟಕದ ಅನೇಕ ಕಡೆ ಅವರನ್ನು ನೋಡಲು ಸಿಗುತ್ತಾರೆ. ಆದರೆ ಇವರ ಜನಸಂಖ್ಯೆ ಕಡಿಮೆಯಾಗಿದೆ. ಇವರ ಕುಟುಂಬಗಳು ೩೮೫ ಗರಿಷ್ಠ ಕರ್ನಾಟಕದಲ್ಲಿ ಗುರುತಿಸಬಹುದು. ಇದಕ್ಕಿಂತ ಕಡಿಮೆ ಹೊಂದಿದ ಸಮುದಾಯದ ಕುಟುಂಬಗಳಿವೆ. ಇಂತಹ ಸಮುದಾಯದ ಬುಡಕಟ್ಟುಗಳು ಆದಿವಾಸಿಗಳಾಗಿದ್ದಾರೆ. ಭಾರತೀಯ ಮೂಲನಿವಾಸಿಗಳಾಗಿಯೂ ಕಂಡು ಬರುತ್ತಾರೆ. ಬಹುಶ್ರಮ ಸಂಸ್ಕೃತಿಯಿಂದ ಬಂದ ಜನಾಂಗವಾಗಿದೆ. ಕರ್ನಾಟಕದಲ್ಲಿ ಇಷ್ಟೊಂದು ಕಡಿಮೆ ಪ್ರಮಾಣದ ಜನಸಂಖ್ಯೆ ಹಾಗೂ ಕುಟುಂಬಗಳನ್ನು ಹೊಂದಿದ ಹಿನ್ನೆಲೆಯಲ್ಲಿ ನಾವು ಅವರನ್ನು ಕಂಡು ಹಿಡಿಯುವದು ಅಸಾಧ್ಯವಾಗಿದೆ. ಆದರೂ ಎಷ್ಟೋ ದೂರ ದೂರ ಹೋದರೂ ಅವರು ಶ್ರಮವಹಿಸಿಕೊಂಡು ದುಡಿಯುವ ಜನ. ಭಿಕ್ಷೆಯನ್ನು ಬೇಡಿ ಯಾವುದೇ ಆಸೆಗಾಗಿ ಬದುಕಿದ ಜನಾಂಗ ಅಲ್ಲ. ಅವರ ಬದುಕು ತುಂಬಾ ವಿಚಿತ್ರವಾಗಿ ಕಂಡು ಬರುತ್ತದೆ. ಅವರ ವಿಧಿ-ವಿಧಾನಗಳು ಸಂಪ್ರದಾಯಗಳು ಆಚರಣೆಗಳು ಇವರ ಬುಡಕಟ್ಟು ಸಮುದಾಯಗಳಿಗಿಂತ ಭಿನ್ನವಾಗಿ ಕಂಡು ಬರುತ್ತವೆ.

ಸಿಕ್ಲಿಗರ ಪದ ನಿಷ್ಪತ್ತಿ, ಈ ಸಮುದಾಯದ ಬಗೆಗೆ ಹೊಂದಿರುವ ಹಲವಾರು ಮಾಹಿತಿಗಳು ಅಲಭ್ಯವಾಗಿವೆ. ಭಾರತ ಸರ್ಕಾರದ ಜನಗಣತಿಯಲ್ಲಿ ಸಿಕ್ಲಿಗರ ಸೇರಿದ್ದಾರೆ ಎನ್ನುವುದನ್ನು ಕೆ.ಎಸ್. ಸಿಂಗ ಅವರು 'Anthropological Survey of India-1991' ರಲ್ಲಿ

ಕೈಗೊಂಡು The 'Scheduled Castes Revised Edition -2002' ಎಂಬ ಗ್ರಂಥವನ್ನು ರಚಿಸಿ ಅದರಲ್ಲಿ ಸಿಕ್ಲಿಗರ ಕುರಿತಾದ ಮಾಹಿತಿಯನ್ನು ಈ ರೀತಿಯಾಗಿ ವ್ಯಕ್ತಪಡಿಸುತ್ತಾರೆ.

SIKLIGAR

Also referred to as siqalgar and siqligar, locally they are called Tala-chabi wala, for they are still engaged in the making and selling of locks. They Patiala as place of origin. ThePopular opinion is that their tradiotion is to sikle, polishswords and other armour, and so they have come tobe called Sikligar, and deonotes an armourer or burnisher of metal. They are found chiefly in large towns and cantonments, but many of them probably returned themselves as lochars'. They migrated to Delhi from Haryana, Punjab, Uttar Pradesh, and Gujarat and are presently settled in rural.

Delhi and in resettlement colonies. Their Population in Delhi, according to the 1981 census, is 8832. it is belived that Marwari was their mother tongue but now they converse in Punjabi and Hindi, and write in the Devanagari and Gurmukhiscripts. They are non-vegetarians but do not eat pork and, of late, some are changing to vegetarianism. Wheat and rice constitute their staple food. Mustard oil, pure ghee and hydrogenated vegetable oils are used for used for cooking. Their men occasionally consume alcoholic drinks purchased from the market.

The Sikligar are divided into different exogamous gotars, such as joni, Dangi, Tankh, Tilbithia, Patwa, Churiababari, Andhelay, Ghatara, Khichchi and Narelababari. Themain functions of these gotras are to regulate marital alliance and to indicate alliance and to indicate descent. A change in their surnames has been reported, e.g. jooni has changed to joni. Both child as well as adult marriages are common. Matesare acquired by

exchange of sisters. After marriage, residence is patriocal. Monogamy is the common from though polygyny is permitted in case the first wife is barren. Married women use sindur, bindi and toe-ring as marriage symbols. The girl's parents give dowry either in cash or kind, which is generally equivalent to the one received in their son's marriage. Either spouse may seek divorce on grounds of adultery, maladjustment, cruelty, etc. Now divorce cases have reduced. Window and female divorce re marriages are performed though the palla bandhana ceremony.

Junior levirate and junior sororate are permitted. Most of them live either in extended families. Property is divided equally amoung the eldest son succeeds the father as head of the family women participate in ritual and religious activities but their partipation in politics, social activities and in the mechanism of social control is negligible. Women remain preoccupied with house hold chores and do not contribute to the family income. Birth pollution is observed for one and a quarter months. In in the tonsuring (mundan) ceremony, they just cut off a lock of hair rather then completely shave the head. Marriage rituals are performed in accordance with the Hindu Vedic rites or by circumambulation of the Guru Granth Saheb at the bride's residence. The marriage feast is hosted by the brides parents. The consummation of the marriage takes place at the bridegroom's residence.

Their traditional occupation was polishing arms and sharpening the edges of swords, knives, etc. They are landless and amajority of them are engaged in making and selling locks and keys. Some are shopkeepers. A few are employed in Government establishments and in defence services. Some are Labourers in industries, transport, etc. They send their mail children to work to supplement the family income According to the 1981

census, 25.71 per cent are returned as workers (47.42 percent males and 2.84 percent females). Of them, 5.64 percent workers are returned in the Household industry, 48.22 percent in other- than – household industries, 25.50 percent in construction and 10.08 percent in trade and commerce. The remaning 10.56 percent of the workers are engaged in various other services. Their economy is regulated through well-organized daily markets where the mode of transaction in cash. Their informal Cast Panchayat deals with matrimonial disputes, quarrels, property disputes, etc. Some of them pursue Hinduism whereas others are Sikhs.

They Celebrate either Hindu or Sikh festivals in consonance with their religious beliefs. Some families celebarate both Hindu and Sikh festivals. Sacred Places like Hardwar, Vaishno Devi, Suha ki mata (Panipat), Golden temple (Amritsar) Gurudwara Sheesh Ganj, Bangala Saheb, etc. are Visited on pilgrimage. The Brahman Priest or the Granthi Propitiates their Gods and off iciates over their life –cycle rituals. A few og them follow the Arya Samaj and Radha Soami sect. Their community – specific Folk – songs are sung by the women. Only the women participate in dance on Some happy occasions.

They do not accept food from the Chuhra, Chamar, Kanjar, Dhaiya, Sapare and Musalman but exchange pucca food with the Banjara, Tiagi, Baniya and Agri. The Brahman priest (Pandit) accepts either Sidha or pucca food them. They have free access to public places like temples, crematoria, etc.The Teachers, traders and business man from amongst them. Establish relations with people across community boundaries. Putative kinship relations like Dharam Bhai and bahen are forged with the members of other communities.

Their attitude towards formal Education and modern medicare is favourable. According to the 1981 Census, their literacy rate is 20.87 percent. The male and female litracy rates are 26.32 percent and 15.12 percent, respectively. The younger generations attitude towards family planning is favourable, whearas the older generation is either unaware of or else not in favour of family planning methods. They prefer to have two or three children. The facilities of drinking water, electricity, communication and the public distribution system are availed of Most of them use kerosene oil, coal or wood for cooking purposes and negligible number of them use cooking gas.

A few Sikligar have availed of self- employment facilities under the various rural employment programmes like the IRDP. Employment Gurantee Scheme, etc. ಇಂತಹ ಸಿಕ್ಲಿಗರರ ಕುರಿತು ಉಲ್ಲೇಖಗಳ ಮಾಹಿತಿಗಳು ದೊರಕುವದು ಇದನ್ನು ಬಿಟ್ಟರೆ ಬೇರೆಲ್ಲೂ ಸಿಗುವುದಿಲ್ಲ.

ಈ ಸಿಕ್ಲಿಗರು ಕರ್ನಾಟಕದಲ್ಲಿ ಇದ್ದಾರೆ. ಇವರ ಮೂಲವನ್ನು ಕಂಡು ಬರುವುದು ಸಿಖ್ ಧರ್ಮದಲ್ಲಿ. ಈ ಸಿಖ್ಖ್ ಧರ್ಮ ಗ್ರಂಥದ ಪಠಣ ಮಾಡುವುದಾದರೆ ಮೂಲದಲ್ಲಿ ಸಿಕ್ಲಿಗರು ಬಂದು ಹೋಗಿ ಕೊನೆಗೆ ಉಳಿದ ಸಣ್ಣ ಸಮುದಾಯ ಆದಿವಾಸಿಗಳೇ ಮುಂದೆ ಸಿಕ್ಲಿಗರು ಎಂಬ ಮಾತುಗಳು ಅಧ್ಯಯನದ ಹಿನ್ನೆಲೆಯಲ್ಲಿ ಕಾಣಸಿಗುತ್ತವೆ. ಸಿಕ್ಲಿಗರು ಜನಾಂಗವು ನದಿ, ದಂಡೆ,ಬೆಟ್ಟ-ಗುಡ್ಡಗಳಲ್ಲಿ ಮನೆ ಮಾಡಿಕೊಂಡು ನಂತರದಲ್ಲಿ ಕಾಡಿನಿಂದ ನಾಡಿಗೆ ಬಂದರು. ನಾಡಿನಲ್ಲಿ ಕೂಡಾ ಅನೇಕ ಸ್ಥಳಗಳಲ್ಲಿ ಕುಳಿತುಕೊಂಡು ಚರ್ಚೆಗೆ ತೊಡಗಿದಾಗ ಸಮುದಾಯಗಳು ಬಲಿಷ್ಟವಾದವು. ಸ್ವಾಭಿಮಾನದ ಸಂಕೇತವಾಗಿ ಭಾವಿಸಿಕೊಂಡು ಜೀವನ ನಿರ್ವಹಣೆಯನ್ನು ಕೈಗೊಂಡಿದ್ದಾರೆ.

ಸಿಕ್ಲಿಗರ ಸಮುದಾಯಗಳು ಅತೀ ಬಡತನ ಹಾಗೂ ಹಿಂದುಳಿದ ಜನಾಂಗವಾಗಿದ್ದು, ಮೇಲ್ನೋಟಕ್ಕೆ ಕಂಡು ಬರುತ್ತವೆ. ಭಾರತದಲ್ಲಿ ಅನೇಕ ಕಡೆ ಪಸರಿಸಿಕೊಂಡು ಹೋದ ಈ ಜನಾಂಗಕ್ಕೆ ಒಂದು ವಿಶಿಷ್ಟವಾದ ಸ್ಥಾನಮಾನಗಳು ಕೂಡಾ ಇವೆ. ಸಿಕ್ಲಿಗರ ಜನಾಂಗವನ್ನು ಅನೇಕ ಸಂಗತಿಗಳ ಮೂಲಕ ಹೊಸ ಬದುಕಿಗೆ ಸಾಂತ್ವನ ನೀಡುವದು ಬಂದಿದೆ. ಅವುಗಳ ಹಿನ್ನೆಲೆ

ಕಂಡುಕೊಂಡು ಗುರುತಿಸುವುದು ಅಸಾಧ್ಯ. ಅಲೆಮಾರಿಗಳಾದ ಈ ಜನಾಂಗ ಒಂದು ಕಡೆಯಿಂದ ಮತ್ತೊಂದು ಕಡೆಗೆ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಅಲೆಮಾರಿಯಾಗಿದ್ದುಕೊಂಡು ಬಂದುದರಿಂದ ಒಂದೇ ಸ್ಥಳಗಳಲ್ಲಿ ಸಿಗಲು ಅಸಾಧ್ಯ. ಅಲೆಮಾರಿಗಳಾದ ಸಿಕ್ಲಿಗರ ಸಂಸ್ಕೃತಿ ಇತರ ಬುಡಕಟ್ಟುಗಳ ಸಮುದಾಯಗಳ ಆದಿವಾಸಿಗಳಿಗಿಂತ ಭಿನ್ನವಾಗಿದೆ. ಇಂದಿನ ಆಧುನಿಕತೆಗೆ ತಕ್ಕಂತೆ ತನ್ನ ಬದಲಾವಣೆಯನ್ನು ಮಾಡಿಕೊಂಡು ಕಾಲಕ್ಕೆ ತಕ್ಕಂತೆ ತಮ್ಮ ಬದುಕನ್ನು ರೂಪಿಸಿಕೊಂಡು ಬರುವ ಸಂದರ್ಭಗಳನ್ನು ಕಂಡರೆ ನಮಗೆ ಅವರ ಜೀವನ ಆರ್ಥಿಕ ಸ್ಥಿತಿ ಚಿಂತಾಜನಕವಾಗಿ ಕಂಡು ಬರುತ್ತದೆ. ಈ ಚಿಂತಾಜನಕದ ಬದುಕಿನಲ್ಲಿ ಹಿಂದೂಗಳಲ್ಲಿ ನಡೆಯುವ ಸಾಮಾಜಿಕ ಸ್ವಾತಂತ್ರ್ಯದ ಹಂತವನ್ನು ಪಡೆದುಕೊಂಡು ಬರುತ್ತಾರೆ. ಬದುಕಿನ ನಾನಾ ಮುಖಗಳನ್ನು ಬೆಸುಗೆಯಾಗಿಸಿಕೊಂಡು ಸಿಕ್ಲಿಗರು ಬಂದಿದ್ದಾರೆ. ಅವರ ಚಾರಿತ್ರಿಕ ಬದುಕಿನ ಅಂಶಗಳ ಮಹತ್ವ ಅತ್ಯಂತ ಅವಶ್ಯವಾಗಿದೆ.

ಶ್ರಮಜೀವಿಗಳಾಗಿದ್ದುಕೊಂಡು ತಮ್ಮ ಮೂಲವನ್ನು ಕೇಳುವ ಜನಾಂಗಕ್ಕೆ ಆ ಮೂಲ ನಮಗೆ ಏನು ಗೋಚರಿಸುವುದಿಲ್ಲ ಎಂದು ಉತ್ತರಿಸುತ್ತಾರೆ. ಕರ್ನಾಟಕದಲ್ಲಿ ಸಿಕ್ಲಿಗರು ಅನೇಕ ಕಡೆ ಇದ್ದಾರೆ. ಆದರೆ ಮೈಸೂರು ಪ್ರದೇಶದಲ್ಲಿ ಇವರು ದೊರೆಯುವುದಿಲ್ಲ. ಉತ್ತರ ಹಾಗೂ ದಕ್ಷಿಣ ಕರ್ನಾಟಕದ ಕೆಲವು ಭಾಗಗಳಲ್ಲಿ ಇವರು ವಾಸವಾಗಿದ್ದಾರೆ. ಕ್ಷೇತ್ರಕಾರ್ಯ ಕೈಗೊಂಡು ಇದರಿಂದ ಅನೇಕ ಸಂಸ್ಕೃತಿ ಹಾಗೂ ವಿಸ್ಮೃತಿಗಳು ನಮಗೆ ಎದುರಾದವು. ಸಿಕ್ಲಿಗರು ವಿಶೇಷವಾಗಿ ಮೈಸೂರು, ಬೆಂಗಳೂರು, ಧಾರವಾಡ, ಬೆಳಗಾವಿ ಹೊಂದಿದ ಕರ್ನಾಟಕ ಪ್ರದೇಶದಲ್ಲಿ ಸಿಕ್ಲಿಗರು ಅನೇಕ ಕಡೆ ದೊರೆಯುತ್ತಾರೆ. ಅಲ್ಲಿಯೇ ವಾಸವಾಗಿದ್ದಾರೆ. ಇಲ್ಲಿ ಗಮನಿಸಬೇಕಾದ ಕುತೂಹಲದ ಅಂಶವೆಂದರೆ ಉತ್ತರ ಕರ್ನಾಟಕ ಸಿಕ್ಲಿಗರು ಬಹಳಷ್ಟು ಅಂತರದ ವ್ಯತ್ಯಾಸ ಕಂಡು ಬರುತ್ತದೆ.

ಸಿಕ್ಲಿಗರು ಒಂದು ಹಳ್ಳಿಗಾಡಿನ ಪ್ರದೇಶದಲ್ಲಿ ವಾಸವಾಗಿಯೇ ಇಲ್ಲ. ಅವರು ನಗರ ಮಹಾನಗರಗಳಲ್ಲಿ ವಾಸವನ್ನು ಮಾಡುತ್ತಾರೆ. ಇಲ್ಲಿಯೇ ವಾಸವಾದ ಜನರನ್ನು ಕಂಡಾಗ ನಮಗೆ ಆಶ್ಚರ್ಯವಾಗುತ್ತದೆ. ಇಲ್ಲಿಯ ಸ್ಥಿತಿ ಹೀಗೆಯಾಗಿದೆ. ಇವರ ಹಾಗೆ ತಾಲೂಕು ಹೋಬಳಿಗಳ ಲ್ಲಿರುವ ಸಿಕ್ಲಿಗರ ಸ್ಥಿತಿ ಇನ್ನೂ ಚಿಂತಾಜನಕವಾಗಿದೆ. ಅವರ ಜೀವನವಿಧಾನ ಕೆಲಸ ಕಾರ್ಯಗಳ ಮೂಲಕ ಗಮನ ಸೆಳೆದಿದೆ. ಶ್ರಮ ಸಂಸ್ಕೃತಿಯ ಬುಡಕಟ್ಟು ಜನಾಂಗ ಸಿಕ್ಲಿಗರು ಆಗಿದ್ದಾರೆ. ಇವರಿಗೆ ಯಾವುದೇ ಸೌಲಭ್ಯಗಳು ಇಲ್ಲಿ ದೊರೆತಿಲ್ಲ. ಆ ಎಲ್ಲಾ ಸೌಲಭ್ಯಗಳಿಂದ ವಂಚಿತರಾ ಗಿದ್ದರೂ ತಮ್ಮ ಬದುಕನ್ನು ಹಸನಗೊಳಿಸಲು ಇಲ್ಲಿ ಪ್ರಯತ್ನಿಸಿದ್ದಾರೆ. ಸಿಕ್ಲಿಗರ ಬುಡಕಟ್ಟು ಜನಾಂಗಕ್ಕೆ ಸೇರಿದವರಾಗಿದ್ದಾರೆ. ಎಂಬುದರಲ್ಲಿ ಎರಡು ಮಾತಿಲ್ಲ. ಇವರ ಮೂಲವನ್ನು ಅರಿಯಬೇಕಾಗಿದೆ.

ನಾವೆಲ್ಲಾ ಮತ್ತೇ ಉತ್ತರ ಭಾರತದ ಕಡೆಗೆ ಹೋಗಬೇಕು ಉತ್ತರ ಭಾರತದಲ್ಲಿ ಇವರು ನೆಲೆಸಲು ಅಲ್ಲಿ ಸಮೃದ್ದಿಯಾದ ಸಂಪತ್ತು ಹಾಗೂ ನದಿಗಳು ಎಲ್ಲವೂ ಇದ್ದುದರಿಂದ ಶ್ರಮದ ಮೂಲಕ ತಮ್ಮ ಜೀವನ ನಡೆಸಿಕೊಂಡು ಬಂದಿರಬೇಕು.

ಉತ್ತರ ಭಾರತದಿಂದ ಬಂದ ಈ ಬುಡಕಟ್ಟುಗಳು ಪಂಜಾಬ್ ಪ್ರಾಂತಕ್ಕೆ ಸೇರಿದ್ದರು. ಪಂಜಾಬ ಸಿಖ್ಖರ ಮೂಲನೆಲೆಗಳನ್ನು ಗುರುತಿಸಲು ಸಾಧ್ಯವಾಗಿದೆ. ಸಿಕ್ಲಿಗರು ಸಿಖ್ ಧರ್ಮದ ಜನಾಂಗದ ಗುಂಪುಗಳಲ್ಲಿ ಇವರು ಒಬ್ಬರಾಗಿದ್ದರು. ಆದರೆ ಇವರ ರೀತಿ ನೀತಿಗಳೇ ಬೇರೆಯಾಗಿವೆ. ಹಾಗಾಗಿ ಮೂಲದಲ್ಲಿ ಸಿಕ್ಲಿಗರು ಇವರೇ ಆಗಿದ್ದಾರೆ. ಇವರು ಸಿಕ್ಕಲಿಗ ಭಾಷೆ ಆಡುವುದರಿಂದ ಸಿಕ್ಲಿಗರು ಎಂದು ಕರೆಯುತ್ತಾರೆ. ಸಿಕ್ಲಿಗರು ಯಾವ ಪ್ರದೇಶದವರು ಯಾವ ಮೂಲದಿಂದ ಬಂದಿದ್ದಾರೆ ಎಂಬುದನ್ನು ನೋಡಬೇಕಾಗಿದೆ.

ಸಿಕ್ಲಿಗರ ಜನಾಂಗ ಮೂಲತಃ ಉತ್ತರ ಭಾರತದವರೆಂದು ಕೆಲವರು ಹೇಳಿದರೆ ಮತ್ತೇ ಕೆಲವರು ರಾಜಸ್ಥಾನ ಮೂಲನಿವಾಸಿಗಳೆಂದು ಹೇಳುತ್ತಾರೆ. ಈ ಸಿಕ್ಲಿಗರರ ಬುಡಕಟ್ಟು ಜನಾಂಗ ತನ್ನ ಮೂಲವನ್ನು ಪಂಜಾಬದ ಮೂಲಕ ಗುರುತಿಸಿಕೊಳ್ಳಲು ಸಾಧ್ಯವಾಗುತ್ತದೆ. ಸಿಖ್ಖ- ಸಿಕ್ಕಲಗಾರ, ಸಿಕ್ಕಲಿಗರ , ಸಿಕ್ಲಿಗರು ಎಂಬ ಬುಡಕಟ್ಟುಗಳ ಜನಾಂಗಗಳು ಇವು ಬೇರೆ ಬೇರೆ ಹೆಸರುಗಳಿಂದ ಕರೆದು ಇವರೆಲ್ಲರೂ ಒಡೆದು ಹೋಗಿದ್ದರಿಂದ ಈ ಹೆಸರು ಬಂದು ಕರ್ನಾಟಕದಲ್ಲಿ ನೆಲೆನಿಂತು ಸಿಕ್ಲಿಗರು ನಿಜವಾದ ಸಿಕ್ಲಿಗರ ಸಂಸ್ಕೃತಿಯನ್ನು ಹೊಂದಿದವರಾಗಿದ್ದರು. ಸಿಕ್ಲಿಗರು ಮೂಲತಃ ಸಿಖ್ಖ ಸಮುದಾಯಕ್ಕೆ ಸಂಬಂಧಪಟ್ಟವರು. ಸಿಖ್ಖ ಧರ್ಮದಿಂದ ಸಿಕ್ಲಿಗರು ಬುಡಕಟ್ಟು ಜನಾಂಗದಲ್ಲಿ ಹುಟ್ಟಿದವರೆಂದು ಮೇಲಿನ ನೋಟಕ್ಕೆ ಕಂಡು ಬರುತ್ತದೆ.

'ಸಿಖ್ + ಸಿಖ್ಖ= ಸಿಕ್ಲಿಗರರು'

ಸಿಖ್-ಜನಾಂಗದಿಂದ ಒಡೆದು ಬಂದಂತಹ ಜನರು ಇವರಾಗಿದ್ದಾರೆ. ಸಿಖ್ಖ ಎನ್ನುವುದು 'ಸ್ಥಿರ' ಸಿಕ್ಲಿಗರ ಎನ್ನುವುದು ಚಲನಶೀಲ 'ಗರ' ಕ್ಕೆ ಉದಾ: ಬಳೆಗಾರ, ಮೀನುಗಾರ, ಈಜುಗಾರ, ಹೀಗೆ ಈ ಪದವು ಸೃಜನಶೀಲತೆಯನ್ನು ತೋರಿಸಿಕೊಡುತ್ತದೆ. ಸಿಕ್ಲಿಗರ ಅನ್ನುವದು ಅಲೆಮಾರಿ ಎನಿಸುತ್ತದೆ. ಸ್ಥಿರವಲ್ಲದವರು.

Sikligar	(ದಿಲ್ಲಿ)ಉತ್ತರ ಪ್ರದೇಶ
Sikligar	ಹಿರಿಯಾಣ
Sikligar	ಹಮಾಚಲ ಪ್ರದೇಶ

Sikligar ಪಂಜಾಬ

Sikligar ಚಂಡಿಗಡ

Sikligar ಕರ್ನಾಟಕ

ಎನ್ನುವ ಪದಗಳು ಭಾರತದೇಶದಲ್ಲಿ ಪ್ರಚಲಿತದಲ್ಲಿವೆ. ಹಾಗೇ ಕರ್ನಾಟಕದಲ್ಲಿ ಸಿಕ್ಲಿಗರ ಎಂಬ ಪದವು ಬಳಕೆಯಲ್ಲಿರುವುದನ್ನು ಕ್ಷೇತ್ರಕಾರ್ಯದ ಮೂಲಕ ಸಂಶೋಧನೆಯನ್ನು ಕೈಗೊಳ್ಳಲಾಗಿದೆ. ಹುಬ್ಬಳ್ಳಿಯ ಸಿಕ್ಲಿಗರು ಎಂಬ ತಮ್ಮನ್ನು ಸಿಖ್ಖ್-ಸಿಕ್ಲಿಗರ್ ಎಂದು ಕರೆಯಿಸಿಕೊಳ್ಳಲು ಇಷ್ಟಪಡುತ್ತಾರೆ. ಏಕೆಂದರೆ ಸಿಕ್ಕಲಗಾರರ ಜೊತೆಗೆ ತಮ್ಮನ್ನು ಗುರುತಿಸುತ್ತಾರೆ ಎಂಬ ಆತಂಕ ಅವರಿಗಿದೆ. ಸಿಕ್ಕಲಗಾರರು ಮಾಡುವಂತಹ ಕನಿಷ್ಠದರ್ಜೆಯ ಕೆಲಸ ಇವರು ಮಾಡುವುದಿಲ್ಲ. ಸಿಕ್ಲಿಗರು ತುಂಬಾ ಸ್ವಾಭಿಮಾನವುಳ್ಳವರು.

ಸಿಕ್ಲಿಗರು ಬುಡಕಟ್ಟು ಜನಾಂಗಕ್ಕೆ ಸೇರಿದ್ದರಿಂದ ಉತ್ತರ ಭಾರತದಿಂದ ಬಂದು ನೆಲೆಯೂರಿದರು. ೧೭೮೦ರಿಂದ ೧೮೩೯ ರ ಅವಧಿಯಲ್ಲಿ ಪಂಜಾಬನ್ನು ರಾಜಾ ರಣಜಿತ್‌ಸಿಂಗ್ ಆಳ್ವಿಕೆ ಮಾಡಿಕೊಂಡಿದ್ದನು. ಈತನ ಕಾಲದ ಆಡಳಿತವನ್ನು ಕಂಡರೆ ಎಲ್ಲರೂ ದಂಗಾಗಿ ಹೋಗುವ ಸಂಸ್ಕೃತಿ ಹೊಂದಿದ್ದರು. ಆಡಳಿತದಲ್ಲಿ ಚಾಣಾಕ್ಷತನ ಆತನ ಸೈನ್ಯ ಪದ್ದತಿಗಳು ಗಂಭೀರವಾದ ನೆಲೆಯನ್ನು ಹೊಂದಿದ್ದವು. ರಾಜಾ ರಣಜಿತ್‌ಸಿಂಗ್ ಬಲಿಷ್ಠನಾಗಿದ್ದರಿಂದ ನಾಲ್ಕು ರಾಜ್ಯಗಳನ್ನು ತನ್ನ ಆಡಳಿತಕ್ಕೆ ಒಳಪಡಿಸಿಕೊಂಡಿದ್ದನು. ಪಂಜಾಬ್, ಕಾಶ್ಮೀರ, ಲಾಹೋರ್, ಪೇಶಾವರ, ಕಾಗಾರ್ ಎಂಬ ನಾಲ್ಕು ರಾಜ್ಯಗಳು ಆಯಾಕಟ್ಟಿನ ಸಮೃದ್ಧಿ ಸಂಪತ್ತಿನಿಂದ ಕೂಡಿದ್ದವು. ಅವನ್ನೆಲ್ಲಾ ವಶಪಡಿಸಿಕೊಂಡು ತನ್ನ ದರ್ಭಾರ ಕೈಗೊಂಡಿದ್ದನು. ರಣಜಿತ್‌ಸಿಂಗ್ ಮಹಾಪರಾಕ್ರಮಿಯಾಗಿದ್ದ. ಸಿಖ್ಖ ಸಮುದಾಯದ ಜನಾಂಗಕ್ಕೆ ಸಹಕಾರಿಯಾಗಿದ್ದ ಈತನ ಆಡಳಿತ -ನೀತಿಗಳು ಎಲ್ಲಾ ರಾಜ್ಯಗಳ ಮೇಲೆ ಪ್ರಭಾವ ಹೊಂದಿದ್ದವು. ಸಿಖ್ಖರು ಪಂಜಾಬದ ಮೂಲಕ ತಮ್ಮ ಧರ್ಮಗಳ ನೆಲೆಗಳಿಗೆ ಸ್ಫೂರ್ತಿ ನೀಡಿದವು. ಸಿಖ್ಖರು ಪಂಜಾಬದ ಮೂಲಕ ತಮ್ಮ ಆಚರಣೆ ಸಂಪ್ರದಾಯಗಳನ್ನೂ ಹೊಂದಿದ್ದಾರೆ. ಸಿಖ್ಖಸಮುದಾಯವೂ ಸಹಿತ ಅದರಲ್ಲೂ ರಣಜಿತ್‌ಸಿಂಗ್ ಕೂಡಾ ಗುರುನಾನಕ್ ಹಾಗೂ ಗುರುದ್ವಾರದ ಮೂಲಕ ಎಲ್ಲರನ್ನೂ ಕೂಡಿಸಿಕೊಂಡು ಸಾಮರಸ್ಯದಿಂದ ಬಾಳುತ್ತಿದ್ದರು. ಆ ಹಿನ್ನೆಲೆಯಲ್ಲಿ ಹೆಣ್ಣು-ಗಂಡು ಎಂಬ ಬೇಧ ಭಾವವಿಲ್ಲದೇ ಅವರೆಲ್ಲರನ್ನು ಸೇರಿ ಸಾಮರಸ್ಯ ಹಾಗೂ ಐಕ್ಯತೆಯಿಂದ ಜೀವನ ಸಾಗಿಸುತ್ತಿದ್ದಾರೆ. ಕಳೆದ ನೂರಾರು ವರುಷಗಳಿಂದ ಸಿಖ್ಖರು ಧರ್ಮೋಪದೇಶ ಮಾಡುತ್ತಾ ಪ್ರಭಾವವನ್ನು ಬೀರಿದರು.

ಆಡಳಿತವನ್ನು ನಿರ್ವಹಿಸಲು ಗಟ್ಟಿಯಾದ ಶಸ್ತ್ರಾಸ್ತ್ರಗಳನ್ನು ತಯಾರಿಸಲು ಬಲಿಷ್ಠವಾದ ವ್ಯಕ್ತಿಗಳು ಬೇಕಾಗಿದ್ದರು. ಅವರು ಗಟ್ಟಿಯಾದ ದೇಹವನ್ನು ಹೊಂದಿದ್ದರು. ಕೆಲಸ ಕಾರ್ಯಗಳಲ್ಲಿ ಎಂದೂ ಹಿಂದೆ ಬೀಳಲಿಲ್ಲ. ಹೀಗೆ ಕಬ್ಬಿಣದ ಕೆಲಸಗಳನ್ನು ನಿರ್ವಹಿಸಿಕೊಂಡು ಬರಲು ಜನಾಂಗ ಬೇಕಾಗಿತ್ತು. ಸಿಕ್ಲಿಗರ ಎಂಬ ಬುಡಕಟ್ಟು ಜನಾಂಗವು ಪಂಜಾಬದಲ್ಲಿದ್ದರಿಂದ ರಣಜಿತ್‌ಸಿಂಗ್ ಸಹಜವಾಗಿ ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡು ಯುದ್ಧದ ಹಾಗೂ ಆಡಳಿತಕ್ಕೆ ಬೇಕಾದ ಸಕಲ ಶಸ್ತ್ರಾಸ್ತ್ರಗಳನ್ನು ತಯಾರಿಕೆಯಲ್ಲಿ ತೊಡಗಿಸಿಕೊಂಡಿದ್ದನು. ಸಿಕ್ಲಿಗರ ಸಮುದಾಯಕ್ಕೆ ಸಹ ಗುರುಗೋವಿಂದಸಿಂಗ್‌ರು ಒಮ್ಮೆ ಕಬ್ಬಿಣದ ಸಳಿಯನ್ನು ಕೈಗೆ ನೀಡಿದ್ದರಿಂದ ಅದರಲ್ಲಿಯೇ ಏನೋಶಕ್ತಿಯಿದೆ ಎಂದು ಭಾವಿಸಿದ ಜನ ಸಿಕ್ಲಿಗರು ಕಬ್ಬಿಣದ ವೃತ್ತಿ ಕೈಗೊಂಡು ಶ್ರಮಪಟ್ಟು ಅವರು ತಯಾರಿಸುವ ವಿಧಾನಗಳು ಅನುಕರಣೀಯವಾಗಿವೆ.

ಸಿಕ್ಲಿಗರು ಈ ಮೂಲಕ ಭಾರತದಲ್ಲಿ ನೆಲೆನಿಲ್ಲಲು ಕಾರಣವಾಯಿತು. ಆ ಮೂಲಕ ಈ ಸಿಕ್ಲಿಗರು ಅಲ್ಲಿಯೇ ನೆಲೆ ನಿಂತುಕೊಂಡರೆಂಬ ಮಾಹಿತಿಗಳು ದೊರಕುತ್ತವೆ. ವಿನಾಃ ಈ ಜನಾಂಗದ ಕುರಿತು ಎಲ್ಲೂ ಹೇಗೆ ಬಂದರೆಂಬುದನ್ನು ಕುರಿತು ಯಾವುದೇ ಪುಸ್ತಕಗಳು, ಸಂಶೋಧನಾ ಗ್ರಂಥಗಳಲ್ಲಿ ದೊರಕುತ್ತಿಲ್ಲ. ಲಿಖಿತರೂಪದಲ್ಲಿ ಈ ಜನಾಂಗ ಕುರಿತು ಯಾವ ದಾಖಲೆಗಳೂ ನಮಗೆ ಗೋಚರಿಸುವುದಿಲ್ಲ. ಸ್ಪಷ್ಟವಾಗಿ ತಿಳಿದು ಬರುತ್ತಿಲ್ಲ. ಇಷ್ಟೊಂದು ಗಂಭೀರ ಹಾಗೂ ಬಿಡಿಸಲಾರದ ಒಗಟಿನ ರೂಪದಲ್ಲಿ ನಮಗೆ ಕಂಡು ಬರುತ್ತವೆ. ದಕ್ಷಿಣ ಭಾರತದಿಂದ ಸಿಕ್ಲಿಗರ ಜನಾಂಗ ಬಂದರೆಂದು ಯಾವ ಮೂಲಾಜಿಲ್ಲದೇ ಹೇಳಬಹುದಾಗಿದೆ. ಅದಕ್ಕೆ ಪಂಜಾಬದ ರಣಜಿತ್‌ಸಿಂಗ್‌ನ ಆಡಳಿತ ಹಾಗೂ ಆತನ ನೀತಿಯೇ ಕಾರಣವಾಗಿದೆ. ಹೀಗಾಗಿ ಅಲ್ಲಿಯೇ ಬಂದು ನೆಲೆಸಿದ್ದಾರೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಹಲವು ಕಡೆ ಸಂದರ್ಶನ ನಡೆಸಿದಾಗಲೂ ಅಪೂರ್ಣವಾದ ಮಾಹಿತಿಗಳು ದೊರಕಿದವು. ಕೊನೆಗೆ ಬೆಂಗಳೂರಿನಲ್ಲಿ ವಾಸವಾಗಿರುವ ಈ ಬುಡಕಟ್ಟು ಜನಾಂಗದ ಹಿರಿಯರಿಂದ ಈ ಮಾಹಿತಿಯನ್ನು ಪಡೆಯಲಾಯಿತು. ಆ ಪ್ರಕಾರ ಸಿಕ್ಲಿಗರು ಮೂಲತಃ ಸಿಖ್ ಸಮುದಾಯಕ್ಕೆ ಸೇರಿದವರು. ಆದರೆ ಆ ಸಿಖ್‌ರು ಈ ಸಿಕ್ಲಿಗರು ಆಚರಣೆ ಸಂಪ್ರದಾಯಗಳಲ್ಲಿ ಯಾವುದೇ ವ್ಯತ್ಯಾಸಗಳಿಲ್ಲ. ಇಬ್ಬರು ಏಕರೀತಿಯನ್ನು ಅನುಸರಿಸುವವರೇ ಆಗಿದ್ದಾರೆ.

ಅವರು ಧಾರ್ಮಿಕಾಚರಣೆಗಳಿಗೆ ಗುರುದ್ವಾರಕ್ಕೆ ಹೋದಂತೆ ಇವರು ಗುರುದ್ವಾರಕ್ಕೆ ಹೋಗುತ್ತಾರೆ. ಅವರ ಆಚಾರ ವಿಚಾರ ಧಾರ್ಮಿಕ ಮನೋಭಾವನೆಗಳು ನಡೆನುಡಿಗಳು ತತ್ವ ಸಿದ್ಧಾಂತಗಳೆಲ್ಲವೂ ಸಿಖ್‌ರ ಪರಿಪಾಲನೆಯನ್ನು ಈ ಸಿಕ್ಲಿಗರು ಮಾಡುತ್ತಾರೆ. ಇಬ್ಬರೂ ಒಂದೇ ಆಗಿ ಕಂಡು ಬರುತ್ತಾರೆ. ಹಾಗೆ ನೋಡಿದರೆ ಸಿಖ್‌ರು ಒಳ್ಳೆಯ ಗುಣಮಟ್ಟದಲ್ಲಿ ಬೆಳವಣಿಗೆಯಾಗಿದ್ದಾರೆ. ಆರ್ಥಿಕ ದೃಷ್ಟಿಯಿಂದ ಬಲಿಷ್ಠರಾಗಿದ್ದಾರೆ. ಸುಸಂಸ್ಕೃತವಾದ ಜೀವನ ಸಾಗಿಸುತ್ತಾರೆ. ಸಿಕ್ಲಿಗರು ಈ ಅವಕಾಶಗಳು ಒಂದು ದೊರೆಯುತ್ತಿಲ್ಲ. ಎಂಬುದನ್ನು ಮನಗಾಣಬೇಕು. ಆರ್ಥಿಕ ಸ್ಥಿತಿ ಹೇಳತೀರದು. ಇಲ್ಲಿಯೇ ಸಿಕ್ಲಿಗರು ಆರ್ಥಿಕ ಪರಿಸ್ಥಿತಿ ಗುಣಮಟ್ಟದಿಂದ ಸಿಖ್‌ರಿಗಿಂತ ಕೆಳಗೆ ಉಳಿದಿದ್ದಾರೆ. ಹಾಗೇ ಇವರ ಬುಡಕಟ್ಟು ಜನಾಂಗಗಳಿಗಿಂತ ತೀರ ಹಿಂದುಳಿದಿದ್ದಾರೆ.

ಸಿಕ್ಕಲ' ಎನ್ನುವ ಪದವನ್ನು ನೋಡಿದಾಗ ಇದು ಆ ಕಾಲದಲ್ಲಿ ಪಂಜಾಬನ್ನು ಆಳುತ್ತಿದ್ದ ರಾಜಾ ರಣಜಿತ್‌ಸಿಂಗ್‌ರ ಕಾಲದಲ್ಲಿಯೇ ಇದ್ದರೂ ಎನ್ನುವುದಾದರೆ ಮೂಲ ಸಿಖ್ಖರೋ ಅಥವಾ ಸಿಕ್ಲಿಗ ಎನ್ನುವುದು ಚರ್ಚೆಯಾಗಬೇಕಾಗಿದೆ. ಸಿಖ್ಖರ ಅನೇಕ ಪಂಗಡಗಳಾಗಿ ಈ ಸಿಕ್ಲಿಗ ಬುಡಕಟ್ಟುಗಳಾಗಿ ಬಂದಿರಲಿಕ್ಕೆ ಸಾಧ್ಯವಿದೆ. ಸಿಕ್ಲಿಗ ಎನ್ನುವುದು ರಾಜಾ ರಣಜಿತ್‌ಸಿಂಗ್‌ರ ಯುದ್ಧದ ಸಾಮಾನುಗಳನ್ನು ಶಸ್ತ್ರಾಸ್ತ್ರಗಳನ್ನು ತಯಾರಿಸುವಾಗ ಅದಕ್ಕೆ ಸಾಣೆ ಹಿಡಿದು ಹರಿತ ಹಾಗೂ ಹೊಳಪು ಬರುವ ಹಾಗೇ ಮಾಡುವುದರಿಂದ ಸಿಕ್ಲಿಗರೆಂದು ಕರೆಯುತ್ತಾರೆ. ಸಿಕ್ಲಿಗರು ಜನಾಂಗ, ಸಿಕ್ಲಿಗರು ಸಮುದಾಯ, ಸಿಕ್ಲಿಗ ಆದಿವಾಸಿಗಳೆಂದು ಕರೆದುಕೊಂಡು ಬರುತ್ತಿದ್ದಾರೆ. ಸಿಕ್ಲಿಗರ ಬುಡಕಟ್ಟು ಜನಾಂಗವು ಪ್ರದೇಶದಿಂದ ಪ್ರದೇಶಕ್ಕೆ ಕಾಲದಿಂದ ಕಾಲಕ್ಕೆ ಅಲೆಮಾರಿಯಾಗಿ ಹೋಗಿದ್ದರಿಂದ ತಮಗೆ ಬೇಕಾದ ಅಥವಾ ಬೇಡವಾದ ಸ್ಥಾನವನ್ನು ಬಿಟ್ಟು ಹೊರಟು ಹೋದರೆ ಅದನ್ನು ಪೂರ್ವಾನುಮತದಿಂದ ನೋಡಿಕೊಂಡು ಆಯಾ ಪ್ರದೇಶದಲ್ಲಿ ಅವರಿಗೆ ಬೇರೆ ಬೇರೆ ಹೆಸರುಗಳಿಂದ ಕರೆಯುವ ವಾಡಿಕೆ ಬಂದಿರಬೇಕು. ಹೀಗಾಗಿ ಈ ಸಿಕ್ಲಿಗರು, ಸಿಕ್ಕಲಗಾ, ಸಿಕ್ಕಲಿಗರ್, ಶಿಕಾಲಗಾರ, ಶಿಕ್ಕಲಿಗರ್ ಎಂಬ ವ್ಯತ್ಯಾಸಗಳಿಂದ ಕರೆಯುವುದುಂಟು. ಈ ಸಿಕ್ಲಿಗರು ವೃತ್ತಿ ಖಡ್ಗ, ಭರ್ಚಿ, ಹರಿತವಾದ ತಲವಾರು ಇಂತಹ ಕಬ್ಬಿಣದ ಕೆಲಸವನ್ನು ಸಂಪೂರ್ಣವಾಗಿ ಕೈಗೊಂಡಿದ್ದರಿಂದ ಬಲಿಷ್ಠವಾದ ಆಯುಧಗಳನ್ನು ತಯಾರಿಸುತ್ತಿದ್ದರು. ಸಾಣೆ ಹಿಡಿಯುವ ವೃತ್ತಿ ಕೈಗೊಂಡಿದ್ದರು. ಕಬ್ಬಿಣದ ಕೆಲಸದ ಮೇಲೆಲ್ಲಾ ಹೆಚ್ಚು ನಂಬಿಕೆಯಿಟ್ಟುಕೊಂಡು ಶ್ರಮಜೀವಿಗಳಾದ್ದರಿಂದ ಸಿಕ್ಲಿಗರ ಜನ ಎಂದು ಕರೆಯಲಾಗಿದೆ.

ಬಲಿಷ್ಠವಾದ ಸಿಕ್ಲಿಗರು ತಮ್ಮ ಶ್ರಮದಿಂದ ಕಬ್ಬಿಣವನ್ನು ಉಪಯೋಗಿಸಿಕೊಂಡು ಅನೇಕ ಸಾಮಾನು ಸರಂಜಾಮುಗಳನ್ನು ತಯಾರಿಸಿದ್ದರಿಂದ ಪಂಜಾಬ ಹಾಗೂ ಇತರೆ ನಾಲ್ಕು ರಾಜ್ಯಗಳ ರಾಜನಾದ ರಾಜಾ ರಣಜಿತ್ ಸಿಂಗ್‌ರು ಇವರನ್ನು ಹತ್ತಿರಕ್ಕೆ ಕರೆದುಕೊಂಡು ಯುದ್ಧಕ್ಕೆ ಬೇಕಾದ ಸಕಲ ವಸ್ತುಗಳನ್ನು ತಯಾರಿಸುತ್ತಿದ್ದರು. ಅವರ ಕಠಿಣ ಪರಿಶ್ರಮದಿಂದ ಮಾಡುವ ಕೆಲಸದಲ್ಲಿ ಸತ್ಯ ನಂಬಿಕೆ ಹೊಂದಿದ್ದರಿಂದ ಇದೇ ಅವರ ವೃತ್ತಿಯೇ ಆಯಿತು. ರಾಜನು ಅವರ ಮೇಲೆ ಅಪಾರವಾದ ನಂಬಿಕೆಯಿಟ್ಟುಕೊಂಡನು. ಪಂಜಾಬಿನ ಹುಲಿಗಳೆಂದು, ಶೂರರೆಂದು ಧೈರ್ಯಶಾಲಿಗಳೆಂದು ಇವರನ್ನು ಕರೆಯುತ್ತಿದ್ದರು. ಈ ಸಿಕ್ಲಿಗರು ಒಂದು ಪವಾಡಸದೃಶವಾದ ನಂಬಿಕೆಯನ್ನು ಪಡೆದುಕೊಂಡು ದೊಡ್ಡ ಸಾಧನೆಯನ್ನು ಮಾಡಿದ್ದಾರೆ. ಇಂತಹ ಸಿಕ್ಲಿಗರ ಜನಾಂಗವನ್ನು ಕಂಡ ಅನೇಕ ಸಣ್ಣ ಪುಟ್ಟ ಸಾಮಂತರು, ಮಾಂಡಳಿಕರು, ಸಂಸ್ಥಾನದ ಅರಸರು ಪಂಜಾಬದ ರಾಜಾ ರಣಜಿತ್‌ಸಿಂಗ್‌ನ ಸ್ನೇಹ ಬೆಳೆಸಿಕೊಂಡಿದ್ದರು. ಅವರ ಮೂಲಕ ತಮ್ಮ ಸಂಸ್ಕೃತಿ ಪ್ರತಿಪಾದಿಸಿಕೊಂಡಿದ್ದರು.

ತಮ್ಮ ಮೇಲೆ ವೈರಿಗಳು ದಾಳಿಮಾಡಿದಾಗ ಅಥವಾ ಬ್ರಿಟಿಷರು, ಮರಾಠರು. ದಾಳಿ ಮಾಡಲು ಸೂಚನೆ ಬಂದಾಗ ತಮ್ಮ ಗೆಳೆಯರಾದ ರಣಜಿತ್ ಸಿಂಗ್‌ನ ಸಹಾಯ ಪಡೆದು ಸಿಕ್ಲಿಗರನ್ನು ತಮ್ಮ ಸೈನ್ಯದಲ್ಲಿ ಸೇರಿಸಿಕೊಳ್ಳುತ್ತಿದ್ದರು. ಇಂತಹ ಕಾಲದಲ್ಲಿ ಆಗ ಪ್ರಮುಖವಾಗಿ ಸಿಕ್ಲಿಗರ- ರನ್ನು ತಗೆದುಕೊಂಡರು. ಏಕೆಂದರೆ ಹೈದ್ರಾಬಾದ್ ಸಂಸ್ಥಾನದ ನಿಜಾಮರು, ಸುರಪುರ ಸಂಸ್ಥಾನ, ಜಮಖಂಡಿ ಸಂಸ್ಥಾನ, ಬಿಜಾಪುರದ ಸಂಸ್ಥಾನ, ಕೊಪ್ಪಳ ಸಂಸ್ಥಾನ ಚಿತ್ರದುರ್ಗ ಸಂಸ್ಥಾನಗಳಲ್ಲಿ ಸಹ ಸಿಕ್ಲಿಗರ ನೆರವು ಪಡೆದುಕೊಳ್ಳಲಾಯಿತುೀ ಕಾರಣಕ್ಕಾಗಿಯೇ ಕರ್ನಾಟಕದ ಉಳಿದ ಭಾಗಗಳಲಿಲ್ಲದ ಮೇಲೆ ಗುರುತಿಸುವಂತಹ ಸಂಸ್ಥಾನಗಳ ಪ್ರಾಧೇಶಿಕ ನೆಲೆಯಲ್ಲಿ ಸಿಕ್ಲಿಗರು ಕಂಡುಬರುತ್ತಾರೆ.

<u>ಸಿಕ್ಲಿಗರು ಆಶ್ರಯ ಪಡೆದ ವಿವರ</u>

↓

<u>ಪಂಜಾಬ</u>

<u>(ರಾಜಾ ರಣಜಿತ್‌ಸಿಂಗ್) (೧೭೮೦–೧೮೩೯)</u>

↓

ಹೈದ್ರಾಬಾದ್ ಸಂಸ್ಥಾನ

(ನಿಜಾಮರು) (೧೭೨೪-೧೯೪೮)

ಸುರಪುರ ಸಂಸ್ಥಾನ ಜಮಖಂಡಿ ಸಂಸ್ಥಾನ ಬಿಜಾಪುರ ಸಂಸ್ಥಾನ ಕೊಪ್ಪಳ ಸಂಸ್ಥಾನ

ಹೈದ್ರಾಬಾದ್ ಸಂಸ್ಥಾನದ ನಿಜಾಮನು ತನ್ನ ಪ್ರಾಂತದಲ್ಲಿ ಬ್ರಿಟಿಷರು, ಮರಾಠರು, ಬಲಶಾಲಿಗಳಾಗಿದ್ದರು. ಅವರನ್ನು ತಪ್ಪಿಸಿಕೊಂಡು ತನ್ನದೇಯಾದ ಸ್ವತಂತ್ರ ಸಂಸ್ಥಾನವನ್ನು ಮಾಡಿಕೊಳ್ಳಬೇಕೆಂದು ತೀರ್ಮಾನಿಸಿದ ಆ ಪ್ರಕಾರ ತನ್ನ ಸಂಸ್ಥಾನ ಬಲಿಷ್ಠವಾಗಿದೆಯೆಂದು ತೋರಿಸಿಕೊಡಲು ರಣಜಿತ್ಸಿಂಗನ ಸ್ನೇಹ ಬೆಳೆಸಿದ. ಆ ಮೂಲಕ ತನ್ನ ಸಂಸ್ಥಾನದಲ್ಲಿ ಸಿಕ್ಲಿಗರು. ಜನಾಂಗವನ್ನು ತರಿಸಿಕೊಂಡು ತನ್ನ ಕಾರ್ಯ ಮುಗಿಸಿಕೊಂಡ. ಇದರಿಂದ ನವಾಬ ಬಹಳ ಸಂತುಷ್ಟನಾಗಿ ಹೋದ. ಸಿಕ್ಲಿಗರ ಜನಾಂಗದ ಕಾರ್ಯಗಳನ್ನು ಕಂಡು ಸಂತೋಷಪಟ್ಟನು. ತನ್ನ ಸಂಸ್ಥಾನವು ಈಗಾಗಲೇ ೧೭೨೪ ರಿಂದ ೧೯೪೮ರ ತನಕ ಸುದೀರ್ಘ ಪರಂಪರೆಯ ಹಾದಿ ಹಾಕಿಬಿಟ್ಟ ಈ ಸಮುದಾಯದ ಸಾತ್ವಿಕ ನಿಷ್ಠಾವಂತ, ಬಲಿಷ್ಟವಾದ ಶೂರರನ್ನು ಮತ್ತೇ ಪಂಜಾಬಿಗೆ ಕಳಿಸುವುದು ನವಾಬನಿಗೆ ಒಪ್ಪಲಿಲ್ಲ. ಅವರನ್ನೆಲ್ಲಾ ತನ್ನ ಸಂಸ್ಥಾನದಲ್ಲಿ ಉಳಿಸಿಕೊಂಡು ಆತನ ಸೈನ್ಯವು ದೊಡ್ಡದಾಯಿತು. ಬಲಿಷ್ಟವಾದ ಆಡಳಿತವನ್ನು ನಿರ್ವಹಿಸತೊಡಗಿದರು.

ನವಾಬನು ಪ್ರತಿದಿನ ಕೆಲಸವಿಲ್ಲದ್ದನ್ನು ಅರಿತುಕೊಂಡು ಯುದ್ದದ ಸನ್ನಿವೇಶದಲ್ಲಿ ಪೂರ್ವತಯಾರಾಗಿಯೇ ತಾನು ಸಾಕಷ್ಟು ಪ್ರಯತ್ನಿಸಿದ. ಆ ಮೇಲೆ ಈ ಜನಾಂಗ ಸುಮ್ಮನೇ ಕೂಡುವದೆಂದು ಬಾವಿಸಿಕೊಂಡ ವಿಶಾಲವಾದ ಹೈದ್ರಾಬಾದ ಸಂಸ್ಥಾನದ ಭಾರತ ದೇಶದಲ್ಲಿ ೧೭ ಸಂಸ್ಥಾನಗಳಿದ್ದವು. ಅವುಗಳಲ್ಲಿ ಹೈದ್ರಾಬಾದ್ ಸಂಸ್ಥಾನವು ಒಂದಾಗಿತ್ತು. ೧೭ ಸಂಸ್ಥಾನಗಳಲ್ಲಿ ಅತಿ ದೊಡ್ಡ ಹಾಗೂ ವಿಸ್ತೃತವಾದ ಸಂಸ್ಥಾನವಾಗಿತ್ತು. ತೆಲಂಗಾಣ ಕರ್ನಾಟಕ ಪ್ರದೇಶಗಳು ಸೇರಿಕೊಂಡಿದ್ದವು. ಕಂದಾಯ ವಸೂಲಿಯ ಕೆಲಸ ಸಿಕ್ಲಿಗರಿಗೆ ಕೊಟ್ಟರು. ಊರು, ಗ್ರಾಮ, ಹೋಬಳಿಗಳಲ್ಲಿ ಗೌಡರು, ಕುಲಕರ್ಣಿ, ಶ್ಯಾನುಬೋಗರು, ಪಟೇಲರಿಗೆ ಯಾವುದೇ ರೀತಿಯ ಕಂದಾಯ ಕರ ವಸೂಲಿಯನ್ನು ಜನ ಕೊಡದೇ ಇದ್ದಾಗ ಮೌನ ತಾಳುತ್ತಿದ್ದರು. ಇದರಿಂದ ನವಾಬನ ಬೊಕ್ಕಸ ಬರಿದಾಗಹತ್ತಿತು. ಕೂಡಲೇ ಸಿಕ್ಲಿಗರು ಜನ ದೇಹ ಆಕಾರಗಳಲ್ಲಿ ಬಲಿಷ್ಟರಾಗಿದ್ದರು. ಅವರ ಕೂದಲುಗಳು ಗಡ್ಡ, ಮೀಸೆಗಳು ಇವರು ತಯ್ಯಾಮಾರಕಾಸ್ತ್ರವಾದ ತಲವಾರ್, ಭರ್ಚಿ, ಜಂಬ್ಯಾ ಮುಂತಾದವು ಸ್ಥಳೀಯ ಜನರಲ್ಲಿ ಭಯ ಹುಟ್ಟಿಸಿದವು. ಆ ಹೆದರಿಕೆಗೆ

ಮನೆ ಮುಂದೆ ಈ ಸಿಕ್ಲಿಗರು ಹೋದರೆ ಸಾಕು ಕಂದಾಯ ಕೊಟ್ಟು ಕಳಿಸುವ ಕಾರ್ಯ ನಡೆಯಿತು. ಇದರಿಂದ ಕೆಲವೇ ತಿಂಗಳುಗಳಲ್ಲಿ ನವಾಬರಿಗೆ ಸಾಕಷ್ಟು ಲಾಭವಾಗಹತ್ತಿತು. ಆ ಸಿಕ್ಲಿಗರನ್ನು ಪಂಜಾಬದ ಅರಸನಾದ ರಣಜಿತ್ ಸಿಂಗನಿಗೆ ಹಿಂತಿರುಗಿ ಕಳಿಸದೇ ತನ್ನಲ್ಲಿಯೇ ಇಟ್ಟುಕೊಂಡರು. ಆ ಹೊತ್ತಿಗೆ ಈ ಬುಡಕಟ್ಟು ಸಮುದಾಯಕ್ಕೆ ಯಾವುದೇ ಭಯವೂ ಇರಲಿಲ್ಲ. ಸ್ವತಂತ್ರವಾಗಿದ್ದರು. ಹೈದ್ರಾಬಾದ್ ಸಂಸ್ಥಾನದ ಆಂಧ್ರಪ್ರದೇಶ ಕರ್ನಾಟಕದ ಅನೇಕ ಕಡೆಗಳಲ್ಲಿ ಸಿಕ್ಲಿಗರು ಸೇರಿಕೊಂಡರು. ಹೈದರಾಬಾದ್ ಸಂಸ್ಥಾನಕ್ಕೆ ಕರ್ನಾಟಕದ ಬೀದರ್, ಕಲಬುರ್ಗಿ, ರಾಯಚೂರು ಜಿಲ್ಲೆಗಳು ಹೊಂದಿದ್ದವು. ಈ ಮಾರ್ಗವನ್ನು ಹಿಡಿದುಕೊಂಡು ಸಿಕ್ಲಿಗರು ಬಂದು ನೆಲೆಸಿದರು. ಬ್ರೀಟಿಷರು ಹಾಗೂ ನಿಜಾಮನ ರೈಲ್ವೆಗಳ ಸೌಲಭ್ಯಗಳಿಂದ ಈ ರೈಲ್ವೇ ಸ್ಟೇಶನ್‌ಗಳು ಎಲ್ಲಿ ಬೆಲ್ಟ್ ಬರುತ್ತದೆ. ಅಲ್ಲಿ ಸಿಕ್ಲಿಗರು ಬಂದು ನೆಲೆಸಿದ್ದನ್ನು ಕಾಣುತ್ತೇವೆ. ಈ ಪ್ರಾಂತದ ಬೀದರ್, ಭಾಲ್ಕಿ, ಕಲಬುರ್ಗಿ, ಯಾದಗಿರಿ, ರಾಯಚೂರು ಜಿಲ್ಲೆಯ ಸಿಂಧನೂರು, ಕೊಪ್ಪಳ, ಈ ಪ್ರದೇಶಗಳಲ್ಲಿ ಸಿಕ್ಲಿಗರು ವಾಸಿಸಿಕೊಂಡು ಬಂದಿದ್ದಾರೆ, ಬರುತ್ತಿದ್ದಾರೆ. ಇಂದಿಗೂ ಕೂಡಾ ಈ ಜನಾಂಗ ನೆಲೆಯೂರಿದೆ.

ಹೀಗೆ ವಲಸೆ ಬಂದ ಬುಡಕಟ್ಟು ಜನಾಂಗ ತಮ್ಮ ಪಂಜಾಬದ ಮೂಲಕ ದಕ್ಷಿಣ ಭಾರತದ ಕಡೆಗೆ ಹೋಗದೇ ನೆಲೆನಿಂತು ತಮಗೆ ಬೇಕಾದಲ್ಲಿ ಇರುವುದು, ಇರದಿದ್ದರೆ ಹೋಗುವುದು ನಡೆಯಿತು. ನಿಜಾಮನು ಇವರಿಗೆ ಬೇಕಾದ ಎಲ್ಲಾ ಸೌಲಭ್ಯ ಸೌಕರ್ಯಗಳನ್ನು ಒದಗಿಸಿದನು. ೧೯೪೫ ರ ಹೊತ್ತಿಗೆ ನಿಜಾಮನ ಆಡಳಿತವನ್ನು ಬುಡಮೇಲು ಮಾಡಲು ಪ್ರಾರಂಭವಾದ ಹೊತ್ತಿನಲ್ಲಿ ಒಂದಡೆ ಬ್ರಿಟಿಷರು ಮತ್ತೊಂದೆಡೆ ಭಾರತ ಸ್ವಾತಂತ್ರ್ಯಗೊಳ್ಳಬೇಕೆಂಬ ಸ್ವಾತಂತ್ರ್ಯ ಹೋರಾಟಗಾರರ ನಿಲುವು ಇದ್ದವು. ಈ ಎರಡು ದಡದಲ್ಲಿ ನಿಂತುಕೊಂಡು ನವಾಬನಿಗೆ ಮತ್ತೊಂದು ಆಶ್ಚರ್ಯ ಕಾದಿತ್ತು ಔದ್ ಕಾಸೀಮ ರಜ್ವಿ ಇತ್ತೆಹಾದ್-ಉಲ್-ಮುಸಲ್ಮಾನ ಎಂಬ ಮಂತ್ರಿ ರಜಾಕಾರರ ಸಂಘಟನೆಯನ್ನು ಕೈಗೊಂಡಿದ್ದ ಇದೊಂದು ಕೋಮುವಾದ ಸೃಷ್ಟಿಸುವ ಸಂಘಟನೆಯಾಗಿತ್ತು. ಕಡಿಮೆ ಪ್ರಮಾಣದ ಸಿಕ್ಲಿಗರು ಸಹಜವಾಗಿ ನವಾಬನಿಂದ ದೂರ ಸರಿಯಬೇಕಾಯಿತು. ನವಾಬನು ಇವರಿಗೆ ಸಹಾಯ ಮಾಡುವಂತಿರಲಿಲ್ಲ. ಆಗಲೇ ರಾಜಕಾರಣದ ಕಪಿಮುಷ್ಠಿಯಲ್ಲಿ ನವಾಬ ರಜಾಕಾರರಲ್ಲಿ ಸಿಲುಕಿಕೊಂಡಿದ್ದ. ಅತ್ತ ರಣಜಿತ್‌ಸಿಂಗನು ಹಾಗೂ ಆತನ ರಾಜರು ಕೂಡಾ ಇವರಿಗೆ ಹೀಗೆ ಹೋದರೆ ಆಶ್ರಯ ನೀಡುವುದಿಲ್ಲವೆಂದು ಸಿಕ್ಲಿಗರಿಗೆ ಖಚಿತವಾಯಿತು. ತಾವೇ ಒಬ್ಬಂಟಿಗರ ಸಮುದಾಯವಾಗಿ ಜೀವನ ಸಾಗಿಸಬೇಕಾಗಿತ್ತು. ಯಾವುದೇ ಅಡೆತಡೆಗಳಿಲ್ಲದೇ ಸ್ವತಂತ್ರ ಜೀವನ ಸಾಗಿಸಬೇಕಾಗಿತ್ತು. ಆ ಹೊತ್ತಿಗಾಗಲೇ ಈ ಪ್ರಾಂತದ ಸುತ್ತ ಸಿಕ್ಲಿಗರು ಹರಿದು ಹಂಚಿ ಹೋಗಿದ್ದರು. ವಿಮೋಚನೆಯ ಹೋರಾಟದಲ್ಲಿ ರಜಾಕಾರರ ಒತ್ತಡದಲ್ಲಿ

ಸಿಕ್ಕ ಸಿಕ್ಲಿಗರು ಕೆಲವರು. ಕರ್ನಾಟಕದ ನವಾಬನ ಕಡೆ ನೆಲೆಯೂರಲು ಸಂಚಾರಿ ಜೀವನ ಕೈಗೊಂಡರು. ಅವರಿಗೆ ಬರುವ ಗಟ್ಟಿಯಾದ ನೆಲೆಗಟ್ಟಿನ ಮೇಲೆ ನಿಂತು ಕೆಲಸವನ್ನು ಕೈಗೊಳ್ಳಬೇಕಾಯಿತು. ಕರ್ನಾಟಕದಲ್ಲಿ ಈ ಬುಡಕಟ್ಟು ಜನಾಂಗ ಹರಿದುಕೊಂಡು ಬಂದು ನೆಲೆನಿಂತಿತು. ಅನೇಕ ಕಡೆಗಳಲ್ಲಿ ಈ ಸಮುದಾಯ ಒಂದೇ ಕಡೆ ನಿಲ್ಲುವುದಿಲ್ಲ. ಸಂಚಾರಿ ಮಾರ್ಗವನ್ನು ಅನುಸರಿಸಿಕೊಂಡು ಬಂದಿದ್ದಾರೆ.

ಸಿಕ್ಲಿಗರ ಜನಾಂಗ ಹೈದ್ರಾಬಾದ್ ಸಂಸ್ಥಾನದ ನಿಜಾಮನ ಆಶ್ರಯವು ಸಿಗದೇ ಹೋಯಿತು ಹಾಗೇ ಅವರು ನೆಲೆನಿಲ್ಲಬೇಕಾಯಿತು. ಈ ಜನಾಂಗ ಚದುರಿ ಹೋಗುವುದು ಅನಿವಾರ್ಯವೂ ಆಯಿತು. ಹೆಚ್ಚು ಕುಟುಂಬಗಳು ಬೇರೆ ಕಡೆ ನೆಲೆಯನ್ನು ನೆಲೆಸುವುದಿಲ್ಲ. ಸ್ವತಂತ್ರವಾದ ಜೀವನ ನಿರ್ವಹಣೆ ಕೈಗೊಳ್ಳುತ್ತಾರೆ. ಆಂಧ್ರಪ್ರದೇಶ, ಹೈದ್ರಾಬಾದ್, ಮಹಾರಾಷ್ಟ್ರ, ನಾಂದೇಡ, ಲಾತೂರು, ಸೊಲ್ಲಾಪುರ, ಪುಣೆ, ಮುಂಬಯಿ, ನಿಜಾಮಬಾದ್, ಔರಂಗಾಬಾದ್ ಕರ್ನಾಟಕದಲ್ಲಿ ಔರಾದ್, ಬೀದರ್, ಹುಮನಾಬಾದ್, ಭಾಲ್ಕಿ, ಗುಲ್ಬರ್ಗಾ ಯಾದಗಿರಿ, ಸಿಂಧನೂರು ರಾಯಚೂರು, ಕೊಪ್ಪಳ, ಹುಬ್ಬಳ್ಳಿ, ಬೆಳಗಾವಿ, ಬಾಗಲಕೋಟೆ, ನಿಪ್ಪಾಣಿ, ಮುಧೋಳ, ಶಿಗ್ಗಾಂವಿ, ಬೈಲಹೊಂಗಲ, ಗದಗ, ಮೈಸೂರು, ಬೆಂಗಳೂರು ಕಡೆ ಈ ಜನ ಹರಿದು ಹಂಚಿ ನೆಲೆಯೂರಿಕೊಂಡಿದ್ದಾರೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಈ ಎಲ್ಲಾ ಜಿಲ್ಲೆ ತಾಲೂಕುಗಳಲ್ಲಿ ಸಹಿತ ಸಿಕ್ಲಿಗರು ದೊರಕುತ್ತಾರೆ. ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ಮಾತ್ರ ಈ ಬುಡಕಟ್ಟು ಜನಾಂಗ ನಮಗೆ ಕಾಣುವುದಿಲ್ಲ.

ಕಬ್ಬಿಣದ ಕೆಲಸವೇ ಇವರ ಮೂಲ ಬಂಡವಾಳ. ಕಬ್ಬಿಣವನ್ನು ತಮಗೆ ಇಷ್ಟ ಬಂದ ಹಾಗೇ ಮಣಿಸುವ ಅದನ್ನು ಹೇಗೇ ಬೇಕೋ ಹಾಗೇ ವಸ್ತು ತಯಾರಿಕೆಗೆ ಒಳಪಡಿಸಿದ್ದಾರೆ. ಅಲೆಮಾರಿಗಳಾಗಿ ತಮ್ಮ ತಮ್ಮ ಜೀವನ ನಿರ್ವಹಿಸಿಕೊಂಡು ಬರುತ್ತಿದ್ದಾರೆ. ಸಿಕ್ಲಿಗರಲ್ಲಿ ಯಾರು ಓದಿಕೊಂಡವರು ದೊರೆಯುತ್ತಿಲ್ಲ. ಒಬ್ಬನೇ ಒಬ್ಬ ಡಿ ಗ್ರೂಪ್ ನೌಕರ ಬೀದರ್‌ನಲ್ಲಿ ಇದ್ದಾನೆ. ಒಬ್ಬ ಹತ್ತನೇ ತರಗತಿ ಪಾಸಾದಹುಡುಗ ಕಲ್ಬುರ್ಗಿ ಜಿಲ್ಲೆಯಲ್ಲಿ ಹುಡುಕಿದಾಗ ದೊರೆಯುತ್ತಿದ್ದಾನೆ. ವಿನಃ ಯಾರೂ ಅಕ್ಷರಸ್ಥರಲ್ಲ. ನೌಕರಸ್ಥರಲ್ಲ. ಇತ್ತಿತ್ತಲಾಗಿ ಬೆಂಗಳೂರಿನಲ್ಲಿ ಸಿಕ್ಲಿಗರ ಸಮುದಾಯದ ಸಂಘವನ್ನು ಸ್ಥಾಪಿಸಲಾಗಿದೆ. ಆ ಮೂಲಕ ಇವರಿಗೆ ಶಿಕ್ಷಣ ಸೌಲಭ್ಯವನ್ನು ಮಕ್ಕಳಿಗೆ ಕಲಿಸಲಾಗುತ್ತಿದೆ. ಕಲಿಕೆ ಅಥವಾ ಶಿಕ್ಷಣವು ಬಹು ಬಗೆಯಿಂದ ಕಲಿಯಬೇಕಾಗಿದೆ. ಉದ್ಯೋಗವನ್ನು ಕೂಡ ಇವರು ಮಾಡುತ್ತಿಲ್ಲ. ತಮ್ಮ ಮೂಲ ನಿವಾಸಿಗಳನ್ನು ಪರಂಪರೆಯನ್ನು ಕುರಿತು ಸಮಗ್ರವಾಗಿ ಕಾಣಲಾಗುತ್ತಿದೆ. ಸಿಕ್ಲಿಗರ ಸಮುದಾಯವು ಪ್ರಾಚೀನ ಕಾಲದಿಂದಲೂ ಬಂದ ಕಬ್ಬಿಣದ ಕೆಲಸವನ್ನು

ನಿರ್ವಹಿಸಿಕೊಂಡು ಬರುತ್ತಿದ್ದಾರೆ. ತಮ್ಮ ಜೀವನ ನಿರ್ವಹಣೆಗೆ ತಮ್ಮ ಕಬ್ಬಿಣದ ಕೆಲಸವನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ. ಅವರಿಗೆ ಅದೇ ಬಂಡವಾಳ ಕಬ್ಬಿಣದ ಯುಗ ಇಂದು ಮುಗಿದು ಹೋಗಿದೆ. ಇವರಿಗೆ ಅದೇ ಬಂಡವಾಳ. ಕಬ್ಬಿಣದ ಯುಗ ಈಗ ಮುಗಿದು ಹೋಗಿ ಇಂದು ಪ್ಲಾಸ್ಟಿಕ್ ಯುಗ ಪ್ರಾರಂಭವಾದ ಹೊತ್ತಿನಲ್ಲಿ ಕಬ್ಬಿಣದ ಮೂಲಕ ಅನೇಕ ಸಾಮಗ್ರಿಗಳನ್ನು ತಯಾರಿಸುತ್ತಾರೆ. ಇವರು ಶ್ರಮವಹಿಸಿ ದುಡಿಯುತ್ತಾರೆ. ಯಾವಾಗಲೂ ಶ್ರಮಿಕನದು ತನ್ನ ತಾನೇ ಜೀವ ತೆಯುತ್ತಾ ಇರುತ್ತಾನೆ. ಶ್ರಮವನ್ನು ಹರಿಸುತ್ತಾ ಇದ್ದಾನೆ. ಹಾಗೇ ಶ್ರಮಕ್ಕೆ ತಕ್ಕಂತೆ ಪರಿಶ್ರಮಕ್ಕೆ ತಕ್ಕಂತೆ ಆತನಿಗೆ ಲಾಭ ಸಿಗದೇ ಹೋಗುವುದು ಇಂತಹ ಪರಿಸ್ಥಿತಿಯನ್ನು ಸಿಕ್ಲಿಗರ ಜನಾಂಗ ಹೊಂದಿದೆ.

ಸಿಕ್ಲಿಗ ಬುಡಕಟ್ಟು ಒಂದು ದೊಡ್ಡ ಪಡೆಯಿಂದ ಕರ್ನಾಟಕದಲ್ಲಿ ನೆಲೆಸಿ ಚಾರಿತ್ರಿಕವಾದ ಅಂಶವನ್ನು ಬೀರಿತ್ತು. ಆದರೆ ಆ ಸಿಕ್ಲಿಗರು ಯಾವುದೇ ಅಡ್ಡಿ ಆತಂಕಗಳನ್ನು ಹೊಂದಿಯೂ ಹರಿದು ಹಂಚಿ ಹೋದುದರಿಂದ ಕರ್ನಾಟಕದಲ್ಲಿ ಕ್ಷೇತ್ರಕಾರ್ಯವನ್ನು ಕೈಗೊಂಡ ಅನುಭವದ ಮೇರೆಗೆ ಈ ಸಂಶೋಧನೆಯಲ್ಲಿ ಕಾಣಸಿಗುವ ಸಿಕ್ಲಿಗರ ಕುಟುಂಬಗಳು ಕೇವಲ ೩೮೫೫ ಕುಟುಂಬಗಳೇ ಹೊರತು ಹೆಚ್ಚು ದೊರೆಯಲಾರವು. ಶ್ರಮ ಜೀವಿಗಳಾದ ಸಿಕ್ಲಿಗರ ಅನೇಕ ಕಟ್ಟುಪಾಡುಗಳನ್ನು ಸಂಪ್ರದಾಯ, ನಂಬಿಕೆ, ಆಚರಣೆಗಳನ್ನು ಹೊಂದಿದ್ದಾರೆ. ಆ ಕಾರಣಕ್ಕಾಗಿಯೇ ಸಿಕ್ಲಿಗರು ಎಲ್ಲ ಬುಡಕಟ್ಟು ಜನಾಂಗಗಳಂತೆ ಇಲ್ಲ. ಇವರು ಎಲ್ಲರ ನಡುವೆ ಭಿನ್ನವಾಗಿ ಕಂಡು ಬರುತ್ತಾರೆ. ಇತರ ಬುಡಕಟ್ಟು ಜನಾಂಗಗಳಿಗಿಂತ ಭಿನ್ನವಾಗಿ ವಿಶಿಷ್ಟವಾದ ಆಚರಣೆ, ಸಂಪ್ರದಾಯಗಳನ್ನು ಹೊಂದಿದ್ದರಿಂದ ಗಮನ ಸೆಳೆಯುತ್ತಾರೆ.

ಸಿಖ್ಖರು 'ಕ' ಎಂಬ ಐದುಕಗಳು ಬಳಕೆಯಲ್ಲಿರಬೇಕು. ಅವನ್ನು ಸದಾ ಹಾಗೇ ಉಳಿಸಿಕೊಂಡು ಬರಬೇಕು. ಎಂಬ ಸಂಪ್ರದಾಯವಿದೆ. ಅಲ್ಲದೇ ತಾಯಿಯ ಗರ್ಭದಿಂದ ಹುಟ್ಟಿದ ಮಗು ಅಂದಿನಿಂದ ಸಾಯುವತನಕ ಯಾವುದೇ ಕೂದಲನ್ನಾಗಲಿ ಏನೂ ತೆಗೆಯದೇ ಹಾಗೇ ಬದುಕಬೇಕು. ಹಾಗೇ ಸಾಯುವತನಕ ಮುಂದುವರಿಸಿಕೊಂಡು ಹೋಗಬೇಕು. ಎಂಬ ಕಠಿಣ ನಿಯಮಗಳ ಹಾಕಿಕೊಂಡು ಬರಲಾಗಿದೆ. ಅದನ್ನೆಲ್ಲಾ ಸಂಪೂರ್ಣವಾಗಿ ಬಲ್ಲ ಈ ಬುಡಕಟ್ಟು ಜನಾಂಗ ಅವನ್ನು ಅನುಸರಿಸಿಕೊಂಡು ಬಂದಿದ್ದಾರೆ. ಮಾತೃ ಪ್ರಧಾನವಾದ ಕುಟುಂಬಗಳಂತೂ ಇಲ್ಲವೇ ಇಲ್ಲ. ಪಿತೃಪ್ರಧಾನವಾದ ಕುಟುಂಬಗಳು ಆರ್ಥಿಕವಾಗಿ ನೆಲೆನಿಂತಿದೆ. ಹೆಣ್ಣುಮಕ್ಕಳಂತೂ ಮನೆ ಬಿಟ್ಟು ಹೊರ ಬರುವಂತಿಲ್ಲ. ಯಾವುದೇ ಕೆಲಸಕಾರ್ಯಗಳು ಮಾಡುವಂತಿಲ್ಲ. ಬಾಹ್ಯವಾದ

ಈ ಐದು 'ಕ' ಗಳ ವಿವರ ಇಂತಿದೆ.

೧. ಕೇಶ,

೨. ಖಡ್ಗ,

೩. ಕಂಗನ್

೪. ಕ್ರಪಾನ

೫. ಕಚ್ಚಾ

ಈ ಐದು 'ಕ' ಗಳನ್ನು ಪಾಲಿಸಿಕೊಂಡು ಬರಬೇಕು ಸಿಕ್ಲಿಗರ ಬುಡಕಟ್ಟು ಜನಾಂಗ ಐದು 'ಕ' ಗಳಿರಬೇಕಾದದ್ದು ಅತ್ಯಂತ ಅವಶ್ಯವಾಗಿದೆ. ಸಿಕ್ಲಿಗರರಲ್ಲಿ ಹದಿನೆಂಟು ಕುಲಗೋತ್ರ, ಬೆಡಗುಗಳನ್ನು ಹೊಂದಿವೆ.

೧.ಮುದ್ರ ವಾಲೆ ಟಾಂಕ್

೨.ಬಿಚ್ಚು ಕಾ ಟಾಂಕ್

೩ ಕಲಾಣಿ ಟಾಂಕ್

೪ ದುದಾಣಿ ಟಾಂಕ್

೫.ಜೂಣಿ ಟಾಂಕ್

೬. ತಿಲ್ ಭಿತಿ ಯಾ ಟಾಂಕ್

೭. ಭಾವರಿ ಅಂದ್ರೆಲೇ ಟಾಂಕ್

೮. ಗೋಡಾ ಚಡೆ ಡಾಂಗಿ ಟಾಂಕ್

೯.ಲಂಗೋಟಿ ಬಾಗ್ದಾ ಟಾಂಕ್

೧೦. ಬುರಾಣಿ ಟಾಂಕ್

೧೧. ಗೊಹು ಕೆ ಟಾಂಕ್

೧೨. ಪಟ್ವಾ ಕೆ ಟಾಂಕ್

೧೩. ಚೂರಿ ಮಾರ ಭಾವರಿ ಟಾಂಕ್

೧೪. ಸತಿ ಕೆ ತಿಲ್ ಪಿತಿಯಾ ಟಾಂಕ್

೧೫. ಡಾಂಗಿ ಟಾಂಕ್

೧೬.ರಸೂ ಚಟಾ ಟಾಂಕ್

೧೭.ರಬಾಬಿ ತಿಲ್ ಪಿತಿಯಾ ಟಾಂಕ್

೧೮.ಬೌಂಡ್‌ಟಾಂಕ್

ಕುಲಗೋತ್ರ , ಉಪಪಂಗಡಗಳ ವಿವರಣೆ

೧. ಮುದ್ರಾ ವಾಲೇ ಟಾಂಕ್ : ಕಿವಿಯಲ್ಲಿ ಓಲೆ ಧರಿಸುವುದರಿಂದ ಇವರಿಗೆ ಮುದ್ರಾವಾಲೇ ಟಾಂಕ್ಎಂಬ ಹೆಸರು ಬಂದಿದೆ.

೨. ಬಿಚ್ಚು ಕಾ ಟಾಂಕ್ : ಚೇಳಿನಿಂದ ಈ ಹೆಸರು ಬಂದಿದೆ

೩. ಕಲಾಣಿ ಟಾಂಕ್ : ಈ ಗುಂಪಿನವರುಕಲೆಗಾರರಾಗಿರುವುದರಿಂದ ಈ ಹೆಸರು ಬರುತ್ತದೆ.

೪. ದುದಾಣಿ ಟಾಂಕ್ : ದೂದ್-ಹಾಲು ಹೆಚ್ಚಾಗಿ ಬಳಸುವುದರಿಂದ

೫. ಜೂಣಿ ಟಾಂಕ್ : ಊಟದಲ್ಲಿ ಮತ್ತು ತಲೆಗೆ ತುಪ್ಪ ಹೆಚ್ಚಾಗಿ ಬಳಸುವುದು

೬. ತಿಲ್ ಭಿತಿಯಾ ಟಾಂಕ್ : ಇದರಲ್ಲಿ ಎರಡು ಉಪಪಂಗಡಗಳಿವೆ ೧.ರುಬಾಬಿ+ಪಿತಿಯಾ =ರುಬಾಬಿ: ಗಂಡನ ಜೊತೆಯಲ್ಲಿ ಚಿತೆಯಲ್ಲಿ ಸಾಯಲು ನಿರಾಕರಿಸಿದ ಹೆಣ್ಣುಮಗಳ ಗುಂಪಿಗೆ ರುಬಾಬಿ
೨. ಪಿತಿಯಾ: ಗಂಡನ ಚಿತೆಯಲ್ಲಿ ಜೀವಂತವಾಗಿ ಸಾಯುವ ಸತಿಯ ಗುಂಪಿಗೆ ಪಿತಿಯಾ ಎಂದು ಹೆಸರು.

೭. ಭಾವರಿ ಅಂದ್ರೇಲೇ ಟಾಂಕ್ : ಕಣ್ಣು ಇಲ್ಲದೇ ಹುಟ್ಟಿದ ತಾಯಿಯ ಮಗ ಇರುವುದರಿಂದ ಅಂದ್ರೇಲೇ -ಭಾವರಿ

೮. ಗೋಡಾ ಚಡೆ ಡಾಂಗಿ ಟಾಂಕ್ : ಉಳಿದ ಸಿಕ್ಲಿಗರು ತಯಾರು ಮಾಡಿದ ಸಾಮಾನುಗಳನ್ನು ಇವರು ಕುದುರೆಯ ಮೇಲೆ ಹಾಕಿಕೊಂಡು ಊರಿಂದೂರಿಗೆ ಅಲೆದು ಮಾರಾಟ ಮಾಡುವ ಗುಂಪು.

೯. ಲಂಗೋಟಿ ಬಾಗ್ದಾ ಟಾಂಕ್ : ಈ ಗುಂಪು ಸಿಕ್ಲಿಗರ ಬೇರೆ ಬೇರೆ ಕುಟುಂಬಗಳಿಗೆ ಮದುವೆ ಇನ್ನಿತರ ಕಾರ್ಯಕ್ರಮದಲ್ಲಿ ಹೋಗಿ ಅಡುಗೆ ಮಾಡುವ ಭಟ್ಟರು ಆಗಿದ್ದಾರೆ.

೧೦. ಬುರಾಣಿ ಟಾಂಕ್ : ಸಿಕ್ಲಿಗರ ಮನುಷ್ಯ ಬಿಳಿಬಣ್ಣ ಹೊಂದಿ ತಲೆಯ ಮೆಲಿನ ಕೂದಲು ಚಾಕ್ಲೇಟ್ ಕೂದಲು ಇರುವುದರಿಂದ ಬುರಾಣಿ ಜನಾಂಗವೆಂದು ಹೆಸರು. ಆ ಕೂದಲು ಮಿಂಚುತ್ತಿದ್ದವು.

೧೧. ಗೊಹು ಟಾಂಕ್ : ತಿಪ್ಪಿ ಹತ್ತಿರ ಗುಡಿಸಲು ಹಾಕಿಕೊಂಡು ಹಂದಿ ಸೀಕಾರಿ ಮಾಡುವ ಗುಂಪು

೧೨. ಪಟ್ವಾಕೆ ಟಾಂಕ್ : ತಲೆಯ ಬುಡದಲ್ಲಿ ರಾತ್ರಿ ತಲೆಯ ಬುಡಕ್ಕೆ ಪಗಡೆಯಲ್ಲಿ ಹಣವನ್ನುಇಟ್ಟುಕೊಂಡು ಮಲಗುವವರನ್ನು ಕಳವು ಮಾಡುವ ಜನಾಂಗ

೧೩. ಚೂರಿ ಮಾರಾ ಭಾವರಿ ಟಾಂಕ್: ಇಬ್ಬರು ಅಣ್ಣ ತಮ್ಮಂದಿರು ಇರುತ್ತಾರೆ. ಅಣ್ಣ ಒಂದು ದಿನ ಮೀನು ತಂದು ಕೊಟ್ಟ ಆಗ ಅಣ್ಣನ ಹೆಂಡತಿಗೆ ಮೀನಿನ ಕಣ್ಣುಗಳ ಮೇಲೆ ಮನಸ್ಸು ಆಯಿತು. ಮೀನಿನ ಸೌಂದರ್ಯದ ಕಣ್ಣುಗಳ ಮೇಲೆ ನೀವು ಮನಸ್ಸು ಹಾಕಿದರೆ; ಮುಂದೆ ಗಂಡಸರ ಮೇಲೆ ಈಕೆ ಮನಸ್ಸು ಮಾಡುತ್ತಾಳೆಂದು ಬಗೆದು ಅವಳನ್ನು ಕೊಂದು ಹಾಕಿದ ಹೀಗಾಗಿ ಚೂರಿ ಭಾವ ಭಾವರಿ ಟಾಂಕ್ ಎಂದು ಹೆಸರು.

೧೪. ಸತಿ ಕೆ ತಿಲ್ ಪಿತಿಯಾ ಟಾಂಕ್ : ಗಂಡ ಸತ್ತಾಗ ಗಂಡನ ಚಿತೆಯಲ್ಲಿ ಹೆಂಡತಿ ಚಿತೆಯಲ್ಲಿ ಬಿದ್ದು ಸತ್ತ ಹೆಣ್ಣಿನ ಗುಂಪು

೧೫. ಡಾಂಗಿ ಟಾಂಕ್ : ಕತ್ತೆಯ ಮೇಲೆ ಸಾಮಾನುಗಳನ್ನು ಹೇರಿಕೊಂಡು ಊರೂರು ತಿರುಗುವ ಅಲೆಮಾರಿಗಳು

೧೬.ರಸೂ ಚಟಾ ಟಾಂಕ್ : ಊಟದಲ್ಲಿ ಪ್ರತಿನಿತ್ಯ ಮೀನಿನ ಸಾರು ಬಳಸುವ ಗುಂಪು

೧೭.ರಬಾಬಿ ತಿಲ್ ಪಿತಿಯಾ ಟಾಂಕ್ : ಗಂಡನ ಜೊತೆ ಚಿತೆಯಲ್ಲಿ ಸಾಯಲು ನಿರಾಕರಿಸಿದ ಹೆಣ್ಣು ಮಗಳ ಗುಂಪು

೧೮. ಬೌಂಡ್ ಟಾಂಕ್ : ಈ ಸಮುದಾಯದ ವ್ಯಕ್ತಿಯಲ್ಲಿ ಒಮ್ಮೆ ಸಾಯಂಕಾಲ ಅನೇಕ ಗುಂಗಿ ಹುಳುಗಳನ್ನು ಸಾಯಿಸಿದನು. ಅಂದಿನಿಂದ ಇವರಿಗೆ ಇವನ ವಂಶದವರಿಗೆ ಭೌಂಡ ಟಾಂಕ್ ಎಂದು ಕರೆಯುವರು.

ಇಂತಹ ಸಿಕ್ಲಿಗರ ಬುಡಕಟ್ಟು ಜನಾಂಗ ತಮ್ಮ ತಮ್ಮಲ್ಲಿ ವಿವಾಹ ಮಾಡಿಕೊಳ್ಳುವುದುಂಟು. ಆದರೆ ಯಾವುದೇ ಅಹಿತಕರ ಘಟನೆಗೆ ಆಸ್ಪದವಿಲ್ಲ. ಬಹುಪತ್ನಿತ್ವವಿದೆ. ಹಲವು ಮಕ್ಕಳನ್ನು ಹೆರಲೂಬಹುದು ಇಂತಹ ಅನೇಕ ನಿಯಮಗಳನ್ನು ಹೊಂದಿವೆ. ಸಿಕ್ಕ, ಸಿಖ್ಖ್, ಸಮುದಾಯದಂತೆ ಇದು ಕೂಡಾ ಒಂದೇ ಎಂಬ ಭಾವನೆ ಹೊಂದಿದ್ದಾರೆ. ಇವರು ಅನೇಕ ಪ್ರದೇಶಗಳ ಜನರ ಅಸಹಕಾರ ನೀತಿ ಬೇಧಗಳನ್ನು ಕಂಡು ದೂರ ಸರಿದಿದ್ದಾರೆ. ಸಿಖ್‌ರ ಗುರುವಾದ ಗುರುನಾನಕ್ ಜಯಂತಿ ದಿನದಂದು 'ಲಂಗಾರು' ಉತ್ಸವ ಮಾಡುತ್ತಾರೆ. ಲಂಗಾರು, ಎಂಬುದು ಹರಕೆಯ ಪದ್ಧತಿಯಾಗಿದೆ. ಸಿಕ್ಲಿಗರು ಹಾಗೂ ಸಿಖ್ಖ್‌ರ ಪ್ರಮುಖ ಹಬ್ಬಗವಾಗಿವೆ. ಅವರಲ್ಲಿ ಎಲ್ಲರೂ ಕೂಡಿಯೇ ಆಚರಿಸುತ್ತಾರೆ. ಗುರುದ್ವಾರದಿಂದಲೂ ಊಟ ಹಾಕಿ ಎಲ್ಲರೂ

ಕೂಡಿಯೇ ಪಂಕ್ತಿಯಲ್ಲಿ ಭೋಜನ ಕೈಗೊಳ್ಳುತ್ತಾರೆ. ಪುರೋಹಿತರನ್ನು ಅವರು ಕರೆಸುವುದಿಲ್ಲ. ಪುರೋಹಿತ ಪದ್ಧತಿ ಸಿಕ್ಲಿಗರ ಜನಾಂಗದಲ್ಲಿ ಇಲ್ಲವೇ ಇಲ್ಲ. ತಮ್ಮಲ್ಲಿಯ ಹಿರಿಯರನ್ನು ಪಂಚಮರೆಂದು ಕರೆಯುತ್ತಾರೆ. ಅವರಲ್ಲಿ ಇಬ್ಬರನ್ನು ಪೂಜಾರಿಗಳೆಂದು ಬಗೆದು ಲಂಗಾರ ಸಂದರ್ಭದಲ್ಲಿ ಅವರು ಹಾಗೂ ಜನಸಮುದಾಯಗಳೆಲ್ಲರೂ ಸೇರಿಕೊಂಡು ಕಾರ್ಯ ನಿರ್ವಹಿಸುತ್ತಾರೆ. ತಾವೇ ಸ್ವತಃ ಹೆಣ್ಣು ಗಂಡುಗಳು ಕೂಡಿಕೊಂಡು ಈ ಊಟವನ್ನು ಮಾಡಿ ಬಡಿಸುತ್ತಾರೆ. ಬುಡಕಟ್ಟು ಜನಾಂಗದ ಜನರೆಲ್ಲಾ ಅಲ್ಲಿ ಸಾಮೂಹಿಕವಾಗಿ ಸೇರುತ್ತಾರೆ. ವೈವಾಹಿಕ ಸಂಬಂಧವನ್ನು ಬಿಟ್ಟರೇ ಸಿಖ್ಖರು ಸಿಕ್ಲಿಗರು ತಾವೆಲ್ಲ ಒಂದೇ ಎಂದು ಭಾವಿಸುತ್ತಾರೆ. ಸಿಕ್ಲಿಗರು ಆರ್ಥಿಕ ದೃಷ್ಟಿಯಿಂದ ಹಿಂದೆ ಬಿದ್ದವರು ಸಿಖ್ಖರಾದ ಎಲ್ಲಾ ಅರ್ಹತೆಗಳನ್ನು ಮೀರಿ ಬೆಳೆದವರು. ಬಡತನ ಶ್ರೀಮಂತಿಕೆಯಂತಹ ಅಂತರಗಳು ಕಾಣಸಿಗುತ್ತವೆ. ವೈವಾಹಿಕ ಸಂಬಂಧ ಇವರಲ್ಲಿ ನಡೆಯದೇ ಇರುವುದು ಕಾರಣ ಬಡತನ ಹಾಗೂ ಆರ್ಥಿಕ ಸ್ಥಿತಿಯೇ ಕಾರಣವಾಗಿದೆ. ಉಳಿದಂತೆ ಎಲ್ಲಾ ಸಂದರ್ಭದಲ್ಲಿ ವಿಶೇಷವಾಗಿ ಲಂಗಾರು ಹಬ್ಬದಲ್ಲಿ ಎಲ್ಲರೂ ಕೂಡಿಕೊಂಡು ಹಬ್ಬ ಆಚರಿಸುತ್ತಾರೆ. ಸಿಖ್ಖರ ಉಡುಪುಗಳು ಹಾಗೂ ಅವರು ಆಚರಿಸುವ ಪದ್ಧತಿಗಳು ಒಂದೇಯಾಗಿ ಬಂದಿವೆ. ಅವರ ವೇಷ-ಭೂಷಣಗಳು ಒಂದೇಯಾಗಿವೆ. ಗಂಡಸರೂ ಹಾಗೂ ಹೆಂಗಸರು ಕೂಡಿಕೊಂಡು ಸಿಖ್ಖರು ಹಾಗೂ ಸಿಕ್ಲಿಗರು ಸಮಾನವಾಗಿ ಸೇರಿಕೊಂಡು ಲಂಗಾರದಲ್ಲಿ ಭಾಗವಹಿಸುತ್ತಾರೆ. ಆಗ ಸರಳವಾಗಿ ಸಮಾನತೆಯಿಂದ ಕೂಡಿಕೊಂಡು ಆಚರಿಸುತ್ತಾರೆ.

ಅಡುಗೆಯನ್ನು ಸಿಖ್ಖರು ಹಾಗೂ ಸಿಕ್ಲಿಗರ ಸಮುದಾಯದ ಹೆಣ್ಣುಮಕ್ಕಳು ಸೇರಿಕೊಂಡು ಮಾಡುತ್ತಾರೆ. ಇಂತಹ ಹೊತ್ತಿನಲ್ಲಿ ಎಲ್ಲರೂ ಸೇರಿಕೊಂಡು ಸುಖ ದುಃಖಗಳನ್ನು ಹಂಚಿಕೊಂಡು ತಮ್ಮಲ್ಲಿಯ ನ್ಯೂನ್ಯತೆಗಳನ್ನು ಸಫಲತೆಗಳನ್ನು ಆಚರಿಸಿ ಸುಖಪಡುತ್ತಾರೆ. ಪ್ರಾದೇಶಿಕವಾದ ಭಿನ್ನತೆ ಹೊಂದಿದ ಈ ಸಿಕ್ಲಿಗರು ತಮ್ಮ ಇಡೀ ಸಮುದಾಯ ಕುಟುಂಬಗಳು ಒಂದೇಯಾಗಿ ನಡೆಸಿಕೊಂಡು ಬರುತ್ತಾರೆ. ಹಗಲಿರುಳು ತಮ್ಮ ಬದುಕಿನ ನಾನಾ ಕಡೆ ಚಿಂತನೆಗಳನ್ನು ಕೈಗೊಂಡಿದ್ದಾರೆ. ವೇಷ ಭೂಷಣಗಳು ಅವರಲ್ಲಿ ವಿಶೇಷವಾಗಿ ದೊರಕುವುದಿಲ್ಲ. ಈ ಎಲ್ಲಾ ಪುರೋಹಿತಶಾಹಿತ್ವ, ವೈದಿಕ ಪರಂಪರೆ ಹಿಂದೂಗಳ ಆಚರಣೆಗಳನ್ನು ಅವರು ಮಾಡದೇ ತಮ್ಮದೇಯಾದ ಬುಡಕಟ್ಟು ಸಂಸ್ಕೃತಿಯ ಹತ್ತು ಹಲವು ವಿಚಾರಧಾರೆಗಳನ್ನು ಅರಿತುಕೊಂಡು ಮುನ್ನಡೆಸಿಕೊಂಡು ಹೋಗುತ್ತಲಿದ್ದಾರೆ. ಆ ಮೂಲಕ ತನ್ನ ಸ್ವಾತಂತ್ರ್ಯ ಜೀವನ ಸಾಧನೆಗಳನ್ನು ನಿರ್ವಹಿಸಿಕೊಂಡು ಬರುತ್ತಿದ್ದಾರೆ. ಇಂದಿಗೂ ಎಲ್ಲೂ ಕೂಡಾ ಈ ಜನಾಂಗ ಭಿಕ್ಷೆ ಎತ್ತುವುದಾಗಲಿ, ಭಿಕ್ಷೆ ಬೇಡುವುದಾಗಲಿ ದುಡಿಯದೇ ಊಟ ಮಾಡುವುದಿಲ್ಲ. ಇಂದು ತಲವಾರ, ಕತ್ತಿ, ಕುಡಗೋಲು, ಮಚ್ಚು ಮುಂತಾದ ಆಯುಧಗಳನ್ನು ತಯಾರಿಸುವುದರಿಂದ ನೋಡುವ ಜನರೆಲ್ಲಾ ಭಯ ಹೊಂದುತ್ತಾರೆ. ಇವರ ಆಕಾರ ವಿಕಾರಗಳು ಕೂದಲು ಜಡೆ, ಗಡ್ಡ ಎಲ್ಲವನ್ನು ನೋಡಿದರೆ ಇವರ ಜನಸಮುದಾಯಗಳು ಹೆದರಿಕೊಂಡು ಹೋಗುತ್ತಾರೆ. ಇದರಿಂದ ಎಲ್ಲಾ ಜನರು ದೂರ ಉಳಿಯುವ ಸಾಧ್ಯತೆಯಿದೆ. ಈ ಸಿಕ್ಲಿಗರ ಬುಡಕಟ್ಟು ಜನಾಂಗ ಮಾತ್ರ ಸದಾ ಕ್ರೀಯಾಶೀಲವಾಗಿ ಕೆಲಸ ಕಾರ್ಯಗಳನ್ನು

ಕೈಗೊಂಡು ಆತ್ಮೀಯತೆ, ಪ್ರೀತಿ ವಿಶ್ವಾಸ, ಹಾಗೂ ಸೌಜನ್ಯತೆಯಿಂದ ಬಾಳನ್ನು ಮುನ್ನೆಡೆಸಿಕೊಂಡು ಬಂದಿದ್ದಾರೆ. ತಾವು ವಾಸಿಸುವ ಪ್ರದೇಶದಲ್ಲಿ ತಾವೇ ಭಾಗ ಮಾಡಿಕೊಂಡು ತಟ್ಟೆ ತಟ್ಟಿನ ಚೀಲದ ಅಥವಾ ತಗಡನ್ನು, ಅಥವಾ ಟೀಣ್‌ಗಳನ್ನು ಹಾಕಿಕೊಂಡು ಮನೆಯನ್ನು ನಿರ್ಮಿಸಿಕೊಂಡಿದ್ದಾರೆ.

ಆ ಮನೆಗಳಲ್ಲಿ ಅವರು ವಾಸವಾಗಿದ್ದುಕೊಂಡು ತಮ್ಮ ಪಾಡಿಗೆ ತಾವು ಕೆಲಸವನ್ನು ನಿರ್ವಹಿಸಿಕೊಂಡು ಹೋಗುತ್ತಿದ್ದಾರೆ. ಶ್ರಮಸಂಸ್ಕೃತಿ ಮೂಲಕ ಉನ್ನತಕ್ಕೇರಲು ಪ್ರಯತ್ನಿಸುತ್ತಾರೆ. ಕೆಲವು ಕಡೆ ಅಂಬೇಡ್ಕರ್ ಆಶ್ರಯ, ಇಂತಹ ಯೋಜನೆಗಳ ಮನೆಗಳು ದೊರಕಿವೆ. ಇವರನ್ನು ಪೋಲಿಸರು ಅಘಾತಕಾರಿ ವ್ಯಕ್ತಿಗಳೆಂದು ಹಿಡಿಯುತ್ತಾರೆ. ಇವರು ತಲವಾರ, ಚಾಕು, ಚೂರಿಗಳನ್ನು ತಯಾರಿಸುವುದರಿಂದ ಈ ಜನಾಂಗವನ್ನು ಇತರರು ಕೆಟ್ಟ ದೃಷ್ಟಿಯಿಂದ ನೋಡುತ್ತಾರೆ. ಕಬ್ಬಿಣದಂತಹ ವಸ್ತುಗಳು ಕಳವು ಆದರೆ ಅಥವಾ ಏನಾದರೂ ಆಘಾತಕಾರಿ ಘಟನೆ ನಡೆದರೆ ಕೂಡಲೇ ಪೋಲಿಸರು ಹಿಂದೆ ಮುಂದೆ ನೋಡದೇ ಅಮಾಯಕ ಜನಾಂಗವನ್ನು ಹಿಡಿದು ಲಾಕ್‌ಪ್‌ನಲ್ಲಿ ಹಾಕುತ್ತಾರೆ. ಸಿಕ್ಲಿಗರ ಸಮುದಾಯವು ಬಡತನದ ಮಧ್ಯದಲ್ಲಿ ತಮ್ಮ ಸ್ವಾಭಿಮಾನ ಪ್ರತಿಷ್ಠೆಯನ್ನು ಬಿಡಲಾರದಂತಹ ಬುಡಕಟ್ಟು ಜನಾಂಗವಾಗಿದೆ. ಇದರಿಂದ ರಕ್ಷಣೆ ಹೊಂದಲು ತಮ್ಮ ಅನುಕೂಲಕ್ಕೆ ತಕ್ಕಂತೆ ರಕ್ಷಣೆ ನೀಡುತ್ತಾರೆ. ತಹಸೀಲ್ದಾರರ ಮೂಲಕ ತಾವು ಅರ್ಜಿ ಸಲ್ಲಿಸಿ ಸೂಕ್ತ ರಕ್ಷಣೆ ಮಾಡಿಕೊಂಡಿದ್ದಾರೆ. ಭಾರತ ದೇಶದ ಮೂಲ ನಿವಾಸಿಗಳಾದ ಸಿಕ್ಲಿಗರ ಕುಟುಂಬ ಕರ್ನಾಟಕದಲ್ಲಿ ಮಹಾರಾಷ್ಟ್ರದಲ್ಲೂ, ಆಂಧ್ರಪ್ರದೇಶದ ಗಡಿಭಾಗದಲ್ಲಿ ನೆಲೆಯೂರಿ ಇಂದು ಅತ್ಯಂತ ಚಿಕ್ಕ ಬುಡಕಟ್ಟುಗಳಾಗಿ ತನ್ನ ಚಾರಿತ್ರಿಕವಾದ, ಐತಿಹಾಸಿಕವಾದ ಪರಂಪರೆಯನ್ನು ಹೊಂದಿದೆ. ಎಂಬುದನ್ನು ಅನೇಕ ಕ್ಷೇತ್ರಕಾರ್ಯದ, ಸಂಶೋಧನೆ ಮೂಲಕ ಹೇಳಬಹುದು. ಆದರೆ ಇದೂವರೆಗೂ ಈ ಸಿಕ್ಲಿಗರರನ್ನು ಕುರಿತು ಯಾವುದೇ ಅಧ್ಯಯನಗಳು ನಡೆದಿಲ್ಲ. ಶ್ರಮದ ಮೂಲಕ ಎಲೆಮರೆಯ ಕಾಯಿಗಳಂತೆ ತಮ್ಮ ಹೋರಾಟದ ಬದುಕಿನಲ್ಲಿ ಜೀವನ ತೇಯ್ದು ಅಪರೂಪದ ಬುಡಕಟ್ಟು ಜನಾಂಗವಾಗಿದೆ. ಈ ಕಾರಣಕ್ಕಾಗಿಯೇ ಈ ಸಿಕ್ಲಿಗರ ಕುಟುಂಬ ಅಧ್ಯಯನವನ್ನು ಚಾರಿತ್ರಿಕ ದಾಖಲೆಗಳನ್ನು ಈ ಮೂಲಕ ಗುರುತಿಸಲಾಗಿದೆ.

ಸಿಖ್ಖರು –ಸಿಕ್ಲಿಗರ– ಸಿಕ್ಕಲಗಾರರು ಇವರ ನಡುವಿನ ವ್ಯತ್ಯಾಸಗಳು

ಭಾರತ ದೇಶದಲ್ಲಿ ಹಲವಾರು ಬುಡಕಟ್ಟು ಜನಾಂಗಗಳು ಜನ್ಮ ತಾಳಿದವು. ಅವುಗಳಿಗೆ ಅವರದೇಯಾದ ಭಾಷೆಯಿದೆ, ಸಂಸ್ಕೃತಿಯಿದೆ. ಆದರೆ ಲಿಪಿಯಿಲ್ಲ. ಅಂತಹ ನೂರಾರು ಬುಡಕಟ್ಟುಗಳು ಇಂದಿಗೂ ಕೂಡ ಕರ್ನಾಟಕದಲ್ಲಿ ಸಿಗುತ್ತವೆ. ಮೊದಲು ಬೆಟ್ಟ ಗುಡ್ಡ, ಕಾಡುಗಳಲ್ಲಿ ವಾಸವಾದ ಜನಸಮುದಾಯವು ತನ್ನ ವೃತ್ತಿ ಕುಲಕಸಬುಗಳನ್ನು ಆರಿಸಿಕೊಂಡಿತು. ಆಯಾ ಬುಡಕಟ್ಟುಗಳ ವೃತ್ತಿಗಳ ಹಾಗೂ ಕುಲಕಸಬುಗಳ ಆಧಾರದ ಮೇಲೆ ಬುಡಕಟ್ಟುಗಳನ್ನು ಗುರುತಿಸಲಾಗುತ್ತದೆ. ನಾಗರೀಕ ಸಮುದಾಯದ ಸಂಸ್ಕೃತಿಯಲ್ಲಿ ಸಮಾಜಶಾಸ್ತ್ರದ ಹಲವು

ಬುಡಕಟ್ಟುಗಳ ಅಧ್ಯಯನವಾಗಬೇಕಿದೆ. ಆ ನಿಟ್ಟಿನಲ್ಲಿ ರಾಜಗೊಂಡ, ಕಾಡುಕುರುಬ, ಜೇನುಕುರುಬ, ಮುಂಡಾ, ಇರುಳಿಗ, ಟೋಕ್ರೆಕೋಳಿ, ಬೇಡ, ಕುಡಿಯಾ, ಪಾರ್ಧಿ, ಗೋಸಂಗಿ, ಕಾಡುಗೊಲ್ಲ, ಮ್ಯಾಸನಾಯಕ, ಅಡವಿಚೆಂಚರು, ದುರುಗಮುರುಗಿಯರು, ಹಗಲುವೇಷಗಾರರು, ಹಕ್ಕಿಪಿಕ್ಕಿಯರು, ಸುಡುಗಾಡಸಿದ್ದರು, ಲಂಬಾಣಿಗರು, ಹೆಳವರು, ಗೊಂದಲಿಗರು, ಹಾಲಕ್ಕಿಯರು, ಬುಡಬುಡಕಿಯರು, ದಾಸರು, ಪಿಂಜಾರರು ಮುಂತಾದ ಬುಡಕಟ್ಟು ಸಮುದಾಯಗಳ ಕುರಿತು ಬಹುಸಂಸ್ಕೃತಿಯ ನೆಲೆಯಲ್ಲಿ ಅಧ್ಯಯನಗಳನ್ನು ಕೈಗೊಳ್ಳಲಾಗಿದೆ. ರಾಜಕೀಯ, ಆರ್ಥಿಕ, ಶೈಕ್ಷಣಿಕ, ಸಾಹಿತ್ಯಿಕ, ಭಾಷಿಕ, ಕಲೆ, ಸಂಸ್ಕೃತಿ ಹಾಗೂ ಸಾಮಾಜಿಕರಣದ ವಿವಿಧ ಆಯಾಮಗಳ ಮುಖಾಂತರ ಒಂದು ಜನಾಂಗವನ್ನು ನೋಡಲಾಗಿದೆ. ಇಷ್ಟಾದರೂ ಇನ್ನೂ ಹಲವು ಬುಡಕಟ್ಟುಗಳು ಹಾಗೇ ಉಳಿದುಕೊಂಡಿವೆ. ಅವುಗಳಲ್ಲಿ ಪ್ರಮುಖವಾದದ್ದು ಸಿಕ್ಲಿಗರ ಬುಡಕಟ್ಟು ಜನಾಂಗವು ಒಂದಾಗಿದೆ.

ಬುಡಕಟ್ಟು ಜನಾಂಗಗಳು ಕೆಲವೊಂದು ಸಾಮ್ಯತೆಯ ಗುಣಲಕ್ಷಣಗಳನ್ನು ಹೊಂದಿಕೊಂಡಿರುತ್ತದೆ. ಕೆಲವೊಂದು ಬುಡಕಟ್ಟುಗಳು ತೀರಾ ಭಿನ್ನವಾಗಿ ತಮ್ಮ ಮೂಲ ನೆಲೆಗಳಿಗಿಂತ ಬೇರೆಯಾಗಿಯೇ ನಮಗೆ ಕಂಡು ಬರುತ್ತವೆ. ಆಚಾರ-ವಿಚಾರ, ನ್ಯಾಯ-ನೀತಿ, ಧಾರ್ಮಿಕ ಹಬ್ಬ ಆಚರಣೆಗಳು, ಆರ್ಥಿಕ ಸ್ಥಿತಿ-ಗತಿ, ಜೀವನ ವಿಧಾನ, ಸಾಮಾಜಿಕ-ಸಾಂಸ್ಕೃತಿಕ ಮಹತ್ವ, ಪ್ರಾದೇಶಿಕ ಭಿನ್ನತೆ, ವೈವಾಹಿಕ ಸಂಬಂಧಗಳಲ್ಲಿ ಭಿನ್ನತೆ ಕಾಣಿಸುತ್ತವೆ. ಇಂತಹ ಭಿನ್ನತೆಗಳನ್ನು ನಾವು ಸಿಕ್ಲಿಗರ ಬುಡಕಟ್ಟು ಜನಾಂಗದಲ್ಲಿ ಕಾಣಬಹುದಾಗಿದೆ. ಈ ಬುಡಕಟ್ಟು ಜನಾಂಗವು ಭಾರತ ದೇಶದ ಪಂಜಾಬದ ರಾಜಾ ರಣಜಿತ್‌ಸಿಂಗ (೧೭೬೨-೧೮೦೩) ರ ಆಡಳಿತದಲ್ಲಿ ಕಬ್ಬಿಣದ ಮೂಲಕ ಶಸ್ತ್ರಾಸ್ತ್ರಗಳನ್ನು ಮಾಡಿಕೊಡುತ್ತಾ ಬಂದಿದ್ದಾರೆ. ರಾಜಾ ರಣಜಿತ್‌ಸಿಂಗ್ ಹಾಗೂ ಹೈದ್ರಾಬಾದ್ ಸಂಸ್ಥಾನದಲ್ಲಿ ಆಳ್ವಿಕೆಯನ್ನು ನಿರ್ವಹಿಸುತ್ತಿರುವ ನಿಜಾಮ ಅಲಿಖಾನ್ ಬಹದ್ದೂರ್(೧೭೬೩-೧೮೦೩) ಇವರಿಬ್ಬರೂ ಸ್ನೇಹ ಬಾಂಧವ್ಯ ಹೊಂದಿದ್ದರು.ನಿಜಾಮನಿಗೆ ಸೈನಿಕರ ಅಭಾವ ಕಂಡು ಬಂದಾಗ ರಾಜಾ ರಣಜಿತ್‌ಸಿಂಗ್‌ನಿಗೆ ತನ್ನಲ್ಲಿದ್ದ ಸೈನ್ಯದ ತುಕಡಿಯನ್ನು ಕಳಿಸಲು ಕೋರಿದಾಗ ರಣಜಿತ್‌ಸಿಂಗ್ ಅತ್ಯಂತ ಪ್ರಾಮಾಣಿಕರು, ಸತ್ಯನಿಷ್ಠರು, ವೀರರೂ, ಶೂರರು, ಧೈರ್ಯಶಾಲಿಗಳಾದ ಸಿಕ್ಲಿಗರನ್ನು ಕಳುಹಿಸುತ್ತಿದ್ದರು. ಸಿಕ್ಲಿಗರು ರಾಜಾ ರಣಜಿತ್‌ಸಿಂಗ್‌ನ ಆಸ್ಥಾನದಲ್ಲಿ ಹರಿತವಾದ ಕಬ್ಬಿಣದ ಶಸ್ತ್ರಾಸ್ತ್ರಗಳಿಗೆ ಸಾಣೆ ಹಿಡಿಯುವ ಕೆಲಸ ಕೈಗೊಂಡಿದ್ದರು. ಮುಂದೆ ನಿಜಾಮನ ಹೈದ್ರಾಬಾದ್ ಸಂಸ್ಥಾನದಲ್ಲಿ ಬಂದ ಮೇಲೂ ನಿಜಾಮನು ಕಬ್ಬಿಣದ ಶಸ್ತ್ರಾಸ್ತ್ರಗಳನ್ನು ತಯಾರಿಸಲು, ಸೈನ್ಯದೊಳಗಿರಲು ರಾಜಾಶ್ರಮ ನೀಡಿದ. ತನಗೆ ಕಂದಾಯ ವಸೂಲಿ ಆಗದ ಸಂದರ್ಭದಲ್ಲಿ ಕಟ್ಟುಮುಟ್ಟಾದ ದೇಹ ಹೊಂದಿದ ಗಡ್ಡ, ತಲೆಗೆ

ಪಥಟಾ ಸುತ್ತಿಕೊಂಡಿರುವ ಸಿಕ್ಲಿಗರರನ್ನು ಕಂಡರೆ ಜನರು ಭಯ ಪಡುತ್ತಿದ್ದರು. ಆದ್ದರಿಂದ ಇವರನ್ನು ಕಂದಾಯ ವಸೂಲಿಗೆ ಹಚ್ಚಿದ. ಇವರನ್ನು ಕಂಡ ಜನ ತಮ್ಮಲ್ಲಿದ್ದ ಕಂದಾಯ ನೀಡಲು ಪ್ರಾರಂಭಿಸಿದರು. ಇದರಿಂದ ನಿಜಾಮನ ಕಂದಾಯ ಅಧಿಕವಾಯಿತು. ಆ ಕಾರಣಕ್ಕಾಗಿ ಸಿಕ್ಲಿಗರನ್ನು ತನ್ನಲ್ಲಿ ಇಟ್ಟುಕೊಂಡ ರಣಜಿತ್‌ಸಿಂಗ್‌ನ ಪಂಜಾಬಕ್ಕೆ ಕಳಿಸಲಿಲ್ಲ. ಯಾವಾಗ ರಜಾಕಾರರ ಹಾವಳಿ ಪ್ರಾರಂಭವಾಗಿ ಕಾಶೀರ ರಜ್ವಿ ಆ ಸೈನ್ಯದ ನೇತೃತ್ವ ವಹಿಸಿಕೊಂಡ ಆಗ ಈ ಬುಡಕಟ್ಟು ಜನಾಂಗ ನಿರ್ಲಕ್ಷ್ಯಕ್ಕೆ ಒಳಪಟ್ಟಿತು. ಅಲ್ಲಿಂದಲೇ ಇವರು ಕಾಲುಕಿತ್ತು ಹೊರಹೋಗಲು ಪ್ರಾರಂಭಿಸಿದರು. ಕೊನೆಗೆ ೧೯೪೮ ರಲ್ಲಿ ಭಾರತ ದೇಶದಲ್ಲಿ ಹೈದ್ರಾಬಾದ್ ಸಂಸ್ಥಾನ ವಿಲೀನಗೊಂಡಾಗ ಕರ್ನಾಟಕದ ಹಲವು ಪ್ರದೇಶಗಳಲ್ಲಿ ನೆಲೆ ನಿಂತರು. ಪೂರ್ಣಪ್ರಮಾಣದಲ್ಲಿ ಇಲ್ಲಿಯ ಬುಡಕಟ್ಟು ಜನಾಂಗವಾಗಿ ಹೊರ ಬಂದರು. ಇದನ್ನು ಕುರಿತು ಇದುವರೆಗೂ ಯಾರು ಅಧ್ಯಯನ ಪ್ರಸ್ತಾಪಗಳನ್ನು ಮಾಡಿಲ್ಲ.ಕರ್ನಾಟಕದಲ್ಲಿಯೇ ಇದೊಂದು ಬುಡಕಟ್ಟು ತೀರಾ ನಿರ್ಲಕ್ಷ್ಯಕ್ಕೆ ಒಳಗಾಗಿದೆ ಎನ್ನಬಹುದು. ಇದಕ್ಕೆಲ್ಲ ಬಡತನ, ಜನಸಮುದಾಯ ಹರಿದು ಹಂಚಿ ಹೋಗಿರುವುದು, ಕಡಿಮೆ ಪ್ರಮಾಣದ ಜನಸಂಖ್ಯೆ, ಹೀಗಾಗಿ ಇವರಲ್ಲಿ ಹಾಗೂ ಇವರ ಬುಡಕಟ್ಟುಗಳಾದ ಸಿಖ್ಖರು-ಸಿಕ್ಕಲಗಾರರು - ಸಿಕ್ಲಿಗರು ಈ ಹೆಸರುಗಳನ್ನು ನಾವು ನೋಡಿದಾಗ ಒಂದೇ ಎಂದು ಕಾಣುತ್ತದೆ. ಇವೆಲ್ಲಾ ಒಂದೆ ಬುಡಕಟ್ಟು ಜನಾಂಗಗಳು ಭಿನ್ನತೆ ಹೊಂದಿರುವುದು ನಮಗೆ ಸ್ಪಷ್ಟವಾಗಿ ಕಂಡು ಬರುತ್ತದೆ.

ಸಿಖ್ಖರು

ಸಿಖ್ಖರು ಸಿಖ್ಖ ಧರ್ಮವನ್ನು ಪಾಲಿಸಿಕೋಂಡು ಗುರುನಾನಕ್‌ನನ್ನು ಹಾಗೂ ಗುರುಗೋವಿಂದ ಸಿಂಗ್ ಅವರ ಅನುಯಾಯಿಗಳಾಗಿದ್ದಾರೆ. ಸಿಖ್ಖ ಸಮುದಾಯ ಪಂಜಾಬ ಪ್ರಾಂತದಿಂದ ಹುಟ್ಟಿಕೊಂಡು ಬಂದಿದೆ. ಆ ಧರ್ಮಾಚರಣೆಗಳನ್ನು ಅತ್ಯಂತ ಕಟ್ಟುನಿಟ್ಟಿನಿಂದ ಪಾಲಿಸಿಕೊಂಡು ಬರುವ ಬುಡಕಟ್ಟು ಜನಾಂಗವು ಸಿಕ್ಲಿಗರರಾಗಿದ್ದಾರೆ. ಸಿಖ್ಖ ಹಾಗೂ ಸಿಕ್ಲಿಗರರಲ್ಲಿ ಭಿನ್ನತೆಗಳು ಆಚರಣೆಗಳು ವೇಷ-ಭೂಷಣಗಳಲ್ಲಿ ಭಿನ್ನತೆ ಹೊಂದಿಲ್ಲ. ಸಿಖ್ಖ ಸಮುದಾಯದ ಮೂಲಕ ಹೊರ ಬಂದ ವೀರ, ಧೀರರ, ಸ್ವಾಭಿಮಾನಗಳ ಗುಂಪಾಗಿ ಸಿಕ್ಲಿಗರು ಕಂಡು ಬರುತ್ತಾರೆ.

ಸಿಕ್ಕಲಗಾರರೆಂದು ಕರೆಸಿಕೊಳ್ಳುವ ಜನಾಂಗವು ಎಮ್ಮೆ ಬೋಳಿಸುವ, ಶೌಚಾಲಯಗಳ ಸ್ವಚ್ಚಗೊಳಿಸುವ ಬುಡಕಟ್ಟು ಜನಾಂಗವು ಕರ್ನಾಟಕದಲ್ಲಿದೆ. ಇದರಲ್ಲಿ ಇವರು ಯಾರು ಭಿನ್ನರೆಂದು ಕಾಣಿಸುತ್ತಿಲ್ಲ. ಆದರೆ ಸಿಕ್ಲಿಗರು ಕಟ್ಟುನಿಟ್ಟಿನ ಸಂಪ್ರದಾಯ, ರೀತಿ-ನೀತಿಗಳನ್ನು ಹೊಂದಿದ್ದಾರೆ.

ಸಿಕ್ಕಲಗಾರರು ಇವುಗಳಾವುದನ್ನು ಹೊಂದಿಲ್ಲ. ಸಿಕ್ಲಿಗರು ಮೂಲತಃ ಉತ್ತರಭಾರದಿಂದ ಬಂದವರಾಗಿದ್ದಾರೆ. ಸಿಕ್ಕಲಗಾರರು ದಕ್ಷಿಣ ಭಾರತದಿಂದ ಬಂದವರು ಹೀಗಾಗಿ ವ್ಯತ್ಯಾಸಗಳನ್ನು ಹಾಗೂ ಸಾಮ್ಯತೆಗಳನ್ನು ಗುರುತಿಸಬಹುದಾಗಿದೆ.

ಸಿಕ್ಲಿಗರು	ಸಿಕ್ಕಲಗಾರರು
೧. ಪಂಜಾಬದಿಂದ ಬಂದವರು	೧ ರಾಜಸ್ಥಾನ, ಗುಜರಾತದಿಂದ ಬಂದವರು
೨. ಉತ್ತರ ಭಾರತದಿಂದ ಬಂದವರು	೨. ದಕ್ಷಿಣ ಭಾರತದ ಮೂಲಕ ಬಂದವರು
೩. ಇವರ ಭಾಷೆ ಸಿಕ್ಲಿಗ	೩. ಇವರದು ಸಿಕ್ಕಲಿಗ ಭಾಷೆ
೪. ಇವರ ಭಾಷೆಗೆ ಲಿಪಿಯಿಲ್ಲ	೪. ಭಾಷೆಗೆ ಲಿಪಿಯಿಲ್ಲ
೫. ಆಡು ಮಾತಿನ ಸಿಕ್ಲಿಗ ಭಾಷೆ	೫. ಆಡುವ ಭಾಷೆ ಸಿಕ್ಕಲಿ ಭಾಷೆ
೬. ಸಂಪ್ರದಾಯ,ಆಚರಣೆಗಳನ್ನು ನಂಬಿದ್ದಾರೆ.	೬. ಹಳೆಯ ಸಂಪ್ರದಾಯ ಕಂದಾಚಾರ ಮೂಢ ನಂಭಿಕೆಗಳನ್ನು ಹೊಂದಿದ್ದಾರೆ.
೭. ಪಕ್ಕಾ ಸಸ್ಯಹಾರಿಗಳು ಕೆಲವೆ ಕೆಲವು ಸಂದರ್ಭ ಗಳಲ್ಲಿ ಮಾಂಸ ಆಹಾರ ಸೇವನೆ ಮಾಡುತ್ತಾರೆ	೭. ಪಕ್ಕಾ ಮಾಂಸಹಾರಿಗಳು
೮. ಮದ್ಯ ಪಾನದಂತ ಪಾನೀಯಗಳ ಸೇವನೆ ಇಲ್ಲ	೮. ಮದ್ಯಪಾನ, ಪಾನೀಯಗಳ ಸೇವನೆ
೯. ಭಾರತ ದೇಶದಲ್ಲಿ ಉತ್ತರಪ್ರದೇಶ, ಪಂಜಾಬ, ಹರಿಯಾಣ, ಹಿಮಾಚಲಪ್ರದೇಶ, ಚಂಡಿಗಡ ಈ ಐದು ರಾಜ್ಯಗಳಲ್ಲಿ ಕಂಡು ಬರುತ್ತಾರೆ.	೯.ಭಾರತ ದೇಶದಲ್ಲಿ ಇವರ ಬಗ್ಗೆ ಉಲ್ಲೇಖಗಳಿಲ್ಲ
೧೦.ಕರ್ನಾಟಕದ ಜನಗಣತಿಯಲ್ಲಿ ಇವರನ್ನು ದಾಖಲಿಸಿಲ್ಲ ಕೆಲವರು ಸಿಖ್ಖ್ ಜನಾಂಗದಲ್ಲಿ ಸೇರಿಸಿದ್ದಾರೆ.	೧೦.ಕರ್ನಾಟಕದ ಜನಗಣತಿಯಲ್ಲಿ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಪಟ್ಟಿಯಲ್ಲಿ ಉಲ್ಲೇಖವಿದೆ.
೧೧.ಕಬ್ಬಿಣದಂತಹ ವಸ್ತುಗಳ ಮೂಲಕ ಗೃಹ, ಕೃಷಿಗೆ ಬೇಕಾದ ವಸ್ತುಗಳ ತಯಾರಿಕೆ ಉದಾ: ಈಳಿಗೆ, ತಲವಾರ,ಖಡ್ಗ, ಬರ್ಚಿ, ಮಚ್ಚು, ನೇಗಿಲು ಸಮಾನುಗಳನ್ನು ಸಾಣೆ	೧೧ ವೃತ್ತಿಯಿಂದ ಎಮ್ಮೆ ಬೋಳಿಸುವ ಶೌಚಾಲಯ ಸ್ವಚ್ಛಗೊಳಿಸುವ, ಖಡ್ಗ, ಭರ್ಚಿ, ಆಯುಧಗಳನ್ನು ಹರಿತಗೊಳಿಸುವ ವೃತ್ತಿ

ಹಿಡಿಯುವದು ವೃತ್ತಿಯಾಗಿದೆ.	
೧೨. Sikaligar ಎಂಬ ಪದ ಬಳಕೆ	೧೨. Shikkaligar ಪದ ಬಳಕೆಯಲ್ಲಿದೆ
೧೩. ಸಿಕ್ಲಿಗ ಭಾಷೆಗೆ ಸಿಖ್ಖ್ ಭಾಷೆ ಹತ್ತಿರ	೧೩. ಗುಜರಾತಿ ಭಾಷೆಗೆ ಹತ್ತಿರವಾಗಿದೆ.
೧೪.ಸಿಖ್ಖ್, ಹಿಂದಿ, ಭಾಷೆಗಳ ಮಿಶ್ರಿತ ಕನ್ನಡವನ್ನು ಸಹ ಅಲ್ಲಲ್ಲಿ ಬಳಕೆ ಮಾಡುತ್ತಾರೆ	೧೪. ಗುಜರಾತಿ, ಮರಾಠಿ, ಹಿಂದಿ, ಉರ್ದು ಭಾಷೆಗಳ ಸಮ್ಮಿಶ್ರತೆ ಇದೆ.
೧೫. ಹದಿನೆಂಟು ಬೆಡಗಗಳನ್ನು ಹೊಂದಿದೆ. ಈ ಹಿಂದೆ ವಿವರಿಸಲಾಗಿದೆ.	೧೫. ಐದು ಬೆಡಗಗಳನ್ನು ಹೊಂದಿದೆ. ೧. ಭಿಲಾನಾ ೨. ಪಾಂಚಾನಾ ೩. ಕಾನಾನಾ ೪. ಖಾಲಾನಾ ೫. ವಜಧನ್
೧೬.ಈ ಹದಿನೆಂಟು ಬೆಡಗಗಳಲ್ಲಿ ಮುದ್ರಾವಾಲೆ ಟಾಂಕ್ ಜನಸಂಖ್ಯೆ ಹೆಚ್ಚಾಗಿದೆ.	೧೬.ಈ ಐದು ಬೆಡಗುಗಳಲ್ಲಿ ಬಿಲಾನಾ ಹೆಚ್ಚು ಜನಸಂಖ್ಯೆ ಯನ್ನು ಕರ್ನಾಟಕದಲ್ಲಿ ಹೊಂದಿದ ಪ್ರಬಲ ಬೆಡಗು ಇದಾಗಿದೆ.
೧೭.ಜೂಣಿ ಟಾಂಕ್ ಜೊತೆ ಜೂಣಿಟಾಂಕ್ ವೈವಾಹಿಕ ಸಂಬಂಧಗಳನ್ನುಮಾಡುವುದಿಲ್ಲ.ಇವರು ಸಹೋದರ ಸಂಬಂಧಿಗಳಾಗುತ್ತಾರೆ.	೧೭.ಇವರು ಸಹ ಹಾಗೇ ವಿವಾಹವಾಗುವಂತಿಲ್ಲ
೧೮.ಜೂಣಿ ಟಾಂಕ್ ಜೊತೆ ಉಳಿದ ಹದಿನೇಳು ಬೆಡಗುಗಳು ವೈವಾಹಿಕ ಸಂಬಂಧವನ್ನು ಮಾಡ ಬಹುದು.	೧೮.ಭಿಲಾನಾ ಟಾಂಕ್ ಜೊತೆ ನಾಲ್ಕು ಬೆಡಗುಗಳು ವಿವಾಹವಾಗಲು ಅಡ್ಡಿಯಿಲ್ಲ.
೧೯.ವರನ ಮನೆಯ ಮುಂದೆ ಮದುವೆ ಮಾಡುವದು ಕಡ್ಡಾಯ	೧೯. ಇಲ್ಲಿಯೂ ಹಾಗೆ ಇದೆ.
೨೦.ವಿವಾಹ ಪೂರ್ವ ಐದು ಕೆ.ಜಿ. ಅರಿಷಿಣವನ್ನು ಏಳು ದಿನಗಳ ಕಾಲ ಹಚ್ಚುತ್ತಾರೆ.ಆದರೆ ಈಗ ಕೇವಲ ಒಂದೆ ದಿನ ಮಾತ್ರ ೨೧/೨ ಯಿಂದ ೩ಕೆ.ಜಿ. ಅರಿಷಿಣ ಹಚ್ಚುತ್ತಾರೆ.	೨೦. ವಿವಾಹವಾದ ನಂತರ ಹೆಂಡತಿ ಗಂಡನಿಗೆ, ಗಂಡ ಹೆಂಡತಿಗೆ ಅರಿಶಿಣ ಹಚ್ಚಿಕೊಳ್ಳುತ್ತಾರೆ. ಬೆಣ್ಣೆಯನ್ನು ಹಚ್ಚಿ ನೀರು ಹಾಕುತ್ತಾರೆ.

೨೧. ಇವರಲ್ಲಿ ಸಿಖ್ಖ್ ವೇಷಭೂಷಣಗಳನ್ನು ವಿವಾಹದಲ್ಲಿ ಧರಿಸುವರು.	೨೧. ಗುಜರಾತಿ ವೇಷಭೂಷಣಗಳನ್ನು ವಿವಾಹದಲ್ಲಿ ಧರಿಸುತ್ತಾರೆ.
೨೨. ಬಹು ಪತ್ನಿತ್ವ ಇವರಲ್ಲಿದೆ. ಆದರೆ ಬಹು ಅಪರೂಪ	೨೨. ಇವರಲ್ಲಿ ಬಹು ಪತ್ನಿತ್ವ ಇಂದಿಗೂ ಚಾಲ್ತಿಯಲ್ಲಿದೆ.
೨೩. ಅಣ್ಣ ಸತ್ತರೆ ಅಣ್ಣನ ಹೆಂಡತಿಯನ್ನು ಮಾತ್ರ ತಮ್ಮನಿಗೆ ಮದುವೆ ಮಾಡಬಹುದು	೨೩. ಅಣ್ಣ ಅಥವಾ ತಮ್ಮನ ಯಾರೆ ಹೆಂಡತಿ ಸತ್ತರೂ ಅವರು ಉಡುಕಿ ಮಾಡಿಕೊಳ್ಳಬಹುದು
೨೪. ಅವಿಭಕ್ತ ಕುಟುಂಬಗಳೇ ಇವರಲ್ಲಿಲ್ಲ.	೨೪. ಅವಿಭಕ್ತ ಕುಟುಂಬ ಹೊಂದಿದ್ದಾರೆ.
೨೫. ಮದುವೆಯ ವಯಸ್ಸು ಗಂಡಿಗೆ ೧೬ ಹೆಣ್ಣಿಗೆ -೧೪ ವರ್ಷ	೨೫.ಇವರಿಗೆ ಮದುವೆಯ ವಯಸ್ಸಿನಲ್ಲಿ ನಿರ್ಬಂಧತೆ ಇಲ್ಲ.
೨೬.ಮದುವೆಯ ಮರು ದಿನದಿಂದಲೆ ಪ್ರತ್ಯೇಕವಾದ ಜೀವನ ನಿರ್ವಹಣೆ ಮಾಡಿಕೊಳ್ಳುವದು	೨೬. ಇವರಲ್ಲಿ ಹಾಗೇನಿಲ್ಲ ಸಹೋದರರು ಕೂಡಿ ಕೊಂಡು ಹೋಗುವ ಪದ್ಧತಿ ಇದೆ.
೨೭.ಸಿಖ್ಖ್ ಸಂಸ್ಕೃತಿಯನ್ನು ಹಾಗೂ ಪಂಚರನ್ನು ಹೊಂದಿದೆ	೨೭. ತಾಂಡಾ ಸಂಸ್ಕ್ರತಿಯ ಮಾದರಿ ಹೊಂದಿದೆ.
೨೮.ಗುರು ಗೋವಿಂದ ಸಿಂಗ್, ಗುರುನಾನಕ್, ಬಚ್ಚತ್ತರ ಸಿಂಗ್ ಆರಾಧಕರು	೨೮. ಆದಿಶಕ್ತಿ ಆರಾಧನಾ ದೇವತೆ
೨೯.ಭೂತ, ಪ್ರೇತ, ಮಾಟ, ಮಂತ್ರಗಳಲ್ಲಿ ನಂಬಿಕೆ ಇಲ್ಲ.	೨೯. ಭೂತ, ಪ್ರೇತ, ಮಾಟ, ಮಂತ್ರಗಳಲ್ಲಿ ನಂಬಿಕೆ ಹೊಂದಿದ್ದಾರೆ.
೩೦. ಸಿಖ್ಖರ ಹಾಗೂ ಸಿಕ್ಲಿಗರು ಒಟ್ಟಾಗಿ ಲಂಗಾರ ಉತ್ಸವದಲ್ಲಿ ಪಾಲ್ಗೊಳ್ಳುತ್ತಾರೆ. ಪ್ರಾದೇಶಿಕವಾಗಿ ಹಿಂದೂಗಳ ಪ್ರಭಾವ ಇವರ ಮೇಲಾಗಿರುವುದರಿಂದ ಎಲ್ಲಮ್ಮ, ಭಾಗ್ಯವಂತಿ ಹಾಗೂ ಅಂಬಾ ಭವಾನಿಗೆ ಪಾದಯಾತ್ರೆ ಕೈಗೊಳ್ಳುತ್ತಾರೆ. ದೇವರುಗಳಿಗೆ ನಡೆದುಕೊಳ್ಳತ್ತಾರೆ. ಆದರೂ ಗುರುನಾನಕ್ ಆರಾಧ್ಯ ದೈವವೆಂದು ನಂಬಿದ್ದಾರೆ.	೩೦. ಆದಿಶಕ್ತಿಯ ಜೊತೆ ಇಲ್ಲಿಯ ಮೋಹರಂ ಹಾಗೂ ಹಿಂದೂ ಹಬ್ಬಗಳನ್ನು ಆಚರಿಸುತ್ತಾರೆ. ಇವರಿಗೆ ನಿಯಮವಿಲ್ಲ
೩೧. ಸತ್ತ ಶವವನ್ನು ಉದ್ದವಾಗಿ ಮಲಗಿಸುತ್ತಾರೆ. ಮತ್ತು ಸುಡುವ ಪದ್ಧತಿ ಇದೆ.	೩೧. ಇವರಲ್ಲಿ ಕೂಡಿಸಿ ಹೂಳುವ ಪದ್ಧತಿ ಇದೆ.

೩೨. ಇವರ ಮೂಲ ಕಸಬು ಕಬ್ಬಿಣ ವಸ್ತುಗಳ ತಯಾರಿಕೆ ಉಪಕಸಬು ಹಂದಿ ಸಾಕಾಣಿಕೆ ಯಾಗಿದೆ.	೩೨. ಇವರು ಒಂದೇ ಉದ್ಯೋಗ ಅವಲಂಬಿಸಿಲ್ಲ. ಹಣ್ಣು ಹಂಪಲಗಳನ್ನು ಮಾರುತ್ತಾರೆ. ಎಮ್ಮೆ ಬೋಳಿಸುವ, ಶೌಚಾಲಯ ಸ್ವಚ್ಛಗೊಳಿಸುವ ಉದ್ಯೋಗ ಹೊಂದಿದ್ದಾರೆ. ಇವರು ಮರ ಗಳನ್ನು ಕಡಿದು ಮತ್ತು ಹುಲ್ಲನ್ನು ತಂದು ಮಾರಾಟ ಮಾಡುವರು
೩೩.ಮಹಿಳೆಯರು ಮನೆ ಕೆಲಸಕ್ಕೆ ಮಾತ್ರ ಸೀಮಿತರಾಗಿದ್ದಾರೆ.	೩೩. ಇವರಲ್ಲಿ ಮಹಿಳೆಯರು ಹಗಲು, ರಾತ್ರಿ, ಮಳೆ, ಛಳಿ, ಗಾಳಿ, ಬಿಸಿಲುಗಳಲ್ಲಿ ಸದಾ ದುಡಿಯ ಬೇಕಾಗುತ್ತದೆ.
೩೪. ಪುರುಷ ಪ್ರಧಾನ ಸಂಸ್ಕೃತಿ	೩೪. ಪುರುಷ ಪ್ರಧಾನ ಸಂಸ್ಕೃತಿ ಹೊಂದಿದ್ದಾರೆ.
೩೫.ದೇವದಾಸಿ ಮತ್ತು ವೇಶ್ಯಾವಾಟಿಕೆಯಂತಹ ಪದ್ಧತಿಗಳಿಲ್ಲ.	೩೫. ಇವರಲ್ಲಿ ಇಲ್ಲ.
೩೬.ಮೂಲತಃ ಅಲೆಮಾರಿ ಜನಾಂಗವಾಗಿದ್ದು, ಈಗ ಅಲ್ಲಲ್ಲಿ ನೆಲೆಯೂರಿದ್ದಾರೆ.	೩೬. ಇವರು ಅಲೆಮಾರಿಗಳು ಕರ್ನಾಟಕದಲ್ಲಿದ್ದಾರೆ. ಈಗ ನೆಲೆ ನಿಂತಿದ್ದಾರೆ.
೩೭. ಅನಕ್ಷರಸ್ಥರೆ ಹೆಚ್ಚಾಗಿ ಕಂಡು ಬರುತ್ತಾರೆ.	೩೭. ಶಿಕ್ಷಣ ಪಡೆಯುವಲ್ಲಿ ಹೆಜ್ಜೆ ಇಡುತ್ತಿದ್ದಾರೆ.

ಆಧಾರಗಳು

೧. ಡಾ. ಎಚ್.ಜೆ, ಲಕ್ಕಪ್ಪಗೌಡ, ಕರ್ನಾಟಕ ಬುಡಕಟ್ಟುಗಳು – ೨೦೦೨

೨. ಕ್ಷೇತ್ರಕಾರ್ಯದಲ್ಲಿ ದೊರೆತ ಹಲವು ಮಾಹಿತಿಗಳು

೩. ಸಂದರ್ಶನ: ಬೀರುಸಿಂಗ್, ಬೀದರ್ ಜಿಲ್ಲೆಯ ಡಿ ಗ್ರೂಪ್ ನೌಕರರು –೨೦೦೦೬

೪. ಸಂದರ್ಶನ : ಬಲಬೀರ್ಸಿಂಗ್ ಪಾವಾ ಬೆಂಗಳೂರು –೨೦೦೫

೫. ಡಾ. ಆರ್.ವಿ.ಭಂಡಾರಿ: ಮಾರ್ಗದಿಂದ ಮಾರ್ಗದ ಕಡೆಗೆ – ೨೦೦೪

ಅಧ್ಯಾಯ : ನಾಲ್ಕು

ಜೀವನ ಮತ್ತು ಕುಲಕಸುಬು

ಅಧ್ಯಾಯ : ನಾಲ್ಕು

ಜೀವನ ಮತ್ತು ಕುಲಕಸುಬು

ಮಾನವ ಸಮಾಜ ಬಹು ವಿಶಿಷ್ಟವಾದುದು. ಅನೇಕ ಮಾನವೀಯ ಸಂಬಂಧಗಳನ್ನು ಹೊಂದಿರುವುದರಿಂದ ಜೀವನದ ಬಹು ಮುಖ್ಯ ಭಾಗವಾಗಿ ನಮಗೆ ಕಂಡುಬರುತ್ತದೆ. ವ್ಯಕ್ತಿ-ವ್ಯಕ್ತಿಗಳ ನಡುವೆ ಸಾಮಾಜಿಕ ಪ್ರಕ್ರೀಯೆಗಳಲ್ಲಿ ಪರಸ್ಪರ ಸಂಬಂಧಗಳನ್ನು ಹೊಂದುವುದು ಸ್ವಾಭಾವಿಕವಾಗಿದೆ. ಅವುಗಳು ಒಂದಕ್ಕೊಂದು ಭಿನ್ನವಾಗಿ ಕಾಣದೇ ಸಾಮ್ಯತೆಗಳ ಹಲವು ವಿಚಾರಧಾರೆಗಳು ನಮ್ಮಲ್ಲಿ ಕಾಣಸಿಗುತ್ತವೆ. ಇಂತಹ ಸಾಮಾಜಿಕ ಪರಸ್ಪರ ಸಾಮ್ಯ-ಸಾಮ್ಯತೆಗಳನ್ನು ಹೋಲುವ ಅನೇಕ ಸಮುದಾಯಗಳ ವ್ಯವಸ್ಥೆಯನ್ನು ಸಾಮಾಜಿಕ ವ್ಯವಸ್ಥೆಯೆಂದು ಕರೆಯಲಾಗಿದೆ. ಸಮಾಜದ ಘಟಕಗಳಲ್ಲಿ ಒಂದಾಗಿ ಹೋದ ಕಾರಣ ಸಾಮೂಹಿಕ ಪ್ರಜ್ಞೆಯನ್ನು ಹೊಂದಿದೆ. ಇಂತಹ ಅನೇಕ ಬುಡಕಟ್ಟುಗಳು ಮತ್ತು ಅಲೆಮಾರಿಗಳು ಕರ್ನಾಟಕದಲ್ಲಿ ಹಾಗೂ ಭಾರತ ದೇಶದ ವಿವಿಧ ಸ್ಥಳಗಳಲ್ಲಿ ಕಂಡು ಬರುತ್ತವೆ. ಭಾರತ ದೇಶ ಹಲವು ಸಂಬಂಧಗಳ ಹಿನ್ನೆಲೆಯನ್ನು ಕುರಿತು ಗಮನಿಸುವುದಾದರೆ ಅವುಗಳಲ್ಲಿಯೇ ಹೆಚ್ಚು ಅನ್ವಯವಾಗುವುದು. ಗ್ರಾಮೀಣ ಪ್ರದೇಶದ ಜನಾಂಗಗಳು ಅಧಿಕವಾಗಿರುವುದರಿಂದ ಗ್ರಾಮೀಣ ಭಾರತವೆಂತಲೂ ಕರೆಯಲಾಗುತ್ತದೆ. ಇಲ್ಲಿಯ ಅನೇಕ ಜನರು ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿದ್ದು ಕೊಂಡವರೇ ಹೆಚ್ಚು. ಆದರೆ ಇವತ್ತಿನ

ಕಾಲಕ್ಕನುಗುಣವಾಗಿ ಬೆಳೆ-ಮಳೆ ಇಲ್ಲದೇ ಜಾಗತೀಕರಣದ ಹೊತ್ತಿನಲ್ಲಿ ಸಹಜವಾಗಿ ತನ್ನ ನೆಲೆಯನ್ನು ಬದಲಿಸಿಕೊಂಡು ಬಂದಿದೆ. ನಗರ ಪ್ರದೇಶಕ್ಕೆ ಹೆಚ್ಚು ವಲಸೆ ಹೋದವರನ್ನು ಕಾಣುತ್ತೇವೆ. ಅಂತಹ ಬುಡಕಟ್ಟುಗಳಲ್ಲಿ ಸಿಕ್ಲಿಗರು ಒಬ್ಬರಾಗಿದ್ದಾರೆ.

ಬುಡಕಟ್ಟು ಜನಾಂಗಗಳು ಕಣ್ಮರೆಯಾಗುತ್ತಿವೆ ಎಂದು ನಾವೆಲ್ಲ ಯೋಚಿಸುತ್ತಿದ್ದೇವೆ. ಇಂದಿನ ವೈಜ್ಞಾನಿಕ ಹಾಗೂ ಜಾಗತೀಕರಣದ ಅರ್ಭಟದ ನಡುವೆ ಜಾನಪದದತ್ತ ಕಣ್ಣಾಯಿಸಿದಾಗ ನಮಗೆ ಹಲವು ವಿಚಾರಧಾರೆಗಳು ಕಂಡು ಬರುತ್ತವೆ. ಅನಕ್ಷರಸ್ಥರಾದ ಬುಡಕಟ್ಟು ಸಮುದಾಯಗಳು ತಮ್ಮ ಜೀವನದ ಹೋರಾಟದಲ್ಲಿ ಕಾಲಕಳೆಯಬೇಕಾದ ಸಂದರ್ಭವೊದಗುತ್ತದೆ. ಆ ಕಾರಣದಿಂದ ಬುಡಕಟ್ಟು ಜನಾಂಗ ಸಹಜವಾಗಿ ಅನಕ್ಷರಸ್ಥರಾಗಿಯೇ ಉಳಿಯಬೇಕಾಗುತ್ತದೆ. ಇವರೆಲ್ಲರ ಭಾಷೆಯೇ ಬೇರೆ. ಬರಹವೂ ಇಲ್ಲದೇ ಇರುವ ಅನೇಕ ಬುಡಕಟ್ಟುಗಳಿವೆ. ಅವುಗಳಿಂದ ನಮಗೆ ದೊರಕುವುದು ಲಾಭವೇನಾದರೂ ಏನಿದೆ? ಏನು ಇಲ್ಲ ಇಂತಹ ಹೊತ್ತಿನಲ್ಲೂ ಅಸಂಖ್ಯಾತ ಮೌಖಿಕವಾದ ಸಾಹಿತ್ಯ ಕಲೆಗಳು ನಮ್ಮಲ್ಲಿವೆ. ಹಾಗೆಯೇ ಬುಡಕಟ್ಟುಗಳ ಜನಾಂಗವು ಸಹಿತ ಮೌಖಿಕವಾಗಿಯೇ ಉಳಿದುಕೊಂಡು ಬಂದಿವೆ. ಅವುಗಳಿಗೆ ಅವರದೇ ಆದ ಅನೇಕ ಕಾರಣಗಳು ಇವೆ. ಈ ಕಾರಣಕ್ಕಾಗಿ ಬುಡಕಟ್ಟುಗಳು ವೈಯಕ್ತಿಕವಾದ ಸಮುದಾಯಗಳ ನಡುವೆ ತಮ್ಮ ಬದುಕನ್ನು ಕಾಣಬೇಕಾದ ಅನಿವಾರ್ಯತೆ ಉಂಟಾಗುತ್ತದೆ. ಬುಡಕಟ್ಟುಗಳ ಜನಜೀವನ ಸಂಸ್ಕೃತಿಗಳು ಇಂದು ಕಣ್ಮರೆಯಾಗಿ ಹೋಗುತ್ತಲಿವೆ. ಇಲ್ಲಿಯ ಬುಡಕಟ್ಟುಗಳು ತಲೆಮಾರಿನಿಂದ ತಲೆಮಾರಿಗೆ ಅವಸಾನದ ಅಂಚಿನಲ್ಲಿ ಉಳಿದಿವೆ. ಬೇರೆ ಬೇರೆ ಪ್ರದೇಶಕ್ಕೆ ವಲಸೆ ಹೋಗುವುದರಿಂದ ವಲಸೆಗಾರರಾಗಿ ಸಮುದಾಯದ ಬುಡಕಟ್ಟುಗಳು ಒಂದೇ ಕಡೆ ಕೂಡದೇ ನಿಲ್ಲದೇ ಹರಿದು ಹಂಚಿ ಹೋಗಿವೆ.

ಈ ಕಾರಣದಿಂದ ಬುಡಕಟ್ಟುಗಳು ತಮ್ಮ ಕುಲಕಸಬುಗಳ ಜೊತೆಗೆ ಅನೇಕ ಅಂಶಗಳನ್ನು ಉಳಿಸಿಕೊಂಡು ಬರುತ್ತಿದ್ದಾರೆ. ಸಿಕ್ಲಿಗರು ಬುಡಕಟ್ಟುಗಳ ಜೀವನ ವಿಧಾನವು ಕೂಡ ಭಿನ್ನವಾಗಿದೆ. ಸಾಮಾಜಿಕ ವ್ಯವಸ್ಥೆಯಲ್ಲಿ ಸಿಕ್ಲಿಗರ ಬುಡಕಟ್ಟು ಜನಾಂಗ ಅನೇಕ ಸಂಪ್ರದಾಯ, ಆಚರಣೆಗಳನ್ನು ಸಹಕಾರ ಜೀವನವನ್ನು ನಿರ್ವಹಿಸಿಕೊಂಡು ಬರುತ್ತಿದ್ದಾರೆ. ಲೋಕರೂಢಿಯಲ್ಲಿ ಕಾಲಗಳು ಬದಲಾದಂತೆ ಅನೇಕ ಆಚರಣೆ-ಸಂಪ್ರದಾಯ ನಿಯಮಗಳಲ್ಲಿ ಬದಲಾವಣೆಯಾಗುವುದನ್ನು ಕಾಣಬಹುದು. ಸಾಮಾಜಿಕವಾದ ಕ್ರಮಬದ್ಧವಾದ ವ್ಯವಸ್ಥೆ ಸಿಕ್ಲಿಗರ ಜನಾಂಗ ಹೊಂದಿದೆ. ಇವರು ಪರಂಪರೆಯಿಂದ ಬಂದ ಆಚರಣೆಗಳನ್ನು ತಪ್ಪದೇ ನಿರ್ವಹಿಸಿಕೊಂಡು ಬರುತ್ತಿದ್ದಾರೆ. ಅವುಗಳಲ್ಲಿ ಮುಖ್ಯವಾದವುಗಳು ಆಹಾರ, ವಸತಿ, ಉಡಿಗೆ-ತೊಡಿಗೆ, ವೃತ್ತಿ, ಬೆಡಗುಗಳು, ವಿವಾಹ, ಕೌಟುಂಬಿಕ

ಜೀವನ, ಸಾಮಾಜಿಕ ಕಾರ್ಯ ಹಾಗೂ ನ್ಯಾಯ ಪದ್ದತಿಗಳು ಹತ್ತು ಹಲವು ಸಂಗತಿಗಳ ಮೂಲಕ ಕ್ರಮಬದ್ಧವಾಗಿ ವಿಚಾರಣೆಗೊಳಪಡುವಂತವುಗಳೇ ಆಗಿವೆ. ಇಂತಹ ಕ್ರಮಬದ್ಧವಾದ ವ್ಯವಸ್ಥೆ ಬುಡಕಟ್ಟುಗಳಲ್ಲಿ ಕಂಡು ಬರುತ್ತದೆ. ಸಿಕ್ಲಿಗರ ಜನಾಂಗವೂ ಸಹಿತ ತಮ್ಮ ಮೂಲಗಳನ್ನು ಕಂಡುಕೊಳ್ಳಲು ಪ್ರಯತ್ನಿಸಿದ್ದಾರೆ. ಯಾವ ಸನ್ನಿವೇಶ ಸಂದರ್ಭಗಳು ಬಂದರೂ ಸಹಿತ ತಮ್ಮ ಈ ಮೂಲ ಸಾಮಾಜಿಕ ವ್ಯವಸ್ಥೆಗಳನ್ನು ಬಿಟ್ಟುಕೊಡುವುದಿಲ್ಲ. ಇಂತಹ ಹಲವಾರು ಸಾಮಾಜಿಕ ವ್ಯವಸ್ಥೆಗಳಲ್ಲಿ ಅನೇಕ ಉಪವ್ಯವಸ್ಥೆಗಳು ಸಹಿತ ಬೇರೆ ಬೇರೆ ಮೂಲ ಸತ್ವ ಹೀರಿಕೊಂಡು ಬರುತ್ತಿರುವುದನ್ನು ಗಮನಿಸಬಹುದಾಗಿದೆ. ಈ ಎಲ್ಲಾ ಕಾರ್ಯಗಳು ಸಹಜವಾಗಿ ಕಷ್ಟವಾದರೂ ಅವನ್ನೆಲ್ಲಾ ಪಾಲಿಸಿಕೊಂಡು ಬರುತ್ತಿದ್ದಾರೆ.

ಈ ಅಧ್ಯಯನಕ್ಕೆ ಸಂಬಂಧಿಸಿದ ಸಿಕ್ಲಿಗರು ಬುಡಕಟ್ಟಿನ ಜನಾಂಗದವರ ಜೀವನ ವಿಧಾನಗಳು ನಮಗೆ ಮುಖ್ಯವಾಗಿ ಕಂಡು ಬಂದಂತೆ ಅವರ ಸಾಮಾಜಿಕ ವ್ಯವಸ್ಥೆಗಳಲ್ಲಿ ಬಹು ವಿಶಿಷ್ಟ ಸಂವೇದನೆಗಳನ್ನು ಕಾಣಲು ಸಾಧ್ಯವಾಗುತ್ತದೆ. ಸಿಕ್ಲಿಗರ ವೇಷ-ಭೂಷಣಗಳು, ವಿಧಿ-ವಿಧಾನತೆಗಳು ವಸತಿಯಲ್ಲಿ ಕಂಡು ಬರುವ ಸೂಕ್ಷ್ಮತೆ ವೃತ್ತಿಗಳ ಕುಶಲತೆ, ಬೆಡಗುಗಳು ಹಾಗೂ ಪಂಗಡಗಳಲ್ಲಿ ಕಾಣುವ ಭಿನ್ನ-ಸಾಮ್ಯ ಅಂಶಗಳು, ಕುಟುಂಬ ಪದ್ಧತಿ, ರಕ್ತ ಸಂಬಂಧದೊಡನೆಯ ಪದ್ಧತಿಗಳು, ಹಲವಾರು ನಿಷೇಧ ಹೊಂದಿದ ವಿಧಿ-ವಿಧಾನಗಳು, ನ್ಯಾಯ ಪಂಚಾಯತಿಯ ಪರಂಪರಾಗತವಾದ ನಂಬಿಕೆಗಳು ಇವುಗಳನ್ನೆಲ್ಲವನ್ನು ಸಮಾಜಶಾಸ್ತ್ರದ ದೃಷ್ಟಿ ಧೋರಣೆಗಳ ಹಿನ್ನೆಲೆಯಲ್ಲಿ ಸಂಶೋಧನೆಯನ್ನು ಕೈಗೊಳ್ಳಲಾಗಿದೆ. ಈ ಜನಾಂಗವು ಹೆಚ್ಚಾಗಿ ಭೌಗೋಳಿಕದ ನೆಲೆಗಿಂತ ಆರ್ಥಿಕ ದೃಷ್ಟಿಕೋನದ ಮೇಲೆ ಹೆಚ್ಚು ಅವಲಂಬಿತರಾಗಿದ್ದಾರೆ. ಈ ಸಿಕ್ಲಿಗರ ಸಂಸ್ಕೃತಿ ಒಂದು ವಿಧದ ವಿಶಿಷ್ಟವಾದ ಆರ್ಥಿಕತೆ ಹಾಗೂ ನಂಬಿಕೆಯ ಆಧಾರದ ಮೇಲೆ ಹೆಚ್ಚು ಅವಲಂಬಿತವಾಗಿದೆ. ಸಿಕ್ಲಿಗರ ಬುಡಕಟ್ಟು ಸತ್ಯ-ನ್ಯಾಯ ಪ್ರಾಮಾಣಿಕತೆ, ದುಡಿಮೆಯ, ಶ್ರಮ, ಸಂಸ್ಕೃತಿಯ ಆಧಾರದ ಮೇಲೆ ಸಂಸ್ಕೃತಿಯನ್ನು ಕಾಪಾಡಿಕೊಂಡು ಬರುತ್ತಲಿದ್ದಾರೆ. ಅವರ ಸಂಪ್ರದಾಯ, ಆಚರಣೆಗಳನ್ನು ಹೀಗೆ ಆಚರಿಸಿಕೊಂಡು ಬಂದಿರುವುದರಿಂದ ಇವರ ಬುಡಕಟ್ಟು ಜನಾಂಗಕ್ಕಿಂತ ಭಿನ್ನವಾಗಿ ಕಂಡು ಬರುತ್ತದೆ. ಅವರು ಸಾಮಾನ್ಯವಾದ ಉಡುಪುಗಳನ್ನು ಧರಿಸುತ್ತಾರೆ. ಏಕೆಂದರೆ ಗ್ರಾಮೀಣ ಪ್ರದೇಶದಲ್ಲಿ ವಾಸಿಸದೇ ನಗರ ಪ್ರದೇಶದಲ್ಲಿ ವಾಸಿಸುತ್ತಾರೆ. ಹೀಗಾಗಿ ಅವರು ತಮ್ಮ ಅನುಕೂಲತೆಗಾಗಿ ಬಟ್ಟೆ ಬರಿಗಳನ್ನು ಹಾಕಿಕೊಳ್ಳುವಾಗ ಸಾಮಾನ್ಯವಾದ ಚರಿತ್ರೆ, ಉಡುಗೆ-ತೊಡಿಗೆ ತೊಟ್ಟಿರುತ್ತಾರೆ. ಗಡ್ಡವನ್ನು ಬಿಡುವ ಪದ್ಧತಿಯನ್ನು ಹೊಂದಿದ್ದಾರೆ. ಸಿಕ್ಲಿಗರ ಜನಾಂಗವು ತಾವು ಹೇಗೆ ಹುಟ್ಟನ್ನು ಪಡೆದುಕೊಂಡಿದ್ದಾರೋ ಸಿಕ್ಲಿಗರ ಸಾವಿನವರೆಗೂ

ಹಾಗೇ ಇರುತ್ತಾರೆ. ಯಾವ ಅಂಗದ ಮೇಲಿನ ಕೂದಲುಗಳನ್ನು ತೆಗೆಯುವುದು ಅವರ ಪದ್ಧತಿಯೇ ಇಲ್ಲವೆಂದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಹೇಳುತ್ತಾರೆ. ಸಿಕ್ಲಿಗರು ಪಂಜಾಬಿ ಮಾತು ಅವರ ಮಾತೃಭಾಷೆಯನ್ನು ಮಾಡಿಕೊಂಡಿದ್ದಾರೆ. ಇಲ್ಲದಿದ್ದರೆ ಹಿಂದಿಯಲ್ಲಿ ಮಾತನಾಡುವುದುಂಟು. ಅಕ್ಷರ ಜ್ಞಾನವಂತೂ ಅವರಿಗೆ ಇಲ್ಲವೇ ಇಲ್ಲ. ತಾವೇ ಹೆಚ್ಚು ಪ್ರದೇಶದಲ್ಲಿ ಬೀಡಾರ ಹೂಡಿ ಅಲ್ಲಿಯೇ ನೆಲೆ ನಿಂತಿದ್ದಾರೆ. ಆಯಾ ಭಾಷೆಗಳನ್ನು ತೊದಲಿನಿಂದ ಮಾತನಾಡುವ ಪ್ರವೃತ್ತಿ ಹೊಂದಿದ್ದಾರೆ. ಯಾವ ಹಂತವನ್ನು ಹೊಂದದೇ ಚಡ್ಡಿ ಚಲ್ಲಣ ತೊಟ್ಟು ಪ್ಯಾಂಟುಗಳನ್ನು ಹಾಕಿಕೊಂಡು ಸಿಖ್ಖ್‌ರ ಮಾದರಿಯನ್ನೇ ಅನುಸರಿಸಿಕೊಂಡು ಬರುತ್ತಿದ್ದಾರೆ. ಆದರೆ ಸಿಕ್ಕರ ಮೂಲ ಅಥವಾ ಸಿಕ್ಲಿಗರ ಮೂಲಗಳು ಇನ್ನೂ ಅಸ್ಪಷ್ಟವಾದ ಹಾದಿಯಲ್ಲಿವೆ. ಈ ಅಧ್ಯಯನಕ್ಕೆ ತೊಡಗಿದಾಗ ನಮಗೆ ಅನಿಸುವ ಹಂತವೆಂದರೆ ಬದುಕಿನ ನಾನಾ ಭಾಗಗಳನ್ನು ತಮ್ಮ ಜೀವಿತದ ಅನೇಕ ವಾಸ್ತವ ಅಂಶಗಳಿಂದ ರೂಢಿಸಿಕೊಂಡಿದ್ದಾರೆ. ಸಿಖ್ಖ್‌ರ ಮೂಲವನ್ನು ಹೋಲುವಂತವರಾಗಿದ್ದಾರೆ. ಇವರಲ್ಲಿಯೂ ಹಲವಾರು ಬೆಡಗುಗಳನ್ನು ಹೊಂದಿದ್ದಾರೆ. ಉಪಪಂಗಡಗಳನ್ನು ಹೊಂದಿದ್ದಾರೆ. ಇವರೆಲ್ಲರೂ ಒಂದೇ ಕಡೆ ನೆಲಸದೇ ಇರುವುದರಿಂದ ತಮ್ಮ ತಮ್ಮೊಳಗಡೆಯೇ ಸಂಬಂಧಗಳನ್ನು ಬೆಳೆಸಿಕೊಂಡಿದ್ದಾರೆ. ತಮಗೆ ಇಲ್ಲಿ ಸಾಕಾದರೆ ತಮ್ಮ ಹೊಟ್ಟೆ ತುಂಬದೇ ಇದ್ದರೇ ಬೇರೆ ಕಡೆ ಹೋಗಿ ನೆಲೆಸುತ್ತಾರೆ. ಹಾಗೆಯೆ ಕುಳಿತು ಭೀಕ್ಷೆ ಬೇಡಿ, ಕಳ್ಳತನ, ಸುಳ್ಳತನ, ದಗಲುಬಾಜಿತನ ಯಾವುದು ಮಾಡದೇ ತಾವೇ ಎಲ್ಲಾ ಒಂದಾಗಿಸಿಕೊಂಡು ಹೋಗುತ್ತಾರೆ. ಶ್ರಮದ ಮೂಲಕ ಅವರು ಬದುಕನ್ನು ರೂಢಿಸಿಕೊಂಡಿದ್ದಾರೆ.

ಸಿಕ್ಲಿಗರು ಹತ್ತಿರದ ಸಂಬಂಧಿಗಳಲ್ಲಿಯೇ ವಿವಾಹವಾಗುವ ಪರಿಸರವನ್ನು ಹೊಂದಿದ್ದಾರೆ. ಗುಡಿಸಲುಗಳನ್ನು ಸಹ ಹಾಕಿಕೊಳ್ಳದೇ ಕೊಳಚೆ ಪ್ರದೇಶ ಹಂದಿಗಳು ವಾಸಿಸುವ ಪ್ರದೇಶದಲ್ಲಿ, ವಾಸ ಮಾಡಿಕೊಂಡು ಬದುಕುತ್ತಿದ್ದಾರೆ. ತಗಡನ್ನು ಹಾಕಿಕೊಂಡು ತಮ್ಮ ಮನೆ ನಿರ್ವಹಿಸಿಕೊಂಡು ಬರುತ್ತಿದ್ದಾರೆ. ಅವರೆಂದೂ ತಮಗಾಗಿ ಬಂಗಲೆ ಹಾಗೂ ಉತ್ತಮವಾದ ಗುಡಿಸಲು ಬೇಕೆಂದು ಕೇಳಿಕೊಳ್ಳುವುದೇ ಇಲ್ಲ. ಇದ್ದ ಹಲವು ಸಂಗತಿಗಳನ್ನು ಉಪಯೋಗಿಸಿಕೊಂಡು ಜೀವನ ನಿರ್ವಹಣೆ ಕೈಗೊಂಡ ಅನೇಕ ಉದಾಹರಣೆಗಳು ನಮಗೆ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಬಳಸಿಕೊಂಡು ಬಂದಿರುವುದು ಸ್ಪಷ್ಟವಾಗಿ ವ್ಯಕ್ತವಾಗಿದೆ. ವೃತ್ತಿ ಕುಲಕಸಬುಗಳನ್ನು ಅವರು ಕೈಗೊಂಡು ಕೇವಲ ಕುಡುಗೋಲು, ಈಳಿಗೆ, ಪಾವು, ಸೇರು, ಖಡ್ಗ, ಮುಂತಾದ ಕಬ್ಬಿಣದ ಸಾಮಾನುಗಳಲ್ಲಿ ಅನೇಕ ವಸ್ತುಗಳನ್ನು ತಯಾರಿಸಿ ಕೊಟ್ಟು ಬಂದಿದ್ದಾರೆ. ಆ ಶ್ರಮಸಂಸ್ಕೃತಿಯೋ ಬಹುಮುಖಿ ಸಂಗತಿಗಳು ನಮಗೆ ಕಂಡು ಬರುತ್ತವೆ. ಅವರ ಜೀವನ ವಿಧಾನವೇ ಹಾಗಾಗಿದೆ. ಕೃಷಿ ಉಪಕರಣಗಳಿಗೆ

ಬೇಕಾಗುವ ಅನೇಕ ಕಬ್ಬಿಣದ ಕೆಲಸವನ್ನು ಮಾಡುತ್ತಾರೆ. ಗೃಹ ಬಳಕೆಯ ಸಾಮಾನುಗಳನ್ನು ತಯಾರಿಸಿಕೊಂಡಿರುತ್ತಾರೆ. ಇನ್ನೂ ಕೂಡ ಒಂದೇ ನೆಲೆಯಲ್ಲಿ ಕುಳಿತುಕೊಂಡು ವಾಸ ಮಾಡಲು ಕೂಡಾ ಸಾಧ್ಯವಾಗಿಲ್ಲ. ಬಡತನ ಅವರನ್ನು ಬೆನ್ನತ್ತಿ ಬಂದರೂ ಸಹಿತ ತಮ್ಮ ಜೀವನದ ಅನೇಕ ಹಂತಗಳ ಕಟ್ಟುಪಾಡುಗಳನ್ನು ಸಡಿಲಿಸಿಕೊಂಡಿಲ್ಲ. ಪ್ರಾಚೀನ ಕಾಲದ ಬುಡಕಟ್ಟು ಸಂಸ್ಕೃತಿಯನ್ನು ಇಂದಿಗೂ ಉಳಿಸಿಕೊಂಡು ಬಂದಿದ್ದಾರೆ. ಇವತ್ತಿನ ನಾಗಾಲೋಟದಲ್ಲಿರುವ ನಾಗರೀಕತೆ, ಪರಂಪರೆ ಬಹು ವಿಧವಾಗಿ ತನ್ನ ಮೂಲ ಸಂಸ್ಕೃತಿ ವಿಚಾರಧಾರೆಗಳನ್ನು ಹೊರಹಾಕಿಕೊಂಡು ನಿಂತಿದೆ. ಜಾಗತೀಕರಣ ಸಂದರ್ಭದಲ್ಲಿ ಉದಾರೀಕರಣ, ಖಾಸಗೀಕರಣ, ದಾಟಿ ಬಂದಿದೆ. ವಿಜ್ಞಾನ, ತಂತ್ರಜ್ಞಾನ, ಶಿಕ್ಷಣದ ಕಲ್ಪನೆ, ಸಾಮಾಜಿಕ ವ್ಯವಸ್ಥೆಯ ನಡುವೆ ಬಂದರೂ ಅವು ಯಾವ ಗಾಳಿಯ ಸೋಂಕು ಕೂಡ ತೊಡಗಿಸದೇ ತಮ್ಮದೇ ಆದ ವೃತ್ತಿ ಹಾಗೂ ಪರಿಶ್ರಮದಲ್ಲಿ ಜೀವನ ಕೈಗೊಂಡಿದ್ದಾರೆ.

ಇವುಗಳ ನೇರ ಹಾಗೂ ಸಂಪರ್ಕವನ್ನು ಹೊಂದದೇ ಸಿಕ್ಕಲಗಾರರು ತಮ್ಮ ಸಾಮಾಜಿಕ ಜೀವನ ವಿಧಾನವನ್ನು ಕಾಪಾಡಿಕೊಂಡಿದ್ದಾರೆ. ಸಿಕ್ಲಿಗರ ಬುಡಕಟ್ಟಿನ ಜನಾಂಗವು ಕರ್ನಾಟಕದ ಅನೇಕ ಕಡೆ ಹರಿದು ಹಂಚಿ ಹೋಗಿದೆ. ಮಹಾರಾಷ್ಟ್ರದ ಮೂಲವೆಂದರೂ ಪಂಜಾಬದ ಮೂಲಕ ಹೈದ್ರಾಬಾದ್ ಸಂಸ್ಥಾನದ ಮೂಲಕ ಹೊರಬಂದು ಅಲ್ಲಿಯೇ ಅಲೆದಾಡುತ್ತಾ ಈ ಬುಡಕಟ್ಟು ಜನಾಂಗ ಕರ್ನಾಟಕ ರಾಜ್ಯದ ತುಂಬೆಲ್ಲಾ ಹರಡಿಕೊಂಡಿದ್ದಾರೆ. ಹತ್ತು ಹನ್ನೆರಡು ಜಿಲ್ಲೆ, ತಾಲೂಕುಗಳಲ್ಲಿ ಈ ಜನಾಂಗ ಸಿಗುವುದು ಕಷ್ಟ. ಆದರೆ ಕೆಲವು ಪ್ರದೇಶಗಳ ಜಿಲ್ಲೆ ತಾಲೂಕುಗಳಲ್ಲಿ ಗುರುತಿಸಲು ಸಾಧ್ಯವಾಗುತ್ತದೆ. ಹರಿದು ಹಂಚಿಹೋದ ಕರ್ನಾಟಕದ ಸಿಕ್ಲಿಗರ ಜೀವನ ಹಾಗೂ ಸಾಮಾಜಿಕ ವ್ಯವಸ್ಥೆಯ ವಿಧಿ-ವಿಧಾನಗಳನ್ನು ಕುರಿತು ಸಮಗ್ರ ವಿವೇಚನೆಯನ್ನು ಈ ಮಹಾಪ್ರಬಂಧದ ಅಧ್ಯಾಯದಲ್ಲಿ ಕೈಗೊಳ್ಳಲಾಗುತ್ತದೆ.

ಆಹಾರ ಪದ್ಧತಿ

ಬುಡಕಟ್ಟು ಜನಾಂಗಗಳು ಯಾವುವೇ ಇರಲಿ ಅವು ತಮ್ಮದೇ ವಿಶೇಷವಾದ ಆಹಾರ ಪದ್ಧತಿಯನ್ನು ಅವಲಂಬಿಸಿರುತ್ತಾರೆ. ಇಲ್ಲಿಯ ಅನೇಕ ಜನಾಂಗ ಅದರಲ್ಲೂ ಅಲೆಮಾರಿ ಬುಡಕಟ್ಟು ಜನಾಂಗಗಳ ತಮ್ಮ ಜೀವನದ ಮುಖ್ಯವಾದ ಸಂಪ್ರದಾಯ, ಆಚರಣೆಗಳು ಕಂಡುಬರುತ್ತವೆ. ಅವುಗಳಲ್ಲಿ ಕೆಲವು ಭಿನ್ನವಾಗಿದ್ದರೆ ಇನ್ನೂ ಕೆಲವು ಸಾಮ್ಯತೆ ಗುಣ ಹೊಂದಿದ್ದು, ಸಹಜ. ಇವರ ಹಾಗೆ ಆಹಾರ ಪದ್ಧತಿಗಳಲ್ಲೂ ಅನುಸರಿಸಿಕೊಂಡು ಬಂದಿರುವುದು ವಿಶೇಷ. ಕಾಡು, ಗುಡ್ಡ,

ಬೆಟ್ಟಗಳಲ್ಲಿ ವಾಸವಾಗಿದ್ದು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವಲಸೆ ಹೋಗುವುದರಿಂದ ಆಹಾರ ಪದ್ಧತಿಯಲ್ಲಿ ಏಕಮುಖವಾಗಿ ಕಾಣಲು ಸಾಧ್ಯವಾಗುವುದಿಲ್ಲ. ಇಂತಹ ಬುಡಕಟ್ಟುಗಳ ಆಹಾರ ಪದ್ಧತಿಗಳಲ್ಲಿ ತಮ್ಮದೇ ಆದ ಸಾಂಸ್ಕೃತಿಕವಾದ ಮುಖಾಮುಖಿತನವನ್ನು ಹೊರಹಾಕುತ್ತವೆ.

ಸಿಕ್ಲಿಗರ ಸಂಸ್ಕೃತಿಯಲ್ಲಿ ಕೆಲವು ಸಮುದಾಯಗಳು ಬಂದು ಹೋಗುತ್ತವೆ. ಅವರ ಕುಲಕಸಬು ಒಂದೇ ಆದರೂ ಆಹಾರ ಪದ್ಧತಿಗಳಲ್ಲಿ ವಿಶೇಷವಾದ ಹಂತಗಳನ್ನು ಹೊಂದಿರುತ್ತಾರೆ. ಈ ಸಿಕ್ಲಿಗರ ಪ್ರದೇಶದಿಂದ ಪ್ರದೇಶಕ್ಕೆ ವಲಸೆ ಹೋಗುವುದರಿಂದ ಸಹಜವಾಗಿ ಆಹಾರ ಪದ್ಧತಿ ಅದಕ್ಕನುಗುಣವಾಗಿ ಹೊಂದಿಕೊಂಡು ಹೋಗಬೇಕಾಗುತ್ತದೆ. ಸರಳವಾದ ಮಾರ್ಗವನ್ನು ಅನುಸರಿಸಿಕೊಂಡು ಬರುತ್ತಾರೆ. ಆ ಪರಿಸರ ಅಲೆಮಾರಿತನದ ಮೇಲೆಯೆ ಅವರ ಆಹಾರ ಪದ್ಧತಿ ಅವಲಂಬಿತವಾಗಿರುವುದು ಕಂಡು ಬರುತ್ತದೆ. ಸಿಕ್ಲಿಗರ ಆಹಾರ ಪದ್ಧತಿಯಲ್ಲಿ ಸರಳತೆ ಕಂಡು ಬರುವುದು ಅವರಲ್ಲಿರುವ ಕಡುಬಡತನವೇ ಮುಖ್ಯವಾಗಿದೆ. ಸಸ್ಯ ಆಹಾರ ಹಾಗೂ ಮಾಂಸ ಆಹಾರಗಳನ್ನು ಸೇವಿಸುವಾಗಲೂ ಅದರಲ್ಲಿ ಸಾದಾತನ ಕಾಣುವೆವು. ಆ ಆಹಾರ ಪದ್ಧತಿಗಳಲ್ಲಿ ಭಿನ್ನವಾದ ಹಲವು ರೀತಿಯ ಚಟುವಟಿಕೆಗಳಿಂದ ಕೂಡಿರುವುದಿಲ್ಲವೆಂಬುದನ್ನು ನಾವು ಮನಸಾರೆ ಒಪ್ಪಿಕೊಳ್ಳಬೇಕಾಗುತ್ತದೆ.

ಬಡತನದಿಂದಾಗಿ ಅವರು ಆಹಾರ ಪದ್ಧತಿ ಸರಳೀಕರಣಗೊಳಿಸಿಕೊಂಡಿದ್ದಾರೆ. ಇವರಲ್ಲಿ ಹೆಚ್ಚು ಜನಸಮುದಾಯವು ಅನ್ನವನ್ನು ಸೇವಿಸುತ್ತಾರೆ. ಇವರು ಶ್ರಮವಹಿಸಿ ದುಡಿಯುತ್ತಾರೆ. ಒಂದು ದಿನದಲ್ಲಿ ಒಂದೇ ಊಟವನ್ನು ಮಾಡಿದರೂ ಸಹ ಯಾವುದೇ ಅನಾರೋಗ್ಯ ಕಾಡಿಲ್ಲ. ಸದೃಢವಾದ ದೇಹವನ್ನು ಆರೋಗ್ಯವಂತ ಜೀವನವನ್ನು ತೂಗಿಸಿಕೊಂಡು ಬಂದಿದ್ದಾರೆ. ಹೆಚ್ಚಾನು ಹೆಚ್ಚು ಸಿಕ್ಲಿಗರ ಸಮುದಾಯವು ಮುಂಜಾನೆ ಎದ್ದು ತಮ್ಮ ಒಲೆಯನ್ನು ಹಚ್ಚುವುದೇ ಇಲ್ಲ. ಏಕೆಂದರೆ ತಮಗೆ ಅಡಿಗೆ ಮಾಡಲು ಹಲವು ವಸ್ತುಗಳು ಬೇಕಾದುದರಿಂದ ಅಲ್ಲಿಯೇ ಅಕ್ಕಪಕ್ಕದ ಹಾಗೂ ಸಮೀಪದ ಹೋಟೆಲುಗಳಿಗೆ ಹೋಗಿ ಮುಂಜಾನೆಯ ತಿಂಡಿ ತಿನಿಸುಗಳನ್ನು ತಿನ್ನುತ್ತಾರೆ. ಅಲ್ಲಿಯೇ ಅವರ ಅಂದಿನ ದಿನದ ಆಹಾರ ಮುಗಿಯಿತು. ತಮ್ಮದೇ ಆದ ನಾಲ್ಕಾರು ತಗಡಿನ ಗುಡಿಸಲುಗಳನ್ನು ಹಾಕಿಕೊಂಡು ಅನ್ಯೋನ್ಯವಾಗಿರುತ್ತಾರೆ. ಯಾವುದೇ ತೊಂದರೆಯನ್ನು ಕೊಡದೇ ಎಲ್ಲರೂ ಸ್ವಾಭಿಮಾನದಿಂದ ಬದುಕುವುದು ಇವರ ಮುಖ್ಯವಾದ ಲಕ್ಷಣವಾಗಿದೆ. ಸರಳವಾದ ತಿಂಡಿ ತಿನಿಸುಗಳ ಕಡೆ ಆಕರ್ಷಿತರಾಗಿದ್ದಾರೆ. ಇಡ್ಲಿಯನ್ನು, ಚಹಾ, ಚಿತ್ರಾನ್ನವನ್ನು ತೆಗೆದುಕೊಂಡು

ತಿನ್ನುತ್ತಾರೆ. ತಮ್ಮ ಮಕ್ಕಳಿಗೂ ಕೂಡ ಚಹಾ ಚಿತ್ರಾನ್ನ ಕೊಟ್ಟು ಅವರ ಆಹಾರ ಪದ್ಧತಿಯನ್ನು ಪೂರ್ತಿಗೊಳಿಸುತ್ತಾರೆ. ಇವರು ಯಾವುದೇ ಬೇರೆ ವೃತ್ತಿ ಆಯ್ದುಕೊಂಡಿಲ್ಲ. ತಮ್ಮ ಪರಂಪರಾಗತವಾಗಿ ಮಾಡಿರುವ ಹಲವು ವೃತ್ತಿಯನ್ನೇ ಮುಂದುವರೆಸಿಕೊಂಡಿದ್ದಾರೆ. ಇವರ ಸಂಪ್ರದಾಯವು ಸಹ ವಿಶಿಷ್ಟ. ಶ್ರಮ ವಹಿಸಿ ದುಡಿಯುವ ಸ್ವಭಾವ ಇರುವುದರಿಂದ ಎಲ್ಲರಿಗೂ ಪ್ರೀಯರಾಗುತ್ತಾರೆ. ಹಾಗಂತ ಆ ಪ್ರೀತಿಯಿಂದಲೇ ಅವರು ಏನೆಲ್ಲಾ ಕೇಳುವುದಿಲ್ಲ. ತಮಗೆ ಸ್ವಾಭಿಮಾನ ಅಂತಃಕರಣದ ಜೀವನವನ್ನು ಅರಳಿಸಿಕೊಂಡು ಹೊರಬರುತ್ತಾರೆ.

ಮೂಲ ಇವರದು ಬೇರೆ ಪ್ರದೇಶವಾದರೂ ಕರ್ನಾಟಕದ ಬಹುಭಾಗದಲ್ಲೂ ತಮ್ಮ ಛಾಪನ್ನು ಹಾಕಿಕೊಂಡು ಬಂದಿದ್ದಾರೆ. ಈ ನಾಡಿನ ಬಹುತೇಕ ಕಡೆ ಸಿಗಬೇಕಾದ ಸಿಕ್ಲಿಗರ ಇಂದಿನ ಜಾಗತೀಕರಣದ ಹೊತ್ತಿನಲ್ಲಿ ಅಲೆಮಾರಿ ಸಂಸ್ಕೃತಿ ಬಿಡಬೇಕಾಗಿದೆ. ಬಿಟ್ಟರೇ ಅವರಿಗೆ ನಡೆಯುವುದಿಲ್ಲ. ಕೃಷಿ ಸಂಪ್ರದಾಯವಾಗಲಿ ಅವರು ಅನುಸರಿಸಲು ಅಸಾಧ್ಯವಾದುದು. ಹಾಗಾಗಿ ತಮ್ಮ ಕಬ್ಬಿಣದ ಕೆಲಸಗಳಲ್ಲಿ ಮಗ್ನರಾಗಿರುತ್ತಾರೆ. ಸರ್ಕಾರ ಇವರಿಗೆ ಅಲ್ಪಸಂಖ್ಯಾತರೆಂದು ಘೋಷಿಸಿದ್ದಾರೆ. ಊರೊಳಗೆ ವಾಸಿಸಲು ಅವಕಾಶಗಳನ್ನು ನೀಡದಿರುವುದರಿಂದ ತಮ್ಮ ತನವನ್ನು ಉಳಿಸಿಕೊಳ್ಳಬೇಕಾಗಿದೆ. ಇವರಿಗೆ ಕೃಷಿ ಪದ್ಧತಿಗಳಾಗಲಿ ಕೃಷಿಯ ಅನುಭವವಾಗಲಿ ಇಲ್ಲವೇ ಇಲ್ಲ. ಅವರು ಕೃಷಿ ಸನಿಹಕ್ಕೆ ಹೋಗೆ ಇಲ್ಲ. ಸರ್ಕಾರ ಇವರಿಗೆ ಸಕಲ ಸೌಕರ್ಯ ಸೌಲಭ್ಯಗಳನ್ನು ಕೊಟ್ಟೇ ಇಲ್ಲ. ಈ ಸಿಕ್ಲಿಗರ ಜನಾಂಗದ ಕಡೆಗೆ ಒಮ್ಮೆಯೂ ಮುಖವೆತ್ತಿ ಸರ್ಕಾರ ನೋಡದಾಗಿದೆ. ಇದರಿಂದ ಬೇಸತ್ತ ಜನಾಂಗ ಹಾಗೇಯೇ ಸಿಕ್ಲಿಗರ ಉಳಿದುಕೊಂಡಿದ್ದಾರೆ. ರೈತರಂತೆಯೇ ಇತರ ಜನಾಂಗದವರಂತೆ ಇವರು ಇರದೇ ಭಿನ್ನವಾಗಿ ಕಾಣುವರು. ತಮ್ಮ ಸಮುದಾಯದೊಳಗೆ ಸಂಬಂಧಗಳನ್ನು ಕೂಡಿಸಲು ಹಾತೊರೆಯುತ್ತಾರೆ. ಜೀವಿತದ ಕೊನೆಯ ಉಸಿರಿರುವವರೆಗೂ ಪ್ರಾಮಾಣಿಕರಾಗಿಯೇ ಉಳಿದುಕೊಂಡಿದ್ದಾರೆ.

ತಮ್ಮ ವೃತ್ತಿಯನ್ನು ಅನುಸರಿಸಿಕೊಂಡು ಸಮುದಾಯಗಳು ತಮ್ಮ ವ್ಯಾಪಾರವನ್ನು ಕಸಬುನ್ನಾಗಿಸಿಕೊಂಡಿದ್ದಾರೆ. ಅವರು ಮುಂಜಾನೆಯಿಂದ ಸಂಜೆಯವರೆಗೂ ಶ್ರಮವಹಿಸಿ ದುಡಿಯುತ್ತಾರೆ. ಯಾರ ಹಂಗೂ ಇಲ್ಲದೇ ಹೋರಾಟ ಜೀವನ ಮುಂದುವರೆಸುತ್ತಾರೆ. ಕೆಲಸಕ್ಕೆ ಬೇರೆ ಕಡೆ ಹೋಗದೇ ಸ್ವತಃ ತಾವೇ ಮುತುವರ್ಜಿವಹಿಸಿಕೊಂಡು ಮನೆಯಲ್ಲಿಯೇ ತಮ್ಮ ಕಾರ್ಯವನ್ನು ಕೈಗೊಳ್ಳುತ್ತಾರೆ. ರಾತ್ರಿಯಾದರೆ ಸಾಕು ದುಡಿದು ಮೈದಣಿವಿಗಾಗಿ ಹೆಂಡ ಸಾರಾಯಿಯನ್ನು ಕುಡಿದುಕೊಂಡು ಊಟ ಮಾಡಿ ಮಲಗುತ್ತಾರೆ. ತಮಗೆ ಬೇಕಾದಾಗ ಮಾತ್ರ

ಮಾಂಸವನ್ನು ತಿನ್ನುತ್ತಾರೆ. ಅವರಿಗೆ ದುಡಿದು ಹಣ ಬಂದರೇ ಮಾತ್ರ ಮಾಂಸವನ್ನು ತಿನ್ನುವರು. ಇಲ್ಲದಿದ್ದರೇ ಇಲ್ಲವೆಂಬಂತೆ ಆಗಿದೆ. ಅವರಿಗೆ ದಕ್ಕಿದಷ್ಟು ಮಾತ್ರ ಊಟ ಮಾಡುತ್ತಾರೆ. ಮನೆಗಳಲ್ಲಿ ರಾತ್ರಿಯೇ ಇವರು ಮಾಂಸ ಆಹಾರವನ್ನು ಸೇವಿಸುವರು. ರಾತ್ರಿ ದುಡಿದು ದಣಿವಾದ ಮೇಲೆ ಒಂದಿಷ್ಟು ಕುಡಿಯುವುದರಿಂದ ಆಗ ಮಾಂಸ ತಿನ್ನುವುದು ಉಚಿತವೆಂದು ಭಾವಿಸುತ್ತಾರೆ.

ಇವರ ಹೆಣ್ಣು ಮಕ್ಕಳು ಸಹಿತ ಶ್ರಮವಹಿಸಿ ಮನೆಕೆಲಸವನ್ನು ಮಾಡುತ್ತಾರೆ. ಮನೆಹೊರಗೆ ಎಂದೂ ಕಳಿಸುವುದೇ ಇಲ್ಲ. ಅಲ್ಲಿಯೇ ಇದ್ದು ಸಂಸಾರ ನೀಗಿಸಿಕೊಂಡು ಬರುತ್ತಾರೆ. ಮಕ್ಕಳು ಸಂಸಾರದಲ್ಲಿದ್ದರೂ ಇತ್ತಿತ್ತಲಾಗಿ ಈ ಜಾಗತೀಕರಣದಿಂದ ಇವರು ಕೈಗೊಂಡ ವೃತ್ತಿಗೆ ಬೆಲೆ ಇಲ್ಲದಂತಾಗಿದೆ. ಹೀಗಾಗಿ ಸಿಕ್ಲಿಗರ ಮಹಿಳೆಯರು ತಮ್ಮ ಗಂಡಸರಿಗೆ ಮನೆಯಲ್ಲಿಯೇ ಸಹಾಯ ಮಾಡುತ್ತಾ ಬಂದಿದ್ದಾರೆ. ಪೋಲೀಸ್ ಇಲಾಖೆಗಳು ಸಿಕ್ಲಿಗರ ಮೇಲೆ ಕಣ್ಣನ್ನು ಇಟ್ಟಿದ್ದಾರೆ. ಇವರ ಪೂರಕ ಮಾರಕ ವಸ್ತುಗಳನ್ನು ತಯಾರಿಸುತ್ತಾರೆಂದು ಭಾವಿಸಿದ್ದಾರೆ. ಪ್ರತಿ ದಿವಸ ಇವರ ಬೆನ್ನು ಹತ್ತಿ ಕಿರುಕುಳ ನೀಡುತ್ತಾರೆ. ಇದರಿಂದ ಬೇಸತ್ತು ಹೋಗಿದ್ದಾರೆ. ಸಿಕ್ಲಿಗರು ಕುಡಿಯುವುದೇ ಇವರ ಹವ್ಯಾಸವಲ್ಲ. ಕೇವಲ ರಾತ್ರಿ ಮಾತ್ರ ಹೊತ್ತು ಮುಳುಗಿದ ಮೇಲೆ ಕುಡಿದು ಮಲಗುತ್ತಾರೆಯೇ ವಿನಃ ಹಗಲು ಎಂದೂ ಕುಡಿಯುವುದಿಲ್ಲ. ಅಲ್ಲದೇ ಮಹಿಳೆಯರಂತೂ ಈ ಕುಡಿತದಿಂದ ದೂರವಿದ್ದಾರೆ.

ಅನೇಕ ಬುಡಕಟ್ಟುಗಳಾದ ಲಂಬಾಣಿ, ಪಾರ್ಧಿ, ಬಾರ್ದ, ಇರುಳಿಗ, ಚೋಧರಾ, ಗಾತಲು, ಹಕ್ಕಿಪಿಕ್ಕಿ ಮುಂತಾದ ಬುಡಕಟ್ಟುಗಳಲ್ಲಿ ಮಹಿಳೆಯರು ದುಡಿಯುತ್ತಿರುತ್ತಾರೆ. ಆದರೆ ಸಂತೋಷದ ಸಂಗತಿ ಎಂದರೆ ಈ ಮಹಿಳೆಯರು ಯಾರೂ ಕೂಡ ಕುಡಿಯದೇ ಇರುವುದಾಗಿದೆ. ನಾನು ಸಂಶೋಧನೆಯನ್ನು ಕೈಗೊಂಡಂತೆ ಸಿಕ್ಲಿಗರ ಬುಡಕಟ್ಟಿನ ಬಗ್ಗೆ ಸಾಕಷ್ಟು ಭಯವನ್ನು ಹೊಂದಿದ್ದೆಯಾದರೂ ಅವರ ಮತ್ತು ಅವರ ಮಹಿಳೆಯರ ಸಂಸ್ಕೃತಿಯನ್ನು ಕಂಡು ಬೆರಗಾಗಿದ್ದೇನೆ. ಅವರಿಗೆ ದುಡಿಯದೇ ಉಣ್ಣದೇ ಇರುವುದು ಆಗದ ಮಾತನ್ನು ಕಣ್ಣಾರೆ ಕಂಡಿದ್ದೇನೆ. ಹಲವು ರೀತಿಯ ಬದಲಾವಣೆಯಾಗಬೇಕೆಂದು ಹೇಳಿದರೂ ಸಂಪ್ರದಾಯವನ್ನು ಬಿಟ್ಟು ಹೋಗಿಲ್ಲ. ಅಂತಹ ಸಂಸ್ಕೃತಿಯ ಚೌಕಟ್ಟಿನೊಳಗಡೆ ಉಳಿದು ಬೆಳೆದುಕೊಂಡು ಬಂದಿರುವುದು ಹೆಗ್ಗಳಿಕೆಯಾಗಿದೆ. ಸಿಕ್ಲಿಗರು ಅಲೆಮಾರಿಗಳಾಗಿ ಊರೂರು ಸುತ್ತುತ್ತಾರೆ. ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗುವ ಗುಣ ಕಂಡು ಬರುತ್ತದೆ. ಹೆಂಗಸರು ಮಾತ್ರ. ಗಂಡಸರು ಮನೆಯಲ್ಲಿ ಇಲ್ಲದಾಗ ಹೊರಗಡೆ ಬಾರದೇ ಮನೆಯೊಳಗಡೆ ತಮ್ಮದೇ ಆದ ಸಂಸಾರದ ಕೆಲಸಗಳಲ್ಲಿ ತೊಡಗಿಕೊಳ್ಳುತ್ತಾರೆ.

ತಮಗೆ ಆಹಾರ ಏನೂ ಇಲ್ಲದಿದ್ದರೂ ಭಿಕ್ಷೆ ಎತ್ತಲಾರರು, ಬೇಡಿ ಪಡೆಯಲಾರರು. ಇವರ ಜೀವನದ ಜಾಯಮಾನವಾಗಿದೆ. ಅನ್ನ, ಸಾರು, ಪಲ್ಯ, ಸಿಹಿ ತಿಂಡಿಗಳನ್ನು, ಮಾಂಸಾಹಾರಗಳನ್ನು ನಾನಾ ಬಗೆಯ ಆಹಾರಗಳನ್ನು ಅವರು ಸೇವಿಸುತ್ತಾರೆ. ಅತಿ ಕಡು ಬಡತನದಿಂದ ಬಂದವರಾದ್ದರಿಂದ ಸಹಜವಾಗಿ ತಮಗೆ ದೊರೆತ ಸರಳ ಆಹಾರವೇ ಅವರಿಗೆ ಗತಿಯಾಗಿದೆ. ಸಿಕ್ಕರ ಸಿಖ್ಖ್ ಜನಾಂಗದ ಎಲ್ಲಾ ಆಚರಣೆ – ಆಹಾರ ಪದ್ಧತಿಗಳು ಒಂದೇಯಾಗಿ ಕಂಡು ಬರುತ್ತವೆ. ಆದರೆ ಇವರು ಬಡತನದಲ್ಲಿದ್ದುದರಿಂದ ಸಿಖ್ಖರಿಗಿಂತ ಭಿನ್ನವಾಗಿ ನಮ್ಮ ಕಣ್ಣೆದುರು ಕಾಣುತ್ತಾರೆ. ಆಹಾರವನ್ನು ಅವರು ಕಾಪಾಡಿಕೊಂಡು ಬರುತ್ತಾರೆ. ತಮ್ಮ ಮನೆಯವರನ್ನೆಲ್ಲಾ ಕೂಡಿಸಿಕೊಂಡು ಊಟವನ್ನು ಮಾಡುತ್ತಾರೆ. ಇದ್ದ ಆಹಾರದಲ್ಲಿ ಎಲ್ಲರೂ ಸಮಾನವಾಗಿ ಹಂಚಿಕೊಂಡು ತಿನ್ನುತ್ತಾರೆ. ಹಳ್ಳಿಯ ಜನರಿಗಿಂತ ಪಟ್ಟಣದ ನಗರದ ಜನಸಮುದಾಯಗಳು ಸಿಕ್ಲಿಗರನ್ನು ಕಂಡರೆ ಅಸಹ್ಯ ಹಾಗೂ ಅನುಮಾನದ ದೃಷ್ಟಿಯಿಂದ ನೋಡುತ್ತಾರೆ. ಇದರಿಂದ ಸಿಕ್ಲಿಗರ ಸಮುದಾಯವು ಬೇಸರ ವ್ಯಕ್ತಪಡಿಸಿದ್ದಾರೆ. ಎಂದೂ ಯಾವ ಆಹಾರ ಪದ್ಧತಿ, ಜನರ ಬಗ್ಗೆ ಆಡಿಕೊಳ್ಳದ ಸಿಕ್ಲಿಗರು ಸಭ್ಯತೆಯನ್ನು ಹೊಂದಿದ್ದಾರೆ. ಇವರು ಗಟ್ಟಿಯಾದ ಆಹಾರ ಪದ್ಧತಿ ಸೇವನೆಯಿಂದ ದೇಹ ದಾರ್ಢತೆ ಗಟ್ಟಿಯಾಗಿ ಉಳಿದುಕೊಂಡು ಬರುತ್ತದೆ.

ಸಿಕ್ಲಿಗರ ಇಂತಹ ಬುಡಕಟ್ಟಿನ ಜನರ ಹಾಗೆ ವೈವಿಧ್ಯಮಯವಾದ ಆಹಾರ ಸೇವನೆಯನ್ನು ಮಾಡಲಾರರು. ಅವರ ಸಾಮಾಜಿಕ ಜೀವನ ಪದ್ಧತಿಗೆ ಅನುಗುಣವಾಗಿಯೇ ಆಹಾರ ಪದ್ಧತಿಯನ್ನು ಜಾರಿಗೆ ತಂದಿದ್ದಾರೆ. ಸಾಮಾನ್ಯ ಸಸ್ಯ ಆಹಾರ, ಮಾಂಸ ಆಹಾರ ಹಾಗೂ ಸಿಹಿ ತಿಂಡಿ ತಿನಿಸುಗಳು ಈ ಬಗೆಯಾಗಿ ಆಹಾರವನ್ನು ಅವರು ಕೈಗೊಳ್ಳುತ್ತಾರೆ.

ಆಹಾರ ಪದ್ಧತಿಗಳು

↓ ಸಾಮಾನ್ಯ ಅಡುಗೆಗಳು | ↓ ಸಸ್ಯಹಾರದ ಅಡುಗೆಗಳು | ↓ ಮಾಂಸಹಾರದ ಅಡುಗೆಗಳು

ಸಾಮಾನ್ಯ ಅಡುಗೆಗಳು

ಸಿಕ್ಲಿಗರ ಸಮಾಜದ ಬೇರೆ ಬೇರೆ ಸಮುದಾಯದವರು ತಿನ್ನುವ ಸಾಮಾನ್ಯ ಅಡುಗೆಗಳನ್ನು ತಮ್ಮ ದಿನನಿತ್ಯದ ಉಪಜೀವನಕ್ಕಾಗಿ ನಿರ್ವಹಿಸಿಕೊಂಡು ಬರುತ್ತಿದ್ದಾರೆ. ಅನ್ನ, ಸಾರು, ಪಾಯಸ,

ಚಟ್ನಿ, ಇಡ್ಲಿ, ರೊಟ್ಟಿ, ಚಪಾತಿ, ಮುಂತಾದ ಅಡುಗೆಗಳನ್ನು ಸಾಮಾನ್ಯವಾಗಿ ಸೇವಿಸುತ್ತಾರೆ. ಅವರಿಗೆ ಇದೇ ಅಡುಗೆ ಎಂಬ ಪದ್ಧತಿಯೂ ಇಲ್ಲ. ಏಕೆಂದರೆ ಸಹಜವಾಗಿ ದೊರೆಯುವ ಸರಳವಾದ ಅಡುಗೆ ಪದ್ಧತಿ ಅನುಸರಿಸುತ್ತಿದ್ದಾರೆ. ಇತರೇ ಜನಾಂಗ ಬುಡಕಟ್ಟುಗಳಲ್ಲಿ ಕಾಣುವ ಪದ್ದತಿಗೂ ಇವರಿಗೂ ವ್ಯತ್ಯಾಸವೇನು ಕಾಣುವುದಿಲ್ಲ. ಖಾರ ಹಾಗೂ ಉಪ್ಪನ್ನು ಹೆಚ್ಚಾಗಿ ಸೇವಿಸುತ್ತಾರೆ. ಆ ಮೂಲಕ ನಾವು ಗಟ್ಟಿಯಾ –ಗುತ್ತೇವೆಂಬ ಆಶಯವಿದೆ. ಸಿಕ್ಲಿಗರ ಈ ಸರಳವಾದ ಆಹಾರ ಪದ್ಧತಿಗಳಿಗೆ ಮಾರು ಹೋಗಿದ್ದಾರೆ. ಬಗೆ ಬಗೆಯ ಆಹಾರ ಪದ್ಧತಿಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತಿರುತ್ತಾರೆ. ಸಪ್ಪೆಯಾದ ಆಹಾರ ಸೇವನೆಯನ್ನು ಮಾಡುವರು. ಇವೆಲ್ಲಕ್ಕಿಂತ ಹೆಚ್ಚಾಗಿ ಸುತ್ತಮುತ್ತಲಿನ ಜನರು ಏನು ಸೇವಿಸುತ್ತಾರೋ ಹಾಗೆ ಇವರು ಆಹಾರ ಪದ್ಧತಿಯನ್ನು ರೂಢಿಗೆ ತಂದಿದ್ದಾರೆ.

ಸಸ್ಯಹಾರದ ಅಡುಗೆಗಳು

ಸಿಕ್ಲಿಗರ ಬುಡಕಟ್ಟು ಜನಾಂಗ ಮಾರುಕಟ್ಟೆಯಲ್ಲಿ ದೊರೆಯುವ ಪ್ರತಿಯೊಂದು ತರಕಾರಿಯನ್ನು ಹಾಗೇ ಮನೆಯ ಮುಂದೆ ಮಾರಲು ಬರುವ ತರಕಾರಿಯನ್ನು ತೆಗೆದುಕೊಂಡು ಅಡುಗೆಗೆ ಬಳಸಿಕೊಂಡಿದ್ದಾರೆ. ಧಾನ್ಯಗಳಲ್ಲಿ ಹಲವು ಬಗೆಯ ಸಸ್ಯ ಆಹಾರದಲ್ಲಿ ಬಳಸಿಕೊಳ್ಳುತ್ತಾರೆ. ಸೊಪ್ಪು ಬಳಸಿಕೊಳ್ಳುತ್ತಾರೆ. ಇತರೆ ಜನಾಂಗದ ವೈವಿಧ್ಯಮಯವಾದ ಅಡುಗೆಗಳನ್ನು ಸಿಕ್ಲಿಗರ ಹೊಂದಿಲ್ಲವಾದುದು ಕ್ಷೇತ್ರಕಾರ್ಯಕ್ಕೆ ಹೋದಾಗ ತಿಳಿದು ಬಂದ ಸಂಗತಿಯಾಗಿದೆ. ಕಾಡಿನಲ್ಲಿರುವ ಸೊಪ್ಪುಗಳನ್ನು ಬಳಸಿಕೊಳ್ಳುತ್ತಾರೆ. ಮೊದಲು ಆ ರೀತಿ ಮಾಡಿಕೊಂಡವರೆಂದರೆ ಇಂದು ನಗರೀಕರಣದ ಹೊತ್ತಿನಲ್ಲಿ ಕಾಡಿನಿಂದ ನಾಡಿಗೆ ಬಂದು ನೆಲೆ ನಿಂತಿದ್ದರಿಂದ ಇತ್ತ ಕಡೆ ಗಮನವನ್ನು ನೀಡಿದ್ದಾರೆ. ಸಿಕ್ಲಿಗರು ತಮ್ಮ ಮೂಲವನ್ನು ಯಾರಿಗೂ ಹೇಳುವುದಿಲ್ಲ. ಅವರು ಹಾರಿಕೆಯ ಉತ್ತರ ನೀಡುತ್ತಾರೆ. ಮೂಲ ಸಿಕ್ಲಿಗರು ಪಂಜಾಬದಿಂದ ಬಂದವರೆಂದು ಅಧ್ಯಯನದ ಮೂಲಕ ಸತ್ಯವಾಗುತ್ತದೆ. ಸಸ್ಯ ಆಹಾರದ ವೈವಿಧ್ಯತೆ ಅವರಿಗೆ ತಿಳಿದಿದೆ.

ಕಾಯಿಪಲ್ಯೆಯನ್ನು ವಿವಿಧ ಬಗೆಯ ಆಹಾರವನ್ನಾಗಿಸಿಕೊಂಡು ಊಟಮಾಡುತ್ತಾರೆ. ಇವರ ಮುಖ್ಯವಾದ ಆಹಾರ ಮಾಂಸಹಾರವಾಗಿದ್ದರೂ ಇಂದಿನ ದಿನಗಳಲ್ಲಿ ಸಸ್ಯಹಾರವನ್ನು ಅವಲಂಬಿಸಿದ್ದಾರೆ. ಬೇಳೆ ಸಾರು, ಅನ್ನ,ರೊಟ್ಟಿಯನ್ನು ಸೇವಿಸುತ್ತಾರೆ. ಕರ್ನಾಟಕದಲ್ಲಿ ಸಿಕ್ಕಲುಗಾರರು ಇದ್ದರೂ ಮೈಸೂರು, ಬೆಂಗಳೂರು ಕಡೆಗೆ ಅಲ್ಲಲ್ಲಿ ಒಬ್ಬರೂ ದೊರೆತರೆ ಮುದ್ದೆ ಸಾರ ಆಹಾರವನ್ನು ಸೇವಿಸಿದರೆ, ಉತ್ತರ ಕರ್ನಾಟಕಕ್ಕೆ ಬಂದರೆ ಅನ್ನ, ರೊಟ್ಟಿಚಪಾತಿ ಮುಂತಾದ ಆಹಾರವನ್ನು

ರೂಢಿಸಿಕ್ಕೊಂಡಿದ್ದಾರೆ. ಬೇಳೆ ಸಾರು, ಅನ್ನ, ರೊಟ್ಟಿ ಇವು ಸಸ್ಯ ಆಹಾರದಲ್ಲಿ ಮುಖ್ಯವಾಗಿ ಕಂಡು ಬರುವ ಆಹಾರ ಪದ್ಧತಿಗಳಾಗಿವೆ ಸಿಕ್ಲಿಗರ ಜನಾಂಗವು ಸಸ್ಯ ಆಹಾರವನ್ನು ಇಂದಿನ ದಿನಗಳಲ್ಲಿ ತಾವೇ ಸ್ವತಃ ಆರಿಸಿಕೊಂಡು ಹೋಗಿದ್ದಾರೆ. ಬುಡಕಟ್ಟಿನ ಅಡುಗೆಗಿಂತ ಭಿನ್ನವಾಗಿ ಇವರ ಸಸ್ಯ ಆಹಾರದ ಅಡುಗೆಗಳಿವೆ. ಗುಡ್ಡ-ಬೆಟ್ಟ, ಕಾಡುಗಳಲ್ಲಿ ಇವರು ವಾಸವಾಗದ ಕಾರಣ ನಗರದ ಪ್ರದೇಶದಲ್ಲಿ ಸಿಗುವ ಸಸ್ಯ ಆಹಾರವನ್ನು ತಮ್ಮ ಪ್ರತಿನಿತ್ಯದ ಜೀವನಕ್ಕಾಗಿ ಬಳಸಿಕೊಂಡಿರುತ್ತಾರೆ. ಪುಂಡಿಯಪಲ್ಯ, ತೂಬೆ ಸೊಪ್ಪು ಮಾಡುತ್ತಾರೆ. ತಪ್ಪಲು ದಿನಸಗಳನ್ನು ಬಾಜಿಗಳನ್ನು ತಯಾರಿಸಿಕೊಂಡು ಊಟವನ್ನು ಮಾಡುತ್ತಾರೆ.

ಜೊತೆ ಜೊತೆಗೆ ತರಕಾರಿ ಹಣ್ಣುಕಾಯಿ, ಗಡ್ಡೆಗಳನ್ನು ಬಳಸುತ್ತಾರೆ. ಆಲೂಗಡ್ಡೆ, ಉರಳಿಕಾಳು, ಅವರೆಕಾಳು, (ಬಲ್ಲರ್)ಸೋರೆಕಾಯಿ, (ಖದ್ದು), ಬದನೆಕಾಯಿ (ಮಂಗಣ್), ಹೀರೆಕಾಯಿ(ತೋರೆಯಾಲ್), ಹೂಕೋಸು(ಗೋಲಿ), ಗಜ್ಜರಿ ಮುಂತಾದ ಬಗೆಯ ಆಹಾರವನ್ನು ಸೇವಿಸುತ್ತಾರೆ. ಇವುಗಳಿಗೆ ಬೇಕಾದ ಬಳ್ಳೊಳ್ಳಿ, ಪುದಿನಾ, ಇರುಳ್ಳಿ, ಗಸಗಸೆ, ಲಾವಂಗ, ಚೆಕ್ಕಿ, ಕೋತಂಬರಿ, ಜೀರಗಿ, ಸಾಸಿವೆ, ಉಪ್ಪು, ಖಾರ, ಮೊದಲಾದ ಸಾಂಬಾರ ಪದಾರ್ಥಗಳನ್ನು ಬಳಸಿಕೊಳ್ಳುತ್ತಾರೆ. ಬೇರೆ ಬೇರೆ ನಮೂನೆಯ ಎಣ್ಣೆಯನ್ನು ಬಳಸಿಕೊಂಡು ಆಹಾರವನ್ನು ಸೊಗಸಾಗಿ ಮಾಡಿಕೊಂಡು ತಮ್ಮ ಆಹಾರವನ್ನು ಮಿತ ಹಾಗೂ ಹಿತವಾಗಿ ಸೇವಿಸುತ್ತಾರೆ.

ಸಿಕ್ಲಿಗರ ತಮ್ಮ ಬದುಕಿನ ನಾನಾ ಮುಖಗಳನ್ನು ಅರಳಿಸುವ ಹಾಗೆ ಜೀವನವನ್ನು ನಿರ್ವಹಿಸಿಕೊಂಡು ಬಂದಿದ್ದಾರೆ. ವಿವಿಧ ಬಗೆಯ ಅಡಿಗೆಗಳನ್ನು ಮಾಡಿಕೊಂಡು ಕಾಲಕಳೆದಿದ್ದಾರೆ. ಇವರ ಆಹಾರ ಪದ್ದತಿಯನ್ನು ಗಮನಿಸಿದರೆ ಸರಳವಾದ ರೀತಿಯಲ್ಲಿವೆ.

ಮಾಂಸಹಾರ

ಸಿಕ್ಲಿಗರ ಬುಡಕಟ್ಟು ಜನಾಂಗದ ಮುಖ್ಯವಾದ ಆಹಾರ ಪದ್ಧತಿ ಮಾಂಸಹಾರವಾಗಿದೆ. ಅವರು ಕುರಿ, ಕೋಳಿ, ಮೀನುಗಳಂತಹ ಮಾಂಸವನ್ನು ತಿನ್ನುವುದರ ಮೂಲಕ ಗಟ್ಟಿಗರಾಗಿದ್ದಾರೆ. ಶ್ರಮವಹಿಸಿ ದುಡಿಯುವುದರಿಂದ ಆಯಾಸ ಹಾಗೂ ದೇಹಕ್ಕೆ ದಾರ್ಢ್ಯತೆ ತರಬೇಕೆಂಬ ಉದ್ದೇಶದಿಂದ ಮಾಂಸಹಾರವೇ ಮುಖ್ಯವಾದುದು. ಸಿಖ್ಖರು ಕೂಡ ಮಾಂಸಹಾರ ಪ್ರಧಾನವಾದ ಆಹಾರವಾಗಿದೆ. ಸಿಕ್ಲಿಗರ ಹಾಗೂ ಸಿಕ್ಕಲಗಾರ ಬುಡಕಟ್ಟು ಸಮುದಾಯಕ್ಕೆ ಯಾವುದೇ ರೀತಿಯ ವ್ಯತ್ಯಾಸಗಳಿಲ್ಲ. ಪಂಜಾಬ ಮೂಲದವರಾಗಿರುವುದರಿಂದ ಅಲ್ಲಿಯೇ ಇವರು ಹೋರಾಟ

ಯುದ್ಧದಲ್ಲಿ ಭಾಗವಹಿಸಿ ದೇಹವನ್ನು ಗಟ್ಟಿಗೊಳಿಸಲು ಮಾಂಸಹಾರವನ್ನು ಸೇವಿಸುವ ರೂಢಿಯಾಗಿತ್ತು. ಹೈದ್ರಾಬಾದ್ ನಿಜಾಮರ ಆಡಳಿತದಿಂದಾಗಿ ಸಂಪೂರ್ಣವಾದ ಆಹಾರ ಪದ್ಧತಿಗಳು ಭಿನ್ನವಾದವು. ಪಂಜಾಬ ರಾಜ ಹಾಗೂ ಹೈದ್ರಾಬಾದ್ ನಿಜಾಮನ ನಡುವೆ ನೇರಸಂಬಂಧ ಹೊಂದಿದ್ದರಿಂದ ರಣಜಿತ್‌ಸಿಂಗ್ ನೇರವಾಗಿ ತನ್ನಲ್ಲಿದ್ದ ಈ ಸಿಕ್ಲಿಗರ ಸಮುದಾಯವನ್ನು ಕೋಟೆಕಾಯಲು, ಯುದ್ಧವನ್ನು ಮಾಡಲು ಅಥವಾ ಬೇರೆ ಬೇರೆ ಕೆಲಸಕಾರ್ಯಗಳನ್ನು ಮಾಡಲು ಗಟ್ಟಿಗರಾದ್ದರಿಂದ ಸಹಜವಾಗಿ ಸೈನ್ಯಕ್ಕೆ ಕಳಿಸಿಕೊಡಲಾಯಿತು. ಬ್ರೀಟಿಷರು ಹಾಗೂ ಕನ್ನಡದ ಜನರಿಂದ ಗಟ್ಟಿಗೊಳ್ಳಲು ಹೈದ್ರಾಬಾದ್ ನಿಜಾಮ ತನ್ನ ಸಂಸ್ಥಾನದ ಒಳಗಡೆ ಈ ಸಿಕ್ಲಿಗರ ಸಮುದಾಯವನ್ನು ದುಡಿಮೆಗೆ ಇಟ್ಟುಕೊಂಡ, ಇವರು ಗಡ್ಡವನ್ನು ಬಿಟ್ಟು ತಲೆಯ ಕೂದಲನ್ನು ಕಟ್ಟಿಕೊಂಡು ನೋಡಿದಾಕ್ಷಣ ಹೆದರುವ ಸ್ಥಿತಿ ನಿರ್ಮಾಣವಾದಾಗ ತಮ್ಮಷ್ಟಕ್ಕೆ ತಾವು ಪ್ರಭುದ್ಧವಾಗಿ ಕಾಣಲು ಪ್ರಾರಂಭಿಸಿದರು. ಇದನ್ನು ಕಂಡು ಸಂಸ್ಥಾನದ ಜನ ಸಮುದಾಯವು ಬೇಗನೇ ಎಲ್ಲರೊಂದಿಗೆ ಸೇರಿಕೊಂಡು ಹೋದರು.

ಅಲ್ಲದೇ ಹೈದ್ರಾಬಾದ್ ನಿಜಾಮನು ಮೊದಲು ಸೈನ್ಯಾಡಳಿತದಲ್ಲಿ ಸೇರಿಸಿಕೊಂಡ. ಈ ನಾಡಿನ ಜನ ಕರ (ಕಂದಾಯ) ಹಿಸ್ಸೆಯನ್ನು ಕೊಡದಿದ್ದಾಗ ಸಹಜವಾಗಿ ಸಿಕ್ಲಿಗರ ಜನಾಂಗವನ್ನು ಆ ಕೆಲಸಕ್ಕೆ ನೇಮಿಸಲಾಯಿತು. ಕೂಡಲೇ ಇವರ ಆಕಾರ ವಿಕಾರವನ್ನು ನೋಡಿ ಹೆದರಿದ ಜನ ಏನು ಮಾಡುವವರೋ ಎಂಬ ಭಯದಿಂದ ಕೂಡಲೇ ಹಪ್ತೆ, ಕರ, ಕಂದಾಯ ನೀತಿ ತೆರಿಗೆ ನೀಡಿದರು. ಇದರಿಂದ ನಿಜಾಮನ ಆಡಳಿತದಲ್ಲಿ ಖಾಲಿಯಾದ ಕಂದಾಯ ಹಣ ಮತ್ತೆ ಸೇರಿಕೊಂಡು ತುಂಬಿ ಹೋಯಿತು. ಆ ಕಾರಣಕ್ಕಾಗಿಯೇ ನಿಜಾಮನು ಸಹಿತ ಇವರಿಗೆ ಬೇಕಾದ ಮಾಂಸಹಾರವನ್ನು ಸಾಕಷ್ಟು ಕೊಡಿಸುತ್ತಿದ್ದ.

ಮಾಂಸಹಾರವೆಂದರೆ ಸಿಕ್ಲಿಗರರಿಗೆ ಪಂಚ ಪ್ರಾಣವಾಗಿದೆ. ಹಂದಿಯ ಮಾಂಸ, ಕುರಿ, ದನ, ಕೋಳಿ, ಪಕ್ಷಿಗಳ ಮಾಂಸವಾದರಂತೂ ಸಾಕು ಅವರಿಗೆ ಇಲ್ಲದ ಖುಷಿ ಅಲೆಮಾರಿ – ಗಳಾದುದರಿಂದ ಬೇರೆ ಬೇರೆ ಪ್ರದೇಶದಲ್ಲಿದ್ದ ಪ್ರಚಲಿತವಾಗಿ ದೊರೆಯುವ ಮಾಂಸವನ್ನು ತೆಗೆದುಕೊಂಡು ತಿನ್ನುತ್ತಾರೆ. ಇವರು ಯಾವುದೇ ಮಾಂಸವಿರಲಿ ಅಥವಾ ಸಸ್ಯ ಆಹಾರವೇ ಇರಲಿ ಅವನ್ನೆಲ್ಲಾ ಸಂಗ್ರಹಿಸಿಡುವ ಮನೋಧರ್ಮ ಹೊಂದಿಲ್ಲ. ಅವರು ಸಹಜವಾಗಿಯೇ ತಾವು ಜೀವನದಲ್ಲಿ ದುಡಿಮೆ ಹಾಗೂ ದುಡಿಮೆಗೆ ತಕ್ಕ ಆಹಾರ ಸೇವನೆ ಮುಖ್ಯವಾಗಿದೆ.

ಯಾವುದೇ ಬುಡಕಟ್ಟು ಮತ್ತು ಅಲೆಮಾರಿ ಸಮುದಾಯ ದಿನಕ್ಕೆ ಒಂದು ಹೊತ್ತಿನ ಊಟವಾದರೂ ಮಾಂಸವನ್ನು ತಿನ್ನಲೇಬೇಕು. ಗುಡ್ಡ-ಗಾಡು ಮತ್ತು ಬಯಲು ಪ್ರದೇಶದಲ್ಲಿ ವಾಸವಾಗಿರುವುದರಿಂದ ಪ್ರಾಣಿಗಳನ್ನು ಬೇಟೆಯಾಡಿಯೇ ಉಪಜೀವನ ಸಾಗಿಸಬೇಕಾಗಿತ್ತು. ಇಂದಿಗೂ ಕೂಡ ಗ್ರಾಮೀಣ ಪ್ರದೇಶದ ಅಲೆಮಾರಿಗಳು ಪಾರ್ಧಿಯರು, ಗೋಸಂಗಿಗಳು, ಹಗಲುವೇಷಗಾರರು, ಬೇಟೆಗಳಿಗಾಗಿಯೇ ಒಂದೊಂದು ಪ್ರದೇಶಕ್ಕೆ ಹೋಗುತ್ತಾರೆ ಬೇಟೆಯಾಡಿಕೊಂಡು ಬಂದಂತಹ ಪ್ರಾಣಿಯ ಮಾಂಸವನ್ನು ತಮ್ಮ ಸಮುದಾಯದಲ್ಲಿ ತಂದು ಹಂಚಿಕೊಂಡು ತಿನ್ನುವ ಪದ್ಧತಿಯು ಇಂದಿಗೂ ಇದೆ.

ಸಿಕ್ಲಿಗರಲ್ಲಿ ಬೇಟೆಯಾಡುವ ಸಂಸ್ಕೃತಿಯಲ್ಲಿ ಅವರೇನಿದ್ದರೂ ಪ್ರಾಣಿಗಳನ್ನು ಸಾಕಿಕೊಂಡು ಮಾಂಸ ಭಕ್ಷಣೆ ಮಾಡಬೇಕು ಹಾಗಾಗಿ ನಗರ ಪ್ರದೇಶದಲ್ಲಿ ವಾಸವಾಗಿರುವ ಸಿಕ್ಲಿಗರು ಮಾಂಸದ ಊಟಕ್ಕೆ ಹಂದಿಗಳನ್ನು, ಹಾಗೂ ಕೋಳಿಗಳನ್ನು ಸಾಕುತ್ತಾರೆ, ಹೆಚ್ಚಿನ ಹಂದಿಗಳನ್ನು ಸಾಕುವುದರಿಂದ ಅವುಗಳ ಸಂಖ್ಯೆ ಹೆಚ್ಚಾದಾಗ ಮಾರಾಟ ಮಾಡುವ ವ್ಯವಸ್ಥೆಯನ್ನು ಮಾಡಿಕೊಂಡಿರುತ್ತಾರೆ. ಹಂದಿ ಸಾಕುವುದೆಂದರೆ ಅವರಿಗೆ ಯಾವ ನಿರ್ಬಂಧವು ಇಲ್ಲ. ಹಂದಿಗಳ ಮನೆಯಲ್ಲಿ ಸಾರಾಸಗಟಾಗಿ ತಿರುಗಾಡುತ್ತವೆ. ಅವು ಅವರಿಗೆ ಸಾಕು ಪ್ರಾಣಿಗಳು. ಅವರು ತಮ್ಮ ಕುಲಕಸುಬಿನ ಜೊತೆ ಹಂದಿ ಮಾಂಸ ತಿನ್ನಲು ಮತ್ತು ಮಾರಾಟ ಮಾಡಲು ಹಂದಿಯನ್ನು ಸಲಹುತ್ತಾರೆ.

ಸಿಕ್ಲಿಗರು ತಮ್ಮ ಜೀವನದ ಬಹು ಮುಖ್ಯವಾದ ಅಂಶಗಳನ್ನು ಪ್ರತಿಪಾದಿಸುವಾಗ ಆಹಾರ ಪದ್ಧತಿಗಳನ್ನು ಅನುಸರಿಸುವಾಗ ತೃಪ್ತಿಯೇ ಇರುವುದಿಲ್ಲ. ಇದು ಮಾತ್ರ ಸ್ಪಷ್ಟವಾಗಿ ಏನೇ ಸಿಕ್ಕರೂ ತೃಪ್ತಿಯಿಂದ ಊಟವನ್ನು ಮಾಡುತ್ತಾರೆ. ಮಾಂಸದ ಸಾರನ್ನು ಮಾಡುತ್ತಾರೆ. ಹೆಚ್ಚಾಗಿ ಮಾಂಸವನ್ನು ಅವರು ಮೊದಲು ಬೇಯಿಸಿಕೊಂಡು ಉಪ್ಪು ಕಾರ ಹಚ್ಚಿಕೊಂಡು ತಿನ್ನುತ್ತಿದ್ದರು. ಬರು ಬರುತ್ತಾ ಅನೇಕ ರೀತಿಯಲ್ಲಿ ಆಹಾರವನ್ನು ಮಾಡಿಕೊಂಡು ಊಟವನ್ನು ಮಾಡುವರು. ಆದರೆ ಇಂದಿನ ದಿನಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿದ್ದುದರಿಂದ ಸಹಜವಾಗಿ ಅವರಿಗೆ ಏನೇ ಮಾಂಸಹಾರ ಅಡುಗೆ ದೊರೆತರೂ ಅವನ್ನು ನಿರ್ವಹಿಸಿಕೊಂಡು ಹೋಗುತ್ತಾರೆ.ಚಿಗರೆ ಮಾಂಸ , ಕಾಡು ಹಂದಿ, ಹಂದಿ, ಮೊಲದ ಮಾಂಸ, ಆಡಿ ನಮಾಂಸ, ಕೋಳಿ, ಕುರಿಯ ಮಾಂಸ ಈ ರೀತಿಯಾಗಿ ಬುಡಕಟ್ಟಿನವರು ಪಶುಪಕ್ಷಿಗಳನ್ನು ಮಾಂಸಹಾರವನ್ನಾಗಿ ಸೇವಿಸುತ್ತಿರುವುದು ಕಂಡು ಬರುತ್ತದೆ. ಹಂದಿಯ ಮಾಂಸ ಬಹು ಬಗೆಯಾದ ವಿಶೇಷವಾದ ಆಹಾರವಾಗಿದೆ. ಕರ್ನಾಟಕದಲ್ಲಿ

ಬಹುಸಂಖ್ಯಾತ ಬುಡಕಟ್ಟು ಸಮುದಾಯವು ಆಹಾರ ಪದ್ಧತಿಯಂತೆ ಮಾಂಸಾಹಾರವು ಸಿಕ್ಲಿಗರ ಬುಡಕಟ್ಟು ಸಮುದಾಯ ಹೊಂದಿದೆ.

ಸಿಕ್ಲಿಗರರು ತಿನ್ನುವ ಇತರೇ ತಿನಿಸುಗಳು ಬಹು ವಿಶೇಷವಾಗಿದೆ. ಸಿಕ್ಲಿಗರು ವಿಶೇಷ ಅಡುಗೆಗಳನ್ನು ಮಾಡುತ್ತಾರೆ. ಬೇಯಿಸುವ ಹಾಗೂ ಬೇಯಿಸಿಕೊಂಡು ತಿನ್ನುವ ಪದಾರ್ಥಗಳನ್ನು ತಿನ್ನುತ್ತಾರೆ. ಬುಡಕಟ್ಟು ಸಮುದಾಯದ ಕೆಲವು ತಿನಿಸುಗಳಿವೆ. ಕರ್ನಾಟಕದ ಮೂಲೆಮೂಲೆಯಲ್ಲಿ ವಾಸಿಸುವ ಈ ಜನ ಸಮುದಾಯವು ವಾಸಿಸುತ್ತವೆ. ಸಿಕ್ಲಿಗರು ಬೇರೆ ಬೇರೆ ಪ್ರದೇಶದಲ್ಲಿ ಆಯಾ ಸಾಮಾನ್ಯ ತಿನಿಸುಗಳನ್ನು ಅವರು ರೂಪಿಸಿಕೊಂಡು ಬರುತ್ತಾರೆ.

ಸಿಕ್ಕಲಗಾರರು ಅಲೆಮಾರಿಗಳು , ಬಡವರು, ಅತ್ಯಂತ ತೀರಾ ನಿರ್ಗತಿಕರು ಆಗಿದ್ದಾರೆ. ಯಾವುದೇ ಆಹಾರ ಪದಾರ್ಥಗಳನ್ನು ಸಂಗ್ರಹಿಸುವುದಿಲ್ಲ. ಸಂಗ್ರಹಿಸುವಷ್ಟು ಅವರು ಅನುಕೂಲಸ್ಥರಲ್ಲ. ಆಹಾರವನ್ನು ಸಂಗ್ರಹಿಸುವುದಕ್ಕೂ ಸಾಧ್ಯವಿಲ್ಲ. ಪ್ರದೇಶದಿಂದ ಪ್ರದೇಶಕ್ಕೆ ಅಲೆಮಾರಿ ಜೀವನ ನಡೆಸುವುದರಿಂದ ತಮಗೆ ಏನು ಬೇಕು ಎಷ್ಟು ಬೇಕು ಅಷ್ಟನ್ನೇ ತಮ್ಮ ಬದುಕಿನಲ್ಲಿ ರೂಪಿಸಬೇಕಾದ ಅನಿವಾರ್ಯತೆ ಇರುವುದರಿಂದ ಈ ಸಮುದಾಯವು ತಮಗೆ ಬೇಕಾದ ಆಹಾರ ಪದಾರ್ಥಗಳನ್ನು ಆಗಿಂದಾಗ ತೆಗೆದುಕೊಂಡು ಬಿಡುತ್ತಾರೆ. ಹೀಗಾಗಿ ಅವರ ಆಹಾರ ಪದ್ಧತಿ ಸರಳವಾಗಿ ಕಂಡು ಬರುತ್ತದೆ.

ಸಿಕ್ಲಿಗರ ಅಡುಗೆಗೆ ಬೇಕಾದ ಹಲವು ಸಾಮಗ್ರಿಗಳನ್ನು ತಾವೇ ಸ್ವತಃ ತಯಾರಿಸಿಕೊಂಡು ಬಿಡುತ್ತಾರೆ. ಒಲೆಗಳನ್ನು ಹಚ್ಚುತ್ತಾರೆ. ಸ್ಟೋ, ಗ್ಯಾಸುಗಳನ್ನು ಹಚ್ಚುತ್ತಾರೆ. ಸುತ್ತಮುತ್ತಲ ಇರುವ ಕಟ್ಟಿಗೆ ಮುಂತಾದವುಗಳನ್ನು ತೆಗೆದುಕೊಂಡು ಬರುತ್ತಾರೆ. ಮಡಿಕೆ ಪಾತ್ರೆಗಳನ್ನು ಬಳಸುತ್ತಾರೆ. ತಮಗೆ ಆಹಾರವನ್ನು ತಿನ್ನಲು ಬೇಕಾಗುವ ಸಿಲ್ವರ್ ಅಲ್ಯುಮಿನಿಯಂ ನಂತಹ ಆಧುನಿಕ ಸಾಮಗ್ರಿಗಳನ್ನು ಬಳಸಿಕೊಳ್ಳುತ್ತಾರೆ. ಖಾರ ಕುಟ್ಟಲು ಅರೆಯುವ ಸಲುವಾಗಿ ಗುಂಡಕಲ್ಲನ್ನು ಬಳಸುತ್ತಾರೆ. ತಗಡನ್ನು ಹಾಕಿಕೊಂಡು ಒಂದು ಗುಡಿಸಲಿನ ಹಾಗೆ ಮನೆ ನಿರ್ಮಿಸಿಕೊಂಡಿರುತ್ತಾರೆ.

ಸಿಕ್ಲಿಗರ ನೆಲೆಸಿರುವ ವಿಧಾನ

ಸಿಕ್ಲಿಗರ ಬುಡಕಟ್ಟು ಜನಾಂಗ ಇವರು ಕರ್ನಾಟಕದಲ್ಲಿ ಅದರಲ್ಲೂ ಉತ್ತರ ಕರ್ನಾಟಕ, ಹೈದ್ರಾಬಾದ ಕರ್ನಾಟಕದಲ್ಲಿ ಹೆಚ್ಚಾಗಿ ಕಂಡು ಬರುತ್ತಾರೆ. ಸಿಕ್ಲಿಗರು ವಾಸವಾಗುವ ಸ್ಥಳ ವಿಶಿಷ್ಟ

ನೆಲೆಯನ್ನು ಹೊಂದಿರುತ್ತದೆ. ಇಲ್ಲಿಯ ಬುಡಕಟ್ಟು ಜನಾಂಗ ಕರ್ನಾಟಕ ಹಾಗೂ ಭಾರತ ದೇಶದ ಹಲವು ಕಡೆ ವಾಸಿಸುವವರಿಗೆ ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುತ್ತದೆ. ಕರ್ನಾಟಕದಲ್ಲಿ ವಾಸಿಸುವ ಸಿಕ್ಲಿಗರ ಜನಾಂಗ ಮಾತ್ರ ಹತ್ತು ಹಲವು ರೀತಿಗಳಿಂದ ಗಮನ ಸೆಳೆದಿದ್ದಾರೆ. ಗುಲಬರ್ಗಾ, ಬೀದರ್, ರಾಯಚೂರು ಹಾಗೂ ಕೊಪ್ಪಳಗಳಲ್ಲಿ ವಾಸವಾದ ಸಿಕ್ಲಿಗರು ಹಿಂದಿ ಮಿಶ್ರಿತ ಭಾಷೆ ಆಡುತ್ತಾರೆ. ಈಗ ಕನ್ನಡವನ್ನು ಸಹಿತ ಕಲಿತುಕೊಂಡು ವ್ಯವಹಾರ ನಡೆಸಿದ್ದಾರೆ.

ಎಲ್ಲೋ ಒಂದೆರಡು ಕಡೆ ಮಾತ್ರ ಸುದೀರ್ಘವಾದ ಕುಟುಂಬಗಳು ಸೇರಿಕೊಂಡು ಮನೆ ನಿರ್ಮಾಣ ಮಾಡಿಕೊಂಡಿವೆ. ಸಿಕ್ಲಿಗರು ಕುಟುಂಬ ಬೇರೆ ಬೇರೆ ಕಡೆ ವಾಸವಾಗಿರುವುದರಿಂದ ಸಮೂಹ ಕಡಿಮೆಯಾಗುತ್ತಿದೆ. ಕಡಿಮೆ ಪ್ರಮಾಣದ ಸಮೂಹಗಳು ನೆಲೆ ನಿಲ್ಲಲು ಸಾಧ್ಯವಾಗಿಲ್ಲ. ಸಿಕ್ಲಿಗರು ಖಾಯಂ ಆದ ವಸತಿಗಳಿರುವುದು ಅಪರೂಪವಾದದ್ದು, ವಸತಿ ನಿರ್ಮಿಸಿಕೊಂಡಿರುವುದು ಕಲ್ಲು–ಇಟ್ಟಿಗೆಗಳಿಂದ ಕಟ್ಟಿದ ಗೊಡೆಗೆ ತಗಡಿನ ಷೀಟನ್ನು ಹಾಕಲಾಗುತ್ತದೆ. ಇಲ್ಲವೇ ತೆಂಗಿನ ಗರಿಗಳನ್ನು ಬಳಸಿಕೊಂಡು ಮನೆ ನಿರ್ಮಿಸಿದ್ದಾರೆ. ಒಂದೊಂದು ಕಡೆ ಕೇವಲ ತಗಡಿನ ಷೀಟುಗಳನ್ನು ಮೇಲೆ ಹಾಕಿ ಸುತ್ತಲೂ ತಗಡಿನ ಷೀಟುಗಳನ್ನು ಕಟ್ಟಿ ಕೊಂಡಿದ್ದಾರೆ. ಕೆಲವೊಂದು ಕಡೆ ತೆಂಗಿನಗರಿಗಳನ್ನು ಸುತ್ತಲೂ ಕಟ್ಟಿಕೊಂಡು ಮನೆಯನ್ನು ನಿರ್ಮಿಸಿಕೊಂಡಿದ್ದಾರೆ. ಇವರು ಎಷ್ಟೊಂದು ಅಸಹಾಯಕರಾಗಿದ್ದಾರೆಂದರೆ ಗೋಣಿ ಚೀಲಗಳನ್ನು ಹಾಕಿಕೊಂಡು, ಇಲ್ಲವೆ ಪ್ಲಾಸ್ಟಿಕ್ ಚೀಲ ಮತ್ತೊಂದೆಡೆ ಬಟ್ಟೆಗಳ ತುಂಡುಗಳನ್ನು ಕಟ್ಟಿಗೆಗೆ ಸುತ್ತು ಹಾಕಿ ಗುಡಿಸಲು ನಿರ್ಮಿಸಿಕೊಂಡಿದ್ದಾರೆ. ಮಳೆ ಬಂದರೆ ಸಂಪೂರ್ಣ ತೋಯಿಸಿಕೊಂಡು ಹೋಗುತ್ತಾರೆ. ಗಾಳಿ ಬಂದರೆ ಗುಡಿಸಲು ಕಿತ್ತುಕೊಂಡು ಹಾರಿ ಹೋಗುತ್ತವೆ. ಚಳಿಯಲ್ಲಿ ನಡುಗಿ ಹೋಗುತ್ತಾರೆ. ಬೇಸಿಗೆಯಲ್ಲಿ ಜೀವಂತವಾಗಿ ಬೇಯುತ್ತಾ ನಡೆದು ಹೋಗುವ ಜೀವನ ಅವರ ಮನೆಗಳಲ್ಲಿ ಕಾಣಬಹುದಾಗಿದೆ. ಎಲ್ಲಾದರೂ ಇರಲಿ ಅವರಿಗೆ ಖಾಯಂ ಆದ ವಾಸಸ್ಥಾನವಿಲ್ಲ.

ಕೊಪ್ಪಳ ನಗರದಲ್ಲಿ ದೇವರಾಜ ಅರಸು ಕಾಲೋನಿಯಲ್ಲಿ ರಾಯಚೂರು, ಬೀದರಗಳಂತಹ ಪ್ರದೇಶಗಳಲ್ಲಿ ಹಾಗೂ ಧಾರವಾಡದ ಲಕ್ಷ್ಮಿ ಸಿಂಗ್ ಕೆರೆ ಬೆಳಗಾಂವದ ರುಕ್ಮಿಣಿ ನಗರ, ಹುಬ್ಬಳ್ಳಿಯ ಸುಭಾಷ್ ನಗರ, ಶಿಗ್ಗಾಂವ ಇತರ ಪ್ರದೇಶಗಳಲ್ಲಿ ಖಾಯಂ ಆಗಿ ವಾಸವಾಗಿದ್ದಾರೆ. ಮೊದಲು ಗುಡಿಸಲು ಹಾಕಿಕೊಂಡು ಮನೆ, ನಿರ್ಮಿಸಿಕೊಂಡಿದ್ದರು. ಉದ್ದನೆಯ ಚಾಪೆ ತಯಾರಿಸಿ ಅವುಗಳನ್ನೇ ಮನೆಯ ಸುತ್ತಲೂ ಗೋಡೆಗಳನ್ನಾಗಿ ಮಾಡಿಕೊಂಡಿದ್ದಾರೆ. ನೆಟ್ಟಿಗಿರುವ ಗೂಟಗಳನ್ನು ಅಡ್ಡಲಾಗಿ ಹಾಕುವ ಬಿದರಿನ ಕಟ್ಟಿಗೆಯ ಮೇಲೆ ಹರಡಿ ತಾತ್ಕಾಲಿಕ

ಟೆಂಟು ಮಾಡಿಕೊಂಡು ತಮ್ಮ ವಸತಿಗೆ ಭದ್ರತೆಯನ್ನು ಒದಗಿಸಿಕೊಂಡಿದ್ದಾರೆ. ಇವರು ತುಂಬಾ ಕೊಳಚೆಗೇರಿಯಲ್ಲಿ ನಗರದ ಮೂತ್ರ ವಿಸರ್ಜನೆ ತುಂಬಿಕೊಂಡಿರುವ ಯಾರೂ ಕೇಳದ ಪ್ರದೇಶಗಳಲ್ಲಿ ನೆಲೆಸಿದ್ದಾರೆ. ಇವರ ಜೊತೆಗೆ ಹಂದಿಯೂ ವಾಸವಾಗಿರುತ್ತವೆ. ತಮ್ಮ ಸೆಡ್ ಅಥವಾ ಮನೆಯ ಮುಂದೆನೆ ಸ್ನಾನ ಮಾಡಲು ಒಣಗಿದ ಹುಲ್ಲಿನಿಂದ ವ್ಯವಸ್ಥೆ ಮಾಡಿಕೊಂಡಿದ್ದಾರೆ.

ಈ ರೀತಿಯ ಮನೆಗಳನ್ನು ನಿರ್ಮಿಸಿಕೊಂಡು ವಾಸವಾಗುವ ಬಗ್ಗೆ ಎಲ್ಲರಿಗೂ ಕೂತುಹಲವನ್ನುಂಟು ಮಾಡಿವೆ. ಗುಡಿಸಲುಗಳನ್ನು ನಿರ್ಮಿಸಲು ಹಳ್ಳಿಗಳಲ್ಲಿ ದೊರಕುವ ಕಡ್ಡಿಗಳನ್ನು ತಂದು ಅವುಗಳನ್ನೆಲ್ಲಾ ಒಣಗಿಸಿಕೊಂಡು ಒಂದಕ್ಕೊಂದು ಸೇರಿಸಿ ದಬ್ಬಣದಿಂದ ಹೊಲೆಯುತ್ತಾರೆ. ಇದನ್ನು ಉದ್ದನೆಯ ಚಾಪೆಯ ಹಾಗೆ ನಿರ್ಮಾಣ ಮಾಡಿದ್ದಾರೆ. ಮಗದೊಂದು ಕಡೆ ಗೊಬ್ಬರದ ಪ್ಲಾಸ್ಟಿಕ್ ಚೀಲಗಳನ್ನು ತಂದು ಅವುಗಳನ್ನೆಲ್ಲಾ ಹರಿದು ದಬ್ಬಣದಿಂದ ಹೊಲಿದು ಅವುಗಳನ್ನು ಮನೆಯ ಸುತ್ತಲೂ ಸುತ್ತಿ ಮನೆಗಳನ್ನು ನಿರ್ಮಾಣ ಮಾಡುತ್ತಾರೆ. ನಾಲ್ಕು ಕಡೆ ಬಂದೋಬಸ್ತಾದ ಗೂಟಗಳನ್ನು ನೆಟ್ಟು ಬಿಗಿಯಾಗಿ ನೆಟ್ಟು ಗಾಳಿ ಮಳೆಗೆ ಏನೂ ಆಗದ ಹಾಗೆ ಭದ್ರಪಡಿಸಿಕೊಂಡು ಇಡುತ್ತಾರೆ. ಬಾಗಿಲುಗಳನ್ನು ಎಂದೂ ಮುಚ್ಚುವುದಿಲ್ಲ. ಹಾಗೇ ತೆರೆದೇ ಇರುತ್ತದೆ. ಇದರಿಂದ ಅವರು ಜನರ ಮೇಲೆ ಇಟ್ಟಿರುವ ನಂಬಿಕೆ ವ್ಯಕ್ತವಾಗುತ್ತದೆ. ನೋಡಿದಾಕ್ಷಣ ಬಾಗಿಲು ಹಾಗೇ ರಾತ್ರಿ-ಹಗಲು ಎನ್ನದೇ ತೆರೆದೇ ಇರುತ್ತದೆ. ಇದಕ್ಕೆ ಕಾರಣವೂ ಇದೆ. ಬಾಗಿಲು ಹಚ್ಚಲು ಸಾಧ್ಯವಾಗದ ಬಡತನ ಅವರಿಗೆ ಇದೆ. ಈ ಕಾರಣಕ್ಕಾಗಿ ಅವರು ಬಾಗಿಲನ್ನು ತೆರದು ಇಡುತ್ತಾರೆ. ಅಲ್ಲದೇ ಮನೆಯಲ್ಲಿ ಅಂತಹ ಬೆಲೆ ಬಾಳುವ ವಸ್ತುಗಳು ಇರುವುದಿಲ್ಲ. ಹಾಗೆ ನಾವು ಅಂದುಕೊಂಡಿದ್ದೇವೆ. ಆದರೆ ಅದೆ ಸಮುದಾಯದ ಜನರಿಗಾದರೂ ಅಂಜಿಕೊಂಡು ಬಾಗಿಲು ಹಾಕಿಕೊಳ್ಳಬಹುದಲ್ಲ. ಏಕೆಂದರೆ ಅವಶ್ಯವಾದ ಸಾಮಗ್ರಿ ಒಬ್ಬರಿಂದ ಒಬ್ಬರು ಕಳ್ಳತನ ಮಾಡಬಹುದೆಂಬ ಭಯ ಅವರಿಗಿಲ್ಲ. ಏಕೆಂದರೆ ಅವರು ಕೂಡು ಕುಟುಂಬದ ಜೀವನ ಹಾಗೂ ಅನ್ಯೋನ್ಯ ಜೀವನ ಸಾಗಿಸಿಕೊಂಡು ಬರುವವರಾಗಿದ್ದಾರೆ.

ಅಲೆಮಾರಿಗಳಾದ್ದರಿಂದ ಇಂತಹ ಸಣ್ಣ-ಹಗುರವಾದ ವಸ್ತುಗಳಿಂದ ಮನೆ ನಿರ್ಮಾಣ ಮಾಡುವ ಮೂಲಕ ತಾವು ಎಲ್ಲಿಗೆ ಹೋಗಲಿ ಬೇಗನೆ ಕಿತ್ತುಕೊಂಡು ಹಗುರವಾದ ವಸ್ತುಗಳನ್ನು ಹೊತ್ತುಕೊಂಡು ಸರಳವಾದ ರೀತಿಯಲ್ಲಿ ಊರಿಗೆ ಒಯ್ಯಲು ಅನುಕೂಲವಾಗುತ್ತದೆ. ಆಗಿಂದಾಗ್ಗೆ ಅವರು ಮನೆ ನಿರ್ಮಾಣ ಮಾಡುತ್ತಾರೆ. ಮಳೆ-ಗಾಳಿ -ಚಳಿ ಬಂದರೂ ಅಂಜದೇ ಹಾಗೆ ತಮ್ಮ ವಸತಿಗಳಲ್ಲಿ ಗಟ್ಟಿಯಾಗಿ ನೆಲೆಯೂರಿಕೊಂಡು ಬಂದಿದ್ದಾರೆ. ಕೆಲವೊಂದು ಸಾರಿ ಬಾರಿ ಗಾಳಿ,

ಮಳೆಗೆ ಗುಡಿಸಲು ಕಿತ್ತುಕೊಂಡು ಹೋದರೂ ಅವರು ಹಾಗೇ ಬದುಕುತ್ತಿರುವುದನ್ನು ಕಂಡರೆ ವಿಷಾದವೆನಿಸುತ್ತದೆ. ಕೆಲವು ಸಿಕ್ಲಿಗರು ಕರ್ನಾಟಕದ ಬಹುಪಾಲು ಕ್ಷೇತ್ರ ಕಾರ್ಯ ಕೈಗೊಂಡಾಗ ಅವರು ಅಲ್ಪ ಸಂಖ್ಯಾತರಾಗಿದ್ದಾರೆ. ಬಲವಿಲ್ಲದವರಾಗಿದ್ದಾರೆ. ಆದರೆ ಅವರಿಗೆ ಆರ್ಥಿಕ, ಸಾಂಸ್ಕೃತಿಕ, ಹಾಗೂ ಶೈಕ್ಷಣಿಕ ಸ್ಥಿತಿ-ಗತಿಗಳನ್ನು ಕುರಿತು ನೋಡಿದರೂ ಅಧೋಗತಿಯ ಸ್ಥಿತಿಯಲ್ಲಿದ್ದಾರೆ. ಈ ಯಾವುದೇ ಸೌಲಭ್ಯಗಳಿಲ್ಲದೇ ಇರುವಂತವರಾಗಿದ್ದಾರೆ. ಮೂವತ್ತೈದು ಕುಟುಂಬಗಳು ದೊರಕಿವೆ. ಅವರೆಲ್ಲರೂ ಬೇರೆ ಬೇರೆ ಕಡೆ ಹೋಗಿದ್ದಾರೆ. ಇತ್ತೀಚಿನ ದಿನಗಳಲ್ಲಿ ಈ ಸಿಕ್ಲಿಗರ ಕೆಲವು ಕುಟುಂಬಗಳು ಕಳೆದ ಎಂಟತ್ತು ವರ್ಷಗಳಿಂದ ಒಂದೇ ಕಡೆ ನೆಲೆಯೂರಿದ್ದರಿಂದ ಸರ್ಕಾರದ ಆಶ್ರಯ ಮನೆಗಳಲ್ಲಿ, ಅಂಬೇಡ್ಕರ್ ಅವಾಜ್ ಯೋಜನೆ, ರಾಜೀವ್‌ಗಾಂಧಿ, ಮತ್ತು ಕೊಳಚೆ ನಿರ್ಮೂಲನಾ ಮಂಡಳಿಯು ಮನೆ ನಿರ್ಮಾಣ ಕಾಲಕ್ಕೆ ಈ ಅನುದಾನದಿಂದ ಕಲವೇ ಕೆಲವು ಬೆರಳೆಣಿಕೆಯಷ್ಟು ಜನಸಮುದಾಯದವರಿಗೆ ಮಾತ್ರ ಸೌಲಭ್ಯ ದೊರಕಿವೆ. ಇದರಲ್ಲಿ ಬಹುಪಾಲು ಸಿಕ್ಲಿಗರ ಸಮುದಾಯದ ಕುಟುಂಬಗಳು ಇನ್ನೂ ಅಲೆಮಾರಿಗಳಾಗಿ ಊರಿಂದೂರಿಗೆ ಸುತ್ತುವುದನ್ನು ಕಾಣುತ್ತೇವೆ. ವಲಸೆಯೇ ಇವರ ಬದುಕಾಗಿರುವುದರಿಂದ ಸ್ಥಿರವಾಗಿ ನಿಲ್ಲಲು ಯಾರಿಂದಲೂ ಸಾಧ್ಯವಿಲ್ಲ ಆಗುತ್ತಿಲ್ಲ. ಅಲೆಮಾರಿಯೇ ಅವರ ವೃತ್ತಿಜೀವನವಾಗಿದೆ. ತಮಗೆ ಬೇಕಾದ ತಮ್ಮ ಕೆಲಸ ಮುಗಿಯುವವರೆಗೂ ಇದ್ದು ಹೋಗಬೇಕಾದ ಅನಿವಾರ್ಯವಿದ್ದಾಗ ಬೇರೆ ಸ್ಥಳಗಳಿಗೆ ಹೋಗುತ್ತಾರೆ.

ಸಿಕ್ಲಿಗರು ವಾಸದ ಮನೆಯ ವಾಸ್ತು ಸ್ವರೂಪಗಳು ಬಹು ವಿಶೇಷವಾದದ್ದು. ಏಕೆಂದರೆ ಅವರು ಗುಡಾರ, ಗೋಣಿಚೀಲ, ಪ್ಲಾಸ್ಟಿಕ್ ಚೀಲ, ತಗಡಿನ ಟಿಣ್‌ಗಳನ್ನು ಹಾಕಿಕೊಂಡು ಗುಡಿಸಲು ಮನೆಯನ್ನು ನಿರ್ಮಿಸಿಕೊಳ್ಳುತ್ತಾರೆ. ಇವರು ೮X೧೨ ಮಾದರಿಯ ಗುಡಾರ ಅಥವಾ ಗುಡಿಸಲು ನಿರ್ಮಿಸಿಕೊಂಡಿರುತ್ತಾರೆ. ಇದಕ್ಕೆ ಕಾಂಪೌಂಡ್ ಇರುವುದಿಲ್ಲ, ಮೂರು ಕಡೆ ದಪ್ಪವಾದ ಬಟ್ಟೆ, ಪ್ಲಾಸ್ಟಿಕ್ನಿಂದ ಗೋಡೆ ಕಟ್ಟಿ ಮುಂದಿನ ಭಾಗ ತೆರೆದಿರುತ್ತದೆ. ಬಾಗಿಲಿಗೆ ಬಟ್ಟೆಯನ್ನು ಪರದೆಯನ್ನಾಗಿಸಿಕೊಂಡಿದ್ದಾರೆ. ನೀರನ್ನು ಸಾರ್ವಜನಿಕ ಕೊಳವೆ, ನಲ್ಲಿಗಳಲ್ಲಿ ತುಂಬುತ್ತಾರೆ. ನದಿ, ಬಾವಿ. ಹಳ್ಳಗಳಲ್ಲಿ ಕೆಲವೊಮ್ಮೆ ಚರಂಡಿಗಳಿಂದಲೂ ನೀರನ್ನು ತೆಗೆದುಕೊಂಡು ಉಪಯೋಗಿಸುತ್ತಾರೆ.

ಸಿಕ್ಲಿಗರರ ಗುಡಾರ ಗುಡಿಸಲುಗಳು ಚೌಕಕಾರದಲ್ಲಿರುತ್ತದೆ. ಮತ್ತು ಪ್ರತಿಯೊಂದು ಗುಡಾರದ ಮುಂದೆ ಸ್ವಲ್ಪ ಖಾಲಿ ಜಾಗವನ್ನು ಬಿಟ್ಟಿರುತ್ತಾರೆ. ಈ ಖಾಲಿ ಜಾಗದಲ್ಲಿಯೇ ಕುಳಿತು ತಾವು ಮಾರುವ ವಸ್ತುಗಳನ್ನು ತಯಾರಿಸುವುದು ಮಾಡುತ್ತಾರೆ. ಸಿಕ್ಲಿಗರ ಬುಡಕಟ್ಟು ಬಹುತೇಕ

ಗುಡಾರಗಳಲ್ಲಿ ವಾಸಿಸುತ್ತಾರೆ. ನೆಲಮನೆಗಳು ಆಗಿರುವುದಿಲ್ಲ. ಕೇವಲ ಒಂದು ಕೋಣೆ ೧೫ x ೨೦ ಮಾದರಿಯಲ್ಲಿರುತ್ತವೆ.

ಸಿಕ್ಲಿಗರು ಗ್ರಾಮೀಣ ಪ್ರದೇಶಗಳಿಗೆ ಬೇಸಿಗೆಯ ಸಂದರ್ಭದಲ್ಲಿ ಹೋಗುತ್ತಾರೆ. ಅಲ್ಲಿಗೆ ಹೋಗಿ ಕೃಷಿ ಉಪಕರಣಗಳಿಗೆ ಸಂಬಂಧಿಸಿದಂತೆ ಎಲ್ಲಾ ಬಗೆಯ ಉಪಕರಣಗಳನ್ನು ತಯಾರಿಸುತ್ತಾರೆ. ಚಕ್ಕಡಿಯ ಗಾಲಿ, ಕುಂಟಿಯಕುಡ, ಖುರಿಗೆಯ ಹಲ್ಲು, ಜೋಳ ಕೊಯ್ಯುವ ಕುಡಗೋಲು, ಕುಯಿತಾದಂತಹ ಹಲವು ಬಗೆಯ ಕಬ್ಬಿಣದ ಕೆಲಸವನ್ನು ನಿರಂತರವಾಗಿ ಶ್ರಮವಹಿಸಿ ಮಾಡುತ್ತಾರೆ. ಪ್ರತಿನಿತ್ಯ ಗೃಹಬಳಕೆಗೆ ಬೇಕಾಗುವ ಹಲವು ಈಳಿಗೆ, ಬತಾಯಿ, ಕಬ್ಬಿಣದ ಬುಟ್ಟಿ ತಯಾರಿಸಿಕೊಂಡು ಊರೂರು ಸುತ್ತಿ ಅಲೆಮಾರಿ ವೃತ್ತಿಯನ್ನು ಕೈಗೊಂಡಿದ್ದಾರೆ. ಇವರಿಗೆ ನೆಲೆ ನಿಲ್ಲದೇ ಸ್ಥಿತಿ ಇರಲಾರದ್ದರಿಂದ ಸಿಕ್ಲಿಗರರ ಸ್ಥಿತಿ ಸಮಾಧಾನಕರವಾಗಿಲ್ಲ. ಗೃಹ ಬಳಕೆಯ ಸಾಮಾನುಗಳನ್ನು ತಯಾರಿಸಿ ಜಿಲ್ಲೆಯ ಸುತ್ತಮುತ್ತಲೂ ಇರುವ ಸಂತೆಗಳಿಗೆ ಹೋಗಿ ಮಾರಾಟ ಮಾಡುವರು. ಗ್ರಾಮೀಣ ಪ್ರದೇಶದ ದೊಡ್ಡ ದೊಡ್ಡ ಜಾತ್ರೆಗಳು ತಿಂಗಳುಗಟ್ಟಲೇ ವಾಸ್ತವ್ಯ ಹೂಡಿ, ರೈತಾಪಿ ಜನರಿಗೆ ಅನುಕೂಲವಾಗುವ ಸಾಮಾನುಗಳನ್ನು ಅಲ್ಲಿಯೇ ತಯ್ಯಾರಿಸಿ ಮಾರಾಟ ಮಾಡುತ್ತಾರೆ. ಅಂತರದರಲ್ಲಿ ಗುರುತಿಸುವ ಜಾತ್ರೆಗಳೆಂದರೆ ತಿಂಥಣಿ ಮೌನೇಶ್ವರ, ಹುಮನಾಬಾದದ ವೀರಭದ್ರೇಶ್ವರ, ಸೇಡಂ ದಲ್ಲಿಯ ಬಲಭೀಮಸೇನ, ಗುಲ್ಬರ್ಗಾದ ಖ್ವಾಜಿಬಂದೇನವಾಜ, ಶರಣಬಸವೇಶ್ವರ, ಇನ್ನೂ ಮುಂತಾದ ಜಾತ್ರೆಗಲ್ಲಿ ಸಿಕ್ಲಿಗರು ತಮ್ಮ ಅಂಗಡಿಯೊಂದನ್ನು ಇಟ್ಟುಕೊಂಡಿರುತ್ತಾರೆ.

ಕಬ್ಬಿಣದ ಅಂಗಡಿಗಳಿಗೆ ಸಗಟು ಖರೀದಿಗಾಗಿ ಶ್ರಮಪಟ್ಟು ತಯಾರಿಸಿದ ಸಿಕ್ಲಿಗರರಿಗೆ ಕೂಲಿಕೊಟ್ಟರೆ ಅಂಗಡಿಯಲ್ಲಿ ಕುಳಿತು ವ್ಯಾಪಾರ ಮಾಡುವರು. ಆ ಮೂಲಬೆಲೆಯ ಎರಡರಷ್ಟು ಲಾಭ ಪಡೆಯುತ್ತಾನೆ. ಸಿಕ್ಲಿಗರರಿಗೆ ಈ ಸೌಲಭ್ಯ ದೊರೆಯದು ಸೀಜನ್ನ್‌ನ ಪ್ರಕಾರ ಬೇಸಿಗೆಯ ಸಂದರ್ಭದಲ್ಲಿ ದ್ರಾಕ್ಷಿ ಹಣ್ಣುಗಳ ಗೊಂಚಲನ್ನು ಕತ್ತರಿಸಲು ಬರುವ ಕತ್ತರಿಯನ್ನು ತಯಾರಿಸುವ ಕಲೆ ಮೆಚ್ಚುವಂತದ್ದು, ಸಿಕ್ಲಿಗರರ ಒಂದು ಕತ್ತರಿಗೆ ಐದು ರೂಪಾಯಿ ದೊರಕಿದರೆ ಅಂಗಡಿಯವನು ಕೊಂಡುಕೊಂಡು ಹದಿನೈದರಿಂದ ಇಪ್ಪತ್ತು ರೂಪಾಯಿಗಳಿಗೆ ಮಾರಾಟ ಮಾಡುತ್ತಾನೆಂದು ಕ್ಷೇತ್ರಕಾರ್ಯದ ಮೂಲಕ ತಿಳಿದು ಬರುತ್ತದೆ. ಇಂತಹ ವೃತ್ತಿಯಲ್ಲಿ ಪ್ರಮಾಣಿಕತೆ ಮೆರೆಯುವ ಸೌಜನ್ಯದ ಸಂಕೇತವಾಗಿದ್ದರೆ ಸಿಕ್ಲಿಗರರು ಇವನ್ನೆಲ್ಲಾ ತಮ್ಮ ವಸತಿ ಮುಂದೆಯೇ ತುಂಬಿಸಿಕೊಳ್ಳುವ ರೀತಿ ವಿವಿಧ ಬಗೆಯದು.

ಈ ಬುಡಕಟ್ಟು ಜನಾಂಗದ ಜೀವನ ಸಂಚಾರಿ ಜೀವನವಾಗಿದೆ. ತಮ್ಮ ವಸತಿಗಾಗಿ ತಾತ್ಕಾಲಿಕವಾದ ಅನೇಕ ಕಡೆ ಟೆಂಟುಗಳನ್ನು ಹಾಕಿಕೊಳ್ಳುವ ಕಾರ್ಯ ಬಹುಮುಖ್ಯವಾಗಿ ನಿಂತಿದೆ. ಈ ಎಲ್ಲಾ ಅಂಶಗಳನ್ನು ಅನುಸರಿಸಿಕೊಂಡು ಬಂದ ಮಹತ್ವದ ದಾಖಲೆಯನ್ನು ಗಮನಿಸಬೇಕಾಗಿವೆ. ಇವರು ಟೆಂಟುಗಳನ್ನು ಹಾಕಿಕೊಳ್ಳುವಾಗ ಒಂದೇ ಸಾಲಿನಲ್ಲಿ ಅನುಸರಿಸಿಕೊಂಡು ಬಂದಿದ್ದಾರೆ. ಎದುರು-ಬದುರು ಟೆಂಟುಗಳನ್ನು ಹಾಕಿಕೊಳ್ಳುತ್ತಾರೆ. ಊರ ಹೊರಗೆ ಯಾರ ಸಂಪರ್ಕವಿಲ್ಲದ ಕಡೆ ಬಿಡಾರ ಹೂಡಿರುತ್ತಾರೆ.ಎಲ್ಲಾ ಕಡೆಗೂ ಸೌಜನ್ಯದಿಂದ ವರ್ತಿಸಬೇಕಾಗಿದೆ. ಮಲಗುವಾಗಲೂ ಪ್ರತಿನಿತ್ಯ ತಮ್ಮ ತಮ್ಮವರಿಗೆ ತಲೆಯ ಕಡೆ ಕಾಲು ಮಾಡಿ ಮಲಗುವುದಿಲ್ಲ. ಅವರ ಹಿರಿಯರಿಗೆ ಗೌರವ ಕೊಡುತ್ತಾರೆ. ಎರಡು ಮೂರು ಮನೆಯ ಕುಟುಂಬಗಳು ಸೇರಿಕೊಂಡು ಅನ್ಯೋನ್ಯವಾಗಿರುತ್ತಾರೆ.

ಸಿಕ್ಲಿಗರ ವೇಷಭೂಷಣಗಳು

ಬುಡಕಟ್ಟು ಜನಾಂಗಗಳ ಉಡುಗೆ-ತೊಡುಗೆಗಳಲ್ಲಿ ಬಹಳ ಭಿನ್ನತೆಗಳನ್ನು ಕಾಣುತ್ತೇವೆ. ಅವರ ಹಾಗೆ ಸಿಕ್ಲಿಗರರ ವೇಷ-ಭೂಷಣಗಳು ಬದಲಾದಂತೆ ಕಾಣಿಸುತ್ತವೆ. ಸಿಖ್ಖರ ಹಾಗೇ ಇವರ ವೇಷ ಭೂಷಣಗಳು ಕಂಡು ಬರುತ್ತವೆ. ಆದರೆ ಬಹು ಭಿನ್ನವಾದ ಉಡುಗೆ- ತೊಡುಗೆಗಳು ಕಾಣ ಸಿಗುತ್ತವೆ. ಒಂದೇ ಕಡೆಗೆ ಒಂದೇ ಮಾದರಿಗಾಗಿ ವೇಷವೂ ಕಂಡು ಬರುವುದಿಲ್ಲ. ಕಿತ್ತು ತಿನ್ನುವ ಬಡತನದಿಂದಾಗಿ ಅವರಿಗೆ ನೆಲೆನಿಲ್ಲಲು ವೇಷಭೂಷಣಗಳು ಬಾಲ್ಯದಿಂದಲೂ ಹಿರಿಯತನಕವೂ ಒಂದೇಯಾಗಿ ಕಂಡುಬರುತ್ತದೆ. ವಯಸ್ಸು, ಲಿಂಗ ಬೇಧ ವಿಲ್ಲದೇ ಸಂದರ್ಭಾನುಸಾರವಾಗಿಯೂ ಸಿಕ್ಲಿಗರರ ವೇಷಭೂಷಣಗಳು ಬದಲಾಗುತ್ತಾ ಹೋಗುತ್ತವೆ. ಇವರು ಕೆಲಸಗಳನ್ನು ಮಾಡುವಾಗ ಉಡಿಗೆ-ತೊಡಿಗೆ ಸಿಖ್ಖರ ಗುರುನಾನಕರನ್ನು ಪ್ರಾರ್ಥಿಸಿದಂತೆ ಇವರು ಗುರುನಾನಕರನ್ನೇ ಪ್ರಾರ್ಥಿಸುತ್ತಾರೆ. ಇವರಲ್ಲಿ ಗಂಡಸರು ಪೈಜಾಮ, ಪಂಜಾಬಿ ಡ್ರೆಸ್‌ಗಳನ್ನು ಹಾಕಿಕೊಂಡಿರುತ್ತಾರೆ. ಕಚ್ಚೆ ಧರಿಸಿಕೊಂಡಿರುತ್ತಾರೆ. ಅವರು ಕೆಲಸಕಾರ್ಯಗಳನ್ನು ಮಾಡುವಾಗ ಬನಿಯನ್ ಮೇಲೆ ಕುಳಿತುಕೊಂಡು ಕೆಲಸ ನಿರ್ವಹಿಸುತ್ತಾರೆ. ಸಿಕ್ಲಿಗರ ಜನಾಂಗವೂ ಬಹು ಆಕರ್ಷಕವಾಗಿದ್ದರೂ ಅವರು ತಲೆ ಮೇಲೆ ಕೂದಲು ಕಟ್ಟಿಕೊಂಡು ಕೂತಿರುತ್ತಾರೆ. ಬಟ್ಟೆಯಿಂದ ಆ ಕೂದಲನ್ನು ತುರುಬು ಮಾಡಿಕೊಂಡು ವೇಷ ಹಾಕಿಕೊಂಡಿರುತ್ತಾರೆ. ಕೆಲವರು ತಲೆಕೂದಲು ಹಾಕಿಕೊಂಡು ತುರುಬು ಕಟ್ಟಿದ ಹಾಗೇ ಕಟ್ಟಿರುತ್ತಾರೆ. ಅಲ್ಲಿಯೇ ಸಣ್ಣದಾದ ಬಾಚಣಿಕೆ ಇಟ್ಟಿರುತ್ತಾರೆ. ಬಟ್ಟೆ ಇಲ್ಲದೇ ಹಾಗೇ ತಯಾರಿಸಿಕೊಂಡು ನಡೆಯುತ್ತಾರೆ. ಪ್ರಯತ್ನವಾದಿಗಳು ಹಾಗೂ ಶ್ರಮ ಜೀವಿಗಳಾಗಿರುವುದರಿಂದ

ಎಂದಿಗೂ. ತನ್ನ ಅಂತಸತ್ವವನ್ನು ಬಿಟ್ಟು ಕೊಡುವುದಿಲ್ಲ. ಪ್ರತಿಬಾರಿಯೂ ನಾನಾ ಮುಖಗಳಿಂದ ಸಿಕ್ಲಿಗರರು ತಮ್ಮ ವೇಷಭೂಷಣಗಳನ್ನು ಬದಲಾಯಿಸುವುದಿಲ್ಲ.

ತಾವು ಹುಟ್ಟಿದಾಗ ಹೇಗೆ ಇರುತ್ತಾರೋ ಹಾಗೇ ಕೊನೆಯತನಕ ಇರುವವರೆಗೂ ಹಾಗೇ ಇರುತ್ತಾರೆ. ಕೂದಲನ್ನು ಕತ್ತರಿಸುವುದಾಗಲಿ ಬೋಳಿಸಿಕೊಳ್ಳುವುದಾಗಲಿ, ಮಾಡುವುದೇ ಇಲ್ಲ. ಹಾಗೇ ಕೂದಲುಗಳನ್ನು ಉಳಿಸಿಕೊಂಡು ಬಂದ ಪ್ರಯತ್ನಶೀಲವಾದಿಗಳು ಆದರ್ಶ ವಾದಿಗಳಾಗಿದ್ದಾರೆ. ಬೇರೆ ಬೇರೆ ಊರುಗಳಿಗೆ ಹೋಗುವಾಗ ಸರಿಯಾಗಿ ಬಟ್ಟೆಗಳನ್ನು ಧರಿಸಿಕೊಂಡು ಹೋಗುವರು. ಪ್ರತಿಯೊಂದು ಹಂತದಲ್ಲೂ ತನ್ನತನವನ್ನು ಮೀರಿ ಬೆಳೆದ ಜನಾಂಗ ವಾಗಿದೆ. ಕಾಡಿನಲ್ಲಿರುವ ಬುಡಕಟ್ಟು ಜನರ ಹಾಗೇ ವೇಷಭೂಷಣಗಳು ದೊರೆಯಲಾರವು.

ಗಂಡಸರ ವೇಷಭೂಷಣ ಪಂಜಾಬಿ ಡ್ರೆಸ್‌ಗಳಾಗಿವೆ. ತಪ್ಪಿಯೂ ಕೂಡ ಕರ್ನಾಟಕದವರಂತೆ ಪಂಚೆ, ಶರ್ಟ್ ಧರಿಸುವುದಿಲ್ಲ. ನಗರ ಪ್ರದೇಶದಲ್ಲಿ ವಾಸವಾಗಿರುವ ಸಿಕ್ಲಿಗರ ಮುಖಂಡರುಗಳು ಮಾತ್ರ ಪಂಜಾಬಿ ತರಹ ಪೈಜಾಮ ಮತ್ತು ಜುಬ್ಬಾ ಧರಿಸುತ್ತಾರೆ. ಉಳಿದವರು ತಮ್ಮ ಬಡತನದಿಂದ ಬೇರೆಯವರು ಕೊಟ್ಟ ಬಟ್ಟೆಯನ್ನೋ ಅಥವಾ ಮಾರ್ಕೇಟನಲ್ಲಿ ಮಾರಾಟ ಮಾಡುವ ಹಳೆಯ ಬಟ್ಟೆಗಳನ್ನು ಧರಿಸಿಕೊಂಡಿರುತ್ತಾರೆ. ಅಪ್ಪಟ ಸಿಖ್ಖ್ ಅನುಯಾಯಿಗಳಂತೆ ಕಾಣುವವರು. ಆ ಸಮಾಜದಲ್ಲಿ ಗುರುತಿಸಿಕೊಳ್ಳುವಂತವರು. ಉಳಿದವರು ಸಾಮಾನ್ಯ ಜನರಂತೆ ಪ್ಯಾಂಟು, ಶರ್ಟ್ ಧರಿಸಿಕೊಂಡಿರುತ್ತಾರೆ. ತಲೆಯ ಮೇಲಿನ ಕೂದಲಿಗಾಗಿ ಒಂದು (ಸಿಖ್ಖ್ ಶೈಲಿಯ) ಪೇಟ ಕಟ್ಟಿಕೊಂಡಿರುತ್ತಾರೆ. ಇವರು ಗಡ್ಡ ಧರಿಸಿದ್ದರಿಂದ ತಲೆಯ ಮೇಲೆ ಕೂದಲು ಬಿಟ್ಟುಕೊಂಡಿರುವುದರಿಂದ ಇವರು ನೋಡಲು ಸಿಖ್ಖ್‌ರೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಇವರು ವೇಷಭೂಷಣದಿಂದ ಸಿಖ್ಖ್‌ರಾಗಿ ಬಡತನದಿಂದ ಸಿಕ್ಲಿಗರರಾಗಿ ಕಾಣುತ್ತಾರೆ.

ಹೆಂಗಸರ ವೇಷಭೂಷಣಗಳು

ಸಿಕ್ಲಿಗರ ಸಮುದಾಯದಲ್ಲಿ ಹೆಂಗಸರಿಗೂ ಕೂಡ ಒಂದು ರೀತಿಯ ವೇಷಭೂಷಣಗಳಿವೆ. ಇವರು ಕರ್ನಾಟಕದ ನಾರಿಯರಂತೆ ಸೀರೆ ಉಟ್ಟುಕೊಳ್ಳುವುದಿಲ್ಲ. ಇವರ ಉಡುಗೆಯೇ ಒಂದು ವಿಶೇಷ. ಹೆಂಗಸರು ಕೂಡ ಪೈಜಾಮ ಮತ್ತು ಉದ್ದನೆಯ ನಿಲುವಂಗಿಯನ್ನು ಧರಿಸುತ್ತಾರೆ. ಇವರು ಯಾವುದೇ ರೀತಿಯ ಹೇಳಿಕೊಳ್ಳುವಂತಹ ಬೆಲೆಬಾಳುವ ಬಂಗಾರದ ಆಭರಣಗಳನ್ನು

ಧರಿಸುವುದಿಲ್ಲ. ಜೋಗೇರರಲ್ಲಿಯ ಮಾರಾಟ ಮಾಡುವ Rold Gold ಮಣಿಗಳನ್ನೇ ತಮ್ಮ ಅಲಂಕಾರಗಳಿಗಾಗಿ ಬಳಸಿಕೊಳ್ಳುತ್ತಾರೆ.

ಕಾಡು ಮತ್ತು ಅರಣ್ಯ ಪ್ರದೇಶದಲ್ಲಿರುವ ಬುಡಕಟ್ಟು ಜನರು ತಮ್ಮ ಅಲಂಕಾರವನ್ನು ಅಲ್ಲಿರುವ ವಸ್ತುಗಳಿಂದ ಮಾಡಿಕೊಳ್ಳುವಂತೆ ಇವರು ಕಬ್ಬಿಣದ ಕೆಲಸ ಮಾಡುವುದರಿಂದ ಕಬ್ಬಿಣದ ವಸ್ತುವನ್ನು ಅಲಂಕಾರಕ್ಕಾಗಿ ಹಾಕಿಕೊಳ್ಳಲು ಬರುವುದಿಲ್ಲವೆಂದೇ ಹೇಳುತ್ತಾರೆ. ಆದರೆ ಬೇರೆ ಬುಡಕಟ್ಟು ಸಮುದಾಯಗಳಂತೆ ಹೆಂಗಸರು ಜೊತೆಗೂಡಿಯೇ ಸಿಕ್ಲಿಗರಲ್ಲಿ ಕೆಲಸ ಮಾಡುವುದಿಲ್ಲ. ಅವರೇನಿದ್ದರೂ ಮನೆಯ ಕೆಲಸಕ್ಕಷ್ಟೇ ಸೀಮಿತವಾಗಿರಬೇಕು. ಜನರ ಗಮನವನ್ನು ಸೆಳೆದು ಬಿಡುತ್ತವೆ. ಎಲ್ಲಾ ಹೆಂಗಸರಂತೆ ಸಿಕ್ಲಿಗರ ಹೆಂಗಸರು ಸಹಿತ ಬಟ್ಟೆಯನ್ನು ಧರಿಸಿಕೊಂಡಿರುತ್ತಾರೆ. ಹೆಚ್ಚಾಗಿ ಗಂಡಸರು ತಮ್ಮ ವೃತ್ತಿ ದುಡಿಮೆಗಾಗಿ ತಮ್ಮನ್ನು ತಾವು ತೊಡಗಿಸಿಕೊಂಡು ಮನೆಯಲ್ಲಿ ಯಾರೂ ಇರುವುದಿಲ್ಲ. ಸಿಕ್ಲಿಗರ ಬೇರೆ ಬೇರೆ ಜನಾಂಗದವರು. ಕ್ಷೌರಿಕರು, ಎಮ್ಮೆ ಬೋಳಿಸುವವರು, ಭಂಗಿಗಳು ಮುಂತಾದವರು ಇಂತಹವರೆಲ್ಲರು ಸಿಕ್ಲಿಗರ ಎಂದು ಪ್ರಶ್ನಿಸಲಾಗಿ ಇಂತಹ ಯಾವ ಕೆಲಸವನ್ನು ಅವರು ಕೈಗೊಳ್ಳುವುದಿಲ್ಲವೆಂದು ಸಂದರ್ಶನಕ್ಕೆ ಹೋದಾಗ ತಿಳಿಸಿದ್ದಾರೆ. ಅವರು ತಮ್ಮದೆಯಾದ ಕಟ್ಟುನಿಟ್ಟಿನ ಕ್ರಮವನ್ನು ಅನುಸರಿಸಿಕೊಂಡು ಹೋಗುವರು. ಮಾತ್ರ ಸಿಕ್ಲಿಗರೆಂದು ತಿಳಿಯಬೇಕಾಗುತ್ತದೆ. 'ಸಿಖ್ಬ್' ಎಲ್ಲಿಯೇ ಇರಲಿ ಅವರಿಗೆ ಐದ್ 'ಕ' ಗಳಿರಬೇಕು. ಎಂಬ ನಿಯಮವಿದೆ. ಅಂತಹವರನ್ನು ಸಿಖ್ಬ್ ಎಂದು ಕರೆಯುತ್ತಾರೆ.

ಹೆಂಗಸರಾಗಲಿ, ಗಂಡಸರಾಗಲಿ ಯಾರೇ ಆಗಲಿ ತಾಯಿಯ ಗರ್ಭದಿಂದ ಹುಟ್ಟಿದಂತಿರಬೇಕು. ಕಚ್ಚೆಯೂ ಕೂಡಾ ಹೆಂಗಸರಿಗೆ ಕಡ್ಡಾಯವಾಗಿ ಹಾಕುವರು ಎಂದು ಕ್ಷೇತ್ರಕಾರ್ಯದ ಮೂಲಕ ತಿಳಿಯಲಾಗಿದೆ. ಈ ಎಲ್ಲಾ ಅಂಶಗಳಿಂದ ಸಿಕ್ಲಿಗರ ಎಂದು ತಿಳಿಯುವುದು ಸಹಜವಾಗಿದೆ. ಉಳಿದ ಸಮಯದಲ್ಲಿ ಕೂಡಾ ಸರಳವಾದ ಸಾಮಾನ್ಯವಾದ ಬಟ್ಟೆ ಧರಿಸಿಕೊಳ್ಳುತ್ತಾರೆ. ಸಿಕ್ಲಿಗರರ ವಿಶೇಷ ಸಂದರ್ಭಗಳಾದ ಹಬ್ಬ ಹರಿದಿನ ಹುಣ್ಣಿಮೆ ಅಮವಾಸ್ಯೆಗಳ ದಿನಗಳಲ್ಲಿ ತಲೆಯನ್ನು ತೊಳೆದುಕೊಳ್ಳುತ್ತಾರೆ. ಸಿಖ್ಬರ ಹಬ್ಬ ಗುರುನಾನಕ್ ಜಯಂತಿಯಂದು ಎಲ್ಲರೂ ವಿಶೇಷ ವೇಷ-ಭೂಷಣದೊಂದಿಗೆ ತಲೆಯನ್ನು ತೊಳೆದುಕೊಳ್ಳುತ್ತಾರೆ. ಕೈಯಲ್ಲಿ ಬೆಳ್ಳಿ ಕಡಗವನ್ನು ತಾಮ್ರದ ಖಡಗವನ್ನು ಕೈಯಲ್ಲಿ ಹಾಕಿಕೊಳ್ಳುತ್ತಾರೆ. ಹೆಣ್ಣು ಮಕ್ಕಳು ಕಿವಿಯಲ್ಲಿ ಬುಗುಡಿ, ಓಲೆ ನತ್ತು ಮುಂತಾದವುಗಳನ್ನು ಧರಿಸುತ್ತಾರೆ. ಅಲೆಮಾರಿ ಜನಾಂಗವಾದ ಈ ಸಿಕ್ಲಿಗರ ತಾವೆಂದು ಕೈಕಟ್ಟಿ ಕೂಡುವುದಿಲ್ಲ.

ರಂಗು ರಂಗಿನ ವೇಷ-ಭೂಷಣಗಳನ್ನು ಧರಿಸುವ ಪದ್ಧತಿ ಮೊದಲಿನ ಕಾಲದಿಂದಲೂ ಇದೆ. ಇಂದು ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗದ ನಿಮಿತ್ಯ ಈ ಎಲ್ಲಾ ವೇಷ-ಭೂಷಣಗಳು ಇಂದು ದೂರವಾಗಿವೆ. ಹಳೆಯ ಸೀರೆಗಳನ್ನು ಹೆಂಗಸರು ತೆಗೆದುಕೊಂಡು ತಮಗೆ ಬೇಕಾದ ಹಾಗೇ ಚೂಡಿದಾರವನ್ನು ತಯಾರಿಸಿಕೊಂಡು ಹಾಕಿಕೊಳ್ಳುತ್ತಾರೆ. ಇಲ್ಲವೇ ನಾಲ್ಕು ತುಂಡುಗಳನ್ನಾಗಿಸಿಕೊಂಡು ಲಂಗವನ್ನು ಮಾಡಿಕೊಂಡು ತೊಡುತ್ತಾರೆ. ಎದೆಗೆ ಜಾಕೆಟಗಳನ್ನು (ಕಾಂತಲಿ)ಅವರು ತಮ್ಮ ಲಂಗ ಜಾಕೇಟುಗಳನ್ನು ತಾವೇ ಹೊಲಿದುಕೊಂಡು ಜೀವಿಸುತ್ತಾರೆ. ಮದುವೆ ಹಬ್ಬ-ಹರಿದಿನಗಳ ಸಂದರ್ಭಗಳಲ್ಲಿ ಇರುವ ಹೊಸ ಬಟ್ಟೆಗಳನ್ನು ಧರಿಸಿಕೊಂಡು ಸೊಗಸುಗಾರಿಕೆ ಮೆರೆಯುತ್ತಾರೆ. ಹೆಂಗಸರು ಸೆರಗನ್ನು ಹಿಡಿದುಕೊಂಡು ತಲೆಯ ಮೇಲೆ ಬಟ್ಟೆ ಹಾಕಿಕೊಂಡು ಬರುತ್ತಾರೆ. ಇಲ್ಲಿಯ ಸಮುದಾಯ ಯಾರೂ ಶಾಲೆಗೆ ಕಳುಹಿಸುವುದಿಲ್ಲ. ಇದುವರೆಗೂ ಯಾರೊಬ್ಬರೂ ಉನ್ನತ ವ್ಯಾಸಾಂಗ ಹೋಗಲಿ ಕನಿಷ್ಠ ಪಕ್ಷ ಎಸ್.ಎಸ್.ಎಲ್.ಸಿ.ಯನ್ನಾದರೂ ಓದಿದವರು ನಮಗೆ ಕಾಣಿಸುತ್ತಿಲ್ಲ.

ಕರ್ನಾಟಕದಲ್ಲಿ ಸಿಕ್ಲಿಗರ ೧,೮೭೩ ಸಂಖ್ಯೆ ೫೦೦ ಕ್ಕಿಂತ ಹೆಚ್ಚು ಜನ ದೊರೆಯಲಾರರು. ಅಂತಹ ಸ್ಥಿತಿಯಲ್ಲಿದ್ದಾರೆ. ಸಿಕ್ಲಿಗರರು ತೊಡುವ ಉಡುಪುಗಳು ಸರಳವಾಗಿಯೇ ಅವರು ಮಾಡುವ ಆಭರಣಗಳಲ್ಲಿಯೂ ಸರಳರಾಗಿದ್ದಾರೆ. ಪುರುಷರು ಯಾವಾಗಲೂ ಆಭರಣಗಳನ್ನು ಧರಿಸುವುದಿಲ್ಲ. ಅವರು ಕೈಗಡಗ ಬಿಟ್ಟರೆ ಮತ್ತೇನೂ ಹಾಕಿಕೊಳ್ಳಲಾರರು. ಹೆಂಗಸರು ಮಾತ್ರ ಆಭರಣ ಧರಿಸುವರು. ಅದು ಹೇಳುವುದಷ್ಟು ಅಲ್ಲ. ತಮ್ಮ ಪರಿಸ್ಥಿತಿಗೆ ಅನುಗುಣವಾಗಿ ಒಂದಿಷ್ಟು ಹಾಕಿಕೊಳ್ಳುತ್ತಾರೆ. ಯುವಕರು ತಮ್ಮ ಯೌವ್ವನ ಹಾಗೂ ಬಿಸಿರಕ್ತದ ಗಟ್ಟಿತನ ತೋರಿಸಲು ಪ್ರಯತ್ನಿಸುತ್ತಾರೆ. ಅದಕ್ಕಾಗಿ ಕೊರಳಿಗೆ ಹವಣ, ಸೊಲ್ಲಿಸರ, ಹಚ್ಚೆಯನ್ನು ಹಾಕಿಸುವುದುಂಟು ಇಂತಹ ಕೆಲವೊಂದು ಬದಲಾವಣೆಗಳನ್ನು ಅವರು ಮಾಡಿಕೊಳ್ಳುತ್ತಾರೆ. ಬಹುತೇಕವಾಗಿ ಎಲ್ಲರೂ ತಮ್ಮ ಜೀವನದ ಬಹುಭಾಗವನ್ನು ಅವರು ದುಡಿಮೆಗೆ ಬಳಸಿಕೊಳ್ಳುವಾಗ ವೇಷ-ಭೂಷಣಕ್ಕೆ ಮಹತ್ವವನ್ನು ನೀಡಿಲ್ಲ.

ಮದುವೆಯಾದ ಹೆಂಗಸರು ಆಭರಣಗಳನ್ನು ಧರಿಸುತ್ತಾರೆ. ಕೊರಳಿಗೆ ಕಪ್ಪು ಸರವನ್ನು ಹಾಕಿಕೊಂಡು ಸದಾ ತಾವು ಮದುವೆಯಾದ ಸಂಸಾರವನ್ನು ನಿರ್ವಹಿಸಿಕೊಂಡು ಹೋಗಲು ಪ್ರಯತ್ನಿಸುತ್ತಾರೆ. ಗಂಡು ಹೆಣ್ಣಿಗೆ ಮದುವೆಯ ಹೊತ್ತಿನಲ್ಲಿ ಕಟಿ ಬಂಧನವಾಗಿ ಸಂಸಾರಿಕ ಜೀವನದ ದಾಂಪತ್ಯಕ್ಕೆ ಕಾಲಿಟ್ಟ ಬಗ್ಗೆ ಸಂಕೇತ ತೋರಿಸುತ್ತಾರೆ. ಇದು ತಾಳಿಯನ್ನು ಸಂಕೇತಿಸುತ್ತದೆ.

ಹೆಂಗಸರು ಬಂಗಾರವನ್ನು ಕಂಡೆ ಇಲ್ಲ. ಇದ್ದ ಬುಗಡಿಯೇನಾದರೂ ಇದ್ದರೆ ಸಾಲದ ಹಾಗೂ ಬಡತನದಲ್ಲಿ ಹಣದ ತೊಂದರೆಯಿಂದಾಗಿ ಕಂಡು ಬಂದರೆ ಕೂಡಲೇ ಬಂಗಾರ ಗಿರವಿಗೆ ಇಟ್ಟು ಹಣ ಪಡೆದುಕೊಂಡು ನಿರಾಭರಣ ಸುಂದರಿಯಾಗಿ ಉಳಿಯುತ್ತಾರೆ. ಅವರಿಗೆ ಆಶೆಯೆಂಬುದೇ ಇಲ್ಲ. ಹೆಂಗಸರು ತಮಗೆ ದೊರಕುವ ಆಭರಣಗಳು ಸರಳವಾಗಿದ್ದು ಅದನ್ನು ತಾವೇ ಕಣ್ಣಿಗೆ ಅಂದವಾಗಿ ಕಾಣುವ ಹಾಗೇ ತಯಾರಿಸಿಕೊಂಡು ಬಿಡುತ್ತಾರೆ.

ಹಚ್ಚೆ ಹಾಕಿಸಿಕೊಳ್ಳುವುದು

ಅಂದವಾಗಿ ಕಾಣಲು ಮತ್ತು ತಾವು ಹುಟ್ಟಿದಾಗಿನಿಂದ ಹಿಡಿದು ಸಾಯುವ ಹಂತದವರೆಗೂ ತಾವು ಹೇಗೆ ಬಂದಿದ್ದಾರೆ ಹಾಗೇ ಸಾಯಬೇಕೆಂಬ ನಿಯಮವನ್ನು ಪಾಲಿಸಿಕೊಂಡು ಬಂದದ್ದರಿಂದ ತಮ್ಮೊಂದಿಗೆ ಏನೂ ಬರಲಿಲ್ಲ ಕೊನೆಗೆ ತಮ್ಮೊಂದಿಗೆ ಹಾಕಿಕೊಳ್ಳುವ ಹಚ್ಚೆ ಬರುತ್ತದೆ ಎಂದು ಹಚ್ಚೆಯನ್ನು ಹಾಕಿಸಿಕೊಳ್ಳುತ್ತಾರೆ. ಸಿಕ್ಲಿಗರ ಹೆಣ್ಣು ಗಂಡಸರುಗಳು ಕೂಡಿಯೇ ಈ ಪದ್ಧತಿಯನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ. ದಾಸರೂ ಸಹಿತ ಜೀವನವೆನ್ನುವುದು ಬರಿ ಮೂರು ದಿನಗಳು ಮಾತ್ರ ಕತ್ತಲೆ ಎಂದು ಹೇಳಿದ್ದು ಅಕ್ಷರಶಃ ಸತ್ಯ. ಹಚ್ಚೆ ಯಾವಾಗಲೂ ಹಾಗೇ ತನ್ನೊಂದಿಗೆ ಇರುತ್ತದೆ. ಸತ್ತಾಗಲೂ ಅದನ್ನು ತೆಗೆದು ಹಾಕಲು ಬಾರದು ಹೀಗಾಗಿ ತನ್ನ ಜೊತೆಗೆ ಸೇರಿಸಿಕೊಂಡು ಹೋಗುತ್ತಾರೆ.

ಬುಡಕಟ್ಟು ಸಮುದಾಯಗಳು ತಮಗೆ ಬೇಕಾದ ಹಾಗೇ ಹಣೆಗೆ ಕೈಗಳಿಗೆ ಹಚ್ಚೆ ಹಾಕಿಸಿಕೊಳ್ಳುತ್ತಾರೆ. ಆದರೆ ಸಿಕ್ಲಗರರ ಹೆಂಗಸರು ಮಾತ್ರ ತಮ್ಮ ಹಣೆಗೆ ಹಾಗೂ ಕೈಗಳಿಗೆ ಹಚ್ಚೆ ಹಾಕಿಸಿಕೊಂಡರೆ ಅವರೊಂದಿಗೆ ಕೈಗಳನ್ನು ಅಂದವಾಗಿ ಕಾಣಲು ಮದರಂಗಿ ಮೆಹಂದಿಯನ್ನು ಹಚ್ಚಿಕೊಂಡು ಅತ್ಯಾಕರ್ಷಕವಾದ ಚಿತ್ರಗಳನ್ನು ಅದರಲ್ಲಿ ಬಿಡಿಸಿಕೊಳ್ಳುತ್ತಾರೆ. ಗುರುನಾನಕ್ ಜಯಂತಿ ಹಾಗೂ ಇತರ ಸಮಯದಲ್ಲಿ ಬಹಳ ಸುಂದರವಾದ ಮೆಹಂದಿಯಿಂದ ಬಗೆ ಬಗೆಯ ಚಿತ್ರಗಳನ್ನು ಬಿಡಿಸುತ್ತಾರೆ. ಸಿಕ್ಲಿಗರರ ಅಂಗಾಂಗಳ ಮೇಲೆ ಹಚ್ಚೆ ಹಾಗೂ ಮೆಹಂದಿಯನ್ನು ಬಗೆ ಬಗೆಯಾಗಿ ಹಚ್ಚಿಕೊಳ್ಳುತ್ತಾರೆ ಅತ್ಯಾಕರ್ಷಕ ಚಿತ್ರಗಳು ನೋಡುಗರಿಗೆ ಆಕರ್ಷಣೆಗೊಳಪಡಿಸುತ್ತಾರೆ.

ಒಳಾಡಳಿತ ಪದ್ಧತಿ

ಬುಡಕಟ್ಟಿನ ಸಮುದಾಯಗಳೆಲ್ಲವೂ ಒಳಾಡಳಿತ ಪದ್ಧತಿಯನ್ನು ಅನುಸರಿಸಿಕೊಂಡು ಬಂದಿವೆ. ಹಾಗೇ ಅನುಸರಿಸಿಕೊಂಡು ಮುಂದುವರೆಯುತ್ತಲೇ ಇರುತ್ತವೆ. ಹೆಚ್ಚಾಗಿ ಬುಡಕಟ್ಟು

ಜನಾಂಗದಲ್ಲಿ ಮಾತೃ ಹಾಗೂ ಪಿತೃಪ್ರಧಾನವಾದ ಕುಟುಂಬವನ್ನು ಹೊಂದಿರುತ್ತವೆ. ಅಲ್ಲಲ್ಲಿ ಸಮಾನವಾದ ಅವಕಾಶ ನೀಡಿವೆ. ಕೆಲವು ಮಾತೃಪ್ರಧಾನವಾದರೆ ಕೆಲವು ಪಿತೃಪ್ರಧಾನವಾದ ಕುಟುಂಬಗಳನ್ನು ಹೊಂದಿರುತ್ತವೆ. ಹೀಗಾಗಿ ಸಿಕ್ಲಿಗರರ ಜನಾಂಗವು ಪುರುಷ ಪ್ರಧಾನವಾದ ಕುಟುಂಬಗಳಾಗಿವೆ. ಇಲ್ಲಿ ಪುರುಷನೇ ಪ್ರಧಾನವಾಗಿದ್ದು ಹೆಂಗಸರಿಗೆ ಅಷ್ಟೇನೂ ಮಹತ್ವವನ್ನು ಕೊಡುವುದಿಲ್ಲ. ಸಿಕ್ಲಿಗರರು ತುಂಬಾ ಸ್ವಾಭಿಮಾನವುಳ್ಳವರು ಯಾರ ಹತ್ತಿರವೂ ಭಿಕ್ಷೆ ಬೇಡುವ ಕೆಲಸವನ್ನು ಎಂದೂ ಕೈಗೊಂಡಿಲ್ಲ. ಹೆಂಗಸರನ್ನು ಮಾತ್ರ ಬಹು ಬಿಗಿ ಬಂದೋ ಬಸ್ತಿನಲ್ಲಿಟ್ಟುಕೊಂಡಿದ್ದಾರೆ. ಹೆಂಗಸರು ಯಾವ ಕೆಲಸವನ್ನು ಮಾಡಬಾರದು, ಮಾಡಿದರೆ ತಮ್ಮ ವೃತ್ತಿ ಹಾಗೂ ಗಂಡಸತನಕ್ಕೆ ದಕ್ಕೆ ಬರುವುದೆಂದು ಭಾವಿಸಿಕೊಂಡ ಸ್ವಾಭಿಮಾನಿಗಳು. ಹೆಂಗಸರಿಗೆ ಯಾವುದೇ ಸ್ಥಾನಮಾನ ನೀಡದಿದ್ದರೂ ಕೂಡಾ ಅವರು ನಮ್ಮಂತೆ ಮನುಷ್ಯರೆಂದು ಭಾವಿಸಿ ಪ್ರೀತಿ-ಸೌಜನ್ಯ, ವಾತ್ಸಲ್ಯದಿಂದ ನೋಡಿಕೊಳ್ಳುತ್ತಾರೆ. ಮನೆಗೆಲಸವನ್ನು ಮಾತ್ರ ಹೆಂಗಸರು ಮಾಡಬೇಕು. ಉಳಿದ್ಯಾವ ಕೆಲಸಗಳನ್ನು ಅವರಿಗೆ ಹಚ್ಚುವ ಪ್ರವೃತ್ತಿ ಈ ಜನಾಂಗ ಹಿಂದೆಯೂ ಮಾಡಿಲ್ಲ. ಈಗಲೂ ಮಾಡಿಲ್ಲ. ಮುಂದೆಯೂ ಮಾಡುವುದಿಲ್ಲವೆಂದು ಕ್ಷೇತ್ರಕಾರ್ಯಕ್ಕೆ ನಾನು ಹೋದಾಗ ಅಲ್ಲಿಯ ಗಂಡಸರು ವ್ಯಕ್ತಪಡಿಸಿದ ಅಭಿಪ್ರಾಯವಾಗಿದೆ. ಹೆಂಗಸರೆಂದರೆ ಪಂಚಪ್ರಾಣವಾಗಿದ್ದಾರೆ. ಹೀಗಾಗಿ ಪುರುಷಪ್ರಧಾನ ಸಂಸ್ಕೃತಿ ಸಿಕ್ಲಿಗರ ರಲ್ಲಿ ಎದ್ದು ಕಾಣುತ್ತದೆ.

ತಾನು ದುಡಿದು ತಂದು ಕೊಟ್ಟಿದ್ದರಲ್ಲಿ ಮನೆ ಸಂಸಾರ ತೂಗಬೇಕು. ತಾನು ತನ್ನ ವೃತ್ತಿಯ ಕೆಲಸದಲ್ಲಿ ಸಿಕ್ಲಿಗರರ ಪ್ರಮುಖ ಪಾತ್ರವಹಿಸುತ್ತಾರೆ. ಯಾವುದೇ ರೀತಿಯ ಅಂಶವನ್ನು ಆತ ಬೆಳಕಿಗೆ ತರುವುದಿಲ್ಲ. ಗಂಡಸು ತನ್ನ ಮೇಲೆ ಹೆಚ್ಚಿನ ಜವಾಬ್ದಾರಿ ಹೊತ್ತುಕೊಂಡಿರುತ್ತಾರೆ. ತಾವು ದುಡಿದು ತಂದದ್ದನ್ನೆಲ್ಲಾ ಸರಿಯಾಗಿ ಜೀವನೋಪಾಯಕ್ಕಾಗಿ ಗಂಡ ಹೆಂಡತಿ ಕೂಡಿಯೇ ನಿರ್ವಹಿಸುತ್ತಾರೆ. ಮಕ್ಕಳು ಸೊಸೆಯಂದಿರು ಹಾಗೂ ಕುಟುಂಬವೆನ್ನುವುದಂತೂ ಇಲ್ಲಿ ಇಲ್ಲ. ಏಕೆಂದರೆ ಗಂಡಸು ದೊಡ್ಡವನಾದರೆ ಸಾಕು ಆತನಿಗೆ ಮದುವೆ ಮಾಡಿ ಮಗ ಹಾಗೂ ಸೊಸೆಯನ್ನು ಪ್ರತ್ಯೇಕವಾಗಿ ಇಡಲು ಪ್ರಾರಂಭಿಸುತ್ತಾರೆ. ಹಾಗೇ ಬಡತನವೇ ಕಾರಣ. ಕೇವಲ ಒಂದೋ ಎರಡೋ ಮನೆಗಳು ಒಂದು ಪ್ರದೇಶದಲ್ಲಿ ವಾಸಿಸುವುದರಿಂದ ಆರ್ಥಿಕ ಹೊರೆ ಹೆಚ್ಚಾಗಬಾರದೆಂಬ ಕಾರಣದಿಂದ ಈ ರೀತಿ ಮಾಡುತ್ತಾರೆ. ಮಗನಿಗೆ ಸಂಪೂರ್ಣ ಜವಾಬ್ದಾರಿಯನ್ನು ಕೊಟ್ಟುಬಿಡುತ್ತಾರೆ. ಒಂಟಿ ಕುಟುಂಬದ ವಾಸ ಹಾಗೂ ವಲಸೆಯು ಕೂಡಾ ಇದಕ್ಕೆ ಕಾರಣವಿರಬಹುದೆಂದು ಇದರಿಂದ ಗೊತ್ತಾಗುತ್ತದೆ.

ಚಿಕ್ಕಮಕ್ಕಳ ಪೋಷಣೆಯನ್ನು ಬಹುತೇಕವಾಗಿ ಮನೆಯ ಹಿರಿಯರು ಯಜಮಾನರೆನಿಸಿಕೊಂಡವರು ಹಾಗೂ ಆಯಾ ಹೆಂಗಸರೇ ಅವರನ್ನೆಲ್ಲಾ ಲಾಲನೆ- ಪೋಷಣೆ ಮಾಡಿಕೊಂಡು ಬರುತ್ತಾರೆ. ಹುಟ್ಟಿದ ಮಗುವನ್ನು ೧೨ ರಿಂದ ೧೬ ವರ್ಷಕ್ಕೆ ಬರುವಷ್ಟರಲ್ಲಿ ತಮ್ಮ ನಿಯಂತ್ರಣದಲ್ಲಿಟ್ಟುಕೊಂಡು ಜೋಪಾನವಾಗಿ ನೋಡಿಕೊಳ್ಳುತ್ತಾರೆ. ನಂತರ ಆ ಮಗುವನ್ನು ಕೈ ಬಿಡುತ್ತಾರೆ. ಸ್ವತಂತ್ರವಾಗಿ ತಾನು ವೃತ್ತಿಯನ್ನು ಕೈಗೊಳ್ಳಲು ಅನುಕೂಲ ಮಾಡುತ್ತಾರೆ. ಮದುವೆಯನ್ನು ಮಾಡಿಸಿದರೆ ಅವರ ಸಂಪೂರ್ಣ ಜವಾಬ್ದಾರಿ ಮುಗಿದು ಹೋಗುತ್ತದೆ. ಸ್ವತಂತ್ರವಾಗಿ ವಾಸ ಮಾಡಲು ಹಚ್ಚುವರು. ತನ್ನತಾನೇ ಸ್ವತಂತ್ರ ಆಲೋಚನೆ, ನಿರ್ಧಾರಗಳನ್ನು ತೆಗೆದುಕೊಳ್ಳಲು ಬಿಡುತ್ತಾರೆ. ಗಂಡು ಹೆಣ್ಣಿಗೂ ಕೂಡ ಇದೇ ನಿರ್ಧಾರವನ್ನು ಅವರು ತೆಗೆದುಕೊಳ್ಳುತ್ತಾರೆ. ಹೆಣ್ಣು ದೊಡ್ಡವಳಾದರೆ ಸಾಕು ಆಕೆಯನ್ನು ಮದುವೆ ಮಾಡುವ ಪದ್ಧತಿಯೂ ಜಾರಿಯಲ್ಲಿದೆ. ಸಿಕ್ಲಿಗರರ ಕುಟುಂಬಗಳು ಬಹುತೇಕ ಶಿಥಿಲತೆ ಹೊಂದಿದ್ದರಿಂದ ಸಂಕೀರ್ಣ ವ್ಯವಸ್ಥೆಯನ್ನು ಮಾಡಿಕೊಂಡು ಬದುಕುತ್ತಿರುವುದು ಅವರ ಜೀವನದ ಮೂಲಧ್ಯೇಯವಾಗಿದೆ. ಹೀಗಾಗಿ ಇಲ್ಲಿನ ಬುಡಕಟ್ಟುಗಳಲ್ಲಿ ಸಿಕ್ಲಿಗರರಿರಲಿ, ಪಾರ್ಧಿಯರಿರಲಿ, ಹೆಚ್ಚು ಕಡಿಮೆ ಪ್ರತಿಯೊಂದು ಜೋಡಿಯೂ ತನ್ನದೆ ಆದ ಪ್ರತ್ಯೇಕವಾದ ಜೀವನ ಸಾಗಿಸಲು ಬದುಕಲು ಪ್ರಯತ್ನಿಸುತ್ತಾನೆ. ಆ ಕಡೆಗೆ ಹೆಚ್ಚಿನ ಗಮನವನ್ನು ನೀಡುತ್ತಾರೆ. ಆದರೆ ಅನೇಕ ಕುಟುಂಬಗಳು ಸೇರಿಕೊಂಡು ತಮ್ಮ ಸಂಸಾರ ಮುಂದುವರೆಸಿಕೊಂಡು ಬಂದಿರುವುದು ಮಾತ್ರ ಎಲ್ಲೂ ಕಂಡು ಬರುವುದಿಲ್ಲ. ಅಲೆಮಾರಿ ಜೀವನವನ್ನು ಸಾಗಿಸಿಕೊಂಡು ದುಡಿಮೆಗಾಗಿ ಹೋದಾಗ ಎಲ್ಲಿ ನೆಲೆನಿಂತು ಕೆಲವು ಜೋಡಿಗಳು ವಾಸವಾಗಿರುವರೋ ಅವರಲ್ಲಿ ಮಾತ್ರ ಹಿರಿಯರಾದ ಮುದುಕರನ್ನು ಜೋಪಾನ ಮಾಡಲು ಸಾಧ್ಯವಾಗಿದೆ. ತಮ್ಮ ಹಿರಿಯರು ವಯಸ್ಸಾದವರನ್ನು, ವೃದ್ಯಾಪ್ಯದಲ್ಲಿರುವ ಹಿರಿಯರನ್ನು ಸಂರಕ್ಷಣೆ ಮಾಡಿಕೊಂಡು ಹೋಗುತ್ತಾರೆ. ಆ ರೀತಿ ಮಾಡಿಯೂ ಮಾಡುತ್ತಿದ್ದಾರೆ. ಸಿಕ್ಲಿಗರ ಜನಾಂಗ ಅನೇಕ ಕಟ್ಟುಪಾಡಿನೊಂದಿಗೆ ತಮ್ಮ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ.

ಕೆಲವು ನಿರ್ಬಂಧಗಳು

೧. ಸಿಕ್ಲಿಗರರು ಸಹಿತ ಹಿಂದಿನ ಕಾಲದಲ್ಲಿ ದಲಿತ ವರ್ಗಕ್ಕೆ ಸೇರಿದವರಾಗಿದ್ದರು ಏಕೆಂದರೆ ಬೇರೆ ರಾಜ್ಯದಲ್ಲಿ ಇವರನ್ನು ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರಿಸಿದ್ದಾರೆ. ಅಲ್ಲದೇ ಸಿಖ್ಖರು ಸಿಕ್ಲಿಗರನ್ನು ತಮ್ಮ ಸಮುದಾಯದೊಂದಿಗೆ ಸೇರಿಸಿಕೊಳ್ಳುವುದಿಲ್ಲ. ಅಲ್ಪಸಂಖ್ಯಾತರಾದ ಮುಸ್ಲಿಂರಂತಹ ಮನೆಗಳಲ್ಲಿ ಊಟವನ್ನು ಮಾಡುವುದಿರಲಿ ನೀರನ್ನು ಸಹ ಕುಡಿಯುತ್ತಿರಲಿಲ್ಲ. ಅವರೊಂದಿಗೆ ಇವರ ಸಂಪರ್ಕ ದೂರವಾಗಿತ್ತು. ತಮ್ಮ ವೃತ್ತಿಗನುಗುಣವಾಗಿ ಮಾತ್ರ ಮಾತುಗಳನ್ನಾ –

ಡುತ್ತಿದ್ದರು. ಇಂದು ಹಾಗೇನಿಲ್ಲ. ಎಲ್ಲರೊಂದಿಗೆ ಬೆರೆಯುತ್ತಿದ್ದಾರೆ. ಜೊತೆಗೆ ಇತರ ಜನಾಂಗದವರು ಸಹಿತ ಭಯ ಭೀತಿಯಿಂದ ನೋಡುತ್ತಿದ್ದರು. ಇವರ ಆಕಾರ ಬಣ್ಣ-ವೇಷವನ್ನು ನೋಡಿಕೊಂಡರೆ ಆ ರೀತಿ ಅನಿಸುತ್ತದೆ. ಆದರೆ ಹೃದಯ ಮನಸ್ಸು ಮಾತ್ರ ಅಪ್ಪಟ ಚಿನ್ನದಂತೆಯಿದೆ. ಈ ಕಾರಣದಿಂದಲೂ ಇಲ್ಲಿಯ ಸಮುದಾಯಗಳ ಜೊತೆ ದೂರವುಳಿಯಲು ಸಾಧ್ಯವಾಯಿತು.

೨. ಎರಡು ಮೂರು ಮನೆಗಳ ಕುಟುಂಬದವರು ಮಾತ್ರ ಸೇರಿಕೊಂಡು ಇರುವುದರಿಂದ ಇವರಿಗೆ ಅನೇಕ ನಿರ್ಬಂಧನೆಗಳಿವೆ. ಹೀಗಾಗಿ ಒಂಟಿಗರಾಗಿ ತಾವು ಪೂರ್ಣ ಪ್ರಮಾಣದ ಕೆಲಸ ಮಾಡಿಕೊಂಡು ಬಂದರೆ ಮಾರಿದ ಕಬ್ಬಿಣದ ಸಾಮಾನುಗಳಲ್ಲಿ ಬಂದ ಹಣದಿಂದ ಮನೆಗೆ ತಿನ್ನುವ ಸಾಮಗ್ರಿಗಳನ್ನು ತಂದು ಎಲ್ಲರೂ ಕೂಡಿಯೇ ತಿನ್ನುತ್ತಾರೆ.

೩. ಇವರ ಸಮುದಾಯದಲ್ಲಿ ಶಿಕ್ಷೆಯನ್ನುವಂತದ್ದು ಇದೆ. ಮೊದಲು ಬಡತನ ಹಾಗೂ ಕಿತ್ತು ತಿನ್ನುವ ಈ ಸಮಾಜದಲ್ಲಿ ಅವರು ಯಾರೊಂದಿಗೂ ಸೇರದೇ ತಮ್ಮಷ್ಟಕ್ಕೆ ತಾವು ಶ್ರಮವಹಿಸಿ ದುಡಿದು ತಿನ್ನುವುದರಲ್ಲಿ ಮಗ್ನರಾಗಿರುತ್ತಾರೆ. ಇನ್ನೊಬ್ಬರ ತಂಟೆ ತಕರಾರಿಗೆ ಹೋಗದ್ದರಿಂದ ಅವರ ಕಠಿಣ ಶಿಕ್ಷೆಗಳು ಜಾರಿಗೆ ಆಗುತ್ತಿಲ್ಲ. ಆಗುವುದಿಲ್ಲ. ಕೈ ಸುಡುವುದಾಗಲಿ, ಎಣ್ಣೆಯಲ್ಲಿ ಕೈ ಎದ್ದಿಸುವುದು ರೂಢಿಯಲ್ಲಿವೆ. ಅವುಗಳೆಲ್ಲಾ ಗುರುನಾನಕ್ ಮೇಲೆ ನಂಬಿಕೆಯಿಡುವುದರಿಂದ ಪ್ರಾರ್ಥನೆ ಮಾಡುತ್ತಾರೆ.

೪. ಬೇರೆಯವರು ಜಗಳ ಮಾಡಿದಾಗ ಆರೋಪ ಮಾಡಿದರೆ ಸುಳ್ಳು ಎಂದು ಇದ್ದರೆ ಅದನ್ನು ಪ್ರಬಲವಾಗಿ ವಿರೋಧಿಸುತ್ತಾರೆ. ತಮ್ಮ ಸ್ವಾಭಿಮಾನಕ್ಕೆ ದಕ್ಕೆ ಬರುವ ಕೆಲಸಕಾರ್ಯ ಕೈಗೊಂಡರು ಎಂಬುದು ಕಂಡು ಬಂದರೆ ತಮ್ಮ ಭಕ್ತಿಯನ್ನು ದೇವರ ಮೇಲೆ ಹಾಕಿ ಸಮರ್ಥನೆಗೊಳ್ಳುವರು. ಅಂತಹ ಜನರೊಂದಿಗೆ ಯಾವಾಗಲೂ ದೂರವುಳಿಯಲು ಪ್ರಯತ್ನಿಸುತ್ತಾರೆ.

೫. ಸಿಕ್ಲಿಗರರ ಹೆಂಗಸರು ಮನೆ ಬಿಟ್ಟು ಹೊರಗೆ ಹೋಗುವುದಿಲ್ಲ. ಮನೆಗೆಲಸದಲ್ಲಿ ಮಗ್ನರಾಗರಬೇಕು. ಬೇರೆಲ್ಲೂ ಹೋದರೆ ಕೆಲವೊಂದು ವಿಧಿ-ನಿಯಮಗಳನ್ನು ಹಾಕುತ್ತಾರೆ.ಗಂಡನೊಂದಿಗೆ ಆಕೆ ಯಾವಾಗಲೂ ಇರಬೇಕು. ಗಂಡು ಹೆಣ್ಣು ಕೂಡಾ ಕೂಡಿಯೇ ಇರಬೇಕು. ಎಲ್ಲೂ ರಾತ್ರಿಗಟ್ಟಲೇ ಬಿಟ್ಟು ಇದ್ದರೇ ಅವರಿಗೆ ಅನೈತಿಕ ಸಂಬಂಧಕ್ಕೆ ಅನುಮಾನವನ್ನು ವ್ಯಕ್ತಪಡಿಸುತ್ತಾರೆ. ಕಟ್ಟುನಿಟ್ಟಿ ಕ್ರಮವನ್ನು ಇವರು ಜರುಗಿಸುತ್ತಾರೆ. ಆದರೆ ಇಂದು ಆರ್ಥಿಕ ದುಸ್ಥಿತಿಯಲ್ಲಿದ್ದುದರಿಂದ ಅವರ ಹೊಟ್ಟೆಗೆ ಅನ್ನ, ಉಡಲು ಬಟ್ಟೆ, ಇರಲು ಸೂರು ಸಿಕ್ಕರೆ ಸಾಕು. ಎನ್ನುವ ಪರಿಸ್ಥಿತಿ ಇದ್ದಾಗ ಇಂತಹ ಯಾವುದೇ ಘಟನೆಗಳು ನಡೆಯಲು ಅವಕಾಶಗಳನ್ನು ಮಾಡಿಕೊಟ್ಟಿಲ್ಲವೆಂಬುದು ಸಮಾಧಾನದಿಂದ ಆ ಜನಸಮುದಾಯ ಹೇಳಿಕೊಳ್ಳುವುದರಲ್ಲಿ ಸಂತಸವಿದೆ.

೬. ಹೆಂಗಸರು ಮುಟ್ಟಾಗುತ್ತಾರೆ. ಎಲ್ಲರಲ್ಲಿಯೂ ಇದ್ದ ಪದ್ಧತಿಯಿದೆ. ಆದರೆ ಇವರ ಮೂಲ ರೀತಿ ಬಹು ವಿಚಿತ್ರವಾಗಿದೆ. ಹೆಂಗಸು ಮುಟ್ಟಾದರೆ ಮೂರು ದಿವಸಗಳ ಕಾಲ ಮನೆ ಬಿಟ್ಟು ಹೊರ ಬರುವಂತಿಲ್ಲ. ಯಾವ ಕೆಲಸ ಕಾರ್ಯಗಳನ್ನು ಮಾಡುವಂತಿಲ್ಲ. ನೀರನ್ನು ಸಹ ಮುಟ್ಟುವಂತಿಲ್ಲ. ಇಂತಹ ಬಿಗಿಯಾದ ಕ್ರಮ ಕೈಗೊಂಡಿದ್ದಾರೆ. ತಾಯಿ-ಸಹೋದರಿಯರು ಮೊದಲು ಹೆಂಗಸರೇ ಆಕೆಗೆ ಬೇಕಾದ ವಸ್ತು ನೀಡುತ್ತಾರೆ. ಒಂದು ವೇಳೆ ಆಕೆ ಇರದಿದ್ದರೇ ತಂದೆಯೇ ಕೊಡಬೇಕಾಗುತ್ತದೆ. ಮುಟ್ಟಾದ ಹೆಂಗಸರನ್ನು ದೂರವಿಡುತ್ತಾರೆ. ಆಕೆಯ ಬಟ್ಟೆಗಳು ತಾಕದಂತೆ ಎಲ್ಲರ ಬಟ್ಟೆಗಳನ್ನು ಪ್ರತ್ಯೇಕವಾಗಿಡುತ್ತಾರೆ. ಮಡಿ ಮೈಲಿಗೆಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡುತ್ತಾರೆ. ಪ್ರತಿತಿಂಗಳು ಋತುಸ್ರಾವದಿಂದ ಆಕೆ ಇದೇ ರೀತಿ ನಡೆದುಕೊಳ್ಳಬೇಕು. ಪುರುಷನೇ ಸಂಪೂರ್ಣ ಅವರ ಕೆಲಸಗಳನ್ನು ಪೊರೈಸಬೇಕಾಗುತ್ತದೆ.

೭. ಗಂಡ-ಹೆಂಡತಿಯ ಜಗಳಗಳು ಬಹು ಬಗೆಯಾಗಿ ನಡೆಯುತ್ತವೆ. ಗಂಡ ಹೆಂಡತಿಯ ಮೇಲೆ ಕೈಎತ್ತಬಹುದು. ಆದರೆ ಹೆಂಡತಿಯು ಮಾತ್ರ ಕೈ ಎತ್ತುವ ಹಾಗಿಲ್ಲ. ಹಾಗೇನಾದರೂ ಮಾಡಿದರೆ ಆಕೆಯನ್ನು ಹೊರಹಾಕಲಾಗುತ್ತದೆ. ಈ ಘಟನೆ ಹೆಚ್ಚು ಎಲ್ಲೂ ಕಂಡು ಬಂದಿಲ್ಲ.

೮. ಸಿಕ್ಕಿಗರರ ಗಂಡಸರು ತಮ್ಮ ಜೀವನದಲ್ಲಿ ಯಾವುದೇ ಒಂದೇ ಒಂದು ಸಾರಿ ತನ್ನ ಅಕ್ಕ ತಂಗಿ, ಚಿಕ್ಕಮ್ಮ ದೊಡ್ಡಮ್ಮ, ಅತ್ತೆ ಅತ್ತಿಗೆಯಂತಹ ಸಂಬಂಧದಲ್ಲಿ ಲೈಂಗಿಕ ಕ್ರಿಯೆಗೆ ತೊಡಗಿಕೊಂಡಿದ್ದರೆ ದಂಡನೆಗೆ ಗುರಿಪಡಿಸಲಾಗುತ್ತದೆ. ಹೆಂಗಸಾಗಲಿ ಗಂಡಸಾಗಲಿ ಈ ಕ್ರಿಯೆಗೆ ತೊಡಗಿದ್ದು ಹಲವು ರೀತಿಯ ಶಿಕ್ಷೆ ಇವೆಯೆಂದು ಹೇಳುವರು.

೯. ಹೆಂಡತಿ ಮಗುವನ್ನು ಹೇರುವ ಮೂರು ತಿಂಗಳು ಮೊದಲು ಬಾಣಂತಿಯಾಗಿ ಮುಗಿಯುವ ಮೂರು ತಿಂಗಳ ಆ ಆನಂತರ ಆಕೆಯೊಂದಿಗೆ ಯಾವುದೇ ರೀತಿಯಲ್ಲಿ ಗಂಡನಾದವನು ಸಂಭೋಗಕ್ಕೆ ಅವಕಾಶವನ್ನು ನೀಡುವುದಿಲ್ಲ. ಇದರಿಂದ ಗಟ್ಟಿಯಾದ ರೀತಿಯಲ್ಲಿ ಹೆರಿಗೆ ಹಾಗೂ ಬಾಣಂತಿತನ ಮುಗಿಯುತ್ತದೆಂದು ಬಾವಿಸುತ್ತಾರೆ.

೧೦. ಹೆಂಗಸರು ತಿಂಗಳ ರಕ್ತಸ್ರಾವ (ಮುಟ್ಟಾದಾಗ) ವಾದಾಗ ಮೂರು ದಿವಸಗಳ ಕಾಲ ಗಂಡಸರು ಮುಟ್ಟುವಂತಿಲ್ಲ. ಆಕೆಯೊಂದಿಗೆ ಲೈಂಗಿಕ ಸಂಭೋಗ ಕ್ರಿಯೆಗೆ ತೊಡಗಿಕೊಳ್ಳಲೇಬಾರದು ಎಂಬ ನಿಯಮವನ್ನು ಹಾಕಿಕೊಂಡಿದ್ದಾರೆ. ಇದನ್ನು ತಪ್ಪಿ ನಡೆದರೆ ತಮ್ಮ ಗುರುವಿನ ಚೌಕಟ್ಟನ್ನು ಮುರಿದಂತಾಗುತ್ತದೆ. ಅಂತಹ ಗಂಡಸನನ್ನು ಮತ್ತು ಹೆಂಗಸನ್ನು ಯಾರೂ ನಂಬಿಕೆಗೆ ಉಳಿಸಿಕೊಳ್ಳದೇ ಅನರ್ಹರಾಗಿ ಉಳಿಯುತ್ತಾರೆ.

೧೧. ಬೇರೆಯವರ ಹೆಂಡತಿಯರೊಂದಿಗೆ ಅಪಹರಿಸಿಕೊಂಡು ಹೋದರೆ ಆತನಿಗೆ ಶಿಕ್ಷೆ ವಿಧಿಸುತ್ತಿದ್ದರು. ಆಕೆಯನ್ನು ಕೂಡಾ ಹಾಗೇ ಬಿಡದೇ ಆಕೆಗೂ ಶಿಕ್ಷೆಯನ್ನು ನೀಡಲಾಗುತ್ತಿತ್ತು. ನಂತರ ಅವರಿಗೆಲ್ಲಾ

ಬಹಿಷ್ಕಾರ ಹಾಕಿ ತಮ್ಮ ಕುಲದಲ್ಲಿ ಸೇರಿಸಿಕೊಳ್ಳುತ್ತಿದ್ದರು ಮತ್ತೆ ಹಾಗೇ ಮಾಡಿದರೆ ಹೊರಹಾಕುವ ಪದ್ಧತಿಗಳಿವೆ.

೧೨. ಲಗ್ನಕ್ಕಿಂತ ಮುಂಚೆ ಅನೈತಿಕತೆಯನ್ನು ಹೆಂಗಸು ಹೊಂದಿದ್ದರೆ ಆಕೆಯನ್ನು ಪರೀಕ್ಷಿಸಲಾಗುತ್ತದೆ. ಆಕೆಯನ್ನು ಯಾರೂ ಲಗ್ನವಾಗದ ಹಾಗೇ ನೋಡಿಕೊಳ್ಳುತ್ತಾರೆ. ಅಂತಹ ಗಂಡಸಿಗೂ ಕೂಡಾ ಹೆಣ್ಣನ್ನು ಯಾರೂ ಕೊಡುವುದಿಲ್ಲ. ಒಂದು ವೇಳೆ ಅವರು ನಿಯಮದ ಪ್ರಕಾರ ಅನೈತಿಕತೆ ಹೊಂದಿದ್ದರೆ ಇವರಿಬ್ಬರಿಗೂ ಮದುವೆ ಮಾಡಿಸುತ್ತಾರೆ.

೧೩. ಜಾತಿಯ ಹೆಸರನ್ನು ಹಿಡಿದು ಬೈದರೆ ನೊಂದುಕೊಳ್ಳುತ್ತಾರೆ. ಸಿಕ್ಲಿಗರರು ತಮ್ಮ ವೈವಾಹಿಕ ಸಂಬಂಧಗಳ ಕೊರತೆ ಕಷ್ಟ–ನಷ್ಟ, ನೋವು–ನಲಿವುಗಳನ್ನು, ಸಂತಸವನ್ನು ಹಂಚಿಕೊಳ್ಳಲು ಎಲ್ಲ ಸಿಕ್ಲಿಗರರು ಒಂದೆಡೆ ಸೇರುವ ಪ್ರಯತ್ನ ಮಾಡುತ್ತಾರೆ. ಗುರುನಾನಕ್ ಜಯಂತಿ ದಿವಸ ಗುರುದ್ವಾರದಲ್ಲಿ ಸೇರಿಕೊಂಡು 'ಲಂಗಾರ' ಮಾಡಲು ಆಗಮಿಸುತ್ತಾರೆ. ಆಗ ರಾತ್ರಿ ಇದೇ ತನ್ನ ಸಮುದಾಯದ ಒಳಿತು–ಕೆಡಕುಗಳ ಬಗ್ಗೆ ಸಮಾಲೋಚನೆ ನಡೆಸುತ್ತಾರೆ.

ಈ ಮೇಲೆ ಹೇಳಿದ ಎಲ್ಲಾ ನಿಬಂಧನೆಗಳು ಇಂದಿಗೂ ಚಾಲ್ತಿಯಲ್ಲಿವೆ. ಆದರೆ ಸಿಕ್ಲಿಗರರ ಜನಾಂಗ ಒಂದೇ ಕಡೆ ನೆಲೆಯೂರಿ ನಿಲ್ಲಲಾರದ ಸ್ಥಿತಿಯಿರುವುದರಿಂದ ಊರಿಂದೂರಿಗೆ ಹೋಗಿ ಅಲೆಯುವುದರಿಂದ ವಲಸೆಗಾರರಾದ್ದರಿಂದ ಸಹಜವಾಗಿ ಅವರಿಗೆ ಯಾರೂ ನಿರ್ಬಂಧನೆ ಹಾಕುವುದಕ್ಕೆ ಹೋಗುವುದಿಲ್ಲ. ಜೊತೆಗೆ ಯಾವ ಸಿಕ್ಲಿಗರರು ಇಂದು ಸಾಮೂಹಿಕವಾಗಿ ಬದುಕುತ್ತಿಲ್ಲ. ತಾವಾಯಿತು ತಮ್ಮ ವೃತ್ತಿ ಜೀವನವನ್ನು ನಡೆಸಿಕೊಂಡು ಹೋಗುವುದು ಅವರಿಗೆ ಸಾಕಾಗಿದೆ. ಹಾಗಾಗಿ ಇಂತಹ ಯಾವುದೇ ಕೆಲಸ ಕಾರ್ಯಗಳಿಗೆ ಕೈಹಾಕಲು ಮುಂದೆ ಬರುತ್ತಿಲ್ಲ. ಕೆಲವು ನಿರ್ಬಂಧಗಳು ಚಾಲ್ತಿಯಲ್ಲಿದ್ದರೆ ಕೆಲವಂತೂ ಪೂರ್ಣ ಸಡಿಲಿಕೆ ಹೊಂದಿವೆ. ದಿನದಿಂದ ದಿನಕ್ಕೆ ಇಂದು ಬದಲಾವಣೆಗೊಳ್ಳುವುದರಿಂದ ಸಾಮಾಜಿಕ ವ್ಯವಸ್ಥೆಗೆ ತಕ್ಕಂತೆ ಸಮಾಜ ಹಾಗೂ ಜನಾಂಗ ನಡೆದುಕೊಳ್ಳಬೇಕಾದ ಅನಿವಾರ್ಯತೆಯಿದೆ. ನ್ಯಾಯ, ನಿಯಮ, ಕಾನೂನು, ಕಟ್ಟಳೆಗಳು ಮಾಯವಾಗಿ ಸಾಮಾನ್ಯ ಜೀವನ ಸಾಗಿಸುವುದಾಗಿದೆ.

ಹೆಸರುಗಳ ವೈಶಿಷ್ಟ್ಯತೆ

ಬುಡಕಟ್ಟು ಜನಾಂಗವು ಯಾವುದೇ ಇರಲಿ ಅವು ಎಲ್ಲಾ ಬಗೆಯಲ್ಲಿ ಒಂದೇಯಾಗಿ ಕಂಡು ಬರುವುದಿಲ್ಲ. ಅವುಗಳಿಗೆ ತನ್ನದೇಯಾದ ಗೋತ್ರಗಳಿವೆ, ಬೆಡಗುಗಳಿವೆ, ಇವುಗಳು ಹೊಂದದೇ ಯಾವ ಬುಡಕಟ್ಟು ಜನಾಂಗವು ಇಲ್ಲ. ಅವುಗಳೆಲ್ಲವೂ ಒಂದೊಂದಾಗಿ ಬುಡಕಟ್ಟು ಜನಾಂಗವು

ಗೋತ್ರ ಭೇಡಗುಗಳು ಬೇರೆ ಬೇರೆಯಾಗಿರುತ್ತವೆ. ಆದರೆ ಸಿಕ್ಲಿಗರ ಎಂಬ ಜನಾಂಗವು ಬುಡಕಟ್ಟು ಸಂಪ್ರದಾಯ ಹೊಂದಿದೆ. ಇದರಲ್ಲಿ ಯಾವುದೇ ಬೆಡಗು ಕುಲ ಗೋತ್ರಗಳು ಬೇರೆಯಾಗಿರದೇ ಒಂದೇಯಾಗಿ ಕಂಡು ಬರುತ್ತವೆ. ಇದರಲ್ಲಿ ಹದಿನೆಂಟು ಬೆಡಗಗಳು ಇವೆ. ಮನೆತನದ ಹೆಸರುಗಳು ಕೂಡಾ ಇವೆ ಆಗಿದ್ದೂ ವಿಶೇಷವಾಗಿದೆ. ಸಿಕ್ಲಿಗರ ಕರ್ನಾಟಕದಲ್ಲಿ ಎಲ್ಲಾ ಬಹುಭಾಗದಲ್ಲಿ ವಾಸಿಸಿದ್ದಾರೆ. ಇವರು ಕೇವಲ ೧,೮೭೩ಅಂದಾಜು ಜನಸಂಖ್ಯೆ ಹೊಂದಿದ್ದಾರೆ. ಇವರು ಇಲ್ಲಿ ಅಲ್ಪಸಂಖ್ಯಾತರಾಗಿದ್ದಾರೆ. ಬುಡಕಟ್ಟುಗಳಲ್ಲಿ ಹದಿನೆಂಟು ಕುಲಗ್ಹೋತ್ರ ಬೆಡಗುಗಳು ಇರುವುದು ಕಂಡು ಬರುತ್ತವೆ.

ಸಿಕ್ಲಿಗರ ಎಂಬ ಸಮುದಾಯವು ಕರ್ನಾಟಕದಲ್ಲಿ ಅಲ್ಪಸಂಖ್ಯಾತರಾಗಿದ್ದ ಸಿಖ್ಖ್ ಪ್ರಮುಖ ಬುಡಕಟ್ಟು ಅಲೆಮಾರಿ ಜನಾಂಗವಾಗಿದೆ. ಅವರು ಸುಮಾರು ಹದಿನೆಂಟು ಬಗೆಯಲ್ಲಿ ಸಿಗುತ್ತವೆ. ಈ ರೀತಿಯಾಗಿ ಸಿಕ್ಲಿಗರರ ಬೆಡಗುಗಳು ಹೊರ ಬಂದಿವೆ. ಇಲ್ಲಿ ಬೇರೆ ಕುಲಗೋತ್ರ ಜಾತಿ ಹಾಗೂ ಬೆಡಗುಗಳು ಎಲ್ಲವೂ ಒಂದೇಯಾಗಿ ಮೂಲತಃ ಸಿಖ್ಖ್ ಜನಾಂಗಕ್ಕೆ ಸೇರಿದ್ದರಿಂದ ಸಿಕ್ಲಿಗರೆಂಬ ಪದ ಬಳಕೆಯಲ್ಲಿದೆ. ಗುರುನಾನಕ್ ಕೂಡಾ ಒಬ್ಬನೇಯಾಗಿದ್ದರೆ ಗುರುಮಹಾದ್ವಾರ ಗುರುಗೋವಿಂದ ಎಲ್ಲವೂ ನಾನಕ್‌ನ ಮೇಲೆ ಮೊರೆಯಿಡುತ್ತಾರೆ. ನಾನಕ್‌ನ ಮೇಲೆ ಅಷ್ಟೊಂದು ಪ್ರೀತಿ ಗೌರವ ಇದೆ. ಸಿಕ್ಲಿಗರರ ಇಂದು ಬದಲಾದ ಸನ್ನಿವೇಶ ಹಾಗೂ ಸಂದರ್ಭದಲ್ಲಿ ಮೂಲ ಸಂಸ್ಕೃತಿಯನ್ನು ಬಿಟ್ಟು ಹೊರ ಬಂದಿಲ್ಲ. ಆದರೂ ಕರ್ನಾಟಕದಲ್ಲಿನ ಸಿಕ್ಲಿಗರರು ಸಿಖ್ಖ್‌ನನ್ನು ಬಿಟ್ಟುಕೊಟ್ಟಿಲ್ಲ. ಹಾಗೇ ಪ್ರಾದೇಶಿಕವಾದ ಹಬ್ಬ-ಹರಿದಿನ ಜಾತ್ರೆಗಳ ಹೊತ್ತಿನಲ್ಲಿ ಬಹು ಮುಖ್ಯವಾದ ಚಿಂತನೆಯನ್ನು ಒಳಗೊಂಡಿದೆ. ಹೀಗಾಗಿ ಸಿಖ್ ಜನಾಂಗವು ಹಲವು ರೀತಿಯ ಸಾಂಸ್ಕೃತಿಕ ಆಯಾಮಗಳನ್ನು ಪಡೆದಿವೆ. ಇದರಿಂದಾಗಿ ಹಿಂದೂ ದೇವರು-ದೇವತೆಗಳ ಬಗ್ಗೆ ಆಸಕ್ತಿ ಹೊಂದಿದ್ದಾರೆ. ಆದರೆ ಇವರು ಮೂಲನೆಲೆ ಕಾಣುವುದು ಈ ಗುರುನಾನಕ್‌ನಲ್ಲಿ ಎಂಬುದು ಧೃಢವಾದ ಕಲ್ಪನೆಯಾಗಿದೆ. ತುಳುಜಾಭವಾನಿ, ಕೃಷ್ಣ, ಎಲ್ಲಮ್ಮ. ದೀಪಾವಳಿ, ಯುಗಾದಿ, ಹೋಳಿ, ಮುಂತಾದ ಆಚರಣೆಗಳಲ್ಲಿ ಪಾಲ್ಗೊಂಡಿದ್ದಾರೆ. ಇಂತವುಗಳ ಕುರಿತು ಸಮಗ್ರ ವಿವೇಚನೆಗೆ ಒಳಪಡಿಸಬೇಕಾಗಿದೆ. ಇವರು ಇಂತಹ ವೈವಿಧ್ಯ ಬದುಕನ್ನು ಕಂಡು ಕೊಂಡವರಾಗಿದ್ದಾರೆ. ಕಟ್ಟಿಕೊಡಲಾಗಿದೆ. ಒಂದು ಬೆಡಗು ಮತ್ತೊಂದು ಬೆಡಗುಗಳು ಸೇರಿದರೆ ವಿವಾಹವಾಗಬಹುದು. ಅದು ಒಂದೇ ಗೋತ್ರವಾಗಿದ್ದರೂ ಎರಡಕ್ಕೂ ವಿವಾಹ ಸಂಬಂಧ ಕಲ್ಪಿಸಲು ಅಸಾಧ್ಯವಾದುದೆಂದು ಭಾವಿಸಿದ್ದಾರೆ. ಹೀಗಾಗಿ ಇಲ್ಲಿಯ ಜೂಣಿ ಹಾಗೂ ಜೂಣಿ ಸೇರಿದರೆ ಮದುವೆಯಾಗುವುದಿಲ್ಲ. ಇವರು ಸಹೋದರ ಸಂಬಂಧಿಯಾಗಿ ಕಂಡು ಬರುತ್ತಾರೆ. ಅದೇ ಜೂಣಿ ಮತ್ತು ಮುದ್ರಾ ವಾಲ್ ಟಾಂಕ್ ಎಂಬ ಎರಡು ಬೆಡಗಗಳು

ಸೇರಿದರೆ ವಿವಾಹವಾಗಲೂ ಅಡ್ಡಿಯಿಲ್ಲ. ಇದರಲ್ಲಿ ಉಪಬೆಡಗುಗಳು, ಕುಲಗೋತ್ರಗಳು, ಯಾವುವು ಪ್ರತ್ಯೇಕವಾಗಿ ಇಲ್ಲದೇ ಬೆಡಗು, ಕುಲಗೋತ್ರ, ಮೂರು ಒಂದೇಯಾಗಿ ಕಂಡು ಬರುವುದರಿಂದ ವಿಶೇಷತೆ ಹೊಂದಿದೆ.

ಭಾರತ ದೇಶದಲ್ಲಿ ಐದು ರಾಜ್ಯಗಳಾದ ದೆಹಲಿ, ಚಂಡಿಗಡ, ಹರಿಯಾಣ, ಚತ್ತೀಸಗಡ, ಪಂಜಾಬ ಎಂಬ ಐದು ರಾಜ್ಯದಲ್ಲಿ ಭಾರತದೇಶದ ಚರಿತ್ರೆಯಲ್ಲಿ ಸಿಗುತ್ತವೆ. ಕರ್ನಾಟಕದಲ್ಲಿ ಬಹು ಮುಖ್ಯವಾಗಿ ಕಾಣಸಿಗುತ್ತವೆ. ಸಿಕ್ಲಿಗರರು ಒಂದು ನೆಲೆ ಹೊಂದಿದ್ದಾರೆ. ಕರ್ನಾಟಕದಲ್ಲಿ ಮೈಸೂರು, ಬೆಂಗಳೂರು, ಬೆಳಗಾವ, ಧಾರವಾಡ, ಔರಾದ್, ಭಾಲ್ಕಿ, ಕೊಪ್ಪಳ, ನಿಪ್ಪಾಣಿ, ಗೋಕಾಕ್, ಗುಲ್ಬರ್ಗಾ, ಹುಮನಾಬಾದ್, ಮುಧೋಳ, ರಾಯಚೂರು, ಸಿಂಧನೂರು, ಗದಗ, ಬಿಜಾಪೂರ, ಶಿಗ್ಗಾಂವ, ಬೈಲಹೊಂಗಲ, ಹುಬ್ಬಳ್ಳಿ, ಮುಂತಾದ ಪ್ರದೇಶಗಳಲ್ಲಿ ಸಿಕ್ಲಿಗರರು ವಾಸವಾಗಿದ್ದಾರೆ.

ಇವರೆಲ್ಲರನ್ನೂ ಸೇರಿಸಿದರೂ ಜನಸಂಖ್ಯೆ ಪ್ರಮಾಣ ಎರಡುಸಾವಿರ ದಾಟುವುದಿಲ್ಲ. ಉತ್ತರಕರ್ನಾಟಕದ ಅದರಲ್ಲೂ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಸಿಕ್ಲಿಗರರು ಚಿಂತಾಜನಕ ಸ್ಥಿತಿಯಲ್ಲಿದ್ದಾರೆ. ಬಾಂಬೆ ಕರ್ನಾಟಕ ಪ್ರದೇಶದ ಸಿಕ್ಲಿಗರರ ಸಮುದಾಯವು ಹಲವು ದೃಷ್ಟಿಗಳ ಹಿನ್ನೆಲೆಯಲ್ಲಿ ಬಹಳಷ್ಟು ಮುಂದುವರೆದಿದ್ದಾರೆ. ಸಿಕ್ಲಿಗರರು ತಮ್ಮ ಮೂಲ ಕಸುಬಾದ ಕಬ್ಬಿಣದ ಶ್ರಮದ ಕೆಲಸವನ್ನು ನಿರ್ವಹಿಸಿಕೊಂಡು ಮುಂದೆ ಸಾಗಿದ್ದಾರೆ.

ಪ್ರಾದೇಶಿಕವಾಗಿ ಸಿಕ್ಲಿಗರರು ಭಿನ್ನತೆ ಹೊಂದಿದ್ದಾರೆ. ಆದರೆ ಮೂಲ ತಮ್ಮ ಗುರುನಾನಕ್ ಆಗಲಿ ಅಥವಾ ಸಿಖ್‌ಧರ್ಮವನ್ನು ಅವರೆಂದೂ ಬಿಟ್ಟುಕೊಟ್ಟಿಲ್ಲ. ಸಿಖ್ಖರ ಸಂಪ್ರದಾಯ ಹಾಗೂ ವಿಧಿ-ವಿಧಾನಗಳನ್ನು ಅಳವಡಿಸಿಕೊಂಡು ಬಂದಿದ್ದಾರೆ. ಸಿಕ್ಕಲಿಗಾರರ ವೃತ್ತಿ ಎಮ್ಮೆ ಬೋಳಿಸುವ, ಮಲಹೋರುವ, ಶೌಚಾಲಯ ಸ್ವಚ್ಚಗೊಳಿಸುವವರು. ಕೂಡಾ ಸಿಕ್ಕಲಗಾರರೆಂದು ಹೇಳುತ್ತಾರೆ. ಇವರಿಗೆ ಕರ್ನಾಟಕದಲ್ಲಿ ಜನಸಂಖ್ಯೆ ಹಾಗೂ ವೃತ್ತಿಗನುಗುಣವಾಗಿದ್ದಾರೆ. ಇವರನ್ನು ನಾವು ಸಿಖ್ ಸಿಕ್ಲಿಗರರಿಗೆ ಹೋಲಿಸಲು ಆಗುವುದಿಲ್ಲ. ಬಹಳಷ್ಟು ಭಿನ್ನತೆ ಹೊಂದಿದ್ದರೆಂಬುದು ಕ್ಷೇತ್ರಕಾರ್ಯದ ಮೂಲಕ ಕಂಡು ಕೊಂಡ ಒಂದು ಅಂಶ. ಹುಬ್ಬಳ್ಳಿ ಹಾಗೂ ಗದಗ ಪ್ರದೇಶಗಳಲ್ಲಿ ಮಾತ್ರ ಸಿಕ್ಲಿಗರರು ಸಿಕ್ಕರೆ ಕರ್ನಾಟಕದಲ್ಲಿ ಹಲವು ಪ್ರದೇಶಗಳಲ್ಲಿ ತಮ್ಮ ಗುರುತನ್ನು ಬಿಟ್ಟುಕೊಟ್ಟಿದ್ದಾರೆ. ತಾವು ಮಗುವಿಗೆ ನಾಮಕರಣ ಮಾಡುವಾಗ ಗ್ರಂಥಸಾಹೇಬ ಪಠಣ ಮಾಡುತ್ತಾರೆ. ಗೋವಿಂದ ಸಿಂಗ್ ಹೇಳುವ ಪ್ರಕಾರವೇ ಹೆಸರನ್ನು ಕರೆಯುತ್ತಾರೆ. ಸಿಖ್‌ರಂತೆ ಗುರುನಾನಕ್ ಜಯಂತಿಯ್ನು

ಕೂಡಿಕೊಂಡು ಎಲ್ಲರೂ ಆಚರಿಸುತ್ತಾರೆ. ಹೆಸರನ್ನು ಇಡುವಾಗಲೂ ಸಿಕ್ಲಿಗರರು ತಮ್ಮ ಹಿಂದಿನಿಂದ ಬಂದ ಹೆಸರನ್ನಾಗಲಿ ಅಥವಾ ಅಲ್ಲಿ ಗ್ರಂಥ ಸಾಹೇಬ ಮೂಲಕ ಬಂದದ್ದನ್ನೇ ಇಡುತ್ತಾರೆ. ನಾಮಕರಣದ ಹೊತ್ತಿಗೆ ದೊಡ್ಡ ಸಮಾರಂಭವನ್ನಾಗಲಿ ಕಾರ್ಯಕ್ರಮವನ್ನಾಗಲಿ ಮಾಡುವುದಿಲ್ಲ. ಗುರುದ್ವಾರದಲ್ಲಿಯೇ ಹೆಸರು ಕರೆಯುವರು. ಇಲ್ಲವೇ ಮನೆಯಲ್ಲಿ ಹೆಸರನ್ನು ಕರೆಯುತ್ತಾರೆ. ಆರ್ಥಿಕ ದೃಷ್ಟಿಯಿಂದ ಬಹಳ ಹಿಂದೆ ಇರುವುದರಿಂದ ಇದ್ಯಾವುದು ಕೂಡಾ ಅವರಿಗೆ ಮಾಡಲು ಸಾಧ್ಯವಾಗುತ್ತಿಲ್ಲ. ಇವರಲ್ಲಿ ಹದಿನೆಂಟು ಕುಲ ಗೋತ್ರ, ಬೆಡಗುಗಳು ಕಾಣಸಿಗುತ್ತವೆ. ಈ ಸಿಕ್ಲಿಗರ ಜನಾಂಗದಲ್ಲಿ ಹೆಣ್ಣು ಗಂಡನ್ನು ಪ್ರತ್ಯೇಕವಾಗಿ ಕರೆಯುವ ವಾಡಿಕೆ ಪ್ರಾರಂಭವಾಗಿದೆ. ಯಾವ ಬುಡಕಟ್ಟು ಜನಾಂಗ ಹೆಣ್ಣು ಗಂಡನ್ನು ಗುರುತಿಸಲು ಪ್ರಯತ್ನಿಸಿದ್ದಾರೆ. ಹಾಗೇ ಅದನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಸಿಕ್ಲಿಗರ ಜನಾಂಗವು ಪಂಜಾಬದ ಮೂಲಕ ಬಂದು ಸಿಖ್ಖ್ ಸಮುದಾಯದ ಒಂದು ಪಂಗಡ ಆದರೆ ಸಿಖ್‌ರು ಇವರೊಂದಿಗೆ ಗುರುತಿಸಿಕೊಳ್ಳುವುದಿಲ್ಲ. ಇವರು ಅಲ್ಪಸಂಖ್ಯಾತರಾಗಿದ್ದ ಕಾರಣ ಕೈ ಬಿಟ್ಟಿದ್ದಾರೆ. ಹೀಗಾಗಿ ಗಂಡು ಹೆಣ್ಣನ್ನು ಗುರುತಿಸಲು ಬಹು ಕಷ್ಟಪಡಬೇಕಾಗಿಲ್ಲ. 'ಸಿಂಗ್' ಎಂಬ ಹೆಸರಿನ ಹಿಂದೆ ಪದ ಬಂದರೆ ಸಾಕು. ಗಂಡು ಎಂದು ಕರೆಯುತ್ತೇವೆ. ಅದೇ 'ಕೌರ್' ಎಂಬ ಪದ ಹೆಸರ ಹಿಂದೆ ಬಂದರೆ ಹೆಣ್ಣೆಂದು ಗುರುತಿಸುತ್ತಾರೆ.

ಈ ಸಿಂಗ್ ಮತ್ತು ಕೌರ್ ಗಂಡು ಹೆಣ್ಣನ್ನು ಗುರುತಿಸಲು ಮುಖ್ಯವಾದ ಪದವಾಗಿದೆ. ಹರಭಜನ್‌ಸಿಂಗ್, ಅನಿತ್‌ಸಿಂಗ್, ಬಚ್ಚನ್‌ಸಿಂಗ್, ಪ್ರೇಮ್‌ಸಿಂಗ್, ಅಮರಸಿಂಗ್ ಎಂಬ ಹೆಸರು ಗಂಡನ್ನೂ, ಪ್ರೇಮಾಕೌರ್, ಅನಿತಾಕೌರ್, ಶೋಭಾಕೌರ್, ಪ್ರಿಯಾಕೌರ್, ಎಂದು ಕೌರ್ ಬಂದರೆ ಹೆಣ್ಣೆಂದು ಭಾವಿಸುತ್ತಾರೆ. ಈ ಒಂದು ಅಂಶ ಇವರಲ್ಲಿ ಎದ್ದು ಕಾಣುತ್ತದೆ.

ಕಬ್ಬಿಣದ ಕೆಲಸ ಮಾಡುವ ಮೂಲಕ ಅಲೆಮಾರಿ ಜನಾಂಗವಾದ ಸಿಕ್ಲಿಗರರು ಒಂದೆ ಕಡೆ ವಾಸಿಸುವುದಿಲ್ಲ. ಅವರು ತಮಗೆ ಹೊಟ್ಟೆಗೆ ಸಿಗದೇ ಇದ್ದಾಗ ಬೇರೆ ಕಡೆ ಹೋಗಿ ವಾಸಿಸುತ್ತಾರೆ. ಊರ ಹೊರಗಿನ ಬ್ರಿಜ್, ರೈಲ್ವೆ ಗೇಟ್, ಎಪಿಎಂಸಿ. ಅಥವಾ ಗಂಜ್ ಹತ್ತಿರ ಗೇಟುಗಳ ಪಕ್ಕದಲ್ಲಿ ಯಾರೂ ಇರದ ಜನನಿರತವಲ್ಲದ ಸರ್ಕಾರಿ ಜಾಗದಲ್ಲಿ ವಾಸವಾಗಿರುತ್ತಾರೆ. ತಾವೆಲ್ಲಾ ಸೇರಿಕೊಂಡು ಮುಕ್ತವಾಗಿ ಕೆಲಸ ಕೈಗೊಂಡು ಬರುತ್ತಾರೆ. ಶ್ರಮ ಜೀವಿಗಳಾಗಿದ್ದರಿಂದ ಅವರ ಬಗ್ಗೆ ಕನಿಕರ ಹುಟ್ಟುತ್ತದೆ.

ಕುಲಕಸಬುಗಳು

ಶಿಲಾಯುಗ ಸಂಸ್ಕೃತಿಯಲ್ಲಿ ಮಾನವನ ಬುದ್ಧಿಶಕ್ತಿ ವಿವಿಧ ಹಂತಗಳಲ್ಲಿ ವಿಕಾಸವನ್ನು ಹೊಂದಿ ತನ್ನ ಬಹು ಮುಖ ಪ್ರತಿಭೆ ಹಾಗೂ ಶಕ್ತಿ ಹೊರಹಾಕುವ ಪ್ರಯತ್ನ ಮಾನವನು ಮಾಡಿದ. ಅಲೆಮಾರಿತನದ ಮೂಲಕ ತನ್ನ ಕಾಲಗಳು ಗತಿಸಿದಂತೆ ಆತನ ವಿಧಿ-ವಿಧಾನಗಳು ಬದಲಾಗುತ್ತಾ ಹೋದವು. ಹೊಟ್ಟೆ ಹಸಿವಿಗಾಗಿ ಬೇಟೆಯಾಡುವುದು ಕೆಲವು ಬೇಟೆ ಆಡಲು ಕಲ್ಲುಗಳನ್ನೇ ಬಳಸಿದ ತಮಗೆ ಕಾಡು ಬೆಟ್ಟಗಳಲ್ಲಿ ಕಾಣುವ ಕಲ್ಲುಗಳನ್ನು ತೆಗೆದುಕೊಂಡು ಆಯುಧ ಮಾಡಿಕೊಂಡನು. ಬೇಟೆಯಾಡಿ ಹಸಿ ಮಾಂಸವನ್ನು ತಿನ್ನುವದನ್ನು ಕಲಿತ. ಕಲ್ಲುಗಳ ಘರ್ಷಣೆಯಿಂದ ಬೆಂಕಿ ಉತ್ಪನ್ನವಾದದ್ದನ್ನು ಅರಿತುಕೊಂಡ ಆಗ ಬೇಯಿಸುವ ಕೆಲಸಕ್ಕೆ ಕೈಹಾಕಿದ. ಮೊದಲು ಬತ್ತಲೆಯಾಗಿ ತಿರುಗುತ್ತಿದ್ದ ನಂತರ ತಪ್ಪಲುಗಳನ್ನು ಕಟ್ಟಿಕೊಂಡು ತದನಂತರ ಚರ್ಮವನ್ನು ಸುತ್ತಿಕೊಳ್ಳಲು ಪ್ರಯತ್ನಿಸಿದ. ಇಂತಹ ಬೆಂಕಿ ಆವಿಷ್ಕಾರದ ತರುವಾಯ ಬೇಸಾಯವನ್ನು ಕಂಡುಕೊಂಡ ಪ್ರಾಚೀನ ಮಾನವ ಒಂದೆಡೆ ಕುಳಿತು ನೆಲೆಸಲು ಪ್ರಯತ್ನಿಸಿದ. ಈ ನೆಲೆಸುವಿಕೆಯೇ ಆತನ ವ್ಯಕ್ತಿತ್ವವನ್ನು ವಿಕಸನಗೊಳಿಸಲು ಕಾರಣವಾಯಿತು. ಮೊದಲು ಮಡಕೆಗಳನ್ನು ಸುಡದೇ ಅದರಲ್ಲಿ ಇಟ್ಟು ನಂತರ ಸುಟ್ಟುಕೊಂಡು ಮಡಕೆ ಬಳಸಿದ ಗಡ್ಡೆ, ಗೆಣಸು, ಹಣ್ಣು, ಹಂಪಲ ಸಂಗ್ರಹಿಸಿ ಇಡಲು ಪ್ರಯತ್ನಿಸುತ್ತಿದ್ದ.

ಮಾನವನ ಸಂಸ್ಕೃತಿ ಕೆಲವೊಂದು ಕಡೆ ಗಂಭೀರವಾಗಿ ಬೆಳೆದು ಬಂದಿದೆ. ಹರಪ್ಪಾ ಮಹೆಂಜೊದಾರೋ ಈಜಿಪ್ಟ್, ಬೆಬಿಲೋನಿಯಾ, ಮೆಕ್ಸಿಕೋ ಮೊದಲಾದ ಪ್ರದೇಶಗಳಲ್ಲಿ ಪ್ರಾಚೀನ ಕಲೆಗಳ ಕುರುಹುಗಳು ನಮಗೆ ಕಾಣಸಿಗುತ್ತವೆ. ನಮ್ಮ ದೇಶದಲ್ಲಿ ಕಸಬುಗಳು ಕುಲಕ್ಕಂಟಿಕೊಂಡು ಬಂದಿರುವುದು ಎಲ್ಲರಿಗೂ ತಿಳಿದ ಸಂಗತಿ. ಮಣ್ಣಿನ ಮೂಲಕ ಹಲವು ಕಾರ್ಯ ವೃತ್ತಿ ಕೈಗೊಂಡು ಕುಂಬಾರ, ಕಮ್ಮಾರಿಕೆ, ನೇಕಾರಿಕೆ, ಕಮ್ಮಾರಿಕೆ, ಬಡಗಿ, ಚಮ್ಮಾರಿಕೆಯಂತಹ ಹಲವು ಜಾತಿಗಳು ಮೂಲ ವೃತ್ತಿಯನ್ನಾಗಿಸಿಕೊಂಡು ವೃತ್ತಿಗನುಗುಣವಾಗಿ ಜಾತಿಗಳು, ಸಮುದಾಯಗಳು ಬೆಳವಣಿಗೆ ಹೊಂದಿವೆ. ಬುಡಕಟ್ಟುಗಳು ನಮಗೆ ಕಂಡು ಬರುತ್ತವೆ. ಹಕ್ಕಿಪಿಕ್ಕಿಯರು ಸುಡುಗಾಡಸಿದ್ದರು, ಕಾಡುಗೊಲ್ಲರು, ಮೇದಾರರು, ಲಂಬಾಣಿಗಳು, ಚೆನ್ನದಾಸರು, ಪಾರ್ಧಿ, ಗೋಸಂಗಿಗಳು, ಜೇನುಕುರುಬರು, ಕಾಡುಕುರುಬರು, ಅಡಿವಿಚೆಂಚರು, ದುರುಗಮುರುಗಿಯರು, ಹೆಳವರು, ಹೀಗೆ ಅಲ್ಪಸಂಖ್ಯಾತ ಬುಡಕಟ್ಟು ಜನಾಂಗವೂ ತನ್ನದೇ ಆದ ನೀತಿನಿಯಮ ಹಾಗೂ ಚೌಕಟ್ಟುಗಳನ್ನು ಹೊಂದಿಕೊಂಡು ವೃತ್ತಿಗನುಗುಣವಾಗಿ ಕುಲಕಸಬುಗಳನ್ನು ಮಾಡುತ್ತಾ ಬಂದಿದ್ದಾರೆ.

ಕರ್ನಾಟಕದ ಒಟ್ಟು ಬುಡಕಟ್ಟು ದುಡಿಮೆಗಾರರ ಸ್ಥಿತಿ ಹಿಂದಿಗಿಂತಲೂ ಇಂದು ಬಹು ಭಿನ್ನವಾಗಿದೆ. ಜನಗಣತಿ ವರದಿಯಲ್ಲಿ ಇಂತಿಷ್ಟು ಜನ ಕೃಷಿ, ಕೂಲಿ, ಪಶುಪಾಲನೆ, ಕಟ್ಟಡ ನಿರ್ಮಾಣದಂತಹ ಕಾಯಕದಲ್ಲಿ ನಿರತರವಾಗಿದ್ದಾರೆ. ಇಂತಹ ಕುಲಕಸಬುಗಳನ್ನು ಕೈಗೊಂಡು ಕೃಷಿಕರಾಗಿ, ಬೇಟೆಗಾರರಾಗಿ, ಪಶುಪಾಲಕರಾಗಿ ಹಲವು ಕೃಷಿಗಳನ್ನು ನಿರಂತರವಾಗಿ ಕಸಬು ಕೈಗೊಂಡಿದ್ದಾರೆ. ಇವರೆಲ್ಲರೂ ಕಾಲಕ್ಕೆ ತಕ್ಕಂತೆ ಕಾರ್ಯನಿರ್ವಹಿಸಿಕೊಂಡು ಬಂದಿದ್ದಾರೆ. ಕರ್ನಾಟಕದಲ್ಲಿ ಬುಡಕಟ್ಟು ಜನಾಂಗವು ಹಲವು ನೆಲೆಗಳಲ್ಲಿ ಜನಗಣತಿಯ ಪ್ರಕಾರದಲ್ಲಿ ಕೂಡಿಕೊಂಡಿದ್ದಾರೆ. ಕರ್ನಾಟಕದ ಜಿಲ್ಲಾವಾರು ಬುಡಕಟ್ಟುಗಳ ವೈವಿಧ್ಯಮಯವಾದ ದುಡಿಮೆಗಾರರು ಬಹಳಷ್ಟು ಬುಡಕಟ್ಟು ದೊರೆಯುತ್ತವೆ. ಅಲೆಮಾರಿತನ ಹೊಂದಿದ ಹಲವಾರು ಬುಡಕಟ್ಟು ಜನಾಂಗ ವಿಶಿಷ್ಟತೆ ಹೊಂದಿವೆ. ಕರ್ನಾಟಕದಲ್ಲಿ ಬಂದ ಅಲೆಮಾರಿ ಬುಡಕಟ್ಟು ಜನಾಂಗವು ಸಹಿತ ಅನ್ಯಪ್ರದೇಶಗಳಿಂದಲೇ ಬಂದು ಇಲ್ಲಿ ನೆಲೆನಿಂತು ಹೊಸದಾದ ಕೊಡುಗೆ ನೀಡಿದ್ದಾರೆ. ರಾಜಸ್ಥಾನ, ಗುಜರಾತ, ಪಂಜಾಬ, ಮಹಾರಾಷ್ಟ್ರ, ಗೋವಾ, ಆಂಧ್ರಪ್ರದೇಶ, ತಮಿಳುನಾಡು, ಕೇರಳಗಳಂತಹ ರಾಜ್ಯದ ಹಾಗೂ ಪ್ರದೇಶಗಳ ಬುಡಕಟ್ಟು ಜನಾಂಗವು ಹೊರ ಬಂದಿವೆ. ಈ ವಲಸೆ ಬಂದ ಬುಡಕಟ್ಟು ಅಲೆಮಾರಿಗಳು ಕರ್ನಾಟಕದಲ್ಲಿ ನೆಲೆಯೂರಿ ಹಲವು ಪ್ರದೇಶಗಳಲ್ಲಿ ಹರಿದು ಹಂಚಿ ಹೋಗಿದ್ದಾರೆ.

ವಲಸೆಗೊಂಡ ಬುಡಕಟ್ಟುಗಳು ಕಾಲ ಕಾಲಕ್ಕೆ ಸಂದರ್ಭಕ್ಕೆ ತಕ್ಕಂತೆ ಬದಲಾವಣೆಗೊಂಡವು. ಹಲವು ಬುಡಕಟ್ಟುಗಳ ವಲಸೆಯ ಕಾಲ ಹಾಗೂ ಸಂದರ್ಭಗಳು ಭಿನ್ನವಾಗಿವೆ. ಕಾಲಾವಧಿ ಹಾಗೂ ಅವರ ಸ್ಥಿತಿ ಬುಡಕಟ್ಟಿನಿಂದ ಬುಡಕಟ್ಟಿಗೆ ಭಿನ್ನವಾಗುತ್ತವೆ. ಇಲ್ಲಿಯ ವಲಸೆ ಅವಕ್ಕೆ ಅವರ ವೃತ್ತಿಯೇ ಕಾರಣವಾಗಿದೆ. ಬುಡಕಟ್ಟುಗಳ ಭಾಷೆ ಕನ್ನಡವಂತೂ ಅಲ್ಲವೇ ಅಲ್ಲ. ತೆಲುಗು, ತಮಿಳು, ಮರಾಠಿ, ಹಿಂದಿ, ಗುಜರಾತಿ, ಸಿಖ್ ಮುಂತಾದ ಭಾಷೆಗಳು ಇಲ್ಲವೇ ಅವುಗಳ ಮಿಶ್ರಿತವಾದ ಭಾಷೆಗಳನ್ನು ತೆಗೆದುಕೊಂಡು ಆಡುವ ರೂಢಿ ಕರಗತವಾಗಿದೆ.

ಬುಡಕಟ್ಟುಗಳು ಇಂದು ಕಣ್ಮರೆಯಾಗುತ್ತಿವೆ. ಎಂಬ ಅಪಾಯದ ಗಂಟೆ ಹೊಡೆಯುತ್ತಲೇ ಇದೆ. ಹೀಗಾಗಿ ಬುಡಕಟ್ಟುಗಳತ್ತ ಗಮನ ಹರಿಸಬೇಕಾದ ಅನಿವಾರ್ಯತೆಯಿದೆ. ಮೌಖಿಕ ಪರಂಪರೆ ಕಾಲಾನುಕ್ರಮದಿಂದಾಗಿಯೇ ರೂಪಾಂತರಗೊಂಡಿದೆ. ಜಾನಪದ ವಸ್ತು ಸಂಸ್ಕೃತಿಗಳು ಇಂದು ಬದಲಾಗುತ್ತಿದೆ. ಒಂದು ಹಂತದಲ್ಲಿ ಬದಲಾದರೆ ಮತ್ತೊಂದು ಹಂತದಲ್ಲಿ ಬದಲಾವಣೆ

ಸಾಧ್ಯವಿಲ್ಲವೆಂಬ ಮಾತನ್ನು ಒಪ್ಪಲಾರೆವು. ಹೀಗೆ ಕಾಲಕ್ಕೆ ತಕ್ಕಂತೆ ಜನಪದವನ್ನು ಮಾರ್ಪಾಡು ಮಾಡಲಾಗಿಲ್ಲ. ಬುಡಕಟ್ಟುಗಳ ಕಡೆಗೆ ಹೆಚ್ಚಿನ ಗಮನವನ್ನು ನೀಡಿಲ್ಲ. ಕಣ್ಣಿಗೆ ಕಾಣುವ ಅಂಶಗಳನ್ನೇ ಪ್ರಧಾನವಾಗಿಟ್ಟುಕೊಂಡು ನಾವು ನೋಡುತ್ತೇವೆ. ಇವುಗಳಲ್ಲಿ ತಲೆಮಾರಿನಿಂದ ತಲೆಮಾರಿಗೆ ಸಾಗಿ ಬಂದ ಮೌಖಿಕ ಪರಂಪರೆ ಹಾಗೂ ಕುಲಕಸಬುಗಳು ಇಂದು ಪರಂಪರೆಯಾಗಿ ಬದಲಾವಣೆಯಾಗುತ್ತಲಿವೆ. ಇಲ್ಲಿನ ಚಟುವಟಿಕೆಗಳಲ್ಲಿ ಮಾತ್ರ ಕರಕುಶಲತೆ ವಿಧಾನಗಳು ಕೃಷಿ ಕೆಲಸದ ಮಹತ್ವ, ಪಶುಸಾಗಾಣಿಕೆ, ಆಹಾರ ಸಂಸ್ಕರಣೆ, ಉಪಕರಣ ತಯಾರಿಕೆ, ಪೀಠೋಪಕರಣಗಳ ಬಳಕೆ, ವಿನ್ಯಾಸ, ಪಾತ್ರೆ, ಪಗಡೆಗಳ ಬಗ್ಗೆ ಬೇಕಾಗುವ ಹತ್ತು ಹಲವು ಅಂಶಗಳನ್ನು ನೋಡಿಕೊಂಡು ಬುಡಕಟ್ಟು ಜನಾಂಗ ಆ ನೆಲೆಯಲ್ಲಿ ಚಿಂತನೆಗೆ ತೊಡಗುವುದನ್ನು ಕಾಣುತ್ತೇವೆ. ವಸ್ತು ಸಂಸ್ಕೃತಿಯು ಗ್ರಾಮೀಣ ವೃತ್ತಿಗಳ ಅಧ್ಯಯನವು ಇದೇ ಹಂತವನ್ನು ತಲುಪಿದೆ.

ಗ್ರಾಮೀಣ ನಗರ ಬದುಕಿನಲ್ಲಿ ಪರಂಪರಾಗತವಾಗಿ ಮೂಡಿ ಬಂದ ವೃತ್ತಿಗಳು ಕಸಬುಗಳಾಗಿ ಬಂದಿವೆ. ಇದೇ ಮೂಲಕಸಬುಗಳಾಗಿ ನಮಗೆ ಬುಡಕಟ್ಟು ಜನಾಂಗದಲ್ಲಿ ಕಾಣಸಿಗುತ್ತದೆ. ಗ್ರಾಮೀಣ ಕುಲಕಸಬುಗಳು ವೃತ್ತಿಗಳೇ ಇಲ್ಲಿ ಮನುಷ್ಯನ ಶ್ರಮ ಜೀವನವನ್ನು ನಿರೂಪಿಸುತ್ತವೆ. ಕೈ ಕಸಬುಗಳು ಇಂದು ಬಹಳಷ್ಟು ವಿನಾಶ ಹೊಂದಿದರೂ ಬುಡಕಟ್ಟಿನ ಸಿಕ್ಲಿಗರರು ಕೈ ಕಸಬುಗಳು ಇಂದಿಗೂ ಉಳಿಸಿಕೊಂಡು ಬಂದಿದ್ದಾರೆ. ಕೃಷಿ ಹಾಗೂ ಅಡುಗೆ (ಗೃಹ) ಬಳಕೆಯ ಪರಿಕಲ್ಪನೆ ಹೊಂದಿ ಅವುಗಳಂತೆ ಹುಟ್ಟನ್ನು ಪಡೆದುಕೊಂಡು ಬೆಳೆದುಕೊಂಡು ಬಂದಿವೆ.ಇದೆ ಮುಂದೆ ಹಲವು ಹಂತಗಳಲ್ಲಿ ಬದಲಾವಣೆಗೊಳ್ಳದೇ ಜೀವನೋಪಾಯಕ್ಕೆ ಸಾಕು ಎನಿಸಿಕೊಂಡ ಸಿಕ್ಲಿಗರರು ಸಹಜವಾಗಿ ಕಬ್ಬಿಣದ ಕಸಬುಗಳನ್ನೇ ಆಯ್ದುಕೊಂಡರು. ಇದೇ ವೃತ್ತಿ ಕುಲಕಸಬುಗಳಾದವು. ಕೈಗಾರಿಕಾ ಕ್ರಾಂತಿ ಭಾರತ ದೇಶದಲ್ಲಿ ಅಷ್ಟೇ ಅಲ್ಲ. ಕನಾರ್ಟಕದಲ್ಲಿ ಪ್ರಭಾವಿತವಾದರೂ ಕೂಡಾ ಇಂತಹ ಕುಲಕಸಬುಗಳಿಗೆ ಹೊಡೆತ ಬಿದ್ದಿದೆ. ಹಿಂದೆ ಇವೇ ಕುಲಕಸಬುಗಳು ಪ್ರಮುಖ ಪಾತ್ರ ವಹಿಸಿದ್ದವು. ವ್ಯಕ್ತಿ ಹಾಗೂ ಸಮುದಾಯ ಬುಡಕಟ್ಟು ಜನಾಂಗ ಯಾವಾಗಲೂ ತಾನು ತಾನೇ ಸ್ವತಃ ಎಲ್ಲವನ್ನು ತಯಾರಿಸಿಕೊಳ್ಳಬೇಕು. ಒಂದು ವೇಳೆ ತನಗೆ ತಯಾರಿಸಲು ಆಗದೇ ಇದ್ದರೇ ಇನ್ನೊಬ್ಬರಿಂದ ತೆಗೆದುಕೊಳ್ಳಬೇಕಾದ ಅನಿವಾರ್ಯ ಪ್ರಸಂಗವೂ ಇಲ್ಲಿವೆ. ಹೀಗಾಗಿ ಇಂತಹ ವೃತ್ತಿ ಕೈಗೊಂಡ ಕುಲಕಸಬುದಾರರ ಜೊತೆಗೆ ನೇರವಾದ ಸಂಪರ್ಕ ಉಂಟಾಗಲು ಸಾಧ್ಯವಾಗಿದೆ. ಕೈಗಾರಿಕಾ ಕ್ರಾಂತಿಯ ಪರಿಣಾಮದಿಂದಾಗಿ ಕರ್ನಾಟಕ ರಾಜ್ಯದಲ್ಲಿ ಕಂಡು ಬರುವ ಬುಡಕಟ್ಟುಗಳು ಅದೋಸ್ಥಿತಿಗೆ ಉಳಿದುಕೊಂಡಿವೆ. ಅವುಗಳಿಂದಾಗಿ ಕೆಲವು ಬುಡಕಟ್ಟುಗಳು ಬದಲಾವಣೆಯನ್ನು ಮಾಡಿಕೊಂಡವು. ಕರ್ನಾಟಕದಲ್ಲಿ ಅನೇಕ ಕಾರ್ಖಾನೆಗಳು

ಸಹಿತ ಸರಳವಾಗಿ ತಯಾರುಗೊಂಡು ಕಡಿಮೆ ಬೆಲೆಯಲ್ಲಿ ಹೊರಬಂದವು. ಇದರಿಂದ ಕೈಕಸಬುಗಳು ತನ್ನ ಜೀವನ ನಿರ್ವಹಣೆ ಹಾಗೂ ಆರ್ಥಿಕ ಬೆಲೆ ಕಾರಣದಿಂದ ಇಳಿಮುಖವಾಗಹತ್ತಿತು. ಸಾಂಸ್ಕೃತಿಕ ಸಾಮಾಜಿಕ ಬದಲಾವಣೆಗಳು ತೀವ್ರವಾಗಿದ್ದರಿಂದ ಕೈಕಸಬು ವಸ್ತುಗಳು ಪ್ರಾಧಾನ್ಯತೆ ಹೊರಟು ಹೋಯಿತು. ಇಂತಹ ಪ್ರಭಾವ ಕಾರಖಾನೆಗಳಿಂದ ಶುರುವಾಯಿತು.

ವೃತ್ತಿ ಜೀವನ ಕೈಗೊಂಡ ಬುಡಕಟ್ಟು ಜನಾಂಗ ಸಂಪೂರ್ಣವಾಗಿ ಜೀವನವೇ ಬದಲಾಗಿದೆ. ಹೀಗಾಗಿ ವೃತ್ತಿ ಕುಲಕಸಬು ಕೂಡಾ ಬದಲಾವಣೆಗೊಂಡಿವೆ. ಇಂದಿನ ದಿನಗಳಲ್ಲಿ ಈ ಬುಡಕಟ್ಟು ಜನಾಂಗದ ಕುಲಕಸಬುಗಳು ನಿಂತು ಹೋಗುತ್ತಲಿವೆ. ಇವುಗಳೆಲ್ಲವು ಕಾರ್ಯ ಸೂತ್ರಗಳು, ತಂತ್ರಗಳು ವಿನ್ಯಾಸಗಳು, ಬಳಕೆಯ ವಿನ್ಯಾಸಗಳು, ಬಳಕೆಯ ವಸ್ತುಗಳು, ವಿಶಿಷ್ಟವಾದ ಪರಿಭಾಷೆಯೂ ಎಲ್ಲಾ ಕಡೆಗೂ ಅಳಿದು ಹೋಗುತ್ತಲಿವೆ. ಇವತ್ತಿನ ಸಂದರ್ಭದಲ್ಲಿ ಉಳಿಯುವಿಕೆಗಾಗಿ ಶ್ರಮಿಸಬೇಕಾಗಿದೆ. ತಲೆಮಾರುಗಳಿಂದ ತಲೆಮಾರಿಗೆ ಬಂದ ಈ ಬುಡಕಟ್ಟು ಸಂದರ್ಭದ ಎಲ್ಲಾ ಮೌಖಿಕ ಪರಂಪರೆಗೆ ಹೆಚ್ಚು ಒತ್ತು ನೀಡಬೇಕಾಗಿದೆ. ಇಂತಹ ಕುಲಕಸಬುಗಳ ವೃತ್ತಿಗಳಲ್ಲಿ ಕಾಣಬೇಕಾದ ಪ್ರಮುಖ ಅಂಶವೆಂದರೆ ಪಾರಂಪರಿಕವಾದ ಬೆಳವಣಿಗೆ ಇಲ್ಲಿ ಯಾವುದೇ ವೃತ್ತಿ ಅದಕ್ಕೆ ಅವುಗಳದೇ ಆದ ಕಚ್ಚಾ ಸಾಮಗ್ರಿಗಳು ಬೇಕು. ಇಂತಹ ಕಚ್ಚಾ ಸಾಮಗ್ರಿಗಳಿಂದಲೇ ಸಾಮಗ್ರಿ ತಯಾರಿಸುವ ಕೆಲಸವೂ ಇಲ್ಲಿ ಪ್ರಮುಖವಾಗಿ ನಡೆದಿದೆ.

ಇಲ್ಲಿಯೂ ಎಲ್ಲಾ ವಿನ್ಯಾಸ ಸೂತ್ರ, ಪರಿಷ್ಕರಣಗಳು ಸಹಿತ ಆಯಾ ವೃತ್ತಿ ಕುಲಕಸಬುಗಳಿಗೆ ಸೇರಿಕೊಂಡಿವೆ. ಹೀಗಾಗಿ ಇದರ ಎಲ್ಲಾ ಕುಲಕಸಬುಗಳಿಗೆ ವೃತ್ತಿಯವರೇ ಜವಾಬ್ದಾರರು. ಅದನ್ನು ಉಳಿಸುವ ಬೆಳೆಸುವ ನಿಟ್ಟಿನಲ್ಲಿ ಯೋಚಿಸಿದ್ದಾರೆ. ಜೀವನಾವಶ್ಯಕ ಉಪಕರಣಗಳನ್ನು ತಯಾರಿಸುವ ಕಸಬುಗಳನ್ನು ಸಾಮಾನ್ಯವಾಗಿ ಎಲ್ಲಾ ಪ್ರದೇಶಗಳಲ್ಲಿ ಕಾಣುತ್ತೇವೆ. ಅವುಗಳಿಗಿಂತ ಭಿನ್ನವಾಗಿ ಆಲೋಚಿಸುವುದೇ ಮುಖ್ಯವಾದ ಸಂಗತಿಯಾಗಿದೆ. ಸಿಕ್ಲಿಗರರು ಸಹಿತ ಆಯಾ ಪ್ರದೇಶಗಳಲ್ಲಿ ಲಭ್ಯವಿರುವ ಕಚ್ಚಾಸಾಮಗ್ರಿಗಳನ್ನು ಅವಲಂಭಿಸಿಕೊಂಡೇ ಇಂತಹ ಕಾರ್ಯ ಕೈಗೊಳ್ಳುತ್ತಾರೆ. ಸಿಕ್ಲಿಗರರು ಎಲ್ಲಾ ಕಾಲದಲ್ಲಿಯೂ ಸಹಿತ ಅದೇ ವೃತ್ತಿಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಎಲ್ಲೋ ಒಂದು ಎರಡು ಕಡೆ ಇವುಗಳನ್ನು ಹೊರತುಪಡಿಸಿಕೊಂಡು ಹೊಸ ಬಗೆಯ ಚಿಂತನೆ ಕೈಗೊಂಡಿದ್ದಾರೆ. ಇಂತಹ ವೃತ್ತಿಗಳನ್ನು ಅವಲಂಬಿಸಬೇಕಾದ ಹೊತ್ತಿನಲ್ಲಿ ಕಬ್ಬಿಣದ ಕೆಲಸ ಕೈಗೊಂಡ ಈ ಸಿಕ್ಲಿಗರರು ಮೂಲತಃ ಎಲ್ಲಾ ಹಂತದ ಅಂಶಗಳನ್ನು ಒಳಗೊಂಡು ಪ್ರಾರಂಭದಲ್ಲಿ

ಪುರಾತನವಾದ ಪ್ರಾಚೀನವಾದ ಮಧ್ಯಕಾಲೀನ ಹಾಗೂ ಆಧುನಿಕ ಅಂಶಗಳನ್ನು ಒಳಗೊಂಡು ಉಗಮಗೊಂಡು ಕಾಲಾನುಕ್ರಮದಲ್ಲಿ ಅವು ಬದಲಾವಣೆಗೊಂಡು ಬೆಳೆದು ಹೊರಬಂದಿರುವುದು ಸಹ ಬುಡಕಟ್ಟು ಅಧ್ಯಯನದ ವೃತ್ತಿ ಕುಲಕಸಬುಗಳು ಬದಲಾವಣೆಗಳಾಗಿಯೇ ಬಂದಿರುವುದು ವಿಶೇಷವಾಗಿದೆ.

ಪ್ರಾಚೀನ ಕಾಲದಲ್ಲಿ ಕುಲಕಸಬುಗಳು

ಪ್ರಾಚೀನಕಾಲದಿಂದಲೂ ಸಿಕ್ಲಿಗರರು ಬಲಿಷ್ಠರಾಗಿದ್ದರು. ಪಂಜಾಬದಲ್ಲಿ ಸಿಖ್ಖ್ ಸಮುದಾಯದಲ್ಲಿ ಸೇರಿಕೊಂಡಿದ್ದರು. ಸಿಖ್ಖ್ ಸಮುದಾಯದ ಪ್ರಾಮುಖ್ಯ ಭಾಗವಾಗಿತ್ತು. ಸಿಖ್ಖ್ ಧರ್ಮಗಳ ಮೂಲಕ ಧಾರ್ಮಿಕ ಅಧ್ಯಯನಗಳು ಪ್ರಾರಂಭವಾಗಿವೆ. ಸಿಖ್ಖ್ ಧರ್ಮಗಳ ವಿಧಿ-ವಿಧಾನಗಳ ಮೂಲಕ ಹೊರ ಬಂದಿದ್ದಾರೆ. ಪ್ರಾಚೀನ ಕಾಲದಲ್ಲಿ ಸಿಖ್ಖರು ಪಂಜಾಬದಲ್ಲಿ ದೇಹದಾರ್ಢ್ಯತೆ ಹೊಂದಿದ್ದಾರೆ. ಹುಲಿಗಳಂತೆ ಕಾಣುವುದು ಯಾವಾಗಲೂ ಐದು 'ಕ' ಗಳು ಬಳಕೆಯಲ್ಲಿವೆ. ಅವರ ಮುಖದಲ್ಲಿ ಗಡ್ಡ, ಕೂದಲುಗಳು ಯಾವುದನ್ನು ತೆಗೆಯಲಾರದೇ ಹಾಗೇ ಕಾಪಾಡಿಕೊಂಡು ಬಂದಿದ್ದಾರೆ. ಪಂಜಾಬದಲ್ಲಿ ಹೋರಾಟದ ಮನೋಭಾವನೆ ಹೊಂದಿ ಹೋರಾಟಗಾರರಾಗಿದ್ದಾರೆ. ಪಂಜಾಬ ಹುಲಿಗಳಂತೆ ವರ್ತಿಸುತ್ತಿದ್ದಾರೆ.

ಉತ್ತರ ಭಾರತದ ಪಂಜಾಬ ಪ್ರದೇಶದವರಾಗಿದ್ದಾರೆ. ಪಂಜಾಬನ್ನು ಆಳ್ವಿಕೆ ಮಾಡುತ್ತಿದ್ದ ರಾಜಾ ರಣಜಿತ್ ಸಿಂಗ್(೧೭೮೦- ೧೮೩೯) ಪ್ರಮುಖ ರಾಜನಾಗಿದ್ದ. ಪಂಜಾಬ, ಕಾಶ್ಮೀರ, ಲಾಹೋರ್, ಪೇಶ್ವಾರ್, ಕಾಗಾರ, ಎಂಬ ನಾಲ್ಕು ರಾಜ್ಯಗಳನ್ನು ಆಳ್ವಿಕೆ ಮಾಡುತ್ತಿದ್ದ ಆ ಹೊತ್ತಿಗೆ ಸಿಖ್ಖ್ ಸಮುದಾಯವು ಈ ಸಿಕ್ಲಿಗರ ಒಂದು ಗುಂಪು ರಾಜಾ ರಣಜಿತ್‌ಸಿಂಗನಿಗೆ ಯುದ್ದಕ್ಕೆ ಬೇಕಾದ ಶಸ್ತ್ರಾಸ್ತ್ರಗಳನ್ನು ತಯಾರಿಸಿಕೊಡುವ ಕೆಲಸ ಕೈಗೊಂಡರು. ಶಸ್ತ್ರಾಸ್ತ್ರಗಳ ಕಬ್ಬಿಣದಲ್ಲಿ ಮಾಡಿದ್ದವುಗಳಾಗಿವೆ. ಕಬ್ಬಿಣದ ಬಲಿಷ್ಠವಾದ ವಸ್ತುಗಳನ್ನು ಬಳಸಿಕೊಂಡು ಕತ್ತರಿ ಕತ್ತಿ, ಖಡ್ಗ, ತಲವಾರ ಮುಂತಾದ ಹಾಗೂ ಹೋರಾಟದ ಸಂದರ್ಭದಲ್ಲಿ ಬೇಕಾದ ಎಲ್ಲಾ ಬಗೆಯ ಶಸ್ತ್ರಾಸ್ತ್ರಗಳನ್ನು ತಯಾರಿಕೆಯ ಕೆಲಸದಲ್ಲಿ ಬಾಗಿಯಾಗಿದ್ದರು. ಕುಲಕಸಬು ಹಾಗೂ ವೃತ್ತಿ ಕೂಡಾ ಇದೇ ಆಯಿತು.

ರಾಜಾ ರಣಜಿತ್‌ಸಿಂಗ್ ಸಂಪೂರ್ಣವಾಗಿ ಯುದ್ಧದ ಸನ್ನಿವೇಶಕ್ಕೆ ಹಾಗೂ ತನ್ನ ಅರಮನೆ ಸಾಮ್ರಾಜ್ಯದ ರಕ್ಷಣೆಗಾಗಿ ಸದಾ ಹಾತೊರೆಯುತ್ತಿದ್ದ. ಅಂತಹ ಹೊತ್ತಿನಲ್ಲಿ ಬಲಿಷ್ಠರಾಗಿದ್ದ ಸಿಖ್ಖ್

ಧರ್ಮಗಳ. ಒಂದು ಪಂಗಡವಾದ ಸಿಖ್ಖ್, ಸಿಕ್ಲಿಗರರು, ತಮ್ಮದೇ ಸ್ವಾವಲಂಬಿಗಳಾಗಿದ್ದುದರಿಂದ ಇವರ ಗುಂಪಿನ ಮೇಲೆ ವಿಶೇಷವಾದ ಒಲವು ರಣಜಿತ್‌ಸಿಂಗನಿಗೆ ಉಂಟಾಯಿತು. ಅಂದಿನಿಂದ ತನ್ನ ಸಾಮ್ರಾಜ್ಯದಲ್ಲಿ ಹಾಗೂ ನಾಲ್ಕು ಪ್ರದೇಶಗಳಲ್ಲಿ ಇವರಿಗೆ ಮುಕ್ತವಾದ ಅವಕಾಶ ಕಲ್ಪಿಸಿದ ವೃತ್ತಿ ಜೀವನಕ್ಕಾಗಿ ಅರಮನೆಯಲ್ಲಿಯೇ ಇಟ್ಟುಕೊಂಡು ಇವರ ಆಧಾರದ ಮೇಲೆ ನಂಬಿಗಸ್ಥರಾಗಿದ್ದರು. ತಮ್ಮ ಪ್ರಾಣ ಹೋದರು ಸತ್ಯ, ಪ್ರಾಮಾಣಿಕತೆ, ಸ್ವಾಭಿಮಾನದ ಸಂಕೇತದಿಂದ ಮೈಗೂಡಿಸಿಕೊಂಡಿದ್ದರಿಂದ ಸಿಕ್ಲಿಗರರು ರಣಜಿತ್‌ಸಿಂಗನ ಮೇಲೆ ನೇರ ಪ್ರಭಾವ ಬೀರಿದರು. ಹೀಗಾಗಿ ತನ್ನ ಸಾಮ್ರಾಜ್ಯದ ಬಗೆಗೆ ಒಳಿತು ಕೆಡುಕುಗಳ ಬಗ್ಗೆ ಯೋಚಿಸಿಕೊಂಡು ಸಿಕ್ಲಿಗರರು ಯುದ್ಧ ಸಾರಿದರೆ ಬೇಕಾಗುವ ಅನೇಕ ಶಸ್ತ್ರಾಸ್ತ್ರಗಳನ್ನು ತಯಾರಿಸಲು ಸಿಕ್ಲಿಗರರಿಗೆ ಸೂಚನೆ ನೀಡಿದರು. ಆಗ ಸಿಕ್ಲಿಗರರು ಪ್ರಾಮಾಣಿಕತೆ, ಶ್ರದ್ಧೆ ಶ್ರಮದ ಮೂಲಕ ಕೆಲಸ ಮಾಡಿ ತೋರಿಸಿದರು. ಕಬ್ಬಿಣದ ಸಲಾಕೆ, ಗುಂಡು ಖಡ್ಗ, ಭರ್ಚಿ, ಕುಡುಗೋಲು, ಹೀಗೆ ಯುದ್ಧಕ್ಕೆ ಬೇಕಾಗುವ ಎಲ್ಲಾ ಶಸ್ತ್ರಾಸ್ತ್ರಗಳನ್ನು ತಯಾರಿಸಿದರು. ಕಬ್ಬಿಣದ ಸರಪಳಿಗಳನ್ನು ತಯಾರಿಸಿ ಕೊಟ್ಟರು. ಕೈಕುಸುರಿ ಕೆಲಸದಿಂದಲೇ ಸಿಕ್ಲಿಗರರು ಮಾಡಿ ತೋರಿಸಿದ್ದರಿಂದ ಅವರನ್ನು ಸಂಪೂರ್ಣವಾಗಿ ತಮ್ಮ ಕೈ ವಶಕ್ಕೆ ತೆಗೆದುಕೊಂಡರು. ಯುದ್ಧದ ತಯಾರಿಕೆಗೆ ಬೇಕಾಗುವ ಎಲ್ಲಾ ಸಲಕರಣೆಗಳನ್ನು ಶಸ್ತ್ರಾಸ್ತ್ರಗಳನ್ನು ಸಂಪೂರ್ಣವಾಗಿ ತಿಳಿದುಕೊಂಡು ಬಹು ಶ್ರಮದಿಂದ ಹಗಲಿರುಳು ಕೆಲಸ ಮಾಡಿ ರಣಜಿತ್‌ಸಿಂಗ್‌ನ ಮುಂದೆ ಹಾಜರಾದರು. ಹೀಗಾಗಿ ಅವರು ಎಲ್ಲಾ ಶಸ್ತ್ರಾಸ್ತ್ರಗಳನ್ನು ತಯಾರಿಸಿ ಆಗಿನ ಕಾಲದ ಕಾರ್ಯ ನಿರ್ವಹಿಸುತ್ತಿದ್ದಾರೆ.

ಸಿಕ್ಲಿಗರರು ಪ್ರಾಚೀನವಾದ ತಮ್ಮ ಮೂಲ ವೃತ್ತಿಯಿಂದ ಕಬ್ಬಿಣದ ಕೆಲಸವನ್ನು ನಿರ್ವಹಿಸಿದ್ದರು. ತದನಂತರದಲ್ಲಿ ಹೈದ್ರಾಬಾದ್ ಸಂಸ್ಥಾನಗಳು ಆಡಳಿತ ನಿರ್ವಹಿಸುತ್ತಿದ್ದಾಗ ನಿಜಾಮನು ರಣಜಿತ್‌ಸಿಂಗನೊಂದಿಗೆ ಸ್ನೇಹ ಬೆಳೆಸಿಕೊಂಡು ಸ್ವಾತಂತ್ರ್ಯಗೊಳ್ಳುವ ಪೂರ್ವದಲ್ಲಿ ತನ್ನ ಸಂಸ್ಥಾನವನ್ನು ಮಾತ್ರವೈರಿಗಳಿಗೆ ಬಿಡಬಾರದೆಂಬ ಆಲೋಚನೆಯಿಂದ ತನ್ನೆಡೆಗೆ ಸೆಳೆದುಕೊಳ್ಳಲು ಯೋಚಿಸಿದರೂ ಸಾಧ್ಯವಾಗಲಿಲ್ಲ. ಆಗ ತನ್ನ ಸುತ್ತಮುತ್ತಲ ಆಕ್ರಮಣ ಮಾಡಲು ಸದಾ ಹೊಂಚು ಹಾಕಿ ಕುಳಿತಿದ್ದ ವಿರೋಧಿಗಳ ಹುಟ್ಟನ್ನು ಅಡಗಿಸಲು ನಿಜಾಮನು ತನ್ನ ಮೂಲ ಸಂಸ್ಕೃತಿ ಮರೆತು ರಣಜಿತ್‌ಸಿಂಗನ ಸಹಾಯ ಕೋರಿದ. ತನಗೆ ನಿಷ್ಠಾವಂತರಾದ ಸಶಸ್ತ್ರ ತಯಾರಿಸಿ ಕೊಡುವ ಜನಾಂಗ ಬೇಕೆಂದಾಗ ತನ್ನ ವಿಶ್ವಾಸಕ್ಕೆ ತೆಗೆದುಕೊಂಡಿದ್ದ. ಆ ರೀತಿ ನಡೆದುಕೊಂಡು ಮಾರ್ಗೋಪಾಯಗಳನ್ನು ತೋರಿಸಿದ ರಣಜಿತ್‌ಸಿಂಗ್ ಕೂಡಲೇ ಸಿಕ್ಲಿಗರರ ಒಂದು ಗುಂಪನ್ನು ನಿಜಾಮನ ಸಹಾಯಕ್ಕೆ ಕಳುಹಿಸಿದ ಮೇಲೂ ಸಿಕ್ಲಿಗರ ನಿಜಾಮನಿಗೆ ಬೇಕಾದ ಎಂದೂ ಕೂಡಾ

ಮುಗಿಯದಾದ ಕೆಲಸಕಾರ್ಯ ಹಾಗೂ ಸಶಸ್ತ್ರಗಳ ತಯಾರಿಕೆಯನ್ನು ಮಾಡಿಕೊಡಲು ಒಪ್ಪಿದರು. ನಿಜಾಮನು ಸಹಿತ ಎಂತಹ ಸಂದರ್ಭ ಬಂದರೂ ಸಿಕ್ಲಿಗರ ಸಮುದಾಯಕ್ಕೆ ಸಹಾಯ ಮಾಡಿಕೊಡಲು ಒಪ್ಪಿಕೊಂಡನು. ಇಂತಹ ಸಮುದಾಯದ ಸೇವಾ ನಿಷ್ಠೆಯನ್ನು ನೋಡಿ ನಿಜಾಮನು ಮೆಚ್ಚುಗೆ ಸೂಚಿಸಿದ.

ಸಿಕ್ಲಿಗರರು ನಿಜಾಮನಿಗೆ ಕಬ್ಬಿಣದ ಸರಪಳಿ ಸಾಲುಗಳನ್ನು ನಿರ್ಮಿಸಿ ಕೊಟ್ಟರು. ಯುದ್ಧಕ್ಕೆ ಬೇಕಾದ ತಲವಾರ, ಖಡ್ಗ, ಚಾಕು, ಚೂರಿಗಳು ಹಾಗೂ ಯುದ್ಧದ ಸಂದರ್ಭದಲ್ಲಿರಬೇಕಾದ ಹಲವು ಬಗೆಯ ಶಸ್ತ್ರಾಸ್ತ್ರಗಳನ್ನು ತಯಾರಿಸಿ ಕೊಟ್ಟು ನಿಜಾಮನಲ್ಲಿ ಶಹಾಬಸ್‌ಗಿರಿ ಪಡೆದುಕೊಂಡರು. ಸದಾ ಇವರ ರೀತಿ–ನೀತಿಗಳನ್ನು ಕಂಡು ಮರಳಿ ರಣಜಿತ್‌ಸಿಂಗನ ಹತ್ತಿರ ಸಿಕ್ಲಿಗರರನ್ನು ಮರಳಿ ಕಳುಹಿಸಿರಲಿಲ್ಲ. ತಮ್ಮಲ್ಲಿಯೂ ಉಳಿಸಿಕೊಂಡರೂ ಜೊತೆಗೆ ನಿಜಾಮನ ಈ ಪ್ರದೇಶದಲ್ಲಿ ಆಳ್ವಿಕೆ ಮಾಡುತ್ತಿದ್ದರಿಂದ ಸಹಜವಾಗಿ ತನ್ನಲ್ಲಿಯೂ ಇಂತಹ ಸೈನಿಕರಿದ್ದಾರೆಂದು ತೋರಿಸಲು ಇಟ್ಟುಕೊಂಡ ಆಗ ಒಮ್ಮೆ ಕರವಸೂಲಿ ಮಾಡಲು ತನ್ನ ಸಂಸ್ಥಾನದಲ್ಲಿ ಉಳಿಸಿಕೊಂಡ ಸಿಕ್ಲಿಗರರು ಬಹು ಗಾಂಭಿರ್ಯ ಕಟ್ಟುಪಾಡುಗಳನ್ನು ಹೊಂದಿ ಗಟ್ಟಿಯಾದ ಹೆಜ್ಜೆಯನ್ನು ತೆಗೆದುಕೊಂಡರು. ಕರ ತೆರಿಗೆ ವಸೂಲಿ ಮಾಡಲು ಮನೆ ಮನೆಯ ಬಾಗಿಲಿಗೆ ಹೋದಾಗ ತಮ್ಮಲ್ಲಿ ಏನಿದೆ ಎಷ್ಟಿದೆ ಅಷ್ಟನ್ನು ಸರಳವಾಗಿ ಕೊಟ್ಟರು.ಬೊಕ್ಕಸ ಖಾಲಿಯಾಗಬೇಕಿತ್ತು. ಖಾಲಿಯಾದ ನಿಜಾಮನ ಬೊಕ್ಕಸ ತುಂಬಿತು. ನಿಜಾಮ ಬಹಳಷ್ಟು ಖುಷಿ ಪಟ್ಟು ಯಾವುದೇ ಕೆಲಸ ನೀಡಿದರೂ ನಿರ್ವಹಿಸಿಕೊಂಡು ಬರುವರೆಂದು ಗುರುತಿಸಿಕೊಂಡನು. ಕೂಡಲೇ ಸಿಕ್ಲಿಗರರು ತಯಾರಿಸಿದ ಕಬ್ಬಿಣದ ಸಾಮಾನುಗಳ ಬಗ್ಗೆ ವಿಶೇಷವಾದ ಕಾಳಜಿ ವಹಿಸಿದರು. ಇವರ ದೇಹ ಆಕಾರ ನೋಡಿದ ಜನರು ಹೆದರಿ ಕರ ತೆರಿಗೆ ನೇರವಾಗಿ ತಂದು ಹಾಕುತ್ತಿದ್ದರು. ಇವರಲ್ಲಿ ಅಂತಹ ಶಕ್ತಿ ಇತ್ತು ಇದನ್ನು ಮನಗಂಡು ಕುಲಕಸುಬಾದ ಕಬ್ಬಿಣದ ಕೆಲಸದ ಜೊತೆಗೆ ಇಂತಹ ಕೆಲಸಗಳಿಗೂ ನಿಜಾಮ ಉಪಯೋಗಿಸಿಕೊಂಡು ಬಂದನು. ಇದನ್ನರಿತ ಎಲ್ಲಾ ಸಿಕ್ಲಿಗರರು ನಿಜಾಮನ ಆಶ್ರಯ ಪಡೆದುಕೊಂಡರು. ನಿಜಾಮನು ೧೯೪೮ ಸೆಪ್ಟಂಬರ್ ೧೭ ರಂದು ಸ್ವಾತಂತ್ರ್ಯಗೊಂಡ ಭಾರತ ದೇಶದಲ್ಲಿ ವಿಲೀನಗೊಳಿಸಿದ. ಇದರ ಲಕ್ಷಣವನ್ನು ಸಹ ಅರಿತ ಸಿಕ್ಲಿಗರರು ಸಹ ತಮ್ಮ ಜೀವನೋಪಾಯಕ್ಕಾಗಿ ಬೇಕಾಗುವ ಸ್ಥಳ ಹುಡುಕಲು ಪ್ರಯತ್ನಿಸಿದರು.

ಪಂಜಾಬ ಮೂಲಕ ಹೈದ್ರಾಬಾದಗೆ ಬರುವಾಗಲೇ ಸಿಖ್ಖ್ ಸಂಬಂಧಿಯವರೊಂದಿಗೆ ಗುರುತಿಸಿಕೊಂಡಿದ್ದರು. ಯಾವಾಗ ಇವರು ಸಿಕ್ಲಿಗರರು ಬೇರೆಯಾಗಿ ಒಡೆದು ಹೋದರು.

ಮಹಾರಾಷ್ಟ್ರದ ನಾಂದೇಡ, ಪುಣೆ, ಸೊಲ್ಲಾಪೂರ, ಕೊಲ್ಲಾಪೂರಕ್ಕೂ ಹರಿದು ಹಂಚಿ ಹೋದರು. ಇಲ್ಲಿ ಸಿಕ್ಲಿಗರರು ಎಂಬ ಗುಂಪು ಮತ್ತೊಂದಿದೆ. ಇವರು ಎಮ್ಮೆ ಬೋಳಿಸುವ ಸಿಕ್ಕಲಗಾರರು ಶೌಚಾಲಯಗಳನ್ನು ಸ್ವಚ್ಛಗೊಳಿಸುವರು. ಇವರು ಮೂಲತಃ ರಾಜಸ್ಥಾನದಿಂದ ಬಂದರು. ಮಹಾರಾಷ್ಟ್ರದ ಮೂಲಕ ಗದಗ, ಹುಬ್ಬಳ್ಳಿ ಪ್ರದೇಶದಲ್ಲಿ ನೆಲೆನಿಂತು ಇವರು ಬೇರೆ. ಹಾಗೇ ಸಿಖ್ಖ್ ಸಿಕ್ಲಿಗರರು ಬೇರೆ ಎಂಬುದನ್ನು ಅಧ್ಯಯನದ ಕ್ಷೇತ್ರಕಾರ್ಯಗಳ ಹಾಗೂ ವಿಧಿ-ವಿಧಾನಗಳ ಮೂಲಕ ತಿಳಿದುಕೊಳ್ಳಲಾಯಿತು. ಇದನ್ನು ಕೂಡಾ ಜನಸಮುದಾಯ ಸಿಕ್ಲಿಗರೆಂದು ಭಯ, ಭೀತಿಯಿಂದ ಹೈದ್ರಾಬಾದ್, ಮಹಾರಾಷ್ಟ್ರದ ಮೂಲಕ ಹರಿದು ಹಂಚಿ ಹೋದರು. ಆಗ ಈ ಸಮುದಾಯ ಸಣ್ಣ-ಪುಟ್ಟ ಕುಟುಂಬ ಗುಂಪುಗಳು ನೇರವಾಗಿ ಬೇರೆ ಬೇರೆ ಪ್ರದೇಶಗಳಿಗೆ ಹೋಗಿ ಅಲೆಮಾರಿ ವೃತ್ತಿ ಕೈಗೊಂಡರು. ಆ ಮೂಲಕ ತಮ್ಮ ಕಬ್ಬಿಣದ ಕೆಲಸ ಮುಂದುವರೆಸಿಕೊಂಡು ಬಂದಿರುವುದು ನಮಗೆ ಸ್ಪಷ್ಟವಾಗಿ ಕಂಡು ಬರುತ್ತದೆ. ಹೆಸರು ಒಂದೇಯಾಗಿದ್ದರೂ ಮಾಡುವ ವೃತ್ತಿ ಕುಲಕಸಬು ಮತ್ತು ಬದುಕಿನ ಕಟ್ಟು ಕಟ್ಟಳೆ, ನಿಯಮ ನಿರ್ಬಂಧ ಆಚಾರ ನಂಬಿಕೆಗಳು ಒಟ್ಟಾರೆ ಸಂಸ್ಕೃತಿಯ ಹಿನ್ನೆಲೆಯಲ್ಲಿ ಅವಲೋಕಿಸಿದಾಗ ಎರಡು ಸಮುದಾಯದ ಮೂಲವೇ ಬೇರೆ, ಬೇರೆಯಾಗಿ ಕಾಣುತ್ತದೆ. ಆ ಕಾರಣಕ್ಕಾಗಿ ಸಿಖ್ಖ್ ಹಿನ್ನೆಲೆಯುಳ್ಳ ಸಿಕ್ಲಿಗರು ಮಾಡುವ ಕುಲಕಸಬನ್ನು ಮಾತ್ರ ಗುರುತಿಸಲಾಗಿದೆ.

ಸಿಕ್ಲಿಗರು ಬಹುಶಃ ಇವರು ಪಟ್ಟ ಶ್ರಮ ಹೇಳತೀರದು. ಶ್ರಮಜೀವಿಗಳಾದಂತೆ ಮತ್ತ್ಯಾವ ಬುಡಕಟ್ಟು ಜನಾಂಗದಲ್ಲಿ ಸಿಗಲಿಕ್ಕಿಲ್ಲ. ಅಷ್ಟೊಂದು ಪ್ರಮಾಣದಲ್ಲಿ ಸಿಕ್ಲಿಗರರು ಪ್ರಮಾಣಿಕರಾಗಿದ್ದಾರೆ. ಈ ಸಿಕ್ಲಿಗರರು ಸಮುದಾಯವು ತನ್ನ ಕಬ್ಬಿಣದ ಕೆಲಸವನ್ನು ಮುಂದುವರೆಸಿಕೊಂಡು ಬಂದರು.

ಸಂಸಾರ ಮತ್ತು ಕುಲಕಸಬು

ಸಿಕ್ಲಿಗರರು ಬಹುಶ್ರಮಜೀವಿಗಳಾಗಿದ್ದರಿಂದ ಎಲ್ಲಾ ಅವಿಭಕ್ತ ಕುಟುಂಬಗಳಾಗಿ ಮಾರ್ಪಾಡು ಸಾಧ್ಯವಾಗಲಿಲ್ಲ. ತಾವು ದುಡಿಯಬೇಕು. ಸಂಸಾರ ನಿರ್ವಹಿಸಿಕೊಂಡು ಹೋಗಬೇಕೆಂಬ ಕಾರಣ - ದಿಂದಲೇ ಸಿಕ್ಲಿಗರರು ತಮ್ಮಲ್ಲಿ ಯಾವುದೇ ವ್ಯಕ್ತಿ ಮಗ ಆಗಲಿ. ಮಗಳಾಗಲಿ ಯಾರೇ ಆದರೂ ವಿವಾಹವಾದರೆ ಅಂದೇ ಆತನನ್ನು ಹೊರಗೆ ಹಾಕಿ ಬೇರೆ ಬಿಡಾರದ ಅಥವಾ ವಾಟರ್ ಮನೆಗಳನ್ನು ಕೊಡಿಸಿ ಜೀವನ ನಿರ್ವಹಿಸಲು ಹೇಳುತ್ತಾರೆ. ಅದನ್ನು ಕಂಡುಕೊಂಡ ಸಮುದಾಯ ಮತ್ತೇ ತಾವು ದುಡಿದು ಹೆಂಡತಿ ಮಕ್ಕಳನ್ನು ಸಾಕಬೇಕು. ಎಂಬ ಉತ್ಸಾಹ ಹೊಂದುತ್ತಾರೆ. ಆ ಉತ್ಸಾಹ ದುಡಿಯಬೇಕೆಂಬ ಶ್ರದ್ಧೆ ಛಲಗಳನ್ನು ಕಂಡು ಮೆಚ್ಚಬೇಕು. ಆಗ ಇವರನ್ನು

ಹೊರಹಾಕಬೇಕು ಎಂದಾಗ ಎಲ್ಲರೂ ಕೂಡಾ ಬಟ್ಟೆ -ಬರೆ ಆಹಾರ ಅಡಿಗೆ ಸಾಮಾನುಗಳನ್ನು ಇಂತಹ ಯಾವುದೇ ವಸ್ತುಗಳನ್ನು ಅವರು ಕೊಡಲು ಮುಂದೆ ಬರಲು ಒಪ್ಪುವುದಿಲ್ಲ. ಇದರಿಂದ ಸಂತಸವನ್ನು ಕಂಡೇ ಹಿರಿಯರು ಪಂಗಡದ ಹಾಗೂ ಸಮುದಾಯದ ಹಿರಿಯರು ಸೇರಿಕೊಂಡು ತನ್ನ ವೃತ್ತಿ ಕುಲಕಸಬುಗಳಿಗೆ ಬೇಕಾದ ಸಲಕರಣೆಗಳನ್ನು ಕೊಡುತ್ತಾರೆ. ಈ ಕೆಲಸಗಳನ್ನು ಕೊಡುವ ಮೂಲಕ ಕುಲಕಸಬು ಮುಂದುವರೆಸಿಕೊಂಡು ಹೋಗಬೇಕು. ಯಾವ ಇತರ ಕೆಲಸ ಕಾರ್ಯ ಕೈಗೊಳ್ಳಬಾರದು. ಆ ಕೆಲಸ ಕೈಗೊಂಡರೆ ತಮ್ಮ ಜೀವನ ಹಾಳು ಎಂದು ಬಗೆಯುತ್ತಾರೆ. ಆ ಮೂಲಕ ತಮ್ಮ ಜನಾಂಗದ ಯುವಕರಲ್ಲಿ ಜವಾಬ್ದಾರಿ ಹೆಚ್ಚಿಸುವ ಕಾರ್ಯ ಕೈಗೊಳ್ಳುತ್ತಾರೆ. ಹಗಲಿರುಳು ಇದೇ ಚಿಂತನೆಗೆ ತೊಡಗಿಕೊಂಡು ನಿಲ್ಲಬೇಕಾದ ಅನಿವಾರ್ಯತೆಯಿದೆ. ಹಿರಿಯರು ಕೊಟ್ಟ ಕುಲಕಸಬುಗಳ ಸಾಮಾನುಗಳು ಹಿಡಿದುಕೊಂಡು ಹೊರ ಬರುತ್ತಾರೆ. ತಮ್ಮ ಮೂಲಕಸಬು ನಿರ್ವಹಿಸಿಕೊಂಡು ಹೋಗುತ್ತಾರೆ.

ಕಬ್ಬಿಣದ ಕಚ್ಚಾ ಸಾಮಗ್ರಿಗಳ ಸಂಗ್ರಹ

ಕಬ್ಬಿಣದ ಕಚ್ಚಾ ಸಾಮಗ್ರಿಗಳನ್ನು ಎಲ್ಲಿಯೇ ಇರಲಿ ಅವನ್ನೆಲ್ಲಾ ತಂದುಕೊಳ್ಳುವರು. ಸಿಕ್ಲಿಗರರಿಗೆ ಮುಖ್ಯವಾಗಿ ಬೇಕಾದದ್ದು ಕಬ್ಬಿಣವಾಗಿದೆ. ಕಬ್ಬಿಣವನ್ನು ತರಲು ಅಂಗಡಿಗಳಿಗೆ ಹೋಗುವರು. ಅಲ್ಲಿಯೇ ತನಗೆ ಬೇಕಾದ ಕಬ್ಬಿಣದ ಕಚ್ಚಾಸಾಮಗ್ರಿಗಳನ್ನು ತರುತ್ತಾರೆ. ಅಲ್ಲದೇ ಬ್ಯಾರಲ್‌ಗಳು, ಡಾಂಬರ್ ಬ್ಯಾರಲ್‌ಗಳು, ನೀರಿನ ಬ್ಯಾರಲ್‌ಗಳು, ಎಣ್ಣೆಯ ಬ್ಯಾರಲ್‌ಗಳು, ತಗಡು-ಕಬ್ಬಿಣದಿಂದ ಕೂಡಿದ್ದರೆ ಅವನ್ನೆಲ್ಲಾ ಸಂಗ್ರಹಿಸಿಕೊಂಡು ಬಿಡುತ್ತಾರೆ ಕಚ್ಚಾಸಾಮಗ್ರಗಳಾದ ಕಬ್ಬಿಣದ ಸಾಮಾನುಗಳನ್ನು ಸಂಗ್ರಹಿಸಿಕೊಂಡು ನಂತರ ತಮ್ಮ ಕೈಚಳಕ ಹಾಗೂ ಶ್ರಮದ ಮೂಲಕ ಎಲ್ಲಾ ವಸ್ತುಗಳ ಸಂಗ್ರಹ ಕಾರ್ಯ ಪೂರ್ಣಗೊಳಿಸುತ್ತಾರೆ.

ಕಬ್ಬಿಣದ ಕೆಲಸಗಳನ್ನು ಮಾಡುವಾಗ ತರಬೇಕಾದ, ತಮಗೆ ಸರಳವೆನಿಸಿದ ವಸ್ತು-ಸಾಮಗ್ರಿಗಳನ್ನು ಮೊದಲು ಕೊಡುತ್ತಾರೆ. ಇದರಿಂದ ಶ್ರಮವಹಿಸಿ ಮಾಡಿದ ಕೂಲಿಯು ಒಮ್ಮೊಮ್ಮೆ ಬರುವುದಿಲ್ಲ. ಅಂತಹ ವೇಳೆಯಲ್ಲಿ ಸಿಕ್ಲಿಗರರ ಜನಾಂಗ ಊಟಕ್ಕಾಗಿ ಪರದಾಟವನ್ನು ನಡೆಸಬೇಕಾದ ಸಂದಿಗ್ಧ ಹೊತ್ತಿನಲ್ಲಿ ಜೀವನ ಕಳೆಯುತ್ತಾರೆ. ಮೊದಲು ಕಬ್ಬಿಣದ ಕಚ್ಚಾಸಾಮಗ್ರಿಯನ್ನು ತೆಗೆದುಕೊಂಡು ಕೆಲಸ ನಿರ್ವಹಿಸುತ್ತಾರೆ. ಕಚ್ಚಾಸಾಮಗ್ರಿಗಳ ಮೂಲಕ ಪಕ್ಕಾ ಸಾಮಗ್ರಿಗಳ ಕೆಲಸ ಮುಗಿಸುವ ಕ್ರಾಂತಿಕಾರಕ ಹೆಜ್ಜೆ ಇವರದಾಗಿದೆ. ಮತ್ತು ಅನುಕರಣೀಯವಾಗಿದೆ. ಹಲವು ಸಂದಿಗ್ಧ ಹೊತ್ತಿನಲ್ಲಿ ಸಹಿತ ಹೊಸ ಆವಿಷ್ಕಾರಗಳ ಮೂಲಕ ಸಿಕ್ಲಿಗರರು ಕಚ್ಚಾ ಸಾಮಗ್ರಿಯನ್ನೇ ತಮ್ಮ

ಕುಲಕಸಬುಗಳಿಗೆ ಬಳಸಿಕೊಂಡು ಬರುತ್ತಿರುವುದು ಇಂದಿನ ವೈಜ್ಞಾನಿಕ ಯುಗದಲ್ಲಿ ಸವಾಲಾಗಿ ಕಂಡು ಬರುತ್ತವೆ.

ಸಿಕ್ಲಿಗರ ಜನಾಂಗ ಚಳಿ ಮಳೆ, ಗಾಳಿ, ಬಿಸಿಲು ಎನ್ನದೇ ತನ್ನ ಮೂಲಕಸಬುಗಳ ಕಡೆ ಗಮನ ನೀಡುತ್ತಾರೆ. ಯಾರು ಕೂಡಾ ಮಧ್ಯ ಮಾಂಸ ಸೇವಿಸದೇ ತಮ್ಮ ಕಸಬನ್ನು ಪೂಜ್ಯಬಾವನೆಯಿಂದ ನೋಡುತ್ತಾರೆ. ಸರಳವಾದ ಜೀವನವನ್ನು ಅರಿತುಕೊಂಡು ಆ ಮಾರ್ಗವನ್ನು ಸೇರಿಕೊಂಡಿದ್ದಾರೆ. ಎಲ್ಲಾ ಕಡೆ ಸಿಕ್ಲಿಗರ ಸಮುದಾಯವು ವೃತ್ತಿ ದುಡಿಮೆ ಇಲ್ಲದೇ ಬದುಕನ್ನು ಕಾಣಲು ಸಾಧ್ಯವೇ ಆಗುತ್ತಿಲ್ಲ. ಅಷ್ಟೊಂದು ಶ್ರಮಜೀವಿಯೆಂಬುದನ್ನು ಗಟ್ಟಿಯಾಗಿ ಪ್ರತಿಪಾದಿಸಿದ್ದಾರೆ.

ಹಂದಿ ಸಾಕಾಣಿಕೆ

ಕಬ್ಬಿಣದ ಕೆಲಸಗಳನ್ನು ಮೂಲ ವೃತ್ತಿ ಕುಲಕಸಬುಗಳನ್ನಾಗಿಸಿಕೊಂಡಿದ್ದಾರೆ. ಜೊತೆ ಜೊತೆಗೆ ಹಂದಿಯನ್ನು ತಮ್ಮ ಜೀವನದ ನಿರ್ವಹಣೆಗಾಗಿ ಹಂದಿಯನ್ನು ಬೇಟೆಯಾಡುತ್ತಾರೆ. ಹಂದಿಯನ್ನು ತಂದು ಅವುಗಳನ್ನು ಮೇಯಿಸಿ ಮಾರಾಟ ಮಾಡುವ ಪ್ರವೃತ್ತಿ ಹೊಂದಿದ್ದಾರೆ. ಹಂದಿಯನ್ನು ಕೋಯ್ದು ತಮ್ಮ ಸಮುದಾಯಗಳಲ್ಲಿ ಹಂಚಿಕೊಂಡು ಕಾರ್ಯ ನಿರ್ವಹಿಸಬೇಕು ಆ ಮೂಲಕ ತಮ್ಮ ಅಸ್ತಿತ್ವ ಉಳಿಸಿಕೊಳಬೇಕೆಂದು ಹಂದಿ ಸಾಕಾಣಿಕೆಯ ಕೆಲಸವನ್ನು ತೆಗೆದುಕೊಂಡು ತಾವೇ ಸ್ವತಃ ಕಾರ್ಯ ನಿರ್ವಹಿಸುತ್ತಿರುವುದು ನಮಗೆಲ್ಲಾ ತಿಳಿದ ಸತ್ಯ ಸಂಗತಿಯಾಗಿದೆ.

ಈ ಜನಾಂಗವು ತಮ್ಮ ಜೀವನಕ್ಕೆ ಬೇಕಾದ ಅವಶ್ಯಕತೆಗನುಗುಣವಾಗಿ ದುಡಿಯಬೇಕಾದ ಅನಿವಾರ್ಯತೆಯಿದೆ. ಅವರು ಹೊಟ್ಟೆಪಾಡಿಗಾಗಿ ಯಾವುದೇ ಕಸುಬನ್ನು ಮಾಡಬೇಕಾಗಿತ್ತಾದರೂ ಸಹಿತ ತಮ್ಮ ಮೂಲ ಪರಂಪರೆಯಿಂದ ಬಂದ ಕಬ್ಬಿಣದ ಕೆಲಸವನ್ನೇ ಮುಂದುವರೆಸಿಕೊಂಡು ಬರುತ್ತಿರುವುದನ್ನು ಕಾಣಬಹುದಾಗಿದೆ. ಅವರ ಮೂಲಕಸಬು ಯುದ್ಧದಲ್ಲಿ ಸಹಾಯ ಮಾಡುವುದಾಗಿತ್ತು. ನಂತರದಲ್ಲಿ ಕಬ್ಬಿಣದ ಕೆಲಸವನ್ನು ಕೈಗೊಳ್ಳುವುದಾಗಿತ್ತು. ಮೊದಲು ಸೈನ್ಯದಲ್ಲಿದ್ದರು. ಅಡವಿಯಲ್ಲಿ ಉರುವಲು ಕಟ್ಟಿಗೆ, ಕಾಡು ಹಣ್ಣು, ಹಸಿರು ಹುಲ್ಲು ತಂದು ಪೇಟೆಯಲ್ಲಿ ಮಾರುತ್ತಿದ್ದರು. ಕೆಲವರು ದನಕರುಗಳಿಗೆ ಬೇಕಾಗುವ ನಾಲುಗಳನ್ನು ತಯಾರಿಸಿ ಜೀವನ ನಿರ್ವಹಿಸುವರು. ಇತ್ತೀಚೆಗೆ ಈ ಜನರಲ್ಲಿ ಅನೇಕರು ಹಣ್ಣು ಹಂಪಲ ಮಾರುವ ಉದ್ಯೋಗ ಕೈಗೊಂಡಿದ್ದಾರೆ. ಯುವಜನಾಂಗದ ಹುಡುಗರು ಕಟ್ಟಡಗಳಿಗೆ ಬಣ್ಣ ಹಚ್ಚುವ ಕೆಲಸ

ಕೈಗೊಂಡಿದ್ದಾರೆ. ಕೆಲವೊಂದು ತರುಣರು ಆಟೋ ಚಾಲಕರಾಗಿದ್ದಾರೆ. ಕಾರಖಾನೆಗಳಲ್ಲಿ ಜೀವನ ನಿರ್ವಹಣೆ ಕೂಲಿ ಕೆಲಸಗಳಲ್ಲಿ ಮಗ್ನರಾಗಿದ್ದಾರೆ.

ಸಿಕ್ಲಿಗರ ಜನಾಂಗ ಮಾತ್ರ ಇಷ್ಟೆಲ್ಲಾ ಕೆಲಸಕಾರ್ಯಗಳನ್ನು ಕೈಗೊಂಡಿದ್ದು, ಹೇಳಿಕೊಳ್ಳಲು ಮಾತ್ರ ಸಾಧ್ಯವಾಗಿದೆ. ಅವರು ಸಂಪೂರ್ಣವಾಗಿ ಗಟ್ಟಿಯಾದ ಕೆಲಸವನ್ನು ಹೆಚ್ಚು ಜನ ಹೊಂದಿದ್ದಾರೆ. ಕಬ್ಬಿಣದಂತಹ ಕಠಿಣ ಕೆಲಸಗಳಲ್ಲಿ ಕೈಗೊಂಡಿದ್ದು, ಅವರಷ್ಟು ಬಲಿಷ್ಟ ಹಾಗೂ ಬಲಶಾಲಿಗಳಾದ ಜನಾಂಗದಂತೆ ಬೇರೆ ಯಾರೂ ಇಲ್ಲ. ಕರ್ನಾಟಕ ರಾಜ್ಯದ ೨೯ ಜಿಲ್ಲೆಗಳಲ್ಲಿ ಹಲವು ತರಹದ ಕಸಬುಗಳನ್ನು ಕೈಗೊಂಡಿದ್ದಾರೆ. ಹಾಗೇ ಕಬ್ಬಿಣದ ಕೆಲಸವನ್ನು ನಿರ್ವಹಿಸುವವರೇ ಇಲ್ಲಿ ಅಧಿಕವಾಗಿದ್ದಾರೆ.

ಜೀವನ ಸಾಗಿಸಲು ಪ್ರತಿಯೊಂದು ದಿನಕ್ಕಾಗಿ ಕಾಯುತ್ತಾರೆ. ಕಾಯಲೇಬೇಕಾದ ಅನಿವಾರ್ಯತೆಯಿದೆ. ಉಳ್ಳವರ ಮತ್ತು ಶ್ರೀಮಂತರ ಹತ್ತಿರ ಕೆಲಸಕ್ಕೆ ಹೋಗಬೇಕು. ನಿಗದಿಪಡಿಸಿದ ಸಂಭಾವನೆಗಾಗಿಯೇ ಕೂಲಿಮಾಡುವುದು, ಶ್ರಮವಹಿಸಿ ದುಡಿಯಬೇಕಾಗಿದೆ. ನಿರಂತರವಾಗಿ ಅಲೆಮಾರಿ ವೃತ್ತಿ ಜೀವನ ನಡೆಸಿಕೊಂಡು ಬಂದಿರುವುದರಿಂದ ಬೇರೆ ಬೇರೆ ಕಡೆಗೆ ಹೋಗಿ ಕಾಲ ಕಳೆಯುತ್ತಿದ್ದಾರೆ. ಹೊಟ್ಟೆಪಾಡಿಗಾಗಿ ತಮ್ಮ ಹಸಿವನ್ನು ತೀರಿಸಿಕೊಳ್ಳಲು ಅವರು ಶ್ರಮವಹಿಸಿ ದುಡಿಯುವ ರೀತಿ ನೋಡಿದರೆ ಕ್ಷೇತ್ರಕಾರ್ಯದಲ್ಲಿ ಆಶ್ಚರ್ಯವಾಗುತ್ತದೆ. ನನಗೆ ಅಷ್ಟೇ ಚಿಂತಾಜನಕವಾದ ಸ್ಥಿತಿ ನೋಡಿ ಮರುಕ ಉಂಟಾಗಿದೆ. ನಾನು ಪ್ರತಿಯೊಂದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಹೋದಾಗ ಅನೇಕ ಹಿರಿಯರನ್ನು ಕಿರಿಯರನ್ನು ಎಲ್ಲರನ್ನೂ ಸಮಾನವಾಗಿ ನೋಡಿ ಮಾಹಿತಿ ಕೇಳುವಾಗ ತಮ್ಮ ವೃತ್ತಿ ಕುಲಕಸಬುಗಳನ್ನು ಕುರಿತು ಬಹಳ ಆಪ್ತವಾಗಿ ಹೇಳುತ್ತಾರೆ. ಭಿಕ್ಷೆ ಬೇಡುವ ಪರಿಪಾಠ ಹಾಕಿಕೊಳ್ಳದೇ ಇರುವುದು ಸೋಜಿಗವಾಗಿದೆ. ಇಂತಹ ಬುಡಕಟ್ಟು ಜನಾಂಗಗಳನ್ನು ಸಾಕಷ್ಟು ಬಾರಿ ನೋಡಿದರೂ ಸಿಕ್ಲಿಗರ ಜನಾಂಗದಂತಹ ಶ್ರಮಜೀವಿ ಜನಾಂಗವನ್ನು ಮಾತ್ರ ನೋಡಿಲ್ಲ. ಉತ್ತರ ಕನಾಟಕದ ಜಿಲ್ಲೆಗಳಲ್ಲಿ ಹಲವು ಬಗೆಯಿಂದ ಉತ್ತಮವಾದ ಜೀವನ ನಿರ್ವಹಣೆ ಹೊಂದಿದ್ದಾರೆ. ಮೈಸೂರು, ಬೆಂಗಳೂರು ಪ್ರದೇಶದಲ್ಲಿನ ಜನಸಮುದಾಯ ಜನಾಂಗವೂ ಸಹಿತ ಭಿನ್ನವಾಗಿದ್ದಾರೆ. ಉತ್ತರ ಕರ್ನಾಟಕದಲ್ಲಿ ಹಾಗೇ ಹೈದ್ರಾಬಾದ್ ಕರ್ನಾಟಕದಲ್ಲಿ ವಾಸಿಸುವ ಜನಾಂಗ ಆಯಾ ಪ್ರದೇಶದ ಮಹತ್ವವನ್ನು ಎತ್ತಿ ಹಿಡಿಯುವ ಕೆಲಸ ಮಾಡಿದ್ದಾರೆ.

ಪ್ರಾದೇಶಿಕವಾಗಿ ಬೇಕಾಗುವ ಕಬ್ಬಿಣದ ಕೆಲಸವನ್ನು ನಿರ್ವಹಿಸಿಕೊಂಡು ಬರುತ್ತಾರೆ. ಗ್ರಾಮೀಣ ಪ್ರದೇಶಗಳಿಗೆ ಬೇಸಿಗೆಯಂತಹ ಸಂದರ್ಭದಲ್ಲಿ ಹೋಗುತ್ತಾರೆ. ಕೃಷಿ ಉಪಕರಣಗಳಿಗೆ ಸಂಬಂಧಿಸಿದಂತೆ ಚಕ್ಕಡಿಯಾಗಲಿ, ಕುಂಟಿಯ ಕುಡ, ಖುರಿಗೆಯ ಹಲ್ಲು, ಜೋಳ ಕೊಯ್ಯುವ ಕುಡಗೋಲು, ಕುಯಿತಾ ಮುಂತಾದ ಕಬ್ಬಿಣದ ಕೆಲಸವನ್ನು ಮಾಡಿ ಹೊಸ ಹೊಸ ಉಪಕರಣಗಳನ್ನು ತಯಾರಿಸುತ್ತಾರೆ. ದಿನನಿತ್ಯದ ಗೃಹ ಬಳಕೆಗೆ ಅತ್ಯವಶ್ಯಕವಾಗಿ ಬೇಕಾದ ಸಲಕರಣೆಗಳಾದ ಈಳಿಗೆ, ಬತಾಯಿ, ಕಬ್ಬಿಣದ ಬುಟ್ಟಿ ಹಲವು ಬಗೆಯ ಸಾಮಾನುಗಳನ್ನು ತಯಾರಿಸಿಕೊಂಡು ಮಾರುವ ಈ ಅಲೆಮಾರಿ ಸಿಕ್ಲಿಗರರು ವಿಶಿಷ್ಟವಾದ ಕಲೆಯಾಗಿದೆ. ತಾವು ತಯಾರಿಸಿದ ಸಲಕರಣೆಗಳನ್ನು ತೆಗೆದುಕೊಂಡು ಹೋಗಿ ಸುತ್ತ-ಮುತ್ತಲ ಹಳ್ಳಿ-ನಗರ ಜಿಲ್ಲೆಯಲ್ಲಿ ನಡೆಯುವ ಸಂತೆಗಳಿಗೆ ಮಾರಾಟ ಮಾಡುತ್ತಾರೆ. ಅಲ್ಲದೇ ಕಬ್ಬಿಣದ ಅಂಗಡಿಗಳಿಗೆ ಸಗಟು ಖರೀದಿಗಾಗಿ ತಯಾರಿಸಿ ಕೊಡುತ್ತಾರೆ. ಶ್ರಮಪಟ್ಟು ದುಡಿಯಬೇಕು ಅದರ ಲಾಭ ಮಾರಾಟ ಮಾಡುವವನಿಗೆ ಎರಡರಷ್ಟು ಲಾಭ ಹೊಂದಲಾಗುವುದು. ಬೆಂಗಳೂರು, ಮೈಸೂರು, ಕಡೆ ಎಳೆನೀರು ಕೊಚ್ಚಲು ಮಚ್ಚನ್ನು ತಯಾರಿಸುತ್ತಾರೆ. ಸೀಜನ್ನಿನ ಪ್ರಕಾರ ಬೇಸಿಗೆಯ ಸಂದರ್ಭದಲ್ಲಿ ದ್ರಾಕ್ಷಿಹಣ್ಣುಗಳ ಗೊಂಚಲುಗಳನ್ನು ಕತ್ತರಿಸಲಿಕ್ಕೆ ಕತ್ತರಿ ತಯಾರಿಸುತ್ತಿರುವುದು ಕಂಡು ಬಂದಿತು. ಸಿಕ್ಲಿಗರನು ಒಂದು ಕತ್ತರಿಗೆ ಐದು ರೂಪಾಯಿಯಂತೆ ಅಂಗಡಿಗೆ ಮಾರಿದರೆ ಅಂಗಡಿಯವನು ಗ್ರಾಹಕರಿಗೆ ಹದಿನೈದರಿಂದ ಇಪ್ಪತ್ತು ರೂಪಾಯಿಗಳಿಗೆ ಮಾರಾಟ ಮಾಡುತ್ತಾನೆಂದು ತಿಳಿದು ಬರುತ್ತದೆ.

ಸಿಕ್ಲಿಗರರು ತುಂಬಾ ಶ್ರಮ ಜೀವಿಗಳು. ಕಬ್ಬಿಣದ ಹಳೆಯ ಬ್ಯಾರಲ್‌ಗಳನ್ನು ಖರೀದಿಸಿ ತಂದು ಕಬ್ಬಿಣದ ಸಾಮಾನುಗಳನ್ನು ಬೆಂಕಿಯಲ್ಲಿ ಬೆಂದಿಸಿ ತಮಗೆ ಬೇಕಾದ ಸಾಮಾನುಗಳನ್ನು ತಯಾರಿಸುತ್ತಾರೆ. ಕಬ್ಬಿಣದ ತಗಡು ಟಿಣ್, ಸೀಟುಗಳು, ಒಂದು ಕಡೆಯಾದರೆ ಗ್ರಾಮೀಣ ಪ್ರದೇಶದ ಜನರಿಗೆ ಕಬ್ಬಿಣದ ರಥವನ್ನು .ಕಾಂಕ್ರೀಟ್ ಕಲೆಸುವ ಮಸಿನ್‌ಗಳನ್ನು ತಯಾರಿಸುತ್ತಾರೆ. ಆರ್ಡರ್ ಪಡೆದು ತಿಂಗಳವರೆಗೂ ಶ್ರಮಪಟ್ಟು ತಯಾರಿಸುವರು. ಅದಕ್ಕೆ ಹಾಕಿದ ಖರ್ಚನ್ನು ಬಿಟ್ಟು ಬರುವ ಲಾಭ ಒಂದು ಸಾವಿರದಿಂದ ಸಾವಿರದ ಐದುನೂರು ರೂಪಾಯಿಗಳು ಮಾತ್ರ ದೊರಕುತ್ತದೆ. ಗಟ್ಟಿಮುಟ್ಟಾದ ಇವರ ಶ್ರಮಕ್ಕೆ ಪರಿಹಾರ ಮಾತ್ರ ಶೂನ್ಯವಾಗಿದೆ. ಇದನ್ನು ಸ್ಪಷ್ಟವಾಗಿ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗುಲ್ಬರ್ಗಾದ ನವಲಸಿಂಗ್ ತಂದೆ ಗೋಪಾಲಸಿಂಗ್ ಹೇಳುತ್ತಾರೆ.

ಪ್ರಾದೇಶಿಕವಾಗಿ ತಯಾರಿಸುವ ವಸ್ತುಗಳು ಭಿನ್ನತೆಯಿಂದ ಕೂಡಿರುತ್ತವೆ. ಹಳೆಯ ಎಣ್ಣೆ ಬ್ಯಾರಲುಗಳು ನಾಲ್ಕುನೂರರಿಂದ ಐದುನೂರರವರೆಗೆ ಖರೀದಿ ತೆಗೆದುಕೊಳ್ಳುತ್ತಾರೆ. ಉತ್ತರ ಕರ್ನಾಟಕಕ್ಕೆ ಸಂಬಂಧಿಸಿದಂತೆ ಈಳಿಗೆ ಬತಾಯಿ, ಕಡಾಯಿ, ಕುಡಗೋಲು, ಸೇರು ಅಲ್ಲದೇ ರಥವನ್ನು ಕೂಡಾ ಹೇಳಿ ಮಾಡಿಸಿದರೆ ಮಾಡುತ್ತಾರೆ. ಆದರೆ ಬೆಂಗಳೂರು ಮತ್ತು ಮೈಸೂರು ಪ್ರಾಂತಗಳಲ್ಲಿ ಮುಖ್ಯವಾಗಿ ಏಳನೀರು ಕೊಚ್ಚಲು ಮಚ್ಚುಗಳನ್ನು ತಯಾರಿಸುತ್ತಾರೆ. ಉಳಿದಂತೆ ಈಳಿಗೆ ಬತಾಯಿ ಸಾಮಾನ್ಯವಾಗಿದೆ. ಬಿಜಾಪೂರ, ಗದಗ, ಸಂಬಂಧಪಟ್ಟಂತೆ ದ್ರಾಕ್ಷಿ ಹಣ್ಣುಗಳನ್ನು ಕಟ್ಟು ಮಾಡಲು ಕತ್ತರಿಯನ್ನು ತಯಾರಿಸುತ್ತಾರೆ.ಹೀಗೆ ಆಯಾ ಪ್ರಾದೇಶಿಕ ಹಿನ್ನೆಲೆಯೊಳಗೆ ಮಹತ್ವ ಇರುವಂತಹ ವಸ್ತುಗಳನ್ನು ಮಾರಾಟಕ್ಕಾಗಿ ತಯಾರಿಸುವದನ್ನು ಕಾಣುತ್ತೇವೆ.

ಬೀದರ್ ಜಿಲ್ಲೆಯ ಔರಾದ್, ಬೀದರ್, ಹುಮನಾಬಾದ್, ಭಾಲ್ಕಿ, ಮುಂತಾದ ತಾಲೂಕುಗಳಲ್ಲಿ ಸಿಕ್ಲಿಗರರು ತಮ್ಮ ವೃತ್ತಿ ಕಸಬುಗಳನ್ನು ಮಾಡಿಕೊಂಡು ನೆಲೆನಿಂತಿದ್ದಾರೆ. ಹಾಗೇ ಗುಲ್ಬರ್ಗಾ ಜಿಲ್ಲೆಯ ಯಾದಗಿರಿ ಹಾಗೂ ಕಲಬುರ್ಗಿ ನಗರದಲ್ಲಿಯೇ ಸಿಕ್ಲಿಗರರು ಸೇರಿದ್ದಾರೆ. ಇವರು ಅನೇಕ ಬಗೆಯ ವಸ್ತುಗಳನ್ನು ಹಲವಾರು ರೀತಿಯಿಂದ ತಯಾರಿಸುವ ಕುಟುಂಬಗಳು ವಾಸವಾಗಿದ್ದಾರೆ. ಇವರೆಲ್ಲರೂ ಮೂಲ ಕಸಬುಗಳನ್ನು ವೃತ್ತಿಯಾಗಿರಿಸಿಕೊಂಡಿದ್ದಾರೆ. ಹಲವಾರು ಬಗೆಯ ವೃತ್ತಿಯಲ್ಲಿ ಕಬ್ಬಿಣದ ಮೂಲ ಉದ್ದೇಶಗಳನ್ನು ಹೊಂದಲಾಯಿತು. ಸಣ್ಣಪುಟ್ಟ ವಸ್ತುಗಳನ್ನು ಮಾರಾಟ ಮಾಡುತ್ತಾರೆ. ಕಲಬುರ್ಗಿಯ ಪಂಚಶೀಲ ಶಕ್ತಿನಗರ ಕಾಲೋನಿಯಲ್ಲಿ ಸಾಕಷ್ಟು ಕುಟುಂಬಗಳು ಸಿಕ್ಲಿಗರರು ಇದ್ದಾರೆ.

ಬಿಜಾಪುರ, ಬೆಳಗಾಂವ, ಗದಗ, ಹುಬ್ಬಳ್ಳಿ, ಶಿಗ್ಗಾಂವ ಹಲವಾರು ಜಿಲ್ಲೆಗಳಲ್ಲಿ ಕಬ್ಬಿಣದ ಕೆಲಸವನ್ನು ಮಾಡುತ್ತಾ ಅಲೆಮಾರಿ ಜೀವನ ಕೈಗೊಂಡು ಅಲೆಮಾರಿ ವೃತ್ತಿ ಜೀವನವನ್ನೇ ಹೊಂದಿದ್ದಾರೆ. ಮೈಸೂರು ಜಿಲ್ಲೆಯಲ್ಲಿ ಕೂಡಾ ಇವರು ಸಹಿತ ತಮ್ಮ ವೃತ್ತಿ ಕುಲಕಸಬನ್ನು ಹೊಂದಿರುವರು. ಪಂಜಾಬ, ಲಾಹೋರ್, ಕಾಶ್ಮೀರ, ಪೇಶಾವರ, ಕಾಗರಾ, ಬೆಂಗಳೂರು, ಮೈಸೂರು ಕಡೆಗಳಲ್ಲಿ ಸಿಕ್ಲಿಗರರು ಜೀವಿಸುತ್ತಿದ್ದಾರೆ. ಉತ್ತರಭಾರತದಿಂದ ದಕ್ಷಿಣಭಾರತಕ್ಕೆ ವಲಸೆ ಬಂದ ಬಗ್ಗೆ ಇನ್ನೊಬ್ಬ ಮಾಹಿತಿದಾರ ಬೀರುಸಿಂಗ್ ಬೀದರ್ ಜಿಲ್ಲೆಯಲ್ಲಿ ಸರ್ಕಾರಿ ನೌಕರರಾಗಿ ಕೆಲಸ ಮಾಡುತ್ತಿದ್ದ ವ್ಯಕ್ತಿಯನ್ನು ಸಂಪರ್ಕಿಸಿದಾಗ ಆತನು ನೀಡಿದ ಮಾಹಿತಿ ಇದೇ ಪ್ರಕಾರವಾಗಿದೆ. ಈತನು ಸಿಕ್ಲಿಗರರ ಸಮಾಜದಲ್ಲಿ 'ಡಿ' ಗ್ರೂಪ್ ನೌಕರನೆಂದು ಕಾಣಿಸಿಕೊಂಡ ಒಬ್ಬನೇ ಒಬ್ಬ ವ್ಯಕ್ತಿಯಾಗಿದ್ದಾನೆ ಈತನು ಕೂಡಾ ಸ್ಥಿತಿವಂತನಲ್ಲ. ಬೀದರ್ ಸರ್ಕಾರಿ ವಸತಿ ಗೃಹದಲ್ಲಿ

ವಾಸವಾಗಿದ್ದಾನೆ. ಅಲ್ಲದೇ ಕರ್ನಾಟಕದಲ್ಲಿ ಸರ್ಕಾರಿ 'ಡಿ'ಗ್ರೂಪ್ ನೌಕರ ಸಮಾಜದ ಸಮಾಜದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಬೆಂಗಳೂರು 'Sikkh Welfare Association' ಎಂಬ ಸಂಸ್ಥೆ ಕೆಲವು ಕಡೆ ಸಿಕ್ಲಿಗರರ ಜನಾಂಗಕ್ಕೆ ಮನೆಗಳನ್ನು ಕಟ್ಟಿಸಿಕೊಟ್ಟಿದೆ. ಮನೆ ಕಟ್ಟಿಸಿಕೊಂಡವರು ಹಣದ ಮರುಪಾವತಿ ಮಾಡುತ್ತಿದ್ದಾರೆ. ಹೀಗೆ ಇವರ ಬಗ್ಗೆ ಹೆಚ್ಚಿನ ಮುತುವರ್ಜಿಯನ್ನು ವಹಿಸಿಕೊಂಡ ಸಿಖ್ ಜನಾಂಗದಲ್ಲಿರುವ ಅನೇಕ ದಾನಿಗಳು ಇವರ ಕಲ್ಯಾಣಕ್ಕಾಗಿ ಹಣ ಖರ್ಚು ಮಾಡುತ್ತಿದ್ದಾರೆ. ಗುಲ್ಬರ್ಗಾದಲ್ಲಿ ದಶಮೇಶ್ ಸ್ಕೂಲ್ ಒಂದರಲ್ಲಿ ಈ ಸಮುದಾಯದ ಮಕ್ಕಳಿಗೆ ಶಾಲೆಯನ್ನು ಕಲಿಯಲಿಕ್ಕೆ ಅವಕಾಶವನ್ನು ಮಾಡಿಕೊಡಲಾಗಿದೆ. ಹತ್ತಾರು ವರ್ಷಗಳಿಂದ ಇವರು ಒಂದೇ ಸ್ಥಳದಲ್ಲಿ ನೆಲೆಸಿರುವುದರಿಂದ ಸರ್ಕಾರ ಇವರಿಗೆ ಬಿ.ಪಿ.ಎಲ್ ರೇಷನ್ ಕಾರ್ಡನ್ನು ನೀಡಲಾಗಿದೆ. ಇದೊಂದು ಬುಡಕಟ್ಟು ಅಲೆಮಾರಿ ಜನಾಂಗಕ್ಕೆ ಸಿಕ್ಕಿರುವ ಸೌಲಭ್ಯಗಳಾಗಿವೆ. ಇತ್ತೀಚೆಗೆ ಈ ಪುನರ್‌ವಸತಿ ಯೋಜನೆಯಡಿಯಲ್ಲಿ ಖಾಯಂ ಆಗಿ ವಾಸಿಸುವ ಕಡೆ ಕೆಲವು ಕುಟುಂಬಗಳನ್ನು ಹೊರತುಪಡಿಸಿದರೆ ಸಂಶೋಧಕನ ಸಮೀಕ್ಷೆಯ ಆಧಾರದ ಮೇಲೆ ಒಟ್ಟು ಮೂರುನೂರ ಎಂಬತ್ತು ಐದು ಹೆಚ್ಚು ಖಾಯಂ ಕುಟುಂಬಗಳು ಮಾತ್ರ ವಾಸಿಸಿರುತ್ತಾರೆಂದು ಕಂಡು ಬರುತ್ತದೆ. ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಂಡು ವಸತಿಗಾಗಿ ನಿರ್ಮಾಣ ಮಾಡುವ ಕಾರ್ಯದಲ್ಲಿ ತಲ್ಲೀನರಾದವರು ಬಹುತೇಕ ಎಲ್ಲರಿಗೂ ಯಾವ ಸೌಲಭ್ಯವಿಲ್ಲದೇ ಜೀವನವನ್ನು ಸಾಗಿಸುತ್ತಾರೆ. ವೃತ್ತಿ ಕುಲಕಸಬು ಬಹಳ ಪ್ರಮಾಣಿಕತೆಯಿಂದ ಕಾರ್ಯ ನಿರ್ವಹಿಸುತ್ತಾರೆ.

ವ್ಯಾಪಾರದ ನೀತಿ

ಸಿಕ್ಲಿಗರರ ಮಹಿಳೆಯರಂತೂ ಯಾವುದೇ ಹಿನ್ನೆಲೆಯಿಲ್ಲದೇ ತನ್ನದೇಯಾದ ಹಲವು ಸಾಧನಾ ಸಾಮಗ್ರಿಗಳನ್ನು ಬಳಸಿಕೊಳ್ಳದೇ ಗೃಹಿಣಿಯಾಗಿ ಮನೆಗೆಲಸದಲ್ಲಿ ತೊಡಗಿಕೊಂಡಿದ್ದಾರೆ. ಪುರುಷರಂತೂ ಶ್ರಮಜೀವಿಗಳಾಗಿ ಕಠಿಣ ಕೆಲಸದಲ್ಲಿ ತೊಡಗಿದ್ದಾರೆ. ಅನೇಕರು ತಾವು ಶ್ರಮವಹಿಸಿ ಮಾಡಿದ ಸಾಮಗ್ರಿಗಳನ್ನು ಹತ್ತಿರದ ಸಂತೆ ಮಾರ್ಕೆಟ್‌ಗಳಲ್ಲಿ ತೆಗೆದುಕೊಂಡು ಕೃಷಿ ಸಲಕರಣೆಗಳನ್ನು ಗೃಹೋಪಕರಣಗಳನ್ನು ಹಾಗೂ ಇತರೆ ಸಲಕರಣೆಗಳನ್ನು ಬಹು ಸುಂದರವಾಗಿ ಶ್ರಮವಹಿಸಿ ಕೆಲಸ ನಿರ್ವಹಿಸಲಾಗಿದೆ.

ಮಳೆಗಾಲದಲ್ಲಿ ಹೊರಗೆ ಹಾಕಿದ ಕಬ್ಬಿಣ ನೀರಿಗೆ ತೋಯ್ದು ತುಕ್ಕು (ಜಂಗು) ಹಿಡಿಯುತ್ತದೆ. ಅದನ್ನು ತಿಕ್ಕಿ ಹೊಸದಾದ ಕಬ್ಬಿಣ ಮಾಡಿಕೊಂಡು ಬರುತ್ತಾರೆ. ಕಬ್ಬಿಣದ ಕೆಲಸ ಸರಳವಾಗಿ ಮಾಡುವ ಕಲೆ ಮೆಚ್ಚಬೇಕು. ಅಲ್ಲದೇ ಡಾಂಬರ್ ಬ್ಯಾರಲ್‌ನ್ನು ಮನೆಯ ಹೊರಗೆ ಹಾಗೂ ವಿಶಾಲವಾದ ಸ್ಥಳದಲ್ಲಿ ಹಾಕಿ ಬಿಡುತ್ತಾರೆ. ಬೆಂಕಿಯನ್ನು ಬ್ಯಾರಲ್‌ಗೆ ಹಚ್ಚಿ ಒಳಗಡೆ ಇರುವ ಡಾಂಬರ್‌ಆಗಲಿ, ಎಣ್ಣೆ ಆಗಲಿ ಯಾವುದೇ ವಸ್ತು ಬ್ಯಾರಲ್ ಒಳಗಡೆ ಇದ್ದರೆ ಸುಟ್ಟು ಹೊರಹಾಕುತ್ತಾರೆ. ಆಗ ಸುಟ್ಟ ಬ್ಯಾರಲ್ ಎಲ್ಲ ಹಚ್ಚಿದ ಕಲರ್ ಹೋಗಿ ಬಿಡುತ್ತದೆ. ಅವನ್ನು ಇವರು ತಮಗೆ ಬೇಕಾದ ಹಾಗೆ ಉಪಯೋಗಿಸಿಕೊಳ್ಳುವರು. ಮಳೆ, ಚಳಿ, ಬೇಸಿಗೆ ಮೂರು ಕಾಲಗಳನ್ನು ಉಂಡವರು ಅನುಭವಿಸಿದರು. ಅವನ್ನು ಎಂದೂ ಅಪೇಕ್ಷೆ ಪಟ್ಟವರಲ್ಲ. ಮೂರು ಕಾಲಗಳಲ್ಲಿ ಇವರ ಜೀವನದ ಪ್ರಗತಿ ಅಧೋಗತಿಯಾಗಿದೆ. ಕಬ್ಬಿಣ, ತಗಡು, ಬ್ಯಾರಲ್‌ಗಳನ್ನು ಸರಿಯಾಗಿ ಅರಿತುಕೊಂಡು ತಾವೇ ಸ್ವತಃ ತಮ್ಮ ಕೈಯಿಂದಲೇ ಯಾವ ಯಾವ ಕೆಲಸಗಳಿಗೆ ಉಪಯುಕ್ತವಾಗುವುದೋ ಅವನ್ನೆಲ್ಲಾ ಸರಿಯಾಗಿ ಉಪಯೋಗಿಸಿಕೊಂಡು ಕಾರ್ಯ ನಿರ್ವಹಿಸಬೇಕಾಗಿದೆ. ಹೀಗಾಗಿ ಕಬ್ಬಿಣವನ್ನು ಹದಗೊಳಿಸುವುದು ಅವರ ಮುಖ್ಯ ಕೆಲಸವಾಗಿದೆ.

ತಯಾರಿಕಾ ಉಪಕರಣಗಳ ಸಿದ್ಧತೆ

ಕಬ್ಬಿಣದಿಂದ ಯಾವುದೇ ವಸ್ತುವನ್ನು ತಯಾರಿಸಬೇಕಾದರೆ ಅದಕ್ಕೆ ಬೇಕಾದ ಹಲವಾರು ಉಪಕರಣಗಳು ಅತ್ಯಗತ್ಯವಾಗಿ ಬೇಕೆ ಬೇಕು. ಕಬ್ಬಿಣವನ್ನು ಹೊಡೆಯಲು ಸಾಣೆ ಮೂರು ನಾಲ್ಕು ಬಗೆ ಬಗೆಯಾದ ಉಳಿಗಳು, ಅವುಗಳು ಚೂಪಾಗಲು ಬೇಕಾಗುವ ಸಾಣೆಗಳು ಇದಕ್ಕೆ ಉಪಯೋಗಿಸಿಕೊಳ್ಳುವರು. ಸುತ್ತಿಗೆ ಯಾವ ಆಕಾರದಲ್ಲಿ ಸಾಣೆ ಉಳಿ ಹೊಡೆಯುತ್ತಾರೆ. ಅಷ್ಟೇ ಆಕಾರದ ಸುತ್ತಿಗೆಯನ್ನು ಕೂಡಾ ಬಳಸಿಕೊಳ್ಳುತ್ತಾರೆ. ಬುಟ್ಟಿಯನ್ನು ಮಾಡಲು ಉಳಿ-ಸಾಣೆ ಹಾಗೂ ಸುತ್ತಿಗೆ ಮೂರನ್ನು ಉಪಯೋಗಿಸಿಕೊಳ್ಳುತ್ತಾರೆ. ಒಲೆಯನ್ನು ಉಪಯೋಗಿಸುವಾಗಲೂ ತಮ್ಮಲ್ಲಿರುವ ಸಾಮಾನುಗಳನ್ನು ಉಪಯೋಗಿಸುವರು. ಕಬ್ಬಿಣಕ್ಕೆ ಹಾಕಿಕೊಂಡು ಅವನ್ನು ಕತ್ತರಿಸಲು ಸದಾ ಕಬ್ಬಿಣದ ಒಂದು ಉಂಡೆಯಂತೆ ಇಡುತ್ತಾರೆ. ಇವನ್ನೆಲ್ಲಾ ಬಳಸಿಕೊಂಡು ತಯಾರಿಕಾ ಉಪಕರಣಗಳ ಸಿದ್ಧತೆ ಕೈಗೊಳ್ಳುತ್ತಾರೆ. ತಮ್ಮ ಸುತ್ತಲೂ ತಮಗೆ ಬೇಕಾದ ಸಾಮಾನುಗಳನ್ನು ಅಲ್ಲಿ ಉಪಯೋಗಕ್ಕೆ ಬರುವ ಹಾಗೇ ಇಟ್ಟುಕೊಂಡಿರುತ್ತಾರೆ. ಏಕೆಂದರೆ ಕಬ್ಬಿಣದ ಕೆಲಸವನ್ನು ಮಾಡಲು ಗುರುವಾದ ಗುರುಗೋವಿಂದ ಸಿಂಗ್ ಅವರೇ ಹೇಳಿರುವಂತೆ ಆ ಮೂಲಕ ಇವರು ತಮ್ಮ ಜನಾಂಗಕ್ಕೆ ಸಮುದಾಯಕ್ಕೆ ಕಬ್ಬಿಣ ಗುರುತು ನೀಡಿದ್ದರಿಂದ ಅದು ತಮಗೆ ಗೌರವ ಕೊಟ್ಟ ಕೆಲಸವೆಂದು ಬಗೆದಿದ್ದಾರೆ. ಆ ಕಬ್ಬಿಣಕ್ಕೆ ಗೌರವ ನೀಡಲು ಅದೇ ವೃತ್ತಿ ಕುಲ

ಫೇರುಗಳಂತಹ ಹಲವಾರು ದೊಡ್ಡ ಸಾಮಾನುಗಳನ್ನು ಕಬ್ಬಿಣದ ಮೂಲಕವೇ ತಯಾರಿಸಲಾಗಿದೆ. ಕಡಿಮೆ ದರದಲ್ಲಿ ಇವರು ಶ್ರಮವಹಿಸಿ ದುಡಿದರೆ ತಾವು ಮಾತ್ರ ಪಡೆಯುವ ಲಾಭ ಬಹಳಷ್ಟು ಕಡಿಮೆ.

ಕಬ್ಬಿಣ ಹದಗೊಳಿಸುವುದು

ಸಿಕ್ಲಿಗರರ ಸಮುದಾಯವು ಮೊದಲು ಕಬ್ಬಿಣದ ಎಲ್ಲಾ ಬಗೆಯ ವಸ್ತುಗಳನ್ನು ಕ್ರೋಢಿಕರಿಸಿಕೊಳ್ಳುತ್ತಾರೆ. ಆಗ ತಮಗೆ ಬೇಕಾದ ಹಾಗೂ ಬೇಡಿಕೆ ಇರುವ ವಸ್ತುಗಳ ತಯಾರಿಕೆಗೆ ಹಾತೊರೆಯುತ್ತಾರೆ. ಕಬ್ಬಿಣ ದೊರೆಯುವ ಕಚ್ಚಾ ಸಾಮಗ್ರಿ ಹಾಕಿದ ಅಂಗಡಿಗೆ ಹೋಗುತ್ತಾರೆ. ಅಲ್ಲಿಂದ ಕಬ್ಬಿಣ ತೆಗೆದುಕೊಂಡು ಬರುತ್ತಾರೆ. ಮನೆಯ ಮುಂಭಾಗದಲ್ಲಿ ಮನೆಯ ಹೊರಗೆ ಕುಳಿತು ಕಬ್ಬಿಣದಲ್ಲಿ ಏನೇನು ತಯಾರಿಸಬೇಕು ಎಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸುತ್ತಾರೆ. ಮನೆಯ ಮುಂದೆ ಕಬ್ಬಿಣದ ತುಂಡುಗಳು ಸಾಕಷ್ಟು ಬಿದ್ದುಹೋಗಿವೆ. ಈ ಕಬ್ಬಿಣವು ಬೇರೆ ವರ್ಷ ಕಾಲದಲ್ಲಿ ಹಾಗೇ ಬಿದ್ದಿರುವುದರಿಂದ ಅದನ್ನು ಸರಿಯಾಗಿ ಕೂಲಂಕುಷವಾಗಿ ಪರಿಶೀಲಿಸಬೇಕಾಗುತ್ತದೆ. ಇವರಿಗೆ ಯಾವ ಸಂಪರ್ಕವೂ ಇರುವುದಿಲ್ಲ. ತಾವು ಕಬ್ಬಿಣವನ್ನು ಹೊರಗಡೆ ಹಾಕಿರುತ್ತಾರೆ. ಅವನ್ನೆಲ್ಲಾ ತೆಗೆದುಕೊಂಡು ರಾಶಿಗಟ್ಟಲೇ ಎಲ್ಲರೂ ನೋಡುತ್ತಾರೆ. ಅದನ್ನು ತಮಗೆ ಯಾವ ಕೆಲಸಕ್ಕೆ ಆ ಕೆಲಸ ಮಾಡಿಕೊಳ್ಳಲು ಪ್ರಾರಂಭಿಸುವರು. ಕಬ್ಬಿಣ ಕೆಲಸದಲ್ಲಿ ನುರಿತವರಾಗಿದ್ದಾರೆ. ಉಳಿ, ಸುತ್ತಿಗೆ, ಹಿಡಿದುಕೊಂಡು ಹೇಗೆ ಬೇಕೋ ಹಾಗೇ ಮಣಿಸುವಂತಹ ಕ್ರಿಯೆಗೆ ಒಳಪಟ್ಟಿದ್ದಾರೆ.

ಕೆಲವೊಂದು ಕಬ್ಬಿಣ ಬೇರೆ ಬೇರೆಯಾಗಿದ್ದರೆ ಅವು ತನಗೆ ಉಪಯೋಗಕ್ಕೆ ಬಂದಿವೆಯೋ ಇಲ್ಲವೋ ಎನ್ನುವುದನ್ನು ನೋಡಿಕೊಳ್ಳುತ್ತಾರೆ. ಅವರು ಕಬ್ಬಿಣದ ವಸ್ತುಗಳನ್ನು ಯಾವ ಕಾರಣಕ್ಕೂ ಬೀಸಾಕುವುದಿಲ್ಲ. ಆದರೆ ತಮಗೆ ಎಷ್ಟು ಉಪಯೋಗಕ್ಕೆ ಬರಬೇಕೋ ಅವನ್ನು ಅಷ್ಟನ್ನು ತಗೆದುಕೊಳ್ಳುತತ್ತಾರೆ. ಉಳಿದ ಕಚ್ಚಾವಾದ ಕಬ್ಬಿಣದ ತುಂಡನ್ನು ಮೊಡಕಾ ಅಂಗಡಿಯವನಿಗೆ ಹಾಕುತ್ತಾರೆ. ಸಿಕ್ಲಿಗರರು ಕಬ್ಬಿಣದ ತುಂಡುಗಳನ್ನು ತಮ್ಮ ಕೈಯಿಂದಲೇ ಅವನ್ನೆಲ್ಲಾ ಮೇಣದಂತೆ ಕೆತ್ತುತ್ತಾರೆ.

ಮಳೆಗಾಲದಲ್ಲಿ ಹೊರಗೆ ಹಾಕಿದ ಕಬ್ಬಿಣ ನೀರಿಗೆ ತೋಯ್ದು ತುಕ್ಕು (ಜಂಗು) ಹಿಡಿಯುತ್ತದೆ. ಅದನ್ನು ತಿಕ್ಕಿ ಹೊಸದಾದ ಕಬ್ಬಿಣ ಮಾಡಿಕೊಂಡು ಬರುತ್ತಾರೆ. ಕಬ್ಬಿಣದ ಕೆಲಸ ಸರಳವಾಗಿ ಮಾಡುವ ಕಲೆ ಮೆಚ್ಚಬೇಕು. ಅಲ್ಲದೇ ಡಾಂಬರ್ ಬ್ಯಾರಲ್‌ನ್ನು ಮನೆಯ ಹೊರಗೆ ಹಾಗೂ ವಿಶಾಲವಾದ ಸ್ಥಳದಲ್ಲಿ ಹಾಕಿ ಬಿಡುತ್ತಾರೆ. ಬೆಂಕಿಯನ್ನು ಬ್ಯಾರಲ್‌ಗೆ ಹಚ್ಚಿ ಒಳಗಡೆ ಇರುವ

ಕುಲಕಸಬುಗಳ ವರ್ಗೀಕರಣ

ಕರ್ನಾಟಕದ ಎಲ್ಲಾ ಬುಡಕಟ್ಟು ಜನಾಂಗಗಳ ದುಡಿಮೆಯಲ್ಲಿ ತೊಡಗಿದ ಜನರ ಸ್ಥಿತಿಯಂತೂ ಚಿಂತಾಜನಕವಾಗಿದೆ. ಅಲ್ಲದೇ ಪ್ರಾಚೀನ ಕಾಲದ ಸಂಪ್ರದಾಯವೊಂದು ನಡೆಸಿಕೊಂಡು ಬಂದಿದ್ದರೂ ಕೂಡಾ ಕೆಲವು ಭಿನ್ನವಾಗಿವೆ. ಸಿಕ್ಲಿಗರರು ಎನ್ನುವ ಬುಡಕಟ್ಟು ಮಾತ್ರ ಮೂಲಕಸಬನ್ನು ಹಾಗೇ ಉಳಿಸಿಕೊಂಡು ಬಂದಿವೆ. ಹೀಗಾಗಿ ಜನಗಣತಿ ವರದಿಯನ್ನು ನಾವು ತೆಗೆದು ನೋಡಿದರೂ ಕೂಡಾ ಸಿಕ್ಕಲಗಾರ, ಸಿಕ್ಕಲಕರ್ ಎಂಬ ಪದಗಳು ಭಿನ್ನವಾಗಿವೆ. ಹಾಗೇ ಅವರ ಜನಗಣತಿ ಆಧಾರದ ಮೇಲೆ ಕರಾರುವಕ್ಕಾಗಿ ಹೇಳುವ ಜನಸಮುದಾಯವು ದೊರೆಯದು. ಸಿಕ್ಲಿಗರರು ಸಹಿತ ಭಾರತ ದೇಶದಲ್ಲಿ ಒಂದು ಪ್ರದೇಶಗಳಾದ ಪಂಜಾಬ, ಹರಿಯಾಣ, ಚಂಡಿಗಡ, ದೆಹಲಿ, ಹಿಮಾಚಲಪ್ರದೇಶಗಳಲ್ಲಿ ಮಾತ್ರ ಪರಿಶಿಷ್ಟ ಜಾತಿಯಲ್ಲಿ ಗುರುತಿಸಲಾಗಿದೆ. ಕರ್ನಾಟಕದಲ್ಲಿರುವ ಸಿಕ್ಲಿಗರರನ್ನು ಇನ್ನೂ ಗುರುತಿಸಿಲ್ಲ. ಇವರ ಮೂಲ ಕಸಬುಗಳಾಗಲಿ ಅವರು ಜೀವನ ಮಾಡುವ ವೈಜ್ಞಾನಿಕ ಚಿಂತನೆ ನಡೆದಿಲ್ಲ.

ಬುಡಕಟ್ಟು ಜನಾಂಗದಲ್ಲಿ ಕೂಡಾ ಕುಲಕಸಬುಗಳ ಆಧಾರದ ಮೇಲೆ ಎಲ್ಲಿ ಕೃಷಿ, ಕೂಲಿ, ಪಶುಪಾಲನೆ, ಕಟ್ಟಡ ನಿರ್ಮಾಣ, ಇತ್ಯಾದಿ ಕಾಯಕಗಳಲ್ಲಿ ನಿರತರಾಗಿರುವರೆಂದು ವಿಭಜಿಸಲು, ದಾಖಲಿಸಲು ಪ್ರಯತ್ನಿಸಲಾಗಿದೆ. ಆದರೆ ವಾಸ್ತವದ ದೃಷ್ಟಿಯಿಂದ ಈ ಕರಾರುವಕ್ಕಾಗಿ ವಿಂಗಡನೆ ಮಾಡುವುದು ಬಹು ಕಷ್ಟವಾಗಿದೆ. ಏಕೆಂದರೆ ಬುಡಕಟ್ಟು ಬೇಟೆಗಾರನು ಕೃಷಿಕನಾಗಿದ್ದಾನೆ. ಕೃಷಿ ಕೂಲಿ ಪಶು–ಪಾಲನೆಗಾಗಿ ಕಂಡು ಬರುತ್ತಾನೆ. ಹೀಗಾಗಿ ಸಿಕ್ಲಿಗರರು ಸಹಿತ ಮೂಲತಃ ಬುಡಕಟ್ಟು ಜನಾಂಗಕ್ಕೆ ಹೊಂದಿಕೊಂಡು ಬಂದಿದ್ದಾನೆ. ಎಂಬುದಕ್ಕೆ ಎರಡು ಮಾತಿಲ್ಲ. ಯಾವುದೇ ಕಾಲದಲ್ಲಿ ನಮೂದಿಸಿದ ರೀತಿಯಲ್ಲಿಯೇ ಮುಂದುವರೆಯುತ್ತದೆ. ಈ ಕಾರಣಕ್ಕಾಗಿ ಸಿಕ್ಲಿಗರರು ಕುಲಕಸಬುಗಳನ್ನು ಸಹಿತ ನಾವು ಈ ರೀತಿ ವರ್ಗಿಕರಿಸಬಹುದಾಗಿದೆ.

೧. ಪ್ರಾದೇಶಿಕವಾಗಿ ತಯಾರಿಸುವ ವಸ್ತುಗಳು

೨. ಗೃಹೋಪಯೋಗಿ ವಸ್ತುಗಳು

೩. ಕೃಷಿಗೆ ಸಂಬಂಧಿಸಿದ ವಸ್ತುಗಳು

೪. ಆಧುನಿಕತೆಗೆ ತಕ್ಕಂತೆ ಮಾರ್ಪಾಡಾದ ಕುಲಕಸಬುಗಳು

ಎಂದು ಈ ರೀತಿ ನಾಲ್ಕು ವಿಧದಲ್ಲಿ ಅಧ್ಯಯನಕ್ಕೆ ಹಾಗೂ ಅಧ್ಯಯನದ ಅನುಕೂಲಕ್ಕಾಗಿ ಈ ವರ್ಗೀಕರಣ ಮಾಡುವುದುಂಟು. ಪ್ರತಿಯೊಂದು ಹಂತದಲ್ಲಿ ಸಹಿತ ಸಿಕ್ಲಿಗರರು ಬುಡಕಟ್ಟು ಜನಾಂಗದ ಸಮುದಾಯದ ಆರ್ಥಿಕ ಸ್ಥಿತಿ ಗತಿ ಹಾಗೂ ಬೇಕಾಗುವ ಎಲ್ಲಾ ಮೂಲಾಂಶಗಳನ್ನು ನಾವು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಈ ಕಾರಣಕ್ಕಾಗಿಯೇ ಸಿಕ್ಲಿಗರರು ಸಹಿತ ಹತ್ತು ಹಲವು ಅಂಶಗಳನ್ನು ಬಳಕೆಗಾಗಿ ಕುಲಕಸಬುಗಳನ್ನು ಈ ರೀತಿಯಾಗಿ ವರ್ಗೀಕರಿಸಿಕೊಂಡು ಹೋಗುತ್ತಾರೆ. ಆ ಕಾರಣಕ್ಕಾಗಿ ನಮಗೆ ಕುಲಕಸಬುಗಳ ಮಹತ್ವ ಅತ್ಯಂತ ಉಪಯುಕ್ತವಾಗಿ ಕಂಡು ಬರುತ್ತದೆ.

೧.ಪ್ರಾದೇಶಿಕವಾಗಿ ತಯಾರಿಸುವ ವಸ್ತುಗಳು

ಕರ್ನಾಟಕದ ಬಹು ಭಾಗದಲ್ಲಿ ಸಿಕ್ಲಿಗರರು ಅಲೆಮಾರಿ ಜನಾಂಗವಾಗಿ ಹೊರ ಬಂದು ತಮ್ಮ ಮೂಲ ಕಸಬುಗಳನ್ನು ತನ್ನಷ್ಟಕ್ಕೆ ತಾನೇ ಬೆಳೆಸಿಕೊಂಡು ಹೋಗುತ್ತಿವೆ. ಪ್ರಾದೇಶಿಕ ಭಿನ್ನತೆ ಇದಕ್ಕೆ ಕಾರಣವಾಗಿದೆ. ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾದ ಹಂತವನ್ನು ಹೊಂದಿವೆ. ಅಲೆಮಾರಿ ಜನಾಂಗವಾದ್ದರಿಂದ ಬೆಂಗಳೂರು, ಮೈಸೂರು ಇಂತಹ ನಾಡಿನ ಕಡೆಗೆ ಹೋದಾಗ ಅಲ್ಲಿ ಕೇವಲ ಬುಟ್ಟಿಯನ್ನೇ ತಯಾರಿಸುತ್ತಾರೆ. ಕಾಂಕ್ರೇಟ್ ಕಲೆಸುವ ಯಂತ್ರದ ತಯಾರಿಕೆಯನ್ನು ಮಾಡುತ್ತಾರೆ. ಯಾವ ಭಾಗದಲ್ಲಿ ಏನು ಪ್ರಚಲಿತವಾಗಿ ಬೇಕಾಗಿದೆ ಅದನ್ನು ಹಾಗೇ ಉಳಿಸಿ ಬೆಳೆಸಿಕೊಂಡು ಹೋಗಬೇಕಾದ ಅನಿವಾರ್ಯತೆ ಬುಡಕಟ್ಟು ಜನಾಂಗಕ್ಕೆ ಇದೆ.

ಬುಡಕಟ್ಟು ಜನಾಂಗ ಸಿಕ್ಲಿಗರರಾದ್ದರಿಂದ ಸಹಜವಾಗಿಯೇ ತಮ್ಮ ವೃತ್ತಿ ಕುಲಕಸಬುಗಳನ್ನು ಹೊಂದಿಕೊಂಡು ಹೋಗುತ್ತಲಿವೆ. ಯಾವುದೇ ಅಂಶಗಳು ಹೊಂದಾಣಿಕೆಯಾಗದಿದ್ದರೂ ಸಹಿತ ತನ್ನದೇ ಮೂಲ ಗುಣವನ್ನು ಕಾಪಾಡಿಕೊಳ್ಳುತ್ತದೆ. ಸಿಕ್ಲಿಗರರು ಪ್ರಾದೇಶಿಕವಾಗಿ ಹಿನ್ನೆಲೆ ಹೊಂದಿ ಆಯಾ ಸ್ಥಳಗಳಿಗೆ ಬೇಕಾಗುವ ವಸ್ತುಗಳನ್ನು ತಯಾರಿಸಿ ಕೊಡುತ್ತಾರೆ. ಮೈಸೂರು, ಬೆಂಗಳೂರು ಗಳಲ್ಲಿ ಇವರು ಬಳಸುವ ತಯಾರಿಸುವುದು ಹೆಚ್ಚಾಗಿ ಏಳೆನೀರನ್ನು ಕೊಚ್ಚುವ ಮಚ್ಚನ್ನು ತಯಾರಿಸುತ್ತಾರೆ. ಇಲ್ಲಿ ಕುಡಗೋಲು ರಚನೆಗೆ ಬರುವುದಿಲ್ಲ. ಅದೇ ನಾವು ಉತ್ತರ ಕರ್ನಾಟಕದ ಭಾಗದಲ್ಲಿ ಬಂದಾಗ ಕುಡಗೋಲು, ಈಳಿಗೆ, ಮುಂತಾದ ವಸ್ತುಗಳು ನಮಗೆ ಬೇಕಾಗಿವೆ.

ಗೃಹ ಬಳಕೆಯ ವಸ್ತುಗಳು

ಬುಡಕಟ್ಟು ಜನಾಂಗಗಳು ಇಂದು ಇರದೇ ಹೋಗಿದ್ದರೆ ಸಾಧನೆಗೆ ಬೇಕಾದ ಮನೆಗಳಲ್ಲಿ ಬೇಕಾಗುವ ವಸ್ತುಗಳು ದೊರಕುತ್ತಿರಲಿಲ್ಲ. ಬುಡಕಟ್ಟುಗಳು ಯಾವಾಗಲೂ ಗೃಹ-ಕೃಷಿಗಳಿಗೆ

ಬೇಕಾಗುವ ಹಾಗೇ ವಸ್ತುಗಳ ರಚನೆಗೆ ತೊಡಗಿದ್ದಾರೆ. ಆಚಾರಿಗಳ ಸಾಧನೆಗಳಿಲ್ಲದೇ ಮನೆಯ ನಿರ್ಮಾಣ ಹೋಗಲಿ ಮನೆಯೊಳಗಿನ ಆಹಾರ ಕೂಡಾ ಸಿದ್ಧವಾಗಲು ಸಾಧ್ಯವಿಲ್ಲ. ಮನೆಯಲ್ಲಿ ಅಡುಗೆ ಮಾಡುವ ಹೆಣ್ಣು ಮಕ್ಕಳು ತಯಾರಾಗಿದ್ದುದು ಸಹಿತ ಅವುಗಳನ್ನು ಮಾಡಲು ಬೇಕಾಗುವ ವಸ್ತುಗಳು. ಇರದಿದ್ದರೆ ಹೇಗೆ ಮಾಡಲು ಸಾಧ್ಯ. ಇಂತಹ ಮಹತ್ವದ ಸನ್ನಿವೇಶದಲ್ಲಿ ಸಿಕ್ಲಿಗರರ ಕೊಡುಗೆ ಅಪೂರ್ಣವಾಗಿದೆ. ಆಹಾರ ತಯಾರಿಸುವಾಗ ತರಕಾರಿ ಹೆಚ್ಚುವಾಗ ಅಡಿಗೆ ಮಾಡುವಾಗ ರೊಟ್ಟಿ ಸುಡುವಾಗ ಏನೆಲ್ಲಾ ವಸ್ತುಗಳ ತಯಾರಿಕೆಗೆ ಕಬ್ಬಿಣದ ವಸ್ತುಗಳು ಬೇಕೆ ಬೇಕು.

ಗೃಹ ಬಳಕೆಯ ವಸ್ತುಗಳು ನಮಗೆ ಎಷ್ಟು ಅವಶ್ಯಕವಾಗಿದೆಂಬುದರ ಕುರಿತು ನಾವೆಂದೂ ಯೋಚಿಸಿಯೇ ಇಲ್ಲ. ಸಿಕ್ಲಿಗರರ ಕುರಿತು ಅಧ್ಯಯನ ಕೈಗೊಂಡ ಸಂದರ್ಭದಲ್ಲಿ ಗೃಹ ಬಳಕೆಗಾಗಿ ಇವರು ಪಡುವ ಶ್ರಮವನ್ನು ನೋಡಿದಾಗ ಆಶ್ಚರ್ಯವಾಗುತ್ತದೆ. ಅದು ಅಲ್ಲದೇ ಐದು-ಹತ್ತು ರೂಪಾಯಿ ಕೊಟ್ಟು ನಾವು ಏನೇನೋ ತೆಗೆದುಕೊಂಡು ಬರುತ್ತೇವೆ. ಸರಾಗವಾಗಿ ಅಡಿಗೆಯ ಸಾಮಾನುಗಳನ್ನು ತೆಗೆದುಕೊಂಡು ಕೆಲಸ ಮಾಡಿ ಆಹಾರವನ್ನು ತಯಾರಿಸಿ ನಮ್ಮ ಮುಂದೆ ಇಡುತ್ತಾರೆ. ನಾವು ಏನನ್ನು ಯೋಚಿಸದ ಹಾಗೇ ಆಹಾರವನ್ನು ಸೇವಿಸುತ್ತೇವೆ. ಗೃಹ ಬಳಕೆ ಮಾಡುವ ಹೆಣ್ಣುಮಕ್ಕಳು ಏನೇನೋ ತೊಂದರೆ ಅನುಭವಿಸುತ್ತಾರೆ. ಆ ಸಾಮಾನುಗಳು ಇರದಿದ್ದರೆ ಹೇಗೆ ಎಂಬ ಕಿಂಚಿತ್ತು ಯೋಚನೆ ಮಾಡದೇ ತಮ್ಮಷ್ಟಕ್ಕೆ ತಾವು ಇರುವುದನ್ನು ಗಮನಿಸುತ್ತೇವೆ. ಈ ಕಾರಣಕ್ಕಾಗಿ ಗೃಹ ಬಳಕೆಯ ವಸ್ತುಗಳು ನಮಗೆ ಬೇಕಾಗಿವೆ. ಆದರೆ ಇಂದಿನ ಆಧುನಿಕರಣದ ಸಂದರ್ಭದಲ್ಲಿ ಪ್ಲಾಸ್ಟಿಕ್ ಯುಗಬಂದಿದೆ. ಹಾಗೇ ಬೇರೆ ಬೇರೆ ತಂತ್ರಜ್ಞಾನದ ಹಾಗೂ ಬಗೆ ಬಗೆಯಾದ ಹಲವು ಅಂಶಗಳು ನಮಗೆ ಬೇಕು ಅವನ್ನೆಲ್ಲಾ ಸರಿದೂಗಿಸಿಕೊಂಡು ಹೋಗುವ ಜವಾಬ್ದಾರಿ ನಮ್ಮ ಮೇಲಿದೆ. ಆ ಕಾರಣಕ್ಕಾಗಯೇ ಗೃಹ ಬಳಕೆಯ ಪ್ರತಿಯೊಂದು ವಸ್ತುವು ಕೂಡಾ ನಮಗೆ ಅತೀ ಜರೂರ ಅಷ್ಟೇ ಪ್ರಸ್ತುತವಾಗಿ ಬೇಕಾಗುತ್ತದೆಂಬುದನ್ನು ಮರೆಯುವಂತಿಲ್ಲ.

ಗೃಹ ಬಳಕೆಯ ವಸ್ತುಗಳು ನಮಗೆ ಪ್ರಸ್ತುತವಾಗಿವೆ. ಅಂದು ಮಾತ್ರ 'ಇಂದು ಎರಡು ಸೇರಿಕೊಂಡು ಯೋಚಿಸಿದಾಗ ಸಿಕ್ಲಿಗರರು ತಯಾರಿಸಿದ ವಸ್ತುಗಳಿಗೆ ಬೆಲೆಯೇ ಇಲ್ಲ. ಆದರೆ ಅವರು ಶ್ರಮಪಡುವ ರೀತಿ ಕಣ್ಣೀರು ಕಟ್ಟುತ್ತದೆ. ಅವರು ಉಣ್ಣಲು ಅನ್ನವಿಲ್ಲ. ತೊಡಲು ಬಟ್ಟೆಯಿಲ್ಲ. ನೆಲೆಯೂರಲು ಸ್ಥಳವಿಲ್ಲ. ವಾಸಿಸಲು ಮನೆಗಳಿಲ್ಲ. ಒಂದು ಸಮುದಾಯ ವ್ಯಕ್ತಿಗೆ ಬೇಕಾಗುವುದು ಮುಖ್ಯವಾಗಿ ಅನ್ನ, ನೀರು, ಮನೆ ಬಟ್ಟೆ ವಿನಃ ಬೇರೆನೂ ಇಲ್ಲ. ಸಿಕ್ಲಿಗರರಿಗೆ ಇವುಗಳಿಲ್ಲದೇ ಸ್ವತಂತ್ರವಾಗಿ ಅಲೆಮಾರಿ ಜೀವನ ಮಾಡಿಕೊಂಡು ಹೊರಡುವ ಬುಡಕಟ್ಟು

ಸಮುದಾಯದವರಾಗಿದ್ದಾರೆ. ತಾವು ಎಷ್ಟೇ ಕಷ್ಟ-ನಷ್ಟ ನೋವು-ನಲಿವುಗಳಿದ್ದರೂ ಸಮಸ್ಯೆ ಸವಾಲುಗಳನ್ನು ಹೊಂದಿದ್ದರೂ ಅವನ್ನೆಲ್ಲಾ ಹಾಗೇ ದೂರತಳ್ಳಿ ಎಲ್ಲರಿಗೂ ಬೇಕಾಗುವ ಬಹುಪಯೋಗಿ ವಸ್ತುಗಳ ತಯಾರಿಕೆಗಾಗಿ ಹಾತೊರೆಯುತ್ತಿರುತ್ತಾರೆ. ಈ ಕಾರಣದಿಂದ ಸಿಕ್ಲಿಗರರು ಬಳಸುವ ತಯಾರಿಸುವ ವಸ್ತುಗಳು ನಮ್ಮ ಗಮನ ಸೆಳೆಯುತ್ತವೆ.

ಈಳಿಗೆಯನ್ನು ತಯಾರಿಸುತ್ತಾರೆ. ಕಬ್ಬಿಣ ಹಾಗೂ ತಗಡಿನ ಮೂಲಕ ಈಳಿಗೆಯನ್ನು ಮಾಡಿ ಅದರ ಕೆಳಗಡೆ ಕಟ್ಟಿಗೆಯ ತುಂಡನ್ನು ಹಚ್ಚಿ ತಯಾರಿಸುತ್ತಾರೆ. ಇವುಗಳನ್ನು ಹಾಗೇ ತಯಾರಿಸಲು ಹೋಗದೇ ಇದ್ದರೇ ತಾವೇ ಗೃಹಿಣಿಯರು ತರಕಾರಿ ಹೆಚ್ಚಲು ಆಗುತ್ತಿರಲಿಲ್ಲ. ಅಂತಹ ಬಹುಪಯೋಗಿ ಈಳಿಗೆಗಳನ್ನು ತಯಾರಿಸುತ್ತಾರೆ. ಈಳಿಗೆಗೆ ಕಟ್ಟಿಗೆ ಹಚ್ಚುವ ಬದಲಾಗಿ ಇಂದಿನ ಆಧುನಿಕತೆಗೆ ತಕ್ಕಂತೆ ಆ ಕಬ್ಬಿಣದಿಂದ ಅಥವಾ ತಗಡನ್ನು ಅದಕ್ಕೆ ಬಳಸಿಕೊಂಡು ತಯಾರಿಸಿ ಮಾರಾಟ ಮಾಡುತ್ತಾರೆ. ಕೊಬ್ಬರಿಯನ್ನು ತಿರುಗಿಸುವ ಮಿಕ್ಸರ್‌ನ್ನು ಕೈಯಿಂದ ಸಿಕ್ಲಿಗರರು ತಯಾರಿಸಿದ್ದಾರೆ. ಕೊಬ್ಬರಿ ಆಯಿತು ಇಲ್ಲವೇ ಗಜ್ಜರಿ, ಸೌತೆಕಾಯಿ, ಎರಜಲು ಬೇಕಾಗುವ ವಸ್ತುಗಳು ಕಣ್ಣಿಗೆ ಕಟ್ಟಬೇಕು. ಆ ರೀತಿಯಾಗಿ ತಯಾರಿಸಿಕೊಟ್ಟಿದ್ದಾರೆ. ಹಂಚು ಅತ್ಯಂತ ಮಹತ್ವದ್ದು, ರೊಟ್ಟಿಯನ್ನು ಕೊಣಗಿಯಲ್ಲಿ ಬಡಿದು ಸುಡಲು ಹಂಚು ಅವಶ್ಯಕವಾಗಿದೆ. ಹಂಚಿನಲ್ಲಿ ಶೇಂಗಾ ಉರಿಯಲು, ಸಂಡಿಗೆ ಕರಿಯಲು ಮುಂತಾದ ಪದಾರ್ಥಗಳನ್ನು ಸುಡಲು ಕರಿಯಲು ಹಂಚು ಉಪಯುಕ್ತವಾಗಿದೆ. ರೊಟ್ಟಿಯನ್ನು ತೆಗೆಯಲು ಬೇಕಾಗುವ ಚಮಚಾದ ಹಾಗೇ ಚುಚುಗಾ (ಕಡಚಿ), ಕಡಾಯಿ, ಕರಿಯಲು ಪದಾರ್ಥಗಳನ್ನು ತಯಾರಿಸಲು ಕಡಾಯಿ ಅವಶ್ಯವಾಗಿದೆ. ವಿಳ್ಯಾದ ಎಲೆ ಅಡಿಕಿ ಕುಟ್ಟುವ ಕುಟ್ಟಣಿ, ಅಡಿಕೆ ಕತ್ತರಿಸುವ ಕತ್ತರಿ ಹೆಚ್ಚಲು ಚಾಕು, ಚೂರಿ, ಇಕ್ಕೂಳ, ಕಬ್ಬಿಣದ ಒಲೆಗಳು, ರೊಟ್ಟಿ ಹಂಚು, ರೊಟ್ಟಿ ಬೀಗ, ಒನಕೆಯ ಬಳೆ, ಮಚ್ಚು, ಈಳಿಗೆಮಣಿ, ಕತ್ತರಿ, ಕೀಲುನೋಟ ಮುಂತಾದ ಬಗೆ ಬಗೆಯಾದ ಗೃಹ ಉಪಯೋಗಿಗೆ ಬೇಕಾದ ಅಡಿಗೆಯ ಸಾಮಾನುಗಳನ್ನು ತಯಾರಿಸುತ್ತಾರೆ. ಅವುಗಳ ಮೂಲಕ ತಮ್ಮ ಸಂಸ್ಕೃತಿಯನ್ನು ಬೆಳಕಿಗೆ ತರುವ ಪ್ರಯತ್ನ ಮಾಡಿದ್ದಾರೆ. ಮಾಡುತ್ತಿದ್ದಾರೆ.

ಸಿಕ್ಲಿಗರರು ಮಾಡುವ ಮನೆಯಲ್ಲಿ ಬೇಕಾಗುವ ಉತ್ತಮವಾದ ಕೆಲಸ ಕಾರ್ಯಗಳನ್ನು ಸಹಿತ ನಾವು ಮೆಚ್ಚಬೇಕಾಗಿದೆ. ಅವುಗಳಲ್ಲಿ ಉತ್ತಮವಾದ ಕಾರ್ಯಗಳನ್ನು ಸಹಿತ ನಾವು ಮೆಚ್ಚಬೇಕಾಗಿದೆ. ಅವುಗಳಲ್ಲಿ ಅವರು ಬಳಸುವ ಅದನ್ನು ತಯಾರಿಸುವ ವಿಧಾನಗಳನ್ನು ನಾವು ಅರಿತುಕೊಂಡರೆ ದಂಗಾಗುತ್ತೇವೆ. ಬಗೆ ಬಗೆಯಾದ ಸಾಮಾನುಗಳ ತಯಾರಿಕೆ ನಮಗೆ ಸದಾ ಬೇಕಾಗಿವೆ.

ಅವುಗಳಿಲ್ಲದೇ ಬೆಳಗು ಹರಿಯುವುದಿಲ್ಲ. ಬೆಳಗು ಹರಿದರೆ ಈ ಎಲ್ಲಾ ಸಾಮಾನುಗಳು ನಮಗೆ ಬೇಕೆ ಬೇಕು. ಹೀಗಾಗಿ ಗೃಹ ಬಳಕೆಗೆ ಬೇಕಾಗುವ ನೂರಾರು ವಸ್ತುಗಳನ್ನು ತಯಾರಿಸುವ ಕೆಲಸ ಸಿಕ್ಲಿಗರರು ಮಾಡಿದ್ದಾರೆ.

ಇವನ್ನೆಲ್ಲಾ ತೆಗೆದುಕೊಂಡು ಸಂತೆಗೆ ಹೋಗುತ್ತಾರೆ. ಇಲ್ಲವೇ ಹೋಲ್ಸೇಲ್ ಆಗಿ ಮಾರಾಟ ಮಾಡುತ್ತಾರೆ. ಇಂದು ತಯಾರಿಸುವ ವಸ್ತುಗಳಿಗೆ ಕೇವಲ ಕೆಲವೇ ರೂಪಾಯಿಗಳು ದೊರಕುತ್ತವೆ. ಅದೇ ಹೋಲ್‌ಸೇಲ್‌ಗೆ ಹಾಕಿದರೆ ಎಲ್ಲವನ್ನು ಕೊಳ್ಳುವಾಗ ಇನ್ನೂ ಕಡಿಮೆ ಬೆಲೆ ಮಾಡಿ ತೆಗೆದುಕೊಳ್ಳುತ್ತಾರೆ. ಸಿಕ್ಲಿಗರರ ಬೆಲೆಗಿಂತ ಮೂರುಪಾಲು ಹೆಚ್ಚಿನ ಲಾಭ ಅಂಗಡಿಯವರು ಪಡೆಯುತ್ತಾರೆ. ಹೀಗಾಗಿ ಸಿಕ್ಲಿಗರರು ಸಮಸ್ಯೆಗಳಲ್ಲಿ ಸಿಲುಕಿದ್ದಾರೆ. ತಾನು ದಿನನಿತ್ಯದ ಗೃಹ ಬಳಕೆಗೆ ಬೇಕಾಗುವ ಪ್ರತಿಯೊಂದನ್ನು ತಯಾರಿಸಿದರು, ಆತನ ದುಡಿಮೆಗೆ ತಕ್ಕ ಪ್ರತಿಫಲ ದೊರೆತಿಲ್ಲ. ಹಾಗೇ ಆತನಿಗೆ ಆಗುತ್ತಿಲ್ಲ. ಇಂದಿನ ದಿನಗಳಲ್ಲಿ ಸಹಿತ ಉದಾರೀಕರಣ, ಖಾಸಗೀಕರಣ, ಹಾಗೂ ಜಾಗತೀಕರಣ ಹೊತ್ತಿನಲ್ಲಿ ಬಹು ವಿಧದ ಚಾಲನೆ ಸಿಕ್ಲಿಗರರು ಪ್ರಾರಂಭಿಸುವ ಈ ವಸ್ತುಗಳ ಬೇಡಿಕೆ ಇಳಿಮುಖವಾಗ ಹತ್ತಿದೆ. ಇಂತಹ ಹೊತ್ತಿನಲ್ಲಿ ಸರ್ಕಾರ ಇವರನ್ನು ಗುರುತಿಸಿಲ್ಲ. ಇವರಿಗೆ ಯಾವ ಸಹಾಯ ಸಹಕಾರವನ್ನು ನೀಡಿಲ್ಲ. ಗೃಹ ಬಳಕೆಯ ವಸ್ತುಗಳು ಅತ್ಯಂತ ಬಡತನದಿಂದ ಕಾರ್ಯ ನಿರ್ವಹಿಸುವ ಜನರಲ್ಲಿ ಈ ವಸ್ತುಗಳು ಅವಶ್ಯವಾಗಿ ಬೇಕಾಗಿವೆ. ಅವರ ದುಡಿಮೆ ಫಲಕ್ಕೆ ತಕ್ಕಂತೆ ಕಡಿಮೆ ಬೆಲೆಯಲ್ಲಿ ಗೃಹ ಬಳಕೆಯ ಈ ಎಲ್ಲಾ ವಸ್ತುಗಳು ವೈವಿಧ್ಯಮಯವಾಗಿ ಬಳಕೆಯನ್ನು ಮಾಡುವ ಹಾಗೇ ಸಿಕ್ಲಿಗರರು ತಯಾರಿಸುತ್ತಾರೆ.

ಕೃಷಿಗೆ ಸಂಬಂಧಿಸಿದ ವಸ್ತುಗಳು

ಕರ್ನಾಟಕದಲ್ಲಿ ಬುಡಕಟ್ಟುಗಳು ಪ್ರಾರಂಭವಾಗುವುದೇ ಕೃಷಿ ಪ್ರಧಾನ ನೆಲೆಗಳಿಂದ ಇಲ್ಲಿರುವ ಎಷ್ಟೇ ಕುಲಕಸಬುಗಳಿದ್ದರೂ ಅವನ್ನೆಲ್ಲಾ ನಾವು ಜಾಗೂರಕತೆಯಿಂದ ನೋಡಬೇಕಾಗಿದೆ. ಏಕೆಂದರೆ ಭಾರತ ಕೃಷಿ ಪ್ರಧಾನವಾದ ದೇಶವಾಗಿದೆ. ಕೃಷಿಯನ್ನು ಕೈಗೊಳ್ಳಬೇಕಾದರೆ ಮೊದಲು ಭೂಮಿ ಬೇಕು. ಭೂಮಿಯನ್ನು ಹದಗೊಳಿಸಲು ನಾವು ಕೃಷಿಕ ಸಂಬಂಧಿಸಿದ ವಸ್ತುಗಳ ಕಡೆ ಮುಖ ಮಾಡಬೇಕಾಗಿದೆ. ಕೃಷಿಗೆ ಸಂಬಂಧಪಟ್ಟ ಕೆಲವು ಏಕೆ ನೂರಾರು ಅಂಶಗಳು ನಮ್ಮ ಕಣ್ಣೆದುರಿಗೆ ಕಾಣಸಿಗುತ್ತವೆ. ಆದರೂ ಅಲ್ಲಲ್ಲಿ ಬಳಕೆಗೊಳ್ಳುವ ಪ್ರಮುಖ ಆಧಾರಗಳು ಇದರಲ್ಲಿವೆ. ಕೃಷಿಕರ ಸಂಖ್ಯೆ ಹೆಚ್ಚಾಗಿದೆ. ಹೀಗಾಗಿ ಹಳ್ಳಿ ಹಳ್ಳಿಗಳಲ್ಲಿ ಹೋಗಿದ್ದಾಗ ಒಂದು ಕಡೆ ಉತ್ತರಕರ್ನಾಟಕದ ಕೃಷಿಕರು, ಮತ್ತೊಂದು ಕಡೆ ಉತ್ತರ ಕನ್ನಡ ಜಿಲ್ಲೆಯ ಶಿರ್ಸಿ, ಸಿದ್ದಾಪುರ,

ಯಲ್ಲಾಪುರ, ಹಳಿಯಾಳ ತಾಲೂಕುಗಳಲ್ಲಿ ಕೃಷಿಕರು ಸಂಖ್ಯೆ ಹೆಚ್ಚಾಗಿದೆ. ಇವರಿಗೆ ಅನಗತ್ಯವಾದ ವಸ್ತುಗಳನ್ನು ತಯಾರಿಸಿಕೊಡುವ ಕೆಲಸ ಸಿಕ್ಲಿಗರರು ಮಾಡುತ್ತಿದ್ದಾರೆ.

ಉತ್ತರಕ ರ್ನಾಟಕದ ಹಳ್ಳಿ ಹಳ್ಳಿಗಳಲ್ಲಿ ಸಹಿತ ಕೃಷಿಗೆ ಸಂಬಂಧಿಸಿದ ನೂರಾರು ವಸ್ತುಗಳು ಬೇಕೆ ಬೇಕು. ಅವುಗಳನ್ನು ಸಿಕ್ಲಿಗರರು ತಯಾರಿಸಿಕೊಂಡು ಬರುತ್ತಾರೆ. ಅವರು ಮೂಲತಃ ಇಂತಹ ವಸ್ತುಗಳ ತಯಾರಿಕೆ ಮಾಡುವ ಮೂಲಕ ತಮ್ಮ ಅಸ್ತಿತ್ವ ಉಳಿಸಿಕೊಂಡಿದ್ದಾರೆ. ಕೃಷಿ ಉಪಕರಣಗಳು ಇಂದು ಅವಶ್ಯವಾಗಿವೆ. ನೇಗಿಲು, ಕುಳ, ಕೊಡಲಿ, ಕತ್ತಿ, ಹಾಕಿ, ಪಿಕನಾಸಿ, ಚಕ್ಕಡಿಗೆ ಬೇಕಾದ ರೈಲು, ಬಳಿ, ಕಬ್ಬಿಣದ ಕೆಲಸವನ್ನು ಮಾಡಿಕೊಡುತ್ತಾರೆ. ಹಳಿಯನ್ನು ತಯಾರಿಸುತ್ತಾರೆ. ಸಲಿಕೆ, ಗುದ್ದಲಿ, ಕುಡಗೋಲು, ಕುರ್ಜಿಗೆ, ಮೇಕು, ಕಡಗಿ, ಸುತ್ತಿಗೆ, ಕಬ್ಬಿಣದ ನೇಗಿಲು, ಮುಂತಾದ ಕೃಷಿಗೆ ಬೇಕಾಗುವ ಸಾಧನಾ ಸಲಕರಣೆಗಳನ್ನು ಬಿಟ್ಟು ಬಿಡದೇ ತಯಾರಿಸುತ್ತಾರೆ. ಆ ತಯಾರಿಕೆಯ ಮೂಲಕ ತಮ್ಮ ಅಂತಃಸತ್ವವನ್ನು ಹೊರಹಾಕುತ್ತಾರೆ.

ಕೃಷಿಗೆ ಸಂಬಂಧಿಸಿದಂತೆ ಈ ಎಲ್ಲಾ ವಸ್ತುಗಳನ್ನು ಸಿದ್ದಪಡಿಸಿಕೊಂಡ ಸ್ಥೂಲವಾದ ಸಮೀಪ ಹಳ್ಳಿಯ ಅಥವಾ ಪೇಟೆಯ ಸಂತೆಗೆ ಹೋಗುತ್ತಾರೆ. ಅಲ್ಲಿ ಮಾರಾಟಮಾಡಿ ಬಂದ ಕಬ್ಬಿಣದ ವಸ್ತುಗಳಿಂದ ತಯಾರಿಸಿದ ವಸ್ತುಗಳಿಂದ ಅರಿತುಕೊಂಡು ಬೆಲೆ ತೆಗೆದುಕೊಂಡು ಬರುತ್ತದೆ. ಇವರು ಅಷ್ಟೊಂದು ಬೆಲೆ ಬಾಳುವ ವಸ್ತುಗಳು ಯಾವುವು ಇಲ್ಲ. ಇಂದಿನ ಕೃಷಿಯೂ ಕೂಡಾ ಆಧುನಿಕ ತಂತ್ರ ಬಳಸಿಕೊಂಡು ಬಂದ ಮೇಲೆ ತನ್ನ ಮೂಲ ಸಂಸ್ಕೃತಿ ಬಿಟ್ಟು ಹೊಸ ಬಗೆಯಾದ ಅಂಶವನ್ನು ಪ್ರತಿಪಾದಿಸುತ್ತದೆ. ಕೃಷಿ ಮೂಲವಾದವೂ ಪ್ರಾಚೀನವಾದದ್ದಲ್ಲ. ತಮ್ಮ ಮೂಲ ಸಂಸ್ಕೃತಿಗೆ ಸಂಬಂಧಿಸಿದಂತೆ ಹಲವಾರು ಘಟನೆಗಳನ್ನು ಆಧರಿಸಿಕೊಂಡು ಸಿಕ್ಲಿಗರು ಕೃಷಿಗೆ ಸಂಬಂಧಿಸಿದ ಹಲವಾರು ವಸ್ತುಗಳ ಚಾಲ್ತಿಗೆ ತಂದಿದ್ದಾರೆ. ಆದರೂ ಅವುಗಳ ಬಳಕೆ ನಿಂತಿಲ್ಲ. ಇಂದಿನ ದಿನಗಳಲ್ಲಿ ಆಧುನಿಕ ಯಂತ್ರೋಪಕರಣದಿಂದಾಗಿ ತನ್ನತನ ಉಳಿಸಿಕೊಳ್ಳಲು ಸಿಕ್ಲಿಗರರು ಹೆಣಗಾಡಬೇಕಾಗಿದೆ.

ಆಧುನಿಕತೆಗೆ ತಕ್ಕಂತೆ ಮಾರ್ಪಾಡಾಗುವ ವಸ್ತುಗಳು

ಗೃಹ ಹಾಗೂ ಕೃಷಿಗೆ ಸಂಬಂಧಿಸಿದಂತೆ ಹಲವಾರು ಸಂಸ್ಕೃತಿಗೆ ಬೇಕಾಗುವ ವಸ್ತುಗಳು ಬಹಳ ಅವಶ್ಯವಾಗಿ ಬೇಕಾಗಿವೆ. ಇಂದಿನ ತಾಂತ್ರಿಕ ಹಾಗೂ ವೈಜ್ಞಾನಿಕವಾದ ಬೆಳವಣಿಗೆಯಿಂದಾಗಿ ತನ್ನ ಗುಣವನ್ನು ಕಳೆದುಕೊಳ್ಳುತ್ತಿದೆ. ಈ ಬುಡಕಟ್ಟು ಸಮುದಾಯ ಅತೀ ಬಡತನದಲ್ಲಿ ಬೆಂದು ಹೋದದ್ದರಿಂದ ಅವರಿಗೆ ಆಧುನಿಕತೆಗೆ ತಕ್ಕಂತೆ ಬದಲಾವಣೆ ಆಗುವುದು ಸಾಧ್ಯವಾಗುತ್ತಿಲ್ಲ. ಈ ಕಾರಣದಿಂದಾಗಿ ತೀವ್ರವಾಗಿ ಸಂಶೋಧಿಸಬೇಕಾದ ಅನಿವಾರ್ಯತೆ ಇದೆ. ಸಿಕ್ಲಿಗರರು ಬಹುಪಯೋಗಿ

ಹಾಗೂ ಶ್ರಮದಾಯಕವಾದ ವಸ್ತುಗಳ ತಯಾರಿಕೆ ಮಾಡುತ್ತಿದ್ದಾರೆ. ಕಬ್ಬಿಣದ ಕೆಲಸವನ್ನು ಮಾಡುವ ಕಲೆ ಅವರಿಗೆ ವಂಶಪರಂಪರಾಗತವಾಗಿ ಬಂದಿದೆ.

ಇಂದಿನ ದಿನಮಾನಗಳಿಗೆ ತಕ್ಕಂತೆ ಬದಲಾಗಬೇಕಾಗಿದೆ. ಹೀಗಾಗಿ ಶಿಗ್ಗಾಂವ ದಲ್ಲಿ ಮೋಟಾರ್ ರಿವೈಂಡಿಂಗ್‌ನ್ನು ತೆರೆಯಲಾಗಿದೆ. ಇಲ್ಲಿ ಕಬ್ಬಿಣದ ಕೆಲಸವಾದರೂ ಆಧುನಿಕತೆಗೆ ತಕ್ಕಂತೆ ಇಂತಹ ಅಂಗಡಿಗಳನ್ನು ಸ್ಥಾಪಿಸಿದ್ದಾರೆ. ಹಾಗೂ ಹುಬ್ಬಳ್ಳಿಯ ಸುಭಾಷ್ ನಗರದಲ್ಲಿ ಸಹಿತ ಕಬ್ಬಿಣದ ಕೆಲಸ ಒಂದು ಕಾರ್ಖಾನೆ ಪ್ರಾರಂಭವಾಗಿದೆ. ಕೈಕೆಲಸದಲ್ಲಿಯೇ ಮಾಡುವಂತಹ ಕಾರ್ಯ ನೆಡೆದಿದೆ. ರಥವನ್ನು ಕಬ್ಬಿಣದಲ್ಲಿಯೇ ಮಾಡುವ ಕಲಬುರ್ಗಿಯ ಸಿಕ್ಲಿಗರರು ತಯಾರಿಸಿದ್ದಾರೆ. ಇವತ್ತಿಗೆ ಹೇಗೆ ಬೇಕೋ ಹಾಗೆ ತಯಾರಿಸುವ ಗುಣಮಟ್ಟ ಬೇಕಾಗುವ ಸಾಮಗ್ರಿಗಳು ಇವರಲ್ಲಿ ಇಲ್ಲದ ಕಾರಣ ಕಬ್ಬಿಣದ ಮೂಲ ಕುಲಕಸಬುಗಳನ್ನು ಕಾಪಾಡಿಕೊಂಡು ಬರುತ್ತಿದ್ದಾರೆ.

ಮೂಲತಃ ಸಿಕ್ಲಿಗರರು ಬುಡಕಟ್ಟು ಕುಲಕಸುಬು ಕಬ್ಬಿಣ. ಈ ಕಬ್ಬಿಣದ ಮೂಲಕವಾಗಿಯೇ ಹಲವು ವಿಧದ ಸಾಮಗ್ರಿ ಸಾಮಾನುಗಳನ್ನು ತಯಾರಿಸುತ್ತಿದ್ದಾರೆ. ತಾವು ಪಟ್ಟ ಶ್ರಮ ಮೂಲದ ಯಶಸ್ವಿ ಕೆಲಸ ಕಾರ್ಯಗಳಿಂದ ಸಿಕ್ಲಿಗರರು ತೃಪ್ತಿ ಜೀವನವನ್ನು ಕಾಣುತ್ತಿದ್ದಾರೆ. ಕಬ್ಬಿಣದಲ್ಲಿ ಕೃಷಿ, ಗೃಹ ಹಾಗೂ ಇದರ ಬಳಕೆಯ ವಸ್ತುಗಳ ತಯಾರಿಕೆಯ ಮೂಲಕ ಕುಲಕಸುಬನ್ನು ತಮ್ಮ ಅಂಗವಾಗಿ ಮಾಡಿಕೊಂಡು ಬಂದಿದ್ದಾರೆ, ಬರುತ್ತಿದ್ದಾರೆ. ಇಂತಹ ಶ್ರಮಜೀವಿಗಳಾದ ಬುಡಕಟ್ಟು ಜನಾಂಗಕ್ಕೆ ಬೇಕಾಗಿರುವ ಜಾತಿ ಪ್ರಮಾಣ ಪತ್ರ, ದೊರೆಯಬೇಕು. ಅದು ಆಗದೇ ಇದ್ದಾಗ ಸಿಕ್ಲಿಗರರ ಮೂಲ ಕುಲಕಸಬುಗಳ ರಕ್ಷಣೆ ಮಾಡಬೇಕಾದ ಅಗತ್ಯತೆ ಇಂದು ತೀವ್ರವಾಗಿ ಬೇಕಾಗಿದೆ. ಆ ನಿಟ್ಟಿನಲ್ಲಿ ಆಲೋಚನೆ ಚಿಂತನೆಗಳು ಆಗಬೇಕು.

ಸಿಕ್ಲಿಗರರು ಸಿದ್ಧಪಡಿಸುವ ವಸ್ತುಗಳು

ಗೃಹ ಬಳಕೆವಸ್ತುಗಳು	ಕೃಷಿಬಳಕೆ ವಸ್ತುಗಳು	ಧಾರ್ಮಿಕ ವಸ್ತುಗಳು
ಚಾಕು	ಸಲಿಕೆ	ತಲವಾರ್
ಚೂರಿ	ಗುದ್ದಲಿ	ಕಬ್ಬಿಣದ ರಥ
ಇಕ್ಕಳ	ಹಾರೆ	ಕಬ್ಬಿಣದ ದೇವರ ಮೂರ್ತಿಗಳು
ಕಬ್ಬಿಣದ ಒಲೆಗಳು	ಕುಡಗೋಲು	

ಕಡಾಯಿ

ಹಂಚು

ಇಣಕೆ ಬಳೆ

ಹಾರಿ (ಕಾರ ಕುಟ್ಟುವದು)

ರೋಟಿ ಬೀಗ

ಮಚ್ಚು

ಚಿಲಕ

ಗೂಟ

ಚಮಚ

ಚುಚ್ಚುಗ (ಕಡಚಿ)

ಕುಲುಮೆ ಊದುವದು

ಕುಟ್ಟಣಿಗಿ

ಅಡಿಕೆ ಕತ್ತರಿಸುವ ಕತ್ತರಿ

ಕತ್ತರಿ

ಪಾವು, ಸೇರು.

ಬುಟ್ಟಿ

ಬಾಗಿಲುಗಳ ಗ್ರಿಪರ್

ಸೇಕಡಿ (ಒಲೆ)

ಬಾಂಡಿ ತೂಗಿ ಹಾಕುವ ಸ್ಟ್ಯಾಂಡ್

ಝೂರಿ

ಕುರ್ಜಿಗೆ

ಚಮ್ಮಟಿಗೆ

ಮೇಕು

ಗಡಾರಿ

ಉಡ

ಗಾಲಿಅಚ್ಚು

ಕಡಾಣಿ

ಗುಂಬದ ಬಳೆ

ಹೊಂಗುಬಳೆ

ಗಾಲಿಪಟ್ಟಿ

ಸುತ್ತಿಗೆ

ಚಾಣ

ಬಾಚಿ

ನೇಗಿಲು

ಅರ

ಉಳಿ

ಅಧ್ಯಾಯ: ಐದು

ಸಾಮಾಜಿಕ ಹಾಗೂ ಸಾಂಸ್ಕೃತಿಕ ಮಹತ್ವ

ಅಧ್ಯಾಯ: ಐದು

ಸಾಮಾಜಿಕ ಹಾಗೂ ಸಾಂಸ್ಕೃತಿಕ ಮಹತ್ವ

ಮಾನವ ಸಂಘ ಜೀವಿ ಎಂಬುದು ಸಮಾಜಶಾಸ್ತ್ರದ ಹಿನ್ನೆಲೆಯಲ್ಲಿ ತಿಳಿದು ಕೊಳ್ಳಬಹುದಾಗಿದೆ. ಆತನು ಸುಖ ಜೀವನವನ್ನು ಕಾಣಬೇಕಾದರೆ ಆತನ ಸಂಘ ಜೀವನದ ಸಾಧಕಬಾಧಕಗಳನ್ನು ಅರಿತುಕೊಳ್ಳತೊಡಗಿದಾಗಲೆ ಸಂಸ್ಕೃತಿ ಎಂಬುದನ್ನು ತಿಳಿದುಕೊಂಡ. ಈ ಸಂಸ್ಕೃತಿ ಎನ್ನುವದು ಆತನ ಜೀವನ ವಿಧಿ–ವಿಧಾನಗಳ ಮೂಲಕ ಅರಿತುಕೊಂಡು ಬಂದಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಮನುಕುಲದ ಸಾಮಾಜಿಕ ಪರಂಪರೆಯನ್ನು ಹೇಳಲು ಸಮಾಜಶಾಸ್ತ್ರಜ್ಞರು ಪ್ರಯತ್ನ ಪಟ್ಟಾಗಲೆ ಸಂಸ್ಕೃತಿ ಎಂಬ ಪದವು ಬಹುಮುಖಿ ಸಮಾಜದ ಹಿನ್ನೆಲೆಯಲ್ಲಿ ಅರ್ಥವನ್ನು ಪಡೆದುಕೊಂಡಿತು. 'ಕಲ್ಚರ್' ಎಂಬ ಪದಕ್ಕೆ ಭಾರತೀಯ ಸಂದರ್ಭದಲ್ಲೂ ಸಮಾನ ಪದವಾಗಿ ಹೊರ ಬಂದಿರುವುದನ್ನು ಕಾಣುತ್ತೇವೆ. ನಾಗರಿಕ ಸಮಾಜದ ಹಂತಗಳನ್ನು ಮೀರಿ ಬೆಳೆದುಕೊಂಡು ಬಂದಿರುವುದೇ ಇಲ್ಲಿ ಮುಖ್ಯವಾದುದು. ಸಭ್ಯತೆ, ತ್ಯಾಗ, ನಾಗರೀಕತೆ, ಸಾಮಾಜಿಕ ವಿನಯ ಶೀಲತೆ, ರಸಿಕತೆ, ವಿಚಾರಪರವಾದ ಚಿಂತನೆ, ಭಾವುಕತೆ, ಭಕ್ತಿ, ಸದ್ಗುಣಗಳು, ಎಲ್ಲವು ಸೇರಿಕೊಂಡು ಮನುಷ್ಯನ ನಮ್ರಗುಣಗಳೆಲ್ಲವು ಸೇರಿದಾಗ ಸಂಸ್ಕೃತಿ ಎಂಬ ಪದವು ಬಳಕೆಯಾಗುತ್ತಲಿದೆ.

ಸಾಮಾಜಿಕವಾದ ಅರ್ಥದಲ್ಲಿ ನಿರ್ಧಿಷ್ಟವಾದ ಭೌಗೋಳಿಕ ಪರಿಸರದಲ್ಲಿ ಬದುಕುತ್ತಿರುವ ಸಿಕ್ಲಿಗರ ಸಮುದಾಯವು ಅವರ ಆಚರಣೆಗಳು, ಪದ್ಧತಿಗಳು, ಆಚಾರಗಳು, ನಂಬಿಕೆಗಳು, ಆಯಾ ಜನಾಂಗದ ಸಾಂಸ್ಕೃತಿಕ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ವಿಷಯಗಳೆಲ್ಲವು ಸೇರಿಕೊಂಡು ಸಂಸ್ಕೃತಿಯ ಹಾಗೂ ಸಾಮಾಜಿಕ ಅರ್ಥವನ್ನು ಪಡೆದುಕೊಂಡಿದೆ. ಕಲೆ ಸಾಹಿತ್ಯಗಳು ಸಹ ಸಂಸ್ಕೃತಿಯಲ್ಲಿ ಅಡಕವಾಗಿವೆ. ಸಮಾಜಶಾಸ್ತ್ರಜ್ಞರು ಮನುಕುಲದ ಸಂಸ್ಕೃತಿಯನ್ನು ನಗರ ಸಂಸ್ಕೃತಿ, ಗ್ರಾಮ ಸಂಸ್ಕೃತಿ, ಹಾಗೂ ಆದಿಮಸಂಸ್ಕೃತಿ ಎಂದು ಮೂರು ನೆಲೆಗಳಲ್ಲಿ ಚಿಂತನೆ ಮಾಡಿದ್ದಾರೆ. ಆದಿಮ ಸಂಸ್ಕೃತಿಯ ಕುರಿತು ಅಧ್ಯಯನಗಳು ಪ್ರಾರಂಭವಾಗಬೇಕಾದರೆ ಬುಡಕಟ್ಟು ಜನಾಂಗದ ಬದುಕು ಅವರ ರೀತಿ ನೀತಿಗಳನ್ನು ಶಾಸ್ತ್ರೀಯವಾದ ಹಿನ್ನೆಲೆಯಲ್ಲಿ ಔಚಿತ್ಯಪೂರ್ಣವಾದ ಅರ್ಥದಲ್ಲಿ ಬಳಸಿಕೊಳ್ಳಲಾಗಿದೆ. ಒಂದು ಬುಡಕಟ್ಟು ಮತ್ತೊಂದು ಬುಡಕಟ್ಟು ಜನಾಂಗವಾಗಲಿ, ಮೂಲ ನಿವಾಸಿಗಳಾಗಲಿ, ಇವರೆಲ್ಲರ ಬದುಕನ್ನು ಮೀರಿ ನಡೆಯಲಾರರು. ಕಾಲದಿಂದ ಕಾಲಕ್ಕೆ ಬದಲಾಗುವ ಸಾಂಕ್ರಾಮಿಕ ರೋಗಗಳು ಹುಟ್ಟಿಕೊಳ್ಳುತ್ತಾ ಬರುವದು ಪ್ರಕೃತಿಯ ಮಡಿಲಲ್ಲಿ ಎನ್ನುವದನ್ನು ಖಚಿತಪಡಿಸಿಕೊಂಡಿದ್ದಾರೆ. ಜನವಸತಿ ಇರುವ ಕಡೆಗಳಲ್ಲಿ ಸಿಕ್ಲಿಗರ ಸಮುದಾಯ ಬಹಳಷ್ಟು ಚಿಂತಾಜನಕ ಸ್ಥಿತಿಯಲ್ಲಿದ್ದಾರೆ. ನಾಗರಿಕ ಸಮಾಜದ ಕಣ್ಣಿಗೆ ಬುಡಕಟ್ಟು ಜನಾಂಗ ಕಾಣುವದು ಅಪರೂಪವಾಗಿತ್ತು. ಸಿಕ್ಲಿಗರ ಬುಡಕಟ್ಟು ಜನಾಂಗವು ಕಾಣುವ ಜನರ ಬಡತನ, ಕೊಳಕುತನ, ಅನಾಗರಿಕತೆ, ಅನಕ್ಷರತೆ, ಇವುಗಳೆಲ್ಲವು ಬುಡಕಟ್ಟು ಸಮುದಾಯಕ್ಕೆ ಎಂದು ನಿರ್ಗತಿಕವಾಗಿ ಕಾಣಲಿಲ್ಲ.

ಸಿಕ್ಲಿಗರ ಬುಡಕಟ್ಟು ಜನಾಂಗವು ಭಾರತ ದೇಶದ ಐದು ರಾಜ್ಯಗಳಲ್ಲಿ ಕಾಣಿಸಿಕೊಂಡಿದೆ. ಅದರಲ್ಲಿಯೂ ಕನ್ನಡನಾಡಿನ ಬುಡಕಟ್ಟುಗಳಲ್ಲಿ ಇವರು ಒಬ್ಬರಾಗಿದ್ದಾರೆ. ಈ ಜನಾಂಗವು ಕೇವಲ ಕೆಲವು ಆದರ್ಶಗಳನ್ನು ಪಾಲಿಸಿಕೊಂಡು ಬಂದಿದೆ. ಸಿಕ್ಕಲಗಾರರು ಮತ್ತು ಸಿಕ್ಲಿಗರು ಈ ಎರಡು ಬುಡಕಟ್ಟು ಜನಾಂಗಗಳ ಪದವನ್ನು ಸಮಾಜದೊಳಗೆ ತೂಗಿ ನೋಡಿದಾಗ ಒಂದೆ ಎಂದು ಕಂಡು ಬರುತ್ತವೆ. ಆದರೆ ಈ ಎರಡು ಬುಡಕಟ್ಟುಗಳು ಬೇರೆ ಬೇರೆಯಾದ ಆಚಾರ ವಿಚಾರ, ಹಬ್ಬ, ಹರಿದಿನ, ವೇಷ ಭೂಷಣ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕ ಇನ್ನು ಮುಂತಾದ ಅಂಶಗಳಿಂದ ಬೇರೆ ಬೇರೆ ಸಂಸ್ಕೃತಿಯನ್ನು ಹೊಂದಿರುವುದು ಕಂಡು ಬರಯತ್ತದೆ.

ಈ ಬುಡಕಟ್ಟು ಜನಾಂಗ ಮೈಸೂರು ಪ್ರಾಂತದ ಮೈಸೂರು ಮತ್ತು ಬೆಂಗಳೂರು ಪ್ರದೇಶಗಳಲ್ಲಿ ಕ್ವಚಿತ್ತಾಗಿ ಕಂಡು ಬರುತ್ತವೆ. ಮುಂಬೈ ಕರ್ನಾಟಕ ಪ್ರದೇಶದ ಬೆಳಗಾಂವ, ನಿಪ್ಪಾಣಿ, ಬೈಲಹೊಂಗಲ, ರಾಮದುರ್ಗ, ಗೋಕಾಕ್, ಧಾರವಾಡ, ಹುಬ್ಬಳ್ಳಿ, ಶಿಗ್ಗಾಂವ, ಗದಗ, ಮುಧೋಳ, ಬಿಜಾಪುರ ಹಾಗೂ ಹೈದ್ರಾಬಾದ್ ಕರ್ನಾಟಕದ ಬೀದರ, ಔರಾದ್, ಭಾಲ್ಕಿ, ಹುಮನಾಬಾದ, ಗುಲ್ಬರ್ಗಾ, ಯಾದಗಿರಿ, ರಾಯಚೂರು, ಸಿಂಧನೂರು ಮತ್ತು ಕೊಪ್ಪಳ ಮುಂತಾದ ಪ್ರದೇಶಗಳಲ್ಲಿ ವಾಸವಾಗಿದ್ದಾರೆ. ಈ ಜನಾಂಗವನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಇವರು ಮೂಲ ಸಿಖ್ಖ ಸಮುದಾಯಕ್ಕೆ ಸೇರಿದವರು. ಇವರು ಕಾರಾಣಂತರಗಳಿಂದ ಮತ್ತು ದೇಶ ವಿಭಜನೆಯಾಗುವ ಹೊತ್ತಿಗೆ ಪಂಜಾಬದ ಮೂಲಕ ಈ ಜನಾಂಗ ವಲಸೆ ಹೋದರು. ಈ ಸಂದರ್ಭದಲ್ಲಿ ಹೈದ್ರಾಬಾದ ಸಂಸ್ಥಾನವನ್ನು ೧೭೨೪-೧೯೪೮ ರವರೆಗೆ ಏಳು ನಿಜಾಮನ ಸಂತತಿಗಳು ಆಳ್ವಿಕೆಯನ್ನು ನಡೆಸಿದವು. ಆ ಹೊತ್ತಿಗೆ ನಿಜಾಮನ ಆಶ್ರಯ ಪಡೆದ ಸಿಕ್ಲಿಗರ ಬುಡಕಟ್ಟು ಜನಾಂಗ ಕಬ್ಬಿಣದ ವಸ್ತುಗಳನ್ನು ತಯಾರಿಸಿ ಕೊಡುವುದರ ಜೊತೆಗೆ ಸಾಣೆ ಹಿಡಿಯುವ ಕೆಲಸ ಕೈಗೊಂಡರು. ೧೯೪೮ ರಿಂದ ಹೈದ್ರಾಬಾದ್ ಮೂಲಕ ಕರ್ನಾಟಕವನ್ನು ಪ್ರವೇಶಿಸಿದರು.

ಈ ಸಮುದಾಯವನ್ನು ಭಾರತದ ಹಾಗೂ ಕರ್ನಾಟಕದಲ್ಲಿಯ ಯಾವ ಬುಡಕಟ್ಟುಗಳ ಕುರಿತು ಅಧ್ಯಯನ ಮಾಡುವ ಸಂದರ್ಭದಲ್ಲಿ ಎಲ್ಲೂ ಉಲ್ಲೇಖವನ್ನು ಮಾಡಿಲ್ಲ. ಸಿಕ್ಲಿಗರ್ ಎಂಬ ಹೆಸರುಗಳು ಭಾರತ ದೇಶದ ಜನಗಣತಿಯಲ್ಲಿ ಐದು ರಾಜ್ಯಗಳಲ್ಲಿ ಉಲ್ಲೇಖಗಳಿವೆ. ಆದರೆ ಕರ್ನಾಟಕದ ಜನಗಣತಿಯಲ್ಲಿ ಯಾವ ಪುಸ್ತಕದಲ್ಲಿಯೂ ಉಲ್ಲೇಖಗಳು ದೊರಕುವುದಿಲ್ಲ. ಆ ಮೂಲಕ ಸಿಕ್ಲಿಗರ ಬುಡಕಟ್ಟು ಜನಾಂಗದ ಕುರಿತು ಅಸ್ಪಷ್ಟ ಮಾಹಿತಿಗಳು ದೊರಕುತ್ತವೆ. ಸಿಖ್ಖರಂತೆ ಇವರು ಮೂಲ ಸಂಸ್ಕೃತಿ, ಆಚರಣೆಗಳನ್ನು ಹಾಗೂ ಸಾಮಾಜಿಕ ಸ್ಥಿತಿ-ಗತಿಗಳನ್ನು ಹೊಂದಿರುತ್ತಾರೆ. ಆದರೆ ಸಿಖ್ಖರಂತೆ ಸಮಾನವಾದ ಸ್ಥಾನಮಾನಗಳು ದೊರಕಿದಂತೆ ಸಿಕ್ಲಿಗರಿಗೆ ದೊರೆತಿಲ್ಲ.

ಸಿಕ್ಲಿಗರ ಬುಡಕಟ್ಟು ಮೂಲ ಸಂಸ್ಕೃತಿಯೊಂದರ ಹರಿಕಾರರು. ಇವರು ಗ್ರಾಮದ ಯಾವುದೆ ಸಂಪರ್ಕವಿಲ್ಲದೆ ಬಹು ಕಾಲ - ಶತಮಾನಗಳಿಂದಲೂ ಅಲೆಮಾರಿ ವೃತ್ತಿ ಕೈಗೊಂಡರು. ತಮ್ಮ ಹೊಟ್ಟೆಪಾಡಿಗಾಗಿ ದುಡಿಯುವ ದೈನಂದಿನ ಕೆಲಸ ಕಾರ್ಯಗಳಿಗಾಗಿ ಹತ್ತಾರು ಕಡೆ ವಲಸೆಗಾಗಿ ಹೋಗಿದ್ದಾರೆ. ಸಮುದಾಯದಿಂದ ಸಮುದಾಯಗಳು ಬೇರ್ಪಟ್ಟು ವಿವಿಧ ಸ್ಥಳ-ಪ್ರದೇಶಗಳಲ್ಲಿ ವಾಸವಾಗಿದ್ದಾರೆ. ಎಲ್ಲೆ ಹೋದರು ಸಹಿತ ಮೂಲ ಸಾಮಾಜಿಕ ವ್ಯವಸ್ಥೆಯನ್ನು ಮಾತ್ರ ಬಿಟ್ಟುಕೊಟ್ಟಿಲ್ಲ. ಆ ಸಾಮಾಜಿಕ ವ್ಯವಸ್ಥೆಯನ್ನು ಸಂಪೂರ್ಣವಾಗಿ ಪಾಲಿಸಿಕೊಂಡು ಬಂದಿದ್ದಾರೆ.

ಇವರಲ್ಲಿ ಕಾಣುವ ಸಾಮಾಜಿಕ ವ್ಯವಸ್ಥೆಯು ಸಹಿತ ಆದಿಮ ಬುಡಕಟ್ಟು ಸಂಸ್ಕೃತಿಯನ್ನು ಹೊಂದಿಕೊಂಡು ಬಂದಿದ್ದಲ್ಲದೆ ಆ ಪಳಯುಳಿಕೆಗಳ ವಾರಸುದಾರರಾಗಿ ಕಂಡು ಬಂದಿರುವುದನ್ನು ಸಮಾಜಶಾಸ್ತ್ರಜ್ಞರು ಗುರುತಿಸಬೇಕಾದ ಜರೂರಿಯಾಗಿದೆ. ಇಂತಹ ಅಂಶಗಳನ್ನು ಬೆಳಕಿಗೆ ತರಲು ಪ್ರಯತ್ನಿಸಿದ್ದಾರೆ. ಇತ್ತಿಚೆಗಂತು ಸಿಕ್ಲಿಗರ ಸಮುದಾಯವು ಹೊರಬಂದಿದೆ. ಬೇಸಾಯ, ಒಕ್ಕಲುತನದಂತಹ ಕೃಷಿ ಪ್ರಧಾನವಾದ ಸಂಸ್ಕೃತಿಯಿಂದ ಬಹು ದೂರವಿದ್ದಾರೆ. ಇವರು ಯಾವುದೆ ಸಮುದಾಯದ ಜನರೊಂದಿಗೆ ನೇರವಾದ ಸಂಪರ್ಕ ಹಾಗೂ ವ್ಯವಸ್ಥೆಗೆ ಅನುಗುಣವಾಗಿ ಹೊಂದಿಕೊಂಡವರಲ್ಲ. ಎಂತಹ ಕಷ್ಟಗಳ ಸಂದರ್ಭಗಳು ಬಂದರು ಎಂದೂ ತಮ್ಮ ಸಾಮಾಜಿಕ ಪದ್ಧತಿಯನ್ನು ಬಿಟ್ಟು ಕೊಟ್ಟಿಲ್ಲ. ಆ ಸಂಸ್ಕೃತಿಯನ್ನು ಹಾಗೆ ಕಾಪಾಡಿಕೊಂಡು ಬಂದಿದ್ದಾರೆ. ಆಜಸಮುದಾಯ ಮತ್ತು ನಾಗರಿಕ ಜಗತ್ತಿನೊಂದಿಗೆ ನೇರ ಸಂಪರ್ಕವನ್ನು ಹೊಂದಲು ಸಾಧ್ಯವಾಗಿಲ್ಲ. ಆದರೆ ಸಿಖ್ಖ್ ಧರ್ಮದೊಂದಿಗೆ ನೇರ ಸಂಬಂಧ ಹೊಂದಿದ್ದಾರೆ ಅದರೆ ಇತರ ಸಮುದಾಯಗಳ ಜೊತೆಗೆ ಸಂಪರ್ಕ ಹೊಂದದೆ ದೂರವಾಗಿದ್ದಾರೆ. ಅವರ ಸಂಬಂಧಗಳನ್ನು ಕಡಿದು ಹಾಕಿಕೊಂಡಿದ್ದಾರೆ. ಸಿಕ್ಲಿಗರ ಬುಡಕಟ್ಟು ಸಮುದಾಯದ ಮೇಲೆ ಕ್ರಿಶ್ಚಿಯನ್, ಪಾದ್ರಿಗಳಂತಹ ಧರ್ಮಗಳು ಪ್ರಭಾವ ಬೀರಲು ಸಾಧ್ಯವಾಗಿಲ್ಲ. ಆದರೆ ಸಿಖ್ಖ್ ಧರ್ಮ ಮಾತ್ರ ಪ್ರಭಾವ ಬೀರಿರುವುದು ಸತ್ಯ ಸಿದ್ಧವಾದ ಅಂಶವಾಗಿದೆ. ಸಿಖ್ಖ್ ಧರ್ಮವನ್ನು ಮಾತ್ರ ಒಂದು ಕೈಬಿಟ್ಟಿಲ್ಲ. ಸಾಮಾಜಿಕ ವ್ಯವಸ್ಥೆಯ ಸಂದರ್ಭದಲ್ಲಿ ಹಿಂದು ಧರ್ಮದ ದೇವರುಗಳ ಪ್ರಭಾವ ಸಿಕ್ಲಿಗರ ಮೇಲೆ ಸ್ವಲ್ಪ ಮಟ್ಟಿಗೆ ಆಗಿದೆ. ಬುಡಕಟ್ಟು ಜನಾಂಗ ಕಾಲ ದೇಶಗಳಲ್ಲಿ ಯಾರ ಆಡಳಿತಕ್ಕೂ ಒಳಪಡದೆ ಇರುವದು ಸ್ಪಷ್ಟವಾಗುತ್ತದೆ.

ಸಿಕ್ಲಿಗರ ಸಾಮಾಜಿಕ ವ್ಯವಸ್ಥೆಗೆ ವೇದ, ಉಪನಿಷತ್ತುಗಳಾಗಲಿ, ಧರ್ಮಶಾಸ್ತ್ರಗಳು ಅಥವಾ ಇನ್ನಾವುದೇ ಧಾರ್ಮಿಕ ಶಾಸ್ತ್ರಗಳ ಪರಂಪರೆ ಎಂಬುದಂತು ಇಲ್ಲವೆ ಇಲ್ಲ. ಕಾನೂನು ಕ್ರಮದ ವ್ಯವಸ್ಥೆ ಇವರಿಗೆ ಸಂಪರ್ಕವಾಗಿಲ್ಲ ಆದರು ಕಾನೂನು ಕ್ರಮದ ಸಾಂಘಿಕ ಜೀವನದಲ್ಲಿ ಉಂಟಾಗಬಹುದಾದ ಸಾಮಾಜಿಕ ಸಮಸ್ಯೆಗಳ ತೊಡಕುಗಳಿಗೆ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಿದ್ದಾರೆ. ಅವರ ರೀತಿ, ನೀತಿ, ನಿಯಮಗಳೆಲ್ಲಾ ಈ ಜನರ ಸಾಮಾಜಿಕ ವ್ಯವಸ್ಥೆಗೆ ಹೊಂದಿಕೊಂಡು ಬಂದಿರುತ್ತದೆ. ಇಂದಿನ ವರ್ತಮಾನದ ಸಂದರ್ಭದಲ್ಲಿ ಹಿಂದಿನ ನಿಯಮಗಳನ್ನೇ ಅನುಸರಿಸಿಕೊಂಡು, ಪಾಲಿಸಿಕೊಂಡು ಬರುತ್ತಿದ್ದಾರೆ. ಬುಡಕಟ್ಟು ಜನರಿಗೆ ನ್ಯಾಯ ಪದ್ಧತಿ, ಪಂಚಾಯ್ತಿ ವ್ಯವಸ್ಥೆ, ಹಿಂದು ಶಾಸ್ತ್ರಗಳ ಸಂಪೂರ್ಣವಾದ ಮಾಹಿತಿಗಳು ಇರದಿದ್ದರು ಕೆಲವೊಂದನ್ನು ಇಂದಿನ ಪ್ರಾದೇಶಿಕವಾದ ಹಿನ್ನೆಲೆಯಲ್ಲಿ ನಡೆದುಕೊಂಡು ಬರುತ್ತಿದ್ದಾರೆ. ಇತ್ತೀಚಿನ

ಬುಡಕಟ್ಟು ಜನರಿಗೂ ಆಧುನಿಕವಾದ ನ್ಯಾಯ ಪದ್ಧತಿಗಳು ಅನ್ವಯವಾಗುವ ಹಲವು ಸಂಗತಿಗಳಿವೆ. ಮಾನವನ ಮೂಲ ಸ್ವಭಾವಕ್ಕೂ ಸಿಕ್ಲಿಗರ ಸ್ವಭಾವ ಗುಣಗಳಿಗೂ ಅಷ್ಟೇನು ವ್ಯತ್ಯಾಸವು ಇಲ್ಲವೇ ಇಲ್ಲ. ಸಿಕ್ಲಿಗರ ಬುಡಕಟ್ಟು ಜನಾಂಗದಲ್ಲಿ ಹುಟ್ಟಬಹುದಾದ ಸಾಮಾಜಿಕ ಪಿಡುಗುಗಳು ಇಲ್ಲಿ ಕಂಡು ಬರುತ್ತವೆ.

ಶ್ರೀ ಬಲಬೀರಸಿಂಗ್ ಪಾವಾ ಅವರು ಸಿಕ್ಲಿಗರ ಬುಡಕಟ್ಟು ಜನಾಂಗದವರನ್ನು ಸಿಖ್ಖ್ ಧರ್ಮದ ಮೂಲ ವೃತ್ತಿಯನ್ನು ಮತ್ತು ಮೂಲ ಸಂಸ್ಕೃತಿ ಹೊಂದಿದವರೆಂದು ಹೇಳುತ್ತಾರೆ. ಹೀಗಾಗಿ ಸಿಕ್ಲಿಗರ ಬುಡಕಟ್ಟು ಜನಾಂಗದವರ ಸಲುವಾಗಿ ಸಿಕ್ಲಿಗರ ಅಸೋಷಿಯೇಷನ್ ಪ್ರಾರಂಭಿಸಿದ್ದಾರೆ. ಕರ್ನಾಟಕದಲ್ಲಿ ಕೂಡ ಇಂತಹ ಬುಡಕಟ್ಟು ಜನಸಮುದಾಯವು ನೆಲೆಸಿದ್ದಾರೆ. ಸಿಕ್ಲಿಗರು ತಮ್ಮನ್ನು ಸಿಖ್ಖ್, ಸಿಕ್ಲಿಗರ, ಎಂದು ಸಂಬೋಧಿಸಬೇಕೆಂದು ಆಶಯ ವ್ಯಕ್ತಪಡಿಸುತ್ತಾರೆ. ಸಿಕ್ಕಲಿಗಾರ, ಹಾಗೂ ಸಿಕ್ಲಿಗರು, ಬೇರೆ ಬೇರೆ ಎಂದು ಇದುವರೆಗೂ ಯಾವ ಬುಡಕಟ್ಟು ಅಧ್ಯಯನಕಾರರು ಗುರುತಿಸಿಲ್ಲ. ಅವರ ಆಚಾರ ವಿಚಾರ ಜೀವನ ಪದ್ಧತಿ, ಧಾರ್ಮಿಕ, ಆರ್ಥಿಕ, ಸಾಮಾಜಿಕ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಾರೆ. ಸಿಕ್ಲಿಗರರಲ್ಲಿ ಕಟ್ಟಿ ಮನೆಗಳಾಗಲಿ ಇಲ್ಲ. ಇವರದು ಪಂಚರನ್ನೊಳಗೊಂಡ ಒಂದು ಪದ್ಧತಿಯನ್ನು ಸಾಮಾಜಿಕವಾಗಿ ಹೊಂದಿದ್ದಾರೆ. ಇಲ್ಲಿಯ ಬುಡಕಟ್ಟು ಜನಾಂಗವು ಯಾರ ಮನೆಯ ಪಕ್ಕದಲ್ಲಿ ಹಾಗೂ ಮನೆಯ ನೆರೆ ಹೊರೆಯವರನ್ನು ಒಂದು ದಿನವು ಅವರೊಂದಿಗೆ ಸಾಮಾಜಿಕವಾಗಿ ಒಪ್ಪಿಕೊಂಡಿಲ್ಲ. ಸಾಮಾನ್ಯವಾಗಿ ವ್ಯವಸ್ಥೆಯು ಪ್ರಬಲವಾಗಿ ಕಂಡು ಬರುತ್ತದೆ.

ಸಿಕ್ಲಿಗರ ಸಮುದಾಯದಲ್ಲಿರುವ ಹಿರಿಯರನ್ನು ಅಥವಾ ವಯೋವೃದ್ಧರಾದ ಬುಡಕಟ್ಟು ಜನಾಂಗದ ಮುಖಂಡನನ್ನು ಪಂಚಮರೆಂದು ಕರೆಯುತ್ತಾರೆ. ಆತನೆ ಮುಖ್ಯಸ್ಥನೆಂದು, ನಾಯಕನೆಂದು ಒಪ್ಪಿಕೊಂಡಿದ್ದಾರೆ. ಇಬ್ಬರನ್ನು ಪೂಜಾರಿಗಳೆಂದು ಇಬ್ಬರನ್ನು ಹಿರಿಯರೆಂದು ಒಟ್ಟು ಐದು ಜನರ ಪಂಚರನ್ನು ಹೊಂದಿದ್ದಾರೆ. ಪುರುಷ ಪ್ರಧಾನವಾದ ಸಂಸ್ಕೃತಿಯೆ ಇವರಲ್ಲಿ ಎದ್ದು ಕಾಣುತ್ತದೆ. ಇವರಲ್ಲಿ ದ್ರಾವಿಡ ಸಂಸ್ಕೃತಿಯ ಅಂಶಗಳನ್ನು ಹೊಂದಿದೆ. ಪ್ರಾದೇಶಿಕವಾಗಿ ಹಲವಾರು ಸತ್ಯ ಸಂಗತಿಗಳು ನಮ್ಮಲ್ಲಿ ಕಂಡು ಬರುತ್ತವೆ. ಒಂದಡೆ ಕೆಲವೆ ಕುಟುಂಬಗಳು ಸೇರಿಕೊಂಡು ವಾಸಮಾಡುತ್ತಾರೆ. ಸಮೂಹದ ನಾಯಕತ್ವವನ್ನು ಪರಂಪರಾನುಗತವಾಗಿ ಹೊಂದದೆ ಆಗಾಗ ಅವರನ್ನು ಬದಲಿಸುವ ಕ್ರಿಯೆ ಇಲ್ಲಿನ ಬುಡಕಟ್ಟು ಹೊಂದಿದೆ. ಸಾಮಾಜಿಕ ಆಡಳಿತದಲ್ಲಿ ಮೇಲು ಕೀಳು, ಬಡತನ, ಶ್ರೀಮಂತ, ಎಂಬ ಬೇಧ ಭಾವ ಇಲ್ಲ. ಇಲ್ಲಿ ಕುಲಗಳು ಒಂದೇಯಾಗಿರುತ್ತವೆ.

ಹದಿನೆಂಟು ಬೆಡಗುಗಳು ಸಮಾನವಾಗಿ ಕಂಡು ಬರುತ್ತವೆ. ಮನುಷ್ಯ ಸಮಾಜ ಹಾಗು ಸಂಘ ಜೀವಿಯಾಗಿದ್ದಾನೆ. ಸಮಾಜದಲ್ಲಿ ಬದುಕನ್ನು ನಡೆಸುವವರು ಅನೇಕ ಸಮಾಜದ ರೀತಿ ನೀತಿಗಳೊಂದಿಗೆ, ವ್ಯವಸ್ಥೆಗಳೊಂದಿಗೆ ಮುಂದುವರೆಸಿಕೊಂಡು ಬಂದಿದ್ದಾರೆ. ಸಮಾಜವೆಂಬುದು ಒಂದು ಅತಿ ಸಂಕೀರ್ಣವಾದ ಘಟಕವಾಗಿದೆ. ಹೀಗಾಗಿ ಸಿಕ್ಲಿಗರ ಸಾಮಾಜಿಕ ವ್ಯವಸ್ಥೆ ಬಹುಮುಖಿ ಸಂಸ್ಕೃತಿಯನ್ನು ಹೊಂದಿವೆ.

ಕರ್ನಾಟಕದಾದ್ಯಂತ ವಲಸೆ ಹೋದ ಬುಡಕಟ್ಟು ಸಮುದಾಯಗಳಲ್ಲಿ ಸಿಕ್ಲಿಗರರುಸಮುದಾಯವು ಒಂದು. ಕರ್ನಾಟಕ ಸರ್ಕಾರ ಇವರನ್ನು ಹೆಚ್ಚಾಗಿ ಗುರುತಿಸಿಯೇ ಇಲ್ಲ. ಆದರೂ ಇತ್ತೀಚಿನ ದಿನಗಳಲ್ಲಿ ಇವರನ್ನು ಜನಸಂಖ್ಯೆ ಆಧಾರಿತವಾಗಿ ಗುರುತಿಸಲಾಗಿದೆ. ಬುಡಕಟ್ಟು ಸಮಗ್ರ ಅಧ್ಯಯನವನ್ನು ಮಾಡುವಾಗಲೂ ಸಹ ಈ ಜನಾಂಗದ ಕುರಿತು ಯಾರು ಲಕ್ಷ್ಯವನ್ನು ವಹಿಸಿಲ್ಲ. ನಿರ್ಲಕ್ಷಿಸಲ್ಪಟ್ಟ ಜನಾಂಗವಾಗಿದೆ. ಸಿಕ್ಲಿಗರರುಯಾವುದೇ ಬುಡಕಟ್ಟು ಸಮಾಜದ ಸಮುದಾಯದ ಜೊತೆಗೆ ನೇರವಾಗಿ ಹೊಂದಾಣಿಕೆಯನ್ನು ಹೊಂದಿಲ್ಲ. ಸಂಬಂಧವನ್ನು ಬೆಳೆಸಿಕೊಂಡಿಲ್ಲ. ಬುಡಕಟ್ಟು ಜನಾಂಗ ಸಮಾಜದೊಂದಿಗೆ ಬೆರೆಯದೇ ಸಾಂಸ್ಕೃತಿಕವಾದ ವೈಶಿಷ್ಟ್ಯಗಳನ್ನು ಮೈಗೂಡಿಸಿಕೊಳ್ಳದೇ ನಗರ ಹಾಗೂ ಪಟ್ಟಣ ಪ್ರದೇಶದ ಮೂಲೆಯೊಂದರಲ್ಲಿ ಕುಳಿತುಕೊಂಡು ಜೀವನ ಸಾಗಿಸುವುದರಿಂದ ಯಾರ ಕಣ್ಣಿಗೂ ಬಿದ್ದಂತೆ ಕಂಡಿಲ್ಲ. ಕರ್ನಾಟಕದಲ್ಲಿ ನಾವು ಪರಿವೀಕ್ಷಣೆ ಮಾಡಿದಾಗ ನಮಗೆ ದೊರಕುವ ಮಾಹಿತಿ ಆಧಾರದ ಮೇಲೆ ಯಾವುದೇ ರೀತಿಯ ಕೊಡುಕೊಳ್ಳುವಿಕೆಯೇ ಇವರಲ್ಲಿ ಕಂಡು ಬರುವುದಿಲ್ಲ. ಮೇಲಾಗಿ ಜನಾಂಗದವರು ಸಿಗುವುದು ಕೂಡಾ ಅಪರೂಪ. ಹೈದ್ರಾಬಾದ್ ಸಂಸ್ಥಾನವನ್ನು ನಿಜಾಮನ ಆಡಳಿತ ನಡೆಸಿದ್ದರಿಂದ ನೇರವಾಗಿ ಕರ್ನಾಟಕದಲ್ಲಿ ಬಂದು ತದನಂತರ ಮೈಸೂರು-ಬೆಂಗಳೂರು ಪ್ರದೇಶದಲ್ಲಿ ಕೆಲವು ಕುಟುಂಬಗಳನ್ನು ಹೊರತುಪಡಿಸಿದರೆ ಉತ್ತರ ಕರ್ನಾಟಕದಲ್ಲಿ ಬಹು ಸಂಖ್ಯಾತರು ವಾಸವಾಗಿದ್ದಾರೆ. ತಮ್ಮದೇಯಾದ ಸಂಸ್ಕೃತಿ ಬದುಕನ್ನು ರೂಪಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಹೈದ್ರಾಬಾದ್ ಕರ್ನಾಟಕ ಪ್ರದೇಶ ಹಾಗೂ ಉತ್ತರಕರ್ನಾಟಕ ಪ್ರದೇಶಗಳಲ್ಲಿ ಮಾತ್ರ ಹೇರಳವಾಗಿ ಅಂದರು ಗುಂಪಾಗಿ ಕಾಣಿಸಿಕೊಂಡಿದ್ದಾರೆ. ಅಲೆಮಾರಿ ಜೀವನ ಕೈಗೊಂಡು ಕೆಲಹೊತ್ತು ಇಲ್ಲಿಯೇ ವಾಸವಾಗಿರುವುದು ನಮಗೆ ಕಂಡು ಬರುತ್ತದೆ.

ಇವರಲ್ಲಿಯೂ ಕೂಡಾ ಆಚಾರ-ವಿಚಾರ, ಸಂಪ್ರದಾಯ, ನಂಬಿಕೆಗಳು ಸಹ ದೊರಕುವುದರಲ್ಲಿ ಅನುಮಾನವಿಲ್ಲ. ಬಡತನ ಕಿತ್ತು ತಿನ್ನುವ ಹಸಿವನ್ನು ತುಂಬಿಸಿಕೊಳ್ಳುವುದಕ್ಕಾಗಿ

ದಿನ ರಾತ್ರಿ ದುಡಿದರೂ ಕೂಲಿ ಸಿಗದಾಗ ಕಂಗಾಲಾಗಿದ್ದಾರೆ. ಇಂತಹ ಹೊತ್ತಿನಲ್ಲಿ ಆಚರಣೆ ಸಂಪ್ರದಾಯಗಳನ್ನು ನಡೆಸಬೇಕಾದರೆ ಹೇಗೆ ನಡೆಸಬೇಕೆಂಬುದು ಚಿಂತಾಜನಕ ಸ್ಥಿತಿಯಲ್ಲಿದ್ದಾರೆ. ಹೀಗಾಗಿ ಬದುಕಿನ ಬವಣೆಗಳನ್ನು ಕಾಣಲು ಪ್ರಯತ್ನಿಸಿದ್ದಾರೆ. ಪುನಃ ತಮ್ಮ ಯಾವುದೇ ಅಂತರದ ಭಾವನೆ ಹೊಂದಿಲ್ಲ. ಸಂಪ್ರದಾಯ-ಆಚರಣೆಗಳು ದೂರವಾಗಿವೆ. ಆದರೂ ತಮ್ಮದೇ ಆದ ಮೂಲ ಸಂಪ್ರದಾಯ-ಆಚರಣೆಗಳು ನಡೆಸಿಕೊಂಡು ಬಂದಿರುವುದನ್ನು ನಾವು ಕಾಣಬಹುದು.

ಸಿಕ್ಲಿಗರ ಬುಡಕಟ್ಟು ಜನಾಂಗದ ಬಗ್ಗೆ ಸರ್ಕಾರ ವರದಿಯನ್ನಾಗಲಿ, ಪರಿಚಯಾತ್ಮಕ ಲೇಖನಗಳ ಮೂಲಕ ಸ್ಥೂಲ ವಿವರಗಳನ್ನು ಕೂಡಾ ಕೊಟ್ಟಿಲ್ಲ. ಇಂತಹ ಬುಡಕಟ್ಟುಗಳು ಏಷ್ಟೋ ವರ್ಷಗಳು ಹೊರ ಪ್ರಪಂಚದ ನಾಗರಿಕ ಮನುಷ್ಯನ ಸಂಪರ್ಕಕ್ಕೆ ಬಾರದೇ ಹಾಗೇ ಉಳಿದಿವೆ. ಇಂದಿನ ದಿನಮಾನಗಳಲ್ಲಿ ಚಂದ್ರಲೋಕ, ಮಂಗಳ ಲೋಕಗಳಲ್ಲಿ ಯಂತ್ರ ನಡೆಸುವುದಾಗಲಿ, ಏನೇ ವಸ್ತು ವಿಷಯಗಳು ನಡೆದರೂ ಸಹಿತ ತನ್ನ ಅಧೀಮ ಸಂಸ್ಕೃತಿಯನ್ನು ಬಿಟ್ಟುಕೊಡಲಾಗಿದ್ದು, ಒಂದು ಬುಡಕಟ್ಟು ಒಂದು ಪ್ರತ್ಯೇಕವಾದ ಮತ್ತೊಂದು ಪ್ರದೇಶಕ್ಕೆ ಅದು ಸ್ಥಳಾಂತರಗೊಳ್ಳುತ್ತದೆ. ಸಾಮಾನ್ಯವಾಗಿ ಬುಡಕಟ್ಟು ಘರ್ಷಣೆಯ ಮೂಲಕ ಬಲಾಢ್ಯ ತುಳಿತಕ್ಕೆ ಒಳಗಾಗಿ ಮತ್ತೊಂದು ಅನುಕೂಲಕರವಾದ ನೆಲೆ ಕಂಡುಕೊಳ್ಳುವುದು ಸಾಮಾನ್ಯವಾಗಿದೆ. ಇಂತಹ ಅನಿವಾರ್ಯತೆಯಿಂದ ಬುಡಕಟ್ಟು ಸಮುದಾಯಗಳಲ್ಲಿ ಸಿಕ್ಲಿಗರ ಒಂದು ಜನಾಂಗವಾಗಿದೆ.

ಸಿಕ್ಲಿಗರ ಕುರಿತು ಕ್ಷೇತ್ರಕಾರ್ಯ ಕೈಗೊಂಡು ಸಂಶೋಧನಾ ಅಧ್ಯಯನ ಕೈಗೊಂಡರೂ ಇವರ ಮೂಲ ಸ್ಥಳ ಯಾವುದು ಎಲ್ಲಿಂದ ಬಂದರು ಹೇಗೆ ಬಂದರು ಯಾವ ಪ್ರದೇಶ ಮೂಲ ಮತ್ತು ಪ್ರಸಾರ ಹೇಗೆ ತನ್ನೊಳಗಡೆ ಹರಿದುಕೊಂಡು ಬರುತ್ತದೆಂಬ ಕಾಳಜಿಗಳನ್ನು ಅವರು ತಮ್ಮ ಸಂಸ್ಕೃತಿ ಮೂಲಕ ಅರಿಯಬೇಕಾಗಿದೆ. ನನ್ನ ಅಧ್ಯಯನ ಕ್ಷೇತ್ರಕಾರ್ಯದಲ್ಲಿ ಬಹುಪಾಲು ಜನಾಂಗವು ಶೇ.೯೫ ರಷ್ಟು (ತೊಂಬತ್ತೈದು) ಜನರಿಗೆ ತಾವು ಯಾವ ಭಾಗದಿಂದ ಬಂದವರೆಂದು ತಮಗೆ ಸ್ಪಷ್ಟವಾಗಿ ತಿಳಿದುಕೊಂಡಿಲ್ಲ ಅಂತೆ ಕಂತೆಗಳ ಮೂಲಕ ತಮ್ಮ ಜನಾಂಗವು ಹೇಗೆ ಬೆಳೆದು ಬಂದಿದೆ. ಎನ್ನುವುದು ನಮಗೆ ಕಂಡು ಬರುತ್ತಿಲ್ಲ. ಎಲ್ಲಿಂದ ಯಾವ ಒತ್ತಡದಿಂದ ಬಂದವರೆಂಬುದು ನಮಗೂ ತಿಳಿಯುತ್ತಿಲ್ಲ. ಸಿಖ್ಖ್, ಹಿಂದಿ ಮಿಶ್ರಿತವಾದ ಭಾಷಾ ರೂಪಗಳ ಮೂಲಕ ಬಂದವರೆಂಬುದು ನಮಗೆ ಸ್ಪಷ್ಟವಾಗಿ ಕಂಡು ಬರುತ್ತದೆ. ಮಾನವಶಾಸ್ತ್ರ ಮತ್ತು ಸಮಾಜಶಾಸ್ತ್ರ ಇವೆರಡು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ನಿಕಟವಾದ ಸಂಬಂಧವಿದೆ. ಸೋದರ ಸಂಬಂಧ ಹೊಂದಿದೆ. ಈ ಶಾಸ್ತ್ರಗಳು ಎರಡು ನೋಡಿದಾಗ ನಮಗೆ ಕಂಡು ಬರುತ್ತವೆ. ಹೆಚ್ಚು

ಮಾನವನಿಗೆ ಮಾತ್ರ ಸಮಾಜವನ್ನು ನಿಕಟ ಸಂಬಂಧ ಹೊಂದಿರುವುದರಿಂದ ಸಮಾಜಶಾಸ್ತ್ರ ಸಮಾಜವನ್ನು ಕುರಿತು ಚಿಂತನೆಗೊಳಪಡಿಸುತ್ತದೆ. ಚರ್ಚೆಯನ್ನು ಮಾಡುತ್ತವೆ. ಮಾನವಶಾಸ್ತ್ರ ಮಾನವನನ್ನು ಕುರಿತು ಚಿಂತನೆಗೊಳಪಡಿಸುತ್ತವೆ. ಹೀಗಾಗಿ ಈ ಎರಡು ಶಾಸ್ತ್ರಗಳು ಪ್ರಾಮುಖ್ಯತೆಯನ್ನು ಪಡೆಯಲು ಸಖ್ಯವಾಗಿದೆ. ಮಾನವ ಸಮಾಜ ಮತ್ತು ಸಂಸ್ಕೃತಿಗಳನ್ನು ಕುರಿತು ಚಿಂತನೆಯನ್ನು ಮಾಡುತ್ತವೆ. ಸಂಸ್ಕೃತಿ ಮತ್ತು ಸಾಮಾಜಿಕ ವಸ್ತುಗಳನ್ನು ಸಮಾಜಶಾಸ್ತ್ರದ ಕೆಲಸವಾದರೂ ಮಾನವಶಾಸ್ತ್ರ ಎಲ್ಲಾ ಮಾನವ ಕುಲಗಳ ಸಂಸ್ಕೃತಿಗಳನ್ನು ಪ್ರತಿಬಿಂಬಿಸುತ್ತವೆ.

ಸಮಾಜಶಾಸ್ತ್ರವು ಮಾನವ ಸಂಸ್ಕೃತಿಯ ಗೊತ್ತಾದ ಅಂಶವಾದ ಸಾಮಾಜಿಕ ಅಂಶಗಳನ್ನು ಕುರಿತು ಚಿಂತನೆಗೊಳಪಡಿಸುತ್ತವೆ. ಮಾನವಶಾಸ್ತ್ರದ ಬೃಹತ್ ಸಂಸ್ಕೃತಿಯನ್ನೇ ಅಧ್ಯಯನ ಕೈಗೊಳ್ಳಬೇಕಾಗಿದೆ. ಮಾನವ ಸಂಸ್ಕೃತಿ ತನ್ನೊಳಗಡೆ ತನ್ನ ಸಂಸ್ಕೃತಿಯನ್ನು ಪ್ರತಿಪಾದನೆ ಮಾಡಲಾಗುತ್ತದೆ. ಮಾನವಶಾಸ್ತ್ರ ಸಂಪೂರ್ಣವಾಗಿ ಮಾನವನ ಬೃಹತ್ ಸಂಸ್ಕೃತಿಯನ್ನೇ ಅಲುಗಾಡಿಸುತ್ತದೆ. ಮಾನವನ ಪ್ರಬಲವಾದ ಸಂಸ್ಕೃತಿ ವಿರೋಧಿ ನೀತಿಯನ್ನು ಪ್ರತಿಪಾದನೆ ಮಾಡುತ್ತದೆ. ಪ್ರಪಂಚದ ಯಾವುದೇ ಭಾಗವನ್ನು ಬಿಡದೇ ಎಲ್ಲಾ ಕಡೆ ನಡೆದ ಸಮಾಜ ಮತ್ತು ಸಂಸ್ಕೃತಿಗಳಲ್ಲಿ ನಡೆಯುವ ಚಿಂತನೆ-ವಿಚಾರಧಾರೆಗಳನ್ನು ಪರೀಕ್ಷಿಸಿ ಒರೆಗಲ್ಲಿಗೆ ಹಚ್ಚುವ ಕ್ರಿಯೇ ಮಾನವಶಾಸ್ತ್ರ ಮಾಡುತ್ತದೆ. ಸಂಸ್ಕೃತಿಗಳ ವಿವಿಧ ಆಯಾಮಗಳನ್ನು ಕುರಿತು ಚಿಂತನಾರ್ಹವಾಗಿ ಮಾಡುವುದೇ ಸಂಸ್ಕೃತಿಯಾಗಿದೆ. ಮಾನವನ ರೀತಿ, ನೀತಿ-ನಿಯಮಗಳು ಹಾಗೂ ಆತನ ವರ್ತನೆಗಳನ್ನು ಪ್ರತಿಪಾದಿಸುವ ರೀತಿಯನ್ನು ಮಾನವಶಾಸ್ತ್ರ ಸಂಪೂರ್ಣವಾಗಿ ವಿವರಿಸುತ್ತದೆ. ಮಾನವಶಾಸ್ತ್ರ ಮನುಷ್ಯನಲ್ಲಿನ ವಿವಿಧ ನಡಾವಳಿಕೆಗಳನ್ನು ಪ್ರತಿಬಿಂಬಿಸುತ್ತದೆ. ಇತಿಹಾಸದ ಮೂಲಕ ಸಂಸ್ಕೃತಿಯ ಚಿಂತನೆಗೆ ಈ ಮಾನವಶಾಸ್ತ್ರ ತಳಪಾಯ ಹಾಕಿದೆ. ಸಂಸ್ಕೃತಿಗಳ ತತ್ವ ಸಾರಗಳನ್ನು ಗುರುತಿಸಿ ಕಾರ್ಯೋನ್ಮುಖವಾಗುವ ಚಿಂತನಾಧಾರೆಗಳನ್ನು ಈ ಶಾಸ್ತ್ರ ಮಾಡುತ್ತದೆಂಬುದನ್ನು ಮನಗಾಣಬೇಕಾಗಿದೆ.

ಈ ಮೇಲೆ ವಿವರಿಸಿದಂತೆ ಮಾನವಶಾಸ್ತ್ರ ಹಾಗೂ ಸಮಾಜಶಾಸ್ತ್ರ ಮುಖಾಮುಖಿಯಾಗಿ ಸಿಕ್ಲಿಗರರು ಬುಡಕಟ್ಟು ಜನಾಂಗ ಹೊರಬಂದಿರುವುದನ್ನು ಕಾಣುತ್ತೇವೆ. ಸಿಕ್ಲಿಗರರು ಕರ್ನಾಟಕದಲ್ಲಿ ಕಂಡು ಬರುವ ವಿಶಿಷ್ಟ ಬದುಕು ಅಲೆಮಾರಿ ಜನಾಂಗವಾಗಿದೆ. ಸಮಾಜದ ಎರಡು ನೆಲೆಗಳಲ್ಲಿ ಅಂದರೆ ವರ್ತಮಾನ ಹಾಗೂ ಆಧುನಿಕ ಮಾನವನ ವರ್ತನೆ ಇವುಗಳೆಲ್ಲವೂ ಒಂದೇಯಾಗಿ ಕಾಣದೇ ಅವು ಸಮಾಜದ ರಚನೆ ಕ್ರಿಯೆಗಳನ್ನು ಕುರಿತು ಹುಡುಕುವುದು ಹೊಸದಾರಿಗೆ ತರುವ

ಸಂಶೋಧನೆಗೆ ಹೆಚ್ಚು ಗಮನವನ್ನು ವರ್ತಮಾನದ ಸಮಾಜ ಕೆಲಸ ನಿರ್ವಹಿಸುತ್ತದೆ. ಅದರ ಹಾಗೇ ಮಾನವನ ಹುಟ್ಟು ಬೆಳವಣಿಗೆಯ ಕಾಲ ತಿಳಿದುಕೊಳ್ಳಲು ಭೂತ ಕಾಲ ಬೇಕು. ಹೀಗಾಗಿ ಆಧುನಿಕ ಮಾನವನ ವರ್ತನೆಗಳು ಇಲ್ಲಿ ಗಮನಿಸುವಂತವುಗಳಾಗಿವೆ. ವರ್ತಮಾನದ ಸಮಾಜ ಹಾಗೂ ಆಧುನಿಕ ಮಾನವನ ವರ್ತನೆಗಳೆಲ್ಲವೂ ಸಮಾಜಶಾಸ್ತ್ರದ ಹಾಗೂ ಮಾನವಶಾಸ್ತ್ರದ ಬೇರುಗಳಲ್ಲಿಯೇ ಹರಡಿಕೊಂಡು ಬಂದಿರುವುದನ್ನು ಕಾಣುತ್ತೇವೆ. ಇಂತಹ ನೆಲೆಗಳನ್ನು ಅನೇಕ ಆಯಾಮಗಳ ಮೂಲಕ ಚಿಂತನೆ-ಮಂಥನೆಗೆ ತೊಡಗಿಕೊಳ್ಳುವ ಸಂದಿಗ್ಧಕಾಲದ ಹೊತ್ತಿನಲ್ಲಿ ಬೇರ್ಪಡಿಸಲು ಸಾಧ್ಯವಾಗದ ಹಾಗೇ ಬೇರ್ಪಡಿಸಿದರೂ ಒಂದಕ್ಕೊಂದು ಪೂರಕವಾದ ಅಂಶಗಳನ್ನು ಒಳಗೊಂಡಿದೆ. ಅವು ಇಲ್ಲಿನ ಮಾನವ ಹಾಗೂ ಸಮಾಜಶಾಸ್ತ್ರಗಳ ಮೇಲೆ ಸಂಪೂರ್ಣವಾಗಿ ಅವಲಂಬಿತನಾಗಿರುವುದು ನಮಗೆ ಕಂಡು ಬರುತ್ತದೆ.

ಸಮಾಜಶಾಸ್ತ್ರದ ವಿಷಯಕ್ಕೆ ಸಂಬಂಧಿಸಿದಂತೆ ಮಾನವಶಾಸ್ತ್ರವೂ ಕೂಡಾ ಹಲವು ಆಯಾಮಗಳಿಂದ ವ್ಯತ್ಯಾಸ ಹಾಗೂ ಸಾಮ್ಯ ಗುಣಗಳನ್ನು ಕಾಣಲು ಸಾಧ್ಯವಾಗುತ್ತದೆ. ಪ್ರಾಚೀನವಾದ ಮಾನವನ ಸಂಸ್ಕೃತಿ ಬಹು ಸರಳ ಹಾಗೂ ವಿಶಿಷ್ಟತೆಯಿಂದ ಕೂಡಿದೆ. ಸಮಾಜದೊಳಗೆ ಅನೇಕ ತೊಡಕು ಸಮಸ್ಯೆಗಳು ಕೂಡಾ ಇರಲಿಲ್ಲ. ಧಾರ್ಮಿಕ ನೆಲೆಗೆ ಹೆಚ್ಚಿನ ಸ್ಥಾನ ಕಲ್ಪಿಸಲಾಗಿತ್ತು. ಧರ್ಮದ ನೆಲೆಗಟ್ಟಿನ ಮೇಲೆ ಸಮಾಜ ನಡೆಯಬೇಕಾದದ್ದು ಅನಿವಾರ್ಯತೆಯಿತ್ತು. ಕುಟುಂಬ ಜೀವನವಾಗಲಿ, ವಿವಾಹ ಪದ್ಧತಿಗಳಾಗಲಿ ಆಚಾರ-ವಿಚಾರ ಸಂಪ್ರದಾಯ ವ್ಯವಹಾರಗಳಾಗಲಿ ನಡೆ-ನುಡಿ, ತತ್ವಸಿದ್ಧಾಂತಗಳಾಗಲಿ ಒಂದೆಯಾಗಿ ನಮಗೆ ಕಂಡು ಬರುತ್ತವೆ. ಇವೆಲ್ಲವುಗಳು ಧರ್ಮದ ತಳಪಾಯದ ಮೇಲೆ ಭದ್ರವಾಗಿ ನೆಲೆಯೂರಿಕೊಂಡು ಬಂದಿರುವುದು ಅಕ್ಷರಶಃ ಸತ್ಯವಾದ ಮಾರ್ಗವಾಗಿದೆ. ಇಂತಹ ಬುಡಕಟ್ಟು ಸಮಾಜಗಳು ಇಂದಿನ ಆಧುನಿಕತೆಯ ಸಂಕೋಲೆಗಳಿಂದ ಕಳಚಿಕೊಂಡು ಹೊಸ ನೆಲೆಯಲ್ಲಿ ಸೃಷ್ಟಿಯನ್ನು ಕಾಣಬೇಕಾಗಿದೆ. ಹೀಗಾಗಿ ಅವುಗಳ ಪ್ರಾಚೀನತೆ ತಿಳಿದುಕೊಂಡು ಇಂದಿನ ಆಧುನಿಕತೆಗೆ ತಕ್ಕಂತೆ ಬದಲಾವಣೆಗಳನ್ನು ತರಬಯಸುವ ಮುಖ್ಯ ಉದ್ದೇಶವನ್ನು ಇಲ್ಲಿ ವಿವರಿಸಲಾಗಿದೆ. ಇಂತಹ ಬದಲಾವಣೆಗೆ ಮಾನವಶಾಸ್ತ್ರ ಹಾಗೂ ಸಮಾಜಶಾಸ್ತ್ರ ಅಧಿಕಾರಿಗಳು ಬುಡಕಟ್ಟು ಜನಾಂಗಗಳ ಪುನರ್ ವ್ಯವಸ್ಥೆಗೊಳಿಸುವ ಕಾರ್ಯತಂತ್ರಗಳನ್ನು ಕಾಣಬೇಕಾಗಿದೆ.

ಮನುಷ್ಯ ಸಂಸ್ಕೃತಿಶೀಲ ಚಲನಶೀಲ, ಸ್ವಭಾವವನ್ನು ಹೊಂದಿದ್ದಾರೆ. ಸಾಮಾಜಿಕ ಜೀವನದ ವಿವಿಧ ಆಯಾಮಗಳನ್ನು ಚಿಂತನೆಯದ್ಯೋತಕವಾಗಿ ಮಾನವ ಸಂಸ್ಕೃತಿ ನಾಗರಿಕತೆಗೆ ಎರಡನ್ನು

ಒಂದಾಗಿಸಿಕೊಂಡು ಸೃಷ್ಟಿಸಬೇಕಾಗಿದೆ. ಶತಶತಮಾನಗಳಿಂದ ಮನುಷ್ಯ ತನ್ನ ಸ್ವಪ್ರಯತ್ನದ ಮೂಲಕ ತನ್ನ ಸರಸ್ಕೃತಿಯ ಜೀವನವನ್ನು ಹಾಗೇ ಉಳಿಸಿಕೊಂಡು ಬೆಳೆಸಿಕೊಂಡು ಬರಲು ಪ್ರಯತ್ನಿಸಿದ್ದಾನೆ. ಪ್ರಾಚೀನ ಮಾನವನ ಉಪಕರಣಗಳು ಆಧುನಿಕವಾದ ಇಂದಿನ ಯಂತ್ರೋಪಕರಣಗಳಂತೆ ಪ್ರಾಮುಖ್ಯತೆ ಹೊಂದಿವೆ. ಆ ಮೂಲ ಸಂವೇದನೆಗಳು ಇಂದಿಗೂ ಕೂಡಾ ಅನ್ವಯಿಸಿಕೊಂಡು ಅಂದಿನ ಜೀವನ ಇಂದಿನ ಜೀವನಕ್ಕೆ ತನ್ನ ಮುಖ್ಯ ಧಾರೆಗಳನ್ನು ಕಾಪಾಡಿಕೊಂಡು ಬರುತ್ತಲಿದೆ. ಸತತ ಪ್ರಯತ್ನ ಹಾಗೂ ಮಾನವೀಯ ಸಂಬಂಧಗಳ ನೆಲೆಯಿಂದ ಮನುಷ್ಯ ಸಂಸ್ಕೃತಿ ಉಳಿಯಬೇಕಾದ ಅನಿವಾರ್ಯತೆ ಇಲ್ಲಿದೆ. ಇಂದಿನ ಆಧುನಿಕ ಯಂತ್ರೋಪಕರಣಗಳು ಪ್ರಾಚೀನಕಾಲದ ಉಪಕರಣಗಳ ಮಾದರಿಯನ್ನು ಹೊಂದುತ್ತಿವೆ. ಆದರೆ ಅಲ್ಲಲ್ಲಿ ಬದಲಾವಣೆಯನ್ನು ಮಾತ್ರ ಕಾಣಬಹುದಾಗಿದೆ. ಸಮಾಜಶಾಸ್ತ್ರ ಮಾನವಶಾಸ್ತ್ರದ ನೆಲೆಗಳಿಂದ ವಿಭಿನ್ನ ನೆಲೆ ಕಾಣಸಿಗುತ್ತವೆ. ಇಂದಿನ ಆಧುನಿಕ ವಿಜ್ಞಾನ ಹಾಗೂ ತಂತ್ರಜ್ಞಾನಗಳ ಮೂಲಕ ಹೊಸ ಸಂವೇದನೆಗಳನ್ನು ಪಡೆದುಕೊಂಡಿವೆ. ಪ್ರಾಚೀನ ಹಾಗೂ ಆಧುನಿಕ ಇವೆರಡರ ಮಧ್ಯದಲ್ಲಿ ಕುಳಿತುಕೊಂಡ ಸಿಕ್ಲಿಗರ ಜನಾಂಗದ ದೃಷ್ಟಿ ಧೋರಣೆಗಳನ್ನು ಪ್ರಜ್ವಲ ಮನಸ್ಸಿನಿಂದ ನೋಡಬೇಕಾಗಿದೆ.

ಸಿಕ್ಲಿಗರ ಜನಾಂಗವೂ ಪ್ರದೇಶಿಕತೆಯಿಂದ ಭಿನ್ನವಾಗಿ ಕಂಡು ಬರುವುದಿಲ್ಲ. ಹೊಸ ಹೊಸ ಮನ್ವಂತರದ ರೀತಿಗಳನ್ನು ಕಾಣುತ್ತೇವೆ. ವಿವಿಧತೆಗಳಲ್ಲಿ ಏಕತೆಯನ್ನು ಸಿಕ್ಲಿಗರ ಜನಾಂಗ ಹೊಂದಿದ್ದರಿಂದ ಬುಡಕಟ್ಟು ಜನಾಂಗ ಹೊಸತನ ಕಾಣಲು ಸಾಧ್ಯವಾಗಿದೆ. ಬುಡಕಟ್ಟು ಜನಾಂಗವು ಬಹು ವಿಶಿಷ್ಟವಾದ ಸಂಸ್ಕೃತಿಯಲ್ಲಿ ಕಂಡು ಬರುವ ಅಲ್ಪಸಂಖ್ಯಾತ ಬುಡಕಟ್ಟು ಸಮುದಾಯಗಳಿಗೆ ಸಿಕ್ಲಿಗರರಲ್ಲಿ ಅನೇಕ ಪಂಗಡಗಳು ಕುಲಕಸಬುಗಳು ಆಚರಣೆಗಳು ನಮಗೆ ಕಂಡು ಬರುತ್ತವೆ.

ಕೊಪ್ಪಳ ಜಿಲ್ಲೆಯ ಕೊಪ್ಪಳ ನಗರದಲ್ಲಿರುವ ದೇವರಾಜ ಅರಸು ಕಾಲೋನಿಯಲ್ಲಿ ಮಾತ್ರ ಈ ಜನಾಂಗದ ಕೆಲವು ಕುಟುಂಬಗಳ ಮನೆಗಳಿವೆ. ಅದೇ ಬೀದರ್ ಜಿಲ್ಲೆಯಲ್ಲಿ ಔರಾದ್, ಬೀದರ್, ಹುಮನಾಬಾದ್, ಬಸವಕಲ್ಯಾಣ, ಭಾಲ್ಕಿಗಳಲ್ಲಿ ಸುಮಾರು ಮೂವತ್ತರಿಂದ ನಲವತ್ತು ಕುಟುಂಬಗಳಿವೆ. ಇವರ ಜನಸಂಖ್ಯೆ ನೂರರ ಸಮೀಪ ದಾಟುವುದಿಲ್ಲ. ಬೀದರ್ ಜಿಲ್ಲೆಯ ಔರಾದ್‌ದಲ್ಲಿ ಐದು ಕುಟುಂಬಗಳು ಇವೆ. ಇವರಲ್ಲಿ ಯಾರೂ ಶಾಲೆ ಕಲಿತವರಿಲ್ಲ. ಇವರು ವಾಸಿಸುವ ಮನೆಗಳೆಲ್ಲವು ಬರೀ ತಗಡಿನ ಮನೆಗಳಿವೆ. ಔರಾದ್ ತಾಲ್ಲೂಕನಲ್ಲಿ ಕೊಳಚೆ ಪ್ರದೇಶದಲ್ಲಿರುವ ಸ್ಥಳವೆ ಇಲ್ಲಿವೆ. ಆದರೂ ಬೀದರ್ ಜಿಲ್ಲೆಯಲ್ಲಿ ಕೆಲವು ಕುಟುಂಬಗಳು ವಾಸವಾಗಿರುವುದು ನಾವು ಕಾಣುತ್ತೇವೆ. ಗುಲ್ಬರ್ಗಾ ನಗರದಲ್ಲಿ ಸಿಕ್ಲಿಗರ ಜನಾಂಗವು

ವಾಸವಾಗಿದ್ದಾರೆ. ಸಿಕ್ಲಿಗರರು ಅದರಲ್ಲಿ ಹನ್ನೆರಡು ಕುಟುಂಬಗಳು ಮಾತ್ರ ದೊರಕುತ್ತವೆ. ಅವರೆಲ್ಲರೂ ಸೇರಿಸಿದರು. ೧೦೦ ಜನರನ್ನು ದಾಟುವುದಿಲ್ಲ. ಅಷ್ಟೊಂದು ಸಣ್ಣ ಕುಟುಂಬಗಳು ನಮಗೆ ಕಂಡು ಬರುತ್ತವೆ. ಸೈಕಲ್ ತೆಗೆದುಕೊಂಡವರು ಇಬ್ಬರು ಮಾತ್ರ ಇದ್ದರೆ ಉಳಿದವರೆಲ್ಲಾ ನಡೆದುಕೊಂಡು ಬರುತ್ತಾರೆ. ಬೆಂಗಳೂರಿನಲ್ಲಿ ವಾಸವಾಗಿರುವ ಬಲಬೀರಸಿಂಗ್ ಸಿಕ್ಲಿಗರ ಜನಾಂಗ ಬುಡಕಟ್ಟು ಪಂಗಡ ಹಾಗೂ ಚಿತ್ರಗಳನ್ನು ಹೊಂದಿರುವ ಬಗ್ಗೆ ಮಾಹಿತಿ ನೀಡಿದ್ದಾರೆ. ಅವು ಈ ಕೆಳಗಿನಂತೆ ಕಾಣ ದೊರಕುತ್ತವೆ.

ಕುಲಗೋತ್ರಗಳು ೧. ಮುದ್ರಾವಾಲೆ ಟಾಂಕ್ ೨. ಕಲ್ಯಾಣಿ ೩. ಜೋಣಿ ೪. ಬಿಚ್ಚು ಟಾಂಕ್

ಸಿಕ್ಲಿಗರರ ಜನನ

ಪ್ರಾಚೀನ ಕಾಲದಿಂದಲೂ ಸಿಕ್ಲಿಗರರ ಜನಾಂಗವೂ ಸರಳವಾಗಿಯೇ ನಡೆಯುತ್ತದೆ. ಹೆಣ್ಣುಮಕ್ಕಳು ತಾವು ಗರ್ಭಿಣಿಯಾದಾಗಿನಿಂದಲೂ ವಿಶೇಷ ಆರೈಕೆ, ಪೋಷಣೆಯನ್ನು ಮಾಡಿಕೊಳ್ಳುತ್ತಾರೆ. ಹೆರಿಗೆ ಮಾಡಿಕೊಳ್ಳುವಾಗಲೂ ತಮ್ಮ ವಿಶೇಷ ಸಾಧನೆಗಳನ್ನು ಕೈಗೊಳ್ಳುವರು. ಗರ್ಭಧರಿಸಿದ ಹೆಣ್ಣುಮಗಳು ತನ್ನ ಲಾಲನೆ ಪಾಲನೆಯನ್ನು ಮಾಡಿಕೊಳ್ಳುವಳು. ಪ್ರಾಚೀನವಾದ ಸಂಪ್ರದಾಯಗಳನ್ನು ಮೊದಲು ಮಾಡುತ್ತಿದ್ದರು. ತರುವಾಯದಲ್ಲಿ ಕೈಬಿಡಲಾಯಿತು. ಗರ್ಭಧರಿಸಿದಾಗ ಹೆಣ್ಣುಮಗಳಿಗೆ ವಿಶೇಷವಾದ ಕಾರ್ಯಕ್ರಮಗಳನ್ನು ಮಾಡುವುದು. ನಮ್ಮಲ್ಲಿ ಸೀಮಂತ ಕಾರ್ಯ ಮಾಡಿದ ಹಾಗೇ ಸಿಕ್ಲಿಗರರು ತಮ್ಮ ಜನಾಂಗದಲ್ಲಿ ಗರ್ಭಧರಿಸಿದ ಹೆಣ್ಣಿಗೆ 'ಗೋದಬರ' (ಕುಬುಸದ) ಕಾರ್ಯಕ್ರಮವನ್ನು ಮಾಡುವರು. ಆಗ ಜನನ ಸಂಬಂಧಿ ನಂಬಿಕೆಗಳು ಮತ್ತು ಆಚರಣೆಗಳು ಕೈಗೊಂಡಿದ್ದಾರೆ. ಮಗು ಜನನ ಪೂರ್ವದಲ್ಲಿ ಸಿಕ್ಲಿಗರರ ಹೆಣ್ಣು ಮಗಳು ಗರ್ಭಿಣಿಯಾದ ಮೂರು ತಿಂಗಳಿಗೆ ಗೋಧಬರಿ (ಸೀಮಂತನ) ಕಾರ್ಯಕ್ರಮ ಕೈಗೊಳ್ಳುವರು. ಈ ಕಾರ್ಯಕ್ರಮವು ಸಹ ಗಂಡನ ಮನೆಯಲ್ಲಿ ಜರುಗುತ್ತವೆ. ಆಗ ಗಂಡನ ಮನೆಯ ಹಾಗೂ ಸುತ್ತಲಿನ ಜನರನ್ನು ಅಲ್ಲದೇ ಹೆಣ್ಣುಮಗಳ ತವರಿನ ಮನೆಯವರಿಗೆ ಕಾರ್ಯಕ್ರಮಗಳ ವಿಚಾರಗಳನ್ನು ತಿಳಿಸುವುದು. ಎಲ್ಲರೂ ಕೂಡಿಕೊಂಡು ಸಂಭ್ರಮದಿಂದ ಆಚರಿಸುವರು.

ಗರ್ಭಧರಿಸಿದ ಹೆಣ್ಣು ಮಗಳು ಕಡೆಗೆ ವಿಶೇಷವಾದ ಒಲವನ್ನು ಕೊಡುತ್ತಾರೆ. ಹೊಸ ಬಟ್ಟೆ ವಸ್ತ್ರಗಳನ್ನು ಕೊಡುತ್ತಾರೆ. ಹೆರಿಗೆಯಾಗುವ ಸಂದರ್ಭಗಳಲ್ಲಿ ಹೆಣ್ಣನ್ನು ಮಾತ್ರ ಬಿಡುತ್ತಾರೆ. ಹಿರಿಯರಾದ ಹೆಣ್ಣುಮಕ್ಕಳು ಜೊತೆಗೆ ಇರುತ್ತಾರೆ. ದಾದಿಯರು (ಸೂಲಗಿತ್ತಿಯರು) ಜೊತೆಗೆ ಇರುತ್ತಾರೆ. ಆ ಸಂದರ್ಭದಲ್ಲಿ ಗಂಡಿಗೆ ಪ್ರವೇಶ ನೀಡುವುದಿಲ್ಲ. ಗರ್ಭಧಾರಣೆ ಮಾಡುವವರೆಗೂ

ಆಕೆಯ ಜೊತೆಗಿರುತ್ತಾರೆ. ಬೇನೆ ತಿನ್ನುವ ಸಲುವಾಗಿ ಆಕೆ ಪಡುವ ಕಷ್ಟಗಳಲ್ಲಿ ಭಾಗಿಯಾಗುತ್ತಾರೆ. ಬಂಜೆ ಬೇನೆಯವನರಿಯಳು ಎಂಬ ಮಾತಿನಂತೆ ಆಕೆ ಎಷ್ಟೇ ತೊಂದರೆ ಆದರೂ ತನ್ನ ಮಗುವಿಗಾಗಿ ಹಾತೊರೆಯುತ್ತಾಳೆ. ಜನನವಾದ ಕೂಡಲೇ ಸೂಲಗಿತ್ತಿ ಅಥವಾ ಯಜಮಾನಿಕೆಯ ಮಹಿಳೆಯೊಬ್ಬಳು ಮಗುವಿನ ಹೊಕ್ಕಳ ಹುರಿಯನ್ನು ಕುಡುಗೋಲಿನಿಂದ ಕತ್ತರಿಸಿ ಕಟ್ಟುತ್ತಾಳೆ. ಮಗುವಿಗೂ ತಾಯಿಗೂ ಸ್ನಾನ ಮಾಡಿಸಿ ಕೂಡಿಸುತ್ತಾರೆ. ಅಗ್ಗಸ್ಟಿಕೆ(ಬೆಂಕಿ) ಹಾಕುವರು ಮಗು ಹಾಗೂ ಬಾಣಂತಿಯನ್ನು ಕೂಡಲೇ ಸ್ನಾನ ಮಾಡಿಸಿ ಹೊರ ಬಂದ ಮೇಲೆ ಆಕೆಗೆ ಸಿಹಿ ತಿಂಡಿ ತಿನಿಸುವರು. ಸಿಹಿಯಾದ ಹಾಗೂ ಕಾವು ಹೊಂದಿದ ಗೋಧಿ ಬೆಲ್ಲದ ಸಿಹಿ ಆಹಾರವನ್ನು ನೀಡುತ್ತಾರೆ. ಕನಿಷ್ಟ ಸುಮಾರು ನಲವತ್ತೈದು ದಿನಗಳವರೆಗೆ ಬೆಲ್ಲದ ಆಹಾರವನ್ನು ನಿರಂತರವಾಗಿ ತಿನಿಸುತ್ತಾರೆ. ಬಾಣಂತಿಗೆ ವಿಶ್ರಾಂತಿ ಕೊಡಿಸುತ್ತಾರೆ. ಎಲೆ ಅಡಿಕೆಯನ್ನು ಹಾಕಿಸುತ್ತಾರೆ. ಬೆಲ್ಲದ ಸಿಹಿ ತಿನಿಸುಗಳನ್ನು ಕೊಡುವರು. ಗೋಧಿ ಬೆಲ್ಲದಲ್ಲಿಯೇ ಹಲವು ರೀತಿಯ ತಿನಿಸುಗಳನ್ನು ತಯಾರಿಸಿ ಕೊಡುವರು. ಸಿಕ್ಲಿಗರರ ಜನಾಂಗ ಮಾತ್ರ ಎಲ್ಲೂ ಮಗುವನ್ನು ಎತ್ತಿಕೊಂಡು ಭಿಕ್ಷೆ ಬೇಡುವ ಪದ್ಧತಿಯನ್ನು ಕೈಗೊಂಡಿಲ್ಲ. ಅವರು ಏನಾದರೂ ಶ್ರಮಪಟ್ಟು ದುಡಿದೇ ತೀರಬೇಕು. ಕಬ್ಬಿಣದ ಕೆಲಸ ಕಾಯಕ ಕೈಗೊಂಡು ಅದರಿಂದ ಬಂದ ಹಣದಿಂದ ತಾವು ತಿನ್ನಬೇಕು. ಇಲ್ಲವೇ ಬೇಡಿಕಾಡಿ ತಿನ್ನುವ ಜನಾಂಗವಲ್ಲ. ಶ್ರಮಪಟ್ಟು ದುಡಿದು ತಿನ್ನಬೇಕು. ಗಂಡಂದಿರೇ ಸರಿಯಾಗಿ ದುಡಿಯುತ್ತಾರೆ. ಸದ್ಯ ಹೆಂಡತಿಯನ್ನು ಯಾವ ಕೆಲಸಕ್ಕೂ ಹಚ್ಚುವುದಿಲ್ಲ. ಮನೆಗೆಲಸ ಹಾಗೂ ಮಕ್ಕಳನ್ನು ನೋಡಿಕೊಂಡು ಹೋದರೆ ಸಾಕು ಅದೇ ಅವರಿಗೆ ಜವಾಬ್ದಾರಿ ಕೆಲಸವಾಗಿದೆ. ಬಾಣಂತಿಯನ್ನು ಮೂರು ತಿಂಗಳ ಕಾಲ ಯಾವ ಕೆಲಸಗಳಿಗೂ ಹಚ್ಚುವುದಿಲ್ಲ.

ಹೆಂಗಸು ಗರ್ಭಿಣಿಯಾದಾಗಿನಿಂದಲೂ ಏನಾದರೊಂದು ಕೆಲಸ ಕಾರ್ಯಗಳನ್ನು ಮಾಡುತ್ತಿರಬೇಕು ಹೆರಿಗೆಗೆ ಅನುಕೂಲವಾಗುತ್ತದೆಂದು ಎಚ್ಚರವಹಿಸುತ್ತಿದ್ದರು. ಇದರಂತೆ ಮಗು ಜನಿಸಿದಾಗ ಸಹಜವಾಗಿ ನಲವತ್ತೈದು ದಿನಗಳ ಕಾಲ ಅಡಿಗೆ ಸಾಮಾನುಗಳನ್ನು ಯಾವುದೇ ವಸ್ತುಗಳ್ನು ಸಹ ಮುಟ್ಟಲು ಹೋಗುವುದಿಲ್ಲ. ಬಾಣಂತಿಯ ಹಿತದೃಷ್ಟಿಯಿಂದ ಹಾಗೂ ಮಗುವಿನ ಆರೋಗ್ಯಕ್ಕಾಗಿ ಒಳ್ಳೆಯ ಗೋಧಿ, ಬೆಲ್ಲದ ಆಹಾರವನ್ನು ನೀಡುತ್ತಾರೆ. ಇಂದಿನ ಪ್ರಸ್ತುತ ದಿನಗಳಲ್ಲಿ ವಿಜ್ಞಾನ ಹಾಗೂ ತಂತ್ರಜ್ಞಾನಗಳು ಬೆಳೆದು ಬಂದ ಹಾಗೇ ಬದಲಾಗುತ್ತಿರುವ ಈ ದಿನಗಳಲ್ಲಿ ಎಲ್ಲಾ ನಿಯಮ ಪಾಲನೆಗಳನ್ನು ಪಾಲಿಸಲು ಆಗದೇ ಇರುವ ಹೊತ್ತು ಅವರಿಗಾಗಿ ಕಾದಿದೆ. ಸ್ಥಳೀಯವಾಗಿ ನೆಲೆಯೂರಿದ ಸ್ಥಳದಲ್ಲಿ ಎಲ್ಲರೂ ಸೇರಿಕೊಂಡು ತಮ್ಮ ಬದುಕಿನ ಬಗ್ಗೆ ಯೋಚಿಸುತ್ತಾರೆ. ಆಸ್ಪತ್ರೆಗಳಲ್ಲಿ ಹೆರಿಗೆ ಮಾಡಿಸುವ ರೂಢಿಯು ಇಂದು ಬದಲಾಗಿದೆ. ಆಸ್ಪತ್ರೆಗಳಲ್ಲಿ ಸ್ಥಳೀಯ

ಸೂಲಗಿತ್ತಿಯರ ಆಧಾರದ ಮೇಲೆ ಹೆರಿಗೆಯನ್ನು ಕೈಗೊಂಡು ತಮ್ಮ ಹೆರಿಗೆ ಕಾರ್ಯವನ್ನು ಮುಗಿಸಿಕೊಳ್ಳುತ್ತಾರೆ.

ಗರ್ಭವತಿಯಾದ ಹೆಣ್ಣುಮಗಳು ಗಂಡನ ಮನೆಯಲ್ಲಿ ಗೋದಭರಿ ಕೈಗೊಂಡು ಅಲ್ಲಿಯೇ ಮಗುವಿಗೆ ಜನನ ನೀಡುವರು. ಮಗುವಿಗೆ ಕೆಟ್ಟ ದೃಷ್ಟಿ ಬೀರಬಾರದೆಂದು ತಮ್ಮದೇಯಾದ ಕೆಲವು ಸಂಪ್ರದಾಯಾಚರಣೆಗಳನ್ನು ಕೈಗೊಂಡಿದ್ದಾರೆ. ಶರೀರವಾದ ಕೈಗಡಗ ಮಣಿಗಳನ್ನು ಕಟ್ಟುತ್ತಾರೆ. ಆ ಮೂಲಕ ತಮ್ಮ ಭಯ ಹಾಗೂ ಅನುಮಾನವನ್ನು ದೂರಿಕರಿಸುತ್ತಾರೆ. ಗಂಡು-ಹೆಣ್ಣು ಯಾರೇ ಹುಟ್ಟಲಿ ಅವರಿಗೆ ಬೇಜಾರಾಗುವುದಿಲ್ಲ. ಆದರೆ ಗಂಡು ಹುಟ್ಟಿದಾಗ ಸಂಭ್ರಮ ಅವರಲ್ಲಿ ಹೆಚ್ಚಾಗಿ ಕಾಣಿಸುತ್ತದೆ.

ಮಗುವಿನ ನಾಮಕರಣ

ಮಗುವಿನ ನಾಮಕರಣ ಪ್ರತಿಯೊಂದು ಬುಡಕಟ್ಟು ಜನಾಂಗವು ಒಂದಿಲ್ಲೊಂದು ಸಂಪ್ರದಾಯ ನೀತಿ-ನಿಯಮಗಳನ್ನು ಇಟ್ಟುಕೊಂಡು ಬಂದಿದ್ದಾರೆ. ಅದರಂತೆ ಸಿಕ್ಲಿಗರರ ಜನಾಂಗವು ಮಗುವಿಗೆ ನಾಮಕರಣ ಮಾಡುವಾಗ ಯಾವುದೇ ಕಾರ್ಯಗಳು ವಿಶೇಷವಾಗಿ ನಡೆಯುವುದಿಲ್ಲ. ಸಿಖ್ ಜನಾಂಗದ ಪ್ರಕಾರವಾಗಿಯೇ ಇವರ ಆಚರಣೆಗಳು ನಡೆಯುತ್ತವೆ. ಮಗು ಹುಟ್ಟಿದ ನಂತರ ಎಲ್ಲಾ ಸನ್ನಿವೇಶಗಳಲ್ಲಿ ಗುರುದ್ವಾರಕ್ಕೆ ಹೋಗುತ್ತಾರೆ. ಅಲ್ಲಿಯೇ ಹಲವು ಜನರು ಸೇರಿಕೊಂಡು ಗುರುಗ್ರಂಥ ಸಾಹೇಬ ಓದಿಸಿ ಗುರುಗ್ರಂಥ ಪಠಣದ ಮೂಲಕ ಬರುವ ಹೆಸರನ್ನೇ ಮಗುವಿಗೆ ನಾಮಕರಣ ಮಾಡುತ್ತಾರೆ. ಸಿಕ್ಲಿಗರರು ಪುರುಷ ಪ್ರಧಾನವಾದ ಸಂಸ್ಕೃತಿಯನ್ನು ಹೊಂದಿದ್ದರಿಂದ ಗಂಡು ಮಗುವಿಗೆ ಹೆಚ್ಚಿನ ಆದ್ಯತೆ ನೀಡುತ್ತಾ ಬಂದಿದ್ದಾರೆ. ಇಂದಿಗೂ ಆ ಕಾರ್ಯವನ್ನು ಚಾಚೂ ತಪ್ಪದೇ ಮುಂದುವರೆಸಿಕೊಂಡು ಬರುತ್ತಿದ್ದಾರೆ.

ಸಿಕ್ಲಿಗರರು ಅಲೆಮಾರಿಗಳಾಗಿದ್ದರಿಂದ ಅವರು ಗಂಡನ ಮನೆಯಲ್ಲಿಯೇ ಮಗುವಿಗೆ ಬೇಕಾದ ಎಲ್ಲಾ ಸಂಸ್ಕಾರಗಳು ನಡೆದು ಹೋಗುತ್ತವೆ. ಏಕೆಂದರೆ ಹೆಣ್ಣಿನ ತವರು ಮನೆಯವರು ಮಗು ಹುಟ್ಟುವ ಸಂದರ್ಭದಲ್ಲಿ ಎಲ್ಲಿ ಇರುವರೆಂದು ತಿಳಿದು ಬರುವುದಿಲ್ಲ. ಅಲೆಮಾರಿ ಜೀವನದಿಂದ ಎಲ್ಲೋ ಹೋಗಿ ಕಾಲ ಕಳೆಯುತ್ತಾರೆ. ಹೀಗಾಗಿ ಬೇಗನೇ ತವರು ಮನೆಗೆ ಕಳುಹಿಸಲು ಅಸಾಧ್ಯವಾಗುವುದೆಂಬ ಕಾರಣದಿಂದ ಗಂಡನ ಮನೆಯಲ್ಲಿಯೇ ಮಗುವಿನ ಜನನ

ಹಾಗೂ ನಾಮಕರಣದ ಉತ್ಸವಕಾರ್ಯಕ್ರಮಗಳು ನಡೆಯುತ್ತವೆ. ಹೀಗಾಗಿ ಮಗುವಿನ ತಂದೆಯ ಮನೆಯಲ್ಲಿಯೇ ಮಗುವಿನ ಲಾಲನೆ ಪಾಲನೆ ಪೋಷಣೆ ಜರುಗುತ್ತವೆ.

ನಾಮಕರಣದ ಸಂದರ್ಭದಲ್ಲಿ ಸಿಕ್ಲಿಗರು ಹುಟ್ಟಿದ ಮಗುವನ್ನು ತಮ್ಮ ಕುಲ ಬಾಂಧವರೊಂದಿಗೆ ಸೇರಿಕೊಂಡು ಗುರುದ್ವಾರಕ್ಕೆ ಹೋಗಿ ಸಿಕ್ಲಿಗರರು ಸಂಪ್ರದಾಯದಂತೆ ಹೆಸರಿಟ್ಟು ಧಾರ್ಮಿಕ ವಿಧಿ-ವಿಧಾನಗಳ ಮೂಲಕ ಗುರುಗ್ರಂಥ ಸಾಹೇಬವನ್ನು ಪಠಿಸುತ್ತಾರೆ. ಮೂಲ ಸಿಖ್ಖ್‌ರಿಗೂ ಇವರಿಗೂ ಮಗವಿನ ಜನನದಿಂದ ನಾಮಕರಣದವರೆಗೂ ಯಾವ ವ್ಯತ್ಯಾಸವು ಇಲ್ಲ. ಇರುವ ವ್ಯತ್ಯಾಸವೊಂದು ಸಿಕ್ಲಿಗರಿಗಿರುವ ಬಡತನ ದಾರಿದ್ರ್ಯ ಮತ್ತು ಅನಕ್ಷರತೆ ಮಾತ್ರ. ಅಲ್ಲದೆ ಇತರ ಸಮುದಾಯದಿಂದ ದೂರ ಇರುವುದು ಇವರಲ್ಲಿ ಕಂಡುಕೊಳ್ಳುವ ಅಂಶಗಳಿವೆನಿತರ ಸಮುದಾಯದೊಂದಿಗೆ ಬೆರೆಯುವುದು ಯಾವುದಾದರೂ ಗ್ರಾಮ ಪ್ರದೇಶದ ಆಯಾಗಾರ ರಾಗಿದ್ದುಕೊಂಡಾಗ ಮಾತ್ರ. ಸಿಕ್ಲಿಗರು ನಗರ ಪಟ್ಟಣಗಳಲ್ಲಿ ವಾಸವಾಗಿದ್ದುಕೊಂಡು, ತಮ್ಮಷ್ಟಕ್ಕೆ ತಾವು ಕಬ್ಬಿಣ ಕೆಲಸ ಮಾಡಿಕೊಂಡು, ಇದ್ದವರು. ಗ್ರಾಮಗಳಲ್ಲಿಯೂ ಇವರು ಮಾರಾಟ ಮಾಡುವ ವಸ್ತುಗಳನ್ನು ಜನರು ನೇರವಾಗಿ ಖರೀದಿಸದಿದ್ದರೆ, ಅಂಗಡಿಗಳಿಗೆ ಕಡಿಮೆ ದರದಲ್ಲಿ ಮಾರಾಟ ಮಾಡಿ ಬರುತ್ತಾರೆ. ಹಾಗಾಗಿ ಇವರ ಯಾವ ಸಮುದಾಯದ ಸಂಪರ್ಕ ಹೊಂದದೆ ಹಾಗೆ ಉಳಿದಿದ್ದಾರೆ. ಸಂಪರ್ಕ ಹೊಂದಬೇಕಾದರೆ ಸಾಂಸ್ಕೃತಿಕವಾದ ಕೇಳು-ಕೊಡೆ ಇದ್ದಾಗ ಮಾತ್ರ ಸಾಧ್ಯವಾಗುತ್ತದೆ.

ಜವಳ ಕಾರ್ಯಕ್ರಮ

ಮಗು ಹುಟ್ಟಿದ ಕೆಲವು ದಿನ ತಿಂಗಳು ಕಳೆದ ಮೇಲೆ ತಾವು ಹೊತ್ತ ಹರಟೆ ಸಂಪ್ರದಾಯದಂತೆ ಹಿಂದೂ ಜನಾಂಗವು ಹಾಗೂ ಇತರೇ ಜನಾಂಗವೂ ಜವಳ ಕಾರ್ಯ ಏರ್ಪಡಿಸುವರು. ಆದರೆ ಇಲ್ಲಿ ಸಿಖ್ಖ್ ಗುರು ಮಾತ್ರ ಕೇಶವನ್ನು ಎಂದೂ ಕೂಡಾ ತೆಗೆಯುವುದಿಲ್ಲ. ಹೀಗಿದ್ದಾಗ ಜವಳ ಕಾರ್ಯ ಅವರಲ್ಲಿ ನಡೆಯುವುದಿಲ್ಲ. ಕೇಶ ತೆಗೆಯುವ ಕಾರ್ಯ ಸಿಖ್ಖ್ ಸಂಪ್ರದಾಯ ಸಮಾಜದಲ್ಲಿ ಜರುಗುವುದಿಲ್ಲ. ಅವಿಭಕ್ತ ಕುಟುಂಬವು ಕೂಡಾ ಇವರಲ್ಲಿ ಇರುವುದಿಲ್ಲ. ಎಲ್ಲರೂ ಸ್ವತಂತ್ರರೂ ಮದುವೆಯಾದ ಮೇಲೆ ಒಂದೇ ಕಡೆ ಇರದೇ ತಮ್ಮವರ ಮನೆಗಳಿಗಿಂತ ದೂರವುಳಿಯುತ್ತಾರೆ. ತಾವು ಹುಟ್ಟಿದಾಗಿನಿಂದ ಹಿಡಿದು ಕೊನೆಗೆ ಸಾಯುವವರೆಗೂ ಹೇಗೆ ಬಂದಿದ್ದಾರೆ ಹಾಗೇ ಉಳಿಯಲು ಪ್ರಯತ್ನಿಸುತ್ತಾರೆ.

ಋತುಮತಿ ಕಾರ್ಯಕ್ರಮ

ಸಿಕ್ಲಿಗರ ಜನಾಂಗ ಅಲೆಮಾರಿ ಜನಾಂಗದಲ್ಲಿ ಅತ್ಯಂತ ನಿರ್ಗತಿಕರು, ಪುರುಷ ಪ್ರಧಾನ ಸಂಸ್ಕೃತಿ ಹೊಂದಿದ್ದರೂ ಹೆಣ್ಣು ಮಕ್ಕಳಿಗೆ ಹೆಚ್ಚು ಪ್ರಾಧಾನ್ಯತೆ ನೀಡಿದ್ದಾರೆ. ಹೆಣ್ಣು ಮಗು ಋತುಮತಿಯಾದರೆ ಗೌರವವನ್ನು ಸಮಾಜ ಕೊಡುತ್ತದೆ. ಸಿಕ್ಲಿಗರು ಅಲ್ಲಿಯೇ ತಮ್ಮೊಳಗೆ ಈ ವಿಷಯ ಪ್ರಸ್ತಾಪಿಸದೇ ತಮ್ಮೊಳಗೆ ಇಟ್ಟುಕೊಳ್ಳುತ್ತಾರೆ. ಹೆಣ್ಣುಮಕ್ಕಳು ಋತುಮತಿಯಾದರೆ ಬೇರೆ ಹೊರಗಡೆ ಯಾರಿಗೂ ಈ ವಿಷಯ ಪ್ರಸ್ತುತ ಪಡಿಸುವುದಿಲ್ಲ. ಇವರು ಋತುಮತಿಯಾದಾಗ ಯಾವ ಕಾರ್ಯ ಆಚರಣೆಗಳು ಕಂಡು ಬರುವುದಿಲ್ಲ.

ಆದರೆ ಇತ್ತೀಚಿನ ಹೊತ್ತಿನ ಸಂದರ್ಭದಲ್ಲಿ ಋತುಮತಿಯಾದರೆ ಸಂಪೂರ್ಣ ಬೆಂಬಲ ಕೊಡುವುದು ಹಾಗೇ ಕೆಲವೊಂದು ಆಚರಣೆಗಳನ್ನು ಮನೆಯೊಳಗೆ ನಿರ್ವಹಿಸುತ್ತಾರೆ. ಋತುಮತಿಯಾದ ಹೆಣ್ಣಿಗೆ ಸ್ನಾನ ಮಾಡಿಸಿ ಮೂಲೆಯಲ್ಲಿ ಕೂಡಿಸುತ್ತಾರೆ. ಮೂರು ತಿಂಗಳುಗಳ ಕಾಲ ಹಾಗೇ ಇರುತ್ತಾರೆ. ಹಾಗೇ ವರ್ತಿಸಬೇಕು. ಮುಖ ಕೈಗೆ ಮೆಹಂದಿಯನ್ನು ಹಚ್ಚೆಯನ್ನು ಹಾಕಿಕೊಂಡು ಶೃಂಗರಿಸಿಕೊಳ್ಳುತ್ತಾರೆ. ಬಂಧು ಬಳಗದವರು ನಂತರ ಬಂದು ಹೋಗುವುದು, ಈ ಎಲ್ಲಾ ಕಾರ್ಯಗಳನ್ನು ಕೈಗೊಳ್ಳಲು ಸಿಕ್ಲಿಗರರಿಗೆ ಸಾಧ್ಯವಾಗುವುದಿಲ್ಲ. ಏಕೆಂದರೆ ಸಿಕ್ಲಿಗರು ಬಹುಮುಖವುಳ್ಳ ಜನರಾಗಿದ್ದಾರೆ. ಕಬ್ಬಿಣದ ಕೆಲಸ ಶ್ರಮವಹಿಸಿ ದುಡಿಯಲು ಸಾಕಾಗದ ಹೊತ್ತಿನಲ್ಲಿ ದುಡಿದು ತಿನ್ನಲು ಸಾಧ್ಯವಾಗದಾದಾಗ ಇಂದಿನ ಋತುಮತಿಯ ಕಾರ್ಯದ ಹೊತ್ತಿನಲ್ಲಿ ಈತನು ಯಾವುದೇ ಕಾರ್ಯಗಳನ್ನು ಅವರು ಹಮ್ಮಿಕೊಳ್ಳುವುದಿಲ್ಲ. ಇದಕ್ಕೆ ಇವರ ಬಡತನವು ಕಾರಣವಾಗಿದೆ. ಬಾಲ್ಯವಿವಾಹ ಪದ್ಧತಿಗಳು ಸಹ ನಡೆದರೂ ಸಹಿತ ಯಾವುದೇ ಕಾರಣಕ್ಕೂ ಋತುಮತಿಯಾದರೆ ಯಾವುದೇ ಕಾರ್ಯಗಳು ಜರುಗುವುದಿಲ್ಲ. ಕೇವಲ ನಿರ್ಬಂಧಗಳು ಇತರ ಸಮುದಾಯಗಳಂತೆ ಇವರು ಅನುಸರಿಸಿಕೊಂಡು ಬರುತ್ತಿದ್ದಾರೆ.

ಋತುಮತಿಯಾದ ಕೂಡಲೇ ಮೂಲೆಯಲ್ಲಿ ಕೂಡಿಸಿ ಸಿಕ್ಲಿಗರ ಜನಾಂಗದ ಯಾವ ಒಬ್ಬ ವ್ಯಕ್ತಿಯೂ ಮುಟ್ಟುವುದಿಲ್ಲ. ಅಡಿಗೆ ಮನೆಗೆ ಪ್ರವೇಶವಿಲ್ಲ. ಯಾವ ವಸ್ತುಗಳನ್ನು ಋತುಮತಿಯಾದವಳು ಮುಟ್ಟುವುದಿಲ್ಲ. ತನ್ನ ಅಡಿಗೆಯನ್ನು ತಾನೇ ಮಾಡಿಕೊಂಡು ಕೆಲಸ ನಿರ್ವಹಿಸಬೇಕು. ಋತುಮತಿಯಾದ ಹೆಣ್ಣಿಗೆ ಸಹಜವಾಗಿ ಆಕೆ ಬಲಿಷ್ಠಗೊಳಿಸಲು ವಿಶೇಷವಾದ ಆಹಾರವನ್ನು ನೀಡುತ್ತಾರೆ. 'ಹರಿದಾ' ಎಂಬ ಆಹಾರವನ್ನು ಕೊಡುತ್ತಾರೆ. ಒಂದು ಕೆ.ಜಿ.ಗೋಧಿಗೆ ಎರಡು ಕೆ.ಜಿ. ಬೆಲ್ಲ ಅಜಿವಾನಾ, ಡಾಲ್ಡಾ, ಹಾಗೂ ಶುಂಠಿಯನ್ನು ಹಾಕಿ ಚೆನ್ನಾಗಿ ಅರೆದು ಕುಟ್ಟಿ

ಮಾಡಿದ ವಿಶೇಷ ಅಡುಗೆಯನ್ನು ಒಂದು ತಿಂಗಳ ಹದಿನೈದು ದಿವಸಗಳ ಕಾಲ ಕೊಡುತ್ತಾರೆ. ಈ ರೀತಿಯ ಪದ್ಧತಿಗಳನ್ನು ಅನುಸರಿಸಿಕೊಂಡು ಬರುವ ಮೂಲಕ ಸಿಕ್ಲಿಗರು ವೈಜ್ಞಾನಿಕ ಹಂತಕ್ಕೆ ಬಂದಿದ್ದಾರೆ ಎನಿಸುತ್ತದೆ.

ಬಾಲ್ಯ ವಿವಾಹಗಳನ್ನು ಮಾಡುವುದಕ್ಕೆ ಆಸ್ಪದ ಕೊಡುತ್ತಿಲ್ಲ. ಹುಡುಗಿ ಪ್ರೌಢಳಾದ ಮೇಲೆ ಮದುವೆ ಮಾಡುವ ಹಂತ ತಲುಪಿದ್ದಾರೆ. ಇದರಿಂದ ಯಶಸ್ಸು ಕಾರ್ಯ ಯೋಜನೆಗಳು ದೊರಕುತ್ತವೆ. ಅನಿಷ್ಟ ಪದ್ಧತಿಗಳಂತ ಕಾರ್ಯ ಬಿಟ್ಟು ಕೊಡುತ್ತಿರುವುದು ಈ ದಿನಗಳಲ್ಲಿ ಹೆಚ್ಚು ಸಮಾಧಾನದ ಸಂಗತಿ. ನಗರ ಹಾಗೂ ಪಟ್ಟಣ ಪ್ರದೇಶಗಳಲ್ಲಿ ವಾಸವಾದ್ದರಿಂದ ಹುಡುಗಿಯರು ಕನ್ಯೆಯಾಗುವ ಲಕ್ಷಣಗಳು ಕಂಡು ಬಂದರೆ ಬುಡ ಕಟ್ಟು ಜನಾಂಗವು ಬಹಳ ಸಂಭ್ರಮದಿಂದಲೇ ಸ್ವಾಗತಗೊಳಿಸುತ್ತಾರೆ. ಈ ಕಾರ್ಯ ಬುಡಕಟ್ಟುಗಳಲ್ಲಿ ಹಲವು ರೀತಿಯ ಸಂಪ್ರದಾಯಗಳನ್ನು ಆಚರಣೆಗಳನ್ನು ಮಾಡುವುದು ನಮಗೆ ಕಂಡು ಬರುತ್ತದೆ. ಈ ಕಾರಣದಿಂದಾಗಿಯೇ ಬುಡಕಟ್ಟು ಜನಾಂಗ ತನ್ನ ತೀವ್ರವಾದ ಸಂವೇದನೆ ಹೊಂದಿದೆ. ಅದರಲ್ಲೂ ಸಿಕ್ಲಿಗರರ ಸಂಸ್ಕೃತಿಯಲ್ಲಿ ವಿಶೇಷತವಾದ ಸ್ಥಾನಮಾನಗಳು ದೊರಕುತ್ತವೆ. ಸಿಕ್ಲಿಗರರ ಹುಡುಗಿ ಕುಳಿತ ಮೂಲೆಯಲ್ಲಿ ಐದು ದಿನ ಹಾಗೇ ಕೂಡಬೇಕು. ನಂತರ ವಿಧಿ-ವಿಧಾನಗಳ ಮೂಲಕ ಆಕೆಗೆ ಋತುಮತಿ ಕಾರ್ಯವನ್ನು ಪೂರೈಸಿ ಸಂಭ್ರಮ ಪಡುತ್ತಾರೆ.

ಮದುವೆಯ ಕಾರ್ಯಕ್ರಮ

ಸಿಕ್ಲಿಗರರ ಬುಡಕಟ್ಟು ಅಲೆಮಾರಿ ಜನಾಂಗವಾದ್ದರಿಂದ ವಿವಿಧ ಕ್ಷೇತ್ರಗಳಲ್ಲಿ ಅವರು ಸಾಧನೆ ಮಾಡಿದ್ದಾರೆ ಹೀಗಾಗಿ ಮದುವೆ ಎನ್ನುವುದು ಅವರಿಗೆ ವಿಶೇಷವಾದ ಸಂಬಂಧವಾಗಿದೆ. ಮದುವೆಯ ಹೊತ್ತಿನಲ್ಲಿ ಹೆಣ್ಣು ಗಂಡಿನ ಕಡೆಯವರು ಸಮಾನತೆಯಿಂದ ಇರುವುದನ್ನು ಹೇಳುತ್ತಾರೆ. ಹೆಣ್ಣಿನ ಕಡೆಯವರಿಗೆ ಹೆಚ್ಚಿನ ಗೌರವ ಈ ಜನಾಂಗದಲ್ಲಿದೆ. ಆದರೆ ಗಂಡಿನವರಿಗೂ ಗೌರವ ಕೊಡುತ್ತಾರೆ. ಸೀರೆ ಹಣ ಮುಂತಾದವುಗಳನ್ನು ನೀಡಿ ಹೆಣ್ಣನ್ನು ಪಡೆದುಕೊಳ್ಳುತ್ತಾರೆ.

ಜೀವನದಲ್ಲಿ ವಿವಾಹ ಪದ್ಧತಿ ಸಿಕ್ಲಿಗರರಲ್ಲಿ ಹೆಚ್ಚು ಜನಮನ ಸೂರೆಗೊಂಡಿತ್ತು. ಮೊದಲಿಗೆ ಮದುಮಗನ ಉಡುಪುಗಳಲ್ಲಿ ಭಿನ್ನತೆ ಕಂಡು ಬರುತ್ತಿತ್ತು. ಆ ಪ್ರಕಾರ ಗುಜರಾತಿ ವರನ ಹಾಗೇ ಕಾಣಿಸಿಕೊಂಡಿತು. ತಲೆಗೆ ಪೇಟ, ಮೈಮೇಲೆ ಹೊಸ ಧೋತರ ಅಂಗಿಯನ್ನು ಹಾಕಿಸಿಕೊಂಡು ಒಂದು ರೀತಿಯ ವೈಭವದಿಂದ ಮಾಡಿಸಲಾಗುತ್ತಿತ್ತು. ಕಾಲಿಗೆ ತೆಳುವಾದ ಚಪ್ಪಲ್ಲನ್ನು

ಹಾಕಲಾಗುತ್ತಿತ್ತು. ಹಣೆಗೆ ಬಾಸಿಂಗ ಕಟ್ಟುತ್ತಿದ್ದರು. ಹೀಗಾಗಿ ಹಲವಾರು ಬಗೆಯಲ್ಲಿ ವಿವಾಹ ಪದ್ಧತಿಗಳನ್ನು ನೆರವೇರಿಸುವ ಮುಖ್ಯ ಸಂಗತಿಗಳಾಗಿವೆ.

ಮದುವೆಗೆ ಸಿದ್ಧತೆಯಾದ ವಧು ಹೆಣ್ಣು ಅಂದರೆ ಮದುಮಗಳಾದವಳಿಗೂ ಕೂಡಾ ಇಂತಹ ಹಲವಾರು ಹೊಸ ಹೊಸದಾದ ಉಡುಪುಗಳನ್ನು ಹಾಕಲಾಗಿತ್ತು. ಅವುಗಳ ಮೂಲಕ ಮದುಮಗಳು ಆಕರ್ಷಣೆಯಾಗಿ ಕಾಣಲು ಪ್ರಯತ್ನಿಸಿದ್ದಾರೆ. ಹೊಸ ಸೀರೆಯನ್ನು ತಂದು ಉಡಿಸಲಾಗುತ್ತಿತ್ತು. ಹೊಸದೆಂದರೆ ಹಲವು ಬಗೆಯ ಸೀರೆಗಳ ಬಹುಪಯೋಗಿ ಕೆಲಸ ಕಾರ್ಯಗಳಿಗೆ ಅನ್ವಯಿಸುವ ಹಾಗೇ ಅವರು ಬೆಳವಣಿಗೆ ಮಾಡುತ್ತಿದ್ದರು. ಮದುವೆಯ ಸಂತೋಷದಲ್ಲಿ ಮದುಮಗಳ ಕಾಲಲ್ಲಿ ಉಂಗುರ ಮೈತುಂಬ ರವಿಕೆ, ಕೈತುಂಬ ಬಳೆ ಹಣೆಗೆ ಕುಂಕುಮ ಕಿವಿಯಲ್ಲಿ ಬೆಂಡೋಲೆಗಳನ್ನು ಧರಿಸುತ್ತಿದ್ದರು. ಮದುಮಗಳು ತನ್ನ ಮುಖವನ್ನು ಸಂಪೂರ್ಣವಾಗಿ ಸೀರೆಯ ಸೆರಗಿನಿಂದ ಮುಚ್ಚಿಕೊಳ್ಳುತ್ತಿದ್ದಳು. ಅಕ್ಷತಾ ಕಾರ್ಯವನ್ನು ಪೂರ್ಣಗೊಳಿಸಲು ವರನ ಮನೆಗೆ ವಧುವನ್ನು ಕರೆದುಕೊಂಡು ಹೋಗುವ ಪದ್ಧತಿಯಿದೆ. ವಧುವಿಗೆ ಆತನ ಅಣ್ಣ ಇಲ್ಲವೇ ಅವರ ಸಂಬಂಧಿಕರಲ್ಲೊಬ್ಬರು ಯಾರಾದರೂ ಆಕೆಯನ್ನು ಹೊತ್ತುಕೊಂಡು ಹೋಗುವ ಮೂಲಕ ವರನ ಮದುವೆಯ ಮಂಟಪಕ್ಕೆ ತನ್ನ ಬಂಧು ಬಳಗದವರನ್ನು ಕರೆದು ತರುವ ಮೂಲಕ ಮದುವೆಗೆ ಒಂದು ಮೆರಗನ್ನು, ಸೊಗಸನ್ನು ತರಲು ಪ್ರಯತ್ನಿಸುತ್ತಿದ್ದಾರೆ. ಇದನ್ನೆಲ್ಲಾ ನೋಡಿ ವಧು ಜೋರಾಗಿ ಅಳುವ ಕ್ರಿಯೇ ಗಮನಿಸುವುದಾಗಿದೆ.

ಅಕ್ಷತಾರೋಪಣದ ಮುಂಜಾನೆ ಬೀಗರಲ್ಲಿ ಪರಸ್ಪರ ಅರಿಷಿಣ ಹಚ್ಚುವ ಕೆಲಸ ಕೈಗೊಳ್ಳುತ್ತಾರೆ. ಪ್ರಾರಂಭದ ದಿನಗಳಲ್ಲಿ ಏಳು ದಿವಸಗಳ ಕಾಲ ಮದುವೆ ಜರುಗುತ್ತಿತ್ತು. ಈಗ ಕೇವಲ ಒಂದೇ ದಿನದಲ್ಲಿ ಮದುವೆ ಮಾಡಿ ಮುಗಿಸುತ್ತಾರೆ. ಮದುವೆಯ ಮೊದಲ ದಿನವೇ ವಧು-ವರರಿಗೂ ಅರಿಷಿಣವನ್ನು ಹಚ್ಚುತ್ತಾರೆ. ಮೊದಲು ಏಳು ಕೆ.ಜಿ. ಇತ್ತು ಈಗ ಮೂರುವರೆಯಿಂದ ಎರಡುವರೆ ಕೆ.ಜಿ. ಯನ್ನಾದರೂ ಅರಿಷಿಣವನ್ನು ಹಚ್ಚುತ್ತಾರೆ. ವರನಿಗೆ ಸಂಪೂರ್ಣವಾಗಿ ಬೆನ್ನಿಗೆ ವಧುವೆ ಅರಿಷಿಣ ಹಚ್ಚುತ್ತಾಳೆ, ವಧು ನಂತರದಲ್ಲಿ ತನ್ನ ಕೈಯಿಂದ ವರನ ಬೆನ್ನಿಗೆ ಎಣ್ಣೆ ಸವರುವ ಮೂಲಕ ಕಾರ್ಯ ನಡೆದು ಕೊನೆಗೆ ನೀರು ಹಾಕಿ ಸ್ನಾನವನ್ನು ಮಾಡಿಸುತ್ತಾರೆ. ತರುವಾಯ ಎಲೆಯ ಗಂಬದ ಹತ್ತಿರ ವಧು-ವರರನ್ನು ತಂದು ಕೂಡಿಸುತ್ತಾರೆ. ಎಲೆಗಂಬಕ್ಕೆ ಪ್ರದಕ್ಷಿಣೆ ಹಾಕಿಸುತ್ತಾರೆ. ನಂತರ ತಮ್ಮದೇ ಆದ ಗ್ರಂಥಸಾಹೇಬದ ಪಠಣ ಜರುಗುತ್ತದೆ. ವಧು-ವರರ ಹೆಬ್ಬೆರಳುಗಳನ್ನು ತೆಗೆದುಕೊಂಡು ಸಹಿ ಹಾಕಿಸಿ ಮದುವೆಯನ್ನು ಮಾಡಿಸಿದ್ದಕ್ಕೆ ಸಾಕ್ಷಿಯಾಗಿ

ಗ್ರಂಥಸಾಹೇಬ ಇರುವ ಪದ್ಧತಿಯಿದೆ. ಎಲ್ಲರೂ ಮದುವೆಯ ಹೊತ್ತಿಗೆ ಬೇರೆ ಬೇರೆ ಪ್ರದೇಶ ರಾಜ್ಯಗಳ ಸಮುದಾಯದವರೆಲ್ಲರೂ ಇವರೆಲ್ಲರೂ ಕೂಡಿಸಿಕೊಳ್ಳುತ್ತಾರೆ ಅದರಲ್ಲಿ ವಿಶೇಷವಾಗಿ ಹೆಣ್ಣನ್ನು ಗಂಡನ್ನು ಹುಡುಕುವ ಸಲುವಾಗಿ ತಮ್ಮಲ್ಲಿ ದೊರೆಯದಿದ್ದರೆ ಬೇರೆ ಪ್ರದೇಶ ಹಾಗೂ ಬೇರೆ ರಾಜ್ಯಗಳಿಗೆ ಹೋಗಿ ತಮ್ಮ ಮದುವೆ ಸಂಬಂಧವನ್ನು ಕುದುರಿಸಿಕೊಂಡು ಬರುತ್ತಾರೆ. ಉದಾ: ಹೈದರಾಬಾದ, ನಾಂದೇಡ ಮುಂತಾದವುಗಳು

ಇತ್ತೀಚಿನ ದಿನಗಳಲ್ಲಿ ಕೂಡಾ ಇಂತಹ ಸಂಪ್ರದಾಯಗಳು ಮುಂದುವರೆದುಕೊಂಡಿವೆ. ಕೆಲವು ಬದಲಾವಣೆಗಳಲ್ಲಿ ಅಲ್ಲಲ್ಲಿ ಆಗಿರುವುದು ಕಣ್ಣಿಗೆ ಕಂಡು ಬರುತ್ತದೆ. ಪ್ರತಿಯೊಂದು ಬಟ್ಟೆಯ ವಿಧಿ- ವಿಧಾನಗಳನ್ನು ಹಾಕಿಕೊಳ್ಳುವಲ್ಲಿ ಸಾಕಷ್ಟು ಬದಲಾಗಿದೆ. ಈ ಕಾರಣದಿಂದಾಗಿಯೇ ಸಿಕ್ಲಿಗರರ ಮದುವೆ ಪದ್ಧತಿ ಬಹು ವಿಧದಲ್ಲಿ ನಡೆಯುತ್ತದೆ. ಮದುವೆಯಾದರೆ ಅತ್ತೆ ಮಾವ ಹಾಗೂ ಆತನ ಸಂಬಂಧಿಕರನ್ನೆಲ್ಲಾ ಚೆನ್ನಾಗಿ ನೋಡಿಕೊಳ್ಳಬೇಕು. ತಮ್ಮ ತಂದೆ ತಾಯಿ ಸಂಬಂಧಿಕರನ್ನೆಲ್ಲಾ ಕರೆಯಿಸಬೇಕು ಆ ಮೂಲಕ ಮುಖಾ ಮುಖಿಯಾಗಿಸಿಕೊಂಡು ತನ್ನ ಮದುವೆ ಕಾರ್ಯ ಪೂರ್ತಿಗೊಳಿಸುತ್ತಾರೆ. ಇವರ ವೈವಾಹಿಕ ಜೀವನದಲ್ಲಿ ವಿವಾಹಗಳು ಜರುಗಿ ಬಿಟ್ಟರೆ ಸಂಪೂರ್ಣವಾಗಿ ಬಿಕ್ಕಟ್ಟಾದ ಹಾಗೂ ಎಲ್ಲರೂ ಚೌಕಟ್ಟಿನಲ್ಲಿರಬೇಕಾಗುತ್ತದೆ. ವಿವಾಹ ಪೂರ್ಣಗೊಂಡ ಮೇಲೆ ತಂದೆ ತಾಯಿಗಿಂತ ಗಂಡನ ಮೇಲೆ ಅವಲಂಭಿತವಾಗುತ್ತಾರೆ. ಆ ಗಂಡಿನ ಮನೆಯಲ್ಲೂ ಸಹಿತ ಯಾರೂ ಸರಿಯಾಗಿ ವಿವಾಹ ನೆರವೇರಿಸಿಕೊಟ್ಟ ಕುಟುಂಬದವರಿಗೆ ಗೌರವ ಸಲ್ಲುತ್ತದೆ. ಗಂಡನಾದವನು ವಿವಾಹವಾದ ಕೂಡಲೇ ತಾನೇ ಒಂದು ಸ್ವತಂತ್ರ ಜೀವನ ನಿರ್ವಹಿಸಿಕೊಂಡು ಹೋಗಲು ಅವಕಾಶ ಮಾಡಿಕೊಡುತ್ತಾರೆ. ಅಥವಾ ಮದುವೆಯ ಪೂರ್ವದಲ್ಲಿಯೇ ಪ್ರತ್ಯೇಕ ಮನೆಯ ನಿರ್ಮಾಣ ಮಾಡಿರುತ್ತಾರೆ

ವಿವಾಹವನ್ನು ಆಯ್ಕೆ ಮಾಡುವ ಪ್ರಕ್ರಿಯೇಗಳನ್ನು ಸಿಕ್ಲಿಗರರ ಜನಾಂಗವು ಹಮ್ಮಿಕೊಂಡು ವಿವಾಹವಾಗುವ ಹೆಣ್ಣು ಗಂಡಿಗೆ ಈ ಅಲೆಮಾರಿ ಬುಡಕಟ್ಟು ಜನಾಂಗವು ವಯಸ್ಸುಗಳ ನಿರ್ಬಂಧನೆ ಹಾಕಲಾಗಿದೆ. ಹೆಣ್ಣಿಗೆ ಹದಿನೈದು ಗಂಡಿಗೆ ಹದಿನಾರು ವರ್ಷ ಮಾತ್ರ ವಯೋಮಿತಿಯನ್ನು ಸರಿಯಾಗಿ ಗುರುತಿಸಿಕೊಂಡಿದ್ದಾರೆ. ಇವರಲ್ಲಿ ಶೈಕ್ಷಣಿಕ ಸ್ಥಾನಮಾನದ ಯಾವುದೇ ಆಶೆ ಆಶಾಂಕ್ಷೆಗಳಲ್ಲಿ ಹುಡುಗ ವಯಸ್ಕನಾಗುತ್ತಿದ್ದಂತೆಯೇ ಪೋಷಕರಿಗೆ ಮದುವೆ ಮಾಡುವುದೊಂದೆ ಜವಾಬ್ದಾರಿ, ಮುಂದಿನದು ಸ್ವತಂತ್ರ ಜೀವನವಾಗಿರುತ್ತದೆ. ಹಿರಿಯರು ಸೇರಿಕೊಂಡು ಹುಡುಗನಿಗೆ ಕನ್ನೆಯನ್ನು ನೋಡುವರು ಇಲ್ಲವೇ ಮನೆಗೆ ಹಿರಿಯ ಸೊಸೆಯಾದವಳು ಅಂದರೆ

ಅತ್ತಿಗೆಯಾದವಳು (ಗಂಡನ ತಮ್ಮ)ಮೈದುನನಿಗೆ ಕನ್ಯೆ ಗೊತ್ತುಪಡಿಸುತ್ತಾಳೆ.ವಿವಾಹದ ಬಗೆಗೆ ಅನೇಕ ಆಶೆ ಆಕಾಂಕ್ಷೆಗಳನ್ನು ಈ ಜನಾಂಗ ಹೊಂದಿದೆ.

ವಿವಾಹದ ಬಗೆಗಳು

ಸಿಕ್ಲಿಗರರ ಜನಾಂಗವೂ ಅಲೆಮಾರಿ ಕುಟುಂಬ ಹೊಂದಿರುವುದರಿಂದ ಸಹಜವಾಗಿ ವಿವಾಹದಲ್ಲಿ ಹೆಚ್ಚಾಗಿ ಸಮತೋಲನ ಹೊಂದಿದ್ದಾರೆ. ವಿವಾಹವನ್ನು ಹಲವು ಬಗೆಯಿಂದ ನೋಡಲಾಗುತ್ತದೆ. ಸಮಾಜಶಾಸ್ತ್ರದ ಹಿನ್ನೆಲೆಯಿಂದ ಕೂಡಿಕೊಂಡ ವಿವಾಹದ ಬಗೆಗಳು ಹಲವು ರೀತಿಯಾಗಿವೆ.

೧. ಬಹುಪತ್ನಿತ್ವ ಮತ್ತು ಬಹು ಪತಿತ್ವ
೨. ಏಕಪತ್ನಿತ್ವ ಮತ್ತು ಏಕಪತಿತ್ವ
ಎಂಬ ಎರಡು ಬಗೆಗಳಲ್ಲಿ ಕಂಡು ಬರುತ್ತವೆ.

೧. ಬಹುಪತ್ನಿತ್ವ - ಪತಿತ್ವ

ಬಹುಪತ್ನಿತ್ವ ಸಿಕ್ಲಿಗರ ಜನಾಂಗವು ಸಹ ಇಂತಹ ವಿವಾಹ ಪದ್ಧತಿಗೆ ಅನುಮತಿ ನೀಡಿದೆ. ಗಂಡ-ಹೆಂಡತಿ ಅಂದರೆ ಪತಿ-ಪತ್ನಿ ಇದ್ದಾಗಲೂ ವೈವಾಹಿಕ ಸಂಬಂಧಗಳಲ್ಲಿ ಬಿರುಕುಂಟಾದಾಗ ಇಲ್ಲವೇ ಪತಿ ತೀರಿಕೊಂಡು ಹೋದರೆ, ಪತ್ನಿ ತೀರಿ ಹೋದರೆ ಅವರನ್ನು ನೋಡಿಕೊಳ್ಳುವ ಜವಾಬ್ದಾರಿ ಎಲ್ಲರ ಮೇಲೆ ಬೀಳುತ್ತದೆ. ಎಂಬ ಕಾರಣಕ್ಕಾಗಿ ಅವರನ್ನು ನೋಡಿಕೊಂಡು ಹೋಗುವುದು ಅನಿವಾರ್ಯ, ಎಲ್ಲರ ಜೊತೆ ಸಮಾನತೆ ದೊರೆಯಲಾರದೆಂಬ ಕಾರಣದಿಂದ ಪತಿ-ಪತ್ನಿ ಇಬ್ಬರಿಗೂ ತೊಂದರೆ ಸಮಸ್ಯೆಗಳು ಉದ್ಭವಗೊಂಡಾಗ ಕೂಡಲೇ ಅವರನ್ನು ಕರೆದು ಮದುವೆ ಮಾಡುವರು. ಇಲ್ಲವೇ ಕೆಲವೊಂದು ಸಂದರ್ಭಗಳಲ್ಲಿ ಅನಿವಾರ್ಯತೆಯಿಂದಾಗಿ ನಡೆಯಬಹುದಾದ ಘಟನೆ ನಡೆದುಕೊಂಡು ಹೋಗುತ್ತದೆ. ಎಂಬುದನ್ನು ಬಹುಪತಿತ್ವ ಪದ್ಧತಿ ವಿವಾಹಗಳೇ ಕಾರಣವಾಗಿವೆ.

೨. ಏಕಪತಿತ್ವ - ಪತ್ನಿತ್ವ

ಏಕಪತಿತ್ವ ಎಂಬ ವಿವಾಹ ಪದ್ಧತಿಯು ಇದೆ. ಹೆಣ್ಣು ಗಂಡು ಕೂಡಾ ಎರಡು ಕೂಡಿಕೊಂಡು ಬರುತ್ತವೆ. ಹೀಗಾಗಿ ಒಬ್ಬರಿಗೊಬ್ಬರೂ ನೋಡಿಕೊಂಡು ಏಕಪತ್ನಿಗೆ ತಕ್ಕ

ಮಹಿಳೆಯನ್ನು ಮದುವೆ ಮಾಡಿಕೊಂಡು ಹಾಗೇ ಕುಟುಂಬವನ್ನು ಕಾರ್ಯನಿರ್ವಹಿಸಿಕೊಂಡು ಹೋಗುತ್ತಾರೆ. ಇದರಂತೆ ಏಕಪತಿಯನ್ನು ಹೊಂದಿದಂತೆ ಏಕಪತ್ನಿತ್ವವನ್ನು ಕೂಡಾ ಗಂಡು ಹೊರಬೇಕಾದ ಅನಿವಾರ್ಯತೆ ಇದೆ. ಈ ಕಾರಣಗಳಿಂದಾಗಿ ಸಿಕ್ಲಿಗರಲ್ಲಿ ಹೆಚ್ಚಾಗಿ ಏಕಪತಿತ್ವ ಹಾಗೂ ಏಕಪತ್ನಿತ್ವ ಮಾದರಿಯೇ ಹೆಚ್ಚಾಗಿ ಕಂಡು ಬರುತ್ತದೆ. ಇದೇ ಇಂದಿಗೂ ಅನುಕರಣೆಗೊಂಡು ಬಂದಿದೆ. ಹಿಂದಿನ ಕಾಲದಲ್ಲಿಯೂ ಸಹ ಇಂತಹ ಪದ್ಧತಿಗಳು ಸದಾ ಕಾರ್ಯಚರಣೆ ಹೊಂದಿದ್ದವು. ಇಲ್ಲಿಯ ಬಹುಮುಖ ಪದ್ಧತಿ ಕುಟುಂಬದ ಜೀವನ ಕಾರ್ಯ ನಿರ್ವಹಣೆ ಕೈಗೊಂಡು ಮುಂದುವರೆಸಿಕೊಂಡು ಬಂದಿದ್ದಾರೆ. ಹಿಂದಿನ ಕಾಲದಲ್ಲಿ ಹೇಗೆ ದುಡಿಯುತ್ತಿದ್ದರೋ ಹಾಗೇ ವಿವಾಹಗಳನ್ನು ಕೈಗೊಳ್ಳುತ್ತಿದ್ದರು. ಇಂದು ಆರ್ಥಿಕ ಹಾಗೂ ತಂತ್ರಜ್ಞಾನ ವಿಧಾನಗಳು ಬಂದಿದ್ದರಿಂದ ದುಡಿಯುವ ಶ್ರಮ ಹೆಚ್ಚಾಗಿದೆ. ಅದಕ್ಕೆ ತಕ್ಕಂತೆ ಫಲ ಕೂಡಾ ದೊರೆಯುತ್ತಿಲ್ಲ. ಇಂತಹ ಸಂದರ್ಭಗಳಲ್ಲಿ ಬಹುಪತಿತ್ವ ಹಾಗೂ ಪತ್ನಿತ್ವ ಹೊಂದಬೇಕಾದದು ಕನಿಷ್ಟವಾಗಿಯೂ ನಡೆಯುತ್ತಿಲ್ಲ. ಸಾಮಾನ್ಯವಾಗಿ ಇಂತಹ ನಾಲ್ಕು ವಿವಾಹ ಪದ್ಧತಿಗಳು ಅನಿವಾರ್ಯವಾಗಿ ಕಂಡು ಬರುತ್ತವೆ. ವಿನಃ ಉದ್ದೇಶಪೂರ್ವಕವಾಗಿ ಅಥವಾ ಯಾವುದೇ ಅಂಶಗಳಿಂದ ನಡೆಯದೇ ಅನಿವಾರ್ಯವಾಗಿ ನಡೆದಿದೆ. ಆದರೆ ಇವೆಲ್ಲಾ ನಾಲ್ಕಕ್ಕಿಂತ ಹೆಚ್ಚಾಗಿ ಏಕಪತ್ನಿ ಮತ್ತು ಏಕಪತಿತ್ವಕ್ಕೆ ಹೆಚ್ಚಿನ ಜನಮನ್ನಣೆ ಇಂದಿಗೂ ಸಿಕ್ಲಿಗರರಲ್ಲಿದೆ

ವಿವಾಹ ಸಂಸ್ಕಾರದ ವಿಧಿ-ವಿಧಾನಗಳು

ಸಿಕ್ಲಿಗರ ಸಮುದಾಯವು ಕರ್ನಾಟಕದಾದ್ಯಂತ ಪಸರಿಸಿಕೊಂಡು ಹೋಗಿದೆ. ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಹಾಗೂ ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಸಿಕ್ಲಿಗರು ದೊರೆಯುತ್ತಾರೆ. ಪ್ರಾದೇಶಿಕ ಹಾಗೂ ಪ್ರಾದೇಶಿಕ ಸಮಾನತೆಯ ಭಿನ್ನತೆಗಳು ಕಂಡು ಬರುತ್ತವೆ. ವಿವಾಹಕ್ಕೆ ಸಂಬಂಧಿಸಿದ ಹಲವಾರು ವಿಧಿ-ವಿಧಾನಗಳನ್ನು ನಡೆಸಿಕೊಂಡು ಬಂದಿದ್ದಾರೆ. ಇಂದಿನ ಬಹುತೇಕ ಬುಡಕಟ್ಟು ಸಮುದಾಯಗಳು ಹೇಗೆ ತಮ್ಮ ಕಾರ್ಯಗಳ ಮೂಲಕ ಬದಲಾವಣೆ ಹೊಂದಿದೆ. ಎಂಬುದನ್ನು ಕುತೂಹಲದಿಂದ ನೋಡಿದ್ದಾರೆ.

ಸಿಕ್ಲಿಗರರ ವಿವಾಹದ ವಿಧಿವಿಧಾನಗಳು ಬಹಳ ಸರಳವಾದ ರೀತಿಯಲ್ಲಿ ನಡೆದುಕೊಂಡು ಬರುತ್ತಿವೆ. ಸಿಕ್ಲಿಗರರ ವಿವಾಹವು ಒಂದೇ ಬಗೆಗಿನ ಜನಾಂಗದವರು ಅದೇ ಬಗೆಗಿನ ಜೊತೆ ಮದುವೆ ಮಾಡಲು ಬರುವುದಿಲ್ಲ. ಮುದ್ರವಾಲೇ ಟಾಂಕ್ ಹಾಗೂ ಮುದ್ರವಾಲೇ ಟಾಂಕ್ ಬೆಡಗಿನ ಜೊತೆಗೆ ಮದುವೆ ನಡೆಯುವುದಿಲ್ಲ. ಅದು ಅಲ್ಲದೇ ಮುದ್ರವಾಲೇ ಟಾಂಕ್‌ದೊಂದಿಗೆ ದುದನಿ

ಟಾಂಕ್‌ಗಳ ಮದುವೆ ನಡೆಯುತ್ತದೆ. ಈ ರೀತಿಯಾಗಿ ಬುಡಕಟ್ಟಿನ ಬೆಡಗುಗಳ ಜೊತೆ ನಡೆದು ಹೋಗುತ್ತದೆ. ಒಂದೇ ಬೆಡಗಿನವರು ಇದ್ದರೆ ಸಹೋದರ ಸಂಬಂಧಿ ವಾಚಕಗಳಾಗಿ ಕಾಣಸಿಗುತ್ತಾರೆಂದು ಹಿಂದೂ ಧರ್ಮದ ಪದ್ಧತಿಯಲ್ಲಿಯೂ ಸಹೋದರ ಸಂಬಂಧಿಯ ಜೊತೆಗೆ ಮದುವೆಯಾಗುವುದನ್ನು ಅಣ್ಣ ತಮ್ಮಂದಿರು ನಿರ್ಭಂಧಿಸಲಾಗಿದೆ. ಏಕೆಂದರೆ ಪುರುಷ ಪ್ರಧಾನವಾದ ಸಂಸ್ಕೃತಿಯು ಸಹೋದರ ಸಂಬಂಧಿಗಳೆಂದು ಪರಿಗಣಿಸುವುದಾಗಿದೆ.

ಸಮುದಾಯದ ಹಿರಿಯರೇ ಮದುವೆಯ ಸಂಪೂರ್ಣ ಜವಾಬ್ದಾರಿ ಹೊರುತ್ತಾರೆ. ಈ ಜನಾಂಗದಲ್ಲಿ ಪಂಚರೆಂದು ಈ ಹಿರಿಯರನ್ನು ಕರೆಯುತ್ತಾರೆ. ಅವರೇ ಎಲ್ಲಾ ಕ್ರಿಯೇಗಳನ್ನು ಮುಗಿಸುತ್ತಾರೆ. ಇದಕ್ಕೆಲ್ಲಾ ಮುಂದೆ ನಿಂತು ಕಾರ್‍ಯ ನಡೆಸುತ್ತಾರೆ. ಇಲ್ಲಿನ ಜವಾಬ್ದಾರಿಯನ್ನು ಹೊತ್ತುಕೊಂಡ ಹಿರಿಯರಲ್ಲಿ ಒಬ್ಬರನ್ನು ಅವರೇ ಆರಿಸಿಕೊಂಡು ಪೂಜಾರಿಗಳನ್ನಾಗಿ ಆಯ್ಕೆ ಮಾಡುತ್ತಾರೆ. ಇಲ್ಲಿರುವ ಪೂಜಾರಿಗಳಾದವರು ಹೇಳಿದಂತೆ ಮದುವೆ ನಡೆಯಬೇಕು ಆ ರೀತಿ ಆಗದಿದ್ದರೆ ಮದುವೆ ನಡೆಯುವುದಿಲ್ಲ. ಸಿಕ್ಲಿಗರು ಸಂಪೂರ್ಣವಾದ ಮದುವೆ ಕಾರ್ಯವು ತಮ್ಮ ಹಿರಿಯರಿಂದಲೇ ಎಲ್ಲರನ್ನೂ ಒಂದುಗೂಡಿಸಿ ಮದುವೆಕಾರ್ಯ ಮುಗಿಸುತ್ತಾರೆ. ಹೀಗಾಗಿ ಹಿರಿಯರನ್ನು ಪಂಚರೆಂದು ಪೂಜಾರಿಗಳನ್ನು ಧ್ಯಾನರೆಂದು ಸಿಕ್ಲಿಗರರು ಕರೆದು ಅವರಿಗೆ ಗೌರವದ ಹಿರಿಯ ಸ್ಥಾನ ಕೊಡುತ್ತಾರೆ. ಸಿಕ್ಲಿಗರರಿಗೆ ನಂಬಿಕೆಗೆ ಅರ್ಹರಾದವರನ್ನು ಆರಿಸುತ್ತಾರೆ. ಸಿಕ್ಲಿಗರರ ಈ ಹಿರಿಯರನ್ನು ಆರಿಸುವಾಗ ಹದಿನೆಂಟು ಬೆಡಗುಗಳಲ್ಲಿ ಯಾರೇ ಇರಲಿ ಅವರಲ್ಲಿ ಹಿರಿಯರನ್ನು ಮಾತ್ರ ಆಯ್ದುಕೊಳ್ಳುವರು ಎಲ್ಲರೂ ಸೇರಿಕೊಂಡು ಹೋಗುತ್ತಾರೆ. ಅದೇ ಬೆಡಗಿನವರೆ ಆಗಬೇಕೆಂಬ ನಿಯಮ ಕಟ್ಟುಪಾಡುಗಳನ್ನು ಯಾರು ಪಡೆದಿಲ್ಲ. ಸಮುದಾಯದಲ್ಲಿರುವ ಹಿರಿಯರು ಯಾವ ಬೆಡಗಿನವರೆ ಆಗಿರಲಿ ಯಾವ ಗೋತ್ರದವರೇ ಆಗಿರಲಿ ಅವರು ದೈವಕ್ಕೆ ಸಮಾನರು ಎಂದು ಬಗೆಯುವ ರೂಢಿ ಎಲ್ಲಾ ಕೆಳವರ್ಗದ ಜನಪದ ಸಮುದಾಯಗಳಲ್ಲಿ ಕಾಣುತ್ತೇವೆ. ಆ ರೀತಿ ಪೂಜಾರಿ ಹಾಗೂ ಪಂಚರನ್ನು ಕೂಡಿಕೊಂಡು ಹೋಗುವಾಗ ಯಾವ ಕಟ್ಟುಪಾಡುಗಳು ಒಳಗಾಗುವುದಿಲ್ಲ. ಇದೇ ನಿಯಮ ತತ್ವಗಳು ಇದರಲ್ಲಿ ಹೊಂದಿಲ್ಲ. ಒಂದು ಮಾತ್ರ ಹಿರಿಯರು ಈ ಮದುವೆ ಸಂಪ್ರದಾಯ ಮುಂದುವರೆಸಿಕೊಂಡು ಬಂದಿದ್ದಾರೆ.

ವಿವಾಹಗಳು ನಮ್ಮ ಸಮಾಜದ ಬಹು ದೊಡ್ಡ ಕೊಡುಗೆಗಳಾಗಿವೆ. ವಿವಾಹದ ದಿನದಂದು ಪೂಜಾರಿ ವಧು ಮತ್ತು ವರನ ಕಡೆಯವರು ಸೇರಿಕೊಂಡು ಹತ್ತಿರವಿದ್ದ ಪೇರು (ಜಾಫಲ್) ಮತ್ತು ಅತ್ತಿಗಿಡಕ್ಕೆ ಹಾಗೂ ಮಾವಿನಗಿಡಕ್ಕೆ ಪೂಜೆ ಮಾಡಿಸುತ್ತಾರೆ. ಆ ಎರಡು ಪೂಜೆ ಮಾಡಿದ

ಗಿಡಗಳನ್ನು ಹಾಗೂ ಆ ಗಿಡದ ಟೊಂಗೆಗಳನ್ನು ಕತ್ತರಿಸಿಕೊಂಡು ಬರುತ್ತಾರೆ. ಆ ಟೊಂಗೆಯನ್ನು ಮದುವೆ ನಡೆಯುವ ವರನ ಮನೆಯ ಮುಂದೆ ತರುತ್ತಾರೆ. ಆ ಟೊಂಗೆಗಳನ್ನು ಮದುವೆ ಮನೆಯ ಮುಂದೆ ಎರಡು ಪಕ್ಕ ಊರುತ್ತಾರೆ. ಯಾವಾಗ ಈ ಗಿಡದ ಟೊಂಗೆಗಳನ್ನು ತಂದು ನಡುವವರೆಗೂ ಆ ಮನೆಯಲ್ಲಿ ಮದುವೆಯ ಪ್ರಕ್ರಿಯೇಗಳು ನಡೆಯುವುದಿಲ್ಲ. ನೆಟ್ಟ ತಕ್ಷಣವೇ ಮಾಡಬೇಕಾದ ಎಲ್ಲಾ ಕಾರ್ಯ ವಿಧಾನಗಳನ್ನು ಸಂಪೂರ್ಣವಾಗಿ ಮಾಡಿ ಮುಗಿಸಲು ಸೂಚನೆ ನೀಡಿದಂತಾಗುತ್ತದೆ. ಮನೆಯವರೆಲ್ಲಾ ಬೇಗನೇ ಮದುವೆ ಕಾರ್ಯ ಕೈಗೊಳ್ಳಲು ಅನುಕೂಲವಾಗುತ್ತದೆ. ಹಿಂದೂ ಸಂಪ್ರದಾಯದ ಪ್ರಕಾರ ಏಲಕ್ಕಿ ಗಿಡವನ್ನು ತಂದು ಹಂದರದ ಮುಂದೆ ನೆಡುತ್ತಾರೆ. ಆದರೆ ಈಗ ಎಲ್ಲವು ಆಧುನಿಕರಣವಾಗಿದ್ದು ಹಂದರ ಹಾಕುವಂತಹ ನಮ್ಮ ಗ್ರಾಮೀಣ ಸಂಪ್ರದಾಯ ನಸಿಸಿದೆ. ಮದುವೆ ಸಿದ್ಧತೆಗೆ ಒಂದು ವೇದಿಕೆ ಮಾಡಿ ಒಂದೇ ದಿನದಲ್ಲಿ ಮುಗಿಸಿ ಬಿಡುತ್ತಾರೆ.

ಮದುವೆಯ ಕ್ರಿಯೇ ಪ್ರಾರಂಭವಾಗಿ ಸಿಕ್ಲಿಗರ ಜನಾಂಗದಲ್ಲಿ ಮುಗಿಯುವದು ಒಂದೇ ದಿನದಲ್ಲಿ ಅಲ್ಲ. ಏಳು ದಿನಗಳವರೆಗೆ ನಿರಂತರವಾಗಿ ಬಂದವರು ಸಂಬಂಧಿಕರೂ ಒಂದೊಂದು ದಿನ ಒಬ್ಬರಂತೆ ಏಳು ಜನ ಸೇರಿ ಏಳು ದಿನಗಳು ವಧು-ವರರಿಗೆ ೫ ಕೆ.ಜಿ. ಅರಿಷಿಣ ತೆಗೆದುಕೊಂಡು ಬಂದು ಆ ಅರಿಷಿಣವನ್ನು ವಧು ವರರಿಗೆ ಹಚ್ಚುತ್ತಾರೆ. ಮೈ ತುಂಬಾ ಅರಿಷಿಣ ಹಚ್ಚಿ ಅವರನ್ನು ಶೃಂಗರಿಸುತ್ತಾರೆ. ನಂತರ ಸ್ನಾನ ಮಾಡಿಸುತ್ತಾರೆ. ಇದರೊಂದಿಗೆ ಏಳು ದಿನಗಳ ಕಾಲ ಈ ಮದುವೆ ಜರುಗುತ್ತದೆ. ಹೀಗಾಗಿ ಏಳು ದಿನಗಳ ಕಾಲವು ನಿರಂತರ ಊಟ ಅಕ್ಕಿ ಬೆಲ್ಲದಿಂದ ತಯಾರಿಸಿದ ಮಿಟ್ಟಾ ಎಂಬ ಪದಾರ್ಥಗಳನ್ನು ತಯಾರಿಸಿಕೊಡುತ್ತಾರೆ. ಆ ಏಳು ದಿನಗಳು ಮಾತ್ರ ಹಿರಿಯರು ಹೇಳಿದ ಹಾಗೇ ಅಥವಾ ಪೂಜಾರಿಗಳು ಹೇಳುವ ನಿಯಮದ ಪ್ರಕಾರವೇ ನಡೆದುಕೊಂಡು ಬರುತ್ತಾರೆ. 'ಮಿಟ್ಟಾ' ವನ್ನು ವಧು ವರರು ಕೂಡಿಯೇ ತಿನ್ನಬೇಕು. ಇತರರ ದೇಹದ ಭಾಗಕ್ಕೆ ಬಲವನ್ನು ಕೊಟ್ಟಂತಾಗುತ್ತದೆಂಬ ಕಾರಣದಿಂದ ಈ ಪದಾರ್ಥವನ್ನು ಕೊಡುತ್ತಾರೆ.

ನಡುಮನೆಯಲ್ಲಿ ಹೆಣ್ಣಿನ ಕಡೆಯವರು ಸೇರಿಕೊಂಡು ತಮಗೆ ಕೈಲಾದ ಮಟ್ಟಿಗೆ ಉಡುಗೊರೆಯನ್ನು ಕೊಡುವುದು ಇದಕ್ಕೆ ವರದಕ್ಷಿಣೆ 'ತೆರ' ಎನ್ನುವ ಪದ್ಧತಿಯಂತೂ ಸಿಕ್ಲಿಗರಲ್ಲಿ ಇಲ್ಲವೇ ಇಲ್ಲ. ಇವರಲ್ಲಿ ಅಂತರ್ಜಾತಿ ವಿವಾಹಗಳು ಕಂಡು ಬರುವುದಿಲ್ಲ. ಇಲ್ಲಿಯ ಹೆಣ್ಣುಮಕ್ಕಳು ಆಯಾ ಗಂಡಸರು ಬೇರೆ ಎಲ್ಲೂ ಹೋಗದ್ದರಿಂದ ಸ್ಥಳೀಯವಾಗಿಯೇ ತಮ್ಮ ಕುಲಕಸುಬು

ಅವಲಂಬಿಸಿಕೊಂಡಿದ್ದರಿಂದ ಅನೈತಿಕ ಸಂಬಂಧವನ್ನು ಹೊಂದಿಲ್ಲ. ಅಂತರ್ಜಾತಿ ವಿವಾಹಗಳಿಗೆ ಅವಕಾಶವೇ ಇಲ್ಲ. ವರದಕ್ಷಿಣೆ, ಸೇವೆ, ವಿನಿಮಯ ದತ್ತು ಸ್ವೀಕಾರಗಳು ಇವರಲ್ಲಿ ನಡೆಯುವುದಿಲ್ಲ.

ಮದುವೆ ಕಾರ್ಯ ಮುಗಿಸಿದ ಪೂಜಾರಿ ಅಥವಾ ಪಂಚರು ಹಾಗೂ ಸಂಬಂಧಿಕರೆಲ್ಲಾ ಸೇರಿಕೊಂಡು ವಧು-ವರರನ್ನು ಕೂಡಿಸಿಕೊಂಡು ಮನೆಯಿಂದ ಪ್ರತ್ಯೇಕವಾಗಿರಲು ಸೂಚಿಸುತ್ತಾರೆ. ಅವರಿಗಾಗಿ ಒಂದು ಜೋಪಡಿ ಟಿಣ್‌ಮನೆ ಇಲ್ಲವೇ ಬಿಡಾರ ಹೂಡಿದ ಪ್ರತ್ಯೇಕ ಗುಡಿಸಲಿಗೆ ಕಳುಹಿಸುತ್ತಾರೆ. ಅಂದಿನಿಂದ ಇಬ್ಬರೂ ಗಂಡ-ಹೆಂಡತಿ ಪ್ರತ್ಯೇಕವಾದ ಗುಡಿಸಲಿನಲ್ಲಿ ಸಂಸಾರ ಹೂಡಬೇಕು. ಅಲೆಮಾರಿ ಜನಾಂಗವಾಗಿದ್ದರಿಂದ ದಿನಾಲು ದುಡಿದರೆ ಮಾತ್ರ ಊಟಕ್ಕೆ ಸಿಗುತ್ತದೆ. ಇಲ್ಲದಿದ್ದರೆ ಇಲ್ಲ. ಅದಕ್ಕಾಗಿ ಸ್ವತಂತ್ರ ಜೀವನ ನಡೆಸಲು ಪ್ರತ್ಯೇಕತೆ ಇವರಲ್ಲಿ ಅವಶ್ಯವಾಗಿದೆ.

ಪ್ರತ್ಯೇಕವಾಗಿ ಇಬ್ಬರೂ ಸಂಸಾರ ನಡೆಸಿಕೊಂಡು ಹೋಗುವುದರಿಂದ ಅವರಿಗೆ ಹಲವು ರೀತಿಯಿಂದ ತೊಂದರೆ ಸಮಸ್ಯೆಗಳು ನೀಗಿಸಲು ಸಾಧ್ಯವಾಗುತ್ತದೆ. ಈ ಕಾರಣದಿಂದ ಪ್ರತ್ಯೇಕವಾಗಿ ಇಡುತ್ತಾರೆ. ಒಂದು ವೇಳೆ ತಂದೆ ತಾಯಿ ಇಬ್ಬರೂ ಇದ್ದರೂ ಸಹ ಪ್ರತ್ಯೇಕವಾಗಿ ಇಡುವರು. ಅವರಿಗೆ ಅಣ್ಣ-ತಂಗಿ-ತಮ್ಮ ಇದ್ದರೂ ಸಹ ಅವರನ್ನು ತಮ್ಮ ತಂದೆ ತಾಯಿ ಹತ್ತಿರ ಬಿಟ್ಟು ತಾವಿಬ್ಬರೂ ಹೊರ ಬರುತ್ತಾರೆ.

ಈ ಸಿಕ್ಲಿಗರಲ್ಲಿ ಒಂದು ವಿಶೇಷವಾದ ಘಟನೆ ನಡೆಯುತ್ತದೆ. ವರ ಮದುವೆಯಾಗಿ ತನ್ನ ಮಾವನ ಮನೆಯ ಎದುರಿಗೆ ಗುಡಾರ ಹಾಕಿಕೊಂಡು ಹೆಂಡತಿಯನ್ನು ಕರೆದುಕೊಂಡು ಜೀವನ ನಿರ್ವಹಿಸಬೇಕಾಗುತ್ತದೆ. ಇದು ಸರಿಯಾಗಿ ಹೌದು ಎನಿಸಿದರೆ ಎಲ್ಲರೂ ಖುಷಿಪಡುತ್ತಾರೆ. ಇಂತಹ ಕಟ್ಟುಪಾಡು ಒಂದೇ ಸಲ ಕಾಣುತ್ತದೆ. ಬೇರೆ ಕಡೆ ದೊರೆಯಲಾರದು. ಮದುವೆಯ ಎಲ್ಲಾ ಕೆಲಸ ಕಾರ್ಯಗಳು ಸಾಂಸ್ಕೃತಿಕ ಹಾಗೂ ಧಾರ್ಮಿಕ ಕಾರ್ಯಗಳು ಸಂಪೂರ್ಣವಾಗಿ ಮುಗಿಯುವವರೆಗೂ ಎಲ್ಲರೂ ಸಂತಸದಲ್ಲಿ ಭಾಗವಹಿಸುವರು. ಅಲ್ಲದೇ ಈ ಮದುವೆ ಮುಗಿಯುವವರೆಗೂ ಯಾವ ಸಿಕ್ಲಿಗರರು ಮಧ್ಯ ಮತ್ತು ಮಾಂಸವನ್ನು ಸೇವಿಸಬಾರದು. ಆ ರೀತಿ ಸೇವಿಸುವ ಸಿಕ್ಲಿಗರ ವ್ಯಕ್ತಿಯನ್ನು ನಿಷೇಧಿಸುತ್ತಾರೆ. ಆ ಮೂಲಕ ಸಿಕ್ಕಲಗಾರರ ಮದುವೆಯ ವಿಧಿ-ವಿಧಾನಗಳನ್ನು ಪೂರೈಸಿಕೊಂಡು ಬುಡಕಟ್ಟು ಜನಾಂಗದ ಅಲೆಮಾರಿ ಜೀವನದಲ್ಲಿ ಪ್ರಮುಖವಾಗಿ ಕಾಣಿಸಿಕೊಂಡು ಬರುವ ಸಮುದಾಯ ಸಿಕ್ಲಿಗರ ಎಂಬುದನ್ನು ಅವರ ಆಚರಣೆಗಳ ಮೂಲಕ ನಮಗೆ ಸ್ಪಷ್ಟವಾಗಿ ಕಂಡು ಬರುತ್ತದೆ.

ವಿಧವಾ ವಿವಾಹ

ಬುಡಕಟ್ಟು ಜನಾಂಗವು ಬಹು ವಿಸ್ತಾರವಾದ ವೈವಿಧ್ಯತೆಯಿಂದ ಕಂಡು ಬರುತ್ತದೆ. ವಿವಾಹ ವಿಧಾನಗಳನ್ನು ಅಳವಡಿಸಿಕೊಂಡು ಬಂದ ಬುಡಕಟ್ಟು ಜನಾಂಗ ಹಲವು ರೀತಿಯಲ್ಲಿ ಆಚರಣೆಗಳನ್ನು ತಂದಿದೆ. ಹಲವು ಪಂಗಡಗಳಲ್ಲಿ ವಿಧವಾ ವಿವಾಹ ನಡೆಯುತ್ತವೆ. ಕೆಲವೊಂದು ಜನಾಂಗಗಳಲ್ಲಿ ಹೆಂಡತಿ ಸತ್ತರೆ ಗಂಡ ಮತ್ತೊಂದು ವಿವಾಹವಾಗಲು ಅನುಕೂಲವಿದೆ. ಗಂಡ ಸತ್ತಾಗ ಹೆಂಡತಿ ಮತ್ತೊಂದು ಮದುವೆಯಾಗಲು ಅವಕಾಶವಿದೆ. ಒಂದು ಜನಾಂಗದಲ್ಲಿ ಗಂಡ ಹೆಂಡತಿಯರೇ ಆಗಲಿ ಅವರೆಲ್ಲರೂ ಯಾರೇ ಸತ್ತರು ಮದುವೆ ಆಗುವುದಿಲ್ಲವೆಂಬ ನಿರ್ಬಂಧವನ್ನು ಹಾಕಲಾಗಿದೆ. ಆದರೆ ಸಿಕ್ಲಿಗರ ಜನಾಂಗದಲ್ಲಿ ವಿಧವಾ ವಿವಾಹ ಕಂಡು ಬರುತ್ತದೆ. ಅದನ್ನು ಪಾಲಿಸುತ್ತಾರೆ. ತನ್ನ ಅಣ್ಣ ಸತ್ತರೆ ಅಣ್ಣನ ಹೆಂಡತಿಯನ್ನು ಮೈದುನನು ಮದುವೆಯಾಗುವುದು ಕಂಡು ಬರುತ್ತದೆ. ಈ ಜನಾಂಗದ ಒಂದು ವೈಶಿಷ್ಟ್ಯವಾಗಿದೆ.

ಮೈದುನನು ಈಗಾಗಲೇ ಹೆಂಡತಿಯನ್ನು ಮಾಡಿಕೊಂಡರೂ ತನಗಿಂತ ಹೆಚ್ಚಿನ ವಯಸ್ಸಾಗಿದ್ದರೂ ಅತ್ತಿಗೆಯನ್ನು ಲೆಕ್ಕಿಸದೇ ಮದುವೆ ಮಾಡಿಕೊಂಡರೆ ಅದನ್ನು ಗಂಭೀರವೆಂದು ಯಾರು ಪರಿಗಣಿಸಲಾರರು. ಹೆಚ್ಚಾಗಿ ತಮ್ಮನ ಮದುವೆಯಾಗದ ಪಕ್ಷದಲ್ಲಿ ಅತ್ತಿಗೆಯನ್ನು ಮದುವೆಯಾಗಲು ಅಡ್ಡಿಯಿಲ್ಲ. ಅದೇ ಅಣ್ಣ ತಮ್ಮ ತೀರಿ ಹೋದರೆ ಆತನ ಹೆಂಡತಿಯನ್ನು ಸೊಸೆ ಇದ್ದರೂ ಕೂಡಾ ಮದುವೆ ಮಾಡಿಕೊಳ್ಳಲು ಬರುವುದಿಲ್ಲ. ನಲವತ್ತು ವರ್ಷದೊಳಗೆ ಅತ್ತಿಗೆ ಇದ್ದಾಗಲೂ ಸಹ ಮದುವೆಯಾಗಬೇಕು. ನಲವತ್ತು ವರ್ಷಕ್ಕೆ ಮೇಲ್ಪಟ್ಟರೆ ಆಗಲು ಬರುವುದಿಲ್ಲವೆಂಬ ನಿರ್ಬಂಧನೆಯನ್ನು ಹಾಕಲಾಗಿದೆ. ಬುಡಕಟ್ಟು ಜನಾಂಗ ಯಾವುದೇ ಇರಲಿ ವಿಚಿತ್ರವಾದ ಸಂಸ್ಕೃತಿ ಆಚರಣೆ ಹೊಂದಿವೆ. ಅಣ್ಣನ ಹೆಂಡತಿಯನ್ನು ಮದುವೆಯಾದರೆ ತಮ್ಮನ ಹೆಂಡತಿಯನ್ನು ಮದುವೆಯಾಗಲು ಬರುವುದಿಲ್ಲವೆಂಬ ನಿರ್ಬಂಧನೆ ಹಾಕಲಾಗಿದೆ. ಸಿಕ್ಲಿಗರರು ಸಹಿತ ಈ ನಿಯಮ ಕಾಪಾಡಿಕೊಂಡು ಬಂದಿದ್ದಾರೆ.

೧೯೯೧ ರ ಜನಗಣತಿ ಪ್ರಕಾರ ಸಿಕ್ಲಿಗರ ಜನಾಂಗದ ವಿವಾಹ ಪದ್ಧತಿಯನ್ನು ನಡೆಸಿಕೊಳ್ಳಲು ಸರ್ಕಾರವೂ ೧೫ ವರ್ಷ ಹೆಣ್ಣಿಗೆ ಹಾಗೂ ೧೬ ವರ್ಷಗಳ ಗಂಡಿಗೆ ಎಂದು ನಿರ್ಬಂಧ ಹೇರಲಾಗಿದೆ. ಇದರ ತರುವಾಯದಲ್ಲಿ ಮದುವೆಯಾಗಬೇಕು. ಒಳಗಂತೂ ಆಗುವುದಿಲ್ಲ. ಈ ರೀತಿ ವಿವಾಹದ ಜನಗಣತಿಯ ದಾಖಲೆಯಂತೆ ಅಂಕಿ-ಅಂಶಗಳನ್ನು ಮುಂದುವರೆಸುಕೊಂಡು ಬರಲಾಗಿದೆ.

ವಿವಾಹ ವಿಚ್ಛೇದನ

ಬುಡಕಟ್ಟು ಜನಾಂಗದ ಸಮುದಾಯಗಳು ಬಹು ಮುಖ್ಯವಾದ ಕೆಲಸ ಮಾಡಿವೆ. ಇವರಿಗೆ ಡೈವರ್ಸ್ ಕೂಡಾ ಪಡೆವ ಹಕ್ಕು ಇದೆ. ಗಂಡ ಹೆಂಡತಿಯನ್ನು ಹಾಗೂ ಹೆಂಡತಿ ಗಂಡನನ್ನು ಬಿಡಬಹುದೆಂಬ ಅಂಶವನ್ನು ಸಿಕ್ಲಿಗರ ಸಂಸ್ಕೃತಿಯಲ್ಲಿದೆ. ವಿವಾಹ ವಿಚ್ಛೇದನ ಹೊಂದಲು ಕೆಲವು ಕಾರಣಗಳಿವೆ.

೧. ಮಕ್ಕಳು ಆಗದೇ ಇದ್ದಾಗ ಗಂಡ-ಹೆಂಡತಿ ಯಾರಾದರೂ ವಿಚ್ಛೇದನ ಕೊಡಬಹುದು.
೨. ಗಂಡ-ಹೆಂಡತಿ ಮಧ್ಯ ಹೊಂದಾಣಿಕೆ ಇಲ್ಲದಿದ್ದಾಗ
೩. ಅನೈತಿಕ ಸಂಬಂಧ ಗಂಡ ಅಥವಾ ಹೆಂಡತಿ ಹೊಂದಿದ್ದಾಗಲೂ
೪. ಗಂಡ-ಹೆಂಡತಿ ಹುಚ್ಚರಾಗಿದ್ದರೆ ಅಂಗವಿಕಲತೆ ಇದ್ದರೆ
೫. ಬೇರೆಯವರ ಮಾತು ಕೇಳಿ

ಈ ರೀತಿಯಾಗಿ ಐದು ಬಗೆಗಳಲ್ಲಿ ಹೇಗಾದರೂ ಮಾಡಿ ಒಂದು ಕಾರಣವು ದೊರೆತರೂ ಸಹಿತ ವಿವಾಹ ವಿಚ್ಛೇದನ ಹೊಂದುವ ಅಧಿಕಾರ ಇಬ್ಬರಲ್ಲೂ ಇದೆ. ಆದರೂ ಕೂಡಾ ಮಹಿಳೆಯರಿಗಿಂತ ಹೆಚ್ಚಾಗಿ ಪುರುಷರೇ ಈ ಕಾರ್ಯದಲ್ಲಿ ಮುಂದೆ ಬಂದಿದ್ದಾರೆ ಪುರುಷ ಪ್ರಧಾನ ಸಂಸ್ಕೃತಿಯನ್ನು ಅಳವಡಿಸಿಕೊಂಡು ಬಂದಿರುವುದೇ ಇದಕ್ಕೆ ಕಾರಣವಾಗಿದೆ. ಈ ಎಲ್ಲಾ ಕಾರಣಗಳನ್ನು ಕೊಟ್ಟು ವಿವಾಹ ವಿಚ್ಛೇದನ ಕೊಡುತ್ತೇನೆಂದು ಹೇಳಿದರೆ ಸಮುದಾಯದ ಹಿರಿಯರು ಒಪ್ಪುವುದಿಲ್ಲ. ಅದನ್ನು ಕುಲಪಂಚಾಯ್ತಿ, ನ್ಯಾಯಪಂಚಾಯ್ತಿಗಳಲ್ಲಿ ತಂದು ಕೊಡಬೇಕಾಗುತ್ತದೆ. ನ್ಯಾಯ-ಅನ್ಯಾಯಗಳ ಪರಾಮರ್ಶನೆ ಹಿರಿಯರು ಮಾಡುತ್ತಾರೆ. ಅವರು ಒಪ್ಪಿಕೊಂಡು ಹೇಳಿದರೆ ಮಾತ್ರ ವಿಚ್ಚೇಧನ ನೀಡುವ ಹಂತ ಹೊಂದಿದ್ದಾರೆ. ಸಿಕ್ಲಿಗರರು ತಮ್ಮಷ್ಟಕ್ಕೆ ತಾವೇ ಅನುಸರಿಸಿಕೊಂಡು ಹೋಗಬೇಕಾದ ಅನಿವಾರ್ಯತೆ ಇದೆ. ಈ ಕಾರಣದಿಂದಾಗಿ ವಿವಾಹ ವಿಚ್ಛೇದನ ಕಾರಣ ಹಾಗೂ ರೀತಿಗಳು ಇಲ್ಲಿ ಪಾಲಿಸಿಕೊಂಡು ಬರಲಾಗಿದೆ.

ವಿವಾಹ ಪೂರ್ವ ಒಳ-ಹೊರಗು ರೀತಿ

ಸಿಕ್ಲಿಗರು ಬುಡಕಟ್ಟು ಜನಾಂಗ ಮಾತ್ರವಲ್ಲ. ಅಲೆಮಾರಿ ಜೀವನವನ್ನು ನಡೆಸಿಕೊಂಡು ಬಂದಿದ್ದಾರೆ. ಅವರಲ್ಲಿ ಯಾರೇ ತಪ್ಪು ಮಾಡಲಿ ಅವರಿಗೆ ಶಿಕ್ಷೆ ಇದೆ. ಹೀಗಾಗಿ ವಿವಾಹಕ್ಕಿಂತ ಮೊದಲೇ ಲೈಂಗಿಕ ಸಂಪರ್ಕಕ್ಕೆ ಅವಕಾಶ ನೀಡುವುದಿಲ್ಲ. ಲೈಂಗಿಕ ಸಂಪರ್ಕಕ್ಕೆ ಇವರು

ನಿಷೇಧಿಸುತ್ತಾರೆ. ಒಂದು ವೇಳೆ ವಿವಾಹಕ್ಕಿಂತ ಪೂರ್ವದಲ್ಲಿ ಲೈಂಗಿಕತೆಗೆ ಒಳಗಾದರೆ ಅಥವಾ ಸಿಕ್ಕಿಬಿದ್ದ ಹೆಣ್ಣುಗಂಡು ಯಾರೇ ಆಗಲಿ ಅವರನ್ನು ಕೂಡಲೇ ತಮ್ಮ ಸಮುದಾಯದ ಮೂಲಕ ಹೊರಹಾಕುತ್ತಾರೆ. ಹಿರಿಯರು ಪಂಚರು ಸೇರಿಕೊಂಡು ನ್ಯಾಯ-ಅನ್ಯಾಯಗಳ ಮೂಲಕ ಪರಾರ್ಶಿಸಿದಾಗ ಸದಸ್ಯತ್ವವನ್ನು ಪರಿಗಣಿಸಿಕೊಂಡು ವಿವಾಹಪೂರ್ವ ಒಳಹೊರಗು ನಿಷೇಧಗಳನ್ನು ಕೈಗೊಳ್ಳುತ್ತಾರೆ.

ಮರಣ

ಸಿಕ್ಲಿಗರ ಸಮುದಾಯವು ವಿಶಿಷ್ಟವಾದ ಆಚರಣೆ ಹಾಗೂ ಸಂಸ್ಕೃತಿಯನ್ನು ಹೊಂದಿದೆ. ಜನನದಿಂದ ಮರಣದವರೆಗೆ ತನ್ನ ದೇಹದ ಹಲವು ಕಾರ್‍ಯ ತಂತ್ರಗಳನ್ನು ರೂಢಿಸಿಕೊಂಡು ಬಂದಿದ್ದಾರೆ. ಮರಣವು ಕೂಡಾ ನಿಷೇಧವಾದ ಹಂತವನ್ನು ಮೀರಿದೆ. ಸಿಕ್ಲಿಗರರು ತಮ್ಮ ಸಮುದಾಯವು ಮರಣ ಹೊಂದಿದೆ ಊಳುವ ಪದ್ಧತಿಯನ್ನು ಹೊಂದಿಲ್ಲ. ಬದಲಾಗಿ ಸುಡುವ ಪದ್ಧತಿಯನ್ನು ಅನುಸರಿಸಿಕೊಂಡು ಬಂದಿದ್ದಾರೆ. ತಾವು ಎಂದು ಕೂಡಾ ತಮ್ಮ ಜನನವಾದಾಗಿನಿಂದ ಹಿಡಿದು ಮರಣದತನಕವು ಕೂದಲನ್ನು ತೆಗೆಯುವುದಿಲ್ಲ. ಹೀಗಾಗಿ ಅವರು ಸಂಪೂರ್ಣ ತತ್ವದ ಮೇಲೆ ಬದ್ದರಾಗಿ ಹಿರಿಯರ ಸಮ್ಮುಖ ಹಾಗೂ ಬಂಧು ಬಳಗದವರ ಮೂಲಕ ಸುಡುವ ಕಾರ್ಯಕೈಗೊಳ್ಳುವರು. ಸುಟ್ಟು ಹೋದ ದೇಹದ ಬೂದಿಯನ್ನು ತೆಗೆದುಕೊಂಡು ಮೂರುದಿನಗಳಲ್ಲಿ ಹತ್ತಿರದ ಹಳ್ಳ ಕೆರೆ ನದಿಗಳಲ್ಲಿ ಬಿಡುತ್ತಾರೆ. ಸತ್ತ ವ್ಯಕ್ತಿಯ ಮನೆಯಲ್ಲಿ ಮೂರು ದಿನಗಳು ಯಾವುದಾದರೊಂದು ಊಟ ಮಾಡಲು ಒಲೆಯನ್ನು ಹಚ್ಚುವುದಿಲ್ಲ. ನೆರೆಯ ಮನೆಯವರು ಸತ್ತವರ ಕುಟುಂಬಕ್ಕೆ ಊಟವನ್ನು ಕೊಡುತ್ತಾರೆ. ಸ್ನಾನ ಮಾಡಿ ಆಹಾರ ಸೇವಿಸಿ ಊಟ ಮಾಡುವರು. ಮೂರು ದಿವಸ ಇಲ್ಲವೇ ವಾರದಲ್ಲಿ ತಿಥಿಯನ್ನು ಮಾಡಿಕೊಂಡು ಸತ್ತವರ ಸ್ಮರಣೆ ಮಾಡುತ್ತಾರೆ. ಈ ತಿಥಿಯನ್ನು ಮಾಡುವ ಪದ್ಧತಿ ಇಂದು ತೆಗೆದು ಹಾಕಿದ್ದಾರೆ. ಹಿಂದೆ ಇದ್ದ ಸಂಸ್ಕೃತಿಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಮಗನಾದ ಮೂಲಕ ಹೊಸತನ ಕಾಣಲು ಸತ್ಯವೆಂದಿದ್ದಾರೆ ತಮ್ಮ ಗುರುವಾದ ಗುರುನಾನಕ್ ಅವರನ್ನು ನೆನೆಸಿಕೊಳ್ಳುತ್ತಾರೆ. ಸತ್ತು ಹೋದ ನಂತರದಲ್ಲಿ ಸಿಕ್ಲಿಗರ ಬುಡಕಟ್ಟು ಜನಾಂಗ ತಮ್ಮ ಪರಮಾತ್ಮನನ್ನು ಹಾಗೂ ಸ್ವರ್ಗ-ನರಕ, ದೇವರ-ದೆವ್ವಗಳ ಕಲ್ಪನೆಗಳು ಹೊಂದಿದವರು ಆಗಿದ್ದಾರೆ. ಉತ್ತಮ ಕಾರ್ಯಗಳನ್ನು ಮಾಡುವವರಿಗೆ ಸ್ವರ್ಗ ಖಂಡಿತವಾಗಿ ಸಿಗುತ್ತದೆ. ಕೆಟ್ಟದ್ದನ್ನು ಮಾಡಿದ್ದೇ ಆದರೆ ಅವನಿಗೆ ಸ್ವರ್ಗದ ಬದಲು ನರಕ ಸಿಗುವುದೆಂದು ಕಲ್ಪನೆ. ಸಿಕ್ಲಿಗರರು ಹೊಂದಿದ್ದಾರೆ. ದೈವತ್ವದ ಮೇಲೆ ಅಪಾರವಾದ ನಂಬಿಕೆಯನ್ನು ಹೊಂದಿದವರಾಗಿದ್ದಾರೆ.

ಶವಸಂಸ್ಕಾರ

ಬುಡಕಟ್ಟು ಜನಾಂಗಗಳ ಆಚರಣೆಗಳು ಬಹು ವೈವಿಧ್ಯಮಯವಾಗಿ ಕಂಡು ಬರುತ್ತವೆ. ಹೀಗಾಗಿ ಶವಸಂಸ್ಕಾರದಂತಹ ಕಾರ್ಯಗಳು ಎಲ್ಲಾ ಬುಡಕಟ್ಟುಗಳಲ್ಲಿ ಸಾಮಾನ್ಯವಾಗಿ ಕಂಡು ಬರುತ್ತವೆ. ಸಿಕ್ಲಿಗರು ತಮ್ಮ ಸಂಬಂಧ ಹೊಂದಿದ ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ಮಾಡುತ್ತಾರೆ. ಸಂಬಂಧಿಕರಿಗೆ ಶವಸಂಸ್ಕಾರಕ್ಕೆ ತಿಳಿಸುತ್ತಾರೆ. ತಮ್ಮ ಮೂಲಪ್ರಸಾರವನ್ನು ಮಾಡುತ್ತಾರೆ. ಎಲ್ಲಿಯೇ ಇರಲಿ ಅವರಿಗೆ ಸತ್ತ ಸುದ್ಧಿ ತಿಳಿಸುತ್ತಾರೆ. ಹತ್ತಿರವಿದ್ದ ಜನಸಮುದಾಯವು ಕೂಡಲೇ ಸೇರಿಕೊಳ್ಳುತ್ತಾರೆ. ದೂರವಿದ್ದರೂ ತಿಥಿ ಮಾಡುವುದರೊಳಗಾಗಿ ಬಂದು ಹೋಗುತ್ತಾರೆ. ಇಲ್ಲದಿದ್ದರೆ ಎಲ್ಲರು ಕೂಡಿಕೊಂಡ ಮೇಲೆ ಶವಸಂಸ್ಕಾರದ ಅಂತ್ಯಕ್ರಿಯೆಯಾಗುತ್ತದೆ.

ಶವವನ್ನು ತೊಳೆದು ನಂತರ ಪೂಜಿಸುತ್ತಾರೆ. ಮಲಗಿಸಿಬಿಡುತ್ತಾರೆ. ಮೆರವಣಿಗೆಯ ಮೂಲಕ ಸ್ಮಶಾನದ ವರೆಗೆ ತೆಗೆದುಕೊಂಡು ಹೋಗುವರು. ಹೊರ ಸ್ಮಶಾನದತನಕ ಹೊತ್ತುಕೊಂಡು ಹೋಗುತ್ತಾರೆ. ಕಟ್ಟಿಗೆಯನ್ನು ಹಾಕಿ ಅದರ ಮೇಲೆ ಮಲಗಿಸಿ ಸುಡುತ್ತಾರೆ. ಅದರ ಬೂದಿಯನ್ನು ಸಂಗ್ರಹಿಸಿಟ್ಟುಕೊಂಡು ಹತ್ತಿರದ ನದಿಯಲ್ಲಿ ಬಿಡುತ್ತಾರೆ.

ಸಿಕ್ಲಿಗರರು ಅಲೆಮಾರಿಗಳಾದ್ದರಿಂದ ತಾವು ಇದ್ದ ಸ್ಥಳದಲ್ಲಿ ನೆಲೆಯೂರಲು ಸ್ಥಳವೇ ಇಲ್ಲದಾಗ ಶವವನ್ನು ಸುಟ್ಟ ಸ್ಥಳದಲ್ಲಿ ಸಮಾಧಿ ಸ್ಮಾರಕ ರಚಿಸಲು ಪ್ರಯತ್ನಪಡುತ್ತಾರೆ. ಸತ್ತ ದಿನದಿಂದ ಮೂರನೆಯ ದಿನದಂದು ದಿನ ಮಾಡುವವರೆಗೂ ಸತ್ತವರ ಮನೆಯಲ್ಲಿ ಯಾವುದೇ ರೀತಿಯಲ್ಲಿ ಅಡುಗೆ ಮಾಡುವುದಿಲ್ಲ. ಕುಲಬಾಂಧವರು, ಓಣಿಯ ಹಿರಿಯರು ಸೇರಿ ಸಂತಾಪ ಸೂಚನಾಚರಣೆಗಳನ್ನು ಕ್ರಿಯಾವಿಧಿಗಳನ್ನು ಮಾಡುವರು.

ಹಬ್ಬ ಹರಿದಿನಗಳು

ಮಾನವಶಾಸ್ತ್ರ ಮತ್ತು ಸಮಾಜಶಾಸ್ತ್ರ ಮುಖಾಮುಖಿಯಾದ ಸಂಸ್ಕೃತಿಗಳು ಒಂದೇ ನಾಣ್ಯದ ಎರಡು ಮುಖಗಳು. ಇವುಗಳ ಕುರಿತು ಅಧ್ಯಯನ ಕೈಗೊಂಡಾಗ ಪ್ರಸ್ತುತ ದಿನಮಾನಗಳಲ್ಲಿ ಅತಿ ಉಪಯುಕ್ತವಾಗಿದೆ. ಧರ್ಮಗಳು ನಮ್ಮ ಭಾರತ ದೇಶದಲ್ಲಿ ಮಾನವ ಸಂಸ್ಕೃತಿಯ ಮೇಲೆ ದಬ್ಬಾಳಿಕೆಯನ್ನು ಮಾಡಿಕೊಂಡು ಬಂದಿವೆ. ಬುಡಕಟ್ಟು ಜನಾಂಗ ಅಲೆಮಾರಿತನ ಹೊಂದಿ ಗುಡ್ಡ, ಕಾಡು, ಬೆಟ್ಟಗಳಲ್ಲಿ ಅಲೆದಾಡುತ್ತಾ ಬಂದವು. ಅಲ್ಲಿ ಮಳೆ, ಗಾಳಿ, ಬೆಳಕು, ಬೆಂಕಿ, ಬಿಸಿಲು, ಸಿಡಿಲುಗಳು ಹಾಗೂ ಕ್ರೂರ ಪ್ರಾಣಿಗಳಿಂದ ಸಂರಕ್ಷಿಸಿಕೊಳ್ಳಬೇಕಾದ ಸಂದರ್ಭಗಳಲ್ಲಿ ಕಾಣದ ದೇವರಿಗೆ ಮೊರೆ ಹೋಗಲಿಕ್ಕೆ ಕಾರಣವಾದವು. ದೇವತಾರಾಧನೆ

ಧರ್ಮಗಳು ನೆಲೆಗೊಂಡು ತನ್ನ ತಾನು ಅಸ್ಥಿತ್ವ ಉಳಿಸಿಕೊಳ್ಳಲು ಪ್ರಯತ್ನಿಸಿದವು. ಹೀಗಾಗಿ ಯಾವಾಗ ಮನುಷ್ಯ ತನ್ನ ಮೂಲಸಂಸ್ಕೃತಿಯಲ್ಲಿ ಭಯ, ಭಕ್ತಿ ಹುಟ್ಟಿಕೊಂಡವೋ ಅಂದರೆ ಧರ್ಮವೂ ತಳವೂರಿತು ಇಂತಹ ಬುಡಕಟ್ಟು ಅಲೆಮಾರಿ ಜನಾಂಗಗಳ ಮೇಲೆ ಭದ್ರವಾದ ತಳಹದಿಯ ಬುನಾದಿಹಾಕಿದವು.

ಧಾರ್ಮಿಕ ಆಚರಣೆಗಳು ಬಹಳಷ್ಟು ವೇಗವಾಗಿ ಬರಹತ್ತಿದವು. ಸಮಾಜ ಧರ್ಮವನ್ನು ಒಪ್ಪಿಕೊಂಡಿದೆ. ಧರ್ಮವೂ ಸಮಾಜದ ನೆಲೆಯಲ್ಲಿ ನಿಂತಿರುವುದರಿಂದ ಭಿನ್ನವಾಗಿ ಕಾಣುತ್ತವೆ. ಬುಡಕಟ್ಟು ಜನಾಂಗಗಳು ತಮ್ಮ ಹಬ್ಬ-ಹರಿದಿನಗಳನ್ನು ತನ್ನದೇ ಆದ ದೇವತಾರಾಧನೆ ಮೂಲಕವೂ ತನ್ನದೇಯಾದ ಹಬ್ಬ-ಆಚರಣೆ ಮೂಲಕ ಹೊರ ಬಂದಿರುವುದು ಕಾಣುತ್ತೇವೆ. ಬುಡಕಟ್ಟು ಅಲೆಮಾರಿ ಸಮುದಾಯಗಳಾಗಿದ್ದರೂ ಅವರು ಎಲ್ಲೇ ಇರಲಿ ತಮ್ಮ ಮೂಲ ನಿಯಮಗಳನ್ನು ಬಿಟ್ಟು ಕೊಡುವುದಿಲ್ಲ. ಕರ್ನಾಟಕದಲ್ಲಿ ಸಿಕ್ಲಿಗರ ಅಲೆಮಾರಿ ಜನಾಂಗವು ೧,೮೭೩ ಜನಸಂಖ್ಯೆ ಹೊಂದಿದ್ದರೆ ಅವರಿಂದೂ ಹೇಳಹೆಸರಿಲ್ಲದಂತೆ ಯಾವುದೇ ಮೂಲೆಯಲ್ಲಿ ತಮ್ಮ ಜೀವನವನ್ನು ಸಾಗಿಸುತ್ತಲಿದ್ದಾರೆ. ಸಿಕ್ಲಿಗರು ಪಂಜಾಬದ ಮೂಲನೆಲೆಗಳಿಂದ ಹೊರಬಂದರೂ ಕೂಡಾ ಸಿಖ್ಖರ ಸಂಪ್ರದಾಯ ಆಚರಣೆಗಳನ್ನು ಯಥಾವತ್ತಾಗಿ ಆಚರಣೆಗೆ ತರುತ್ತಾರೆ.

ಧಾರ್ಮಿಕ ಆಚರಣೆಗಳ ಸಂದರ್ಭಗಳಲ್ಲಿ ಸಿಖ್‌ರು ಆಧರಿಸಿಕೊಂಡು ಬರುವ ಮಾದರಿಯನ್ನು ಅನುಸರಿಸಿದ್ದಾರೆ. ಸಿಖ್‌ರಂತೆ ಗುರುದ್ವಾರಕ್ಕೆ ಹೋಗುತ್ತಾರೆ. ಅಲ್ಲಿಯೇ ಎಲ್ಲರೂ ಕೂಡಿಕೊಳ್ಳುವ ಒಂದು ಸ್ಥಳ. ತಾವು ವರ್ಷದಲ್ಲಿ ಒಂದು ಬಾರಿ ಅಲ್ಲಿ ಕೂಡಿಕೊಂಡು ತಮ್ಮ ಜೀವನದಲ್ಲಿ ಆದ ಘಟನೆಗಳನ್ನು ತಮ್ಮೊಳಗಡೆಯಾದ ಸಮಸ್ಯೆ ಸ್ಥಿತಿ-ಗತಿಗಳನ್ನು ಕುರಿತು ಸಮಗ್ರವಾದ ವಿವೇಚನೆಗೊಳಪಡಿಸುತ್ತಾರೆ. ತಮ್ಮ ಕುಟುಂಬದ ಸದಸ್ಯರ ಆರೋಗ್ಯ-ಯೋಗಕ್ಷೇಮ ಸಮಾಚಾರದ ಚಿಂತನೆಗಳನ್ನು ಹೊರಹಾಕುವ ಕಾರ್ಯ ಇಲ್ಲಿ ನಡೆದಿದೆ. ಬುಡಕಟ್ಟು ಸಮುದಾಯವು ಅಲೆಮಾರಿತನವಿರುವ ಬೇರೆ ಬೇರೆ ಪ್ರದೇಶ ಪ್ರಾಂತಗಳಿಗೆ ಹೋದರೂ ಅಲ್ಲಿಯೇ ಕೂಡುವ ಕೂಡಿಕೊಳ್ಳುವ ವಿನಿಮಯದ ಕಾರ್ಯವನ್ನು ಹಮ್ಮಿಕೊಳ್ಳುತ್ತಾರೆ. ಹೀಗಾಗಿಯೇ ಸಿಖ್‌ಸಮುದಾಯವು ಹಲವು ರೂಪರೇಷೆಗಳನ್ನು ರೂಪಿಸಿಕೊಂಡು ತನ್ನ ಅಂತಃ ಸತ್ವದ ಜಾಗೃತಿಯನ್ನುಂಟು ಮಾಡುತ್ತಾರೆ. ಬುಡಕಟ್ಟು ಜನಾಂಗವು ಸಾಮಾನ್ಯವಾಗಿ ಎಲ್ಲಾ ಹಿಂದೂ ಧರ್ಮದವರು ಆಚರಿಸುವ ಹಾಗೂ ಆಚರಿಸಿಕೊಂಡು ಬರುವ ಎಲ್ಲಾ ಹಬ್ಬ ಹರಿದಿನಗಳಲ್ಲಿ ಪಾಲ್ಗೊಂಡು ತಾವು ಅದರೊಳಗೆ ಒಂದಾಗಿ ಹೋಗುತ್ತಾರೆ. ಆದರೆ ಸಿಕ್ಲಿಗರ ಬುಡಕಟ್ಟು ಜನಾಂಗ

ಮಾತ್ರ ಯಾವುದೇ ಹಬ್ಬ-ಹರಿದಿನಗಳನ್ನು ಖಾಯಂ ಆಗಿ ಆಚರಿಸಿಕೊಂಡು ಬರುತ್ತಿಲ್ಲ. ಇವರಿಗೆ ಮುಖ್ಯವಾಗಿ ಕಾಣುವುದು ಗುರುನಾನಕ್ ಅವರ ಜಯಂತಿ. ಹೊರತು ಬೇರಾವುದಲ್ಲ ಎನ್ನುವುದು ಸ್ಪಷ್ಟವಾಗಿ ತಿಳಿದು ಬರುತ್ತದೆ. ಆ ಕಾರಣಕ್ಕಾಗಿ ಈ ಧಾರ್ಮಿಕ ಆಚರಣೆಗಳ ಸಂದರ್ಭದಲ್ಲಿ ಸಿಕ್ಲಿಗರರು ಮಾತ್ರ ಸಿಖ್‌ರಿಗೂ ಯಾವುದೇ ರೀತಿಯ ವ್ಯತ್ಯಾಸಗಳಿರುವುದಿಲ್ಲ. ಅವರ ಹಾಗೇ ಇವರು ಸಂಪ್ರದಾಯ ಪ್ರಕಾರ ಕಬ್ಬಿಣದ ಕೆಲಸ ಕೈಗೊಂಡಿರುತ್ತಾರೆ ತಲೆ ಬೋಳಿಸಿ ಗಡ್ಡ, ಮೀಸೆ ತೆಗೆಸಿಕೊಂಡರೆ ಆ ಸಿಖ್ಖ್ ಧರ್ಮದಿಂದ ಅಂತವನನ್ನು ಹೊರಹಾಕಲಾಗುತ್ತದೆ. ಇಂತಹ ಕಟ್ಟುಪಾಡು ಅವರಲ್ಲಿದೆ. ಅಂತಹ ಧಾರ್ಮಿಕ ಕಟ್ಟುಪಾಡುಗಳನ್ನು ಕಾಪಾಡಿಕೊಂಡು ಬಂದಿದ್ದಾರೆ.

ಧಾರ್ಮಿಕ ಅಧಿನಿಯಮವನ್ನು ಹೊಂದಿದಂತೆ ೫ 'ಕ' ಗಳನ್ನು ಹೊಂದಿದ್ದರೆ ಮಾತ್ರ ಆತ ಸಿಖ್ ಅಥವಾ ಸಿಕ್ಕಲಗಾರ್ ಆಗುತ್ತಾನೆ. ಇದರಲ್ಲಿ ಒಂದು ಇರದಿದ್ದರೂ ಸಿಖ್-ಸಿಕ್ಲಿಗರ ಆಗಿರುವ ಇಂತಹ ಧಾರ್ಮಿಕ ಕಟ್ಟೆಚ್ಚರವನ್ನು ಮೀರಬಾರದು. ೧೮ ಬುಡಕಟ್ಟಿನ ಮನೆತನಗಳ ಹೆಸರನ್ನು ಹೊಂದಿರಬೇಕು. ಗುರುಗೋವಿಂದ ಸಿಂಗ್, ಸಿಖ್ಖ್ ಸಮುದಾಯ ಸ್ಥಾಪಿಸಿದರು. ನಡೆದ ಕ್ರಾಂತಿ ಧರ್ಮ ಕ್ರಾಂತಿಯಲ್ಲಿ ಪಾಲ್ಗೊಂಡು ಯುದ್ದಕ್ಕೆ ಬೇಕಾದ ಕಬ್ಬಿಣದ ಆಯುಧಗಳನ್ನು ತಯಾರಿಸುವ ಗುಂಪು ಸಿಕ್ಕ ಸಿಕ್ಲಿಗರರಾಗಿದ್ದಾರೆ. ಇವರಿಗೆ ಹಲವು ದೇವರುಗಳೇ ಇಲ್ಲ. ಗುರುಗೋವಿಂದ ಸಿಂಗ್ ಒಬ್ಬನೇ ದೇವರಾಗಿದ್ದಾನೆ. ಧಾರ್ಮಿಕ ವಿಧಿಯ ಪ್ರಕಾರ ತಲೆಯಿಂದ ಪಾದದವರೆಗೆ ಬಳಸುವ ತೊಡುಗೆಯನ್ನು ಐದು 'ಕ' ಗಳಾಗಿರುತ್ತವೆ. ಈ ಐದು ಕ್ರಮೇಣವಾಗಿ ಇರಬೇಕು ಒಂದು ಇರದಿದ್ದರೂ ಅವರು ಸಿಕ್ಕಲಗಾರರಾಗುವುದಿಲ್ಲ. ಇಲ್ಲಿ ಕಚ್ಚೆ ಹೆಣ್ಣು-ಗಂಡಿಗೂ ಕೂಡಾ ಅನ್ವಯವಾಗುತ್ತದೆ. ಇದು ಧಾರ್ಮಿಕ ವಿಧಾನವಾಗಿದೆ.

ತನಗೆ ಸಂಬಂಧಿಸಿದ ಉಡುಗೆ ತೊಡಿಗೆಯಲ್ಲಿ ಧಾರ್ಮಿಕ ಕಟ್ಟಪ್ಪಣೆ ಪಾಲಿಸಬೇಕಾಗಿದೆ. ನೀಲಿ ಬಣ್ಣದ ವಸ್ತುಗಳನ್ನು ಬಳಸುತ್ತಾರೆ. ಹಸಿರು ಬಣ್ಣವನ್ನು ಇವರು ವಿರೋಧಿಸುವುದುಂಟು. ಏಕೆಂದರೆ ಹಸಿರು ಮುಸ್ಲಿಂರ ಸಂಕೇತ. ಇವರು ಮುಸ್ಲಿಂರ ದಾಳಿಗಳಿಂದಾಗಿ ತಮಗೆ ನೆಲೆಯೂರಲು ಸ್ಥಾನ ದೊರಕಿಲ್ಲ. ಹೀಗಾಗಿ ಅಲೆಮಾರಿಗಳೆನಿಸಿದ್ದೇವೆಂಬ ಕಾರಣಕ್ಕಾಗಿ ಮುಸ್ಲಿಂರನ್ನು ವಿರೋಧಿಸುತ್ತಾರೆ. ಹಬ್ಬದ ವಿಶೇಷವಾದ ವಾತಾವರಣ ಸಿಖ್ಖ್‌ರಲ್ಲಿ ಕಾಣಸಿಗುತ್ತವೆ. 'ಲಂಗಾರ್' ಎನ್ನುವ ವಿಶೇಷವಾದ ಹಬ್ಬ ಗುರುದ್ವಾರದಲ್ಲಿ ಆಚರಿಸುತ್ತಾರೆ. ಜಾತಿ ಬೇಧವಿಲ್ಲದೇ ಎಲ್ಲರೂ ಕೂಡಿಕೊಂಡು ಆಚರಿಸುತ್ತಾರೆ. ಬಡವ-ಶ್ರೀಮಂತನೆಂಬ, ವರ್ಗ-ವರ್ಣ, ಲಿಂಗ, ಈ ಮೂರು ಹಂತಗಳನ್ನು ಮೀರಿಕೊಂಡು ಲಂಗಾರ್‌ನ್ನು ಆಚರಿಸುತ್ತಾರೆ. ಲಂಗಾರನ್ನು ಆಚರಿಸುವಾಗ ಸಿಖ್ಖ್‌ರು

ಹಾಗೂ ಸಿಕ್ಲಿಗರು ಎಂಬ ಬೇದಭಾವವಿಲ್ಲದೇ ಒಂದೇ ಎಂಬ ಗಮನಕ್ಕೆ ಕಂಡು ಬರುತ್ತದೆ. ಅವರೆಲ್ಲರೂ ಕೂಡಿ ವಿವಿಧ ಸ್ತರಗಳಲ್ಲಿ ಆಚರಿಸದೇ ಸಮಾನವಾಗಿ ಆಚರಿಸಿಕೊಂಡು ಬರುತ್ತಾರೆ.ಹೆಂಗಸರು ಚೂಡಿದಾರ ಉಡುತ್ತಾರೆ. ಗಂಡಸು ಸಾಮಾನ್ಯವಾದ ಬಟ್ಟೆಗಳನ್ನು ಧರಿಸುವ ಸ್ಥಿತಿವಂತರಿದ್ದಾರೆ. ಸಫಾರಿ ಬಟ್ಟೆವುಳ್ಳವರು ಸಾಮಾನ್ಯವಾಗಿ ಪೈಜಾಮು ನಿಲುವಂಗಿಯನ್ನು ಬಡವರು ಉಡುತ್ತಾರೆ.

ಸಾಂಪ್ರದಾಯಿಕ ವಿಧಿಗಳನ್ನು ಆಚರಿಸಿಕೊಂಡು ಬರುವ ಸಮುದಾಯಗಳು ಸೇರಿಕೊಂಡರೆ ಧಾರ್ಮಿಕ ಕ್ರೀಯಾವಿಧಿಯನ್ನು ಸಮುದಾಯದ ಹಿರಿಯರು ನಡೆಸಿಕೊಂಡು ಬರುವ ವಿಧಾನ ಸಿಕ್ಲಿಗರ ಜನಾಂಗದಲ್ಲಿದೆ. ದೈವ ಸಂಬಂಧಿಗಳಿಗೂ ಉಡಿಗೆ-ತೊಡಿಗೆ ತೊಡಿಸುವಾಗಲೂ ಸಿಕ್ಲಿಗರಲ್ಲಿ ಕಬ್ಬಿಣದ ವಸ್ತುಗಳನ್ನು ಬಳಸುತ್ತಾರೆ. ಧಾರ್ಮಿಕತೆಗೆ ಸಂಬಂಧಿಸಿದ ಖಡ್ಗ ಮತ್ತು ಕಂಗನ್ ಎಂಬ ಎರಡು ವಸ್ತುಗಳ ಉಪಕರಣಗಳನ್ನು ಹೊಂದಿರುತ್ತಾರೆ. ಮದುವೆಯ ಸಂದರ್ಭದಲ್ಲಿ ಧಾರ್ಮಿಕ ಆಚರಣೆಯ ನಿಮಿತ್ತ ಖಡ್ಗ ಮತ್ತು ತಲವಾರನ್ನು ಸಿಕ್ಲಿಗರ ಮದುವೆಯ ಹೊತ್ತಿನಲ್ಲಿ ಆಚರಣೆಗಾಗಿ ಕಲಾಪ್ರದರ್ಶನ ಮಾಡುವ ಪದ್ಧತಿ ಇಂದಿಗೂ ಮುಂದುವರೆಸಿಕೊಂಡು ಬಂದಿದ್ದಾರೆ.

ಧಾರ್ಮಿಕ ಆಚರಣೆಗಳ ಹೊತ್ತಿನಲ್ಲಿ ಜಾತ್ರೆಗಳಲ್ಲಿ ಮತ್ತಿತರ ಧಾರ್ಮಿಕ ಕಾರ್ಯದಲ್ಲಿ ನೃತ್ಯ ಕಂಡು ಬರುತ್ತದೆ. ಆಚರಣಾ ಸಂಬಂಧಿ ನೃತ್ಯಗಳಾಗಿವೆ. ಧಾರ್ಮಿಕ ಆಚರಣೆಯ ಹೊತ್ತಿನಲ್ಲಿ ಲಂಗಾರ್ ಎಂಬ ಊಟವನ್ನು ಹಾಕಿಸುತ್ತಾರೆ. ಎಲ್ಲಾ ಸಿಖ್ಖ್ ಹಾಗೂ ಸಿಕ್ಲಿಗರ ಕೂಡಿಯೇ ಇದನ್ನು ಮಾಡುತ್ತಾರೆ. ಇಲ್ಲಯೇ ಯಾವ ತಾರತಮ್ಯಗಳು ಕಾಣಸಿಗುವುದಿಲ್ಲ. ಇವು ಕೂಡಿ ಮಾಡುವಂತಹ ಉತ್ಸವ ಆದರೆ ಮದುವೆ ಮುಂಜಿಗಳಲ್ಲಿ ಸಿಖ್ಖರು-ಸಿಕ್ಲಿಗರ ಹತ್ತಿರ ಬರುವುದಿಲ್ಲ. ಸಿಕ್ಲಿಗರ ಬುಡಕಟ್ಟು ಸಮುದಾಯವು ಸವಶಕ್ಸ ದೈವಗಳು ಸರ್ವಚೇತನವಾದ ದೇವತೆಗಳನ್ನು ಹೊಂದಿದ್ದಾರೆ. ಹೆಣ್ಣು ದೇವತೆಯ ಆರಾಧನೆಯನ್ನು ಕೈಗೊಂಡಿದ್ದಾರೆ. ಧರ್ಮ ದೈವಗಳಾದ ಗುರುನಾನಕ್ ಹಾಗೂ ಗುರುಗೋವಿಂದ ಸಿಂಗ್‌ರನ್ನು ಮಾತ್ರ ಮನದಾಳದಲ್ಲಿ ಇಟ್ಟುಕೊಂಡಿದ್ದಾರೆ. ಅಲ್ಲಿಯೇ ಒಂದು ಟಿಣ್ ಜಾಗದಲ್ಲಿ ಅಥವಾ ಜೋಪಡಿಯಲ್ಲಿ ಗುರುದ್ವಾರ ಹಾಕಿಕೊಂಡು ತಮ್ಮ ಗ್ರಾಮದೈವವನ್ನು ಪೂಜಿಸುತ್ತಾರೆ. ಕುಲ ಮನೆದೈವಗಳು ಕೂಡಾ ಗುರುನಾನಕ್, ಗುರುಗೋವಿಂದ ಸಿಂಗ್ ಸಿಕ್ಲಿಗರ ಸಾಂಸ್ಕೃತಿಕ ವೀರರನ್ನು ಸಿಕ್ಲಿಗರ ಸಮುದಾಯದ ದೈವವನ್ನಾಗಿಸಿಕೊಂಡಿದ್ದಾರೆ. ಪ್ರತಿಯೊಂದು ದೈವಾರಾಧನೆ ನೋಡಲು ಅಸಾಧ್ಯವೆಂಬುದು ಅರಿತುಕೊಂಡ ಸಿಕ್ಲಿಗರ ಬುಡಕಟ್ಟು ಜನಾಂಗ ಕುಲ ದೈವ ಮನೆತನ ದೈವವನ್ನು ಒಂದೇಯಾಗಿಸಿಕೊಂಡದ್ದು ಮಹತ್ವದ ಧಾರ್ಮಿಕ ಬದ್ಧತೆಯಾಗಿದೆ.

ಆಚರಣೆಗಳು

ಸಿಕ್ಲಿಗರ ಬುಡಕಟ್ಟು ಜನಾಂಗ ಅಲೆಮಾರಿ ಸಮುದಾಯವನ್ನು ಹೊಂದಿದೆ. ಆ ಮೂಲಕ ತಾವು ನಡೆದಾಡುವ ತಾವು ಕುಳಿತಿರುವ ಸ್ಥಳದಲ್ಲಿಯೇ ಗುರುನಾನಕ್ ಗುರು ಗೋವಿಂದಸಿಂಗರನ್ನು ನೆನೆಯದೆ ಇರಲಾರರು. ಮೂಲ ಗುರುವೆಂದು ಭಾವಿಸಿಕೊಂಡಿರುತ್ತಾರೆ. ಹಾಗೇ ಗೌರವವನ್ನು ನೀಡುತ್ತಾರೆ.

ಇದರೊಂದಿಗೆ ಹಿಂದೂ ಹಬ್ಬಹರಿದಿನ ಆಚರಣೆಗಳನ್ನು ಕೈಗೊಳ್ಳಲು ಪ್ರಾದೇಶಿಕವಾದ ಪ್ರಭಾವ ಇವರ ಮೇಲಾಗಿದೆ. ವಿಶೇಷವಾಗಿ ದೇವತೆಯಾದ ಭವಾನಿಯನ್ನು ದಸರಾ ಹಬ್ಬದ ನವಮಿಯೆಂದು ಉಪವಾಸ ಮಾಡಿ ಆಚರಣೆ ಕೈಗೊಳ್ಳುವರು. ಭವಾನಿ ಜಾತ್ರೆ ಅಂಬಾಭವಾನಿಗೆ ತುಳಜಾಪುರದತನಕ ಬರಿಗಾಲಿನಿಂದ ನಡೆದುಕೊಂಡು ಹೋಗಿ ಪ್ರದಕ್ಷಿಣೆ ಹಾಕಿ ದೈವಾರಾಧನೆ ಕೈಗೊಂಡಿದ್ದಾರೆ. ಇದಕ್ಕೆ ಪ್ರಾದೇಶಿಕವಾಗಿ ಸಿಕ್ಲಿಗರ ಅವರು ಅನಾದಿಕಾಲದಿಂದಲೂ ಇಲ್ಲಿಯೇ ಸುತ್ತಮುತ್ತ ಅಲೆಮಾರಿ ಜೀವನ ಕೈಗೊಂಡಿದ್ದರಿಂದ ಇಂತಹ ಹಬ್ಬ ಜಾತ್ರೆ ಆಚರಿಸಲು ಸೂಕ್ತ ದಿನದಂದು ಆಚರಿಸಿಕೊಳ್ಳುತ್ತಾರೆ.

ಪುಣ್ಯಕ್ಷೇತ್ರಗಳು

ಬುಡಕಟ್ಟು ಜನಾಂಗವು ತಮ್ಮಲ್ಲಿಯೇ ನಿಸರ್ಗದ ಹಲವಾರು ದೇವಾನುದೇವತೆಗಳನ್ನು ಕಾಡು-ಬೆಟ್ಟ, ಗಿರಿ-ಶಿಖರಗಳಲ್ಲಿ ಕಂಡವರು ನಾಡಿನಲ್ಲಿಯೇ ಬಂದು ನೆಲೆಯೂರಿದ್ದರಿಂದ ತಮಗೆ ಅನುಕೂಲವಾದ ಯತ್ರಾಸ್ಥಳ ಪುಣ್ಯಕ್ಷೇತ್ರ ದೈವದ ಪವಾಡಗಳು ಹಾಗೂ ಪೂಜಾವಿಧಾನವನ್ನು ಅನುಸರಿಸಿಕೊಂಡು ಬರಲು ಪಂಜಾಬದ ಸಿಖ್‌ರಿಗೆ ಪವಿತ್ರವಾದಂತೆ ಈ ಸಿಕ್ಲಿಗರಿಗೂ ಪವಿತ್ರವಾದ ಪುಣ್ಯಕ್ಷೇತ್ರವಾಗಿಸಿಕೊಂಡಿದ್ದಾರೆ. ಮೊದಲ ಸ್ಥಾನವನ್ನು ಸಹ ಇವರಿಗೆ ನೀಡಿದ್ದಾರೆ. ನಾಂದೇಡ, ಬೀದರ್, ತುಳಜಾಪುರ, ಕೊಲ್ಲಾಪುರ ಕ್ಷೇತ್ರಗಳಲ್ಲಿ ದರ್ಶನ ನೀಡುತ್ತಾರೆ.

ನಾಂದೇಡದಲ್ಲಿ ಗುರುಗೋವಿಂದ ಸಿಂಗ್‌ರ ಸಮಾಧಿಸ್ಥಳ ಇರುವುದರಿಂದ ಸಿಕ್ಲಿಗರ ಅವರಿಗೆ ನಾದೇಂಡ ಪ್ರಮುಖ ಹತ್ತಿರದ ಪುಣ್ಯಕ್ಷೇತ್ರವಾಗಿದೆ. ಬೀದರ್ ಗುರುನಾನಕ್ ಜರಿಯಲ್ಲಿ ಹಾಗೂ ಗುರುದ್ವಾರದಲ್ಲಿ ಲಂಗಾರ್ ಆಚರಣೆ ಗುರು ಗ್ರಂಥಸಾಹೇಬದ ಪಠಣವನ್ನು ಯಾವ ಕಾಲಕ್ಕೂ ಬಿಡದೇ ಪಠಣ ಮಾಡುತ್ತಾರೆ. ಗುರುನಾನಕ್ ಜಯಂತಿ ಗೋಕುಲಾಷ್ಟಮಿ, ದಸರಾ, ಜಾತ್ರೆ ಉತ್ಸವಗಳಲ್ಲಿ ಪಾಲ್ಗೊಳ್ಳುವರು.

ದೈವಸಂಬಂಧಿ ಪವಿತ್ರ ದಿನ

ಗೋಕುಲಾಷ್ಟಮಿ ದಿನ ಸಿಕ್ಲಿಗರ ಹೆಣ್ಣುಮಕ್ಕಳು ಒಂದು ರಾತ್ರಿ ಒಂದು ಹಗಲು ಉಪವಾಸವಿದ್ದು ಶ್ರೀಕೃಷ್ಣದೇವರಿಗೆ ನೈವೇದ್ಯ ಹಿಡಿಯುವರು. ಹಾವಿನ ಹುತ್ತಿಗೆ ಹಾಲನ್ನು ಹಾಕುತ್ತಾರೆ. ಇದು ಹೆಣ್ಣುಮಕ್ಕಳಾದ ಸಿಕ್ಲಿಗರ ವಿಶೇಷವಾದ ಹಬ್ಬವೆಂದರೆ, ತಪ್ಪುಗಳು ಇದಕ್ಕೆ ಸಿಕ್ಲಿಗರರು ನವಮಿ ಎಂದು ಕರೆಯುತ್ತಾರೆ.

ಬಲಿ ಆಚರಣೆ

ಬುಡಕಟ್ಟು ಸಮುದಾಯಗಳು ಬಲಿ ಆಚರಣೆ ಕೊಡುವುದರಲ್ಲಿ ಸಿದ್ಧಹಸ್ತರು. ಯುಗಾದಿಯ ಮಾರನೇ ದಿನ ಅಂದರೆ ಯುಗಾದಿಯಾಗಿ ಮೊದಲು ಬರುವ ಸೋಮವಾರದಂದು ಹಂದಿ ಬಲಿ ಕೊಟ್ಟು ಪೂಜೆ ಮಾಡುತ್ತಾರೆ. ಇಲ್ಲಿ ಸಿಕ್ಲಿಗರ ಬುಡಕಟ್ಟು ಸಮುದಾಯವು ಈ ಪೂಜೆಗಾಗಿ ಕುರಿಬಲಿ ನೈವೇಧ್ಯವನ್ನು ಕೊಡುತ್ತಾರೆ. ಇದರಲ್ಲಿ ಅನ್ನ, ಚೆನ್ನಂಗಿ ಬೇಳೆ, ಹಳದಿ (ಹರಿಶಿಣ) ಗೋಧಿ ಬಳಸಿದ ಊಟವನ್ನು ಇವರು ಧಾರ್ಮಿಕವಾಗಿ ನಿಷೇಧಿಸುತ್ತಾರೆ. ಆದರೆ ಬಲಿಯನ್ನು ಕೊಡುವಾಗ ಮುಂದೆ ನಿಂತುಕೊಡುವ ಪದ್ಧತಿ ವಿಶೇಷವಾಗಿದೆ.

ಸಿಕ್ಲಿಗರ ಬುಡಕಟ್ಟು ಸಮುದಾಯವು ಎಲ್ಲಾ ಬುಡಕಟ್ಟುಗಳ ಹಾಗೇ ಹಬ್ಬ ಆಚರಣೆಗಳನ್ನು ನಿರಂತರವಾಗಿ ನಡೆಸಿಕೊಂಡು ಬಂದಿವೆ. ಮೂಲತಃ ಗುರುನಾನಕ್ ಹಾಗೂ ಗುರುಗೋವಿಂದಸಿಂಗ್‌ರನ್ನು ಹೊರತುಪಡಿಸಿದರೆ ಮತ್ತ್ಯಾವುದೇ ಹಬ್ಬಗಳನ್ನು ಆಚರಿಸುವುದಿಲ್ಲ. ಪ್ರಾದೇಶಿಕವಾಗಿ ಹಾಗೂ ವರ್ಷಾಚರಣೆಯಲ್ಲಿ ಬರುವ ಅನೇಕ ಕೂಡಿ ಆಡುವ ಹಿಂದೂಗಳ ಹಬ್ಬದಲ್ಲಿ ಪಾಲ್ಗೊಳ್ಳುತ್ತಾರೆ. ಇದು ಸಿಕ್ಲಿಗರ ಜನಾಂಗದ ಭಾವೈಕ್ಯತೆ ಹಾಗೂ ಸರ್ವಧರ್ಮ ಸಮಾನತೆಗೆ ನಾಂದಿ ಹಾಡಿದೆ. ದಸರಾ, ದೀಪಾವಳಿ, ರಕ್ಷಾಬಂಧನ, ಗೋಕುಲಾಷ್ಟಮಿ, ನವರಾತ್ರಿ, ಹೋಳಿಹಬ್ಬ, ನಾಗರ ಪಂಚಮಿ, ಮುಂತಾದ ಹಬ್ಬಗಳನ್ನು ಆಚರಿಸುವ ಮೂಲಕ ಮಾಡುತ್ತಾರೆ. ಇತರ ಹಬ್ಬಗಳ ಮೇಲೆ ಹಿಂದೂಗಳ ಪ್ರಭಾವದಿಂದಲೇ ಮಾಡುತ್ತಾರೆಂಬುದು ಸತ್ಯವಾದ ಮಾತಾಗಿದೆ.

ಸಿಕ್ಲಿಗರ ಬುಡಕಟ್ಟು ಜನಾಂಗವು ವೈದಿಕ ಸಂಪ್ರದಾಯದ ಮೂಲಕ ಆಚರಣೆಗೆ ತಂದಿದ್ದಾರೆ. ಸಿಕ್ಲಿಗರ ಸಮುದಾಯವು ಕರ್ನಾಟಕದಲ್ಲಿ ಅಲ್ಪಸಂಖ್ಯಾತರಾಗಿದ್ದು ದೈವಾರಾಧನೆ ಹಬ್ಬ-ಆಚರಣೆಗಳ ಮೂಲಕ ಸಾಂಸ್ಕೃತಿಕ ಆಯಾಮ ತಂದು ಕೊಟ್ಟಿದ್ದಾರೆ. ಸಮಾಜಶಾಸ್ತ್ರ ಹಾಗೂ ಮಾನವಶಾಸ್ತ್ರದ

ಹಿನ್ನೆಲೆಯಲ್ಲಿ ಹಬ್ಬ-ಹರಿದಿನ ಹಾಗೂ ಧಾರ್ಮಿಕತೆಗೆ ಬಹು ಬೇಡಿಕೆ ಹಾಗೂ ವಿಶೇಷವಾದ ಸ್ಥಾನಮಾನವನ್ನು ಕಲ್ಪಿಸಲಾಗಿದೆ. ಹೀಗಾಗಿ ಸಿಕ್ಲಿಗರ ಸಮುದಾಯವು ಇವರಿಗೆ ಧಾರ್ಮಿಕ ಹಬ್ಬ-ಹರಿದಿನ ಆಚರಣೆಗಳ ಮೂಲಕ ಧಾರ್ಮಿಕ ಐಕ್ಯತೆ ಹಾಗೂ ಸರ್ವಧರ್ಮತೆ-ಭಾವೈಕ್ಯತೆಯನ್ನು ಎತ್ತಿ ತೋರಿಸುವ ಕಾರ್ಯ ಮಾಡುತ್ತಿವೆ.

ಅಧ್ಯಾಯ: ಆರು

ಆರ್ಥಿಕ ಸ್ಥಿತಿ-ಗತಿ

ಅಧ್ಯಾಯ: ಆರು

ಆರ್ಥಿಕ ಸ್ಥಿತಿ-ಗತಿ

ಅಲೆಮಾರಿಗಳು ಜೀವನದಲ್ಲಿ ಅನೇಕ ರೀತಿಯ ಸಮಸ್ಯೆಗಳು ಸಂಕಷ್ಟಗಳನ್ನು ಅನುಭವಿಸಿಕೊಂಡು ಬಂದಿವೆ. ಬುಡಕಟ್ಟು ಅಲೆಮಾರಿ ಜನಾಂಗಗಳು ಇಂದು ಸಂಕಷ್ಟದಲ್ಲಿ ಜೀವನ ನಿರ್ವಹಣೆ ಮಾಡುತ್ತಿದ್ದಾರೆ. ಇಂತಹ ಸ್ಥಿತಿಯಲ್ಲಿ ಆರ್ಥಿಕ ಸ್ಥಿತ್ಯಂತರಗಳು ಹಲವು ಬಗೆಯಾಗಿ ಹರಡಿಕೊಂಡು ಬಂದಿವೆ. ಅವರ ವೃತ್ತಿ ಕುಲಕಸಬುಗಳ ಹಿನ್ನೆಲೆಯಲ್ಲಿ ನಡೆದುಕೊಂಡು ಬಂದ ಬದಲಾವಣೆಗಳು ಬಹು ವ್ಯವಸ್ಥಿತವಾಗಿ ನೆಲೆನಿಂತುಕೊಂಡಿವೆ. ಭಾರತದೇಶವೆಂಬುದೇ ಶ್ರೇಣಿಕೃತವಾದ ವ್ಯವಸ್ಥೆಯ ನಡುವೆ ಸಾಮಾಜಿಕ ಬದುಕು ಹೇಗಿರಬೇಕು ಇದನ್ನು ನಿರ್ವಹಿಸಿಕೊಂಡು ನಡೆಸಿಕೊಂಡು ಬರಲು ಇವರಿಗೇನು ಸಾಧ್ಯವಾಗುತ್ತಿತ್ತಾ ಅಥವಾ ಅವುಗಳಂತಹ ಬಿಕ್ಕಟ್ಟಿನ ಸಂದರ್ಭದಲ್ಲಿ ಶ್ರೇಣಿಕೃತವಾದ ಸಮಾಜವನ್ನು ನಿರೂಪಿಸಿಕೊಂಡು ಬರಲು ಸಾಧ್ಯವಾಗುತ್ತದೆಯೇ ಎಂಬ ಹಲವಾರು ಪ್ರಶ್ನೆಗಳು ಎದುರಾಗುತ್ತವೆ. ಇಂತಹ ವರ್ಣಾಶ್ರಮ ಪದ್ಧತಿಯಲ್ಲಿ ಬುಡಕಟ್ಟು ಸಮಾಜಗಳ ಆರ್ಥಿಕ ಸ್ಥಿತಿ ಹೇಗೆ ನೋಡಬೇಕೆಂಬುದು ಜಟಿಲವಾದ ಪ್ರಶ್ನೆಯಾಗಿ ನಮಗೆ ಕಾಡುತ್ತದೆ. ಜಾಗತೀಕರಣ, ಖಾಸಗೀಕರಣ, ದಾರೀಕರಣ, ದ್ಯೋಗೀಕರಣ ಮುಂತಾದವುಗಳಿಂದಾಗಿ ಗ್ರಾಮೀಣ ಪ್ರದೇಶದ ಉತ್ಪನ್ನಗಳಾದ ಗುಡಿ ಕೈಗಾರಿಕೆ ಮತ್ತು

ಗೃಹಕೈಗಾರಿಕೆಗಳ ಮೇಲೆ ಹೆಚ್ಚಿನ ಪರಿಣಾಮ ಬೀರುತ್ತಿದೆ. ಹಾಗಾಗಿ ಗೃಹ ಕೈಗಾರಿಕೆಗಳ ಉತ್ಪನ್ನವು ಕೂಡ ಯಾರೂ ಖರೀದಿಸದ ಸ್ಥಿತಿಗೆ ಬಂದು ಮುಟ್ಟಿದ್ದಾರೆ. ದೇಸಿಯತೆ ನೆಲಕಚ್ಚಿದೆ. ಆ ಕಾರಣಕ್ಕಾಗಿ ಸಿಕ್ಲಿಗರ ಗೃಹ ಬಳಕೆಯ ವಸ್ತುಗಳಿಗೆ ಬೆಲೆ ಇಲ್ಲದಂತಾಗಿದೆ. ಅವರ ಬದುಕು ಮುಂದೇನು ? ಎಂಬ ಪ್ರಶ್ನೆಯಿಂದಲೆ ಆರಂಭವಾಗುತ್ತದೆ. ಇಂದು ಕ್ಷಿಪ್ರ ಗತಿಯಲ್ಲಿ ಬದಲಾಗುತ್ತಿರುವ ಇಂದಿನ ಸಮಾಜದ ಸ್ಥಿತಿ ಬುಡಕಟ್ಟಿನ ಜನಾಂಗಗಳಿಗೆ ನರಕವಾದ ದೃಶ್ಯ ಕಂಡದ್ದು ಶಾಪವಾಗಿದೆ.

ಇಲ್ಲಿಯ ಜನಾಂಗ ದುರ್ಭರವಾದ ಹಂತವನ್ನು ಹೊಂದಿದೆ. ತಾವು ಕೈಗೊಳ್ಳುವ ಕಲೆ ವೃತ್ತಿಯನ್ನಾಗಿ ನಡೆಸಿಕೊಂಡು ತಮ್ಮ ಜೀವನವನ್ನು ತ್ಯಾಗ ಮಾಡಿದ್ದಾರೆ. ಧಾರ್ಮಿಕ ಸ್ಥಿತಿ–ಗತಿ ತಮ್ಮನ್ನು ಸಮರ್ಥಿಸಿಕೊಂಡ ಕಲಾವಿದ ಬುಡಕಟ್ಟು ಜನಾಂಗಗಳನ್ನು ನಿಜವಾದ ಭಕ್ತರೆಂದು ಕರೆಯುವಲ್ಲಿ ಯಾರು ಮುಂದೆ ಬರುವುದಿಲ್ಲ. ಕೆಲವೊಂದು ಬುಡಕಟ್ಟುಗಳು ಕಲೆಗಳ ಮೂಲಕ ಭಿಕ್ಷೆ ಎತ್ತುವ ಕಾರ್ಯದಲ್ಲಿ ತೊಡಗಿದ್ದಾರೆ. ಕೆಲವು ಬುಡಕಟ್ಟು ಧಾರ್ಮಿಕ ವಿಧಿ–ವಿಧಾನಗಳ ಮೂಲಕ ತಮ್ಮ ಹೊಟ್ಟೆ ತುಂಬಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಸರ್ಕಾರವೂ ಕೆಲವೊಂದು ಬುಡಕಟ್ಟು ಸಮುದಾಯಗಳನ್ನು ಗುರುತಿಸಿದ್ದಾರೆ. ಕೆಲವೊಂದು ಜನತಾ ಆಶ್ರಯ ಮನೆಗಳನ್ನು ಕಟ್ಟಿಕೊಟ್ಟು ಹೊಟ್ಟೆಪಾಡಿನ ಜೀವನ ಕಥೆಯನ್ನು ನಿರ್ವಹಿಸಿಕೊಂಡು ಊರೂರು ತಿರುಗಿ ಭಿಕ್ಷೆ ಎತ್ತಿ ಜೀವನ ನಿರ್ವಹಿಸುವ ಕಾಲದಲ್ಲಿದ್ದಾರೆ. ಇವರ ಮಹಿಳೆಯರಂತೂ ಇವರ ಹಾಗೇ ಭಿಕ್ಷೆ ಎತ್ತಿದರೂ ಕೂಡಾ ಬೇರೆ ಬೇರೆ ವೃತ್ತಿಯನ್ನು ಕೈಗೊಂಡು ತಮ್ಮ ಕೈಲಾದ ವಸ್ತುಗಳನ್ನು ಮಾರಾಟ ಮಾಡುವುದರ ಮೂಲಕ ದುಡಿಮೆ ಮಾಡುತ್ತಿದ್ದಾರೆ. ಯಾವುದೇ ಊರು ತೆಗೆದುಕೊಂಡರೂ ಎಲ್ಲಿಯೇ ಹೋಗಲಿ ಅಲ್ಲಿ ಒಂದಿಲ್ಲೊಂದು ಇಂತಹ ವಸ್ತುಗಳ ಮಾರಾಟ ಪ್ರಯೋಗದಲ್ಲಿ ಕೈಗೊಂಡಿರುವುದನ್ನು ಕಾಣುತ್ತೇವೆ. ಆಧುನಿಕತೆಯ ಪ್ರಭಾವದಿಂದಾಗಿ ನಮ್ಮ ಸಂಸ್ಕೃತಿ ಸಂಪೂರ್ಣವಾಗಿ ನಾಶವಾಗಹತ್ತಿದೆ. ಇಲ್ಲಿಯ ಬುಡಕಟ್ಟುಗಳ ಅಲೆಮಾರಿ ಸಮುದಾಯ ಹೊತ್ತುಕೊಂಡು ಮಾರಾಟ ಮಾಡುವಂತಹ ಯಾವುದೇ ವಸ್ತುಗಳಿಗೆ ಬೆಲೆಯೇ ಇಲ್ಲ. ಇಂತಹ ಸ್ಥಿತಿಯಲ್ಲಿ ಬುಡಕಟ್ಟುಗಳು ನೆಲೆ ನಿಂತಿವೆ.

ಬುಡಕಟ್ಟುಗಳು ನಮ್ಮ ಭಾರತ ದೇಶದ ತುಂಬ ತುಂಬಿ ಹೋಗಿದೆ. ಅಲ್ಲಿಂದ ಹಿಡಿದು ಕರ್ನಾಟಕದ ತುಂಬೆಲ್ಲಾ ಹಲವಾರು ಬುಡಕಟ್ಟುಗಳು ತಮ್ಮ ಅಸ್ತಿತ್ವವನ್ನು ಸ್ಥಾಪಿಸಿಕೊಂಡಿವೆ. ಹೀಗಿದ್ದಾಗಲೂ ಸಹಿತ ಬುಡಕಟ್ಟು ಹೇಗೆ ಸುಧಾರಣೆ ಹೊಂದಲು ಸಾಧ್ಯವಾಗುತ್ತದೆ. ಭಾರತ ದೇಶ ಸಂಪೂರ್ಣವಾಗಿ ಬುಡಕಟ್ಟುಗಳ ತವರಾಗಿದೆ. ಅವುಗಳ ಕುರಿತು ಸಮಗ್ರ ವಿವೇಚನೆ ಅಧ್ಯಯನಗಳು

ನಮಗೆ ಆಗಬೇಕಾದ ಅನಿವಾರ್ಯತೆಯಿದೆ. ಹೀಗಾಗಿ ಸರ್ಕಾರ ಸಂಪೂರ್ಣ ಯೋಜನೆ ನಿರೂಪಿಸಿಕೊಂಡು ಹೊರ ಬರಬೇಕಾದ ಅನಿವಾರ್ಯತೆಯಿದೆ.

ಆರ್ಥಿಕ ಸ್ಥಿತಿ–ಗತಿಗಳು ಅವರ ವೃತ್ತಿಗಳ ಮೇಲೆ ಅವಲಂಬಿತವಾಗಿವೆ. ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ದೊರೆಯುವ ಮೇದಾರರು, ಅಡವಿಚೆಂಚರು, ಇರುಳರು, ಕಿನ್ನರಿಜೋಗಿಗಳು, ಲಂಬಾಣಿಯರು, ಸುಡುಗಾಡಸಿದ್ದರು, ಹಕ್ಕಿಪಿಕ್ಕಿಯರು, ರಾಜಗೊಂಡ ಬುಡಕಟ್ಟು, ಕೊರವರು, ಟೋಕ್ರೆಕೋಳಿ, ಕುರುಮಾಮ, ಬುಡಬುಡುಕಿಯರು, ದುರುಗಮುರುಗಿಯರು, ಹಗಲುವೇಷದಾರರು, ದೊಂಬರು, ಕೋಲೆಬಸವ, ಇಲ್ಲಿಗರು, ಬುಡುಗಜಂಗಮರು, ಮೇದರು, ಚಂಚು, ಚೆಂಬರ, ಪಾರ್ದಿ, ಗೋಸಂಗಿಗಳು, ಕಾಡುಕುರುಬರು, ಮುಂತಾದ ಬುಡಕಟ್ಟುಗಳು ಆರ್ಥಿಕ ದೃಷ್ಟಿಯಿಂದ ತಮ್ಮ ಸ್ಥಿತಿ–ಗತಿಗಳ ಬಗ್ಗೆ ಚಿಂತನೆಗೆ ತೊಡಗಲಾಗಿದೆ. ಆದರೆ ಸಿಕ್ಲಿಗರ ಬುಡಕಟ್ಟು ಜನಾಂಗ ಮಾತ್ರ ಇಂತಹ ಆರ್ಥಿಕ ದೃಷ್ಟಿಯಿಂದ ಭಿನ್ನರಾಗಿದ್ದಾರೆ.

ಬುಡಕಟ್ಟಿನ ಆರ್ಥಿಕ ಜೀವನ ವಿಧಾನಗಳನ್ನು ಕುರಿತು ಸಿಕ್ಲಿಗರ ಸಮುದಾಯದಲ್ಲಿ ಸೇರಿಕೊಂಡರೆ ತನ್ನ ಮೂಲ ಸಂಸ್ಕೃತಿ ಅಸ್ತಿತ್ವ ಹೊಂದಿಕೊಂಡು ಬರುವುದನ್ನು ನಾವು ಕೂಲಂಕುಷವಾಗಿ ಅಧ್ಯಯನ ಮಾಡಬೇಕಾಗಿದೆ. ಇವರ ಮೂಲ ರಾಜರಣಜಿತ್‌ಸಿಂಗರ ಹತ್ತಿರ ತನ್ನದೇಯಾದ ಮೂಲಕಸಬನ್ನು ಹೊಂದುವುದಕ್ಕೆ ಸಿಕ್ಲಿಗರ ಸಮುದಾಯವೇ ಕಾರಣವಾಗಿದೆ. ಇವರು ಮೊದಲು ರಣಜಿತ್‌ಸಿಂಗ್‌ರಂತಹ ರಾಜನ ಆಸ್ಥಾನದಲ್ಲಿ ಕಬ್ಬಿಣದ ಕೆಲಸಕಾರ್ಯ ನಿರ್ವಹಿಸುತ್ತಿದ್ದರು. ಯುದ್ಧದ ಸನ್ನಿವೇಶಕ್ಕೆ ತಕ್ಕಂತೆ ವಸ್ತುಗಳನ್ನು ತಯಾರಿಸುವ ಕೆಲಸ ಕೈಗೊಂಡಿದ್ದರು. ಇವರ ಮೂಲ ಕಸಬುಗಳ ಕುರಿತು ಖಚಿತವಾಗಿ ಹೇಳಲು ಕಷ್ಟಸಾಧ್ಯವಾಗಿದೆ. ಹಾಗೇ ಇವರ ಮೂಲಗಳನ್ನು ಕುರಿತು ಇನ್ನು ಹೇಳುವುದು ಅಸಾಧ್ಯವಾದ ಮಾತಾಗಿದೆ. ರಣಜಿತ್‌ಸಿಂಗ್‌ರ ರಾಜರ ಸಹಾಯಕರೆಂದು ಗುರುತಿಸಲ್ಪಡುತ್ತಾರೆ.

ರಾಜಾಶ್ರಯವನ್ನು ಕಳೆದುಕೊಂಡು ನಿಜಾಮ ಸಂಸ್ಥಾನಕ್ಕೆ ಬಂದರು. ಇವರು ಸಿಖ್ಖರ ಮೂಲ ಧರ್ಮದ ಮೂಲಕ ಬಡವರಾಗಿದ್ದರೆ ಸಿಖ್ಖ ಧರ್ಮದ ಬಗ್ಗೆ ಅಭಿಮಾನವಿದೆ. ಅಲ್ಲಿಂದಲೇ ಸಿಖ್ಖರ ಎಲ್ಲಾ ಹಿತ ಕಾಪಾಡಿಕೊಂಡು ಬಂದಿದ್ದಾರೆ. ರಾಜಾಶ್ರಯದಲ್ಲಿದ್ದಾಗಲೇ ಹೈದ್ರಾಬಾದ್ ಸಂಸ್ಥಾನದ ನಿಜಾಮನ ಆಡಳಿತದೊಂದಿಗೆ ಪಂಜಾಬದ ರಾಜಾ ರಣಜಿತ್‌ಸಿಂಗ್ ಬಾಂಧವ್ಯ ಹೊಂದಿದ್ದರಿಂದ ಸಹಜವಾಗಿ ಇಲ್ಲಿರುವ ಬಲಿಷ್ಟವಾದ ಸಿಕ್ಲಿಗರ ಸಮುದಾಯವನ್ನು ಹೈದ್ರಾಬಾದ್

ಸಂಸ್ಥಾನಕ್ಕೆ ಕಳುಹಿಸಲಾಯಿತು. ಇಲ್ಲಿಯೂ ಕರ ವಸೂಲಿ ಆಸ್ಥಾನದಲ್ಲಿ ನಿಜಾಮನಿಗೆ ಬೇಕಾಗುವ ಕಬ್ಬಿಣದ ಕೆಲಸ ಮಾಡುತ್ತಿದ್ದರು. ನಿಜಾಮನು ಸಹ ತನ್ನ ಆಡಳಿತ ಮುಗಿಸಿ ಭಾರತ ಸರ್ಕಾರದ ಒಕ್ಕೂಟಕ್ಕೆ ಸೇರಿದ ಮೇಲೆ ನಿಜಾಮನು ಕೂಡ ಈ ಸಿಕ್ಲಿಗರ ಸಮುದಾಯವನ್ನು ಕೈಬಿಡಲಾಯಿತು ಹೀಗಾಗಿ ಸಿಕ್ಲಿಗರ ಸಮುದಾಯ ಹೈದ್ರಾಬಾದ್ ಮೂಲಕ ಕರ್ನಾಟಕದ ಅನೇಕ ಪ್ರದೇಶಗಳ ಕಡೆ ತಮ್ಮ ವಲಸೆಯನ್ನು ಕೈಗೊಂಡರು. ಕೆಲವು ಗುಂಪುಗಳನ್ನಾಗಿಸಿ ಕೊಂಡು ಬಾಂಬೆಕರ್ನಾಟಕ, ಮೈಸೂರು ಪ್ರಾಂತ ಹಾಗೂ ಹೈದ್ರಾಬಾದ್ ಕರ್ನಾಟಕದ ಕಡೆಗೆ ಹೋಗಿ ನೆಲೆ ನಿಲ್ಲಲು ಕಾರಣವಾಯಿತು. ಅವರಿಗೆ ಮತ್ತೇ ಪಂಜಾಬಕ್ಕೆ ತೆರಳುವ ಗೋಜಿಗೆ ಹೋಗಲಿಲ್ಲ. ತಾವು ನಿರ್ವಹಿಸಿಕೊಂಡು ಬಂದ ಕಬ್ಬಿಣದ ಕೆಲಸವನ್ನೇ ಮುಂದುವರೆಸಿಕೊಂಡು ಬರಲು ವೃತ್ತಿ ಕುಲ ಕಸಬನ್ನಾಗಿಸಿ ಕೊಂಡರು. ಅವರ ನಿರ್ಮಿತವಾದ ಕಸುಬೇ ಕಬ್ಬಿಣದ ಕೆಲಸವಾಯಿತು.

ಸಾಮಾನ್ಯವಾಗಿ ಆರ್ಥಿಕ ವ್ಯವಸ್ಥೆಯನ್ನು ಅದರ ಆಧಾರದ ಮೇಲೆ ಆಯಾ ಬುಡಕಟ್ಟು ಜನಾಂಗದ ನಿರ್ಧಾರವನ್ನು ನಿರ್ಧರಿಸುತ್ತದೆ. ಹೀಗಾಗಿ ಸಿಕ್ಲಿಗರ ಸಮುದಾಯವನ್ನು ಸಹ ಸಾಂಸ್ಕೃತಿಕ ಹಾಗೂ ಬುಡಕಟ್ಟಿನ ಸ್ಥಾನಮಾನಗಳ ಹಿನ್ನೆಲೆಯನ್ನು ಗುರುತಿಸಲು ನಿರ್ಧರಿಸುವ ಅಂಶ ಆರ್ಥಿಕ ವ್ಯವಸ್ಥೆಯಾಗಿದೆ. ಒಂದು ಬುಡಕಟ್ಟು ಜನಾಂಗದ ಆರ್ಥಿಕ ದೃಷ್ಟಿಕೋನವನ್ನು ಅಭ್ಯಾಸ ಮಾಡಲು ಆಯಾ ಬುಡಕಟ್ಟಿನ ಸಾಂಸ್ಕೃತಿಕ ಹಿನ್ನೆಲೆ ಬೇಕಾಗುತ್ತದೆ. ಸಿಕ್ಕಲಗಾರರ ಸಮುದಾಯವು ಸಹಿತ ಆರ್ಥಿಕವಾಗಿ ಹಿಂದುಳಿದಿದೆ. ಈ ಬುಡಕಟ್ಟು ತನ್ನ ಮೂಲ ಸಂಸ್ಕೃತಿಗಳ ಅಭಿವ್ಯಕ್ತಿ ಆಚರಣೆಗಳನ್ನು ಆರ್ಥಿಕವಾಗಿರುವ ಯಾವುದೇ ಬುಡಕಟ್ಟುಗಳಿಗೆ ಹೇಳಲು ಸಾಧ್ಯವಾಗದು. ಇದರಿಂದಾಗಿಯೇ ಆರ್ಥಿಕವಾದ ಮೂಲ ಪಂಗಡಗಳ ಅಂತರಂಗದ ಕೆಳಗಡೆಯೇ ಅವುಗಳ ಮೂಲ ಸಂಸ್ಕೃತಿ ಹುದುಗಿಕೊಂಡು ಬರುತ್ತದೆ. ಆ ಮೂಲ ಸಂಸ್ಕೃತಿಯ ಲಕ್ಷಣಗಳು ಸಹ ಅಡಕವಾಗಿರುತ್ತವೆನ್ನುವ ಮಾತುಗಳನ್ನು ನಾವು ನೋಡಲು ಸಾಧ್ಯವಾದೇ ಹೋಗಬಹುದು. ಹೀಗಾಗಿ ನಾವು ಆರ್ಥಿಕ ದೃಷ್ಟಿಯಿಂದ ನೋಡುತ್ತಾ ಬುಡಕಟ್ಟುಗಳ ಕೆದಕುತ್ತಾ ಹೋದಂತೆ ಕೆಲವೊಂದು ಸನ್ನಿವೇಶದಲ್ಲಿ ಮೂಲ ಸಂಸ್ಕೃತಿಗಳ ಸ್ಥಿತಿಯನ್ನು ಹಾಗೇ ಬಿಡಬೇಕಾದ ಅನಿವಾರ್ಯತೆಯೂ ಉಂಟಾಗುತ್ತದೆ.

ಸಿಕ್ಲಿಗರ ಬುಡಕಟ್ಟು ಆದಿವಾಸಿಗಳು ಆರ್ಥಿಕವಾಗಿ ಹೇಳತೀರದಷ್ಟು ಬಡವರು ಅವರು ವಾಸಿಸುವ ಸ್ಥಳ ತೊಡುವ ವೇಷಭೂಷಣ ಬಳಸುವ ಕಾರ್ಯಗಳನ್ನು ನೋಡಿದಾಕ್ಷಣ ಅವರ ಆರ್ಥಿಕ ಪರಿಸ್ಥಿತಿಯ ಅರಿವು ಸಹಜವಾಗಿ ಮೂಡುವುದು ಸ್ವಾಭಾವಿಕವಾಗಿದೆ. ಸಿಕ್ಲಿಗರ ಸಮುದಾಯವು ಎರಡೊತ್ತಿನ ಊಟಕ್ಕೂ ಗತಿಯಿಲ್ಲದೇ ಗಂಜಿಗಾಗಿ ದಿಕ್ಕಿಲ್ಲದೇ ಪರದಾಡುವ

ಪರಿಸ್ಥಿತಿ ಉಂಟಾಗಿದೆ. ಅವರು ದುಡಿಯುವ ಶ್ರಮ ಮಾತ್ರ ಕಠಿಣವಾದರೂ ಕಬ್ಬಿಣದಂತಹ ಕೆಲಸ ಕೈಗೊಂಡು ಯಾವ ಕಠಿಣ ಆಶ್ರಯ ವಾಸಿಗಳಾಗಿದ್ದೇ ಬಡಿದಾಡುವುದು ಒಂದು ಹೊಟ್ಟೆ ತುಂಬಿಸಿಕೊಳ್ಳಲು ಮಾಡುವ ಕಸಬು ಅತಿ ಗಟ್ಟಿಯಾದುದು. ದಿನದ ದುಡಿಮೆಗೆ ತಕ್ಕ ಲಾಭದಲ್ಲಿಯೇ ಊಟ ಮಾಡಬೇಕು ಇರದಿದ್ದರೆ ಗತಿಯೇನು ಮರು ದಿವಸ ಉಪವಾಸ ಮಲಗಬೇಕಾದ ಸಂದಿಗ್ಧತೆ ಉಂಟಾಗುತ್ತದೆ. ಆರ್ಥಿಕವಾದ ಮುಗ್ಗಟ್ಟಿನಿಂದ ಜನಾಂಗ ಸಂಕಷ್ಟಕ್ಕೆ ಇಡಾಗಿದೆ. ಹೊಟ್ಟೆ ಹಸಿವು ತಡೆಯಲಾರದೇ ಸತ್ತ ಬುಡಕಟ್ಟು ಜನಾಂಗಕ್ಕೆ ಲೆಕ್ಕವಿಲ್ಲ. ಪೆಡಂಭೂತದಂತೆ ಕಾಡುವ ಹಸಿವಿಗೆ ಪರಿಹಾರ ಸಿಗದೇ ಹೋದರೆ ಚಿಂತಾಜನಕ ಸ್ಥಿತಿ ಅನುಭವಿಸಬೇಕಾಗುತ್ತದೆ. ಹಸಿವಿಗಾಗಿ ಪರಿತಪಿಸಲು ಸಿಕ್ಕಲಗಾರ ಸಮುದಾಯವು ಯಾವತ್ತು ದುಡಿಯದೇ ತಮ್ಮ ಶ್ರಮದ ಬೆವರುಹನಿ ಹರಿಸದೇ ಊಟ ಮಾಡುವುದಿಲ್ಲ. ಹಸಿವು ಭೂತಾಕಾರವಾಗಿ ಕಾಡಿದರೂ ಸಹಿತ ಭಿಕ್ಷೆ ಎತ್ತುವುದಾಗಲಿ, ಯಾರದೇ

ಹತ್ತಿರ ಬೇಡಿಕೊಂಡು ಹಸಿವು ನಿಗಿಸಿಕೊಂಡು ಬರುವ ಜಾಯಮಾನವೇ ಸಿಕ್ಲಿಗರ ಸಮುದಾಯ ಜನಾಂಗಕ್ಕೆ ಇಲ್ಲವೇ ಇಲ್ಲ. ತಮ್ಮ ಸ್ಥಿತಿ ತಮ್ಮ ಕಡು ವೈರಿಗೂ ಬರಬಾರದೆಂದು ಗುರುನಾನಕ್‌ನಲ್ಲಿ ಮೊರೆಯಿಡುತ್ತಾರೆ. ಅವರಿಗೆ ಕಬ್ಬಿಣದ ಕೆಲಸವನ್ನು ಬಿಟ್ಟರೇ ಮತ್ತ್ಯಾವಕೆಲಸ ಗೊತ್ತೇ ಇಲ್ಲ. ಇವರಿಗೆ ಒಂದಾದರೂ ವಾಸಿಸಲು ಮನೆಗಳಿಲ್ಲ. ಸರ್ಕಾರದ ಜಾಗಗಳಲ್ಲಿ ನೆಲೆಸಿದ್ದಾರೆ. ಸರ್ಕಾರಕ್ಕೆ ಸಂಬಂಧಿಸಿದ್ದವರೂ ಒಂದು ವೇಳೆ ಬಂದರೆ ಅವರು ಗುಡಿಸಲು ಕಿತ್ತುಕೊಂಡು ಹೋಗುವ ಪರಿಸ್ಥಿತಿ ಉಂಟಾಗಿದೆ. ಈ ಕಾರಣದಿಂದಲೇ ತಮ್ಮ ಜೀವನವನ್ನು ಕಳೆಯುವ ಹಂತ ತಲುಪಿದ್ದಾರೆ. ಕೃಷಿ ಪಶುಪಾಲನೆಯಂತೂ ಅವರಿಗೆ ಗೊತ್ತೆ ಇಲ್ಲ. ಹಂದಿ ಸಾಕಾಣಿಕೆಯನ್ನು ಕೈಗೊಂಡ ಕೆಲವು ಕುಟುಂಬಗಳಿವೆ. ಕಬ್ಬಿಣದ ಕೆಲಸ ಕಾರ್ಯಗಳು ಅವರ ಮೂಲ ಕಸಬುಗಳಾಗಿವೆ. ಹಾಗೆಯೇ ಹಂದಿ ಸಾಕಾಣಿಕೆ ಎಂಬುದನ್ನು ಅವರು ಭದ್ರವಾದ ಹಿನ್ನೆಲೆಯನ್ನು ಹೊಂದಬೇಕಾಗಿತ್ತು. ಆದರೆ ಕೆಲವೇ ಕೆಲವು ಕುಟುಂಬಗಳು ಮಾತ್ರ ಹಂದಿ ಸಾಕಣಿಕೆ ಕಸಬನ್ನಾಗಿಸಿವೆ. ಇವರು ಯಾವುದೇ ರೀತಿಯ ಮೋಸವಾಗಲಿ, ಅಪ್ರಮಾಣಿಕತೆ ಎಂಬುದಾಗಲಿ, ಕಳ್ಳತನವು ಇಲ್ಲ. ಅವನ್ನೆಲ್ಲಾ ದೂರ ಸರಿಸಿ ಪ್ರಮಾಣಿಕರಾಗಿ ಕೆಲಸ ನಿರ್ವಹಿಸುತ್ತಾರೆ.

ಜೀವನವನ್ನು ಸಾಗಿಸಬೇಕಾದ ಸಮಾಜದಲ್ಲಿ ಬಾಳಬೇಕು ಕಷ್ಟ ಸುಖಗಳನ್ನು ಮೇಳೈಸಿಕೊಂಡು ಸಿಖ್ಖ್ ಧರ್ಮದ ನೆಲೆಯಲ್ಲಿ ಬಾಳಬೇಕು. ಹಾಗೇ ಹಿಂದೂ ಧರ್ಮಾಚರಣೆಗಳ ಒಪ್ಪಿ ಅಪ್ಪಿಕೊಂಡು ನಡೆಯಬೇಕೆಂಬ ಕನಸುಕಂಡಿದ್ದಾರೆ. ಜೀವನಕ್ಕಾಗಿಯೇ ಅಲೆಮಾರಿ

ಜನಾಂಗವಾಗಿ ಅಲೆದಾಡುತ್ತಿದ್ದಾರೆ. ಜಾತ್ರೆ ಉತ್ಸವ, ಸಂತೆಗಳಿಗೆ ಹೋಗಿ ತಾವು ತಯಾರಿಸಿದ ಕಬ್ಬಿಣದ ವಸ್ತುಗಳನ್ನು ಮಾರಾಟ ಮಾಡುತ್ತಾರೆ. ಅಲ್ಲಿ ಅವರಿಗೆ ಕಸುಬು ನಿಲ್ಲದೇ ಹೋದರೆ ಇರುತ್ತಾರೆ. ಖರ್ಚಾಗದಿದ್ದರೆ ದುಡಿಮೆಗೆ ಲಾಭ ಸಿಗದಿದ್ದರೆ ಮುಂದೆ ಪ್ರಯಾಣ ಬೆಳೆಸುತ್ತಾರೆ. ಇವರಿಗಂತೂ ಇಲ್ಲಿಯ ಜನ ಸಮುದಾಯಗಳಿಂದ ಅನ್ಯಾಯವಾಗಿದೆ. ಸರ್ಕಾರ ಪೋಲೀಸರ ಮೂಲಕವೂ ಶೋಷಣೆಗೊಳಗಾಗಿದ್ದಾರೆ. ಎಲ್ಲಾ ಹಂತಗಳಲ್ಲಿ ಸಿಕ್ಲಿಗರ ಬುಡಕಟ್ಟು ಸಮುದಾಯದ ಮೇಲೆ ಅನ್ಯಾಯ ಅತ್ಯಾಚಾರ, ಶೋಷಣೆಗಳು ಸದಾ ನಿರಂತರವಾಗಿ ಮಾಡಿಕೊಂಡೇ ಬಂದಿವೆ. ಈ ಕಾರಣಕ್ಕಾಗಿಯೇ ಈ ಸಮುದಾಯವನ್ನು ವ್ಯವಸ್ಥಿತ ಪಟ್ಟಿಯಲ್ಲಿ ಸೇರಿಸುವುದು ಅವಶ್ಯವಾಗಿದೆ.

ಮನುಷ್ಯನಿಗೆ ಬೇಕಾಗಿರುವುದು ಒಡವೆ-ಶ್ರೀಮಂತಿಕೆ ಹಣವಲ್ಲ. ಇಂತಹ ಉತ್ಕೃಷ್ಟವಾದ ಅಂಶಗಳ ಬಗ್ಗೆ ಸಿಕ್ಲಿಗರ ಜನಾಂಗ ಕಣ್ಣೆತ್ತಿ ನೋಡುವುದಿಲ್ಲ. ಅವುಗಳಿಗಿಂತ ಹೆಚ್ಚಾಗಿ ಅವರಿಗೆ ಬೇಕಾಗಿರುವ ಊಟ ಬಟ್ಟೆ, ವಸತಿಗಳಂತಹ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಇವರಲ್ಲಿ ಸಾಕ್ಷರತೆ ಎಂಬುದಿಲ್ಲ. ನೂರಕ್ಕೆ ನೂರರಷ್ಟು ಅನಕ್ಷರಸ್ಥರೇ ತುಂಬಿಕೊಂಡಿದ್ದಾರೆ. ಇತ್ತಿತ್ತಲಾಗಿ ಕೇವಲ ಶೇಕಡಾ ಮೂರರಷ್ಟು ಮಾತ್ರ ಅಕ್ಷರಸ್ಥ ಸಿಕ್ಲಿಗರ ಕುಟುಂಬ ಆಗಲಿಕ್ಕೆ ಹತ್ತಿದೆ. ಸರ್ಕಾರದ ಅಧಿನಿಯಮಗಳ ಸೌಲಭ್ಯಗಳ ಬಗ್ಗೆ ಅವರು ತಿಳಿದುಕೊಳ್ಳುವ ಅಗತ್ಯವು ಅವರಿಗಿಲ್ಲ. ಸರ್ಕಾರದ ಅಗತ್ಯವು ಇಲ್ಲದಂತಾಗಿದೆ. ಸಾಂಪ್ರದಾಯಿಕವಾದ ಹಿನ್ನೆಲೆಯಲ್ಲಿ ಬಂದ ಸಿಕ್ಲಿಗರ ಸಮುದಾಯವು ಕಟ್ಟುನಿಟ್ಟುಗಳ ಮೂಲಕ ತಮ್ಮ ಆಚರಣೆಗಳು ಹೊರ ಹಾಕಿಕೊಂಡು ಬಂದಿದ್ದಾರೆ. ಅವರು ಪ್ರತಿಯೊಬ್ಬರೂ ದುಡಿಯಲೆ ಬೇಕು. ದುಡಿದದ್ದುಣ್ಣುವ ಕಾಯಕ ಕೈಗೊಂಡು ಕಬ್ಬಿಣದ ಕೆಲಸಗಳಲ್ಲಿ ನಿಷ್ಠೆ ಹೊಂದಿದ್ದಾರೆ. ಬುಡಕಟ್ಟು ಜನಾಂಗದಲ್ಲಿ ಸಾಂಪ್ರದಾಯಿಕವಾದ ಕಟ್ಟುನಿಟ್ಟಿನ ಜಾತಿ ವ್ಯವಸ್ಥೆಯಿದೆ. ಇವುಗಳ ಕುಟುಂಬ ಸಮುದಾಯಕ್ಕೆ ಬೇಕಾಗುವ ಪಂಚಾಯಿತಿ ನ್ಯಾಯವ್ಯವಸ್ಥೆಯನ್ನು ಕಾಪಾಡಿಕೊಂಡು ಬಂದಿದ್ದಾರೆ. ಆ ಕೆಲಸ ತಮ್ಮೊಳಗೆ ಇರುವ ಹಲವಾರು ಸಮುದಾಯದ ಹಿರಿಯನೇ ನ್ಯಾಯ ತೀರ್ಮಾನ ಕೈಗೊಳ್ಳುವ ಹಕ್ಕು ಹೊಂದಿದ್ದಾನೆ. ಇವರಲ್ಲಿ ಇದ್ಯಾವುದನ್ನು ಗಣನೆಗೆ ಹೆಚ್ಚು ತೆಗೆದುಕೊಳ್ಳುವುದಿಲ್ಲವೆಂದರೆ ಅವರು ಯಾವ ಅನ್ಯಾಯಗಳಂತಹ ಕಾರ್ಯದಲ್ಲಿ ಭಾಗವಹಿಸದೇ ಕಾಲ ಕಳೆಯುವುದರಿಂದ ಆ ಪ್ರದೇಶದಲ್ಲಿ ಇವರಿಗೆ ಬರುವುದಿಲ್ಲವಾದರೂ ಅವರು ನಂಬಿಕೆಗೆ ಅರ್ಹರಾಗಿದ್ದಾರೆ. ತಮ್ಮ ನಂಬಿಕೆಗಳನ್ನು ಇಟ್ಟುಕೊಂಡ ಕಾಳಜಿಗಳನ್ನು ಇಂದಾದರೂ ಪರಿವರ್ತನೆಗೆ ತರಬೇಕಾಗಿದೆ. ಒಂದು ವೇಳೆ ತರದೇ ಹೋದರೆ ಸಿಕ್ಲಿಗರ ಸಮುದಾಯದಲ್ಲಿ ಯಾವುದೇ ಆರ್ಥಿಕ ಸುಧಾರಣೆಯನ್ನು ತರಲು ಅಸಾಧ್ಯವಾಗುತ್ತದೆ.

ಇಂಡಿಯಾದಲ್ಲಿ ಜೀವನ ಕಳೆಯುತ್ತಿರುವ ಬುಡಕಟ್ಟು ಕೆಳಜಾತಿಯ ಸಮುದಾಯಗಳು ಯಾವ ಹಂತಗಳನ್ನು ಮೀರಿ ಬದುಕನ್ನು ರೂಪಿಸಿಕೊಂಡಿದ್ದಾರೆ. ಅಂತಹ ಎಲ್ಲಾ ಹಂತಗಳನ್ನು ಅಲೆಮಾರಿ ಬುಡಕಟ್ಟು ದಾಟಿ ಬಂದಿದೆ. ಇಂಡಿಯಾದ ಸಮಾಜದ ಪ್ರಧಾನ ಅಂಶ ಲಕ್ಷಣವೆಂದರೆ ಜಾತಿವ್ಯವಸ್ಥೆಯೇ ಕಾರಣವಾಗಿದೆ. ಜಾತಿ ವ್ಯವಸ್ಥೆ ದುಡಿಯುವವರ ಮತ್ತು ದುಡಿಸಿಕೊಳ್ಳುವವರ ಮಧ್ಯದಲ್ಲಿ ನಿಂತುಕೊಂಡು ಸಾಮಾಜಿಕ ಸಂಬಂಧವಾಗಿ ಏರ್ಪಟ್ಟಿತ್ತು. ಭಾರತದ ಶ್ರೇಣಿಕೃತ ವ್ಯವಸ್ಥೆಯಿಂದ ಸಿಕ್ಲಿಗರ ಸಮುದಾಯ ಬೀದಿಪಾಲಾಗಿದೆ. ಶ್ರಮ ವಿಭಜನೆಯ ಆಧಾರದ ಮೇಲೆ ರೂಪಗೊಳ್ಳಬೇಕಾದ ಒಂದು ಘಟಕ ಜಾತಿಯಾಗಿದೆ. ಜಾತಿಯೇ ಅಸ್ತಿತ್ವ ಕಳೆದುಕೊಂಡಿದೆ. ಬುಡಕಟ್ಟು ಸಮುದಾಯಗಳಂತೂ ಸಿಕ್ಲಿಗರ ಸಮುದಾಯವು ಸಹಿತ ತಾವೇನು ಅನುಸರಿಸಿಕೊಂಡು ಬಂದ ಕುಲಕಸಬುಗಳ ಮೂಲಕ ಸಾಮಾಜಿಕ ಗುಂಪುಗಳಾಗಿ ಕಂಡು ಬಂದಿವೆ. ಈ ಸಾಮಾಜಿಕ ಸ್ವಯಂಪೂರ್ಣ ಗುಂಪೇ ಒಂದು ಜಾತಿ ಸಮುದಾಯಗಳ ಮೂಲಕ ಒಂದೇ ಎಂದು ಗುರುತಿಸಿಕೊಳ್ಳದೇ ಭಿನ್ನವಾಗಿ ಕಂಡು ಉಳಿದುಕೊಳ್ಳಲು ಪ್ರಯತ್ನಿಸುತ್ತೀವೆ. ಆ ಪ್ರಯತ್ನದ ಫಲವಾಗಿ ಹಲವು ಬುಡಕಟ್ಟುಗಳು ಪ್ರತ್ಯೇಕವಾಗಲು ಸಾಧ್ಯವಾಗುತ್ತದೆ. ಇದನ್ನರಿತುಕೊಂಡು ಭಾರತರತ್ನ ಡಾ. ಬಾಬಾಸಾಹೇಬ ಅಂಬೇಡ್ಕರ ಅವರು ಅಚಲವಾದ ವಿಶ್ವಾಸದ ಮಾತುಗಳನ್ನು ಆಡಿದ್ದಾರೆ. ಅದೇನೆಂದರೆ ಪ್ರತ್ಯೇಕತೆಯೆಂಬುದು ಜಾತಿಯ ಒಂದು ಸ್ವಾಭಾವಿಕ ಪರಿಣಾಮ ಎಂದು ಕರೆದಿದ್ದಾರೆ. ಇದನು ನಾವು ನೋಡಬೇಕಾದರೆ ಭಾರತದ ಸಮಾಜದ ಶ್ರೇಣೀಕೃತ ವ್ಯವಸ್ಥೆಯನ್ನು ಸ್ಪಷ್ಟಪಡಿಸುತ್ತದೆ.

ಹೀಗಾಗಿಯೇ ಇಲ್ಲಿ ಶ್ರೇಣೀಕೃತ ವ್ಯವಸ್ಥೆ ಯಾವ ಯಾವ ಕೆಲಸಗಳನ್ನು ಮಾಡಬೇಕೆಂದು ತಾನೇ ರೂಪಿಸಿಕೊಂಡಿದ್ದರಿಂದ ಆಯಾ ಕೆಲಸಗಳೇ ಇವರಿಗೆ ಕಟ್ಟಪ್ಪಣೆಯಾದವು. ಸಾಮಾಜಿಕ ಗುಂಪುಗಳು ಸಹಿತ ಚಾರಿತ್ರಿಕವಾದ ಘಟ್ಟಗಳಲ್ಲಿ ತಮ್ಮಷ್ಟಕ್ಕೆ ತಾವೇ ರೂಪಿಸಿಕೊಂಡ ವ್ಯವಸ್ಥೆಯಲ್ಲಿ ಸಾಧನೆಗೆ ಸಿಕ್ಕ ಸೋಲು ಗೆಲುವುಗಳನ್ನೇ ಅವಲಂಭಿಸಲಾಗಿತ್ತು. ಸೋಲನ್ನು ಒಪ್ಪಿಕೊಂಡ ಸಮುದಾಯಗಳಂತೂ ಹೇಳದೇ ತಮಗೆ ವಹಿಸಿದ ಕೆಲಸಕಾರ್ಯಗಳನ್ನು ತಾವೇ ಒಪ್ಪಿಕೊಂಡು ಮೂಕವೇದನೆಯಿಂದ ನಿರ್ವಹಿಸಿಕೊಂಡು ಬರುವ ಕೆಲಸಗಳನ್ನು ತಾವೇ ಮುಂದುವರೆಸಿಕೊಂಡು ಬಂದವು. ಅವು ಅವರಿಗೆ ಕೆಟ್ಟಕೆಲಸದ ಬುತ್ತಿಗಳಾದವು. ಗೆಲುವುಗಳು ಸಹಿತ ಆಯಾ ಬುಡಕಟ್ಟು ಸಮುದಾಯದ ಆರ್ಥಿಕತೆಯ ಮೇಲೆ ಆಗಿದೆ.

ಭಾರತದ ಅನೇಕ ಬುಡಕಟ್ಟು ಜನಾಂಗಗಳನ್ನು ನಾವು ನೋಡಿದರೂ ಕೂಡಾ ಆರ್ಥಿಕವಾದ ಪ್ರಗತಿ ಹೊಂದಿ ಉತ್ಪಾದನಾ ಕ್ಷೇತ್ರಗಳಲ್ಲಿ ಕ್ರಾಂತಿ ಸಂಭವಿಸಲು ಅಸಾಧ್ಯವಾಗಿತ್ತು.

ಇಂತಹ ಬದಲಾವಣೆ ಕ್ರಾಂತಿಯೂ ಸಂಭವಿಸುವುದು ಹೋಗಲಿ ಗಾಳಿಯನ್ನು ಸಹ ಬೀಸಲು ಭಾರತ ದೇಶದಲ್ಲಿ ಹೊಸತನ ತರಲು ಸಾಧ್ಯವಾಗಲಿಲ್ಲ. ಕುಲಕಸಬು ಕೈಗೊಂಡ ಸಿಕ್ಲಿಗರ ಬುಡಕಟ್ಟು ಜನಾಂಗ ಕೇವಲ ಜಾತಿ ಆಧಾರದ ಮೇಲೆ ಪ್ರಸ್ತಾವವಾದವು. ಕೆಲವು ಜಾತಿಗೆ ಸೀಮಿತವಾದ ಕೆಲವು ಬುಡಕಟ್ಟುಗಳು ಹೊಂದಿದ್ದರೂ ಸಾಮಾಜಿಕ ಅವಮಾನಗಳನ್ನು ಮೀರಿಲ್ಲ ಎಂಬುದು ಸಾಧ್ಯವಾಗಲಿಲ್ಲ. ಆರ್ಥಿಕ ಸ್ಥಿತಿಯಲ್ಲಿ ಇದೇ ಸ್ಥಿತಿ ಅನುಭವಿಸಬೇಕಾಯಿತು.

ಭಾರತದ ಸಮಾಜದಲ್ಲಿ ಮಾನವನನ್ನು ಶ್ರೇಣೀಕೃತ ವ್ಯವಸ್ಥೆಗೆ ನಿಲ್ಲಿಸಿದ ಒಂದು ಪ್ರಬಂಧವಾಯಿತು. ಅದಕ್ಕೆ ವಿಶಿಷ್ಟವಾದ ಸ್ಥಾನಮಾನಗಳು ಪ್ರಾಪ್ತವಾದವು. ಜಾಗತಿಕ ಮಟ್ಟದಲ್ಲಿ ಹಲವಾರು ಉತ್ಪಾದನಾ ಕ್ರಾಂತಿಗಳು ನಡೆದುಕೊಂಡು ಬಂದರೂ ಸಹ ಭಾರತ ದೇಶ ಮಾತ್ರ ತಮ್ಮ ತಮ್ಮಲ್ಲಿನ ಆರ್ಥಿಕ ಅವಲಂಬನೆಯನ್ನು ಕಾಯ್ದುಕೊಂಡು ಬರಹತ್ತಿವೆ. ಇದರಿಂದ ಅಲೆಮಾರಿ ವೃತ್ತಿಗಳಾದ ಸಿಕ್ಲಿಗರ ಅವರು ಹೊರತಾಗಿಲ್ಲ. ತಮ್ಮದೇಯಾದ ಸಾಂಪ್ರದಾಯಿಕ ಆರ್ಥಿಕ ಮೂಲವನ್ನು ಉಳಿಸಿಕೊಂಡು, ಬೆಳೆಸಿಕೊಂಡು ಹಾಗೇ ಕಾಪಾಡಿಕೊಂಡು ಬಂದವರಲ್ಲಿ ಸಿಕ್ಲಿಗರ ಬುಡಕಟ್ಟು ಜನಾಂಗವು ಮುಖ್ಯವಾಗಿದೆ.

ನಮ್ಮ ದೇಶ ಅಲೆಮಾರಿ ಬುಡಕಟ್ಟು ಜನಾಂಗವೆಂದು ಹೆಸರಿಸಲ್ಪಟ್ಟಿದ್ದ ಭಾರತವಾಗಿದೆ. ಇಪ್ಪತ್ತೊಂದನೆಯ ಶತಮಾನದ ತಂತ್ರಜ್ಞಾನದ ಹಾಗೂ ಆಧುನಿಕ ಯುಗದಲ್ಲೂ ಸಹಿತ ಅಲೆಮಾರಿ ಬುಡಕಟ್ಟು ಜನಾಂಗವಾಗಿ ಸಿಕ್ಲಿಗರ ನೆಲೆಸಿದ್ದಾರೆ. ಆ ಎಲ್ಲಾ ಸಾಮಾಜಿಕ ಅನಿವಾರ್ಯತೆಗಳನ್ನು ಮಾರಿಕೊಂಡು ಬಂದ ಬುಡಕಟ್ಟುಗಳ ಜನಾಂಗವಾದ ಸಿಕ್ಲಿಗರ ಸಮುದಾಯದ ಆರ್ಥಿಕ ಬದುಕಿನಲ್ಲಿ ಸಂಭವಿಸಬಹುದಾದ ನೂರಾರು ರೂಪಾಂತರಗಳನ್ನು ಕಟ್ಟಿಕೊಡುವಲ್ಲಿ ನಾವು ನೂರಾರು ಸಮಸ್ಯೆ ಸವಾಲುಗಳನ್ನು ಎದುರಿಸಬೇಕಾಗಿದೆ. ಆ ಸಮಸ್ಯೆ ಸವಾಲುಗಳ ಸ್ಥಿತಿ-ಗತಿ ಅರಿತಾಗಲೇ ಮಾತ್ರ ಸಿಕ್ಲಿಗರ ಬದುಕಿನ ಆರ್ಥಿಕತೆ ತಿಳಿದುಕೊಳ್ಳಲು ಬರುತ್ತದೆ. ಸಿಕ್ಲಿಗರ ಸಮುದಾಯವು ಆರ್ಥಿಕತೆ ತಿಳಿದುಕೊಳ್ಳಲು ಬರುತ್ತದೆ. ಸಿಕ್ಲಿಗರ ಸಮುದಾಯವು ಆರ್ಥಿಕ ಬದುಕಿನಲ್ಲಿ ಸಂಭವಿಸಬಹುದಾದ ರೂಪಾಂತರಗಳಲ್ಲಿ ಅನೇಕಗಳನ್ನು ಹುಡುಕಿ ಸೂಕ್ಷ್ಮ ದಾಖಲೆಗಳನ್ನು ಒದಗಿಸಬೇಕಾದ ಅನಿವಾರ್ಯತೆಯಿದೆ. ಇಂತಹ ಕೊರತೆಗಳನ್ನು ತುಂಬಿಕೊಳ್ಳಲು ಸಾಕಷ್ಟು ಪ್ರಯತ್ನಿಸಬೇಕಾಗಿದೆ. ಇಲ್ಲಿ ಯಾವುದೇ ಆಕರಗಳನ್ನು ಬಳಸಿಕೊಳ್ಳದೇ ತಮ್ಮದೇ ಆದ ಸೃಷ್ಟಿಗೊಂಡ ಮೌಖಿಕ ಹಾಗೂ ಸ್ಥಳದಲ್ಲಿ ದೊರೆಯುವ ಆಕರಗಳನ್ನು ಬಳಸಿಕೊಂಡು ಆರ್ಥಿಕತೆಗೆ ಸಂಬಂಧಿಸಿದ ಚರಿತ್ರೆ ಕಟ್ಟಿಕೊಡಲು ಪ್ರಯತ್ನಿಸಲಾಗಿದೆ.

ಸಿಕ್ಲಿಗರ ಸಮುದಾಯವು ಅಲೆಮಾರಿ ಬುಡಕಟ್ಟು ಸಮುದಾಯವಾಗಿ ಗಟ್ಟಿಯಾಗಿ ನಿಂತಿದೆ. ಅಲೆಮಾರಿಗಳ ಮೂಲ ಪುರುಷ ಒಂದೇಯಾಗಿ ಕಂಡು ಬರುತ್ತಾರೆ. ಅಲ್ಲದೇ ಮೂಲ ಪುರುಷನ ಹುಟ್ಟು ಆಗುವುದು ಶಾಪದಿಂದಲೇ ಎನ್ನುವುದು ಚಾರಿತ್ರಿಕ ಸತ್ಯ ಸಂಗತಿಯಾಗಿದೆ. ಪೌರಾಣಿಕ ಚಾರಿತ್ರಿಕ ಶಾಪ ಮೂರು ನೆಲೆಗಳಲ್ಲಿ ಹುಟ್ಟಿದರೆ ಇಲ್ಲಿ ಸಿಕ್ಲಿಗರ ಸಮುದಾಯವು ಚಾರಿತ್ರಿಕವಾದ ಗುರುನಾನಕ್ ಗುರುಗೋವಿಂದಸಿಂಗ್‌ರ ಮೂಲಕ ಹುಟ್ಟನ್ನು ಪಡೆದುಕೊಂಡಿದೆ. ಹಾಗೇ ಸಿಕ್ಲಿಗರ ಬಚ್ಚರಸಿಂಗ್ ಎಂಬ ಸಾಂಸ್ಕೃತಿಕ ವೀರರ ಮೂಲಕ ಹುಟ್ಟನ್ನು ಪಡೆದುಕೊಂಡಿದೆ. ಆ ಮೂಲಕ ಹುಟ್ಟಿ ಬಂದ ನಾಯಕ ತನ್ನ ಸಮುದಾಯದ ಬೆಳವಣಿಗೆಗೆ ಕಾರಣವನ್ನಾಗಿಸಿಕೊಂಡಿರುತ್ತಾರೆ. ಇವರಿಗೆ ಇಂತಹ ಚಟುವಟಿಕೆಗಳನ್ನು ಆರ್ಥಿಕ ನೆಲೆ ಅನುಸರಿಸಿಕೊಂಡು ಬಂದಂತಾಗುತ್ತದೆ. ಇಂದಿನ ರಮ್ಯ ಜಗತ್ತಿನೊಳಗೆ ಸಿಲುಕಿರುವ ಅಲೆಮಾರಿಗಳ ಸ್ಥಿತಿಯಲ್ಲಿ ಮೂಲ ನೆಲೆಯನ್ನು ಹುಡುಕಿಕೊಂಡು ಹೋಗುತ್ತದೆ. ಹೀಗಾಗಿ ಅವರ ಹುಟ್ಟು ಮೂಲ ಸೃಷ್ಟಿ ಸದ್ಯದ ಪರಿಸ್ಥಿತಿಗೆ ಸಂಬಂಧಗಳು ಕಾಣಸಿಗುತ್ತವೆ. ಹೀಗಾಗಿ ಇಲ್ಲಿ ಸಂಬಂಧಗಳನ್ನು ನಿರೂಪಿಸಲು ಸಾಧ್ಯವಾಗುತ್ತದೆ. ಅಲೆಮಾರಿ ವೃತ್ತಿ ಬುಡಕಟ್ಟು ಸಮುದಾಯಗಳಲ್ಲಿ ಸಿಕ್ಲಿಗರ ಸಮುದಾಯವು ಸಹ ಅನುಸರಿಸಿಕೊಂಡು ಬಂದ ಒಂದೇ ಕುಟುಂಬದಲ್ಲಿ ವಾಸವನ್ನು ಕೈಗೊಂಡಿದ್ದಾರೆ.

ಸಿಕ್ಲಿಗರ ಸಮುದಾಯವು ಅವಿಭಕ್ತ ಕುಟುಂಬ ಆಗುವುದೇ ಮೂರು ಜನ ಸೇರಿ ಒಂದು ಕುಟುಂಬವಾಗಿದೆ. ಇಲ್ಲಿ ಯಾರೇ ಸಿಕ್ಲಿಗರ ಜನಾಂಗವಾಗಲಿ ಮದುವೆ ಮಾಡಿಕೊಂಡ ವ್ಯಕ್ತಿ ತಾನು ಅಂದೇ ಹೊರ ಬರಬೇಕು. ಹೆಂಡತಿಯ ಜೊತೆಗೆ ಹೊರಬಂದು ಸಂಸಾರವನ್ನು ಹೂಡಬೇಕು. ಹಿರಿಯರು ಸಹ ಮದುವೆಯಾದ ಕೂಡಲೇ ಹೊರ ಕಳಿಸುತ್ತಾರೆ. ನಂತರ ಮಕ್ಕಳಾದರೂ ಅವರನ್ನು ಬೆಳೆಸುತ್ತಾರೆ. ವಯಸ್ಸಿಗೆ ಬಂದ ತಕ್ಷಣವೇ ಮದುವೆ ಮಾಡಿ ಸಂಸಾರಕ್ಕೆ ಹೊರ ಕಳಿಸುತ್ತಾರೆ. ತಾನು ಸಂಸಾರ ಹೂಡಿದ ವ್ಯಕ್ತಿಯ ಎಲ್ಲಾದರೂ ದುಡಿದು ತಂದು ಹಾಕಬೇಕು. ಅಂದರೆ ಕಬ್ಬಿಣದ ಕೆಲಸವನ್ನು ಚಾಚು ತಪ್ಪದೇ ಮಾಡಿ ಪೂರ್ಣಗೊಳಿಸುತ್ತಾರೆ. ಆಸ್ತಿ ಎಂಬುದು ಸಿಕ್ಲಿಗರ ಜನಾಂಗಕ್ಕೆ ಇಲ್ಲವೇ ಇಲ್ಲ. ಅವರು ಕಬ್ಬಿಣ ಕೆಲಸಗಳನ್ನು ನಿರ್ವಹಿಸಿಕೊಂಡು ಬರುವ ಉಳಿ, ಸುತ್ತಿಗೆಯಂತಹ ಸಾಧನ ಉಪಕರಣಗಳೇ ಆಸ್ತಿಯಾಗಿವೆ. ಹೀಗಿದ್ದಾಗ ಆರ್ಥಿಕ ಸ್ಥಿತಿ ಏನಾಗಿದೆಂಬುದು ಮನವರಿಕೆಯಾಗದೆ ಇರದು. ತಮ್ಮ ಗುರು ಗುರುಗೋವಿಂದಸಿಂಗ್ ಕಬ್ಬಿಣದ ಸಳಕಿಯನ್ನು ಕೈಗೆ ನೀಡಿದ್ದರಿಂದ ಇದೇ ತಮ್ಮ ವೃತ್ತಿ ದೇವರು ಎಂದು ಭಾವಿಸಿದ್ದಾರೆ. ಲೋಕದ ಕಲ್ಯಾಣಕ್ಕಾಗಿಯೇ ತನ್ನ ಕಬ್ಬಿಣದ ಕೆಲಸ ಕೈಗೊಂಡಿದ್ದಾರೆ. ಹೀಗೆ ಅಲೆಮಾರಿ ಬುಡಕಟ್ಟು ಜನಾಂಗವಾದ ಸಿಕ್ಲಿಗರ ತಮ್ಮ ಯಾವುದೇ ದೈವಿ ಸಂಬಂಧಿ ಮೂಲ ಹೇಳಿಕೆಯ ಪ್ರಕಾರ ಸೇರಿಕೊಂಡು ಯಾರೋ ಹೇಳುವ

ಪುರಾಣ, ಕಥೆಗಳ ಹಿನ್ನೆಲೆಯಲ್ಲಿ ತಮ್ಮ ಆರ್ಥಿಕ ಜೀವನವನ್ನು ಕೈಗೊಂಡು ಪೂರ್ಣಗೊಳಿಸಲು ಪ್ರಯತ್ನಿಸುತ್ತಿದ್ದಾರೆ. ಇಂತಹ ಪರಾವಲಂಬಿತ ಹೇಳಿಕೆಗಳಿಂದ ಸಿಕ್ಲಿಗರ ಸಮುದಾಯ ತನ್ನ ಸಮಸ್ಯೆ ಅನುಭವಿಸಿಕೊಂಡು ಬರುತ್ತಲಿದೆ. ಯಾರದೇ ಸೇವೆಗಾಗಿ ಲೋಕದ ಒಳಿತಾಗಿಯೇ ಕಬ್ಬಿಣದ ಕೆಲಸ ಕೈಗೊಂಡರೆಂಬ ಐತಿಹಾಸಿಕ ಸತ್ಯ ತಿಳಿದು ಬರುತ್ತದೆ.

ಹೀಗೆ ಅಲೆಮಾರಿ ಬುಡಕಟ್ಟು ಸಮುದಾಯವಾದ ಸಿಕ್ಲಿಗರು ಭಾರತ ದೇಶದಲ್ಲಿ ಹೇಗೆ ತನ್ನ ಜೀವನವನ್ನು ಕಳೆದರು ಯಾವ ರೀತಿ ಬದುಕನ್ನು ಹಸನಗೊಳಿಸಿಕೊಂಡರೆಂಬ ಅಂಶವನ್ನು ಎತ್ತಿ ನೋಡಬೇಕಾಗಿದೆ. ರಾಜರ ಆಳ್ವಿಕೆಯ ಹೊತ್ತಿನಲ್ಲಿ ಭಾರತದ ಅನೇಕ ಸಂದಿಗ್ಧ ಪರಿಸ್ಥಿತಿಯಲ್ಲಿ ಸಮಾಜ ಅಂಚಿನಲ್ಲಿ ಸಿಕ್ಲಿಗರ ಸಮುದಾಯ ಹೇಗೆ ಬೆಳೆದು ಬಂದಿತು ಹೇಗೆ ಬದುಕಿದರು ಆ ಸಂದರ್ಭದಲ್ಲಿ ಇವರ ಉತ್ಪಾದನಾ ಪ್ರಮಾಣ ಹೇಗಾಗಿತ್ತೆಂಬುದನ್ನು ಅನೇಕ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಡಲು ಸಾಧ್ಯವಾಗದೇ ಹೋಗಬಹುದು. ಹೀಗಿದ್ದಾಗಲೂ ಸಹ ಈ ಸಮುದಾಯವೂ ಹಲವು ಚಿಂತನೆಗಳ ವಿಚಾರಧಾರೆಗಳಿಂದ ಪುಷ್ಟಿಯನ್ನು ನೀಡಿದ್ದಾರೆ. ಸಿಕ್ಲಿಗರ ಸಮುದಾಯ ತಮ್ಮ ವೃತ್ತಿಯಲ್ಲಿ ನಿಶ್ಚಿತವಾದ ಆದಾಯ ಮೂಲವೇ ಇಲ್ಲವಾಗಿದೆ. ಸ್ಥಳೀಯವಾಗಿ ಸಿಕ್ಲಿಗರ ಉತ್ಪಾದಕ ಕಚ್ಚಾ ವರ್ಗಗಳು ಆಶ್ರಯಿಸಿಕೊಂಡು ಜೀವನ ನಿರ್ವಹಿಸಬೇಕಾಗಿದೆ.

ನಾವು ಕರ್ನಾಟಕದಲ್ಲಿರುವ ಸಿಕ್ಲಿಗರ ಸಮುದಾಯದ ಆರ್ಥಿಕ ಮೂಲಗಳನ್ನು ಹುಡುಕಲು ಪ್ರಯತ್ನಿಸಬೇಕಾಗಿದೆ. ಅಲ್ಲದೇ ಅವು ಹೇಗೆ ಕರ್ನಾಟಕದಲ್ಲಿ ಬೆಳೆದು ತನ್ನ ಮೂಲ ಅಂತಸತ್ವದ ಗುಣವನ್ನು ಹೊಂದಿವೆಯೆಂಬುದನ್ನು ಪರಿಶೀಲಿಸಬೇಕಾಗಿದೆ. ಆರ್ಥಿಕ ಸ್ಥಿತಿ–ಗತಿಯನ್ನು ಅರಿಯಬೇಕಾದರೆ ಮೂಲ ಸಂಸ್ಕೃತಿ ಹಾಗೂ ಚಾರಿತ್ರಿಕ ಅನಿವಾರ್ಯತೆಗಳನ್ನು ಗಮನಿಸುವುದು ಸೂಕ್ತವಾಗಿದೆ.

೧. ಧಾರ್ಮಿಕ ಸಂಬಂಧಿ

೨. ಕರಕುಶಲ ಸಂಬಂಧಿ

೩. ಪಾರಂಪರಿಕ ಮೂಲ ಸಂಬಂಧಿ

೪. ಬೇಟೆ, ಪಶುಪಾಲನೆ, ಪ್ರಾಣಿ ಸಂಪತ್ತು ಸಂಬಂಧಿ

ಈ ರೀತಿಯಾಗಿ ನಾಲ್ಕು ವಿಭಾಗಗಳನ್ನಾಗಿ ಮಾಡಿಕೊಂಡು ಸಿಕ್ಲಿಗರ ಸಮುದಾಯವು ತಾವು ಆರ್ಥಿಕ ಸ್ಥಿತಿಗಳನ್ನು ಕಂಡುಕೊಳ್ಳಲು ಪ್ರಯತ್ನಿಸಬೇಕಾದ ಸಂಗತಿಗಳು ಇವಾಗಿವೆ. ಇಂತಹ

ವಿಂಗಡನೆ ಮಾತ್ರ ಸಿಕ್ಲಿಗರ ಜನಾಂಗಕ್ಕೆ ಮಾತ್ರ ಅನ್ವಯಿಸುತ್ತದೆ. ಕರ್ನಾಟಕದಲ್ಲಿರುವ ಬಹುತೇಕ ಬುಡಕಟ್ಟು ಸಮುದಾಯವು ಚೌಕಟ್ಟಿಗೆ ಹೊಂದಿದ ಅಥವಾ ಹೊಂದದೇ ಇರುವ ಅನೇಕ ಬುಡಕಟ್ಟುಗಳಲ್ಲಿ ಕಾಣಸಿಗುತ್ತವೆ. ಆದರೆ ಬುಡಕಟ್ಟುಗಳು ಅವೆಲ್ಲಕ್ಕಿಂತ ಭಿನ್ನವಾದ ಆರ್ಥಿಕ ಸ್ಥಿತಿಯನ್ನು ಸಿಕ್ಲಿಗರ ಜನಾಂಗದಲ್ಲಿ ಕಾಣುತ್ತೇವೆ.

೧. ಧಾರ್ಮಿಕ ಸಂಬಂಧಿ

ಇಲ್ಲಿ ಮುಖ್ಯವಾಗಿ ಕಾಣುವ ಧಾರ್ಮಿಕ ಸಂಬಂಧದಲ್ಲಿ ಗುರುನಾನಕ್ ದೈವಿ ಸಂಬಂಧಿ ಹೊಂದಿದವರು ಯಾವುದೇ ಧರ್ಮಗಳಿಗೆ ಹೋಲದೆ ಅನುಭಾವಿ ಪಂಥಗಳಿಂದ ವೀರಸಾಂಸ್ಕೃತಿಕ ನಾಯಕರಿಂದ ಧರ್ಮಗುರುಗಳ ಆಧಾರದ ಮೇಲೆ ಇಟ್ಟುಕೊಂಡು ಬಂದವರು ಸಿಕ್ಲಿಗರ ಜನಾಂಗ. ಹೀಗಾಗಿ ಧಾರ್ಮಿಕ ಸಂಬಂಧಿಯ ವೃತ್ತಿ ಕುಲಕಸಬು ಕಬ್ಬಿಣದ ಕೆಲಸಗಳಲ್ಲಿಯೇ ಭಾಗಿಯಾಗಿದ್ದಾರೆ.

೨. ಕರಕುಶಲ ಸಂಬಂಧಿ

ಸಿಕ್ಲಿಗರ ಸಮುದಾಯ ಪಾರಂಪರಿಕವಾಗಿ ಬಂದ ತಮ್ಮ ಮೂಲ ಕಬ್ಬಿಣದ ಕೆಲಸವನ್ನು ಕೈಗೊಂಡು ಅವುಗಳಲ್ಲಿ ಕರಕುಶಲ ವೃತ್ತಿಗಳಿಗೆ ಮೀಸಲಾಗಿದ್ದಾರೆ. ಸಾಂಪ್ರದಾಯಿಕವಾಗಿ ಹಳ್ಳಿಜನ ಸಮುದಾಯಕ್ಕೆ ಬೇಕಾಗುವ ಅವರಿಗೆ ತುಂಬಾ ಉಪಯುಕ್ತವಾಗುವ ಕೃಷಿ-ಗೃಹ ಹಾಗೂ ಇತರ ಬಹುಪಯೋಗಿ ಉಪಕರಣಗಳನ್ನು ಕೈಗೊಂಡು ಕರಕುಶಲ ಕಲೆಗಳ ಮೂಲಕ ಆರ್ಥಿಕ ಸ್ಥಿತಿ ಕಾಣಬಹುದು.

೩. ಪಾರಂಪರಿಕ ಮೂಲ

ಸಿಕ್ಲಿಗರ ಬುಡಕಟ್ಟು ಸಮುದಾಯ ಆರ್ಥಿಕವಾಗಿ ನಮಗೆ ಪ್ರಬಲವಾಗುವುದು ಇಲ್ಲಿಯೇ ಏಕೆಂದರೆ ಅವರಿಗೆ ಪ್ರಾರಂಭದ ಕಾಲದಿಂದಲೂ ಇಂದಿನತನಕ ಅದೇ ವೃತ್ತಿ ಕುಲಕಸಬುಗಳನ್ನು ತಯಾರಿಸಿಕೊಂಡು ಬರುತ್ತಾರೆ. ಸಮಾಜದ ಹಿತದೃಷ್ಟಿಯಿಂದ ಕಾಪಾಡಿಕೊಂಡು ಬರಲು ಶ್ರಮಿಸಿದ್ದಾರೆ. ಊರೂರುಗಳನ್ನು ಸುತ್ತಾಡಿ ಸಂತೆಗಳಿಗೆ ಹೋಗಿ ಪ್ರಾದೇಶಿಕವಾಗಿ ಏನು ಹೆಚ್ಚು ಬೇಡಿಕೆಯನ್ನು ಪಡೆದುಕೊಂಡಿರುತ್ತದೆಯೋ ಅದನ್ನೇ ಹೊಂದುವುದಾಗಿದೆ. ಪಾರಂಪರಿಕವಾದ ಕಬ್ಬಿಣದ ಕೆಲಸ ಕೈಗೊಂಡು ಮೈಸೂರು-ಬೆಂಗಳೂರಲ್ಲಿ ಏಳೆನೀರು ಕೊಚ್ಚಲು ಮಚ್ಚು ತಯಾರು ಮಾಡಿದರೆ ಉತ್ತರ ಕರ್ನಾಟಕದಲ್ಲಿ ಚಾಕು ಚೂರಿ ಕುಡಗೋಲನ್ನು ತಯಾರಿಸುತ್ತಾರೆ. ಗೃಹ-

ಕೃಷಿಗಳಿಗೆ ಬೇಕಾದ ಹಲವು ಕಬ್ಬಿಣದ ವಸ್ತುಗಳನ್ನು ತಯಾರಿಸಿಕೊಂಡು ಸಂತೆಯಲ್ಲಿ ಮಾರಾಟ ಮಾಡುತ್ತಾರೆ. ಇಲ್ಲವೇ ಮಾರಾಟಗಾರರ ಅಂಗಡಿಯವರಿಗೆ ಕೊಡುತ್ತಾರೆ. ಇಲ್ಲಿ ಆರ್ಥಿಕ ಸುಧಾರಣೆ ಸ್ಥಿತಿ ಹೆಚ್ಚಾಗಲು ಕಾರಣವಾಗುತ್ತದೆ. ಪಾರಂಪರಿಕ ಮೂಲ ಕಸುಬಿನಲ್ಲಿ ಪ್ರಾದೇಶಿಕವಾಗಿ ಭಿನ್ನತೆ ಇರುವುದನ್ನು ಕಾಣುತ್ತೇವೆ. ಜಿಲ್ಲಾವಾರು ಮತ್ತು ತಾಲೂಕಾವಾರು ಹಾಗೂ ನಗರ ಪ್ರದೇಶಗಳಲ್ಲಿ ಕುಲಕಸುಬಿನ ಪಾರಂಪರಿಕ ಜ್ಞಾನವನ್ನು ಯಥಾವತ್ತಾಗಿಯೇ ಉಳಿಸಿಕೊಂಡು ಬಂದಿರುವುದನ್ನು ಕಾಣುತ್ತೇವೆ. ಕಿಂಚಿತ್ತು ಬದಲಾವಣೆ ಹೊಂದದ್ದಕ್ಕೆ ಕಾರಣ ಅವರ ಕುರಿತು ಸರ್ಕಾರ ಗಮನ ಕೊಡದೆ ಇರುವುದು. ಇಡಿ ಕರ್ನಾಟಕ ಹುಡುಕಿದರೂ ೧,೮೭೩ ಜನಸಂಖ್ಯೆ ಇರುವ ಇವರ ಸಮುದಾಯ ಯಾವ ರಾಜಕೀಯ ಪಕ್ಷಗಳಿಗೆ ಇವು ಓಟ್ ಬ್ಯಾಂಕ್ ಆಗದೆ ಇರುವುದು. ಹಾಗಾಗಿ ಇವರಿಗೆ ಯಾವುದೇ ಕಾನೂನಿನ ಅರಿವು ಇಲ್ಲದೆ ಇರುವುದು ಕಾಣುತ್ತೇವೆ.

ತಾಲೂಕ ಮಟ್ಟದಲ್ಲಿರುವ ಇವರ ಪಾರಂಪರಿಕ ಜ್ಞಾನವು ಮೂಲ ಜ್ಞಾನದಂತೆಯೆ ಬದಲಾವಣೆ ಹೊಂದದೆ ಮುಂದುವರೆಯುತ್ತಿದೆ.

ತಾಲೂಕಾ ಮಟ್ಟದಲ್ಲಿ

೧. ಈಳಿಗೆ, ಬತಾಯಿ, ಕಡಚಿ, ಕಬ್ಬಿಣ ಬುಟ್ಟಿ, ಸೇರು, ಪಾವು ಮುಂತಾದವುಗಳು

೨. ಕೃಷಿಗೆ ಸಂಬಂಧಪಟ್ಟ ಸಾಮಾನುಗಳಾದ ಕುಡ, ಕಬ್ಬಿಣದ ನೇಗಿಲು, ಎತ್ತಿನ ಬಂಡಿಯ ಗಾಲಿಗಳು, ಕೂರಿಗೆಯ ಹಲ್ಲುಗಳು ಮುಂತಾದವುಗಳ ತಯಾರಿಕೆ ಹಾಗೂ ದುರಸ್ಥಿ ಮಾಡುವ ಕೆಲಸ ಮಾಡುತ್ತಾರೆ.

ಜಿಲ್ಲಾ ಮಟ್ಟದಲ್ಲಿ

೧. ಝುಲಡಿ, ಜಾರ, ಅಡುಗೆ ಮಾಡುವ ಸೀಕಡಿ, ಅಡುಗೆ ಮನೆಯ ಅಗತ್ಯ ವಸ್ತುಗಳನ್ನು ಇಟ್ಟುಕೊಳ್ಳಲು ಬಾಂಡೆ ಸ್ಟ್ಯಾಂಡ್

೨. ಬಕೀಟು, ಚೂರಿ, ಚಾಕು, ಮಚ್ಚು, ಲಾಂಗು. ತಲವಾರ್ ಹಾಗೂ ಕಬ್ಬಿಣದ ರಥವು ಸಹ ನಿರ್ಮಾಣ ಮಾಡುತ್ತಾರೆ.

ನಗರ ಮಟ್ಟದಲ್ಲಿ

೧. ಮಹಾನಗರ ಪ್ರದೇಶಗಳಲ್ಲಿ ಕಟ್ಟಡ ನಿರ್ಮಾಣವು ಬಹಳಷ್ಟು ಇರುವುದರಿಂದ ಬಾಗಿಲಿಗೆ ಬಿಗಿ ಭದ್ರತೆಯನ್ನು ಒದಗಿಸಲು ಗ್ರಿಪ್‌ರುಗಳನ್ನು ತಯಾರಿಸುತ್ತಾರೆ.

೨. ಬೆಂಗಳೂರಿನ ಯಶವಂತಪುರ ಪ್ರದೇಶದಲ್ಲಿ ಬಾಗಿಲುಗಳಿಗೆ ಹಾಕುವ ಜಾಯಿಂಟ್ ಕ್ಲಿಪ್, ಕೊಂಡಿಗಳು ಇಂದಿನ ಅಗತ್ಯ ವಸ್ತುಗಳ ಬೇಡಿಕೆಯನ್ನು ಪೂರೈಸುವವರಾಗಿದ್ದಾರೆ.

೩. ತಾಲೂಕು, ಜಿಲ್ಲಾ, ಮಟ್ಟದಲ್ಲಿ ಬದುಕುವವರಿಗಿಂತಲೂ ಮಹಾನಗರಗಳಲ್ಲಿ ವಾಸವಾಗಿರುವಂತಹ ಸಿಕ್ಲಿಗರು ತಮ್ಮ ಮೂಲ ಪಾರಂಪರಿಕ ಜ್ಞಾನದ ಜೊತೆಗೆ ಆಧುನಿಕತೆಗೆ ಕಬ್ಬಿಣದ ವಸ್ತುಗಳನ್ನು ತಯಾರಿಸಿ ತಮ್ಮ ದಿನದ ಬದುಕಿನ ನಿರ್ವಹಣೆಯನ್ನು ಮಾಡಿಕೊಳ್ಳುವ ಸಾಮರ್ಥ್ಯ ಹೊಂದಿದವರಾಗಿದ್ದಾರೆ.

೪. ಬೇಟೆ ಪಶುಪಾಲನೆ, ಪ್ರಾಣಿ ಸಂಪತ್ತು

ಸಿಕ್ಲಿಗರು ಸಮುದಾಯವು ಕಬ್ಬಿಣದ ಕುಲಕಸಬನ್ನು ಕೈಗೊಂಡಾಗಲೂ ಸಹಿತ ಇನ್ನಿತರ ಯಾವುದೇ ರೀತಿಯ ಆರ್ಥಿಕ ಸುಧಾರಣೆಗೆ ಒಂದು ಕಾರ್ಯವನ್ನು ಕೈಗೊಂಡಿಲ್ಲ ಆದರೂ ಅಲ್ಲಲ್ಲಿ ಬೆರಳೆಣಿಕೆಯ ಮಾತ್ರ ನನಗೆ ದೊರಕುವ ಅಂಶ ಕಂಡು ಬರುತ್ತದೆ. ಪ್ರಾಣಿ ಸಂಪತ್ತು ಕ್ವಚಿತ್ತಾಗಿ ಕಾಣಸಿಗುತ್ತದೆ. ಕತ್ತೆ ಸಾಕಾಣಿಕೆ ಮಾಂಸವನ್ನು ತಯಾರಿಸಲು ಮಾಂಸದ ಅಡುಗೆಗಾಗಿ ಹಂದಿ, ಕುರಿ, ಕೋಳಿಗಳನ್ನು ಸಾಕುವುದುಂಟು. ಅಲೆಮಾರಿ ಕುಟುಂಬವಾದ್ದರಿಂದ ಸಂಚಾರ ಸೌಕರ್ಯಕ್ಕಾಗಿ ಕತ್ತೆಗಳನ್ನು ಸಾಕುವುದುಂಟು. ಈ ಮೂಲಕ ಆರ್ಥಿಕತೆಯ ಎಳೆ ಸಿಗಬಹುದು. ಕಬ್ಬಿಣದಂತಹ ಕೆಲಸವು ಬಿಡುವಿಲ್ಲದ ಹೊತ್ತಿನಲ್ಲಿ ಯಾವ ಕಾರಣಕ್ಕೂ ಏನನ್ನು ಕೇಳದೇ ಇರುವ ಹೊತ್ತಿನಲ್ಲೂ ಕಾಡ ಹಂದಿಯನ್ನು ಮತ್ತಿತರ ಚಿಕ್ಕಪುಟ್ಟ ಪ್ರಾಣಿಗಳನ್ನು ಬೇಟೆಯಾಡಿ ಮಾಂಸವನ್ನು ಆಹಾರಕ್ಕಾಗಿ ಬಳಸುತ್ತಿದ್ದರು. ಕಾಡ ಹಂದಿಗಳನ್ನು ತಂದು ಪಾಲು ಹಾಕಿಕೊಂಡು ಎಲ್ಲರೂ ಹಂಚಿಕೊಂಡು ತಿನ್ನುತ್ತಾರೆ. ಈ ಗುಂಪಿಗೆ ಸೇರಿದ ಕೆಲವರು ಮಾತ್ರ ಈ ಕೆಲಸವನ್ನು ಕೈಗೊಂಡಿದ್ದಾರೆ.

ಈ ಮೇಲಿನ ವಿಂಗಡಣೆಗಳು ಬಹಳಷ್ಟು ಸೂಕ್ಷ್ಮವಾದ ಆಲೋಚನೆಗಳನ್ನು ಚಿಂತನೆಗಳನ್ನು ಒಳಗೊಂಡಿವೆ. ಬುಡಕಟ್ಟು ಸಿಕ್ಲಿಗರ ಸಮುದಾಯವು ಅವುಗಳ ಮೂಲಕ ಆಧುನಿಕ ಸ್ಥಿತಿಗತಿಗಳನ್ನು ಗಮನಿಸಲು ಇಷ್ಟೊಂದು ಅಂಶಗಳು ಪೂರಕವಾಗಿವೆ. ಇಂತಹ ಸಮುದಾಯಗಳ ಕಸಬುಗಳನ್ನು ಕೈಗೊಂಡು ಶ್ರಮವಹಿಸಿ ಕಷ್ಟಪಟ್ಟು ತಯಾರಿಸಿದ ವಸ್ತುಗಳನ್ನು ಅಂಗಡಿಗಳಿಗೆ ಕೊಡುವುದರಿಂದ ಇವರಿಗೆ ಎರಡು ಅಥವಾ ಐದು ರೂಪಾಯಿ ಲಾಭವಾದರೆ ಇದರ ಮೂರುಪಟ್ಟು ಅಂಗಡಿಯವನು ಲಾಭ ಗಳಿಸುತ್ತಾನೆ. ಸಂತೆಯಲ್ಲಿ ಹೋದಾಗ ಇವರಿಗೆ ಲಾಭವಾಗುತ್ತದೆ. ಉಳಿದಂತೆ ಇಲ್ಲ. ಇವರು ತಯಾರಿಸುವ ವಸ್ತುಗಳನ್ನು ಬಂಡವಾಳಶಾಹಿಗಳು ಉತ್ಪನ್ನ ಮಾಡಿ ಕಡಿಮೆ ಬೆಲೆಗೆ ಕೊಡುವುದರಿಂದ ಇವರಿಗೆ ನಷ್ಟವುಂಟಾಗುತ್ತದೆ. ಭಾರತದೇಶದ ಅಸಮಾನತೆಯ ಸಮಾಜವು

ಆರ್ಥಿಕ ಅಧಿಕಾರಿಗಳನ್ನು ಯಾವವು ಹೊಂದದೇ ಇಂತಹ ಬುಡಕಟ್ಟು ಸಮುದಾಯಗಳ ಪರಂಪರೆಗೆ ಉತ್ತಮವಾಗಿಸುವ ಅವಕಾಶಗಳು ತಪ್ಪಿ ಹೋಗಿವೆ. ಆಧುನಿಕ ಉದ್ಯಮಗಳಿಗೆ ಉತ್ತಮ ಅವಕಾಶಗಳು ದೊರೆಯುವಂತಾಗಿವೆ.

ಸಿಕ್ಲಿಗರು ಸಮುದಾಯದ ಸತ್ಯ-ಪ್ರದರ್ಶನ ಕಲೆಗಳಿಗೆ ಬೆಲೆ ಇಂದು ಸಮೂಹ ಮಾಧ್ಯಮಗಳು ಕೊಡುತ್ತಿಲ್ಲ. ಹಂದಿಯನ್ನು ತಂದು ತಾವೆಲ್ಲರೂ ಸೇರಿಕೊಂಡು ಪಾಲು ಹಂಚಿಕೊಳ್ಳುತ್ತಾರೆ. ಹಂದಿಯನ್ನು ತಂದ ಕಡೆ ಅವರು ಮುಖ ಮಾಡಿ ಕೂಡಲಾರರು ಮತ್ತು ಮಲಗಲಾರರು. ಹಂದಿಯನ್ನು ಸಾಕಣಿಕೆ ಮತ್ತು ಆಹಾರವನ್ನು ಮಾಡಿಕೊಂಡು ಯಾವಾಗಲೋ ಇಂತಹ ಪ್ರಕ್ರಿಯೆಯಲ್ಲಿ ತೊಡಗುವರು. ಸಿಕ್ಲಿಗರ ಬುಡಕಟ್ಟುಗಳ ಅಲೆಮಾರಿಗಳು ಚರಿತ್ರೆಯುದ್ಧಕ್ಕೂ ಅತ್ಯಂತ ಅನಿಶ್ಚಿತೆಯಿಂದ ಕೂಡಿದ ಆರ್ಥಿಕ ಮೂಲಗಳನ್ನು ನಂಬಿಕೊಂಡು ಬಂದ ಜನಾಂಗಗಳಾಗಿವೆ. ಅದೇ ದೊರೆಯದಿದ್ದಾಗ ಪರಿಸ್ಥಿತಿ ಗಂಭೀರವಾಗುತ್ತದೆ. ಸಿಕ್ಲಿಗರು ಬುಡ ಕಟ್ಟುಗಳೆಂದು ಕರೆಯಿಸಿಕೊಂಡ ಇಂತಹ ಎಲ್ಲಾ ಬುಡಕಟ್ಟು ಜನಾಂಗಗಳಿಗೆ ಅನಿಶ್ಚಿತ ಆದಾಯ ತಂದು ಕೊಡುವ ಯಾವುದೇ ಈ ಸ್ಥಿರಾಸ್ತಿಗಳು ದೊರೆತಿಲ್ಲ. ಇಂತಹ ಹೊತ್ತಿನಲ್ಲಿ ಆರ್ಥಿಕವಾಗಿ ಅಲೆಮಾರಿಗಳಾದ ಈ ಜನಾಂಗ ಅನಿವಾರ್ಯವಾಗಿ ಉತ್ಪಾದಕ ಸಮುದಾಯಗಳನ್ನು ನೋಡಬೇಕಾದ ಅನಿವಾರ್ಯತೆಯಿದೆ. ಇವತ್ತಿನ ಅನೇಕ ಸಿಕ್ಲಿಗರ ಕುಟುಂಬ ಅಲೆಮಾರಿಗಳಾಗಿ ಹೋದರು ಮೈಸೂರು ಬೆಂಗಳೂರುಗಳಲ್ಲಿ ನೆಲೆ ನಿಲ್ಲಲು ಪ್ರಾರಂಭಿಸಿದ್ದಾರೆ.ಹಾಗೆ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಜನಾಂಗದಲ್ಲಿ ತುಂಬ ಶೋಚನೀಯ ಸ್ಥಿತಿಯಲ್ಲಿದ್ದಾರೆ. ಅದೇ ಕೊಪ್ಪಳದ ದೇವರಾಜ ಅರಸು ಕಾಲೋನಿಯಲ್ಲಿ ಹಿರಿಯ ಸಿಕ್ಲಿಗರ ಜನಾಂಗದ ವ್ಯಕ್ತಿಗೆ ಸರ್ಕಾರವೇ ಭೂಮಿಯನ್ನು ನೀಡಿತ್ತು. ಅನಿವಾರ್ಯ ಕಾರಣದಿಂದಾಗಿ ಮಾರಾಟ ಮಾಡಿದ್ದಾನೆ. ಆರ್ಥಿಕ ಸ್ಥಿತಿಗತಿಗಳಿಂದ ಅನೇಕ ಸಮಸ್ಯೆಗಳು ಉಂಟಾಗಿವೆ. ಹಾಗೇ ಹುಬ್ಬಳ್ಳಿ ಹಾಗೂ ಶಿಗ್ಗಾಂವ್‌ದಲ್ಲಿ ಸುಧಾರಿಸಿಕೊಂಡ ಸಿಕ್ಲಿಗರ ತಮ್ಮ ಆರ್ಥಿಕ ದೃಷ್ಟಿಯ ಅಸಮತೋಲನದ ಬಗ್ಗೆ ಯೋಚಿಸಿ ಉದ್ಯೋಗಗಳಲ್ಲಿ ವೃತ್ತಿಗಳಲ್ಲಿ ಪ್ರಸ್ತುತ ಬೇಕಾಗುವ ವಸ್ತುಗಳ ಬಗ್ಗೆ ಚಿಂತಿಸಿ ತಯಾರು ಮಾಡುತ್ತಿದ್ದಾರೆ. ಇಂದಿನ ಅನೇಕ ಅಲೆಮಾರಿಗಳು ನೆಲೆ ನಿಲ್ಲಲು ಪ್ರಯತ್ನಿಸುತ್ತಿದ್ದಾರೆ. ಹಾಗೇ ನಿಲ್ಲಲು ಸಾಧ್ಯವಾಗಿದೆ. ಈ ಹೊತ್ತಿನ ಆಧುನಿಕತೆಯ ತೀವ್ರ ಹೋರಾಟದಲ್ಲಿ ಅನುಸಂಧಾನವು ಆಗುತ್ತಿಲ್ಲ. ಆ ಸ್ಪರ್ಧೆಯ ವೇಗಕ್ಕೆ ಸಿಕ್ಲಿಗರ ಸಮುದಾಯವು ಆರ್ಥಿಕತೆಯಿಂದ ನಿಲ್ಲಲು ಸಾಧ್ಯವಾಗುತ್ತಿಲ್ಲ. ಈ ಅಲೆಮಾರಿ ಜನಾಂಗದ ವರ್ತಮಾನದ ಸ್ಥಿತಿಗತಿಗಳು ಸಾಮಾಜಿಕವಾದ ಸಮಾನ ಹಂಚಿಕೆಯ ಕೆಲಸವಾಗಬೇಕಾಗಿದೆ. ಸಿಕ್ಲಿಗರ ಹಂತದ ಬುಡಕಟ್ಟು ಜನಾಂಗ ಸಮಸ್ಯೆಗಳಿಗಿಂತ ಹೆಚ್ಚಾಗಿ ಸಂಕೀರ್ಣವಾಗಿ ಕಂಡು ಬರುತ್ತವೆ.

ಸಿಕ್ಲಿಗರ ಬುಡಕಟ್ಟು ಜನಾಂಗ ಸಹಿತ ಶೈಕ್ಷಣಿಕ ಸಾಮಾಜಿಕ ಆರ್ಥಿಕವಾದ ಹಾಗೂ ರಾಜಕೀಯವಾದ ಸೌಲಭ್ಯಗಳನ್ನು ಪಡೆಯಬೇಕಾದರೆ ಅದಕ್ಕೆ ಬೇಕಾಗುವ ಎಲ್ಲಾ ಅರ್ಹತೆಗಳು ಸಮಾನವಾದ ಹಿನ್ನೆಲೆಯಲ್ಲಿ ಹಂಚಿಕೊಳ್ಳಬೇಕಾದ ಅನಿವಾರ್ಯತೆಯಿದೆ. ಜಾತಿ ಪ್ರಮಾಣ ಪತ್ರವನ್ನು ಅಲ್ಲಿನ ಸ್ಥಳೀಯ ಅಧಿಕಾರಿಗಳು ನೀಡುತ್ತಿಲ್ಲ. ಸಿಖ್ಖರಂತೆ ವೇಷಭೂಷಣ ನೋಡಿಕೊಂಡು ಸರ್ದಾರ್‌ಜಿ ಎಂದೇ ಸಂಭೋದಿಸುತ್ತಾರೆ. ಹೀಗೆ ಸಿಖ್‌ರು ಸಿಖ್ಖರಾಗಿ ಕೊಡುತ್ತಾರೆ ವಿನಃ ಸಿಕ್ಲಿಗರ ಎಂಬ ಜಾತಿ ಪ್ರಮಾಣ ಪತ್ರ ನೀಡುತ್ತಿಲ್ಲ.ಮೀಸಲಾತಿ ಒಳಮೀಸಲಾತಿ ಬಗ್ಗೆ ಹುಡುಕಾಡುವ ಸರ್ಕಾರ ಇತ್ತ ಕಡೆ ಗಮನ ಹರಿಸಿ ಇವರಿಗೂ ಮೀಸಲಾತಿ ಒಳಮೀಸಲಾತಿಗಳಲ್ಲಿ ಬದುಕುವ ಸಂಕಷ್ಟದ ಅಪಾಯದಿಂದ ಪಾರು ಮಾಡಬೇಕಾಗಿದೆ. ಹೀಗಾಗಿ ಆರ್ಥಿಕ ಸ್ಥಿತಿ ಗತಿಗಳನ್ನು ನೋಡಿಕೊಂಡಾಗ ಸಿಕ್ಲಿಗರ ಸಮುದಾಯ ಅತ್ಯಂತ ಶೋಚನೀಯ ಸ್ಥಿತಿಯನ್ನು ಅನುಭವಿಸಬೇಕಾಗಿದೆ.ಇತ್ತ ಗಂಭೀರವಾದ ಆಲೋಚನೆ ಪರಾಮರ್ಶನೆಯ ಕಾಲ ಬಂದೊದಗಿದೆ.

ಆಕರ ಗ್ರಂಥಗಳು

೧. ಡಾ. ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು ಸಂ.– ೧ ಕನ್ನಡ ಸಂಸ್ಕೃತಿ ಇಲಾಖೆ – ಬೆಂಗಳೂರು–೧೯೯೦

೨. ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಅಸ್ಪೃಶ್ಯತೆ, ಡಾ. ಎಂ. ಚಿದಾನಂದಮೂರ್ತಿ, ಕರ್ನಾಟಕ ವಿ.ವಿ.ಧಾರವಾಡ – ೧೯೮೫

೩. ದಲಿತವರ ಬದುಕು ಮತ್ತು ಸಂಸ್ಕೃತಿ, ಡಾ. ಅರ್ಜುನ ಗೊಳಸಂಗಿ, ವಿಮೋಚನಾ ಪ್ರಕಾಶನ, ಅಥಣಿ–೨೦೦೦

೪. ಸುವರ್ಣ ಜಾನಪದ, ಕೃಷ್ಣಮೂರ್ತಿ ಹನೂರ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು –೧೯೯೮

೫. ಅಲೆಮಾರಿಗಳ ಸ್ಥಿತಿಗತಿ, ಡಾ. ಸ.ಚಿ. ರಮೇಶ್,ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ– ೨೦೦೫

೬. ಬುಡಕಟ್ಟು ಕುಲಕಸಬುಗಳು, ಡಾ. ಕೆ.ಎಂ. ಮೈತ್ರಿ, ಪ್ರಸಾರಾಂಗ, ಕ.ವಿವಿ. ಹಂಪಿ– ೨೦೦೨

೭. ಕರ್ನಾಟಕದ ಬುಡಕಟ್ಟುಗಳು ಸಂ–೨, ಸಂ. ಡಾ. ಎಚ್.ಜೆ. ಲಕ್ಕಪ್ಪಗೌಡ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು –೨೦೦೦

ಅಧ್ಯಾಯ: ಏಳು

ಆಧುನಿಕ ಸಂದರ್ಭದಲ್ಲಿ ಸಿಕ್ಲಿಗರು

ಅಧ್ಯಾಯ: ಏಳು

ಆಧುನಿಕ ಸಂದರ್ಭದಲ್ಲಿ ಸಿಕ್ಲಿಗರು

ಇಂದಿನ ದಿನಗಳಲ್ಲಿ ನಾವೆಲ್ಲ ಅತ್ಯಂತ ಸಂಕೀರ್ಣವಾದ ಸ್ಥಿತ್ಯಂತರ ಸ್ಥಿತಿಯಲ್ಲಿ ಬದುಕನ್ನು ಕಾಣುತ್ತಲಿದ್ದೇವೆ. ನಮ್ಮ ಮೇಲೆ ಜವಾಬ್ದಾರಿ ಜೊತೆಗೆ ಒತ್ತಡಗಳು ಇಂದು ದಿನದಿನಕ್ಕೆ ಹೆಚ್ಚಾಗುತ್ತಾ ನಡೆದಿವೆ. ಇಂತಹ ಒತ್ತಡಗಳಿಗೆ ಕಾರಣವಾದದ್ದು ಜಾಗತೀಕರಣವಾಗಿದೆ. ಜಾಗತೀಕರಣವೆಂಬ ಹೆಸರಿನ ಮೂಲಕ ಪೆಡಂಬೂತ ಹೊಕ್ಕರೆ ಒಳಗಿನಿಂದಲೇ ನಮ್ಮ ರಾಜಕಾರಣವೆಂಬ ಕುಲಕಸಬುಗಳನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ಈ ಹೊತ್ತಿನ ಸಂದರ್ಭದಲ್ಲಿ ನಾವು ನಮ್ಮ ಬುಡಕಟ್ಟು ಅಲೆಮಾರಿ ಸಮುದಾಯಗಳನ್ನು, ಕಲೆಗಳನ್ನು ವರ್ತಮಾನದ ಕಾಲದಲ್ಲಿಟ್ಟು ಹೇಗೆ ಸಹ್ಯವಾಗಿಸಿ ಕೊಳ್ಳಬೇಕೆಂಬ ಆಲೋಚನೆಯಲ್ಲಿ ಗಂಭೀರವಾದ ಚಿಂತನೆ ಮಾಡಬೇಕಾಗಿದೆ. ಆಲೋಚನೆ ಚಿಂತನೆ ವರ್ತಮಾನದ ಗಮನದಲ್ಲಿಟ್ಟುಕೊಂಡು ನಾವು ನಮ್ಮ ಚರಿತ್ರೆ, ನಮ್ಮ ಸಂಸ್ಕೃತಿ, ಚಿಂತನೆಗಳು ಹೇಗೆ ಬೆಳೆದು ಬಂದವೆಂಬುದನ್ನು ಗಮನಿಸಬೇಕು. ಈ ಹಿನ್ನೆಲೆಯಲ್ಲಿಯೇ ಇವತ್ತಿನ ದಿನಮಾನಗಳಲ್ಲಿ ಸಿಕ್ಲಿಗರ ಸಮುದಾಯ ಸ್ಥಿತಿಗತಿ ಏನಾಗಿದೆ ಎಂಬುದರ ಕುರಿತು ಚಿಂತಿಸಬೇಕಾಗಿದೆ. ಸಿಕ್ಲಿಗರ ಬುಡಕಟ್ಟು ಜನಾಂಗವು ಸಾಮಾಜಿಕ ಸ್ಥಾನಮಾನಗಳ ನಿರ್ಣಾಯಕವಾದ ಜೀವನವನ್ನು ಕಾಣುವುದು ಮುಖ್ಯವಾಗಿದೆ. ಅಲೆಮಾರಿ ಕುಟುಂಬ ವಾಸ್ತವ ಮತ್ತು ವೈರುಧ್ಯಗಳ ನಡುವೆ ತೀವ್ರಗತಿಯಲ್ಲಿವೆ.

ಖಾಸಗೀರಣ, ಉದಾರೀಕರಣ ಹಾಗೂ ಜಾಗತೀಕರಣ ಚಲನವಲನಗಳನ್ನು ನೋಡುತ್ತೇವೆ. ಆದರೆ ಇವುಗಳ ಮಧ್ಯದಲ್ಲಿ ಹಲವಾರು ಬುಡಕಟ್ಟು ಸಮುದಾಯಗಳು ಕೆಲವೊಂದು ಬದಲಾವಣೆಗೊಳ್ಳುತ್ತಿವೆ. ಅವುಗಳಲ್ಲಿ ಹೆಚ್ಚಾನೆಚ್ಚು ಬುಡಕಟ್ಟು ಕುಟುಂಬಗಳು ಜಾಗತೀಕರಣದಲ್ಲಿ ಸಿಲುಕಿ ನಲುಗಿ ಹೋಗುತ್ತಿವೆ. ಇದಕ್ಕೆ ಹಲವು ಕಾರಣಗಳಿವೆ. ಕೆಲವು ಸ್ಥಗಿತಗೊಂಡ ಸ್ಥಾವರತ್ವ ಹೊಂದಿದ ಕಾರಣ ಬುಡಕಟ್ಟು ಸ್ಥಗಿತಗೊಂಡಿವೆ. ಅವರ ಜೊತೆಗೆ ಚಲನಶೀಲಗುಣ ಜಂಗಮತ್ವ ಹೊಂದಿದ ಕಾರಣ ಬುಡಕಟ್ಟುಗಳು ಬದಲಾವಣೆಗೊಂಡು ಸ್ಪಂದಿಸುತ್ತಿವೆ.

ಭಾರತದಂತಹ ವಿಶಾಲವಾದ ಸಂಸ್ಕೃತಿ ಭವ್ಯವಾದ ಚರಿತ್ರೆ ಹೊಂದಿದಂತೆ ಭಾರತ ಶ್ರೇಣೀಕೃತವಾದ ಸಾಮಾಜಿಕ ವ್ಯವಸ್ಥೆ ಅತ್ಯಂತ ಹೀನಾಯವಾದ ಅಂಶವನ್ನು ಒಳಗೊಳ್ಳುತ್ತಿದೆ. ಬುಡಕಟ್ಟು ಜನಾಂಗಗಳು ಹಾಗೇ ಬದುಕುವಂತಿಲ್ಲ. ಇವುಗಳೆಲ್ಲ ಗಟ್ಟಿಯಾಗಿ ನಿಂತು ಬೆಳೆಯುವ ಅಂಶಗಳು ಗಮನದಲ್ಲಿಡಬೇಕು. ದೇಶದಲ್ಲಿ ವಿವಿಧ ಭಾಷೆ, ಸಂಸ್ಕೃತಿಗಳ ಮೂಲಕ ಸಾಂಸ್ಕೃತಿಕ ಮನಸ್ಸನ್ನು ಗಟ್ಟಿಗೊಳಿಸಬೇಕಾಗಿದೆ. ಹಿಂದಿನ ಕಾಲದಲ್ಲಿ ಸಿಕ್ಲಿಗರ ಸಮುದಾಯ ಕನಿಷ್ಟ ಬದುಕುವ ಪರಿಸ್ಥಿತಿಯೂ ಇಲ್ಲ. ಬುಡಕಟ್ಟು ಸಮುದಾಯ ತಿಂದು ಬದುಕುವ ಪರಿಸ್ಥಿತಿಯೂ ಇಲ್ಲ. ಬುಡಕಟ್ಟು ಸಮುದಾಯದ ಜನಾಂಗ ಕೈಗೊಳ್ಳುವ ಹಂತದಿಂದ ದೂರವುಳಿಯುತ್ತದೆ. ಆದರೆ ಸಿಕ್ಲಿಗರ ಸಮುದಾಯವು ಎಂದೂ ಕೂಡಾ ದುಡಿಯದೇ ತಿನ್ನುವುದಿಲ್ಲ. ಭಿಕ್ಷೆಯಂತೂ ಅಪ್ಪಿತಪ್ಪಿ ಎತ್ತುವುದಿಲ್ಲ. ಇಂದಿನ ಸಂಕೀರ್ಣ ಜಗತ್ತಿನಲ್ಲಿ ಇಂತಹ ಬುಡಕಟ್ಟು ಕಾಣಸಿಗುವುದೇ ಅಪರೂಪದ್ದಾಗಿದೆ.

ಅಕ್ಷರ ಲೋಕ ಕಾಣದ ಅನಕ್ಷರಸ್ಥ ಸಮುದಾಯ ಸಿಕ್ಲಿಗರ ಜನಾಂಗವಾಗಿದೆ. ಕಬ್ಬಿಣದಂತಹ ಕೆಲಸಗಳನ್ನು ಯಾವ ಅಕ್ಷರವಂತ ಇಂಜನಿಯರ್ ಕಲಿತು ತರಬೇತಿ ಹೊಂದದೇ ಇರುವ ಸೂಕ್ಷ್ಮವಾದ ಕಬ್ಬಿಣದ ಕೆತ್ತನೆಯ ಕೆಲಸಗಳನ್ನು ನೋಡಿದರೆ ಆಶ್ಚರ್ಯವನ್ನುಂಟು ಮಾಡುತ್ತದೆ. ಅವರಿಗೆ ಕೆಲಸ ಮಾಡಲು ಬೇರೆ ಕೆಲಸವಿಲ್ಲದೆ ಯಾವುದೇ ರೀತಿಯಲ್ಲಿ ಅವರು ಕಠಿಣ ಪರಿಶ್ರಮ ಹೊಂದಿದ ಸದಾ ತಮ್ಮದೇಯಾದ ರೀತಿ-ನೀತಿ, ನಿಯಮಗಳ ಮೂಲಕ ಕೆಲಸ ನಿರ್ವಹಿಸಿಕೊಂಡು ಬಂದಿದ್ದಾರೆ. ಸರ್ಕಾರದ ಅಥವಾ ಇತರ ಸ್ಥಳೀಯ ಆಡಳಿತ ಯಾವುದೇ ಸೌಲಭ್ಯಗಳನ್ನು ಹೊಂದದೇ ಜೀವನ ಸಾಗಿಸುವ ಸಿಕ್ಲಿಗರ ಬುಡಕಟ್ಟು ಅಪರೂಪವಾದ ಜನಾಂಗವಾಗಿದೆ. ಯಾವುದೇ ಸೌಕರ್ಯಗಳಿಲ್ಲದೇ ಕುಲಕಸುಬಾದ ಕಬ್ಬಿಣದ ಕೆಲಸವನ್ನು ಸ್ವತಂತ್ರವಾಗಿ ಜೀವನ ನಿರ್ವಹಿಸಿಕೊಂಡು ಬಂದಿವೆ. ಇಲ್ಲಿರುವ ಜಾತಿ ಸಿಖ್ಖ್ ಸಮುದಾಯವನ್ನು ಹತ್ತಿರದಲ್ಲಿ ಹೊಂದಿವೆ. ಸಿಖ್

ಸಮುದಾಯವನ್ನು ಹತ್ತಿರದಿಂದ ನೋಡ ಬಯಸಿದ್ದಲ್ಲದೇ ಅವರೊಂದಿಗೆ ಸೇರಿಕೊಂಡು ಸಂಬಂಧವನ್ನು ಹೊಂದಬೇಕೆಂಬ ಆಶಯ ಹೊಂದಿದ್ದಾರೆ. ಇಂತಹ ಸಮುದಾಯ ತನ್ನ ಜೀವನವನ್ನು ಉಳಿಸಿಕೊಳ್ಳಬೇಕಾದ ಅನಿವಾರ್ಯತೆಯಿದೆ.

ಇವತ್ತಿನ ಹೊತ್ತಿನಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸ್ವಾತಂತ್ರ್ಯ ಬಂದು ಅರವತ್ತು ವರ್ಷಗಳಾದರೂ ಸಹಿತ ಮೂಲಭೂತ ಸೌಕರ್ಯಗಳು ಸಿಗಬೇಕಾದ ಅಂಶಗಳು ಯಾವುವು ದೊರೆತಿಲ್ಲ. ಸಮಾಜ ಕಲ್ಯಾಣ ಇಲಾಖೆಯ ಗಿರಿಜನ ಉಪಯೋಜನೆಯಂತಹ ಇಲಾಖೆಯ ಮುಖಾಂತರ ದೊರೆಯಬಹುದಾದ ಸೌಲಭ್ಯಗಳ ಬಗ್ಗೆ ಸಿಕ್ಲಿಗರ ಬುಡಕಟ್ಟು ಜನಾಂಗಕ್ಕೆ ಪರಿಚಯ ಮಾಡಿಕೊಡಬೇಕಾದದ್ದು ಅವಶ್ಯವಾಗಿತ್ತು. ಇದ್ಯಾವುದನ್ನು ತಿಳಿಸದೇ ಅಧಿಕಾರ ಖುರ್ಚಿಗಳಲ್ಲಿ ಕುಳಿತಿದ್ದಾರೆ. ಸಿಕ್ಲಿಗರ ಬುಡಕಟ್ಟು ಸಮುದಾಯವಿದೆಯೆಂಬುದರ ಜನಗಣತಿಯೂ ಕೂಡಾ ಆಗಿಲ್ಲ. ಇವನ್ನು ಕೇವಲ ಓಟು ಬ್ಯಾಂಕಿಗಾಗಿ ರಾಜಕಾರಣಿಗಳು ಬಳಸಿಕೊಂಡಿದ್ದಾರೆ. ಉತ್ತರ ಕರ್ನಾಟಕದಲ್ಲಿ ಕೆಲವು ಜನಾಂಗದ ವ್ಯಕ್ತಿಗಳ ಹೆಸರನ್ನು ಸೇರಿಸಿದ್ದಾರೆ. ಓಟು ಹಾಕಿದ ಮೇಲೆ ಕಣ್ಣೆತ್ತಿ ಯಾರೂ ನೋಡಿಲ್ಲವೆಂಬ ಅಪಾದನೆಯನ್ನು ಈ ಜನ ಮಾಡುತ್ತಿದ್ದಾರೆ. ಸಿಕ್ಲಿಗರರು ತಾವಾಯಿತು ಸ್ವತಃ ಬಂದು ಕಛೇರಿ ಆಡಳಿತದ ಅಧಿಕಾರಿಗಳಿಗೆ ಭೇಟಿಯಾಗಿ ವಿವರಿಸಿ ತಿಳಿದುಕೊಳ್ಳುವ ಮನೋಭಾವನೆ ಹೊಂದಿಲ್ಲ. ಅಂತಹ ಬುದ್ಧಿಶಕ್ತಿ ಜ್ಞಾನದ ಪರಿಮಿತಿಯ ವಿಸ್ತರಣೆಯಾಗಲಿ ಶಿಕ್ಷಣದ ಸಂಪರ್ಕವಿಲ್ಲದ್ದರಿಂದ ಸಹಜವಾಗಿ ಯೋಜನೆಗಳು ಕಡತದಲ್ಲಿ ಉಳಿದರೆ ಇವರ ಬಲಹೀನತೆಯಿಂದಾಗಿ ಹಾಗೇ ದೂರವುಳಿಯುತ್ತವೆ. ಬುಡಕಟ್ಟು ಜನಾಂಗದ ಸಿಕ್ಲಿಗರ ಸಮುದಾಯಕ್ಕೆ ಸಿಗಲೇಬೇಕಾದ ಯೋಜನೆ ತಲುಪದೇ ವ್ಯರ್ಥವಾಗಹತ್ತಿರುವುದು ಸತ್ಯದಿಂದ ಕೂಡಿದ ಮಾತಾಗಿದೆ.

ಸಿಕ್ಲಿಗರ ಬುಡಕಟ್ಟು ಜನಾಂಗ ಊರ ಹೊರಗೆ ಹೋಗಿ ಯಾರೂ ಇಲ್ಲದ ಸಮಯದಲ್ಲಿ ಜನನಿಬಿಡ ಸ್ಥಳದಲ್ಲಿ ರೇಲ್ವೆಗೇಟ್ ಹತ್ತಿರ, ರೇಲ್ವೆ ಬ್ರಿಜ್‌ಗಳ ಕೆಳಗೆ ಯಾವುದೇ ಸರ್ಕಾರಿ ಜಾಗದಲ್ಲಿ ತಮಗೆ ಬೇಕಾದ ಸ್ಥಳದಲ್ಲಿ ಬಿಡಾರ ಹೂಡುತ್ತಾರೆ. ಆಗ ಸರ್ಕಾರಿ ಅಧಿಕಾರಿಗಳು ಇವರ ಮೇಲೆ ಇಲ್ಲಸಲ್ಲದ ಆರೋಪವನ್ನು ಮಾಡುತ್ತಿದ್ದಾರೆ. ಪೋಲಿಸ್ ಇಲಾಖೆಗಳು ತಮಗೆ ತಿಂಗಳಲ್ಲಿ ವರ್ಷದಲ್ಲಿ ಇಷ್ಟು ಕೇಸ್ ಬೇಕು ಎಂದಾಗ ಅವನ್ನು ಕೊಡದೇ ಇರುವಾಗ ಪೋಲಿಸರು ಇಂತಹ ಅಮಾಯಕ ಬುಡಕಟ್ಟು ಜನಾಂಗವಾದ ಸಿಕ್ಲಿಗರ್ ಜನರನ್ನು ಪೋಲಿಸ್ ಠಾಣೆಗೆ ಕರೆದೊಯ್ದು ತೊಂದರೆ ನೀಡುತ್ತಿದ್ದಾರೆ. ಆದಾಯಕ್ಕಾಗಿ ಕಬ್ಬಿಣದ ಕೆಲಸ ಕೈಗೊಂಡರೂ ತಲವಾರ, ಖಡ್ಗ, ಚಾಕು, ಚೂರಿಗಳನ್ನು ತಯಾರಿಸಿ ಕೊಡುವುದರಿಂದ ಅಪರಾಧಿಗಳ ಪಟ್ಟಿಯಲ್ಲಿ ಸೇರಿಸಿ ತೊಂದರೆಯನ್ನು

ನೀಡುತ್ತಿದ್ದರು. ಹಣ ಕೊಟ್ಟು ಕೊಂಡು ತಂದ ಕಬ್ಬಿಣಗಳಿಗೆ ಯಾವುದೇ ಬಿಲ್ಲು ರಸೀದಿಗಳಿಲ್ಲದೇ ಮೋಡಕಾದಂತಹ ಕಬ್ಬಿಣದ ಅಂಗಡಿಗಳಲ್ಲಿ ತಮಗೆ ಬೇಕಾದ ಕಬ್ಬಿಣವನ್ನು ಖರೀದಿಸಿಕೊಂಡು ತಂದರು. ಇದನ್ನು ಕದ್ದು ತಂದವರೆಂದು ಆರೋಪ ಮಾಡುತ್ತಿರುತ್ತಾರೆ. ಕಳ್ಳರೆಂಬ ಅಪರಾಧಗಳನ್ನು ಗಂಭೀರವಾಗಿ ಮಾಡುತ್ತಾರೆ. ಅಧಿಕಾರಿಗಳು ರಕ್ಷಿಸಬೇಕಾದ ಶಾಖೆಗಳೇ ಈ ರೀತಿ ಮಾಡಿದರೆ ಸುತ್ತಮುತ್ತಲಿನ ಜನಸಮುದಾಯವು ಸಿಕ್ಲಿಗರ ಸಮುದಾಯದ ಮೇಲೆ ಅನುಮಾನದ ದೃಷ್ಟಿಯಿಂದ ನೋಡುತ್ತಾರೆ. ಇದರಿಂದ ಬೇಸರಗೊಂಡ ಸಮುದಾಯ ಯಾರ ತಂಟೆ ತಕರಾರುಗಳಿಗೂ ಹೋಗದೇ ತಮ್ಮಷ್ಟಕ್ಕೆ ಮೌನವಾಗಿ ಕಬ್ಬಿಣದ ಕೆಲಸ ನಿರ್ವಹಿಸಿಕೊಂಡು ಕಾಲ ಕಳೆಯುತ್ತಾರೆ. ಇವತ್ತಿನ ಹೊತ್ತಿನಲ್ಲಿ ಸಹ ಎಲ್ಲಿಯೇ ಕಳ್ಳತನವಾಗಲಿ, ದರೋಡೆಗಳಾಗಲಿ, ಪಿಕ್ ಪಾಕೀಟುಗಳಾಗಿ, ಅಪಹರಣಗಳಾಗಲಿ ಏನೇ ಆದರೂ ಅನಾಹುತಗಳು ಜರುಗಿದರೇ ಪೋಲಿಸರು ಮೊದಲು ಹಿಡಿಯುವದು ಈ ಬಡಪಾಯಿ ಬುಡಕಟ್ಟು ಜನಾಂಗವಾದ ಸಿಕ್ಲಿಗರ ಜನಾಂಗವನ್ನು ಇದರಿಂದ ಬೇಸತ್ತ ಜನಾಂಗ ಹಲವು ಬಾರಿ ಕಣ್ಣೀರಿಟ್ಟರು. ಇದಕ್ಕೆ ಜೀವಂತ ಉದಾಹರಣೆಗಳಿವೆ.

ಸಿಕ್ಲಿಗರ ಸಮುದಾಯ ಯಾವುದೇ ತಪ್ಪು ಅನಾಹುತಗಳಲ್ಲಿ ಇವರ ಕೈವಾಡವಾಗಲಿ ಪಾಲುದಾರಿಕೆ ಇಲ್ಲದಾಗ್ಯೂ ಶಿಕ್ಷೆ ಅನುಭವಿಸಬೇಕಾದ ಸಂದರ್ಭದಲ್ಲಿ ದೌರ್ಜನ್ಯ ,ಶೋಷಣೆ, ಅನ್ಯಾಯ ಇವರ ಮೇಲೆ ಆಗುತ್ತಲೇ ಮುಂದುವರೆದರೆ ಇಂತಹ ಬುಡಕಟ್ಟು ಜನಾಂಗ ಹೇಗೆ ತನ್ನ ಜೀವನವನ್ನು ಇಂತಹ ಕಾಲದಲ್ಲಿ ದೂಡಬೇಕೆಂಬ ಅರಿವು ಕೂಡಾ ಇವರಿಗೆ ಕಾಡುತ್ತಿದೆ. ಹೊಟ್ಟೆ ಉಪಜೀವನಕ್ಕಾಗಿ ಕಬ್ಬಿಣದ ಕೆಲಸ ಕೈಗೊಂಡರೂ ಸಹ ಈ ರೀತಿಯ ಆಪಾದನೆಗಳ ಸುರಿಮಳೆ ಹಾಕಿದರೆ ನಾವು ಬದುಕು ನಡೆಸುವುದಾದರೂ ಏನು? ಕೊನೆ ಪಕ್ಷ ನಮ್ಮ ಕಡೆ ಗಂಭೀರವಾದ ಕಾರ್ಯ ಕೈಕೊಳ್ಳಬೇಕಾಗಿದೆ. ಇಂತಹ ಬಿಕ್ಕಟ್ಟಿನ ಪರಿಸ್ಥಿತಿಯಲ್ಲೂ ಗಂಭೀರವಾದ ಆರೋಪ ಚಿಂತನೆಗಳನ್ನು ಮಾಡಬೇಕಾದದ್ದು ಅವಶ್ಯವಾಗಿದೆ. ಅವುಗಳ ಸಮಸ್ಯೆ ಸವಾಲುಗಳ ಮಧ್ಯದಲ್ಲಿ ನಿಂತುಕೊಂಡ ಸಿಕ್ಲಿಗರ ಸಮುದಾಯ ಇನ್ನು ಬದುಕಿನ ಬಗ್ಗೆ, ತಮ್ಮ ಕುಲಕಸುಬಿನ ಬಗ್ಗೆ, ಆತ್ಮವಿಶ್ವಾಸವನ್ನು ಸ್ವಾಭಿಮಾನದ ಜೀವನವನ್ನು ನಡೆಸಿಕೊಂಡು ಬರುತ್ತಲಿದ್ದಾರೆ.

ಇಂತಹ ಹಲವು ಯೋಜನೆಗಳ ಚಿಂತನೆಯ ಫಲದಿಂದಾಗಿ ಪ್ರತಿಷ್ಠಿತ ಜನಸಮುದಾಯ ಸರ್ಕಾರ ಇವರಿಂದ ಬೇಕಾದ ಕೆಲವು ವಿಚಾರಗಳನ್ನು ನೋಡಬೇಕಾಗಿದೆ. ಹಾಗೆಯೇ ಇವರು ಸಹಿತ ಜೀವನದಲ್ಲಿ ಕಾಣಬೇಕಾದ ಉತ್ಸಾಹದಲ್ಲಿ ಎಂದೂ ಸೋತಿಲ್ಲ. ಪ್ರತಿಷ್ಠಿತ ಪ್ರತಿಭಾನ್ವಿತರಾದ ಸಿಕ್ಲಿಗರ ಜನಾಂಗ ಸರ್ಕಾರದ ಸೌಲಭ್ಯಗಳನ್ನು ಹೊಂದಿಲ್ಲ. ಇವತ್ತಿನ ಜಾಗತೀಕರಣದ ತೀವ್ರವಾದ

ಹೋರಾಟದ ಸ್ಪಂದನೆಯ ಕೊನೆಯ ಅಂಚನ್ನು ಹೊಂದಿದ ಸಿಕ್ಲಿಗರ ಜನಾಂಗ ಸರ್ಕಾರದ ಯೋಜನೆಗಳನ್ನು ಪಡೆದಿಲ್ಲ. ಪಡೆಯಲು ಆಗುತ್ತಿಲ್ಲ. ಅಲ್ಲಲ್ಲಿ ಮಾತ್ರ ಅಂದರೆ ಉತ್ತರ ಕರ್ನಾಟಕದ ಬೆಳಗಾಂವ, ಧಾರವಾಡ, ನಿಪ್ಪಾಣಿ, ಹುಬ್ಬಳ್ಳಿ, ಶಿಗ್ಗಾಂವ, ಗದಗ, ಕೊಪ್ಪಳ ಜಿಲ್ಲೆಗಳಲ್ಲಿ ಮಾತ್ರ ಸರ್ಕಾರದ ಆಶ್ರಯ ಮನೆಗಳು ದೊರಕಿವೆ. ಅವುಗಳಲ್ಲಿ ಜೀವನ ಸಾಗಿಸುತ್ತಿದ್ದಾರೆ. ಎಲ್ಲೋ ಹಲವು ಕಡೆ ಕ್ವಚಿತ್ತಾಗಿ ವಿದ್ಯುತ್ ಬಳಸುತ್ತಿದ್ದಾರೆ. ಪಡಿತರ ಚೀಟಿ, ಮತದಾನದ ಚೀಟಿಗಳು ಬೆರಳೆಣಿಕೆಯಷ್ಟು ಜನರ ಕುಟುಂಬಕ್ಕೆ ದೊರೆತಿವೆ. ವ್ಯಾಪಾರಕ್ಕೆಂದು ಹಲವು ಸಂತೆ ಹಾಗೂ ಸುತ್ತಮುತ್ತಲ ಪ್ರದೇಶದ ಬೇಕು ಬೇಡಿಕೆಗಳನ್ನು ಅರಿತುಕೊಂಡು ಆ ಕಡೆಗೆ ಹೋಗಿ ಕೆಲಸ ನಿರ್ವಹಿಸಿಕೊಂಡು ಬರುತ್ತಲಿದ್ದಾರೆ.

ಗುಡಾರ, ಟಿಣ್ ಮನೆ ಹಾಕಿಕೊಂಡು ಗುಡಿಸಲುಗಳ ಜೀವನೋಪಾಯದಲ್ಲಿದ್ದಾರೆ. ಅತ್ಯಂತ ನೋವಿನ ಸಂಗತಿಯೆಂದರೆ ಕೊಳಚೆ ಪ್ರದೇಶದಂತ ಹೊಲಸು ಚರಂಡಿ ಶೌಚಾಲಯಗಳ ಹತ್ತಿರ ವಾಸವಾದ್ದರಿಂದ ಅಂತಹ ಗಾಳಿಯ ಪರಿಸರ ಇವರಿಗೆ ಪರಿಣಾಮ ಬೀರಿದೆ. ಇಂದು ಇಂತಹ ಕಲುಷಿತವಾದ ವಾತಾವರಣದಲ್ಲಿ ಜೀವನವನ್ನು ನಡೆಸುವದು ಅಸಾಧ್ಯವಾದ ಮಾತಾಗಿದೆ. ಸೊಲ್ಲಾಪುರ, ಹೈದ್ರಾಬಾದ್, ಕೊಲ್ಲಾಪುರಗಳ ಹಾಗೂ ನಾಂದೇಡಗಳಿಂದ ವಲಸೆ ಬಂದ ಈ ಜನಸಮುದಾಯ ವರ್ಷದಲ್ಲಿ ಒಂದು ಬಾರಿ ಎಲ್ಲರೂ ಕೂಡುತ್ತಾರೆ. ಅಲ್ಲಿ ಇಲ್ಲಿಗೆ ಹೋಗಿ ಬರುವ ರೂಢಿಯಿದೆ. ಅವರಿವರೊಂದಿಗೆ ಸಂಬಂಧ ಕಲ್ಪಿಸಿಕೊಂಡು ಕರ್ನಾಟಕದ ಎಲ್ಲಾ ಭಾಗದ ಸಿಕ್ಲಿಗರ್ ಜನಸಮುದಾಯದೊಂದಿಗೆ ಸೇರಿಕೊಂಡು ಪರಿಚಯ ಮಾಡಿಕೊಂಡು ಸಂಪರ್ಕದ ಸೇತುವೆಯನ್ನು ನಿರ್ಮಿಸಿಕೊಂಡು ಬರುತ್ತಿದ್ದಾರೆ.

ಕಬ್ಬಿಣದ ಕೆಲಸವನ್ನು ಬಿಟ್ಟು ಇವರು ಬೇರಾವುದೇ ಕೆಲಸವನ್ನು ಇವರು ಕೈಗೊಂಡಿಲ್ಲ. ಹುಬ್ಬಳ್ಳಿಯಲ್ಲಿ ಮಾತ್ರ ಕಬ್ಬಿಣದ ಕೆಲಸದ ಜೊತೆಗೆ ಶೋಕೇಸುಗಳನ್ನು, ಮೋಟಾರು ವೈಂಡಿಂಗ್ ಇಂತಹ ಕೆಲಸಗಳನ್ನು ಕೈಗೊಂಡಿದ್ದಾರೆ. ಇದು ಅಪರೂಪ ಇಂತಹ ಬದಲಾಪಣೆಗಳನ್ನು ಸಿಕ್ಲಿಗರ ಸಮುದಾಯ ಮಾಡಿಕೊಂಡರೆ ತಳಸಮುದಾಯದ ಚೇತರಿಕೆಗೆ ಹಾದಿಯಾಗುತ್ತಿದೆ. ಹೋರಾಟದ ಮುಖಾಮುಖಿಗೆ ಅನುಸಂಧಾನ ಮಾಡಿಕೊಂಡಂತಾಗುತ್ತದೆ. ನಾನಾ ಜೀವನ ಕೈಗೊಳ್ಳಲು ಇನ್ನೂ ಸಾಧ್ಯವಾಗಿಲ್ಲ. ಕಬ್ಬಿಣ ನಗರವಾಸಿಗಳಾಗಿದ್ದರೂ ನಗರೀಕರಣದ ಸೋಂಕು ತಾಗಿಸಿಕೊಂಡಿಲ್ಲ.ದಿಟ್ಟ ಪರಂಪರಾಗತವಾದ ಸಂಪ್ರದಾಯ ಅವರ ವಿವಾದಗಳನ್ನು ಮುಂದುವರೆಸಿಕೊಂಡು ಬಂದಿದ್ದಾರೆ.

ಬಹಳಷ್ಟು ಕುಟುಂಬಗಳು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸದೇ ತಮ್ಮಲ್ಲಿಯೇ ಇಟ್ಟುಕೊಂಡು ಅವರಿಗೆ ಕಬ್ಬಿಣದ ಕೆಲಸ ಹಚ್ಚುತ್ತಾರೆ. ಹರೆಯಕ್ಕೆ ಬಂದಾಗಲೇ ಅವರಿಗೆ ವಿವಾಹ ಮಾಡಿ ಬೇರೆ ಹೊಸ ಕುಟುಂಬ ನಿರ್ವಹಿಸುವಂತೆ ಸೂಚಿಸುತ್ತಾರೆ. ಇಂದಿನ ಬದಲಾದ ಶೈಕ್ಷಣಿಕ ವ್ಯವಸ್ಥೆಗೆ ಅನುಗುಣವಾಗಿ ಬುಡಕಟ್ಟು ಸಮುದಾಯ ಹೊಂದಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಅವರು ಅತ್ಯಂತ ಹಿಂದುಳಿದ ಬಡ ಕುಟುಂಬವಾದ್ದರಿಂದ ಸಿಕ್ಲಿಗರ ಸಮುದಾಯ ಚಿಂತಾಜನಕ ಸ್ಥಿತಿ ಅನುಭವಿಸಬೇಕಾಗಿದೆ. ಚರಂಡಿ, ಹೊಲಸು, ಕೊಳಚೆ ಪ್ರದೇಶಗಳಲ್ಲಿ ವಾಸವಾಗಿದ್ದುಕೊಂಡು ತಮ್ಮತನವನ್ನು ಕಳೆದುಕೊಳ್ಳುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಶಿಕ್ಷಣದ ಕಲಿಕೆ ಎಲ್ಲಿಂದ ಬರಬೇಕು. ಅಕ್ಷರವಂಚಿತ ಬುಡಕಟ್ಟು ಜನಾಂಗ ಶೋಚನೀಯ ಸ್ಥಿತಿಯಲ್ಲಿದ್ದಾರೆ.

ಅವರು ಮಕ್ಕಳನ್ನು ಮುಂದೆ ಕೂಡಿಸಿಕೊಂಡು ಕಬ್ಬಿಣದ ಕೆಲಸ ಹಚ್ಚುತ್ತಾರೆ. ಅಕ್ಷರವನ್ನು ಕಲಿಯದೇ ತಾವು ಸೋತು ಹೋದ ಬಗ್ಗೆ ವಿವರಿಸುತ್ತಾರೆ. ಮೊದಲು ಅಲೆಮಾರಿಗಳಾಗಿ ಒಂದು ಕಡೆ ನೆಲೆ ನಿಲ್ಲುತ್ತಿರಲಿಲ್ಲ. ಈಗ ಉತ್ತರ ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ಇವರು ನೆಲೆ ನಿಂತಿದ್ದರಿಂದ ಸಹಜವಾಗಿ ತಮ್ಮ ಶಿಕ್ಷಣಾಭ್ಯಾಸವನ್ನು ಕೊಡಿಸಬೇಕೆಂದು ಮುಂದೆ ಬಂದಿದ್ದಾರೆ. ಬೆಂಗಳೂರಿನ ಶ್ರೀ ಬಲಬೀರಸಿಂಗ್ ಪಾವಾ ಅವರು ಇದಕ್ಕಾಗಿಯೇ ಪ್ರತಿವರ್ಷ ಮಕ್ಕಳಿಗೆ ಬಟ್ಟೆ ಸಮವಸ್ತ್ರ ಪಠ್ಯಪುಸ್ತಕಗಳನ್ನು ನೀಡುವ ಮೂಲಕ ಉಚಿತ ಶಿಕ್ಷಣಕ್ಕೆ ಆಯಾ ಸ್ಥಳಗಳಲ್ಲಿ ವ್ಯವಸ್ಥೆ ಮಾಡಿದ್ದಾರೆ. ಹೀಗಾಗಿ ಹಲವು ಮಕ್ಕಳು ಸಹಿತ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಕೆಲವರಂತೂ ಇಂಗ್ಲೀಷ್ ಕಲಿತರೆ ಅಲ್ಲಿರುವ ಅನೇಕ ಮಕ್ಕಳು ಸಹಿತ ಕನ್ನಡವನ್ನು ಸೂಕ್ಷ್ಮವಾಗಿ ಓದಲು ಬರೆಯಲು ಹಾಗೂ ಮಾತನಾಡುವುದನ್ನು ನೋಡಿದ್ದೇವೆ. ಶಿಗ್ಗಾಂವ್, ಹುಬ್ಬಳ್ಳಿಯ ಸುಭಾಷ್‌ನಗರದ ಹಾಗೂ ಧಾರವಾಡದ ಲಕ್ಷ್ಮೀಸಿಂಗ್ ಕೆರೆಯಲ್ಲಿ ಶಿಕ್ಷಣದ ವ್ಯವಸ್ಥೆ ಮಾಡಿಕೊಂಡಿ ಮಕ್ಕಳು ಹುರುಪು ಉತ್ಸಾಹಗಳಿಂದ ಶಾಲೆಗೆ ಹೋಗುವುದು ಕಂಡು ಬಂದಿದೆ.

ತೀವ್ರಗತಿಯಲ್ಲಿ ಬದಲಾಗುತ್ತಿರುವ ಇಂದಿನ ದಿನಮಾನಗಳಲ್ಲಿ ಬುಡಕಟ್ಟು ಸಮುದಾಯಗಳು ಬಹಳಷ್ಟು ಚಿಂತಾಜನಕ ಸ್ಥಿತಿಯಲ್ಲಿವೆ. ಕಂಪ್ಯೂಟರೀಕರಣದ ಯುಗದಲ್ಲಿ ಸಿಕ್ಲಿಗರ ಸಮುದಾಯ ತಮ್ಮ ಮೂಲ ವೃತ್ತಿಯನ್ನಾಗಿಸಿಕೊಂಡು ಬಂದ ಕಬ್ಬಿಣದ ಕೆಲಸಗಳನ್ನೇ ಮುಂದುವರೆಸಿಕೊಂಡು ಬಂದಿದೆ. ಅನಾದಿಕಾಲದಿಂದಲೂ ಇದೇ ವೃತ್ತಿಯನ್ನು ಕೈಗೊಂಡ ಸಮುದಾಯ ಇವತ್ತಿನ ದಿನಗಳಿಗೆ ಹೇಗೆ ಬುಡಕಟ್ಟು ಸ್ಪಂದಿಸುತ್ತಿವೆ ಎಂಬುದನ್ನು ಆಲೋಚಿಸಬೇಕಾಗಿದೆ. ಇದ್ದ ಮೂಲ ಕಲೆ ಸಂಸ್ಕೃತಿ, ಆಚರಣೆಗಳು ಜೀವನ ವೃತ್ತಿಗಳು ಹಾಗೆ ಇರಬೇಕು ಎಂಬ ಮಾತು ಕೇಳಿ ಬರುತ್ತಲಿವೆ, ಆದರೆ

ಅವರು ಹಾಗೆ ಮುಂದುವರೆಸಿಕೊಂಡು ಬರಲು ಇಂದು ಸಾಧ್ಯವಂತು ಆಗುವುದಿಲ್ಲ. ತಮ್ಮ ಬದುಕಿನ ಹಲವು ಮಜಲುಗಳಲ್ಲಿ ಕಾಣಸಿಗದೆ ಹತ್ತು ಹಲವು ಸಂಗತಿಗಳು ನಮ್ಮ ಸಂಸ್ಕೃತಿಯನ್ನು ಮೀರಿ ಹೋಗುತ್ತಲಿವೆ. ಹೀಗಿದ್ದಾಗ ಕಬ್ಬಿಣದ ಕೆಲಸ ಮುಂದುವರೆಸಿದರೆ ಜೀವನವನ್ನು ಸಾಗಿಸಲು ಸಾಧ್ಯವೆ ಇಲ್ಲವೆಂಬುದನ್ನು ಸಾಮಾನ್ಯ ಜನರು ಸಹ ಒಪ್ಪಿಕೊಳ್ಳುವ ಮಾತಾಗಿದೆ.

ಒಂದು ವೇಳೆ ಆಧುನಿಕತೆಗೆ ತಕ್ಕಂತೆ ಬುಡಕಟ್ಟು ಜನಾಂಗ ಮಾರ್ಪಾಡಾದರೆ ತನ್ನ ಮೂಲ ಸಂಸ್ಕೃತಿಯನ್ನು ಬಿಟ್ಟಂತಾಗುತ್ತದೆ. ಉದಾ: ಲಂಬಾಣಿಗರು, ಪಾರ್ದಿಯವರು ಹಾಗೂ ಇತರ ಬುಡಕಟ್ಟು ಜನಾಂಗಗಳು ಕಾಲ ಹಾಗೂ ಸಂದರ್ಭಕ್ಕೆ ತಕ್ಕಂತೆ ಬದಲಾವಣೆಗೊಂಡಿರುವದು ನಮಗೆ ಸ್ಪಷ್ಟವಾಗಿ ಕಂಡು ಬರುತ್ತದೆ. ಸಿಕ್ಲಿಗರ ಬುಡಕಟ್ಟು ಜನಾಂಗಗಳ ಹತ್ತಿರ ಈ ಮಾತುಗಳು ಸುಳಿಯುವುದಿಲ್ಲ. ಕಬ್ಬಿಣದಂತಹ ಕೆಲಸ ಕಾರ್ಯಗಳನ್ನು ಎಂದೂ ತಪ್ಪಿ ನಡೆದರೆ ಅದೆ ವೃತ್ತಿಯನ್ನು ಕೈಗೊಂಡು ಜೀವನ ಸಾಗಿಸುತ್ತದೆ. ಮಕ್ಕಳು, ಸಂಸಾರವನ್ನು ತೂಗಿಸಿಕೊಂಡು ಹೋಗುತ್ತಾರೆ. ಯಾರ ಮುಲಾಜಿಗೂ ಹೋಗದೆ ತಮ್ಮ ಅರ್ಥಪೂರ್ಣವಾದ ಬದುಕನ್ನು ಸದಾ ಹಸಿರು ಆಗುವಂತೆ ನೋಡಿಕೊಳ್ಳುವ ಜವಾಬ್ದಾರಿ ಈ ಜನಾಂಗದವರು ಹೊಂದಿವರಾಗಿದ್ದಾರೆ. ಕರ್ನಾಟಕದಲ್ಲಿ ದೊರೆಯಬಹುದಾದ ಈ ಜನಾಂಗವು ಆಧುನಿಕತೆಗೆ ತಕ್ಕಂತೆ ಬದಲಾವಣೆಗೊಳ್ಳುವುದು ಅನಿವಾರ್ಯವಾಗಿದೆ.

ಕಬ್ಬಿಣದಂತಹ ಕೆಲಸವನ್ನು ಸಂಪೂರ್ಣವಾಗಿ ಕೈ ಗೊಳ್ಳಬೇಕಾದರೆ ನಾಲ್ಕು ನೂರು ರೂಪಾಯಿ ಕೊಟ್ಟು ಬ್ಯಾರಲ್‌ಗಳನ್ನು ತೆಗೆದುಕೊಂಡು ಬರುತ್ತಾರೆ. ಅವುಗಳನ್ನು ಕರಗಿಸಿ, ಕಬ್ಬಿಣದ ಮೂಲಕ ತಮಗೆ ಬೇಕಾದ ಕೆಲಸಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಾರೆ. ಇವತ್ತಿನ ಜಾಗತೀಕರಣದ ಸಂದರ್ಭದಲ್ಲಿ ಕೃಷಿ ಗೃಹ ಹಾಗೂ ಇತರ ಸಮಗ್ರ ವಸ್ತುಗಳು ನಮಗೆ ಹೇಗೆ ಬೇಕೋ ಹಾಗೆ ಬಂದು ಬೀಳುತ್ತಿವೆ. ಕಬ್ಬಿಣಕ್ಕಿಂತ ಕಡಿಮೆ ದರದಲ್ಲಿ ಸಿಗುತ್ತವೆ. ಸುಲಭವಾಗಿ ಲೈಟ್‌ವೇಟಾಗಿ ದೊರೆಯುತ್ತಿವೆ. ಇವುಗಳನ್ನು ಬಿಟ್ಟು ಸಿಕ್ಲಿಗರ ತಯಾರಿಸುವ ಕಬ್ಬಿಣದ ವಸ್ತುಗಳಿಗೆ ಏಕೆ ಹೆಚ್ಚು ಗಮನ ನೀಡುತ್ತಾರೆಂಬುದನ್ನು ಅರಿಯಬೇಕಾಗಿದೆ. ಸಿಕ್ಲಿಗರ ಬುಡಕಟ್ಟು ಜನಾಂಗ ತನ್ನ ಮೂಲ ಸಂಸ್ಕೃತಿಯನ್ನು ಹಾಗೆ ಕಾಪಾಡಿಕೊಂಡು ಬಂದಿವೆ. ಆದರೆ ಸರ್ಕಾರವಾಗಲಿ, ಸ್ಥಳೀಯ ಆಡಳಿತವಾಗಲಿ, ಸಂಘಸಂಸ್ಥೆಗಳಾಗಲಿ, ಅಥವಾ ಸ್ಥಳೀಯ ನೆರೆಹೊರೆಯ ಜನಸಮುದಾಯದವರು ಸಹಿತ ಇವರನ್ನು ಕಣ್ಣೆತ್ತಿ ನೋಡಿಲ್ಲ. ಹಾಗೆಯೆ ಈ ಸಮುದಾಯ ಸಮಾಜದಲ್ಲಿ ಸಿಕ್ಕಿದೆ ಎಂಬ ಭಾವನೆಯನ್ನು ಕೂಡ ಹೊಂದಿಲ್ಲ. ಭಾರತ ದೇಶದ ಚರಿತ್ರೆಯಲ್ಲಿ ಅತಿ ಮಹತ್ವದ ಪಟ್ಟಿಯನ್ನು

ಹೊಂದಿದ ಕಾರಣವಾಗಿ ಸಿಕ್ಲಿಗರ ಪರಿಶಿಷ್ಟ ಜಾತಿಗೆ ಸೇರಿದ್ದಾರೆ. ತಮ್ಮದೆ ಕುಲಕಸಬುಗಳಲ್ಲಿ ವೈವಿಧ್ಯತೆ ಹೊಂದಿದ್ದಾರೆ. ಕರ್ನಾಟಕದಲ್ಲಿ ಸಿಕ್ಲಗರ ಸಮುದಾಯವನ್ನು ಜನಗಣತಿ ಮಾಡಿಲ್ಲ. ಯಾವುದೆ ಅನುಸೂಚಿತ ಜಾತಿಯಲ್ಲಿ ಸೇರಿಸದೇ ಇರುವುದು ತಪ್ಪಾಗಿ ಕಂಡು ಬರುತ್ತದೆ. ಸಿಕ್ಲಿಗರ ಬುಡಕಟ್ಟು ಜನಾಂಗ ಇವತ್ತು ಅಪಾಯದ ಅಂಚಿನಲ್ಲಿದೆಯಾದರೂ ಅವರು ತಮ್ಮ ಮೂಲಸಂಸ್ಕ್ರತಿ ಹಾಗೂ ಕುಲಕಸಬುಗಳನ್ನು ಬಿಟ್ಟುಕೊಟ್ಟಿಲ್ಲ. ಅವರು ನಾಗರಿಕ ಸೌಲಭ್ಯಗಳಿಂದ ವಂಚಿತರಾಗಿದ್ದರೂ ಕೂಡ ಬದುಕುತ್ತಿದ್ದಾರೆ. ಕಷ್ಟದಾಯಕವಾದ ಸಂಕೋಲೆಗಳ ಹಲವು ಚಿಂತೆಗಳಲ್ಲಿ ಮುಳುಗಿ ಹೋಗಿದ್ದಾರೆ. ಸರ್ಕಾರವಾಗಲಿ ಕರ್ನಾಟಕದಲ್ಲಿ ಯಾವ ಸ್ಥಾನಮಾನಗಳನ್ನು ಕೊಡದಿದ್ದರೂ ಸಹಿತ ಇಂದು ಸ್ವತಂತ್ರಗೊಂಡು ಅರವತ್ತು ವರ್ಷಗಳಾದರೂ ತಮ್ಮ ಬದುಕನ್ನು ನಡೆಸಿಕೊಂಡು ಬಂದಿದ್ದಾರೆ. ಎಂದರೆ ಅವರ ಮೂಲ ಗುಣ ಸಾತ್ವಿಕ ಗಟ್ಟಿತನ ನಮಗೆ ಎದುರಾಗುತ್ತವೆ. ಸಿಕ್ಲಿಗರ ಬುಡಕಟ್ಟು ಜನಾಂಗ ಈಳಗೆಯಂತಹ ಕಬ್ಬಿಣ ಹರಿತವಾದ ಗೃಹ ಉಪಯೋಗಿ ಕೆಲಸಕ್ಕೆ ಹಳ್ಳಿಗಳಲ್ಲಿ ವಾಸವಾಗಿರುವ ಜನರಿಗೆ ಬೇಕೆ ಬೇಕು. ಆದರೆ ಇವತ್ತಿನ ಸಂದರ್ಭದಲ್ಲಿ ಬತಾಯಿಗಳು ಬಂದಿವೆ. ಪ್ರತಿಯೊಬ್ಬರ ಮನೆಯಲ್ಲಿ ಇವನ್ನೇ ಉಪಯೋಗಿಸುವುದರಿಂದ ಈಳಗೆಯ ಅವಶ್ಯಕತೆ ಬರುವುದಿಲ್ಲ. ಹಳ್ಳಿಗಳಲ್ಲಿ ಹಾಗೂ ಕೆಲವು ಅತ್ಯಂತ ನಿರ್ಗತಿಕ ಜನಸಮುದಾಯದ ಕುಟುಂಬಗಳು ಈಳಿಗೆಯನ್ನು ಕೊಂಡುಕೊಳ್ಳುತ್ತಾರೆ. ಈಳಿಗೆ ತಯಾರಿಕೆ ಇಂದು ಇಳಿಮುಖವಾಗುತ್ತಿದೆ.

ಇದರಿಂದ ಈ ಸಮುದಾಯಕ್ಕೆ ಬಹಳ ಪೆಟ್ಟು ಬೀಳುತ್ತಿದೆ. ಚಾಕು, ಚೂರಿಗಳನ್ನು ಕಬ್ಬಿಣದ ಮೂಲಕ ತಯಾರಿಸುವುದರಿಂದ ತುಕ್ಕು ಹಿಡಿದು ಹೊಟ್ಟೆಯೊಳಗೆ ಹೋಗುತ್ತದೆ ಎಂದು ಇವುಗಳನ್ನು ಖರೀದಿಸಲು ಜನರು ಹಿಂಜರಿಯುತ್ತಾರೆ. ಇವುಗಳಿಂದ ತರಕಾರಿ ಹಾಗೂ ಇತರೆ ಯಾವುದೇ ವಸ್ತುಗಳನ್ನು ಹೆಚ್ಚಬಾರದೆಂದು ಜನರೊಳಗೆ ಮುಂಜಾಗೃತಿ ನೀಡುವುದರಿಂದ ಇವುಗಳ ಬಳಕೆ ಕ್ಷೀಣಿಸುತ್ತಿದೆ. ಆದರೂ ಸಿಕ್ಲಿಗರು ತಮ್ಮ ಮೂಲ ಸಂಸ್ಕೃತಿಯನ್ನು ಕಳೆದುಕೊಳ್ಳದೆ ಇಂತಹ ಪರಿಸ್ಥಿತಿಯಲ್ಲಿ ತಮ್ಮ ವೃತ್ತಿ ಮುಂದುವರೆಸಿಕೊಂಡು ಬರುತ್ತಿದ್ದಾರೆ.

ಪ್ರಾದೇಶಿಕವಾದ ಭಿನ್ನತೆ ಹೊಂದಿದ ಸಿಕ್ಲಿಗರರು ಮುಂಬೈ ಕರ್ನಾಟಕದ ಜೊತೆಗೆ ಹೈದ್ರಾಬಾದ ಕರ್ನಾಟಕ ಹಾಗೂ ಮೈಸೂರು ಪ್ರಾಂತವು ಸೇರಿದಂತೆ ವೃತ್ತಿಯಲ್ಲಿ ಭಿನ್ನತೆ ಕಾಣುತ್ತೇವೆ. ಮೂಲ ಕಬ್ಬಿಣದ ಕೆಲಸವನ್ನು ಮಾತ್ರ ಅವರು ಬಿಟ್ಟು ಕೊಟ್ಟಿಲ್ಲ. ಮೈಸೂರು, ಬೆಂಗಳೂರು ಪ್ರದೇಶದಲ್ಲಿ ಬುಡಕಟ್ಟು ಜನಾಂಗ ಕಬ್ಬಿಣದಲ್ಲಿ ಎಳೆ ನೀರನ್ನು ಕೊಚ್ಚಲು ಮಚ್ಚನ್ನು ತಯಾರಿಸಿ ಕೊಡುತ್ತಾರೆ. ಇದು ಆ ಪ್ರದೇಶದಲ್ಲಿ ಬಾರಿ ಬೇಡಿಕೆಯನ್ನು ಹೊಂದಿದೆ. ಮಚ್ಚನ್ನು ಸಂಪೂರ್ಣವಾಗಿ

ಸಿಕ್ಲಿಗರರು ತಯಾರಿಸಿ ಕೊಡುತ್ತಾರೆ. ಹಾಗೆಯೆ ಬಿಜಾಪುರ, ರಾಯಚೂರ, ಧಾರವಾಡ ಪ್ರದೇಶಗಳಲ್ಲಿ ದ್ರಾಕ್ಷಿ ಹಣ್ಣುಗಳನ್ನು ಕತ್ತರಿಸಲು ಕತ್ತರಿಯನ್ನು ಉಪಯೋಗಿಸುತ್ತಾರೆ. ಇವುಗಳ ಬೇಡಿಕೆ ಇವರ ಮೇಲಿದೆ. ದ್ರಾಕ್ಷಿ ಬೆಳೆಗಾರರು ಕತ್ತರಿಯನ್ನು ತಯಾರಿಸುವ ಉದ್ದೇಶದಿಂದ ಇವರನ್ನು ಹುಡುಕಿಕೊಂಡು ಹೋಗುತ್ತಾರೆ. ಕಾರ್ಖಾನೆಗಳಲ್ಲಿ ತಯಾರಿಸಿದ ಕತ್ತರಿಗಿಂತ ಇವರ ಕತ್ತರಿ ಬಹಳಷ್ಟು ಉಪಯೋಗಕ್ಕೆ ಬರುತ್ತದೆ ಎಂಬ ಉದ್ದೇಶ ಹೊಂದಿದ್ದಾರೆ. ಮಂಗಳೂರು ಪ್ರದೇಶದಲ್ಲಿ ಮೀನುಗಳನ್ನು ಹಿಡಿಯಲು ಹಾಗೂ ಬಂದರುಗಳಲ್ಲಿ ಕಟ್ಟಡಗಳನ್ನು ಕಟ್ಟಲು ಬೇಕಾಗುವ ಕಬ್ಬಿಣದ ಬುಟ್ಟಿಗಳನ್ನು ತಯಾರಿಸಿ ಕೊಡುತ್ತಾರೆ. ಇದಕ್ಕಾಗಿ ಶಿಗ್ಗಾಂವ ಮತ್ತು ಹುಬ್ಬಳ್ಳಿಯ ಸಿಕ್ಲಿಗರು ವಲಸೆ ಹೋಗಿ ಆ ಸಂದರ್ಭ (ಸೀಜನ್) ದಲ್ಲಿ ಕೆಲವು ಕುಟುಂಬಗಳು ಅಲ್ಲಿಯೆ ನೆಲೆ ನಿಂತು ಈ ಕೆಲಸವನ್ನು ನಿರ್ವಹಿಸುತ್ತಾರೆ. ಇದರಿಂದ ಸಿಕ್ಲಿಗರು ಹೆಸರನ್ನು ಗಳಿಸಿದ್ದಾರೆ. ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಕಬ್ಬಿಣದ ರಥವನ್ನು ತಯಾರಿಸಿದ್ದಾರೆ. ಈ ಜನಾಂಗವು ಕಬ್ಬಿಣದ ಮೂಲಕ ಹಲವು ಬಗೆಯ ಖಡ್ಗ, ತಲವಾರ, ಚೂರಿ, ಚಾಕು, ಈಳಿಗೆ, ಬತಾಯಿ ಮುಂತಾದ ವಸ್ತುಗಳನ್ನು ತಯಾರಿಸುತ್ತಾರೆ.

ಇಂದಿನ ದಿನಗಳಲ್ಲಿ ಔದ್ಯೋಗಿಕರಣದ ಹಿನ್ನೆಲೆಯಲ್ಲಿ ಬುಡಕಟ್ಟು ಸಮುದಾಯಗಳು ಕೆಳಸ್ಥರದಲ್ಲಿ ನೆಲೆ ನಿಂತವು. ಆರ್ಥಿಕ ದೃಷ್ಟಿಕೋನದಿಂದ ಕೆಳಸ್ಥರದಲ್ಲಿ ನಿಂತಿವೆ. ಸಾಮಾಜಿಕ ಜೀವನದ ಮೇಲೆ ಬಾರಿ ಪ್ರಮಾಣದ ಬೇಡಿಕೆ ಇದೆ. ಸಾಮಾಜಿಕ ಸಮಸ್ಯೆಗಳ ಸ್ಥಿತಿ-ಗತಿಗಳು ಬಹು ವಿಸ್ತಾರತೆ ಹೊಂದಿದವು. ಕೆಳಸ್ಥರದಲ್ಲಿ ಯಾರ ಸಂಪರ್ಕವು ಇಲ್ಲದೆ ಒಂಟಿಯಾದ ಬುಡಕಟ್ಟು ಸಮುದಾಯವು ನೆಲೆ ನಿಂತುಕೊಂಡಿವೆ. ಈ ಸಮುದಾಯವು ಯಾವ ನಾಗರೀಕತೆ ನಗರೀಕರಣದ ಸಂಸ್ಕೃತಿಯಲ್ಲಿ ಯಾವ ಸಂಪರ್ಕದ ಗಾಳಿಯೂ ಅವರಿಗೆ ಸೋಂಕಿಲ್ಲ ಇಂತಹ ಹೊತ್ತಿನಲ್ಲಿ ಸಿಕ್ಲಿಗರ ಸಮುದಾಯವು ಸಾಕಷ್ಟು ಬದಲಾವಣೆಯಾಗಬೇಕಾಗಿದೆ.

ಸಾಮಾಜಿಕವಾದ ಸ್ಥಿತಿ-ಗತಿ ಸಾಂಸ್ಕೃತಿಕವಾದ ಅನನ್ಯತೆಯನ್ನು ಸಿಕ್ಲಿಗರರು ಹೊಂದಿದ್ದಾರೆ. ಬಹುಮುಖಿ ಅಲೆಮಾರಿ ಸಮುದಾಯದ ಬುಡಕಟ್ಟು ಸಂಸ್ಕೃತಿ ಮುಖ್ಯ ಪ್ರಧಾನಧಾರೆಯಾಗಿ ಕಂಡು ಬಂದವು. ಬಹು ಮುಖ್ಯವಾದ ನೆಲೆಗಳಲ್ಲಿ ಹೊಸ ಚಿಂತನಧಾರೆಗಳನ್ನು ಹೊಂದಬೇಕಾಗಿದೆ. ಸಿಕ್ಲಿಗರ ಸಮುದಾಯ ಶೈಕ್ಷಣಿಕ ಸಾಮಾಜಿಕ ಸ್ಥಿತಿ-ಗತಿಗಳನ್ನು ಹೊಂದಬೇಕಾದ ಸಂದರ್ಭ ಇದಾಗಿದೆ. ಅಲ್ಲದೆ ತಮ್ಮದೆಯಾದ ಸಾಂಸ್ಕೃತಿಕ ಸಂಸ್ಕೃತಿಯ ಬಹುಮುಖಿ ನೆಲೆಗಳಲ್ಲಿ ಚಿಂತನೆಯನ್ನು ಆರಂಭಿಸಬೇಕಾಗಿದೆ. ಮೊದಲು ಈ ಸಮುದಾಯ ಶೈಕ್ಷಣಿಕ ಸೌಲಭ್ಯಗಳನ್ನು ಪಡೆಯಬೇಕಾಗಿದೆ.

ಅನಕ್ಷರಸ್ಥರ ಸಮುದಾಯವೆ ಇಲ್ಲಿ ಹೆಚ್ಚಾಗಿದೆ. ಹಿರಿಯ ತಲೆಮಾರಿನ ವ್ಯಕ್ತಿಗಳು ಹೆಣ್ಣು ಅಥವಾ ಗಂಡು ಯಾರೇ ಆಗಲಿ ಅಕ್ಷರವಂತರಲ್ಲ. ಆದರೆ ಇತ್ತಿತ್ತಲಾಗಿ ಶಿಕ್ಷಣವನ್ನು ಕಲಿಯಬೇಕಾದ ಆಶಯ ಹೊಂದಲಾಗಿದೆ. ಆರ್ಥಿಕ ದೃಷ್ಟಿಯಿಂದ ಇದು ಸಾಧ್ಯವಾಗುತ್ತಿಲ್ಲ. ಅತ್ಯಂತ ಹಿಂದುಳಿದ ಜನಾಂಗವಾಗಿದ್ದಾರೆ. ಇದಕ್ಕಾಗಿ ಶಿಕ್ಷಣ ವ್ಯವಸ್ಥೆಯು ಅತಿ ಅವಶ್ಯವಾಗಿ ಕೊಡಬೇಕಾಗಿದೆ. ಸಿಕ್ಲಿಗರ ಭಾಷೆ ಆಡುವುದರಿಂದ ಕಲಿಯಬೇಕಾದ ಶಿಕ್ಷಣ ಹಿಂದಿಯಾಗಿದೆ. ಮಾತನಾಡುವ ಭಾಷೆ ಕನ್ನಡ ಪ್ರದೇಶದ್ದಾಗಿದೆ. ಇಂತಹ ಭಾಷಾ ಸಮಸ್ಯೆಯನ್ನು ಎದುರಿಸಬೇಕಾಗಿದೆ. ಭಾಷಾ ಸಮಸ್ಯೆಗಳು ಹಲವು ರೀತಿಯಲ್ಲಿವೆ. ಪ್ರಾದೇಶಿಕ ಭಿನ್ನತೆ ಇಲ್ಲಿ ಎದ್ದು ಕಾಣುತ್ತದೆ. ಕನ್ನಡ, ಹಿಂದಿ ಹಾಗೂ ಸಿಕ್ಲಿಗರ ಭಾಷೆಯನ್ನು ಸಂಪರ್ಕ, ಆಡಳಿತ, ವ್ಯವಹಾರ ಭಾಷೆ ಹಾಗೂ ಕಲಿಕಾ ಭಾಷೆ ಇವುಗಳ ಅಂತರಗಳನ್ನು ಕಲಿಯಬೇಕಾಗಿದೆ. ಹೀಗಾಗಿ ಸಾಮಾಜಿಕ ಜೀವನದಲ್ಲಿ ಭಾಷಾ ಸಮಸ್ಯೆಗಳು ಎದುರಾಗುವುದರಲ್ಲಿ ಶೈಕ್ಷಣಿಕ ಸಮಸ್ಯೆ ಕಂಡು ಬರುತ್ತದೆ.

ಬುಡಕಟ್ಟು ಸಮುದಾಯಗಳು ಪ್ರಸ್ತುತ ದಿನಗಳಲ್ಲಿ ಚಿಂತಾಜನಕ ಸ್ಥಿತಿಯನ್ನು ಅನುಭವಿಸಬೇಕಾಗಿದೆ. ಈ ಸಮುದಾಯವು ನಗರೀಕರಣದ ಹಾಗೂ ಪಟ್ಟಣ ಪ್ರದೇಶಗಳಲ್ಲಿ ವಾಸವಾಗಿ ಹಲವು ಸಮಸ್ಯೆ ಎದುರಿಸಬೇಕಾಗಿದೆ. ಬಹು ರಾಷ್ಟ್ರೀಯ ಕಂಪನಿಗಳ ಹಾವಳಿಯಿಂದ ಔದ್ಯೋಗಿಕರಣ ಹಾಗೂ ಕಾರ್ಖಾನೆಗಳ ಸ್ಥಾಪನೆಯಿಂದ ಗುಡಿ ಕೈಗಾರಿಕೆ, ಕುಲಕಸಬುಗಳಿಗೆ ಯಾವುದೇ ರೀತಿಯ ಬೇಡಿಕೆ ಇಲ್ಲದೆ ಅಧಿಕವಾಗಿ ಇಳಿಮುಖವಾಗುತ್ತಲಿದೆ. ತಂತ್ರಜ್ಞಾನದ ಹೊತ್ತಿನಲ್ಲಿ ಇವರಿಗೆ ಮೂಲಭೂತ ಸೌಲಭ್ಯಗಳು ಸರ್ಕಾರದಿಂದ ದೊರೆತಿಲ್ಲ. ಹೀಗಾಗಿ ಸಂಕಷ್ಟ ಜೀವನವನ್ನು ಸಾಗಿಸಬೇಕಾಗಿದೆ. ಆದರೂ ತಮ್ಮ ಕುಲಕಸಬುಗಳ ಜೀವನದಲ್ಲಿ ಆತ್ಮ ವಿಶ್ವಾಸ ಹಾಗೂ ಉತ್ಸಾಹಗಳನ್ನು ಒಂದು ಕೈ ಬಿಡದೆ ಹಾಗೆ ಇದ್ದಾರೆ. ಇಂತಹ ಬುಡಕಟ್ಟು ಕಸುಬಿನ ವಿಷಯದಲ್ಲಿ ಕಲಿಯಬೇಕಾದದ್ದು ಬಹಳ ಇದೆ.

ಈ ಸಮುದಾಯ ಪ್ರಜ್ಞಾವಂತರಾಗಬೇಕು ಅದಕ್ಕಾಗಿ ಸರ್ಕಾರದ ವಿವಿಧ ಯೋಜನೆಗಳು ಸೌಲತ್ತುಗಳನ್ನು ಪಡೆಯಬೇಕಾಗಿದೆ. ಇವರಿಗೆ ಸರ್ಕಾರದ ಮೂಲಕ ತರಬೇತಿಯನ್ನು ಕೊಡಬೇಕಾಗಿದೆ. ಇವರು ವೃತ್ತಿಯಲ್ಲಿ ಇಂದಿನ ದಿನಗಳಲ್ಲಿ ಅವರ ವೃತ್ತಿಗೆ ತಕ್ಕಂತೆ ಬದಲಾವಣೆ ಕೈಗೊಳ್ಳುವ ತರಬೇತಿ ನೀಡಬೇಕಾಗಿದೆ. ಇವರಿಗಾಗಿಯೇ ಪ್ರತ್ಯೇಕ ಕಾರ್ಯಗಾರ ತರಬೇತಿ ಶಿಬಿರವನ್ನು ಏರ್ಪಡಿಸಬೇಕಾಗಿದೆ. ಇವೆಲ್ಲಕ್ಕಿಂತ ಮೊದಲು ಸರಕಾರದ ಜಾಗೆಯಲ್ಲಿ ವಸತಿಗಾಗಿ ಸ್ಥಳವನ್ನು ನೀಡಬೇಕು. ಅಂಬೇಡ್ಕರ್, ಪ್ರಧಾನ ಮಂತ್ರಿರೋಜಗಾರ್, ಇಂದಿರಾ ಅವಾಜ್, ಆಶ್ರಯ ಹಾಗೂ

ಕೊಳಚೆ ಪ್ರದೇಶಗಳ ಯೋಜನೆಗಳ ಮನೆಗಳನ್ನು ಕಟ್ಟಿಕೊಡುವ ಕೆಲಸ ಮಾಡಬೇಕಾಗಿದೆ. ಅವರಿಗೆ ಇದರಿಂದ ನೆಲೆ ನಿಲ್ಲಲು ಸಾಧ್ಯವಾಗುತ್ತದೆ. ವಿದ್ಯುತ್ ಹಾಗೂ ನೀರು ಸರಬರಾಜು ಶೌಚಾಲಯಗಳ ನಿರ್ಮಾಣವಾಗಬೇಕಾಗಿದೆ.

ಈ ಬುಡಕಟ್ಟು ಜನಾಂಗದ ಮಕ್ಕಳಿಗೆ ಶಾಲೆಯನ್ನು ಕಲಿಯಲು ಬೇಕಾಗಿರುವ ಪಠ್ಯಪುಸ್ತಕ, ಶುಲ್ಕವನ್ನು ಉಚಿತವಾಗಿ ನೀಡಬೇಕು. ಶೈಕ್ಷಣಿಕ ಅಭ್ಯಾಸ ಕೊಡುವುದಲ್ಲದೆ ಪಡಿತರ ಚೀಟಿ ಒದಗಿಸಬೇಕು. ಚುನಾವಣೆಯಲ್ಲಿ ಮತದಾನ ಮಾಡಲು ಗುರುತಿನ ಚೀಟಿ ನೀಡಬೇಕು. ಇವರ ಜನಸಂಖ್ಯೆಯನ್ನು ಮಹಾಪ್ರಬಂಧದಲ್ಲಿ ಸಮೀಕ್ಷೆ ಮಾಡಲಾಗಿದೆ. ಅವರ ಸಮಗ್ರ ಕುಟುಂಬಗಳು ಹಾಗೂ ಜನಸಂಖ್ಯೆ ಆಧಾರಿತವಾಗಿ ಇವರನ್ನು ಪರಿಶಿಷ್ಟ ಜಾತಿಯಲ್ಲಿ ಸೇರಿಸಬೇಕು. ಜಾತಿ ಪ್ರಮಾಣ ಪತ್ರದಲ್ಲಿ ಸಿಖ್ಖ್‌ರೆಂದು ಕೊಡದೆ ಸಿಕ್ಲಿಗರ ಎಂದು ನಮೂದಿಸಬೇಕಾದ ಅವಶ್ಯಕತೆ ಇದೆ. ಕರ್ನಾಟಕವನ್ನು ಹೊರತುಪಡಿಸಿದರೆ ನೆರೆಯ ರಾಜ್ಯಗಳಾದ ದಿಲ್ಲಿ, ಹರಿಯಾಣ, ಹಿಮಾಚಲಪ್ರದೇಶ, ಪಂಜಾಬ, ಚಂಡಿಗಡಗಳಲ್ಲಿ ಈ ಜನಾಂಗವನ್ನು ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಪರಿಗಣಿಸಲಾಗಿದೆ.

ಆಧುನಿಕ ವಸ್ತುಗಳನ್ನು ಕಡಿಮೆ ಪ್ರಮಾಣದಲ್ಲಿ ಬಳಸುತ್ತಾರೆ. ಕರ್ನಾಟಕದಲ್ಲಿ ಕಾಣಿಸುವ ಈ ಜನಾಂಗ ಹಲವು ರೀತಿಯಲ್ಲಿ ಪ್ರಾದೇಶಿಕ ಭಿನ್ನತೆ ಹೊಂದಿದ್ದಾರೆ. ಶಿಗ್ಗಾಂವ, ಧಾರವಾಡ, ಹುಬ್ಬಳ್ಳಿ ಹಾಗೂ ನಿಪ್ಪಾಣಿಗಳಲ್ಲಿ ಇರುವ ಸಿಕ್ಲಿಗರು ಸ್ವಲ್ಪ ಮಟ್ಟಿಗೆ ಆಧುನಿಕತೆಯ ಗಾಳಿಗೆ ಒಳಗಾಗಿದ್ದಾರೆ. ತೀರಾ ವಿರಳ ಜನಾಂಗದವರು ಈ ರೀತಿಯಾದರೆ ಅತಂತ್ರ ಸ್ಥಿತಿಯಲ್ಲಿರುವ ಸಿಕ್ಲಿಗರ ಸಮುದಾಯಕ್ಕೆ ಪ್ರೋತ್ಸಾಹ ನೀಡಬೇಕಾಗಿದೆ. ಹಲವಾರು ಪ್ರಬಲ ಬುಡಕಟ್ಟು ಜನಾಂಗಗಳಲ್ಲಿ ಇವರು ಒಬ್ಬರು. ಇವರಲ್ಲಿ ಪ್ರಮಾಣಿಕತೆ, ಸ್ವಾಭಿಮಾನ ಮಾನವೀಯ ಮೌಲ್ಯಗಳನ್ನು ಪ್ರತಿಪಾದನೆ ಮಾಡುತ್ತಿದ್ದಾರೆ. ೧೯೫೪ ರಲ್ಲಿ ಸರ್ಕಾರದ ಅನೇಕ ಕಲ್ಯಾಣ ಯೋಜನೆಗಳು ಪ್ರಚಾರಕ್ಕೆ ಬಂದವು. ಆದರೆ ಇವರಿಗೆ ಆ ಯೋಜನೆಗಳು ತಲುಪಿಲ್ಲ. ಸರ್ಕಾರವು ಅದರಲ್ಲಿ ಕೊಪ್ಪಳದ ಜಿಲ್ಲಾಧಿಕಾರಿಗಳು ಸಿಕ್ಲಿಗರ ಕುಟುಂಬದ ವ್ಯಕ್ತಿಗೆ ಇಂದ್ರಿಗಿಯಲ್ಲಿ ಭೂಮಿಯನ್ನು ಕೊಡಲಾಗಿತ್ತು. ಕೃಷಿ ಪದ್ಧತಿಯನ್ನು ಅನುಸರಿಸಿಕೊಂಡು ಬರಲು ಹೇಳಲಾಗಿತ್ತು ಆದರೆ ಆರ್ಥಿಕ ಅನಾನುಕೂಲದಿಂದ ಆ ಭೂಮಿಯನ್ನು ಮಾರ ಬೇಕಾಯಿತು. ಇಂತಹ ಉದಾಹರಣೆಗಳು ಕರ್ನಾಟಕದಲ್ಲಿ ಸಿಗುವುದು ಅಪರೂಪ.

ಇಂದಿನ ಪ್ರಗತಿಯಲ್ಲಿ ಕಾಣುವ ಅಧಿಕಾರಿ ವರ್ಗ, ಸರ್ಕಾರಿ ಅಧಿಕಾರಿಗಳ ಬಗ್ಗೆ ಸಿಕ್ಲಿಗರ ಜನಾಂಗ ತುಂಬ ಅಸಮಾಧಾನವನ್ನು ತೋಡಿಕೊಳ್ಳುತ್ತಾರೆ. ರಾಜಕಾರಣಿಗಳಂತೂ ಹಾರಿಕೆಯ

ಉತ್ತರವನ್ನು ಕೊಡುತ್ತಾರೆ. ಮಾಹಿತಿ ಸಂಗ್ರಹಿಸಲು ಇವರನ್ನು ನೇರವಾಗಿ ಸಂಪರ್ಕಿಸಿದವರಲ್ಲಿ ಹಲವರು ಇದ್ದಾರೆ. ಆದರೆ ನಮಗೇನು ಸೌಲಭ್ಯಗಳನ್ನು ಕಲ್ಪಿಸಿಲ್ಲವೆಂದು ತಮ್ಮ ಅಳಲನ್ನು ವ್ಯಕ್ತಪಡಿಸುತ್ತಾರೆ. ಬಂದು ಹೋದ ವ್ಯಕ್ತಿಗಳ ಬಗ್ಗೆ ಉದಾಸೀನ ಮನೋಭಾವವನ್ನು ಹೊಂದಿದ್ದಾರೆ. ಈ ಬುಡಕಟ್ಟು ಯಾವ ಸಂದರ್ಭಗಳು ಬಂದರೂ ಸಿಖ್ಖ್ ಧರ್ಮದ ನಿಯಮಾವಳಿಗಳನ್ನು ಪರಂಪರೆಯನ್ನು ಬಿಡುವುದಿಲ್ಲ. ಹಿರಿಯರಿಂದ ಹಿಡಿದು ಕಿರಿಯರ ತನಕ ತಮ್ಮ ಮೂಲ ವೃತ್ತಿ ಪರಂಪರೆ ಪಾಲಿಸಿಕೊಂಡು ಬರುತ್ತಿದ್ದಾರೆ. ಈ ಎಲ್ಲ ಅಂಶಗಳು ಕ್ಷೇತ್ರಕಾರ್ಯದ ಸಂದರ್ಭಗಳಲ್ಲಿ ಕಂಡು ಬಂದವು.

ಸಿಕ್ಲಿಗರ ಬುಡಕಟ್ಟಿನ ಉನ್ನತಿಗಾಗಿರುವ ಸಮಸ್ಯೆಗಳು ಮತ್ತು ಪರಿಹಾರಗಳು

೧. ಈ ಬುಡಕಟ್ಟು ಜನಾಂಗವು ತಮ್ಮ ಹಿರಿಯರು ಯಾರು ಕಲಿತಿಲ್ಲ. ನಾವು ಕೂಡ ಕಲಿಯುತ್ತಿಲ್ಲ. ನಮ್ಮ ಮಕ್ಕಳಾದರು ಶಿಕ್ಷಣವನ್ನು ಪಡೆಯಬೇಕೆಂಬ ಒಲವು ತೋರುತ್ತಿದ್ದಾರೆ. ಸಿಕ್ಲಿಗರ ಮಕ್ಕಳಿಗಾಗಿ ಅಲ್ಲಲ್ಲಿ ಶಿಕ್ಷಣವನ್ನು ನೀಡುತ್ತಲಿದ್ದಾರೆ.

೨. ಪರಿಶಿಷ್ಠ ಜಾತಿ ಹಾಗೂ ಪರಿಶಿಷ್ಠ ಪಂಗಡಗಳಲ್ಲಿ ಭಾರತ ದೇಶದ ಐದು ಜಿಲ್ಲೆಗಳಲ್ಲಿ ಈ ಜನಾಂಗವನ್ನು ಸೇರಿಸಲಾಗಿದೆ. ಕರ್ನಾಟಕದಲ್ಲಿ ಇವರನ್ನು ಸೇರಿಸಿಲ್ಲ. ಇವರಿಗೆ ಸಿಕ್ಲಿಗರ ಎಂಬ ಜಾತಿ ಪ್ರಮಾಣ ಪತ್ರ ನೀಡಬೇಕು.

೩. ಆರ್ಥಿಕವಾಗಿ ಹಿಂದುಳಿದ ಈ ಜನಾಂಗಕ್ಕೆ ಕಾರ್ಪೋರೇಷನ್ ಬ್ಯಾಂಕುಗಳು, ಸರ್ಕಾರದ ಯೋಜನೆಗಳು, ಇಲಾಖೆಗಳ ಸಹಕಾರ ಹಾಗೂ ಸಾಲ ಸೌಲಭ್ಯಗಳನ್ನು ನೀಡುವ ಮೂಲಕ ಆರ್ಥಿಕ ಭದ್ರತೆಯನ್ನು ಪಡೆಯಬೇಕಾಗಿದೆ. (ರಿಯಾಯಿತಿ) ಸಬ್ಸಿಡಿಗಳನ್ನು ಕೊಡಬೇಕಾಗಿದೆ.

೪. ಬ್ರಿಟಿಷರು ಹಚ್ಚಿದ ಕ್ರಿಮಿನಲ್ ಬುಡಕಟ್ಟು ಎಂಬ ಹಣೆಪಟ್ಟಿಯನ್ನು ಕಳಚಿಹಾಕಬೇಕು ಇಲ್ಲದಿದ್ದರೆ ಇವರ ಮೇಲೆ ಪ್ರತಿ ದಿವಸ ಸುಳ್ಳು ಕೇಸುಗಳು ದಾಖಲಾಗುತ್ತಿವೆ. ಇವುಗಳನ್ನು ತಡೆಗಟ್ಟಬೇಕಾಗಿದೆ.

ಬುಡಕಟ್ಟಿನ ಉನ್ನತಿಗಾಗಿ ಸಲಹೆಗಳು

೧. ಕರ್ನಾಟಕದಲ್ಲಿರುವಂತಹ ಸಿಕ್ಲಿಗರು ತಮ್ಮ ಮೂಲಭೂತ ಬೇಡಿಕೆಗಳಿಗಾಗಿ ಸಂಘಟಿತರಾಗಬೇಕು.

೨. ಇವರು ಶಿಕ್ಷಣವನ್ನು ಪಡೆಯಲು ಮುಂದೆ ಬರಬೇಕು

೩. ಒಗ್ಗಟ್ಟಾಗಿರಬೇಕು, ಸಂಘಟನೆ ಶಿಕ್ಷಣದತ್ತ ಜಾಗೃತಿ ಗಮನ ಹರಿಸಬೇಕು

೪. ನ್ಯಾಯಯುತವಾದ ಹಕ್ಕುಗಳ ಸಲುವಾಗಿ ಹೋರಾಟ ಮಾಡಬೇಕು

೫. ಕಷ್ಟ ಜೀವಿಗಳಾಗಿ ಬದುಕುತ್ತಿರುವುದಕ್ಕೆ ಬೇರೆ ಮಾರ್ಗೋಪಾಯ ಹಿಡಿಯಬೇಕು

೬. ಕಬ್ಬಿಣದ ಮೂಲ ಕಸುಬುಗಳ ಜೊತೆಗೆ ವಿವಿಧ ವೃತ್ತಿಪರ ತರಬೇತಿಗಳನ್ನು ನೀಡಬೇಕು

ಈ ರೀತಿಯಾಗಿ ಕರ್ನಾಟಕದ ಸಿಕ್ಲಿಗರ ಬಹು ಕಷ್ಟ ಹಾಗೂ ಶ್ರಮ ಜೀವಿಗಳಾಗಿ ಜೀವನ ಸಾಗಿಸುತ್ತಿದ್ದಾರೆ. ಕರ್ನಾಟಕದಲ್ಲಿ ಈ ಜನಾಂಗವನ್ನು ಕುರಿತು ಗೆಜಿಟೇರಿಯರ್, ಲೇಖನ, ಪುಸ್ತಕ ಹಾಗೂ ಟಿಪ್ಪಣಿಗಳು ಎಲ್ಲೂ ದಾಖಲಾಗಿಲ್ಲ ಇವರ ಕುರಿತು ಯಾವ ಮಾಹಿತಿಗಳು ಸಿಗುವುದಿಲ್ಲ ಇಂತಹ ಅಪರೂಪವಾದ ವಿಶಿಷ್ಟವಾದ ಬುಡಕಟ್ಟು ಸಿಕ್ಲಿಗರ ಜನಾಂಗವಾಗಿದೆ ಎಂಬುದನ್ನು ಕ್ಷೇತ್ರಕಾರ್ಯ, ಸಂದರ್ಶನದ ಮೂಲಕ ಒರೆಗಲ್ಲಿಗೆ ಹಚ್ಚಿ ಇದೊಂದು ಬುಡಕಟ್ಟುಗಳಲ್ಲಿ ಒಂದಾಗಿದೆ ಎಂದು ಈ ಮಹಾಪ್ರಬಂಧದ ಮೂಲಕ ಅಭಿವ್ಯಕ್ತಿಸಲಾಗಿದೆ.

ಅಧ್ಯಾಯ: ಎಂಟು

ಸಮಾರೋಪ

ಅಧ್ಯಾಯ: ಎಂಟು

ಸಮಾರೋಪ

ಭಾರತದಲ್ಲಿ ವಾಸಿಸುತ್ತಿರುವ ನೂರಾರು ಅಲೆಮಾರಿ ಬುಡಕಟ್ಟುಗಳನ್ನು ಅಮೂಲಾಗ್ರವಾಗಿ ಸಂಶೋಧಿಸಿ ಕ್ಷೇತ್ರಕಾರ್ಯದ ಮೂಲಕ ಕಂಡು ಹಿಡಿದ ಬಹು ಅದ್ಭು ಹಾಗೂ ರೋಮಾಂಚನಕಾರಿಯಾದ ಅನುಭವ ನೀಡುವ ಬುಡಕಟ್ಟು ಸಮುದಾಯ ಕೆಲವೇ ಕೆಲವು ಜನಾಂಗಗಳಲ್ಲಿ ಹಲವು ಅಂತಸತ್ವಗಳಲ್ಲಿ ಸಿಕ್ಲಿಗರ ಒಂದು. ಭಾರತ ದೇಶ ಭವ್ಯವಾದುದು ಇಂತಹ ದೇಶದಲ್ಲಿ ಹಲವು ಅಂತಸತ್ವಗಳನ್ನು ಕೂಡಿಕೊಂಡ ವೈವಿಧ್ಯಮಯವಾದ ಜಗತ್ತಿನಲ್ಲಿ ಸಮಾಜದ ವ್ಯವಸ್ಥೆಯು ಕೂಡಾ ಬದಲಾಗುತ್ತಿದೆ. ಬದಲಾಗಬೇಕಿದೆ. ಈ ನೆಲೆಯಲ್ಲಿ ಅನೇಕ ಅಸಮತೋಲನವಾದ ಪ್ರಾದೇಶಿಕ ಭಿನ್ನತಯಿದೆ. ಅಸಮಾನತೆಯ ಹೊಗೆಯಾಡುತ್ತಿದೆ. ತಾರತಮ್ಯತೆ ಕೂಡಿಕೊಂಡಿವೆ. ಇವುಗಳೇನಿದ್ದರೂ ಸಹ ತಮ್ಮ ಮೂಲವಾದ ತಿಳುವಳಿಕೆ ಪ್ರಜ್ಞೆಯನ್ನು ಪಾರಂಪರಾಗತವಾಗಿ ಉಳಿಸಿ-ಬೆಳೆಸಿ ಮುನ್ನೆಡೆಸಿಕೊಂಡು ಹೋಗುತ್ತಿರುವ ಸಿಕ್ಲಿಗರ ಹಾಗೂ ಇತರ ಬುಡಕಟ್ಟುಗಳ ಕಾರ್ಯ ಮಹತ್ವದೆಂದೇ ಭಾವಿಸಬೇಕು. ಇವತ್ತಿನ ಸಂದರ್ಭ ಆಧುನಿಕ ಹಲವು ಸಂವೇದನೆಗಳನ್ನು ಸವಾಲುಗಳನ್ನು ಬಿಕ್ಕಟ್ಟುಗಳನ್ನು ಹೊಂದಿದೆ. ಇವುಗಳ ಅಪಾಯದ ಅಂಚಿನಲ್ಲಿದ್ದರೂ ಸಹಿತ ತನ್ನ ಮೂಲಭೂತವಾದ ಜನಾಂಗದ ಬುಡಕಟ್ಟಿನ ಅನನ್ಯತೆ

ಉಳಿಸಿಕೊಂಡು ಬರುತ್ತಿರುವುದು ಹೆಚ್ಚಿನ ಸಂತಸದಾಯಕ ಸಂಗತಿಯಾಗಿದೆ. ಇಂತಹ ಅನೇಕ ಅಸಹಾಯಕತೆ ಹೊಂದಿದ ಬುಡಕಟ್ಟುಗಳಲ್ಲಿ ಸಿಕ್ಲಿಗರ ಸಮುದಾಯವು ಕೂಡಾ ಒಂದಾಗಿದೆ. ಇಂತಹ ನೆಲೆಗಟ್ಟಿನ ಮೇಲೆ ನೂರಾರು ಬುಡಕಟ್ಟುಗಳು ಹಾಗೇ ನೆಲೆ ನಿಂತಿವೆ ಪ್ರಯತ್ನಿಸಲು ತವಕಿಸುತ್ತಿವೆ.

ಪ್ರತಿಯೊಂದು ಬುಡಕಟ್ಟು ಕೂಡಾ ತನ್ನ ಪ್ರತ್ಯೇಕತೆ ಉಳಿಸಿಕೊಂಡು ಬಂದವುಗಳ ಬುಡಕಟ್ಟುಗಳಲ್ಲಿ ಸಿಕ್ಲಿಗರ ಕುಟುಂಬವೂ ಒಂದಾಗಿದೆ. ವರ್ಣರಂಜಿತ ಬುಡಕಟ್ಟುಗಳಿಗೆ ಕೊರತೆಯಿಲ್ಲ. ಆದರೆ ಸಿಕ್ಲಿಗರ ಬುಡಕಟ್ಟು ಸಮುದಾಯವು ಕಠಿಣ ಪರಿಶ್ರಮ ಹಾಗೂ ಶ್ರಮಜೀವನದ ಮೂಲಕ ತನ್ನ ಸಂಕಷ್ಟಗಳ ಮಧ್ಯದಲ್ಲಿ ಕುಲಕಸಬುಗಳನ್ನು ನಿರ್ವಹಿಸಿಕೊಂಡು ಬರುತ್ತಿರುವುದನ್ನು ಗಮನಿಸಬಹುದಾಗಿದೆ. ಸಿಕ್ಲಗರ ಸಮುದಾಯವು ಮೂಲ ಸಂಸ್ಕೃತಿಯನ್ನು ಯಥಾವತ್ತಾಗಿ ಉಳಿಸಿಕೊಂಡು ಬಂದ ಸಮೂಹವಾಗಿದ್ದಾರೆ. ಇವತ್ತಿನ ನೆಲೆಗಳಲ್ಲಿ ಬುಡಕಟ್ಟುಗಳನ್ನು ನೋಡುವ ಮೂಲಕ ದ್ರಾವಿಡ ಮೂಲ ಜನಾಂಗಕ್ಕೆ ಸೇರಿಕೊಂಡ ಸಿಖ್ಖ್ ಸಮುದಾಯಗಳ ಒಂದು ಗುಂಪು ಸಿಕ್ಲಿಗರ ಆಗಿದ್ದಾರೆ. ಮಾನವಕುಲಶಾಸ್ತ್ರ ಹಾಗೂ ಸಮಾಜಶಾಸ್ತ್ರಗಳ ಅಧ್ಯಯನದ ಮೂಲಕ ಸಂಸ್ಕೃತಿ ಪರಂಪರೆ ಪರಾಮರ್ಶಿಸುವ ಸಾಂಸ್ಕೃತಿಕ ಸಾಮಾಜಿಕವಾದ ಅಧ್ಯಯನ ಸಿಕ್ಲಿಗರ ಕುರಿತು ಮಾಡ ಹೊರಟಿರುವುದು ಈ ಮಹಾಪ್ರಬಂಧದ ಮೂಲ ಉದ್ದೇಶವಾಗಿದೆ. ಸಿಕ್ಲಗರ ಜನಾಂಗದ ಜೀವನದಲ್ಲಿ ಕಂಡು ಬಂದ ಏರಿಳಿತಗಳು ಜೀವನ ವಿಧಾನಗಳು, ಕುಲಕಸಬುಗಳು ಹಂತಗಳನ್ನು ಅತ್ಯಂತ ಸಮರ್ಪಕವಾಗಿ ಕಟ್ಟಿಕೊಡಲು ಪ್ರಯತ್ನಿಸಲಾಗಿದೆ.

ಸಿಕ್ಲಿಗರ ಬುಡಕಟ್ಟು ಜನಾಂಗವನ್ನು ಕುರಿತು ಈವರೆಗೂ ನಡೆದಿರುವ ಅನೇಕ ಅಂಶಗಳಂತೆ ಕಡೆಗೆ ಗಂಭೀರವಾದ ಪತ್ತೆ ಹಚ್ಚುವ ಕೆಲಸ ಮಾಡಲಾಗಿದೆ. ಆದರೆ ಸಿಕ್ಲಿಗರ ಜನಾಂಗದ ಕುರಿತು ಉಲ್ಲೇಖಗಳೇ ಇಲ್ಲ. ಜನಗಣತಿಯ ಆಧಾರದ ಮೇಲೆ ನೋಡಬೇಕು ಎಂಬ ಅಂಶಗಳನ್ನು ತಯಾರಿಸಿಕೊಂಡರೆ ಅಲ್ಲಿಯೂ ಇವರ ಹೆಸರು ನೋಂದಣಿ ಆಗದೇ ಉಳಿದಿದೆ. ಪಂಜಾಬ, ಚಂಡಿಗಡ, ದಿಲ್ಲಿ, ಹರಿಯಾಣ, ಹಿಮಾಚಲಪ್ರದೇಶದಂತಹ ಕೇವಲ ಐದು ರಾಜ್ಯಗಳಲ್ಲಿ ಮಾತ್ರ ಇವರ ಜನಗಣತಿ ದೊರಕುತ್ತವೆ. ಉಳಿದೆಲ್ಲ ಕಡೆ ಇವರ ಉಲ್ಲೇಖಗಳು ದೊರೆತಿಲ್ಲ. ಒಂದು ಪರಿಚಯಾತ್ಮಕ ಅಥವಾ ಈ ಜನಾಂಗ ಕುರಿತಾದ ಯಾವುದೇ ಅಧ್ಯಯನದ ಪ್ರಯತ್ನಗಳು ಒಂದು ಮಾಡಿಲ್ಲವೆಂಬುದನ್ನು ಗಮನದಲ್ಲಿರಿಸಿಕೊಂಡು **'ಕರ್ನಾಟಕದ ಸಿಕ್ಲಿಗರರು ಸಾಮಾಜಿಕ ಅಧ್ಯಯನವನ್ನು'** ಕೈಗೊಳ್ಳಲಾಗಿದೆ. ಈ ಜನಾಂಗ ಹೆಚ್ಚಿನ ಮಾಹಿತಿ ಕ್ಷೇತ್ರಕಾರ್ಯ ಆಧಾರಿತವಾದ ಅಧ್ಯಯನ

ನಡಸಲಾಗಿದೆ.ಸಿಕ್ಲಿಗರ ಜನಾಂಗವು ಸುಪ್ತಸ್ಥಿತಿಯಲ್ಲಿರುವವರ ಹಲವಾರು ಸಮಸ್ಯೆ ಪರಿಹಾರಗಳನ್ನು ಕುರಿತು ಮೌಲಿಕ ವಿಚಾರಗಳನ್ನು ಅಭಿವ್ಯಕ್ತಪಡಿಸಲು ಪ್ರಯತ್ನಿಸಿದ್ದೇನೆ. ಇಂತಹ ಅನೇಕ ಬುಡಕಟ್ಟು ಜನಾಂಗಗಳು ಆಧುನಿಕ ಸವಲತ್ತುಗಳಿಂದ ವಂಚಿಸಲ್ಪಟ್ಟಿದ್ದಾರೆ. ಲೌಕಿಕವಾದ ಅನೇಕ ಅಧಿಕಾರಗಳಿಂದ ಸೌಲಭ್ಯಗಳಿಂದ ದೂರವಿದ್ದರೆ ಯಾವ ಜಾಗತೀಕರಣ ಹಾಗೂ ಆಧುನಿಕತೆಯ ಸೋಂಕಿಲ್ಲದೇ ಅದರ ಪರಿವೂ ಸಹಿತ ಈ ಜನಾಂಗಕ್ಕೆ ಸ್ಪರ್ಶಿಸದ ಕಾರಣ ದಬ್ಬಾಳಿಕೆ, ಶೋಷಣೆಗಳಿಂದ ಮುಕ್ತವಾಗಿಲ್ಲ. ಇವೆಲ್ಲವುಗಳನ್ನು ಅನುಭವಿಸಿ ಶೋಷಣೆ, ನೋವು, ಬಡತನಗಳ ತಳಮಳ, ತಲ್ಲಣಗಳ ತಾಕಲಾಟದಲ್ಲಿ ನೆಲಕಚ್ಚಿ ದುಡಿದು ಶ್ರಮವಹಿಸಿದ್ದುದರ ಫಲವೇ ಅವರಿಗೆ ಚಿಂತಾಜನಕ ಸ್ಥಿತಿಯಲ್ಲಿ ಮುಳುಗುವಂತೆ ಮಾಡಿದೆ.

ಈ ಜನಾಂಗ ಬೌದ್ಧಿಕದ ಜೊತೆಗೆ ದೈಹಿಕ ಶ್ರಮಪಟ್ಟು ಚಮತ್ಕಾರಗಳನ್ನು ಕೈಗೊಂಡು ಭೌತಿಕ ಜಗತ್ತಿನಲ್ಲಿ ತನ್ನದೇಯಾದ ಹಂದರಗಳನ್ನು ನಿರ್ಮಿಸಿಕೊಂಡು ಸುಂದರವಾದ ಲೋಕ ನಿರ್ಮಿಸಿಕೊಂಡಿದ್ದು ಸಿಕ್ಲಿಗರ ಸಮುದಾಯವೇ ಆಗಿದೆ. ಶ್ರಮ, ಕಷ್ಟ, ಸಹಿಷ್ಣುಗಳಾದ ಈ ಜನಾಂಗ ಭಾರತದಲ್ಲಿ ಆಡಳಿತ ನಡೆಸಿದ ಅನೇಕ ಸಾಮಂತರ ಸಂಸ್ಥಾನಿಕರ, ರಾಜರುಗಳ ಕೈಯಲ್ಲಿ ಸಿಕ್ಕು ಅವರಿಗೆ ಬೇಕಾದ ಹಾಗೇ ಬಳಸಿಕೊಂಡು ಇವರಿಗೆ ಮೂಲಭೂತ ಸೌಕರ್ಯಗಳನ್ನು ನೀಡಲಿಲ್ಲ. ಪಂಜಾಬದ ಮೂಲದವರಾಗಿದ್ದರೂ ರಣಜಿತ್‌ಸಿಂಗ್‌ರ ಸೈನ್ಯಾಡಳಿತ ಮತ್ತು ಅವರಿಗೆ ಬೇಕಾದ ಸಶಸ್ತ್ರಗಳನ್ನು ತಯಾರಿಸಿಕೊಡುವ ಕೆಲಸ ನಿರ್ವಹಿಸಿಕೊಂಡು ಹೈದ್ರಾಬಾದ್ ನಿಜಾಮನ ಆಸ್ಥಾನದಲ್ಲಿ ಸಹಿತ ತಲವಾರ, ಜಂಬೆ ಖಡ್ಗ,ಹಾಗೂ ಮಾರಕವಾದ ಅಸ್ತ್ರಗಳನ್ನು ತಯಾರಿಸಿ ನಿಜಾಮರಿಂದ ಸೈ ಎನಿಸಿಕೊಂಡರು. ನಿಜಾಮನು ತನ್ನ ಮೂಲ ಕಂದಾಯ, ತೆರ, ಕರವಸೂಲಿಗಾಗಿ ದಷ್ಟಪುಷ್ಟವಾದ ದೇಹದಾರ್ಡತೆ ಹೊಂದಿ ಸಿಂಹದಂತೆ ಕಾಣುವ ಸಿಕ್ಲಿಗರ ಸಮುದಾಯವನ್ನು ಹೈದ್ರಾಬಾದ್ ಸಂಸ್ಥಾನ ಜಿಲ್ಲೆಗಳಲ್ಲಿ ಕಂದಾಯ ತುಂಬಿ ಬಂದಿತು. ಇವರ ಪತನದ ನಂತರ ಕಬ್ಬಿಣದ ವೃತ್ತಿಯನ್ನೇ ಅವಲಂಬಿಸಿಕೊಂಡು ಕರ್ನಾಟಕದಾದ್ಯಂತ ಪಸರಿಸಿಕೊಂಡು ಹೋದ ಘಟನೆ ಅವರಿಗೆ ಮೂಲ ಹೀನಾಯ ಸ್ಥಿತಿಗೆ ತಲುಪಲು ಕಾರಣವಾಯಿತು. ಅಂದಿನ ಆಳರಸರು ಇವರ ವೃತ್ತಿ ಜೀವನಕ್ಕೆ ಮೀಸಲಾದ ಸೌಲಭ್ಯಗಳನ್ನು ಒದಗಿಸಿದ್ದರೆ ಇಂತಹ ಬರ್ಬರವಾದ ಕಣ್ಣೀರ ಗೋಳಾಟ ತೊಳಲಾಟಗಳು ಕಾಣಸಿಗುವುದೇ ಇಲ್ಲ. ಹೀನಾಯವಾದ ಸ್ಥಿತಿಯಿಂದ ಇಂತಹ ಬುಡಕಟ್ಟು ಜನಾಂಗಗಳು ಹೊರಬರಬೇಕೆಂಬ ಉದ್ದೇಶದಿಂದ ಸಫಲತೆಗಾಗಿ ಹಾತೊರೆದು ಪ್ರಜಾಪ್ರಭುತ್ವದ ಸಮಾಜ ನಿಯಂತ್ರಿಸಲು ಕಾನೂನುಗಳನ್ನು ತಯಾರಿಸಲಾಯಿತು. ಕಾನೂನುಗಳು ಎಲ್ಲಿ ಹೋದವು? ಯಾರಿಗಾಗಿ ತಾಳಿದವು ಎಲ್ಲಿ ಮುಟ್ಟಿದವು. ಎಂದರೆ ಕಾನೂನು ಕಟ್ಟಳೆಗಳು ಕಡತದಲ್ಲಿಯೇ

ಹುಟ್ಟಿಕೊಂಡವು. ಇವುಗಳನ್ನು ನಿರ್ವಹಿಸಲು ಸಮಾಜವೇ ಕಟ್ಟಪ್ಪಣೆ ಮಾಡಿದವು. ಧರ್ಮಶಾಸ್ತ್ರಗಳ ನೆಲೆಯಲ್ಲಿ ನೆಲೆನಿಂತುಕೊಂಡವು. ಕೆಲವೇ ಸಮುದಾಯಗಳಿಗೆ ಒತ್ತು ನೀಡಲಾಯಿತು. ಈ ಶ್ರೇಣಿಕೃತ ವ್ಯವಸ್ಥೆ ಮನುಷ್ಯನನ್ನು ಒಡೆದು ಆಳುವ ನೀತಿ ಅನುಸರಿಸಿಕೊಂಡು ಬಂದಿತು. ಶ್ರೇಣಿಕರಣದ ವ್ಯವಸ್ಥೆಯಲ್ಲಿ ಬುಡಕಟ್ಟು ಜನಾಂಗಗಳು ತೆಲೆಕೆಳಗಾದವು. ಅವುಗಳಿಗೆ ಯಾವುದೇ ಸಮುದಾಯಕ್ಕೂ ಒತ್ತನ್ನೂ ನೀಡದೇ ಮೊದಲಿನ ಮೂರು ವರ್ಣಗಳಿಗೆ ಪ್ರಧಾನ್ಯತೆ ನೀಡಲಾಗಿತ್ತು. ಹೀಗಾಗಿಯೇ ಎಲ್ಲಾ ಸಮುದಾಯಗಳಿಗೆ ದೊರೆಯಬೇಕಾದ ಯಾವ ಕಾನೂನುಗಳ ಹತ್ತಿರ ಸುಳಿಯಲಿಲ್ಲ. ಸಹಜವಾಗಿ ವಿಷಮತೆಯ ನೃತ್ಯತಾಂಡವ ಆಡುತ್ತಲಿತ್ತು. ಇಲ್ಲಿನ ಸಮುದಾಯಗಳಿಗೆ ಯಾವ ಶೈಕ್ಷಣಿಕ ಗಂಧ ಗಾಳಿಯೂ ಸ್ಪರ್ಶಿಸಲಿಲ್ಲ. ಈ ಮನುಮುನಿ ಮಂತ್ರಗಳ ಮುಠ್ಠಾಳರ ಕಾಲದಲ್ಲಿ ಸಾಮಾಜಿಕ ಕಾನೂನುಗಳನ್ನು ರೂಪಿಸಿದ ಮೇಲೆ ಅವುಗಳನ್ನು ಅನುಸರಿಸಿಕೊಂಡು ಹೇಳಿದ ಹಾಗೇ ಕೇಳಿ ತಿಳಿದುಕೊಂಡು ನಡೆಯಬೇಕಾದ ಅನಿವಾರ್ಯತೆ ಇಂತಹ ಬುಡಕಟ್ಟು ಸಮುದಾಯಗಳ ಮೇಲೆ ಬಿತ್ತು. ಅತ್ಯಂತ ಕಠಿಣವಾದ ಹೇಯ ಕೃತ್ಯ ದುಡಿಮೆಗಳಲ್ಲಿ ಪಾಲ್ಗೊಳ್ಳಬೇಕಾದುದು ಆಗಿನ ಸಮಾಜದ ಅನಿವಾರ್ಯವಾದ ಅಂಶವಾಗಿತ್ತು.

ಭರತಖಂಡದ ಚರಿತ್ರೆ ಯಾವ ದೇಶ ಕಾಲ ಕಂಡರಿಯದಂತಹ ಚರಿತ್ರೆಯೇ ಇದಾಗಿದೆ. ಅಷ್ಟೊಂದು ಕ್ರೂರ ಹಾಗೂ ತಾರತಮ್ಯತೆಯಿಂದ ಕೂಡಿದ್ದಾಗಿದೆ. ಚರಿತ್ರೆಯ ಕಾಲಗತಿಯೇ ಹೀಗಾಗಿದೆಯೋ ಎಂದೆನಿಸುತ್ತದೆ. ಆರ್ಥಿಕ ವ್ಯವಸ್ಥೆಯ ಕಾಲದೊತ್ತಡದಲ್ಲಿ ಸಿಲುಕಿ ನೂರಾರು ಆರ್ಥಿಕ ವ್ಯವಸ್ಥೆಯೆಂಬುದು ಮುಗಿಲ ಮಲ್ಲಿಗೆಯಾಗಿತ್ತು. ಶ್ರಮ ಜೀವಿಯ ಜೀವನದಲ್ಲಿ ಭೂಮಿಯ ಆರ್ಥಿಕತೆಯಾಗಲಿ ಮಧ್ಯಕಾಲೀನ ಸಂದರ್ಭದಲ್ಲಿ ಹೊರ ಬಂದ ರಾಜಕೀಯ ಸ್ಥಿತ್ಯಂತರಗಳು ಬದಲಾವಣೆಗೊಂಡು ತಮ್ಮ ನೆಲೆಯಲ್ಲಿ ಕೈಗೊಂಡಿದ್ದರಿಂದ ಸಹಜವಾಗಿ ಬುಡಕಟ್ಟು ಸಮುದಾಯಗಳಲ್ಲಿ ಒಂದಾದ ಸಿಕ್ಲಿಗರ ಸಮಾಜಗಳಿಗೆ ಏನೂ ಇಲ್ಲದಂತಾಗಿದೆ. ಇಂಡಿಯಾದ ಚರಿತ್ರೆ ನಮಗೆ ರೋಮಾಂಚನವನ್ನುಂಟು ಮಾಡುತ್ತದೆ. ಇಂಡಿಯಾದ ಚರಿತ್ರೆ, ಚಾರಿತ್ರಿಕವಾದ ಹಿನ್ನೆಲೆಯಲ್ಲಿ ಅನೇಕ ಬೃಹತ್ ದಂಡಯಾತ್ರೆಗಳು, ಸಾಮ್ರಾಜ್ಯಗಳು ಬಲಿಷ್ಠವಾಗಿದ್ದುಕೊಂಡು ಅವೆಲ್ಲವೂ ಯಾವುದೇ ನಿರ್ಧಾರಗಳಿಲ್ಲದೇ ತಮ್ಮ ಪ್ರಭುತ್ವ ಸ್ಥಾಪಿಸಿಕೊಂಡವು. ಪ್ರಭುತ್ವ ಹೊಂದಿದ ರಾಜ್ಯಗಳೆಲ್ಲವೂ ಕೃಷಿಯ ಮೂಲಕವೇ ಆದಾಯವನ್ನು ಹುಡುಕಿಕೊಂಡು ಬರಲು ಸಾಧ್ಯವಾಯಿತು. ಹೀಗಾಗಿಯೇ ಭೂಮಿಯ ಒಡೆತನ ಹಾಗೂ ತೆರಿಗೆ ಪದ್ಧತಿಗಳು ಬದಲಾವಣೆಗೊಂಡವು. ಹಾಗೇ ಕಟ್ಟುನಿಟ್ಟಾದ ಮುನ್ನೆಚ್ಚರಿಕೆಯ ಅಂಶಗಳಾಗಿ ಹೋದವು. ಆಗ ಅಸಾಮಾನ್ಯ ಬಡ ಬುಡಕಟ್ಟು ಸಮುದಾಗಳಾದ್ದರಿಂದ ಭೂಮಿ ಪ್ರಬಲವಾಯಿತು. ಯಾವಾಗ ಭೂಮಿ ಪ್ರಭಲಗೊಂಡಾಕ್ಷಣ

ಬಲಶಾಲಿಗಳಾದ ಉನ್ನತ ವರ್ಗದವರು ಸಹಜವಾಗಿ ಬಲಿಷ್ಠವಾಗ ಹತ್ತಿದರು. ಕೋಮುವಾದಿಗಳ ಕೈಯಲ್ಲಿ ಸಿಕ್ಕು ನರಳುವಂತಾದದ್ದು ಇತಿಹಾಸದ ದಾಖಲೆಯಾಗಿದೆ. ಬುಡಕಟ್ಟು ಜನಾಂಗಗಳು ಸಹಜವಾಗಿ ತಮ್ಮ ಶ್ರಮ ಕಠಿಣವಾದ ವೃತ್ತಿ ಕುಲಕಸಬುಗಳಿಗೆ ತಕ್ಕಂತೆ ಪ್ರೇರಣೆ ಮಾದರಿಗಳು ನಡೆಯಬೇಕಾದದ್ದು ಅವಶ್ಯವೆಂದು ಮನಗಂಡರು. ಹೀಗಾಗಿ ಕೋಮುವಾದಿಗಳ ಹಾಗೂ ಬಂಡವಾಳಶಾಹಿಗಳ ಅಥವಾ ರಾಜರುಗಳಿಂದ ಸಹಜ ನಿರೀಕ್ಷಣೆಗಳನ್ನಿಟ್ಟುಕೊಂಡಿದ್ದರು. ಅನೀರಿಕ್ಷೆಗಳು ಬುಡಕಟ್ಟು ಸಮುದಾಯಗಳಿಗೆ ದೊರಕದೇ ಇದ್ದಾಗ ಕುಶಲಕರ್ಮಿಗಳು ಮನೋರಂಜಿತ ವರ್ಣಗಳು ಬೇರೆ ಬೇರೆಯಾಗಿ ನೆಲೆನಿಂತವು. ಇಂತಹ ಹೊತ್ತಿನಲ್ಲಿ ಆರ್ಥಿಕ ಸ್ಥಿತಿ ಉನ್ನತಮಟ್ಟಕ್ಕೇರದೆ ಹೀನಾಯವಾಗಿ ಕೆಳಗೆ ಉರುಳಿ ನೆಲಕ್ಕೆ ಬಿದ್ದಿತ್ತು. ಆರ್ಥಿಕ ವ್ಯವಸ್ಥೆ ಬುಡಕಟ್ಟು ಜನಾಂಗದ ಮೇಲೆ ಗದಾಪ್ರಹಾರ ನಡೆಸಿದವು. ಇದರಿಂದ ಚೇತರಿಕೆ ಪಡೆದುಕೊಳ್ಳಬೇಕೆಂದು ಪ್ರಯತ್ನಿಸುತ್ತಿರುವಾಗಲೇ ಹಲವಾರು ಸಂಗತಿಗಳು ನಮಗೆ ಮತ್ತೇ ಎದುರಾದವು. ವಸಾಹತುಶಾಹಿತ್ವ ಮತ್ತೇ ಅಧಿಕಾರ ವಸಾಹತುಶಾಹಿತ್ವದೊಂದಿಗೆ ಪಶ್ಚಿಮದ ಆಧುನಿಕ ತಂತ್ರಜ್ಞಾನ, ಔದ್ಯೋಗಿಕರಣಗಳು, ಯಂತ್ರೋಪಕರಣಗಳು ಬಂದು ನೆಲೆಯೂರಿದವು. ನೆಲೆಯೂರಿದ ಬಳಿಕ ಸುಮ್ಮನಿರದೇ ವಸಾಹತುಶಾಹಿ ಆಡಳಿತವನ್ನು ರೂಪಿಸಿಕೊಂಡು ಬಂದಿತು. ಶ್ರಮಿಕ ವರ್ಗಗಳು ನೆಲ ಕಚ್ಚಬೇಕಾಯಿತು. ತಾವು ಬುಡಕಟ್ಟು ಸಮುದಾಯದ ಮೂಲಕ ಗುಡಿಕೈಗಾರಿಕೆ, ಕೈಕುಲಕಸಬುಗಳು ಪಾರಂಪರಿಕವಾಗಿರದೇ ಬಂದ ಉತ್ಪಾದನಾ ವ್ಯವಸ್ಥೆಗಳು ಇಲ್ಲಿ ಬೆಲೆ ನಿಲಕದಾದವು. ಕೈಗಾರಿಕೆ ಧಾನ್ಯಗಳು ಬೆಲೆ ಎದ್ದು ನಿಂತವು. ಹೀಗಾಗಿ ಸಣ್ಣ ಪುಟ್ಟ ಗುಡಿ ಕೈಗಾರಿಕೆ ಕೈ ಕೆಲಸಗಳ ಜನಸಮುದಾಯವು ಕಾರ್ಮಿಕ ವರ್ಗ, ಸಮುದಾಯ ಸಾಮಾಜಿಕ ಮನರಂಜಕವಾದ ಸಮುದಾಯ ಬುಡಕಟ್ಟು ಜನಾಂಗವೆಲ್ಲ ಸ್ಪಷ್ಟವಾಗಿ ಹಾಗೇ ತಮ್ಮ ನೆಲೆಗಳನ್ನು ಸಂಪೂರ್ಣವಾಗಿ ಕಳೆದುಕೊಳ್ಳಲು ಸಾಧ್ಯವಾಗುತ್ತದೆ. ಮತ್ತು ಸಂಪೂರ್ಣ ನೆಲೆ ಕಳೆದುಕೊಂಡು ಅಧೋಸ್ಥಿತಿಗೆ ಬರಲು ಕಾರಣವಾಯಿತು.

ಯಂತ್ರ ಮಾನವನು ಹಾಗೂ ವಸಾಹತುಶಾಹಿ ಬಂಡವಾಳಶಾಹಿಗಳು ಸಹಿತ ಸೇರಿಕೊಂಡು ಮೂಲ ವೃತ್ತಿ ಬುಡಕಟ್ಟು ಜನಾಂಗದ ಮೇಲೆ ಅವರ ಹೊಟ್ಟೆಯ ಮೇಲೆ ಹಾಗೂ ಶ್ರಮದ ಜೀವನದ ಕಲೆಗಳ ಮೇಲೆ ಕಲ್ಲನ್ನು ಹಾಕಲಾಯಿತು. ಇದರಿಂದ ತತ್ತರಿಸಿ ಹೋದ ಬುಡಕಟ್ಟು ಜನಾಂಗ ದಿಕ್ಕು ತಪ್ಪಿದವು. ಅವರಿಗೆ ಯೋಚಿಸಲು ಬುದ್ದಿಯೇ ನಿಂತು ಬಿಟ್ಟಿತು. ಮಾತನಾಡಲು ಮಾತೇ ಬರಲಿಲ್ಲ. ದುಡಿಯುವ ಕೈಗಳಿಗೆ ಕೆಲಸವೇ ಮಾಡಲಾಗದ ಸಹಜವಾಗಿ ಅವರ ಮನಸ್ಸು ಕೇಂದ್ರಿಕೃತಗೊಳ್ಳದೇ ಹರಿದು ಚಲ್ಲಾಪಿಲ್ಲಿಯಾದವು. ಬಂಡವಾಳಶಾಹಿಗಳ ಹಾಗೂ ಸರ್ಕಾರದ

ನೀತಿಗಳು ಸಿಕ್ಲಗರ ಸಮುದಾಗಳು ನೆಲೆಕಳೆದುಕೊಂಡು ಕರ್ನಾಟಕದಾದ್ಯಂತ ಹಲವು ಕಡೆ ಪಸರಿಸಿ ಹೋದವು. ಅಲೆಮಾರಿ ಸಮುದಾಯಗಳು ಕಾಡುಗಳಿಂದ ನಾಡಿಗೆ ಬಂದಂತೆ ಸಿಕ್ಲಗರ ಸಮುದಾಯ ನಾಡಿನಿಂದ ಊರಾಚಯಡೆ ಬದುಕಲು ಆಶ್ರಯ ಪಡೆದುಕೊಂಡರು. ಗಡಿಬಿಡಿಯಿಲ್ಲದ ನಿರ್ಭೀಡೆಯಾದ ಜನ ವಸತಿರಹಿತವಾದ ಸ್ಥಳಗಳಲ್ಲಿ ವಾಸಿಸಲು ಪ್ರಯತ್ನಿಸಲು ಅದು ಸಫಲತೆ ಹೊಂದಿತು. ಅಲೆಮಾರಿ ಸಮುದಾಯವಾದ ಸಿಕ್ಲಿಗರ ತಮ್ಮ ಮೂಲ ಪಾರಂಪರಿಕವಾಗಿ ಮೂಡಿ ಬಂದ ಕುಲಕಸಬುಗಳನ್ನು ಬಿಡದೇ ಹಾಗೇ ನಡೆಯಿಸಿಕೊಂಡು ಬಂದಂತವರಾದರು. ಇವರು ಸರ್ಕಾರಗಳ ಶ್ರೀಮಂತರ ಅಧಿಕಾರದಾಹದಿಂದ ನೆಲೆಗಳನ್ನು ಕಾಣದೇ ಅಲೆಮಾರಿ ವೃತ್ತಿಯನ್ನು ಅನುಸರಿಸಿಕೊಂಡು ಆಶ್ರಯಿಸಿಕೊಂಡು ಬಂದರು ಶ್ರೀಮಂತರಾದ ಸಮುದಾಯವು ಸಿಕ್ಲಿಗರ ಸಮುದಾಯವನ್ನು ತನ್ನ ಹಿಡಿತದಲ್ಲಿ ಇಟ್ಟುಕೊಳ್ಳಲು ಪ್ರಯತ್ನಿಸಿತು. ತಲವಾರ, ಖಡ್ಗ, ಚಾಕು, ಚೂರಿಗಳಂತ ಮಾರಕಾಸ್ತ್ರಗಳನ್ನು ತಯಾರಿಸುವುದನ್ನು ತಾವೇ ಖರೀದಿಸಿಕೊಂಡು ಪೋಲಿಸ್ ಹಾಗೂ ಸರ್ಕಾರಗಳ ನಿಯಂತ್ರಣವನ್ನು ಬಿಟ್ಟು ಅವರ ಮೇಲೆ ಕಾನೂನಿನ ಕ್ರಮಗಳನ್ನು ಜರುಗಿಸಲಾಯಿತು. ಮಾರಕಾಸ್ತ್ರಗಳ ತಯಾರಿಕೆಯಿಂದ ಅಶಾಂತಿ ಕೋಮುಗಲಭೆ ಉಂಟುಮಾಡುವಲ್ಲಿ ಈ ಜನಾಂಗ ಸಿದ್ಧಹಸ್ತರೆಂಬ ಕಾರಣಕ್ಕಾಗಿ ಪೋಲಿಸರು ತಮಗೆ ಯಾವುದೇ ಕೇಸ್‌ಗಳು ಸಿಗದಿದ್ದಾಗ ಇವರ ಮೇಲೆ ವಿನಾಕಾರಣ ಚಾರ್ಜ್‌ಶೀಟ್ ಹಾಕಿಕೊಳ್ಳುವ ಪದ್ಧತಿಯಿದೆ. 'ಅಪರಾದಿ ಬುಡಕಟ್ಟು' ಎಂಬ ಹಣೆಪಟ್ಟಿ ಕಟ್ಟಿಕೊಡಲಾಯಿತು. ಅವರಿಗೆ ಕಬ್ಬಿಣದ ಇಂತಹ ಮಾರಕಾಸ್ತ್ರಗಳ ತಯಾರಿಕೆ ನಿರ್ಬಂಧನವನ್ನು ಹೇರಲಾಯಿತು. ಈ ನಿರ್ಬಂಧನಗಳಿಂದ ಮುಕ್ತಿ ಹೊಂದಲು ಅವರಿಗೆ ಸೂಕ್ತವಾದ ಸ್ಥಾನಮಾನವೊದಗಿಸಲು ಕಾಲ ಕೂಡಿ ಬರಲಿಲ್ಲ. ಇಂದಿಗೂ ಇಂಡಿಯಾದ ಅರಾಜಕತೆಯ ಪ್ರಜಾಪ್ರಭುತ್ವದಲ್ಲಿ ಬ್ರಿಟಿಷರು ನಿಜಾಮರು ಆಡಳಿತ ನಡೆಸಿದ್ದಾರೆ. ಇಂತಹ ಬುಡಕಟ್ಟು ಸಮುದಾಯಗಳಿಗೆ ಯಾವ ಲಾಭವನ್ನು ಮಾಡಿಕೊಡಲು ಪ್ರಯತ್ನಿಸಲಿಲ್ಲ. ತಮ್ಮ ಸಹಾಯಕ್ಕಾಗಿಯೇ ಹಾತೊರೆದರೆ ವಿನಃ ಸಿಕ್ಲಿಗರ ಸಮುದಾಯಕ್ಕೆ ಸಹಾಯ ಮಾತ್ರ ಮಾಡಲಿಲ್ಲವೆಂಬುದು ಅಕ್ಷರಲೋಕ ಸತ್ಯಗಳಲ್ಲಿ ಒಂದಾಗಿದೆ. ಬ್ರೀಟಿಷರು ಭೂಮಾಲಿಕರು, ಬಂಡವಾಳಶಾಹಿಗಳು ಇವರೆಲ್ಲರೂ ಸೇರಿಕೊಂಡು ಅಪವಿತ್ರವಾದ ಮೈತ್ರಿಯನ್ನು ಕೈಗೊಂಡರು. ಇದರಿಂದಾಗಿ ಇಲ್ಲಿ ಆಡಳಿತ ನಡೆಸಲು ಬಂದ ಆಡಳಿತಗಳಿಗೆ ಇಲ್ಲಿಯವರೇ ಕುಮ್ಮಕ್ಕು ನೀಡಿ ಕಾನೂನುಗಳನ್ನು ಕೂಡಾ ತಾವೇ ತಯಾರಿಸಿಕೊಂಡು ಅನೇಕ ಬಂಡವಾಳಶಾಹಿಗಳ ಬೆನ್ನೆಲುಬಾಗಿ ನಿಲ್ಲಲು ಪ್ರಯತ್ನಿಸಿದವು. ಸಿಕ್ಲಿಗರನ್ನು ಕಂಡು ಶ್ರಮಜೀವಿಗಳಿಗೆ ದೇಶದ್ರೋಹಿಗಳೆಂಬ ಬಿರುದನ್ನು ಕೂಡಾ ಕೊಡಲ್ಪಟ್ಟರು. ಭಾರತದ ಇಂತಹ ವಿಚಿತ್ರ ಮಾನವೀಯ ಗೋಜಲು ತುಂಬಿದ ಆರ್ಥಿಕ ವ್ಯವಸ್ಥೆಗಳ ನಡುವೆ ತನ್ನ ತನ ಕಳೆದುಕೊಂಡ ಸಿಕ್ಲಗರ ಸಮುದಾಯ ಬಹಳಷ್ಟು

ನೊಂದುಕೊಂಡಿತು. ಶ್ರಮಜೀವನದ ಮೂಲಕ ದುಡಿದುಣ್ಣುವ ಕಾರ್ಯ ಕೈಗೊಂಡಿದ್ದರು ಯಾವ ಹಂತದಲ್ಲೂ ಇವರಿಗೆ ಸಹಾಯದ ಅಭಯ ಹಸ್ತನೀಡಲಿಲ್ಲ. ತಮ್ಮ ಆರ್ಥಿಕ ಸಂಪನ್ಮೂಲಗಳನ್ನು ಕಳೆದುಕೊಂಡು ಸಂಪೂರ್ಣವಾದ ವಿಷಮ ಹಾಗೂ ಅನಾರೋಗ್ಯಕರವಾದ ಹಂತ ಮೀರಿ ನಿಲ್ಲಲು ಸಹಿತ ಸಾಧ್ಯವಾಗಲಿಲ್ಲ. ಯಾವ ಆರ್ಥಿಕ ಬಲವನ್ನು ಕಳೆದುಕೊಂಡು ನಿರ್ಗತಿಕರಾಗಿ ನೆಲೆನಿಂತರೋ ಅಲ್ಲಿಂದ ಇಲ್ಲಿ ಯಾರಿಗೂ ಯಾವ ಸ್ಥಿತಿಯನ್ನು ಮೀರದೇ ವಿಷಮ ಸ್ಥಿತಿಯಲ್ಲಿ ಬಾಳಬೇಕಾದ ಅನಿವಾರ್ಯತೆ ಅವರ ಬದುಕಿನೊಂದಿಗೆ ಕೂಡಿಕೊಂಡು ಬಂದಿದೆ. ಇವತ್ತಿನ ಆಧುನಿಕ ಬದುಕಿನಲ್ಲಿ ನಗರಗಳ, ಕೊಳಚೆ ಪ್ರದೇಶಗಳಲ್ಲಿ ಸಿಕ್ಲಿಗರ ಬುಡಕಟ್ಟು ಜನಾಂಗ ಯಾವುದೇ ಪ್ರಬಲವಾದ ಬದಲಾವಣೆಗಳನ್ನು ಮಾಡಿಕೊಳ್ಳದೇ ಯಾವತ್ತು ಹೊಸತನದಿಂದ ಕೂಡದೇ ಪಾರಂಪರಿಕ ಜೀವನವನ್ನು ಮೂಡಿಸಿಕೊಂಡು ತಿನ್ನುವ ಅನನ್ಯ ಬದುಕನ್ನು ರೂಪಿಸಿಕೊಂಡು ಹೋಗುತ್ತಿರುವುದು ಆಶ್ಚರ್ಯವಾಗುತ್ತದೆ. ಆಧುನಿಕವಾದ ಮೋಹಕ-ಮನೋರಂಜನೆ ತಂತ್ರಜ್ಞಾನಕ್ಕೆ ಒಳಗಾಗಬೇಕಾದರೆ ಆರ್ಥಿಕವಾದ ಹಿನ್ನೆಡೆಯುಂಟಾಗಿದೆ.

ಅಂತಹ ಬದಲಾಗುವ ಪಾರ್ಧಿಯಾಗಲಿ, ಸುಡುಗಾಡಸಿದ್ಧರಾಗಲಿ, ಲಂಬಾಣಿಗಳಾಗಲಿ, ಅಡವಿಚೆಂಚರಾಗಲಿ ಯಾವುವು ಕೂಡಾ ಬದಲಾವಣೆ ಆದಂತೆ ಕಾಲಕ್ಕೆ ತಕ್ಕಂತೆ ಸಮುದಾಯವು ಬದಲಾವಣೆಗೊಳ್ಳುವಂತೆ ಸಿಕ್ಲಿಗರ ಬುಡಕಟ್ಟು ಜನಾಂಗ ಬದಲಾವಣೆಯನ್ನು ಹೊಂದಿರುವುದಿಲ್ಲ. ಆಧುನಿಕ ಭಾರತದ ಪರಂಪರೆ ಸಾಮಾಜಿಕ ವ್ಯವಸ್ಥೆ ಹಲವು ದಿನಗಳಿಂದಲೂ ಯಾವುದೇ ಬದಲಾವಣೆ ಹೊಂದಲು ಅವಕಾಶವೇ ನೀಡಲಿಲ್ಲ. ಇಂದಿನ ಸ್ಥಿತಿ-ಗತಿಗಳಲ್ಲಿ ಸಿಕ್ಲಿಗರ ಕುಟುಂಬ ಸಮುದಾಯವು ಜಾಗತೀಕರಣದ ಹೊತ್ತಿನಲ್ಲಿ ಸ್ಪರ್ಧೆಗೆ ಇಳಿಯುವಂತಹ ಯಾವುದೇ ಸೂಚನೆಗಳು ಕಂಡು ಬರುತ್ತಿಲ್ಲ. ಸಿಕ್ಲಿಗರ ಬುಡಕಟ್ಟು ಜೊತೆಗೆ ಜಾಗತೀಕರಣ ಅನುಸಂಧಾನ ಮಾಡಿಕೊಳ್ಳುವ ಬಗೆಯನ್ನು ನಾವು ವಿಶಾಲ ದೃಷ್ಟಿಯಿಂದ ನೋಡಬೇಕಾಗಿದೆ.

ಭಾರತದೇಶ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಂತರಂಗ ಹಾಗೂ ಬಹಿರಂಗವಾಗಿ ವಿವರಣೆಯ ಮೂಲಕ ಚರ್ಚಿಸಬೇಕಾಗಿದೆ. ಚರಿತ್ರೆಯು ಮೊದಲಿನಿಂದಲೂ ಶ್ರೀಮಂತರ ಬಂಡವಾಳಶಾಹಿಗಳ ಪರವಾಗಿ ನಿಲ್ಲುತ್ತವೆ. ಅಧಿಕಾರ ಹೆಜ್ಜೆ ಗುರುತುಗಳನ್ನು ಹೊಂದಿಕೊಂಡು ಬರುತ್ತಾರೆ. ಆದರೆ ಇವುಗಳ್ಯಾವವು ನಮ್ಮ ಬುಡಕಟ್ಟುಗಳಿಗೆ ದೊರೆಯಲು ಅಸಾಧ್ಯವಾದುದು.ಲೌಕಿಕ ಬದುಕಿನಲ್ಲಿ ಭರಾಟೆಯಿಂದ ಸಮುದಾಯ ಚರಿತ್ರೆಯನ್ನು ಗುರುತಿಸಬೇಕಾದ ಹೊತ್ತಿನಲ್ಲಿ ನುಂಗಿಹಾಕಿಕೊಂಡು ಬಂದಿವೆ. ಇವುಗಳನ್ನು ನಾವು ಗಮನಿಸಬೇಕಾದ ಮೌಲ್ಯ ಸಂಗತಿಗಳೆಂದರೆ

ಕಳೆದು ಹೋದ ಶತಮಾನಗಳು ಮತ್ತೇ ಮರಳಿ ಬಾರವು. ಕಳೆದು ಹೋದ ಶತಮಾನಗಳು ಮತ್ತೇ ಈಗಲೂ ಹಾಗೇ ಹೋಗಬಾರದೆಂಬ ಆಶಯವನ್ನು ಇಟ್ಟುಕೊಂಡು ಸರ್ಕಾರ ಸೌಲಭ್ಯಗಳನ್ನು ಒದಗಿಸಬೇಕಾಗಿದೆ. ಇಂತಹ ಕೆಲಸಗಳನ್ನು ಕಾಣಬೇಕಾದರೆ ಮೊದಲು ಮೌಖಿಕ ಹಾಗೂ ಪರಂಪರಾಗತ ಅಂಶಗಳನ್ನು ಅರಿತುಕೊಂಡು ದಾಖಲಿಸುವ ಮೂಲಕ ಚರಿತ್ರೆಯನ್ನು ಕಟ್ಟಬೇಕಾಗಿದೆ. ಇಂದಿನ ಸೂಕ್ತ ಸಮಯ ಈಗಲಾದರೂ ಬಂದಿದೆ. ಸಿಕ್ಲಿಗರ ಸಮುದಾಯದ ವಿಶಿಷ್ಟ ಬದುಕು ಜೀವನವನ್ನು ನಾವು ಚರಿತ್ರೆಯ ಮೂಲಕ ಕಟ್ಟಿಕೊಡಬೇಕಾಗಿದೆ.ನಮ್ಮ ಕರ್ನಾಟಕ ರಾಜ್ಯದಲ್ಲಿ ಬಹುತೇಕ ಕಡೆಗಳಲ್ಲಿ ಅಂದರೆ ಬೀದರ್, ರಾಯಚೂರು, ಗುಲ್ಬರ್ಗಾ, ಕೊಪ್ಪಳ, ಮೈಸೂರು, ಬೆಳಗಾಂವ, ಬೆಂಗಳೂರು, ಹಾವೇರಿ, ಗದಗ, ಬಾಗಲಕೋಟೆ, ಬಿಜಾಪೂರ, ಧಾರವಾಡ ಹನ್ನೆರಡು ಜಿಲ್ಲೆಗಳಲ್ಲಿ ಸಿಕ್ಲಗರ ಸಮುದಾಯ ಕಂಡು ಬಂದಿದೆ. ಅಲ್ಲದೇ ಒಂದುಸಾವಿರದ ಎಂಟುನೂರಾ ಎಪ್ಪತ್ತಮೂರು ಜನಸಂಖ್ಯೆ ಹೊಂದಿದೆ. ಇಂತಹ ಸಿಕ್ಲಿಗರ ಜನಾಂಗದ ಜೀವನ ವಿವರ ಆಚರಣೆಗಳನ್ನು ಶ್ರಮಜೀವನ ಕುಲಕಸಬುಗಳನ್ನು ಅನ್ಯಜ್ಞಾನ ಶಿಸ್ತುಗಳ ಮೂಲಕ ಅಧ್ಯಯನಕ್ಕೆ ಒಳಪಡಿಸಬೇಕಾಗಿದೆ. ಬುಡಕಟ್ಟು ಜನಾಂಗವು ತನ್ನಲ್ಲಿಯೇ ಅಸ್ತಿತ್ವ ಹೊಂದಬೇಕಾದರೆ ಸತ್ಯಾಸತ್ಯ ಗಳನ್ನು ಅರಿಯಬೇಕಾಗಿದೆ.

ಬುಡಕಟ್ಟು ಜನಾಂಗವು ಅಳಿವಿನ ಅಂಚಿನಲ್ಲಿದೆ. ಅಳಿವುಗಳ ಮೂಲಕ ನಮ್ಮ ಸಂಸ್ಕೃತಿಯ ಜನಾಂಗಗಳನ್ನು ನಾವು ಬಳಸದೇ ಹೋದರೆ ಮುಂದೆ ನೋಡಲು ಕೇಳಲು ಸಹಿತ ಸಿಗಲಾರರು. ಕೆಳಜಾತಿಗಳ, ಅಲೆಮಾರಿಗಳ, ಆದಿವಾಸಿಗಳ, ಬುಡಕಟ್ಟು ಜನಾಂಗಗಳು ಪ್ರಸ್ತುತ ಸಂದರ್ಭದಲ್ಲಿ ಚರ್ಚೆಗೆ ಒಳಪಡಿಸಬೇಕಾಗಿದೆ. ಅವರ ಬೌದ್ಧಿಕ ಜೀವನವನ್ನು ಜಾಗತಿಕ ಹೊತ್ತಿನಲ್ಲಿ ಪ್ರಪಂಚಕ್ಕೆ ಕಾಲಿರಿಸಬೇಕಾದ ಅನಿವಾರ್ಯತೆ ತುರ್ತಾಗಿದೆ. ಇವುಗಳ ಸದಾ ಕೇಳುತ್ತಲೇ ಇರಬೇಕಾಗಿದೆ.

ಈ ಸಂಶೋಧನಾ ಅಧ್ಯಯನದ ಮೂಲಕ ಸಿಕ್ಲಿಗರ ಬುಡಕಟ್ಟಿನ ಬದುಕು ಜೀವನ ಆಚರಣೆಗಳನ್ನು ಕುರಿತಾದ ಮಾಹಿತಿ ವಿವರಗಳನ್ನು ತಿಳಿಸಲು ಚರ್ಚಿಸಲು ಪ್ರಯತ್ನ ಪಟ್ಟಿದ್ದೇನೆ. ಕನ್ನಡನಾಡಿನಲ್ಲಿ ಸಿಕ್ಲಿಗರ ಸಮುದಾಯದ ಪರಿಚಯ ಇದೇ ಮೊಟ್ಟ ಮೊದಲ ಅಧ್ಯಯನವೆಂದು ಭಾವಿಸಿದ್ದೇನೆ. ಸಿಖ್ಖ್ ಸಮುದಾಯದ ಸಂಬಂಧಗಳನ್ನು ಹೊದಬೇಕೆಂಬ ಅದಮ್ಯ ಕನಸನ್ನು ಹೊತ್ತಿದ್ದಾರೆ. ಸಿಕ್ಲಿಗರ ಎಂಬ ಸಮುದಾಯವು ಸಹ ಕರ್ನಾಟಕದ ಉತ್ತರ ಕರ್ನಾಟಕದಲ್ಲಿವೆ. ಆದರೆ ಅವರಿಗೂ ಇವರು ಕೂಡಾ ಒಂದೇ ಎಂದು ಎಲ್ಲರೂ ಕರೆಯುತ್ತಾರೆ. ಆದರೆ ಅಧ್ಯಯನದ ಮೂಲಕ ಉತ್ತರ ಕರ್ನಾಟಕ ದಕ್ಷಿಣಕರ್ನಾಟಕ ಹಾಗೂ ಹೈದ್ರಾಬಾದ್ ಕರ್ನಾಟಕ ಪ್ರದೇಶವೆಂದು

ವರ್ಗೀಕರಿಸಲಾಗಿದೆ. ಅವರಲ್ಲಿ ಯಾರೂ ಕೂಡಾ ಕಾಣುವ ವ್ಯತ್ಯಾಸಗಳನ್ನು ನಾವು ಕಾಣುತ್ತೇವೆ. ಸಹಜವಾಗಿ ಅಲ್ಪಸಂಖ್ಯಾತರ ಸಿಕ್ಲಿಗರ ಸಮುದಾಯ ಸಿಖ್ಖ್ ಪಂಥವನ್ನೇ ಆಯ್ದುಕೊಂಡು ಅದೇ ಪಂಥದಿಂದ ಹೊರಬಂದಿದ್ದಾರೆ. ಹಿಂದೂಗಳ ಪ್ರಭಾವ ಇತರ ಹಬ್ಬ ಆಚರಣೆಗಳ ಮೇಲೆ ಆಗಿದ್ದರೂ ಅಂತಹ ಅನೇಕ ಪ್ರಭಾವಲಯಗಳನ್ನು ಸೇರಿಸಿಕೊಂಡು ಬದುಕು ಕಾಣುವ ಸಿಕ್ಲಿಗರ ಸಿಖ್ಖ್ ಧರ್ಮದ ಧಾರ್ಮಿಕ ಚೌಕಟ್ಟನ್ನು ಹಾಗೂ ಜೀವನಾಚರಣೆಗಳನ್ನು ಎಂದೂ ಕೈಬಿಟ್ಟು ಕೊಟ್ಟಿಲ್ಲ. ಮುಂದೆಯೂ ಬಿಡುವುದಿಲ್ಲವೆಂಬ ದೃಢವಾದ ಸಂಕಲ್ಪ ಹೊಂದಿದ್ದಾರೆ. ಹೀಗಾಗಿ ಸಿಕ್ಲಿಗರ ಸಮುದಾಯವು ಹಲವು ಆಚರಣೆಗಳ ಮೂಲಕ ತನ್ನ ಸಾಂಸ್ಕೃತಿಕ ಆಚರಣೆಗಳನ್ನು ಎತ್ತಿ ಹೇಳುತ್ತಿವೆ.

ಪಂಜಾಬ ಸಿಖ್ಖ್ ಮೂಲದವರಾದ ಸಿಕ್ಲಿಗರ ಸಮುದಾಯ ಹೈದ್ರಾಬಾದ್, ಸೊಲ್ಲಾಪೂರ, ಮಹಾರಾಷ್ಟ್ರದ ಮೂಲಕ ಕರ್ನಾಟಕವನ್ನು ಪ್ರವೇಶಿಸಿದೆ. ಸಿಖ್ಖ್ ಧರ್ಮ ಸಮುದಾಯಗಳನ್ನು ಹಾಗೇ ಕಾಪಾಡಿಕೊಂಡು ಅದರ ಪ್ರಭಾವದ ಮೂಲಕ ಗಟ್ಟಿಯಾಗಿ ಕರ್ನಾಟಕದಲ್ಲಿ ನೆಲೆಗೊಂಡಿದೆ. ಅಲೆಮಾರಿ ಜನಾಂಗವಾಗಿ ಪಂಜಾಬ ಮೂಲಕ ಕರ್ನಾಟಕ ಪ್ರವೇಶಿಸಿ ಒಂದು ಸಮುದಾಯವಾಗಿ ಕಳೆದ ಆರು ದಶಕಗಳಿಂದ ಆಶ್ರಯ ಪಡೆದುಕೊಂಡಿದೆ. ಸಿಕ್ಲಿಗರ ಸಮುದಾಯ ಸ್ವಾತಂತ್ರ್ಯ ಪೂರ್ವದಲ್ಲಿಯೇ ಬಂದು ನೆಲೆಸಿದರೂ ಕೂಡಾ ಅವರಿಗೆ ಸೂಕ್ತ ಸ್ಥಾನಮಾನ ದೊರೆಕಿಲ್ಲ ವೆಂಬುದನ್ನು ಒಪ್ಪಿಕೊಳ್ಳಬೇಕಾಗಿದೆ. ಇಲ್ಲಿಗೆ ವಲಸೆಯಾಗಿ ಬಂದ ಅನೇಕ ಬುಡಕಟ್ಟುಗಳಂತೆ ಸಿಕ್ಲಿಗರ ಸಮುದಾಯವು ಒಂದಾಗಿದೆ. ಹಾಗೇ ಈ ಸಮುದಾಯವು ಇಲ್ಲಿಗೆ ಬಂದು ಕಬ್ಬಿಣದ ಕೆಲಸ ಕೈಗೊಂಡಿದ್ದಾರೆ. ಇಂತಹ ಬುಡಕಟ್ಟು ಸಮುದಾಯಗಳು ಬೇರೆ ಬೇರೆ ವೃತ್ತಿಗಳನ್ನು ಕೈಗೊಂಡು ಜೀವನವನ್ನು ಅವಲಂಬಿಸಬೇಕಾಗುತ್ತದೆ. ಹಾಗೇ ಮಾರ್ಪಾಡುಗಳನ್ನು ಸಮುದಾಯಗಳು ಮಾಡಿಕೊಂಡಿವೆ. ಸಿಕ್ಲಿಗರ ಸಮುದಾಯವು ಮಾತ್ರ ಇಂತಹ ಯಾವುದೇ ಕುಲಕಸಬುಗಳನ್ನು ನಿರಂತರವಾಗಿ ಮಾಡಿಕೊಂಡು ಬರುವುದೇ ಅವರ ಕಸುಬಿನ ವೈಶಿಷ್ಟ್ಯವಾಗಿದೆ.

ಈ ರೀತಿ ಒಂದೇ ವೃತ್ತಿಯನ್ನು ಆರಿಸಿಕೊಂಡು ಬಂದ ಸಿಕ್ಲಿಗರ ಸಮುದಾಯವು ಒಂದು ಹಂತವನ್ನು ಹೊಂದಿದೆಯೇ ಎನ್ನುವುದೇ ಇಲ್ಲ. ಅವಸಾನದ ಸಂಕಷ್ಟಗಳಲ್ಲಿ ತುಂಬಿ ಹೋಗಿದೆ. ಭಾರತ ಸರ್ಕಾರವಾಗಲಿ ಯಾವುದೇ ರೀತಿಯಿಂದ ಇಂತಹ ಬುಡಕಟ್ಟುಗಳ ಬಗ್ಗೆ ಸ್ವಲ್ಪವೂ ಕಾಳಜಿಯನ್ನು ಹೊಂದಿಲ್ಲ. ಭಾರತ ರಾಜಕೀಯವಾಗಲಿ ಅಥವಾ ಕರ್ನಾಟಕದ ರಾಜಕಾರಣದ ಸರ್ಕಾರವಾಗಲಿ ಇವುಗಳ ಬಗ್ಗೆ ಚಕಾರವೆತ್ತಿಲ್ಲ. ಕರ್ನಾಟಕದಲ್ಲಿ ವಾಸಿಸುವ ಸಿಕ್ಲಿಗರ ಸಮುದಾಯವು

ಕಣ್ಣೀರಿನ ಕೊಳದಲ್ಲಿ ಬದುಕುತ್ತಿರುವವರು ಗೊತ್ತಿದೆ. ಅವರು ಕಬ್ಬಿಣದ ಕೆಲಸ ಬಿಟ್ಟು ಬೇರೆ ಬೇರೆ ಉಪಕುಲಕಸಬುಗಳ ಕಡೆ ತರಬೇತಿ ನೀಡಬೇಕಾಗಿದೆ. ಅಮಾನವೀಯವಾಗಿ ವರ್ತಿಸುತ್ತಿರುವ ಇವತ್ತಿನ ಅನೇಕ ಸಮುದಾಯಗಳ ಮಧ್ಯದಲ್ಲಿ ಸಿಕ್ಲಿಗರ ಜೀವನ ಹಸನಾಗಬೇಕಾಗಿದೆ.

ಅಲೆಮಾರಿ ಸಮುದಾಯಗಳ ಸ್ವಾಯತ್ತ ಜೀವನ ಸಮೃದ್ಧಿಗೊಂಡಿಲ್ಲ. ಅವರ ಕನಸು ಸಾಕಾರಗೊಳಿಸಲು ಬೇಕಾಗುವ ಯಾವುದೇ ರೀತಿ–ನೀತಿಗಳನ್ನು ಹೊಂದಬೇಕಾದ ಅಗತ್ಯತೆ ಮನ ಗಾಣಬೇಕಾಗಿದೆ. ಸಮಾಜದ ಮುಖ್ಯವಾಹಿನಿಗೆ ತರಬೇಕಾದ ಘೋಷಣೆಗಳು ಹೇಳಿಕೆಗಳು ಹಾಗೇ ಉಳಿದಿವೆ. ಈ ನಿಟ್ಟಿನಲ್ಲಿ ಗಂಭೀರವಾಗಿ ಆಲೋಚಿಸಬೇಕಾಗಿದೆ. ಭಾರತ ಅಭಿವೃದ್ಧಿ ಹೊಂದ ಬೇಕಾದರೆ ಬುಡಕಟ್ಟು ಸಮುದಾಯಗಳು ಹೆಚ್ಚು ಬಲಿಷ್ಟಗೊಳ್ಳಬೇಕಾಗಿದೆ.

ಅಲೆಮಾರಿ ಸಮುದಾಯಗಳ ಬೆಳವಣಿಗೆಯಲ್ಲಿ ಚಾರಿತ್ರಿಕ ಅಂಶಗಳು ಬಹಳಷ್ಟು ಪ್ರಭಾವ ಬೀರುವುದರಲ್ಲಿ ಸಂಶಯವೇ ಇಲ್ಲ. ಸಮಾಜ ಸಂಕೀರ್ಣವಾದುದು. ಅವುಗಳ ಅಭಿವೃದ್ಧಿ ಹಲವು ವಿಚಾರಗಳ ಹಿನ್ನೆಲೆಯಲ್ಲಿ ಸಾಧಿಸುವ ಮಾರ್ಗವೂ ಸಂಕೀರ್ಣವಾಗಿವೆ. ಭಾರತ ಸಮಾಜ ಮುಖಿಯಾದದ್ದು, ಸಾಮಾಜಿಕಶಾಸ್ತ್ರ ಸಿದ್ದಾಂತಗಳು ಸಿಕ್ಲಿಗರ ಸಮುದಾಯದ ವಿಕಾಸಕ್ಕೆ ಬೇಕಾಗಿರುವ ಹಲವು ವ್ಯಕ್ತಿತ್ವಗಳು ಬೇಕಾಗಿವೆ. ಇಂತಹ ಸಮಾಜದ ವಿಕಾಸಕ್ಕೆ ಕಾರಣವಾಗುವ ಹಂತಗಳು ತಪ್ಪಿ ಹೋಗಬಾರದು ಹಾಗೆ ಹೋದದ್ದೇ ಆದರೆ ಸಂಕೀರ್ಣ ಬದುಕು ಬಲಗೊಳ್ಳುವುದರಲ್ಲಿ ಸಂದೇಹವೇ ಇಲ್ಲ. ವರ್ತಮಾನದ ಇಂದಿನ ಯುಗದಲ್ಲಿ ಸರ್ಕಾರಗಳ ಮೂಲಭೂತ ಸೌಕರ್ಯಗಳು ಬುಡಕಟ್ಟಿಗೆ ದೊರಕಬೇಕಾಗಿದೆ. ಸಿದ್ಧ ಮಾದರಿಯ ಯೋಜನೆಗಳು ಸಹಿತ ಬೇಕಾಗಿಲ್ಲ.

ರಾಜಕೀಯ ಪ್ರವೇಶ ಹಾಗೂ ಬುಡಕಟ್ಟು ಸಮುದಾಯಗಳ ಬೆಳವಣಿಗೆಗೆ ಬೇಕಾಗುವ ಅನುಷ್ಠಾನ ಯೋಜನೆ ಕ್ರಿಯಾಗೊಳಿಸಬೇಕಾಗಿದೆ. ಆದಿವಾಸಿಗಳ ಕುರಿತಾಗಿ ಕ್ಷೇತ್ರಕಾರ್ಯಕ್ಕೆ ಹೋದ ಸಂದರ್ಭದಲ್ಲಿ ಅವರು ನಮಗೇನು ಸೌಲಭ್ಯಗಳು ದೊರೆಯುತ್ತವೆ ಎಂದು ಹಗಲುಗನಸುಗಳ ಪ್ರಶ್ನೆಗಳನ್ನೇ ಕೇಳುತ್ತಾರೆ. ನಮಗೆಲ್ಲ ಬೇಕಾಗಿರುವುದು ಅವರ ಮಾಹಿತಿ ಸಂಗ್ರಹಣೆಗಳು ಮಾತ್ರ, ಇದರಿಂದ ಅವರ ಬದುಕು ಹಸನಾಗಲು ಸಾಧ್ಯವೇ? ಯೋಚಿಸಬೇಕಾಗಿದೆ. ಅವರಿಗೆ ಮೂಲಭೂತ ಸೌಲಭ್ಯಗಳು ತಲುಪಲು ಪ್ರಯತ್ನಿಸಬೇಕಾಗಿದೆ. ಸಂಪ್ರದಾಯಬದ್ಧವಾಗಿ ಬುಡಕಟ್ಟು ಸಮುದಾಯ ಬದುಕಬೇಕಾಗಿದೆ. ಒಂದೊಂದು ಹಂತದಲ್ಲಿ ಬುಡಕಟ್ಟುಗಳು ತಮ್ಮ ಪರಂಪರಾ –ಗತವಾಗಿ ಮೂಡಿ

ಬಂದ ಸಂಪ್ರದಾಯಗಳನ್ನು ಮೀರಿ ಹೋದ ಬದಲು ಸಾಧ್ಯವಾಗದೇ ಹೋದಾಗ ಸಹಜವಾಗಿ ಅಭಿವೃದ್ಧಿ ಯೋಜನೆಗಳಿಗೆ ಬುಡಕಟ್ಟುಗಳೇ ಸ್ಪಂದಿಸಲು ಸಾಧ್ಯ ವಾಗುವುದಿಲ್ಲ.

ಸಿಕ್ಲಿಗರ ಸಾಮಾಜಿಕ ಅಧ್ಯಯನವು ಸಿಕ್ಲಿಗರ ಬದುಕಿನ ನಾನಾ ಮುಖಗಳನ್ನು ಕುರಿತು ಸಮಗ್ರವಾಗಿ ವಿವೇಚಿಸುವುದಾಗಿದೆ. ಚಾರಿತ್ರಿಕ ಇತಿಹಾಸದ ಬಗ್ಗೆ ಅಧ್ಯಯನ ಮಾಡಲಾಗಿದೆ. ಚಾರಿತ್ರಿಕವಾಗಿ ಸಿಕ್ಲಿಗರ ಸಮುದಾಯ ತನ್ನ ಮೂಲನೆಲೆಗಳನ್ನು ಹೇಗೆ ವಿಸ್ತರಿಸಿಕೊಂಡು ಬಂದಿದೆ ಎಂಬ ಮೊದಲ ಅಧ್ಯಯನಕ್ಕೆ ನಾಂದಿ ಹಾಡಲಾಗಿದೆ. ಬುಡಕಟ್ಟುಗಳ ಅಧ್ಯಯನಗಳು ಇಂದು ಕರ್ನಾಟಕದ ಭಾರತದಲ್ಲಿ ಸಾಕಷ್ಟು ನಡೆದಿವೆ. ಇವುಗಳಿಂದ ಆಗಬೇಕಾದ ಹೊಸ ಪ್ರಯತ್ನದ ಕಡೆಗೆ ನೋಡಿದರೆ ಉಪಸಂಸ್ಕೃತಿ ಮಾಲೆಗಳು ಬುಡಕಟ್ಟು ಅಧ್ಯಯನಗಳ ಸಂಪುಟಗಳು ಪ್ರತ್ಯೇಕವಾದ ಸಂಶೋಧನೆಗಳು ನಡದೇ ಇದೆ. ಆದರೆ ಅವುಗಳ ಬೆಳಕಿಗೆ ಬಾರದೇ ಹೋದದ್ದರಿಂದ ಅವರ ಜೀವನ ವಿಚಾರಗಳು ತಿಳಿಯಲು ಕಾರಣವಾಗದು. ಸಿಕ್ಲಿಗರ ಸಮುದಾಯದ ಗುಡಿಸಲಿಗೆ, ಮನೆ ಮನೆಗೆ ಹೋಗಿ ಅವರ ಜನಗಣತಿಯನ್ನು ಕೈಗೊಳ್ಳಲಾಗಿದೆ. ಕರ್ನಾಟಕದಲ್ಲಿರುವ ಸಿಕ್ಲಿಗರ ಕುಟುಂಬಗಳಿಗೆ ಭೇಟಿ ಕೊಟ್ಟು ಅವರ ಸಮುದಾಯದ ಬೆಂಗಳೂರಿನ ಶ್ರೀ ಬಲಬೀರಸಿಂಗ್ ಪಾವಾಸಾಹೇಬರು ಸಿಕ್ಲಿಗರ ಸೋಷಿಯಲ್ ವೆಲ್‌ಫೇರ್ ಸಂಸ್ಥೆ ಮಾಡಿಕೊಂಡು ಸಿಕ್ಲಿಗರಸಮುದಾಯಕ್ಕೆ ಆರ್ಥಿಕ ಸಹಾಯ ಮಾಡುತ್ತಾರೆ. ಇಲ್ಲಿನ ಎಲ್ಲಾ ಭಾಗದ ಮಕ್ಕಳಿಗೆ ಶೈಕ್ಷಣಿಕ ಅಧ್ಯಯನಕ್ಕೆ ಉಚಿತವಾದ ವ್ಯವಸ್ಥೆ ಮಾಡಿದ್ದಾರೆ. ಅವರ ಸಂಪರ್ಕದ ಮೂಲಕ ಆಯಾ ಪಟ್ಟಣ ನಗರಗಳಲ್ಲಿ ವಾಸವಾದ ಹಿರಿಯ ಸಿಕ್ಲಿಗರ ಸಮುದಾಯದ ವ್ಯಕ್ತಿಯನ್ನು ಕಂಡು ಅಲ್ಲಿಯ ಪರಿಸ್ಥಿತಿಯನ್ನು ಗಂಭೀರವಾಗಿ ಆಲೋಚಿಸಿ ಬೆಳೆಸಿ ಈ ಮಹಾಪ್ರಬಂಧವನ್ನು ರಚಿಸಿದ್ದೇನೆ. ಅವರ ಸಹಕಾರ ತೋರುವ ಪ್ರೀತಿ ಗೌರವಗಳು ಅಧ್ಯಯನಕ್ಕೆ ಹೆಚ್ಚಿನ ಪುಷ್ಟಿ ನೀಡಿದೆ. ಈ ಮಹಾ ಪ್ರಬಂಧವು ಸಿಕ್ಲಿಗರ ಒಂದು ಸಾಮಜಿಕ ಅಧ್ಯಯನ ಎಂಬ ತಲೆಬರಹವನ್ನು ಹೊಂದಿ ಎಂಟು ಅಧ್ಯಾಯಗಳ ಮೂಲಕ ಸ್ಪಷ್ಟವಾಗಿ ಚರ್ಚಿಸಲಾಗಿದೆ. ಅವುಗಳು ಇಂತಿವೆ.

ಅಧ್ಯಯನದ ಮೂಲಕ ಕಂಡುಕೊಂಡ ಅಂಶಗಳು

೧. ಸಿಕ್ಲಿಗರ ಎಂಬ ಸಮುದಾಯ ಬುಡಕಟ್ಟಿನಲ್ಲಿ ಪ್ರಾಚೀನವಾದ ಒಂದು ಸಮುದಾಯವೆಂದು ತಿಳಿದು ಬಂದಿದೆ.

೨. ಸಿಕ್ಲಿಗರ ಇದೆ ಪದವೇ ಇವರಿಗೆ ಸೂಕ್ತವಾದುದು ಈಗಾಗಲೇ ಹಿಂದೆ ಬಳಕೆಯಲ್ಲಿದ್ದ ಸಿಕ್ಕಲಿಗಾರ, ಶಿಕ್ಕಲಗರು, ಸಿಕ್ಕಲಗಾರರು ಪದಗಳು ಬೇರೆ ಬುಡಕಟ್ಟುಗಳಿಗೆ ಸಮಾನಾಂತರವಾಗಿ ಕಂಡು

ಬರುತ್ತವೆ. ಸಾಮ್ಯತೆ, ಭಿನ್ನತೆ, ಅಂಶಗಳು ಇಲ್ಲಿ ಕಾಣಸಿಗುತ್ತವೆ. ಇವನ್ನೆಲ್ಲಾ ಹೊರತುಪಡಿಸಿಕೊಂಡು ಸರಳವಾದ ರೀತಿಯಲ್ಲಿ ಕ್ಷೇತ್ರಕಾರ್ಯ ಕೈಗೊಂಡು ಸಂಶೋಧನೆ, ಸಂದರ್ಶನ, ಚರ್ಚೆಗಳ ಮೂಲಕ ಸಿಕ್ಲಿಗರ ಸಮುದಾಯದ ಮುಖಂಡರೊಂದಿಗೆ ಚರ್ಚಿಸಿದಾಗ ಅವರು ಸಿಖ್ಖ್ ಸಿಕ್ಲಿಗರ ಎಂಬ ಪದ ಪ್ರಯೋಗ ಮಾಡಿಕೊಳ್ಳಲು ವಿನಂತಿಸಿದ್ದಾರೆ. ಸಿಕ್ಲಿಗರ ಎಂಬ ಬುಡಕಟ್ಟು ಸಮುದಾಯದ ಹೊಸ ಸಂಶೋಧನೆಯಾಗಿದೆ. ಇದೂವರೆಗೂ ಈ ಕುರಿತು ಯಾರೂ ಮಾಡಿಲ್ಲ. ಪ್ರಥಮ ದಾಖಲೆಯೂ ಇದಾಗಿದೆ.

೩. ಕರ್ನಾಟಕ ರಾಜ್ಯದಲ್ಲಿ ಸಿಕ್ಲಿಗರ ಬುಡಕಟ್ಟು ಸಮುದಾಯವೂ ಇದೆ. ಇವರ ಬಗ್ಗೆ ಯಾವ ಮಾಹಿತಿ ದಾಖಲೆಗಳು ಕರ್ನಾಟಕದಲ್ಲಿಲ್ಲ. ಭಾರತದೇಶದ ಐದು ರಾಜ್ಯಗಳಲ್ಲಿ ದೊರೆಯುವ ಸಿಕ್ಲಿಗರ ಸಮುದಾಯಗಳನ್ನು ಕಂಡು ಅಧ್ಯಯನವಾಗಬೇಕು. ಅಲ್ಲಿಂದ ಇನ್ನೂ ಹೆಚ್ಚಿನ ಮಹತ್ವ, ಅರ್ಥ ವೈಶಿಷ್ಟ್ಯತೆ ಬಗ್ಗೆ ಒತ್ತು ಕೊಡಬೇಕಾದರೆ ಅವುಗಳ ರಾಜ್ಯದ ಸಮೀಕ್ಷೆಯ ಅಧ್ಯಯನವಾಗಬೇಕಾಗಿದೆ.

೪. ದೆಹಲಿ, ಚಂಡಿಗಡ, ಹರಿಯಾಣ, ಪಂಜಾಬ, ಹಿಮಾಚಲಪ್ರದೇಶ ರಾಜ್ಯದ ಸಿಕ್ಲಿಗರ ಕುರಿತು ಸಮಗ್ರ ಅಧ್ಯಯನವಾದರೆ ಕರ್ನಾಟಕದ ಸಿಕ್ಲಿಗರಿಗೂ ಹೆಚ್ಚಿನ ಅರ್ಥ ಬರಲು ಸಾಧ್ಯವಾಗುತ್ತದೆ. ಕರ್ನಾಟಕದಲ್ಲಿ ಇನ್ನೂ ಹೆಚ್ಚಿನ ಅಧ್ಯಯನಗಳಾಗಬೇಕಾಗಿದೆ.

೫. ಕರ್ನಾಟಕ ರಾಜ್ಯದಲ್ಲಿ ಬೇರೆ ಬೇರೆ ಹೆಸರುಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಜನ ಬಳಸುತ್ತಾರೆ. ವಿನಃ ಅವರಿಗೆ ಬೇರೆ ಹೆಸರುಗಳೇ ಇಲ್ಲ. ಸಿಕ್ಲಿಗರ ಮಾತ್ರ ಜನಾಂಗವಾಗಿ ಕಂಡು ಬರುತ್ತದೆ.

೬. ಸಿಕ್ಲಿಗರ ಸಂಸ್ಕೃತಿಯನ್ನು ಪ್ರತಿಪಾದಿಸಲು ಸಂಘಸಂಸ್ಥೆಗಳು ಇಲ್ಲವೇ ಇಲ್ಲ. ಬೆಂಗಳೂರಲ್ಲಿ ಶ್ರೀಪಾವಾ ಮಾತ್ರ ಸಿಖ್ಖ್ ವೆಲ್‌ಫೇರ್ ಅಸೋಷಿಯೇಷನ್ ಒಂದು ಸಂಸ್ಥೆ ನಡೆಸಿಕೊಂಡು ಬರುತ್ತಿದ್ದಾರೆ. ಅದನ್ನು ಹೊರತುಪಡಿಸಿದರೆ ಮತ್ತೇನು ದೊರೆಯದು. ಸಂಘ-ಸಂಸ್ಥೆಗಳ ಕೊರತೆ ನೀಗಿಸಬೇಕಾಗಿದೆ.

೭. ಸಿಕ್ಲಿಗರ ಧಾರ್ಮಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಬೆಳವಣಿಗೆ ಹೊಂದಬೇಕು. ಇವುಗಳಿಂದ ಬಹುದೂರವೇ ಉಳಿದಿದ್ದಾರೆ. ಇವು ಇರದಿದ್ದರೇ ಮುಂದೆ ಬರಲು ಅಸಾಧ್ಯವಾಗುತ್ತದೆ. ಇತ್ತ ಗಮನ ಹರಿಸಬೇಕಾಗಿದೆ.

೮. ಸಿಕ್ಲಿಗರ ಬುಡಕಟ್ಟು ಸಮುದಾಯವು ಸಿಕ್ಕಲಗಾರರ ಸಮುದಾಯಕ್ಕಿಂತ ಬಹು ಭಿನ್ನವಾಗಿದೆ. ಹಾಗೇ ಸಿಕ್ಲಿಗರ ಸಮುದಾಯವು ಬುಡಕಟ್ಟುಗಳಲ್ಲಿ ಬೇರೆ ಹೆಸರು ಹೊಂದಿಲ್ಲ. ಸಿಖ್ಖ್

ಜನಾಂಗದೊಂದಿಗೆ ರಕ್ತಸಂಬಂಧ ಹಾಗೂ ಸಾಮಿಪ್ಯ ಹೊಂದಲು ಪ್ರಯತ್ನಿಸುತ್ತಿರುವುದು ಕಂಡು ಬರುತ್ತದೆ..

೯. ನಗರೀಕರಣ ಪಟ್ಟಣಗಳಲ್ಲಿ ವಾಸವಾಗಿದ್ದರೂ ಸಹಿತ ಜಾಗತೀಕರಣ ಹೊಂದಲು ಸಿಕ್ಲಿಗರ ಬುಡಕಟ್ಟಿಗೆಸಾಧ್ಯವಾಗದು. ಕರ್ನಾಟಕದ ಯಾವ ಭಾಗದಲ್ಲಿ ಇಲ್ಲದಿದ್ದರೂ ಸಹಿತ ಶಿಗ್ಗಾಂವ, ಹುಬ್ಬಳ್ಳಿಯು ಸಿಕ್ಲಿಗರ ಸಮುದಾಯವು ಮುಂದೆ ಬಂದಿದೆ. ತಾವು ಶಿಕ್ಷಣ ಹೊಂದದಿದ್ದರೂ ತಮ್ಮ ಮಕ್ಕಳಾದರೂ ಶಿಕ್ಷಣ ಪಡೆಯಬೇಕೆಂದು ಮಕ್ಕಳಿಗೆ ಶಾಲೆಗೆ ಕಳಿಸುತ್ತಿದ್ದಾರೆ.

೧೦. ಬದಲಾವಣೆಗೊಂಡ ಇಂದಿನ ಸಮುದಾಯದಲ್ಲಿ ಸರ್ಕಾರವೂ ಸಹಿತ ಹಾಗೂ ಗಿರಿಜನ ಉಪಯೋಜನೆಗೆ (ಟಿ.ಎಸ್.ಪಿ.)ಯ ಮೂಲಕ ಸೌಲಭ್ಯ ಒದಗಿಸಿ ಮುಂದೆ ಬರುವಂತೆ ಪ್ರೇರೇಪಿಸಬೇಕಾಗಿದೆ.

೧೧. ಸರ್ಕಾರ ಮೊದಲು ಇವರಿಗೆ ಸರ್ಕಾರಿ ಜಾಗ ನೀಡಬೇಕು ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆಯ ಮನೆಗಾಗಲಿ, ಆಶ್ರಯಮನೆಗಾಗಲಿ ನಿರ್ಮಿಸಿಕೊಳ್ಳಲು ಸಹಾಯ ನೀಡಬೇಕು. ಗೋಣಿಚೀಲ, ಟಿಣ್‌ಗಳು, ಗುಡಿಸಲು ಮಾಯವಾಗಿ ಮನೆಗಳಾಗಬೇಕು.

೧೨. ಅವಿಭಕ್ತ ಕುಟುಂಬಕ್ಕಿಂತ ಚಿಕ್ಕ ಕುಟುಂಬದ ಕಡೆ ಗಮನ ಹರಿಸಿದ್ದರಿಂದ ಸರ್ಕಾರ ಇವರಿಗೆ ಸೌಲಭ್ಯಗಳನ್ನು ನೀಡಬೇಕು.

೧೩. ಕರ್ನಾಟಕದ ಸಮಗ್ರ ಸಿಕ್ಲಿಗರ ಸಮುದಾಯಗಳನ್ನು ಡೋರ್ ಟು ಡೋರ್ ಸಮೀಕ್ಷೆ ಮಾಡಲಾಗಿದ್ದು, ಇದರಿಂದ ಸಂಪೂರ್ಣ ಹೊಸ ಬುಡಕಟ್ಟಿನ ಜನಾಂಗದ ಕುರಿತು ಅಧ್ಯಯನ ರೂಪಿಸಲು ಸಹಕಾರಿಯಾಗಿದೆ.

ಕರ್ನಾಟಕದಲ್ಲಿ ವಾಸವಾಗಿರುವ ಸಿಕ್ಲಿಗರ ಬುಡಕಟ್ಟು ಸಮುದಾಯವನ್ನು ಕುರಿತು ಸಮಗ್ರ ಅಧ್ಯಯನ ಕೈಗೊಂಡು ಸಾಮಾಜಿಕ ಸಂಸ್ಕೃತಿಯ ಮೂಲಕ ಚಿತ್ರಣವನ್ನು ಕೊಡಲಾಗಿದೆ. ಸಿಕ್ಲಗರ ಬುಡಕಟ್ಟು ಸಮುದಾಯವು ಸಾಮಾಜಿಕ, ಆರ್ಥಿಕ, ಸ್ಥಿತಿಗಳನ್ನು ಕುರಿತಾದ ಸಂಪೂರ್ಣ ವಿವರಣೆ ನೀಡಲಾಗಿದೆ. ಕ್ಷೇತ್ರಕಾರ್ಯಕ್ಕೆ ಹೋದ ಸಂದರ್ಭ ಎಲ್ಲಾ ಮಹಿತಿ ವಿವರಗಳನ್ನು ಕೊಡಲಾಗಿದೆ. ಸಿಕ್ಲಿಗರ ಬುಡಕಟ್ಟು ಸಮುದಾಯವು ಅತ್ಯಂತ ಹಿಂದುಳಿದ ಬಡಕುಟುಂಬ ಹಾಗೂ ಬಡತನ ಹೊಂದಿದ ಬುಡಕಟ್ಟು ಇದಾಗಿದೆ. ಎನ್ನುವದನ್ನು ಆಧಾರಸಹಿತವಾಗಿ ವಿವರಿಸಲಾಗಿದೆ. ಸಿಕ್ಲಗರ ಸಮುದಾಯದ ಜೀವನ ಆಚರಣೆ, ಶಾಸ್ತ್ರ ಸಿದ್ಧಾಂತಗಳು ಆರ್ಥಿಕತೆ ಹಿಂದೂಳಿಕೆಗೆ ಕಾರಣ ಸ್ಥಿತಿ-ಗತಿ ಇಂದಿನ ಬದಲಾಗುತ್ತಿರುವ ಹೊತ್ತಿನಲ್ಲಿ ಸಿಕ್ಲಿಗರ ಸಮುದಾಯದ ಸ್ಥಾನಮಾನವನ್ನು ಕುರಿತು ಹಾಗೂ ಹಲವು ವಿಷಯಗಳ ಬಗೆಗೆ ಚರ್ಚಿಸಲಾಗಿದೆ. ಧಾರ್ಮಿಕತೆ ಹಬ್ಬಹರಿದಿನ ಚಾರಿತ್ರಿಕ ಹಿನ್ನೆಲೆ

ಬುಡಕಟ್ಟುಗಳ ಅಧ್ಯಯನದ ಮೂಲಕ ಕಟ್ಟಿಕೊಡಲಾಗಿದೆ. ನ್ಯಾಯ ಪಂಚಾಯ್ತಿ, ಸಾಮಾಜಿಕ, ಧಾರ್ಮಿಕ, ಕುಲಕಸಬುಗಳು, ಜೀವನ ವಿಧಾನ ಒಳಗೊಂಡಂತೆ ಸಮಗ್ರವಾದ ಸಿಕ್ಲಿಗರ ಕುರಿತು ಸಾಮಾಜಿಕ ಅಧ್ಯಯನ ಕೈಗೊಳ್ಳಲಾಗಿದೆ.

ಒಟ್ಟಿನಲ್ಲಿ ಸಿಕ್ಲಿಗರ ಬುಡಕಟ್ಟು ಸಮುದಾಯ ನಾಗರಿಕ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಇವರ ಬದುಕು ಹೊಲಸು ಗಟಾರಗಳ ಮಧ್ಯದಲ್ಲಿರುವುದರಿಂದ ಅವರ ಬದುಕು ಅಸಹನೀಯವಾಗಿದೆ. ಆರ್ಥಿಕ, ಸಾಮಾಜಿಕ, ಧಾರ್ಮಿಕ ಕ್ಷೇತ್ರಗಳ ಮೂಲಕ ಗುರುತಿಸಬೇಕಾಗಿದೆ. ಇವರು ಅಲೆಮಾರಿ ವೃತ್ತಿ ಕೈಗೊಂಡಿರುವುದರಿಂದ ಅಲೆಮಾರಿತನದಲ್ಲಿ ಇರುತ್ತಾರೆ. ಯಾವ ಭಿಕ್ಷೆ ಎತ್ತದೆ ದುಡಿಮೆಯಿಲ್ಲದೇ ಊಟ ಮಾಡದ ಸ್ವಾಭಿಮಾನಿಗಳು ಸೌಮ್ಯ, ಪ್ರಮಾಣಿಕತೆ, ಸತ್ಯದ ಮೇಲೆ ನಂಬಿಕೆ ಇಟ್ಟಿದ್ದಾರೆ. ವಿಷಯ ವಿಸ್ತಾರವಾದ ದೃಷ್ಟಿಯಿಂದ ಕರ್ನಾಟಕದಲ್ಲಿರುವ ಸಿಕ್ಲಿಗರ ಸಮುದಾಯದ ಸಾಮಾಜಿಕ ಅಧ್ಯಯನ ಮಾಡಲಾಗಿದೆ. ಈ ಕುರಿತು ಮುಂದೆ ಸಂಶೋಧನೆ ಮಾಡುವವರಿಗೆ ಸಂಶೋಧಕರಿಗೆ ಪ್ರಸ್ತುತ ಪ್ರಬಂಧ ಮಾರ್ಗಸೂಚಿಯಾಗಲು ಸಹಕಾರ ನೀಡುತ್ತ ದೆಂದು ಭಾವಿಸುತ್ತೇನೆ.

ಅನುಬಂಧಗಳು

ಕರ್ನಾಟಕ ರಾಜ್ಯದಲ್ಲಿನ ಸಿಕ್ಲಿಗರ ಬುಡಕಟ್ಟು ಸಮೀಕ್ಷಾ ನೆಲೆಗಳು

ಪರಾಮರ್ಶನ ಗ್ರಂಥಗಳು

ಭಾರತ ದೇಶದಲ್ಲಿರುವ ಸಿಕ್ಲಿಗರ ಜನಸಂಖ್ಯೆ ವಿವರ

ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿರುವ ಸಿಕ್ಲಿಗರ ಜನಸಂಖ್ಯೆ ವಿವರ

ಕರ್ನಾಟಕದ ವಿವಿಧ ತಾಲೂಕುಗಳಲ್ಲಿರುವ ಸಿಕ್ಲಿಗರ ಜನಸಂಖ್ಯೆ ವಿವರ

ಕರ್ನಾಟಕದಲ್ಲಿ ಸಿಕ್ಲಿಗರರ ಶೈಕ್ಷಣಿಕ ಸ್ಥಾನ

ಮಾದರಿ ಪ್ರಶ್ನಾವಳಿ

ವಕ್ತೃಗಳ ವಿವರ

ಛಾಯಾ ಚಿತ್ರಗಳು

ಅನುಬಂಧಗಳು

ಪರಾಮರ್ಶನ ಗ್ರಂಥಗಳು

೧. ಬೋರಲಿಂಗಯ್ಯ ಹಿ.ಚಿ, ಗಿರಿಜನ ನಾಡಿಗೆ ಪಯಣ, ರಾಗಿರೊಟ್ಟಿ ಪ್ರಕಾಶನ, ಬೆಂಗಳೂರು-೧೯೯೧

೨. ಬೋರಲಿಂಗಯ್ಯ ಹಿ, ವಿಸ್ಮೃತಿ ಮತ್ತು ಸಂಸ್ಕೃತಿ, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು-೨೦೦೧

೩. ಭಾಸ್ಕರ್ ಟಿ. ಎಂ, ಸುಡುಗಾಡ ಸಿದ್ದರು ಒಂದು ಸಾಂಸ್ಕೃತಿಕ ಅಧ್ಯಯನ, ಮುರುಗ ಪ್ರಕಾಶನ, ಪಂಚಶೀಲ-೫೦ ಬುದ್ಧನಗರ ಗುಲ್ಬರ್ಗಾ-೨೦೦೦

೪. ಬೋರಲಿಂಗಯ್ಯ ಹಿ.ಚಿ, (ಸಂ) ಬುಡಕಟ್ಟು ಅಧ್ಯಯನ-೨, ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ,ಹಂಪಿ-೨೦೦೪

೫. ಬೋರಲಿಂಗಯ್ಯ ಹಿ.ಚಿ,(ಸಂ)ಬುಡಕಟ್ಟು ಅಧ್ಯಯನ ಭಾಗ-೩, ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ-೨೦೦೫

೬. ಬೋರಲಿಂಗಯ್ಯ ಹಿ.ಚಿ, (ಸಂ)ಬುಡಕಟ್ಟು ಅಧ್ಯಯನ-೪, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೫

೭. ಭಟ್ ಜಿ.ಎಸ್, ಹಸಲರು, ಐ. ಬಿ.ಎಚ್. ಪ್ರಕಾಶನ, ಬೆಂಗಳೂರು – ೧೯೮೨

೮. ಭಟ್ ಜಿ.ಎಸ್, ಪ್ರಾಚೀನ ಭಾರತದಲ್ಲಿಯ ಜನಜೀವನ, ನವಕರ್ನಾಟಕ ಪ್ರಕಾಶನ, ಬೆಂಗಳೂರು-೧೯೮೪

೯. ಬ್ಯಾತನಾಳ ಎಸ್.ಎಸ್, ಮರಾಠಿ ಲೋಕಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು-೧೯೮೧

೧೦. ಬಿರಾದಾರ ಮ.ಗು, ಜಾನಪದ ಜೀವಾಳ, ಪುಸ್ತಕ ಅಕಾಡೆಮಿ, ಗುಲ್ಬರ್ಗಾ-೧೯೮೨

೧೧. ಬಿರಾದಾರ ಮ.ಗು, ಕಲಾಗಂಗಾ(ಸಂಶೋಧನೆ ಪತ್ರಿಕೆ), ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ-೧೯೮೯

೧೨. ಬಿರಾದಾರ ಮ.ಗು, ಕಲಾಗಂಗಾ(ಸಂಶೋಧನೆ ಪತ್ರಿಕೆ), ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ- ೧೯೮೯

೧೩. ಬಿರಾದಾರ ಮ.ಗು, ಪಳಯುಳಿಕೆಗಳು, ಚಿತ್ಕಳ ಪ್ರಕಾಶನ, ಗುಲ್ಬರ್ಗಾ-೨೦೦೪

೧೪. ಬಿರಾದಾರ ಮ.ಗು, ಜಾನಪದ ಸಮಾಲೋಕನ, ಚಿತ್ಕಳ ಪ್ರಕಾಶನ, ಕಲಬುರ್ಗಿ-೧೯೮೧

೧೫. ಬಿರಾದಾರ ಮ.ಗು, ಜಾನಪದ ನೂರೆಂಟು ಕಥೆಗಳು, ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ- ೧೯೮೭

೧೬. ಬಸವರಾಜ ಪೋಲಿಸ್ ಪಾಟೀಲ, ಹೈದ್ರಾಬಾದ ಕನಾಟಕ ಜನಪದ ಸಾಹಿತ್ಯ, ಅಮರ ಪ್ರಕಾಶನ, ಗುಲ್ಬರ್ಗಾ- ೨೦೦೦

೧೭. ಬಸವರಾಜ ಪೋಲಿಸ್ ಪಾಟೀಲ, ಜಾನಪದ ವ್ಯಾಸಂಗ, ಸಾಹಿತ್ಯ ಅಮರ ಪ್ರಕಾಶನ, ಗುಲ್ಬರ್ಗಾ – ೧೯೯೮

೧೮. ಬಸವರಾಜ ಪೋಲಿಸ್ ಪಾಟೀಲ, ಜಾನಪದ ಚಿಂತನ, ಅಮರ ಪ್ರಕಾಶನ, ಗುಲ್ಬರ್ಗಾ – ೨೦೦೩

೧೯. ಬಸವರಾಜ ಪೋಲಿಸ್ ಪಾಟೀಲ, ಅಮೂಲ್ಯ ಜಾನಪದ, ಅಮರ ಪ್ರಕಾಶನ, ಗುಲ್ಬರ್ಗಾ–೨೦೦೬

೨೦. ಬಾಬಿರ ಸರೋಜಿನಿ, ಮಹಾರಾಷ್ಟ್ರದ ಜನಪದ ಸಾಹಿತ್ಯ , ನ್ಯಾಶನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾ, ನವದೆಹಲಿ–೧೯೮೦

೨೧. ಬಸವರಾಜಮಲಶೆಟ್ಟಿ, ಉತ್ತರಕರ್ನಾಟಕದ ಬಯಲಾಟಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ– ೧೯೮೩

೨೨. ಬೆನಕನಹಳ್ಳಿ ಬಿ, ಶಾಂತಿ, ಮೇಲುಪಕಾರಿಗಳು, ಐ. ಬಿ.ಎಚ್. ಪ್ರಕಾಶನ, ಬೆಂಗಳೂರು– ೧೯೮೪

೨೩. ಬೆನಕನಹಳ್ಳಿ ಬಿ. ಶಾಂತಿ, ಕರ್ನಾಟಕದ ಕಲೆಗಳು (೧೦ನೇ ಸಂಪುಟ), ಕನ್ನಡ ನಾಡಿನ ಕಲಾವಿದರು ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು– ೧೯೮೬

೨೪. ಗುರುಮೂರ್ತಿ ಕೆ.ಜಿ, ವ್ಯವಹಾರಿಕ ಮಾನವಶಾಸ್ತ್ರ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ– ೧೯೯೨

೨೫. ಗಾಯತ್ರಿ ದೇವಿ ಎ. ಎಚ್, (ಅನು)ಕ್ಯಾಲೆಂಡರ್ ಕಥೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು– ೧೯೯೨

೨೬. ಚಂದ್ರಶೇಖರ್ ಸಿ. ಎಚ್, ಆರ್ ಭಾನುಮತಿ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಇಂಡಿಯನ್ ಇನ್ಸ್ಟ್ಯೂಟ್ ಆಫ್ ಸೈನ್ಸ್ ಆವರಣ, ಬೆಂಗಳೂರು–೧೯೮೯

೨೭. ಚಿಕ್ಕಣ್ಣ ಪಿಸ್ & ರಾವ್ ಎಂ. ಎಸ್. ಎಸ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ– ೧೯೭೦

೨೮. ಜವರೇಗೌಡ ದೇ, ಜಾನಪದ ಅಧ್ಯಯನ, ಡಿವಿಕೆ.ಮೂರ್ತಿ, ಮೈಸೂರು –೧೯೭೬

೨೯. ಜವರೇಗೌಡ ದೇ, ಜಾನಪದ ಸೌಂದರ್ಯ, ಸತ್ಯಶ್ರೀ ಪ್ರಕಾಶನ, ಮೈಸೂರು –೧೯೭೭

೩೦. ಜವರೇಗೌಡ ದೇ, ಜಾನಪದ ವಾಹಿನಿ, ಡಿವಿಕೆ.ಮೂರ್ತಿ, ಮೈಸೂರು –೧೯೭೬

೩೧. ಜಯಪ್ರಕಾಶಗೌಡ ಡಿ.ಎಸ್, (ಅನು) ಮಾನವ ಭೂಗೋಳ ಶಾಸ್ತ್ರ ಒಂದು ಪರಿಚಯ, ಕನ್ನಡ ಅಧ್ಯಯನ ಸಂಸ್ಥೆ ,ಮೈಸೂರು ವಿಶ್ವವಿದ್ಯಾಲಯ, ಮೈಸೂರು–೧೯೭೭

೩೨. ಜಯದೇವ ಹು.ಕ, ಹಾಗೂ ಬರಗೂರು ರಾಮಚಂದ್ರಪ್ಪ, ಜಾನಪದ ವೈಜ್ಞಾನಿಕ ಅಧ್ಯಯನದ ನೆಲೆಗಳು, ಕನ್ನಡ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು–೧೯೯೦

೩೩. ಜ್ಯೋಶಿ ಶಂಬಾ, ಕರ್ನಾಟಕ ಸಂಸ್ಕೃತಿ ಪೂರ್ವ ಪೀಠಿಕೆ (ಭಾಗ–೨),ಶಾರದಾ ಪುಸ್ತಕಾಲಯ, ಧಾರವಾಡ –೧೯೬೬

೩೪. ಜ್ಯೋಶಿ ಶಂಬಾ, ಕನ್ನಡ ನುಡಿಯ ಜೀವಾಳ , ಶಾರದಾ ಪುಸ್ತಕಾಲಯ, ಧಾರವಾಡ–೧೯೭೩

೩೫. ಜ್ಯೋಶಿ ಶಂಬಾ, ಕನ್ನಡ ನುಡಿಯ ಹುಟ್ಟು, ನಿರಕ್ತ ಮಾಧವ ಬಲ್ಲಾಳ ಗ್ರಂಥ, ಧಾರವಾಡ –೧೯೩೭

೩೬. ಅಂಬಳಿಕೆ ಹಿರಿಯಣ್ಣ . ಕಟ್ಟೆ ಗೌಳಿಗರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು – ೧೯೯೩

೩೭. ಅರ್ಚಕ ಬಿ.ರಂಗಸ್ವಾಮಿ, ಹುಟ್ಟಿದಹಳ್ಳಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು– ೧೯೭೯

೩೮. ಅಂಬಳಿಕೆ ಹಿರಿಯಣ್ಣ, ಕಾಡುಗೊಲ್ಲರ ಜನಪದ ಗೀತೆಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು–೧೯೭೮

೩೯. ಅಂಬಳಿಕೆ ಹಿರಿಯಣ್ಣ, ಜಾನಪದ ಸಂಶೋಧನ, ಪ್ರಜ್ವಲ ಪ್ರಕಾಶನ, ಮೈಸೂರು– ೧೯೮೫

೪೦. ಅಂಬಳಿಕೆ ಹಿರಿಯಣ್ಣ ,ಜಾನಪದ ಸಮೀಕ್ಷೆ , ಪ್ರಜ್ವಲ ಪ್ರಕಾಶನ, ಮೈಸೂರು– ೧೯೮೭

೪೧. ಆರ್ವಿಯಸ್ ಸುಂದರಂ, ಆಂಧ್ರಪ್ರದೇಶದ ಜಾನಪದ, ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾ, ದೆಹಲಿ– ೧೯೭೮

೪೨. ಅಕ್ಕಮಹಾದೇವಿ, (ಅನು) ಬುಡಕಟ್ಟು ನ್ಯಾಯ, ಮೈಸೂರು ವಿಶ್ವವಿದ್ಯಾಲಯ, ಮೈಸೂರು– ೧೯೮೪

೪೩ ಇಮ್ರಾಪುರ ಸೋಮಶೇಖರ, (ಸಂ)ಕನ್ನಡ ಸಾವಿರದ ಒಗಟುಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ– ೧೯೭೬

೪೪. ಇಮ್ರಾಪುರ ಸೋಮಶೇಖರ, ನಮ್ಮ ಜಾನಪದ ಸಮೀಕ್ಷೆ ,ಚೇತನ ಪ್ರಕಾಶನ , ಧಾರವಾಡ– ೧೯೭೬

೪೫. ಇಮ್ರಾಪುರ ಸೋಮಶೇಖರ, ಭಾಷಾಂತರ ವಿಜ್ಞಾನ, ಚೇತನ ಪ್ರಕಾಶನ, ಧಾರವಾಡ– ೧೯೭೯

೪೬. ಇಮ್ರಾಪುರ ಸೋಮಶೇಖರ, ಜಾನಪದ ಸಮಾಲೋಕನ, ಸಿ.ವಿ.ಜಿ. ಪಬ್ಲಿಕೇಷನ್, ಧಾರವಾಡ –೨೦೦೫

೪೭. ಈರೇಗೌಡ ಡಿ.ಕೆ. (ಸಂ), ಕೋಲಾಟದ ಪದಗಳು, ಪೃಥ್ವಿ ಪ್ರಕಾಶನ ಸರಸ್ವತಿಪುರಂ. ಮೈಸೂರು – ೧೯೭೫

೪೮. ಈಶ್ವರಪ್ಪ ಎಂ.ಜಿ, ಮ್ಯಾಸಬೇಡರು, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು– ೧೯೮೨

೪೯. ಈಶ್ವರಪ್ಪ ಎಂ.ಜಿ,ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು– ೧೯೯೫

೫೦. ಉಪಾಧ್ಯಾಯ, ಸುಶೀಲಾ ಪಿ, ಜನಪದ ಆರಾಧನೆ, ಮತ್ತು ರಂಗಕಲೆ, ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ (ದ.ಕ.) –೧೯೮೯

೫೧. ಕಲ್ಬುರ್ಗಿ ಎಂ.ಎಂ, ಉತ್ತರ ಕನಾಟಕದ ಜನಪದ ಸಾಹಿತ್ಯ, ಶಾರದಾ ಪುಸ್ತಕಾಲಯ, ಧಾರವಡ– ೧೯೭೮

೫೨. ಕಲ್ಬುರ್ಗಿ ಎಂ.ಎಂ, ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು ಐ.ಬಿ.ಎಚ್. ಪ್ರಕಾಶನ, ಬೆಂಗಳೂರು–೧೯೭೮

೫೩. ಕಲ್ಬುರ್ಗಿ ಎಂ.ಎಂ, ಮಾರ್ಗ (ಸಂ)–೨, ನರೇಶ್ ಆಂಡ್ ಕಂಪನಿ, ಬೆಂಗಳೂರು –೧೯೯೦

೫೪. ಕಲ್ಬುರ್ಗಿ ಎಂ.ಎಂ, ಮಾರ್ಗ (ಸಂ)–೩, ನರೇಶ್ ಆಂಡ್‌ಕಂಪನಿ ಬೆಂಗಳೂರು –೧೯೯೦

೫೫. ಕಲ್ಬುರ್ಗಿ ಎಂ.ಎಂ, ಮಾರ್ಗ (ಸಂ)-೪, ನರೇಶ್ ಆಂಡ್ ಕಂಪನಿ, ಬೆಂಗಳೂರು -೧೯೯೫
೫೬. ಕರಿಶೆಟ್ಟಿ ರುದ್ರಪ್ಪ ,ಮಸಣದ ಒಡೆಯರು ನಾವು ಸಿದ್ದರು, ಸಾಹಿತ್ಯ ಸೌರಭ (ಸಂ.ಕ)ಹುಬ್ಬಳ್ಳಿ ,-೧೯೮೯
೫೭. ಕರಿಶೆಟ್ಟಿ ರುದ್ರಪ್ಪ, ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿ ಪರಂಪರೆ, ಯುವಕರ ಸಂಘ, ಹಗರಿಬೊಮ್ಮನಹಳ್ಳಿ-೧೯೯೫
೫೮. ಕಟ್ಟಿ ಎ.ಆರ್, ಸಮಾಜಶಾಸ್ತ್ರದ ಮೂಲತತ್ವಗಳು, ವಿಜಯ ಬುಕ್ ಡಿಪೋ, ಗದಗ -೧೯೮೦
೫೯. ಕರೀಂಖಾನ್ ಎಸ್.ಕೆ,. ಜನಪದ ಗೀತೆಗಳು, ಪುಸ್ತಕಾಲಯ ಪ್ರಕಾಶನ, ಮೈಸೂರು-೧೯೮೭
೬೦. ಕ.ರಾ. ಕೃ, ಜಾನಪದ ಕಥನ ಗೀತೆಗಳು, ಜಾನಪದ ಅಕಾಡೆಮಿ, ಮೈಸೂರು.-೧೯೮೩
೬೧. ಕರ್ಕಿ. ಡಿ.ಎಸ್, ಕನ್ನಡ ಛಂದೋವಿಕಾಸ,ಭಾರತ ಬುಕ್ ಡಿಪೋ ಮಾಲಾ ಪ್ರಕಾಶನ, ಧಾರವಾಡ -೧೯೭೩
೬೨. ಕಡತೋಟದ ಎಂ.ಆರ್, ಧರ್ಮ, ಸಂಸ್ಕೃತಿ, ಸಮಾಜ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ -೧೯೭೧
೬೩. ಕಾರಂತ ಶಿವರಾಮ .ಕೆ, ಜಾನಪದ ಗೀತೆಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು-೧೯೬೬
೬೪. ಕಾಳೇಗೌಡ ನಾಗವಾರ, ಬಯಲು ಸೀಮೆಯ ಲಾವಣಿಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು-೧೯೭೩
೬೫. ಕಾಳೇಗೌಡ ನಾಗವಾರ, ಕಾಡುಗೊಲ್ಲರ ಹಟ್ಟಿಯೊಂದರ ಅಧ್ಯಯನ , (ಅಪ್ರಕಟಿತ ಪಿಎಚ್.ಡಿ. ಪ್ರಬಂಧ)
೬೬. ಕಾಳೇಗೌಡ ನಾಗವಾರ, ಜುಂಜಪ್ಪ, ರಾಜ್ಯ ಸಂಪನ್ಮೋಲ ಕೇಂದ್ರ ಕರ್ನಾಟಕ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು-೧೯೯೦
೬೭. ಕೃಷ್ಣಶರ್ಮ ಬೆಟಗೇರಿ, ಕರ್ನಾಟಕ ಜನಜೀವನ, ಸಮಾಜ ಪುಸ್ತಕಾಲಯ, ಧಾರವಾಡ-೧೯೭೧
೬೮. ಕೃಷ್ಣಶರ್ಮ ಹನೂರು, ಚಿತ್ರದುರ್ಗದ ಮೂರು ಬುಡಕಟ್ಟುಗಳು, ಕುವೆಂಪು ವಿಶ್ವವಿದ್ಯಾಲಯ, ಬಿ.ಆರ್.ಪ್ರೊಜೆಕ್ಟ್ ಶಿವಮೊಗ್ಗ-೧೯೮೩
೬೯. ಕೃಷ್ಣಶರ್ಮ ಹನೂರು ಕತ್ತಲದಾರಿ ದೂರ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು -೧೯೮೧
೭೦. ಕೃಷ್ಣರಾವ್. ಎಂ, ಕನ್ನಡ ತೆಲುಗು ಸಂಬಂಧ ಸಾಹಿತ್ಯ.ಐ. ಬಿ. ಎಚ್. ಪ್ರಕಾಶನ, ಬೆಂಗಳೂರು-೧೯೮೦
೭೧. ಕೃಷ್ಣಮೂರ್ತಿ ಮ. ಸ., ಸಿದ್ಧಸಾಹಿತ್ಯ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು-೧೯೮೨
೭೨. ಕ್ಯಾತನಹಳ್ಳಿ ರಾಮಣ್ಣ, ಬೀದರ್ ಜಿಲ್ಲೆಯ ಸಂಪ್ರದಾಯದ ಹಾಡುಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು-೧೯೭೨
೭೩ ಕ್ಯಾತನಹಳ್ಳಿ ರಾಮಣ್ಣ, ಬೀದರ್ ಜಿಲ್ಲೆಯ ಜನಪದ ಕಥನ ಗೀತೆಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು-೧೯೭೪

೭೪ ಕ್ಯಾತನಹಳ್ಳಿ ರಾಮಣ್ಣ ,ರಾಯಚೂರು ಜಿಲ್ಲೆಯ ಜನಪದ ಗೀತೆಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು-೧೯೭೫

೭೫. ಕ್ಯಾತನಹಳ್ಳಿ ರಾಮಣ್ಣ ,ರಾಯಚೂರು ಜಿಲ್ಲೆಯ ಕಥನ ಗೀತೆಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು-೧೯೭೩

೭೭. ಕ್ಯಾತನಹಳ್ಳಿ ರಾಮಣ್ಣ,ಗೊಂದಲಿಗರ ಹಾಡುಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು- ೧೯೭೨

೭೬. ಕ್ಯಾತನಹಳ್ಳಿ ರಾಮಣ್ಣ, ಗೊಂದಲಿಗರು ಒಂದು ಅಧ್ಯಯನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು-೧೯೮೨

೭೭. ಕಿಟಲ್.ಎಫ್, ಕಿಟಲ್ ಕೋಲಾಟದ ಗಾದೆಗಳು (ಕನ್ನಡ ಶಾಖೆ), ಮದರಾಸು ವಿಶ್ವವಿದ್ಯಾಲಯ, ಮದರಾಸು-೧೯೬೭

೭೮. ಕೂಡಿಗೆ ಶ್ರೀಕಂಠ, ಕೊಂಡಮಾಯರು, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು-೧೯೮೨

೭೯. ಕೂಡಿಗೆ ಶ್ರೀಕಂಠ, ಅಂಟಿಗೆ ಪಂಟಿಗೆ ಪದಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು-೧೯೭೩

೮೦. ಕೊಪ್ಪರ ರವೀಂದ್ರ, ಭಾರತೀಯ ಸಮಾಜಶಾಸ್ತ್ರ, ಮಾತೋಶ್ರೀ ಗಂಗೂ ವೀ ಚಿನಿವಾಲರ ಕಾಲೇಜು ಮುದ್ದೇಬಿಹಾಳ, ಬಿಜಾಪುರ- ೧೯೮೬

೮೧. ಖಂಡೋಬಾ ಪಿ.ಕೆ, ಕರ್ನಾಟಕದ ಲಂಬಾಣಿಗಳು ಒಂದು ಸಾಂಸ್ಕೃತಿಕ ಅಧ್ಯಯನ, ದಿ. ತೇನಸಿಂಗ್ ರಾಠೋಡ ಮೆನೋರಿಯಲ್ ಟ್ರಸ್ಟ್, ಗುಲ್ಬರ್ಗಾ-೧೯೯೧

೮೪. ಖಂಡೋಬಾ.ಪಿ.ಕೆ, ಸುಡುಗಾಡ ಸಿದ್ದರು, ಕನಾಟಕ ಸಾಹಿತ್ಯ ಅಕಾಡೆಮಿ,ಬೆಂಗಳೂರು-೧೯೭೩

೮೫. ಗದ್ದಗಿಮಠ ಬಿ.ಎಸ್, ಕನ್ನಡ ಜನಪದ ಗೀತೆಗಳು, ಕರ್ನಾಟಕ ವಿಶ್ವವಿದ್ಯಾಲಯ,ಧಾರವಾಡ-೧೯೭೬

೮೬. ಗುರುಮೂರ್ತಿ. ಕೆ.ಜಿ, ಜಾನಪದ ಮಾಹಿತಿಯ ಮರು ಅರ್ಥೈಯಿಸುವಿಕೆ, ಬೆಂಗಳೂರು-೨೦೦೪

೮೭. ಗಿರಡ್ಡಿ ಗೋವಿಂದರಾಜು, ಜನಪದ ಕಾವ್ಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೧೯೭೩

೮೮. ಗಿರಿಗೌಡ ನೀ, ಎರಡು ಜನಪದ ಕಾವ್ಯಗಳು, ಗಿರಿನಿವಾಸ ಕೃಷ್ಣದೇವರಾಯ ರಸ್ತೆ, ಮೈಸೂರು-೧೯೭೩

೮೯. ಗುಂಡಪ್ಪ.ಡಿ.ವಿ, ಸಂಸ್ಕೃತಿ, ಕರ್ನಾಟಕ ಪ್ರಕಾಶನ, ಮೈಸೂರು- ೧೯೬೯

೯೦. ಗೋರೂರು ರಾಮಸ್ವಾಮಿ ಅಯ್ಯಂಗಾರ್, ಜನಪದ ಜೀವನ ಮತ್ತು ದರ್ಶನ, ಮೈಸೂರು-೧೯೭೪.

೯೧. ಗೌರಮ್ಮ.ಕೆ.ಬಸವಯ್ಯ, ದೇಶ-ವಿದೇಶದ ಕಥೆಗಳು, ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು-೧೯೬೫.

೯೨. ಚಂದ್ರಶೇಖರ ಕಂಬಾರ, (ಸಂ)ಮತ್ತು ಮುತ್ತಿನ ತ್ವಾಟ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು-೧೯೮೧

೯೩. ಚನ್ನಬಸಪ್ಪ. ಗೋ.ರು, ಕರ್ನಾಟಕ ಜನಪದ ಕಥೆಗಳು, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು-೧೯೭೨

೯೪. ಚಲುವರಾಜು, ಜುಂಜಪ್ಪ . ಕನ್ನಡ ವಿಶ್ವವಿದ್ಯಾಲಯ, ಹಂಪಿ-೧೯೯೬

೯೫. ಚಿದಾನಂದ ಮೂರ್ತಿ ಎಂ, ಸಂಶೋಧನ ತರಂಗ (ಸಂ-೨), ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-೧೯೭೭

೯೬. ಚಿದಾನಂದಮೂರ್ತಿ ಎಂ, ಗ್ರಾಮೀಣ, ಚಿಪ್ಕೋ ಪ್ರಕಾಶನ, ಬೆಂಗಳೂರು-೧೯೭೭

೯೭.. ಚಿದಾನಂದಮೂರ್ತಿ ಎಂ, ಜನ-ಜನಪದ ವಿಜ್ಞಾನ, ಸ್ವಪ್ನಬುಕ್ ಹೌಸ್, ಬೆಂಗಳೂರು-೨೦೦೩

೯೮. ಚಿನ್ನಪ್ಪಗೌಡ ಕೆ, ಭೂತಾರಾಧನೆ, ಜಾನಪದ ಅಧ್ಯಯನ, ತ್ವರಿತ ಪ್ರಕಾಶನ, ಮೈಸೂರು -೧೯೯೦

೯೯. 'Shes' Sher, Sing The sikligar of Punjab (A Gyipsy Tribe) Delhi: sterling Publishers – 1966

೧೦೦ Syied siraj- ul- Hussain, The caste and Tribes of Nijams Daminious -1989

೧೦೧ Enthoven R. E, The Tribes and castes of Bombay, presidency -1922


೧೦೨ The Scheduleds Tribes, Bombay Popular Prakashan- 1959

೧೦೩ Mann R . S. Hakkipikki, Trapper and seller Calcutta , Anthropological Survy of India – 1980

೧೦೪ Nanjum Clian H. V. and L. K. Ananthkrishna lyer. The Mysore Tribes and Castes, vol-2, Mysore University of Mysore press – 1928

೧೦೫ Ruussel R. V . and Hiralal, The Tribes and Castes of Centrsl Provinance of India (in four vols), vol-2, London, Macmillan and Co, 1916

ಕರ್ನಾಟಕದಲ್ಲಿನ ಸಿಕ್ಲಿಗರ ನೆಲೆಗಳು



ಬೀದರ್ ಜಿಲ್ಲೆ	1) ಔರಾದ 2) ಬೀದರ್ 3) ಭಾಲ್ಕಿ 4) ಹುಮನಾಬಾದ
ಗುಲ್ಬರ್ಗಾ ಜಿಲ್ಲೆ	5) ಗುಲ್ಬರ್ಗಾ 6) ಯಾದಗಿರಿ
ರಾಯಚೂರ ಜಿಲ್ಲೆ	7) ರಾಯಚೂರ 8) ಸಿಂಧನೂರ
ಕೊಪ್ಪಳ ಜಿಲ್ಲೆ	9) ಕೊಪ್ಪಳ
ಬೆಳಗಾಂವ ಜಿಲ್ಲೆ	10) ನಿಪ್ಪಾಣಿ 11) ಬೈಲಹೊಂಗಲ 12) ಬೆಳಗಾಂವ 13) ಗೋಕಾಕ್ 14) ರಾಮದುರ್ಗ
ಬಾಗಲಕೋಟ ಜಿಲ್ಲೆ	15) ಮುಧೋಳ
ಹಾವೇರಿ ಜಿಲ್ಲೆ	16) ಶಿಗ್ಗಾಂವ
ಧಾರವಾಡ ಜಿಲ್ಲೆ	17) ಧಾರವಾಡ 18) ಹುಬ್ಬಳ್ಳಿ
ಗದಗ ಜಿಲ್ಲೆ	19) ಗದಗ
ಬಿಜಾಪುರ ಜಿಲ್ಲೆ	20) ಬಿಜಾಪುರ
ಬೆಂಗಳೂರ ಜಿಲ್ಲೆ	21) ಬೆಂಗಳೂರ
ಮೈಸೂರ ಜಿಲ್ಲೆ	22) ಮೈಸೂರ

ಭಾರತ ದೇಶದಲ್ಲಿರುವ ಸಿಕ್ಲಿಗರ ಜನಸಂಖ್ಯೆ ವಿವರ

ಕ್ರ.ಸಂ.	ರಾಜ್ಯಗಳು	ಸಂಕೇತ	ಗಂಡು	ಹೆಣ್ಣು	ಒಟ್ಟು ಜನಸಂಖ್ಯೆ
೧	ಉತ್ತರಪ್ರದೇಶ(ದೆಹಲಿ)	೩೪	೬.೦೨೬	೫.೫ ೭೪	೧೧,೬೦೦
೨	ಹರಿಯಾಣ	೩೬	೪,೮೩೧	೪,೬೭೧	೯,೫೦೨
೩	ಹಿಮಾಚಲಪ್ರದೇಶ	೫೨	೦.೫೩೦	೦.೪೯೫	೧.೦೨೫
೪	ಪಂಜಾಬ	೩೬	೪,೬೪೪	೪,೦೮೩	೮,೭೨೭
೫	ಚಂಡಿಗಡ	೩೫	೦೨೮೭	೦೨೪೮	೦೫೩೫
೬	ಕರ್ನಾಟಕ		೦೯೮೫	೦೮೮೮	೧,೮೭೩

ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿರುವ ಸಿಕ್ಲಿಗರ ಜನಸಂಖ್ಯೆ

ಕ್ರಸಂ	ಜಿಲ್ಲೆ	ಕುಟುಂಬಗಳ ಸಂಖ್ಯೆ	ಗಂಡು	ಹೆಣ್ಣು	ಒಟ್ಟು ಜನಸಂಖ್ಯೆ
	ಬೀದರ ಜಿಲ್ಲೆ	೩೨	೫೭	೭೦	೧೨೭
೨	ಗುಲ್ಬರ್ಗಾ	೩೪	೮೦	೭೯	೧೫೯
೩	ರಾಯಚೂರು	೨೨	೪೬	೫೨	೦೯೮
೪	ಕೊಪ್ಪಳ	೧೩	೨೭	೨೫	೦೫೨
೫	ಬೆಂಗಳೂರು	೨೬	೭೦	೮೮	೧೫೮
೬	ಮೈಸೂರು	೧೮	೪೪	೩೭	೦೮೧
೭	ಬೆಳಗಾಂವ	೫೭	೧೩೧	೧೩೦	೨೬೧
೮	ಬಾಗಲಕೋಟೆ	೧೮	೪೭	೩೪	೦೮೧
೯	ಧಾರವಾಡ	೧೨೯	೪೦೧	೨೮೨	೬೮೩
೧೦	ಗದಗ	೦೩	೦೫	೦೭	೦೧೨
೧೧	ಹಾವೇರಿ	೨೦	೪೪	೫೧	೦೯೫
೧೨	ಬಿಜಾಪುರ	೧೩	೩೩	೩೩	೦೬೬
– –	----	೩೮೫	೯೮೫	೮೮೮	೧೮೭೩

ಕರ್ನಾಟಕದ ವಿವಿಧ ತಾಲೂಕುಗಳಲ್ಲಿರುವ ಸಿಕ್ಲಿಗರ ಜನಸಂಖ್ಯೆ

ಕ್ರಸಂ	ತಾಲೂಕು	ನೆಲೆ	ಕುಟುಂಬಗಳ ಸಂಖ್ಯೆ	ಗಂಡು	ಹೆಣ್ಣು	ಒಟ್ಟು ಜನಸಂಖ್ಯೆ
೦೧	ಬೀದರ್	ಬೀದರ್ ಗಾಂಧೀಗಂಜ್ ಮೋಹನ್ ಮಾರ್ಕೆಟ	೨೧	೪೭	೪೫	೯೨
೦೨	ಭಾಲ್ಕಿ	ಭಾಲ್ಕಿ				
		೧.ಡಾ.ಅಂಬೇಡ್ಕರ್ ಸರ್ಕಲ್	೦೨	೦೩	೦೩	೧೪
		೨.ಕೋರ್ಟ್ ಹತ್ತಿರ	೦೨	೦೫	೦೩	
೦೩	ಹುಮನಾಬಾದ	ಹುಮನಾಬಾದಸರ್ಕಾರಿ, ಪ್ರವಾಸಿ ಮಂದಿರ ಹತ್ತಿರ	೦೧	೦೧	೦೩	೦೪
೦೪	ಔರಾದ್	ಔರಾದ್ ಗಣೇಶ್‌ಮಾರ್ಕೇಟ್	೦೬	೧೧	೧೬	೨೭
೦೫	ಗುಲ್ಬರ್ಗಾ	ಗುಲ್ಬರ್ಗಾ,				
		ಆಶ್ರಯ ಕಾಲೋನಿ,	೦೭	೨೦	೨೦	
		ಪಂಚಶೀಲ ನಗರ	೧೪	೨೯	೩೧	೧೦೬
		ಸುರ್ಪರ ಮಾರ್ಕೇಟ್	೦೨	೦೩	೦೩	
೦೬	ಯಾದಗೀರ	ಯಾದಗೀರ ಸ್ಟೇಷನ್ ಏರಿಯಾ	೧೧	೨೮	೨೫	೫೩
೦೭	ರಾಯಚೂರು	ರಾಯಚೂರು				
		ಹಳೆಜನತಾಕಾಲೋನಿ	೦೫	೧೬	೦೯	
		ಚಂದ್ರಬಂಡಾರಸ್ತೆ				೨೪
		ಕಾಳಿದಾಸ್ ನಗರ	೦೨	೦೭	೦೨	
		ಗಂಜ್ ಏರಿಯಾ				
೦೮	ಸಿಂಧನೂರು	ಸಿಂಧನೂರು ಮೈಬೂ ಕಾಲೋನಿ	೧೫	೩೯	೨೯	೬೮
೦೯	ಬೆಂಗಳೂರು	ಬೆಂಗಳೂರುಜೆ.ಸಿ.ಆರ್.ನಗರ ಅಕ್ಕಿಯ್ಯಪ್ಪಗಾರ್ಡನ್ ಯಶವಂತಪುರ	೨೬	೭೦	೮೮	೧೫೮

೧೦	ಮೈಸೂರು	ಮೈಸೂರು,ವಂದೇಮಾತರಂ, ಸ್ಲಂ, ಬನ್ನಿಮಂಟಪ ಕೈಗಾರಿಕಾ ಬಡಾವಣೆ	೧೮	೪೪	೩೭	೮೧
೧೧	ಗದಗ	ಗದಗ, ಡಂಬಳ ನಾಕಾ ಕಳಸಾಪೂರ ರಸ್ತೆ ಶಿವಾನಂದ ಮಠದ ಹತ್ತಿರ	೦೩	೦೫	೦೭	೧೨
೧೨	ಹುಬ್ಬಳ್ಳಿ	ಹುಬ್ಬಳ್ಳಿ,ಮ್ಯಾಂಗನೀಜ್‌ಪ್ಲಾಟ್	೧೦	೨೫	೨೧	೪೬
		ನೇಕಾರರ ನಗರ	೧೬	೩೯	೪೦	೭೯
		ಸುಭಾಷ್ ನಗರ	೨೬	೫೧	೬೪	೧೧೫
		ಉಣಕಲ್ಲ್	೩೦	೫೫	೩೨	೮೭
೧೩	ಧಾರವಾಡ	ಧಾರವಾಡ ಲಕ್ಷಿಸಿಂಗ್ ಕೆರೆ ಧಾರವಾಡ	೩೪	೮೪	೮೫	೧೬೯
೧೪	ಶಿಗ್ಗಾಂವ್	ಶಿಗ್ಗಾಂವ್‌ಪ್ರಧಾನ ಅಂಚೆ ಕಛೇರಿ ಹಿಂದುಗಡೆ	೨೦	೪೪	೫೧	೯೫
೧೫	ಬೆಳಗಾಂವ	ಬೆಳಗಾಂವ ರುಕ್ಮಿಣಿ ನಗರ	೧೪	೩೯	೩೭	೭೬
೧೬	ಬೈಲುಹೊಂಗಲ್	ಬೈಲು ಹೊಂಗಲ್ ರೈತ ಭವನ	೧೨	೩೨	೨೯	೬೧
೧೭	ನಿಪ್ಪಾಣಿ	ನಿಪ್ಪಾಣಿ ಆಶ್ರಯ ನಗರ	೨೬	೪೩	೫೪	೯೭
೧೮	ರಾಮದುರ್ಗ	ರಾಮದುರ್ಗಬಸ್ಸುನಿಲ್ದಾಣದ ಹತ್ತಿರ	೦೧	೦೪	೦೧	೦೫
೧೯	ಗೋಕಾಕ್	ಗೋಕಾಕ್	೦೪	೧೩	೦೯	೨೨
೨೦	ಮುಧೋಳ್	ಮುಧೋಳ್	೧೮	೪೭	೩೪	೮೧
೨೧	ಬಿಜಾಪುರ	ಬಿಜಾಪುರ, ಗುರುನಾನಕ್ ನಗರ, ಸ್ಟೇಷನ ರಸ್ತೆ ಹತ್ತಿರ ಬಿಜಾಪುರ	೧೩	೩೩	೩೩	೬೬
೨೨	ಕೊಪ್ಪಳ	ಕೊಪ್ಪಳ ದೇವರಾಜ ಅರಸ್ ಕಾಲೋನಿ	೧೩	೨೭	೨೫	೫೨

ಕರ್ನಾಟಕದಲ್ಲಿ ಸಿಕ್ಲಿಗರ ಶೈಕ್ಷಣಿಕ ಸ್ಥಾನ

ಸಿಕ್ಲಿಗರ ಒಟ್ಟು ಜನಸಂಖ್ಯೆ ೧೮೭೩

ಅಕ್ಷರಸ್ಥರ ಒಟ್ಟು ಸಂಖ್ಯೆ ೪೯೨

ಅನಕ್ಷರಸ್ಥರ ಒಟ್ಟು ಸಂಖ್ಯೆ ೧೩೮೧

ಒಟ್ಟು ಗಂಡಸರ ಸಂಖ್ಯೆ ೨೮೬

ಒಟ್ಟು ಹೆಂಗಸರ ಸಂಖ್ಯೆ ೨೦೬

---	ಗಂಡು	ಹೆಣ್ಣು	ಒಟ್ಟು
ಒಟ್ಟು ಜನಸಂಖ್ಯೆ	೯೮೫	೮೮೮	೧೮೭೩
ಅಕ್ಷರಸ್ಥರ ಸಂಖ್ಯೆ ಪ್ರಾಥಮಿಕ ಹಂತದಲ್ಲಿ	೨೪೦	೧೭೮	೪೧೮
ಅಕ್ಷರಸ್ಥರ ಸಂಖ್ಯೆ ಪ್ರೌಢ ಹಂತದಲ್ಲಿ	೩೩	೨೫	೫೮
ಅಕ್ಷರಸ್ಥರ ಸಂಖ್ಯೆ ಪದವಿ ಪೂರ್ವಹಂತದಲ್ಲಿ	೧೦	೦೩	೧೩
ಅಕ್ಷರಸ್ಥರ ಸಂಖ್ಯೆ ಪದವಿ ಹಂತದಲ್ಲಿ	೦೧	--	೦೧
ಅಕ್ಷರಸ್ಥರ ಸಂಖ್ಯೆ ವೃತ್ತಿ ಕೋರ್ಸ್ ಹಂತದಲ್ಲಿ	೦೨	--	೦೨

ವಕ್ತೃಗಳ ವಿವರ

ಬೀದರ ಜಿಲ್ಲೆ

ಬೀದರ

ಕ್ರಸಂ	ಹೆಸರು	ವಯಸ್ಸು	ವೃತ್ತಿ	ಊರು	ಜಿಲ್ಲೆ
೧	ಕರ್ತಾರ್‌ಸಿಂಗ/ ಸಾಬಸಿಂಗ	೩೫	ಕಬ್ಬಿಣ ಕೆಲಸ	ಬೀದರ	ಬೀದರ
೨	ಬೀರುಸಿಂಗ/ ಧನಸಿಂಗ	೩೦	ಸರಕಾರಿನೌಕರ	ಬೀದರ	ಬೀದರ
೩	ಜೋಗೇಂದ್ರ ಸಿಂಗ್/ ಹರನಾಮಸಿಂಗ	೩೦	ಕಬ್ಬಿಣ ಕೆಲಸ	ಬೀದರ	ಬೀದರ
೪	ಮಣೀಂದ್ರ ಕೌರ/ ಬೀರುಸಿಂಗ	೨೦	ಮನೆಕೆಲಸ	ಬೀದರ	ಬೀದರ
೫	ಧೂಪಾಕಾರ/ ಭಜನ್‌ಸಿಂಗ್	೪೦	ಮನೆಕೆಲಸ	ಬೀದರ	ಬೀದರ
೬	ಕೇಸರ್‌ಬಾಯಿ ಕೌರ್/ಸುಜಾನಸಿಂಗ	೬೦	ಕಬ್ಬಿಣ ಕೆಲಸ	ಬೀದರ	ಬೀದರ
೭	ದೌಲತ್‌ಸಿಂಗ/ ಚಂದುಸಿಂಗ	೩೬	ಮನೆಕೆಲಸ	ಬೀದರ	ಬೀದರ
೮	ಸುರೇಕಾಕೌರ/ ಚಂದುಸಿಂಗ	೩೦	ಕಬ್ಬಿಣ ಕೆಲಸ	ಬೀದರ	ಬೀದರ
೯	ಬಭನ್‌ಸಿಂಗ	೫೦	ಕಬ್ಬಿಣ ಕೆಲಸ	ಬೀದರ	ಬೀದರ
೧೦	ಹರನಾಮಸಿಂಗ/ ಧನಸಿಂಗ	೬೦	ಕಬ್ಬಿಣ ಕೆಲಸ	ಬೀದರ	ಬೀದರ

ಭಾಲ್ಕಿ

ಕ್ರಸಂ	ಹೆಸರು	ವಯಸ್ಸು	ವೃತ್ತಿ	ಊರು	ಜಿಲ್ಲೆ
೧	ಮೌಲನ್‌ಬಾಯಿಕೌರ/ ದಾರಾಸಿಂಗ	೪೦	ಮನೆಕೆಲಸ	ಭಾಲ್ಕಿ	ಬೀದರ
೨	ಕೇಸರ್‌ಬಾಯಿಸಿಂಗೆ/ ಸುಜಾನಸಿಂಗ	೬೦	ಮನೆಕೆಲಸ	ಭಾಲ್ಕಿ	ಬೀದರ
೩	ಸೋನಾಕೌರ/ ಠಾಕೂರಸಿಂಗ	೩೦	ಮನೆಕೆಲಸ	ಭಾಲ್ಕಿ	ಬೀದರ
೪	ತೇಗದೀರಸಿಮಗ/ ಜಗ್ಗಸಿಂಗ	೩೫	ಕಬ್ಬಿಣ ಕೆಲಸ	ಭಾಲ್ಕಿ	ಬೀದರ
೫	ಬೈಯಂಸಿಂಗ/ ದಾರಾಸಿಂಗ	೧೯	ಕಬ್ಬಿಣ ಕೆಲಸ	ಭಾಲ್ಕಿ	ಬೀದರ

ಔರಾದ

ಕ್ರಸಂ	ಹೆಸರು	ವಯಸ್ಸು	ವೃತ್ತಿ	ಊರು	ಜಿಲ್ಲೆ
೧	ರಾಠೋಡಸಿಂಗ/ಚರಣಸಿಂಗ	೫೦	ಕಬ್ಬಿಣಕೆಲಸ	ಔರಾದ	ಬೀದರ
೨	ಸೋಮಸಿಂಗ/ಈಶ್ವರಸಿಂಗ	೨೫	ಕಬ್ಬಿಣಕೆಲಸ	ಔರಾದ	ಬೀದರ
೩	ಸುರಜ್‌ಕೌರ/ ಸೋಮಸಿಂಗ	೨೦	ಮನೆಕೆಲಸ	ಔರಾದ	ಬೀದರ
೪	ಕುಲಜೀತ್‌ಸಿಂಗ/ನೆಹನ್‌ಸಿಂಗ	೨೫	ಕಬ್ಬಿಣಕೆಲಸ	ಔರಾದ	ಬೀದರ
೫	ರುಕ್ಕಮ್ಮಿಣಿಕೌರ/ಭಜನ್‌ಸಿಂಗ	೭೦	ಕಬ್ಬಿಣಕೆಲಸ	ಔರಾದ	ಬೀದರ

ಹುಮನಾಬಾದ

ಕ್ರಸಂ	ಹೆಸರು	ವಯಸ್ಸು	ವೃತ್ತಿ	ಊರು	ಈಲ್ಲೆ
೧	ಲಕ್ಕನಸಿಂಗ/ ರಂಜಿಲ್‌ಸಿಂಗ	೩೫	ಕಬ್ಬಿಣಕೆಲಸ	ಹುಮನಾಬಾದ	ಬೀದರ
೨	ಮಾಯಾಕೌರ/ ಲಕ್ಕನಸಿಂಗ	೨೫	ಮನೆಕೆಲಸ	ಹುಮನಾಬಾದ	ಬೀದರ

ಗುಲ್ಬರ್ಗಾ ಜಿಲ್ಲೆ

ಗುಲ್ಬರ್ಗಾ

ಕ್ರಸಂ	ಹೆಸರು	ವಯಸ್ಸು	ವೃತ್ತಿ	ಊರು	ಜಿಲ್ಲೆ
೧	ಜಗತಸಿಂಗ/ ಸುಕಿಂದ್ರಸಿಂಗ	೨೩	ಕಬ್ಬಿಣ ಕೆಲಸ	ಗುಲ್ಬರ್ಗಾ	ಗುಲ್ಬರ್ಗಾ
೨	ಬಲದೇವಸಿಂಗ/ ನರಸಿಂಗ	೬೦	ಕಬ್ಬಿಣ ಕೆಲಸ	ಗುಲ್ಬರ್ಗಾ	ಗುಲ್ಬರ್ಗಾ
೩	ಸಂತ್‌ಕೌರ್/ ಬಲದೇವಸಿಂಗ	೫೦	ಮನೆಕೆಲಸ	ಗುಲ್ಬರ್ಗಾ	ಗುಲ್ಬರ್ಗಾ
೪	ರೂಪಸಿಂಗ/ ಬಲದೇವಸಿಂಗ	೨೫	ಕಬ್ಬಿಣ ಕೆಲಸ	ಗುಲ್ಬರ್ಗಾ	ಗುಲ್ಬರ್ಗಾ
೫	ಲಾಖನಸಿಂಗ/ ಬಲದೇವಸಿಂಗ	೩೦	ಕಬ್ಬಿಣ ಕೆಲಸ	ಗುಲ್ಬರ್ಗಾ	ಗುಲ್ಬರ್ಗಾ
೬	ಶೇಖರಸಿಂಗ/ ಸುರೇಂದ್ರಸಿಂಗ	೨೫	ವಿದ್ಯಾರ್ಥಿ	ಗುಲ್ಬರ್ಗಾ	ಗುಲ್ಬರ್ಗಾ

ಯಾದಗೀರ

ಕ್ರಸಂ	ಹೆಸರು	ವಯಸ್ಸು	ವೃತ್ತಿ	ಊರು	ಜಿಲ್ಲೆ
೧	ಧರ್ಮಸಿಂಗ/ಸುಂದರಸಿಂಗ	೬೦	ಕಬ್ಬಿಣ ಕೆಲಸ	ಯಾದಗೀರ	ಗುಲ್ಬರ್ಗಾ
೨	ತೇಜಕೌರ/ಧರ್ಮಸಿಂಗ	೮೦	ಮನೆಕೆಲಸ	ಯಾದಗೀರ	ಗುಲ್ಬರ್ಗಾ
೩	ಕೇಕಸಿಂಗ/ಧರ್ಮಸಿಂಗ	೩೦	ಕಬ್ಬಿಣಕೆಲಸ	ಯಾದಗೀರ	ಗುಲ್ಬರ್ಗಾ
೪	ಸರಿತಾಕೌರ/ ಕೇಕಸಿಂಗ	೨೫	ಮನೆಕೆಲಸ	ಯಾದಗೀರ	ಗುಲ್ಬರ್ಗಾ
೫	ಜಗರ್‌ಸಿಂಗ/ಧರ್ಮಸಿಂಗ	೩೫	ಕಬ್ಬಿಣಕೆಲಸ	ಯಾದಗೀರ	ಗುಲ್ಬರ್ಗಾ
೬	ಹೀರಾಸಿಂಗ/ಜಗ್ಗರ್‌ಸಿಂಗ	೧೮	ಕಬ್ಬಿಣಕೆಲಸ	ಯಾದಗೀರ	ಗುಲ್ಬರ್ಗಾ

ರಾಯಚೂರು ಜಿಲ್ಲೆ

ರಾಯಚೂರು

ಕ್ರಸಂ	ಹೆಸರು	ವಯಸ್ಸು	ವೃತ್ತಿ	ಊರು	ಜಿಲ್ಲೆ
೧	ಜಗ್ಗರಸಿಂಗ/ರಾಜಾಸಿಂಗ	೩೫	ಕಬ್ಬಿಣಕೆಲಸ	ರಾಯಚೂರು	ರಾಯಚೂರು
೨	ಮನಂಕೌರ/ಮಹೇಂದ್ರಸಿಂಗ	೩೦	ಮನೆ ಕೆಲಸ	ರಾಯಚೂರು	ರಾಯಚೂರು
೩	ರಾಜಸಿಂಗ/ಮಹೇಂದ್ರಸಿಂಗ	೩೨	ಕಬ್ಬಿಣ ಕೆಲಸ	ರಾಯಚೂರು	ರಾಯಚೂರು
೪	ಭಚ್ಚನಸಿಂಗ/ಮಹೇಂದ್ರಸಿಂಗ	೨೨	ಕಬ್ಬಿಣಕೆಲಸ	ರಾಯಚೂರು	ರಾಯಚೂರು
೫	ಕಮಲಾಬಾಯಿಕೌರ/ಮಹೇಂದ್ರಸಿಂಗ	೫೦	ಮನೆಕೆಲಸ	ರಾಯಚೂರು	ರಾಯಚೂರು

ಸಿಂಧನೂರು

ಕ್ರಸಂ	ಹೆಸರು	ವಯಸ್ಸು	ವೃತ್ತಿ	ಊರು	ಜಿಲ್ಲೆ
೧	ಲಾಖರಸಿಂಗ/ ಬುಲಾಸಿಂಗ	೨೪	ಕಬ್ಬಿಣಕೆಲಸ	ಸಿಂಧನೂರು	ರಾಯಚೂರು
೨	ಜ್ಯೋತಿಕೌರ/ಲಾಖರ್‌ಸಿಂಗ	೧೮	ಮನೆಕೆಲಸ	ಸಿಂಧನೂರು	ರಾಯಚೂರು
೩	ಮೇರ್‌ಕೌರ/ಬಾಬುಲಾಲಸಿಂಗ	೪೫	ಮನೆಕೆಲಸ	ಸಿಂಧನೂರು	ರಾಯಚೂರು
೪	ಚರಣಸಿಂಗ/ಬಲವಂತಸಿಂಗ	೭೦	ಕಬ್ಬಿಣಕೆಲಸ	ಸಿಂಧನೂರು	ರಾಯಚೂರು
೫	ಸಿಕಂದ್ರಸಿಂಗ/ಸರ್ದಾರಸಿಂಗ	೪೦	ಕಬ್ಬಿಣಕೆಲಸ	ಸಿಂಧನೂರು	ರಾಯಚೂರು
೬	ಚಂದಾಕೌರ/ಸಿಕ್ಕಂದರಸಿಂಗ	೩೫	ಮನೆಕೆಲಸ	ಸಿಂಧನೂರು	ರಾಯಚೂರು

ಗದಗ ಜಿಲ್ಲೆ

ಗದಗ

ಕ್ರ.ಸಂ	ಹೆಸರು	ವಯಸ್ಸು	ವೃತ್ತಿ	ಊರು	ಜಿಲ್ಲೆ
೧	ಭಗತ್‌ಸಿಂಗ/ಅಮರಸಿಂಗ	೨೯	ಕಬ್ಬಿಣಕೆಲಸ	ಗದಗ	ಗದಗ
೨.	ಲತಾಕೌರ/ಭಗತ್‌ಸಿಂಗ	೨೫	ಮನೆಕೆಲಸ	ಗದಗ	ಗದಗ
೩	ಲಕ್ಷ್ಮಣಸಿಂಗ/ಅಮರಸಿಂಗ	೨೬	ಕಬ್ಬಿಣಕೆಲಸ	ಗದಗ	ಗದಗ
೪	ಅಮರಸಿಂಗ/ಬಲವಂತಸಿಂಗ	೭೫	ಕಬ್ಬಿಣಕೆಲಸ	ಗದಗ	ಗದಗ
೫	ಕಮಲಾಕೌರ/ಅಮರಸಿಂಗ	೬೫	ಮನೆಕೆಲಸ	ಗದಗ	ಗದಗ

ಬಿಜಾಪೂರ ಜಿಲ್ಲೆ

ಬಿಜಾಪುರ

ಕ್ರ.ಸಂ	ಹೆಸರು	ವಯಸ್ಸು	ವೃತ್ತಿ	ಊರು	ಜಿಲ್ಲೆ
೧	ಚಮನಸಿಂಗ/ಲಾಹೋರಸಿಂಗ	೪೦	ಕಬ್ಬಿಣಕೆಲಸ	ಬಿಜಾಪೂರ	ಬಿಜಾಪೂರ
೨	ಗಂಗಾಕೌರ/ಚಮನ್‌ಸಿಂಗ	೩೮	ಮನೆಕೆಲಸ	ಬಿಜಾಪೂರ	ಬಿಜಾಪೂರ
೩	ತಾರಾಸಿಂಗ/ಸುಂದರಸಿಂಗ	೭೨	ಕಬ್ಬಿಣಕೆಲಸ	ಬಿಜಾಪೂರ	ಬಿಜಾಪೂರ
4	ಚರಣಸಿಂಗ/ತಾರಾಸಿಂಗ	೭೨	ಕಬ್ಬಿಣಕೆಲಸ	ಬಿಜಾಪೂರ	ಬಿಜಾಪೂರ
5	ಮಜುನುಸಿಂಗ/ತಾರಾಸಿಂಗ	೫೨	ಕಬ್ಬಿಣಕೆಲಸ	ಬಿಜಾಪೂರ	ಬಿಜಾಪೂರ

ಬೆಂಗಳೂರು ಜಿಲ್ಲೆ

ಬೆಂಗಳೂರು

ಕ್ರ.ಸಂ	ಹೆಸರು	ವಯಸ್ಸು	ವೃತ್ತಿ	ಊರು	ಜಿಲ್ಲೆ
೧	ಭಾರತ್‌ಸಿಂಗ/ ಬುಜಾರಸಿಂಗ	೩೬	ಕಬ್ಬಿಣಕೆಲಸ	ಬೆಂಗಳೂರು	ಬೆಂಗಳೂರು
೨	ಜತನ್‌ಕೌರ/ಭಾರತ್‌ಸಿಂಗ	೩೦	ಮನೆಕೆಲಸ	ಬೆಂಗಳೂರು	ಬೆಂಗಳೂರು
೩	ಮಾನಸಿಂಗ/ಜುಂಗರಸಿಂಗ	೩೫	ಕಬ್ಬಿಣಕೆಲಸ	ಬೆಂಗಳೂರು	ಬೆಂಗಳೂರು
೪	ಜಿಜಾರಸಿಂಗ/ಲಾಲಾಸಿಂಗ	೫೦	ಕಬ್ಬಿಣಕೆಲಸ	ಬೆಂಗಳೂರು	ಬೆಂಗಳೂರು
೫	ರೂಪಸಿಂಗ/ಬಲದೇವಸಿಂಗ	೨೮	ಕಬ್ಬಿಣಕೆಲಸ	ಬೆಂಗಳೂರು	ಬೆಂಗಳೂರು
೬	ತೀರ್ಥಸಿಂಗ/ಲಾಲಸಿಂಗ	೫೮	ಕಬ್ಬಿಣಕೆಲಸ	ಬೆಂಗಳೂರು	ಬೆಂಗಳೂರು

ಕೊಪ್ಪಳ ಜಿಲ್ಲೆ

ಕೊಪ್ಪಳ

ಕ್ರಸಂ	ಹೆಸರು	ವಯಸ್ಸು	ವೃತ್ತಿ	ಊರು	ಜಿಲ್ಲೆ
೧	ಸರ್ದಾರಸಿಂಗ/ಬಲವಂತಸಿಂಗ	೮೦	ಕಬ್ಬಿಣಕೆಲಸ	ಕೊಪ್ಪಳ	ಕೊಪ್ಪಳ
೨	ಅತ್ತರ್‌ಸಿಂಗ/ದಯಾಸಿಂಗ	೪೦	ಕಬ್ಬಿಣಕೆಲಸ	ಕೊಪ್ಪಳ	ಕೊಪ್ಪಳ
೩	ಕಮಲಾಕೌರ/ಅತ್ತರಸಿಂಗ	೩೦	ಮನೆಕೆಲಸ	ಕೊಪ್ಪಳ	ಕೊಪ್ಪಳ
೪	ಶೇರ್‌ಸಿಂಗ/ಮನೋಹರಸಿಂಗ	೨೫	ಕಬ್ಬಿಣಕೆಲಸ	ಕೊಪ್ಪಳ	ಕೊಪ್ಪಳ
೫	ಸಜನಕೌರ/ಮನೋಹರಸಿಂಗ	೩೦	ಮನೆಕೆಲಸ	ಕೊಪ್ಪಳ	ಕೊಪ್ಪಳ
೬	ರೂಪಾಕೌರ/ಗುರುದೇವಸಿಂಗ	೧೮	ಮನೆಕೆಲಸ	ಕೊಪ್ಪಳ	ಕೊಪ್ಪಳ
೭	ಮೌನಾಕೌರ/ಗುರುದೇವಸಿಂಗ	೪೦	ಮನೆಕೆಲಸ	ಕೊಪ್ಪಳ	ಕೊಪ್ಪಳ
೮	ತ್ರಿಲೋಕಸಿಂಗ/ಸರ್ದಾರಸಿಂಗ	೩೨	ಕಬ್ಬಿಣಕೆಲಸ	ಕೊಪ್ಪಳ	ಕೊಪ್ಪಳ
೯	ಪ್ರೇಮಜೀತ್‌ಸಿಂಗ/ತ್ರಿಲೋಕಸಿಂಗ	೩೦	ಮನೆಕೆಲಸ	ಕೊಪ್ಪಳ	ಕೊಪ್ಪಳ
೧೦	ಧರ್ಮಸಿಂಗ/ಸರ್ದಾರಸಿಂಗ	೫೦	ಕಬ್ಬಿಣಕೆಲಸ	ಕೊಪ್ಪಳ	ಕೊಪ್ಪಳ

ಮೈಸೂರು ಜಿಲ್ಲೆ

ಮೈಸೂರು

ಕ್ರಸಂ	ಹೆಸರು	ವಯಸ್ಸು	ವೃತ್ತಿ	ಊರು	ಜಿಲ್ಲೆ
೧	ಮಾಧುಸಿಂಗ/ದುರ್ಗಾಸಿಂಗ	೫೫	ಕಬ್ಬಿಣ ಕೆಲಸ	ಮೈಸೂರು	ಮೈಸೂರು
೨	ಶಂಕರಸಿಂಗ/ದುರ್ಗಾಸಿಂಗ	೪೨	ಕಬ್ಬಿಣಕೆಲಸ	ಮೈಸೂರು	ಮೈಸೂರು
೩	ಮಾಯಾಕೌರ/ಶಂಕರಸಿಂಗ	೩೫	ಮನೆಕೆಲಸ	ಮೈಸೂರು	ಮೈಸೂರು
೪	ದುರ್ಗಾಸಿಂಗ/ನಿಖಾಸಿಂಗ	೮೦	ಕಬ್ಬಿಣಕೆಲಸ	ಮೈಸೂರು	ಮೈಸೂರು
೫	ರಾಜ್‌ಕೌರ/ ದುರ್ಗಾಸಿಂಗ	೭೦	ಮನೆಕೆಲಸ	ಮೈಸೂರು	ಮೈಸೂರು
೬	ಮಜುನುಸಿಂಗ/ಭಾಲಸಿಂಗ	೬೦	ಕಬ್ಬಿಣ ಕೆಲಸ	ಮೈಸೂರು	ಮೈಸೂರು

ಧಾರವಾಡ ಜಿಲ್ಲೆ

ಧಾರವಾಡ

ಕ್ರಸಂ	ಹೆಸರು	ವಯಸ್ಸು	ವೃತ್ತಿ	ಊರು	ಜಿಲ್ಲೆ
೧	ಅಜೀತ್‌ಸಿಂಗ/ ರಾಣಾಸಿಂಗ	೩೧	ಕಬ್ಬಿಣಕೆಲಸ	ಧಾರವಾಡ	ಧಾರವಾಡ
೨	ಅಲ್ಲಿಸಿಂಗ/ಚರಣಸಿಂಗ	೪೦	ಕಬ್ಬಿಣಕೆಲಸ	ಧಾರವಾಡ	ಧಾರವಾಡ
೩	ಚರಣಸಿಂಗ/ತಾರಾಸಿಂಗ	೭೫	ಕಬ್ಬಿಣಕೆಲಸ	ಧಾರವಾಡ	ಧಾರವಾಡ
೪	ಧಾವಸಿಂಗ/ತಾರಾಸಿಂಗ	೭೫	ಕಬ್ಬಿಣಕೆಲಸ	ಧಾರವಾಡ	ಧಾರವಾಡ
೫	ರಮಾಕೌರ/ಮನೋಹರಸಿಂಗ	೪೦	ಮನೆಕೆಲಸ	ಧಾರವಾಡ	ಧಾರವಾಡ
೬	ಮಾನಕೌರ/ ತಾರಾಸಿಂಗ	೭೦	ಕಬ್ಬಿಣಕೆಲಸ	ಧಾರವಾಡ	ಧಾರವಾಡ

ಹುಬ್ಬಳ್ಳಿ

ಕ್ರಸಂ	ಹೆಸರು	ವಯಸ್ಸು	ವೃತ್ತಿ	ಊರು	ಜಿಲ್ಲೆ
೧	ಸುವಾಹನಸಿಂಗ/ಚರಣಸಿಂಗ	೩೬	ಕಬ್ಬಿಣಕೆಲಸ	ಹುಬ್ಬಳ್ಳಿ	ಧಾರವಾಡ
೨	ಕಿರಣಸಿಂಗ/ಅಮರಸಿಂಗ	೩೫	ಕಬ್ಬಿಣಕೆಲಸ	ಹುಬ್ಬಳ್ಳಿ	ಧಾರವಾಡ
೩	ಚಮನ್‌ಸಿಂಗ /ಹರಿಸಿಂಗ	೪೦	ಕಬ್ಬಿಣಕೆಲಸ	ಹುಬ್ಬಳ್ಳಿ	ಧಾರವಾಡ
೪	ಅಜಿತ್‌ಸಿಂಗ /ಪ್ರತ್‌ಪಾಲಸಿಂಗ	೪೫	ಕಬ್ಬಿಣಕೆಲಸ	ಹುಬ್ಬಳ್ಳಿ	ಧಾರವಾಡ
೫	ಧೀರಸಿಂಗ/ಪ್ರತ್ಪಾಲಸಿಂಗ	೪೫	ಕಬ್ಬಿಣಕೆಲಸ	ಹುಬ್ಬಳ್ಳಿ	ಧಾರವಾಡ

ಬೆಳಗಾಂವ ಜಿಲ್ಲೆ

ಗೋಕಾಕ್

ಕ್ರಸಂ	ಹೆಸರು	ವಯಸ್ಸು	ವೃತ್ತಿ	ಊರು	ಜಿಲ್ಲೆ
೧	ದೀಪಾಕೌರ/ ಹರಿಪಾಲಸಿಂಗ	೫೮	ಮನೆಕೆಲಸ	ಗೋಕಾಕ್	ಬೆಳಗಾಂವ
೨	ಪವನ್‌ಸಿಂಗ/ಹರಿಪಾಲಸಿಂಗ	೩೫	ಕಬ್ಬಿಣಕೆಲಸ	ಗೋಕಾಕ್	ಬೆಳಗಾಂವ

ಬೈಲಹೊಂಗಲ

ಕ್ರಸಂ	ಹೆಸರು	ವಯಸ್ಸು	ವೃತ್ತಿ	ಊರು	ಜಿಲ್ಲೆ
೧	ಜಗತ್‌ಸಿಂಗ/ಪ್ರೇಮಸಿಂಗ	೪೨	ಕಬ್ಬಿಣಕೆಲಸ	ಬೈಲಹೊಂಗಲ	ಬೆಳಗಾಂವ
೨	ಶಾಂತಿಕೌರ /ಪ್ರೇಮಸಿಂಗ	೫೦	ಮನೆಕೆಲಸ	ಬೈಲಹೊಂಗಲ	ಬೆಳಗಾಂವ
೩	ವಿಕ್ರಮಸಿಂಗ/ ಪ್ರೇಮಸಿಂಗ	೪೦	ಕಬ್ಬಿಣಕೆಲಸ	ಬೈಲಹೊಂಗಲ	ಬೆಳಗಾಂವ
೪	ಸತ್ಯನಾಮಸಿಂಗ/ ಪ್ರೇಮಸಿಂಗ	೨೩	ಕಬ್ಬಿಣಕೆಲಸ	ಬೈಲಹೊಂಗಲ	ಬೆಳಗಾಂವ
೫	ಸರಭತ್ಕೌರ /ಜಗತ್‌ಸಿಂಗ	೩೮	ಮನೆಕೆಲಸ	ಬೈಲಹೊಂಗಲ	ಬೆಳಗಾಂವ

ನಿಪ್ಪಾಣಿ

ಕ್ರಸಂ	ಹೆಸರು	ವಯಸ್ಸು	ವೃತ್ತಿ	ಊರು	ಜಿಲ್ಲೆ
೧	ಅಮರಸಿಂಗ/ಪ್ರತಾಪಸಿಂಗ	೩೮	ಕಬ್ಬಿಣಕೆಲಸ	ನಿಪ್ಪಾಣಿ	ಬೆಳಗಾಂವ
೨	ತಿರುಮಕ್ಕೌರ/ಅಮರಸಿಂಗ	೩೫	ಮನೆಕೆಲಸ	ನಿಪ್ಪಾಣಿ	ಬೆಳಗಾಂವ
೩	ಭಗತ್‌ಸಿಂಗ /ಅಮರಸಿಂಗ	೧೮	ಕಬ್ಬಿಣಕೆಲಸ	ನಿಪ್ಪಾಣಿ	ಬೆಳಗಾಂವ
೪	ತಿಲಕ್‌ಸಿಂಗ/ ಅಮರಸಿಂಗ	೧೭	ಕಬ್ಬಿಣಕೆಲಸ	ನಿಪ್ಪಾಣಿ	ಬೆಳಗಾಂವ
೫	ಸತ್ತಿಸಿಂಗ/ಅಮರಸಿಂಗ	೨೩	ಕಬ್ಬಿಣಕೆಲಸ	ನಿಪ್ಪಾಣಿ	ಬೆಳಗಾಂವ
೬	ಸರೋಜಸಿಂಗ/ಸತ್ತಿಸಿಂಗ	೨೦	ಮನೆಕೆಲಸ	ನಿಪ್ಪಾಣಿ	ಬೆಳಗಾಂವ

ಬೆಳಗಾಂವ

ಕ್ರಸಂ	ಹೆಸರು	ವಯಸ್ಸು	ವೃತ್ತಿ	ಊರು	ಜಿಲ್ಲೆ
೧	ಬಲಜಿತ್‌ಸಿಂಗ /ಕುಶಾಲಸಿಂಗ	೩೮	ಕಬ್ಬಿಣಕೆಲಸ	ಬೆಳಗಾಂವ	ಬೆಳಗಾಂವ
೨	ಬಿಷನ್‌ಸಿಂಗ/ ಸುಂದರಸಿಂಗ	೬೦	ಕಬ್ಬಿಣ ಕೆಲಸ	ಬೆಳಗಾಂವ	ಬೆಳಗಾಂವ
೩	ಕವಿತಾಕೌರ್/ ಬಿಷನ್‌ಸಿಂಗ	೮೦	ಮನೆಕೆಲಸ	ಬೆಳಗಾಂವ	ಬೆಳಗಾಂವ
೪	ಲಾಲಸಿಂಗ/ ಬಿಷನ್‌ಸಿಂಗ	೫೫	ಕಬ್ಬಿಣಕೆಲಸ	ಬೆಳಗಾಂವ	ಬೆಳಗಾಂವ
೫	ನಿಹ್ಸಾಲ್‌ಸಿಂಗ/. ನಿರಾನಿಸಿಂಗ	೪೦	ಕಬ್ಬಿಣ ಕೆಲಸ	ಬೆಳಗಾಂವ	ಬೆಳಗಾಂವ

ಬಾಗಲಕೋಟೆ ಜಿಲ್ಲೆ

ಮುಧೋಳ

ಕ್ರಸಂ	ಹೆಸರು	ವಯಸ್ಸು	ವೃತ್ತಿ	ಊರು	ಜಿಲ್ಲೆ
೧	ಆನಂದಸಿಂಗ/ರಸಾಲಸಿಂಗ	೫೫	ಕಬ್ಬಿಣಕೆಲಸ	ಮುಧೋಳ	ಬಾಗಲಕೋಟೆ
೨	ಚರಣಕೌರ/ ಆನಂದಸಿಂಗ	೫೦	ಮನೆಕೆಲಸ	ಮುಧೋಳ	ಬಾಗಲಕೋಟೆ
೩	ಜುಗುನುರಸಿಂಗ /ಆನಂದಸಿಂಗ	೨೮	ಕಬ್ಬಿಣಕೆಲಸ	ಮುಧೋಳ	ಬಾಗಲಕೋಟೆ
೪	ಅಜಿತ್‌ಸಿಂಗ /ರಸಾಲಸಿಂಗ	೩೮	ಕಬ್ಬಿಣಕೆಲಸ	ಮುಧೋಳ	ಬಾಗಲಕೋಟೆ

ಹಾವೇರಿ ಜಿಲ್ಲೆ

ಶಿಗ್ಗಾಂವ

ಕ್ರಸಂ	ಹೆಸರು	ವಯಸ್ಸು	ವೃತ್ತಿ	ಊರು	ಜಿಲ್ಲೆ
೧	ಜಶ್ವಂತಕೌರ /ಧರ್ಮಸಿಂಗ	೭೫	ಮನೆಕೆಲಸ	ಶಿಗ್ಗಾಂವ	ಹಾವೇರಿ
೨	ಹರನಾಮಸಿಂಗ/ ಧರ್ಮಸಿಂಗ	೬೦	ಕಬ್ಬಿಣಕೆಲಸ	ಶಿಗ್ಗಾಂವ	ಹಾವೇರಿ
೩	ಚಾಂದಸಿಂಗ /ಪ್ರೇಮಸಿಂಗ	೩೫	ಕಬ್ಬಿಣಕೆಲಸ	ಶಿಗ್ಗಾಂವ	ಹಾವೇರಿ
೪	ಜುಗನುಸಿಂಗ /ನೇಪಾಲ್‌ಸಿಂಗ	೩೮	ಕಬ್ಬಿಣಕೆಲಸ	ಶಿಗ್ಗಾಂವ	ಹಾವೇರಿ
೫	ಕಮಲಾಕೌರ್ /ಹರಿಸಿಂಗ	೩೫	ಮನೆಕೆಲಸ	ಶಿಗ್ಗಾಂವ	ಹಾವೇರಿ

ಸಿಕ್ಲಿಗರು ಒಂದು ಸಾಮಾಜಿಕ ಅಧ್ಯಯನ

ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ-ಹಂಪಿ
ವಿದ್ಯಾರಣ್ಯ- 583 276

ಪ್ರಶ್ನಾವಳಿ

ಜಿಲ್ಲೆ: ಬೀದರ

1) ಸಾಮಾನ್ಯ ಮಾಹಿತಿ
ಅ) ಸಮೀಕ್ಷೆಯ ದಿನಾಂಕ: 09.10.2005
ಆ) ಬುಡಕಟ್ಟು: ಸಿಕ್ಲಿಗರು
ಇ) ಮಾತೃಭಾಷೆ: ಸಿಕ್ಲಿಗರ
ಈ) ಮನೆದೇವರು: ಗುರುನಾನಕ
ಉ) ಗೋತ್ರ/ಬೆಡಗು/ಬಳ: ಬಿಜ್ಜುಕಾ ಬಾಂಕೆ
ಊ) ಮನೆತನದ ಹೆಸರು: ಬಿಜ್ಜುಕಾ ಬಾಂಕೆ

ಋ) ವಾಸಸ್ಥಾನ: ಮೋಹನ ಮಾರ್ಕೆಟ
ೠ) ಹೋಬಳಿ: ಬೀದರ
ಎ) ತಾಲೂಕು: ಬೀದರ
ಏ) ಭೂ ಹಿಡುವಳಿ (ಎಕರೆಗಳಲ್ಲಿ) - ಇಲ್ಲ -
1) [illegible] - ಇಲ್ಲ -
2) [illegible] - ಇಲ್ಲ -

ಐ) ಸಾಕು ಪ್ರಾಣಿಗಳು
01) ಎತ್ತು: - ಇಲ್ಲ -
02) ಹೋರಿ: - ಇಲ್ಲ -
03) ಎಮ್ಮೆ: - ಇಲ್ಲ -
04) ಆಕಳು: - ಇಲ್ಲ -
05) ಕುರಿ: - ಇಲ್ಲ -
06) ಮೇಕೆ: - ಇಲ್ಲ -
07) ಕೋಳಿ: - ಇಲ್ಲ -
08) ಹಂದಿ - ಇಲ್ಲ -

2) ವ್ಯಯಕ್ತಿಕ ಮಾಹಿತಿ:

ಕ್ರ. ಸಂ	ಕುಟುಂಬದ ಸದಸ್ಯರ ಹೆಸರುಗಳು	ಮೂಲ	ಸಂಬಂಧ	ಲಿಂಗ	ವಯಸ್ಸು	ವೈವಾಹಿಕ ಸ್ಥಾನಮಾನ	ವಿವಾಹಿತ ಬೆಡಗು/ಜಾತಿ	ಶೈಕ್ಷಣಿಕ ಮಟ್ಟ	ಕಸುಬು	ಆದಾಯ	ಕುಟುಂಬ ಯೋಜನೆ (✓)	ಸರಕಾರಿ ಸೌಲಭ್ಯಗಳು (✓) ವಿಧವಾ	ಅಂಗವಿಕಲ	ವೃದ್ಧಾಪ್ಯ	ಶಿಷ್ಯವೇತನ
1	2	3	4	5	6	7	8	9	10	11	12	13	14	15	16
1	ಚಾಂದಸಿಂಗ/ಚೇತನಸಿಂಗ	ಬದ್ದೀರ	✓ ಮುಖ್ಯಸ್ಥ	ಗಂಡು	40	ಯಜಮಾನ	ಬಿಜ್ಜುಕಾ ಬಾಂಕೆ	- ಇಲ್ಲ -	ಕಬ್ಬಿಣ ಕೆಲಸ	2000	✓				
2	ಮೀನಾಕೌರ/ಚಾಂದ ಸಿಂಗ	ಬದ್ದೀರ		ಹೆಣ್ಣು	35	ಹೆಂಡತಿ	ಬಿಜ್ಜುಕಾ ಬಾಂಕೆ	- ಇಲ್ಲ -	ಮನೆ ಕೆಲಸ						
3	ಜ್ಞಾನ ಸಿಂಗ/ಚಾಂದ ಸಿಂಗ	ಬದ್ದೀರ		ಗಂಡು	22	ಮಗ	ಬಿಜ್ಜುಕಾ ಬಾಂಕೆ	- ಇಲ್ಲ -	ಕಬ್ಬಿಣ ಕೆಲಸ						
4	ಸಕ್ಕಪಾಲ ಸಿಂಗ/ಚಾಂದಸಿಂಗ	ಬದ್ದೀರ		ಗಂಡು	20	ಮಗ	ಬಿಜ್ಜುಕಾ ಬಾಂಕೆ	- ಇಲ್ಲ -	ಕಬ್ಬಿಣ ಕೆಲಸ						
5	ಸಂಜೀದತು ಸಿಂಗ/ಚಾಂದಸಿಂಗ	ಬದ್ದೀರ		ಗಂಡು	15	ಮಗ	ಬಿಜ್ಜುಕಾ ಬಾಂಕೆ	5ನೇ	ಶಾಲೆ						
6	ಕಿರಣ ಕೌರ/ಚಾಂದಸಿಂಗ	ಬದ್ದೀರ		ಹೆಣ್ಣು	12	ಮಗಳು	ಬಿಜ್ಜುಕಾ ಬಾಂಕೆ	2ನೇ	ಶಾಲೆ						
7	ಕಾಜಲ್ ಕೌರ/ಚಾಂದಸಿಂಗ	ಬದ್ದೀರ		ಹೆಣ್ಣು	07	ಮಗಳು	ಬಿಜ್ಜುಕಾ ಬಾಂಕೆ	- ಇಲ್ಲ -	-						
8	ಜ್ಯೋತಿ ಕೌರ/ಚಾಂದಸಿಂಗ	ಬದ್ದೀರ		ಹೆಣ್ಣು	04	ಮಗಳು	ಬಿಜ್ಜುಕಾ ಬಾಂಕೆ	- ಇಲ್ಲ -	-						
9	ಚಿಮನ ಕೌರ/ಚಾಂದಸಿಂಗ	ಬದ್ದೀರ		ಹೆಣ್ಣು	02	ಮಗಳು	ಬಿಜ್ಜುಕಾ ಬಾಂಕೆ	- ಇಲ್ಲ -	-						
10															


ಒ) [illegible]
01) ಗುಡಿಸಲು ✓
02) ಗುಡಿಸಲು
03) ಆರ್ ಮನೆ
04) [illegible]
05) ಆರ್.ಸಿ.ಸಿ. ಮನೆ
06) ಹೆಂಚಿನ ಮನೆ
07) ಜನತಾ ಆಶ್ರಯ
08) ಬಾಡಿಗೆ ಮನೆ
09)
10) ನಿವೇಶನ (ಸ್ವ /ಸ.)
11) ಮನೆ (ಸ್ವ /ಸ.)
ಓ) ಸೌಲಭ್ಯಗಳು
01) ಪಡಿತರ ಚೀಟಿ ✓
02) 02) ವಿದ್ಯುತ್ ದೀಪ (ಸ /ಸ.)
03) ಬಂಡಿ
04) ಸೈಕಲ್
05) ಸ್ಕೂಟರ್
06) ಆಟೋ ರಿಕ್ಷಾ
07) ರಿಕ್ಷಾ
08) ರೇಡಿಯೋ
09) ಟೇಪ್ ರಿಕಾರ್ಡರ್
10) ಟಿ.ವಿ.
11) ವಿ.ಸಿ.ಆರ್.
12) ವಿ.ಸಿ.ಪಿ.
13) ಶೌಚಾಲಯ
14) ಸ್ನಾನಗೃಹ
15) ಗ್ಯಾಸ
16) ನಲ್ಲಿ

ಔ) ವೃತ್ತಿ ಕಸುಬಿನ ಪ್ರಕಾರಗಳು, [illegible]

• ಸ್ವತಂತ್ರ / • ಸರಕಾರಿ

ಚಲವಾದಿ ಬಸವರಾಜ

ಸಮೀಕ್ಷೆದಾರರ [illegible] ಸಹಿ
ಚಲವಾದಿ, ಬಸವರಾಜ



ಕರ್ನಾಟಕ ಸರ್ಕಾರ

GOVERNMENT OF KARNATAKA

ಕೈಗಾರಿಕಾ ಮತ್ತು ವಾಣಿಜ್ಯ ನಿರ್ದೇಶನಾಲಯ

DIRECTORATE OF INDUSTRIES AND COMMERCE

ಉದ್ದಿಮೆದಾರರ ಜ್ಞಾಪಕ ವಿವರಣಾ ಪತ್ರ, ಭಾಗ - 1

ಸ್ವೀಕೃತಿ ಪತ್ರ.

Name: SULKESING B.BAVARI. Constitution PARTNER

ಮೆ: M/S BAVARI STEEL ENTERPRISES. ರವರು SUBHAS NAGAR,KARWAR ROAD, HUBLI.

ವಿಳಾಸದಲ್ಲಿ, MANUFACTURE (ಉತ್ಪಾದನಾ /ಸೇವಾ)

ಕ್ಷೇತ್ರದಲ್ಲಿ ಘಟಕವನ್ನು ಸ್ಥಾಪಿಸಲು ಉದ್ದೇಶಿಸಿ, ಅರ್ಜಿ ಸಂಖ್ಯೆ: P1MMC04794 ರ ಮಾಹಿತಿಯಂತೆ.

ಉದ್ದಿಮೆದಾರರ ಜ್ಞಾಪಕ ವಿವರಣಾ ಪತ್ರವನ್ನು ಸಲ್ಲಿಸಿದ್ದು, ಈ ಕೆಳಕಂಡ ಉದ್ದಿಮೆದಾರರ ಜ್ಞಾಪಕ ವಿವರಣಾ ಪತ್ರ ಸಂಖ್ಯೆಯನ್ನು ನೀಡಲಾಗಿದೆ.

ನೀಡಿದ ದಿನಾಂಕ: 14/07/2007

ಘಟಕದ ವರ್ಗೀಕರಣ MICRO / MANUFACTURE

ಉತ್ಪನ್ನಗಳು HARDWARE ITEMS & HOUSEHOLD ITEMS.

ಉದ್ದಿಮೆದಾರರ ಜ್ಞಾಪಕ ವಿವರಣಾ ಪತ್ರದ ಸಂಖ್ಯೆ: 290091100496

Entrepreneurs Memorandum Part I
Acknowledgement

M/s **M/S. BAVARI STEEL ENTERPRISES.** HAS FILED MEMORANDUM EXPRESSING ITS INTENT TO SETUP AN **MANUFACTURE** ENTERPRISE AT THE ADDRESS **SUBHAS NAGAR,KARWAR ROAD, HUBLI.** STATED IN THE FORM NO **P1MMC04794** AND ALLOCATED ENTREPRENEUR'S MEMORANDUM NO. AS BELOW:

DATE OF ISSUE: **14/07/2007**

CATEGORY OF THE UNIT: **MICRO / MANUFACTURE**

END PRODUCT: **HARDWARE ITEMS & HOUSEHOLD ITEMS.**

ENTREPRENEUR'S MEMORANDUM NUMBER : **290091100496**

JOINT DIRECTOR, DISTRICT INDUSTRIES CENTER

ಜಂಟಿ ನಿರ್ದೇಶಕರು ಜಿಲ್ಲಾ ಕೈಗಾರಿಕಾ ಕೇಂದ್ರ

DHARWAD ಜಿಲ್ಲೆ/DISTRICT

(Validation is for only Two Years)

CERTIFICATE

This is to certify ghat Sri. Sardarsing S/o Balavanth
ingh, Sikh R/o Koppal is one of the well known citizen of Koppal
e is doing metal work like Knife, Chaku, Ilagi, Koitha and
huri he is also having good knowledge in his work.

He bears good character and conduct, he is going to Market
r the sale of the same goods. He is one of the perfect Blacksmith.

: 8-6-1985.

Asst.Supdt of Police,
Koppal.

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ ಕೊಪ್ಪಳ

ನಂ:ಕಂದಾಯ/ಶಸ್ತ್ರ/43/2004-05 ದಿನಾಂಕ:20-12-2004

:: ಹಿಂಬರಹ ::

ವಿಷಯ: ವಿವಿಧ ಆಯುಧಗಳ ತಯಾರಿ ಹಾಗೂ ಮಾರಾಟದ ಪರವಾನಿಗೆ ನೀಡುವ ಕುರಿತು.

ಉಲ್ಲೇಖ: ನಿಮ್ಮ ಅರ್ಜಿ ದಿನಾಂಕ 04.12.2004.


--***--

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನೀವು ಮೊದಲಿನಿಂದಲೂ ಕಡಾಯಿ, ಕಬ್ಬಿಣಪುಟ್ಟಿ, ಚಾಕು, ಚೂರಿ, ಈಳಿಗೆ ಮುಂತಾದ ಸಾಮಾನುಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದು ಈ ಬಗ್ಗೆ ಪರವಾನಿಗೆ ಕೇಳಿರುತ್ತಿರಿ. ಈ ವಿಷಯ ಶಸ್ತ್ರ ಕಾಯ್ದೆ ವ್ಯಾಪ್ತಿ ಒಳಗೆ ಬರುವುದಿಲ್ಲ. ಆದಾಗ್ಯೂ ಸದರಿ ವೃತ್ತಿ ಜೀವನೋಪಾಯಕ್ಕೆ ಸಂಬಂದ ಇರುವುದರಿಂದ ಯಾವುದೇ ಅಪಾಯಕಾರಿ ಆಯುದಗಳನ್ನು ತಯಾರಿ ಅಥವಾ ಮಾರಾಟ ಮಾಡಬಾರದೆಂದು ಈ ಮೂಲಕ ಮಾಹಿತಿ ನೀಡಿದೆ.


DISTRICT MAGISTRATE KOPPAL

ಅಪರ ಜಿಲ್ಲಾ ದಂಡಾಧಿಕಾರಿಗಳು
ಕೊಪ್ಪಳ

ಗೆ,
ಶ್ರೀ ಆಧರಸಿಂಗ್ ತಂ. ದಯಾಸಿಂಗ್
ದೇವರಾಜ ಅರಸ್ ಕಾಲೋನಿ ಸಾ: ಕೊಪ್ಪಳ



ಸಿಕ್ಲಿಗರು ಎಂದು ಗುರುತಿಸುವ ಐದು 'ಕ' ಗಳ ವಿವರ.



ಸಿಕ್ಲಿಗರು ನೆಲೆಸಿರುವ ಕೊಳಗೇರಿ ಪ್ರದೇಶ, ನಿಪ್ಪಾಣಿ.



ಸಿಕ್ಲಿಗರು ವಾಸವಾಗಿರುವ ಸೆಡ್‌ಮನೆ, ಯಾದಗೀರ.



ಸಿಕ್ಲಿಗರು ವಾಸವಾಗಿರುವ ತಗಡಿನ ಮನೆ, ಮೈಸೂರು.



ಸಿಕ್ಲಿಗರ ಗುಡಿಸಲುಗಳು, ಮೈಸೂರು.



ಸಿಕ್ಲಿಗರ ಸಮುದಾಯದ ಮಕ್ಕಳ ಗುಂಪು ಹಾಗೂ ಮನೆಯ ಯಜಮಾನ, ಧಾರವಾಡ.



ಕಬ್ಬಿಣದ ತಗಡಿನಿಂದ ತಯಾರಿಸಿದ ಸೇರುಗಳು
ಕಡಚಿಗಳು ಮತ್ತು ಝುಲಡಿಗಳು, ಗುಲಬರ್ಗಾ.



ಕಬ್ಬಿಣದ ಬುಟ್ಟಿ ತಯಾರಿಸುತ್ತಿರುವ ಹಿರಿಯ ಸಿಕ್ಲಿಗ,
ಗುಲಬರ್ಗಾ.



ಅಡುಗೆ ಮಾಡಲು ಅಗತ್ಯವಾದ ಸೇಗಡಿಓಲೆ
ತಯಾರಿಸುತ್ತಿರುವದು, ಬೆಳಗಾಂವ.



ಕಬ್ಬಿಣದ ಬುಟ್ಟಿ ಮತ್ತು ಬಕೇಟು ತಯಾರಿಸುತ್ತಿರುವ
ಸಿಕ್ಲಿಗ, ಬೀದರ.



ಕಡಚಿ,ಸೇಗಡಿ ಅಡುಗೆ ವಸ್ತುಗಳನ್ನು ಮನೆಯಲ್ಲಿ
ತೂಗಿಹಾಕಲು ಉಪಯೋಗಿಸುವ ಕಬ್ಬಿಣದ ಜಾಲರಿ.
ಸಾಮಾನುಗಳು, ಬೀದರ.



ಆಧುನಿಕತೆಗೆ ಸ್ಪಂದಿಸುವ ಬಾಗಿಲಿನ ಗ್ರಿಪ್ಪರ್‌ಗಳು,
ಹುಬ್ಬಳ್ಳಿ.



ಸಿಕ್ಲಿಗರು ವಾಸವಾಗಿರುವ ಟೀಣಿನ ಮನೆ, ರಾಯಚೂರು.



ಸಿಕ್ಲಿಗರು ಕಬ್ಬಿಣದ ಸಾಮಾನುಗಳನ್ನು ತಯಾರಿಸಲು ಬ್ಯಾರಲ್ ಸುಡುತ್ತಿರುವುದು, ಬೈಲಹೊಂಗಲ.



ಸಿಕ್ಲಿಗರು ಕಬ್ಬಿಣದ ವಸ್ತು ತಯಾರಿಸಲು ಬ್ಯಾರಲ್ ಸುಟ್ಟು ತಗಡು ಮಾಡಿರುವದು.



ಸಿಕ್ಲಿಗರು ಹಂದಿಯನ್ನು ಸಾಕಿಕೊಂಡಿರುವುದು. ಗುಲಬರ್ಗಾ.



ಪ್ರಾದೇಶಿಕವಾಗಿ ಉಪಯೋಗಿಸಲು ತಯಾರಿಸುತ್ತಿರುವ ಕಬ್ಬಿಣದ ಮಚ್ಚು, ಬೆಂಗಳೂರು.



ಸಿಕ್ಲಿಗರ ಕಬ್ಬಿಣದ ಕೆಲಸದಲ್ಲಿ ತೊಡಗಿಕೊಂಡಿರುವ ಕುಟುಂಬ, ಬೆಂಗಳೂರು.



ಸಿಕ್ಲಿಗರು ತಯಾರಿಸಿದ ಕಬ್ಬಿಣದ ರಥದ ಅದ್ಭುತ ಕಲಾಕೃತಿ, ಗುಲಬರ್ಗಾ.



ಮದುವೆಯ ಸಂದರ್ಭದಲ್ಲಿ ಮದುಮಕ್ಕಳಿಗೆ ಮೈತುಂಬ ಅರಿಶಿಣ ಹಚ್ಚುವುದು, ಗುಲಬರ್ಗಾ



ಮದುವೆ ಸಂದರ್ಭದಲ್ಲಿ ಮಾವಿನ ಗಿಡಿದ ಟೊಂಗೆಯ ಮುಂದೆ ಕುಳಿತಿರುವ ವಧು-ವರರು, ಗುಲಬರ್ಗಾ.



ಸಿಕ್ಲಿಗರ ಮದುವೆಯ ಸಂದರ್ಭದಲ್ಲಿ ವಧು-ವರರು, ಗುಲಬರ್ಗಾ.



ಮದುವೆಯ ಸಂದರ್ಭದಲ್ಲಿ ಅವರ ಧರ್ಮದ ಪ್ರಕಾರ ರಿಜಿಸ್ಟರ್‌ನಲ್ಲಿ ಸಹಿ ಮಾಡುತ್ತಿರುವ ವಧು-ವರರು, ಗುಲಬರ್ಗಾ.



ವಧು-ವರರಿಗೆ ಧರ್ಮ ಗುರುಗಳು ಧರ್ಮಗ್ರಂಥ ಗುರುಗ್ರಂಥಸಾಹೇಬ ಓದಿಸುತ್ತಿರುವುದು, ಗುಲಬರ್ಗಾ.


ಸಿಕ್ಲಿಗರ ಮಕ್ಕಳು ಶಿಕ್ಷಣ ಪಡೆಯುತ್ತಿರುವುದು. ಧಾರವಾಡ.


ಮದುವೆಯ ಮೆರವಣಿಗೆ ಸಂದರ್ಭದಲ್ಲಿ ಕರವಸ್ತ್ರದಿಂದ ತಲವಾರ ಹಿಡಿದು ಬಾಯಿಯಿಂದ ತಿರುಗಿಸುತ್ತಿರುವುದು. ಗುಲಬರ್ಗಾ.


ಹೋಳಿಹುಣ್ಣಿಮೆ ಸಂದರ್ಭದಲ್ಲಿ ರಂಗಿನಾಟವಾಡಿದ ಹಿರಿಯ ಸಿಕ್ಲಿಗರು. ಬೆಂಗಳೂರು.


ಲಂಗಾರ್ ನ ಉತ್ಸವದಲ್ಲಿ ಸಿಖ್‌ರು ಮತ್ತು ಸಿಕ್ಲಿಗರ ಮಹಿಳೆಯರು ಅಡುಗೆಯ ಪೂರ್ವಸಿದ್ಧತೆಯಲ್ಲಿರುವುದು. ಗುಲಬರ್ಗಾ.


ಲಂಗಾರ್ ನ ಸಾಮೂಹಿಕ ಊಟದಲ್ಲಿರುವ ಸಿಖ್‌ರು ಮತ್ತು ಸಿಕ್ಲಿಗರು. ಗುಲಬಗಾ.


ಮೆರವಣಿಗೆ ಸಂದರ್ಭದಲ್ಲಿ ತಲವಾರ ತಿರುಗಿಸುತ್ತಿರುವ ಸಿಕ್ಲಿಗರು. ಬೀದರ.